ಪುನರ್ಜನ್ಮ

*ಕೋಟ ವಾಸುದೇವ ಕಾರಂತ



ಅನಂತ ಪ್ರಕಾಶನ, ಬೆಂಗಳೂರು-೪

ಸಂಸ್ಥೆಯ ಪರಿಚಯ

ಲಿಪಿಯಂತ್ರಗಳ ತಯಾರಿಕೆಯ ಹಂತದಲ್ಲಿ ಕನ್ನಡ ಲಿಪಿಯ ಸೌಂದರ್ಯವ ಕಾಪಾಡಿದ ಧೀಮಂತ ವ್ಯಕ್ತಿ ದಿ|| ಕೆ. ಅನಂತಸುಬ್ಬರಾಯರು. ಆ ಮಹ ಚೇತನದ ಸ್ಮರಣೆಯನ್ನು ಕನ್ನಡಿಗರ ಹೃನ್ಮನಗಳಲ್ಲಿ ಚಿರಂತನಗೊಳಿಸುವ ಹಂಬಲದ ಹುಟ್ಟಿದ ಸಾಹಿತ್ಯಸೇವಾಸಂಸ್ಥೆ 'ಅನಂತಪ್ರಕಾಶನ'. ಕನ್ನಡದ ದಂಪತಿಗಳಿಬ ಧರ್ಮದರ್ಶಿಗಳಾಗಿ ನಿಂತು ಈ ಸ್ಮಾರಕಗ್ರಂಥಮಾಲೆಯ ಚಾಲಕಶಕ್ತಿಯಾಗಿದ್ದಾ ನಾಡಿನ ಜನಜೀವನದಲ್ಲಿ ಸುಸಂಸ್ಕೃತಿಯನ್ನುದ್ದೀಪಿಸುವ ಸಾರ್ಥಕಸಾಹಿತ್ಯವ ಸುಲಭಬೆಲೆಗೆ ಪ್ರಕಟಿಸುವ ಮೂಲಕ ಕನ್ನಡಸಾಹಿತ್ಯಸಕ್ತರಿಗೂ, ಸತ್ವಶಾ ಉದಯೋನ್ಮುಖ ಬರಹಗಾರರಿಗೂ ನೆರವಾಗುವುದು ಅನಂತ ಪ್ರಕಾಶನದ ಮು ಉದ್ದೇಶ. ಇನ್ನೂರೈವತ್ತು ರೂ.ಗಳ ಕೊಡುಗೆಯೊಂದಿಗೆ ಆಜೀವ ಸದಸ್ಯರಾಗ ವರಿಗೆ ನಮ್ಮ ಪ್ರಕಟಣೆಗಳನ್ನು ಉಚಿತವಾಗಿ ವಿತರಿಸಲಾಗುವುದು. ನಾ ಹೆಸರಾಂತಸಾಹಿತಿಗಳು, ಕಲಾವಿದರು, ಪತ್ರಕರ್ತರು, ಸಮಾಜದಗಣ್ಯರು ಸೇರಿದ ಐನೂರಕ್ಕೂ ಹೆಚ್ಚಿನ ಸಾಹಿತ್ಯಾಭಿಮಾನಿಗಳು ಈಗಾಗಲೇ 'ಅನಂತ ಪ್ರಕಾಶನ ಆಜೀವ ಸದಸ್ಯತ್ವ ಪಡೆದು ನಮ್ಮ ಪ್ರಯತ್ನಕ್ಕೆ ಬೆಂಬಲವಾಗಿದ್ದಾರೆ. ಅನ ಪ್ರಕಾಶನವು ಪ್ರಾರಂಭವಾದ ಮೂರು ವರ್ಷಗಳ ಅಲ್ಪ ಕಾಲಾವಧಿಯಲ್ಲಿ ಒ ಒಂದು ಸಾವಿರದನಾನೂರಕ್ಕೂ ಹೆಚ್ಚಿನ ಪುಟಗಳ ವ್ಯಾಪ್ತಿಯಲ್ಲಿ ಏಳು ಸಾಹಿತ್ಯ ಗಳನ್ನು ಪ್ರಕಟಿಸಿ, ಆಜೀವ ಸದಸ್ಯರಿಗೆ ಉಚಿತವಾಗಿ ವಿತರಿಸುವ ಸಾಹಸಕಾಯ ನಡೆಸಿದೆ.

ಸರ್ಕಾರದ ಬೊಕ್ಕಸದಿಂದ ಅಥವಾ ದಾನಿಗಳಿಂದ ಉದಾರವಾಗಿ ನೆರವು ಪಡ ಯಾವುದೇ ಸಾರ್ವಜನಿಕ ಸಂಸ್ಥೆಯೂ ನಡೆಸದಿರುವಂಥ ಪ್ರಾಮಾಣಿಕ ಸಾಹಿತ್ಯಸೆ ಯನ್ನು ಅನಂತ ಪ್ರಕಾಶನವು ಇದುವರೆವಿಗೂ ನಡೆಸಿರುವುದು ಸ್ವಯಂವೇದ್ಯ. ಈ ಯೋಜಿಸಿರುವ 'ನಮ್ಮ ಅನಿಸಿಕೆಗಳು' ಸಮೀಕ್ಷಾಗ್ರಂಥ ಪ್ರಕಟಣೆಯ ಯೋ ಯಂತೂ ಕನ್ನಡಭಾಷಾ ಪರಿಸರದಲ್ಲಿ ಒಂದು ಅಪರೂಪವಾದ, ಕಷ್ಟಸಾಧ್ಯವಾ ಪ್ರಯೋಗ. ಇಂಥ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ನಿಮ್ಮ ನೆರವೂ ಅತ್ಯಗತ್ಯ. ನೀವೂ ನಿಮ್ಮ ಪರಿಚಯದವರೂ ಇಂದೇ ಅನಂತ ಪ್ರಕಾಶನ ಆಜೀವ ಸದಸ್ಯರಾಗಿ ನಮ್ಮ ಪ್ರಯತ್ನಕ್ಕೆ ನೆರವಾಗಬೇಕಾಗಿ ವಿನಂತಿ.

ನಿಮ್ಮ ವಿಶ್ವಾಸದ

ಸುಧಾರ್ಥಿ, ಹಾಸನ
ಗೌರವ ಕಾರ್ಯದರ್ಶಿ

ಗಿರಿಜಾಶಂ
ಸಂಚಾ

ಅನಂತ ಪ್ರಕಾಶನ – ೭

ಪುನರ್ಜನ್ಮ

ಕೋಟ ವಾಸುದೇವ ಕಾರಂತ ಸಾಹಿತ್ಯ ಮಾಲೆಯು

ಅಖಿಲಲೋಕದ ಮೂಲಕಾರಣ ನಿಖಿಲಶಾಸ್ತ್ರದ ಮೊದಲಚಾರಣ
ಸಕಲಧರುಮದ ಸಾರಧಾರಣ ಪರಮಪಾವನ ಚರಣಕಮಲಕೆ
ನಮಿಸಿ ನೀಡಿದ ಕುಸುಮದಳವಿದು

ಗ್ರಂಥಕರ್ತ

ಕೋಟ ವಾಸುದೇವ ಕಾರಂತ

ಅನಂತ ಪ್ರಕಾಶನ
'ಬೃಂದಾವನ', ೧೫, ರಂಗರಾವ್ ರಸ್ತೆ,
ಶಂಕರಪುರ, ಬೆಂಗಳೂರು-೪

PUNARJANMA — A Narative of Re-incarnation
by KOTA VASUDEVA KARANTHA (Late)
Published by ANANTHA PRAKASHANA
[A commemorative of Kannada Typewriter Inventor
Late K. Anantha Subbarao], Brindavan (out-house)
15, Ranga Rao Road, Shankarapura, Bangalore-560

Year 1989 Pages 320 Price Rs. 21-00

ಪ್ರಥಮ ಮುದ್ರಣ : ೧೯೮೧
ದ್ವಿತೀಯ ಮುದ್ರಣ : ೧೯೮೯

ಆರ್ಥಿಕ ಹೊಣೆಗಾರಿಕೆ :
ಕೋಟ ವಾಸುದೇವ ಕಾರಂತ ಸಾಹಿತ್ಯಮಾಲೆ
ಬೆಂಗಳೂರು-೪

ಮುಖಚಿತ್ರ : ಶ್ರೀ ಎಸ್. ಆರ್. ಪಾಟೀಲ್

ಬೆಲೆ : ರೂ. ೨೧-೦೦
(ಅನಂತ ಪ್ರಕಾಶನದ ಆಜೀವ ಸದಸ್ಯರಿಗೆ ಉಚಿತ)

ಮುದ್ರಕರು :
ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್
ನಂ. 143, ರಿಸಾಲ್ದಾರ್ ರಸ್ತೆ,
ಬಸವನಗುಡಿ, ಬೆಂಗಳೂರು-೫೬೦ ೦೦೪

ಮೊದಲ ಮುದ್ರಣದ ಮುನ್ನುಡಿ

ಹಿಂದೆ ಎಂದೆಂದೂ ದೇವರನ್ನು ನಂಬುತ್ತಿದ್ದ ನಮ್ಮ ದೇಶವು ಸ್ವರಾಜ್ಯ ಬಂದನಂತರ ಸೆಕ್ಯುಲರ್ ಕ್ರಮದ್ದಾಯಿತು. ಅಂದಿನಿಂದ ಜನರಲ್ಲಿ, ಬೆಳೆಯುವ ಮಕ್ಕಳಲ್ಲಿ, ದೇವರ ಭಯ ಪಾಪದ ಭೀತಿ ನಾಶವಾಗುತ್ತ ಬಂದಿದೆ. ನಾನು ಬರೆದಿರುವ "ದೇವರನ್ನು ನಂಬುವ" ಪುಸ್ತಕದಲ್ಲಿ ಓದುವ ಯುವಕರಲ್ಲಿ ಪುನಃ ದೈವಭಕ್ತಿ ಉಂಟುಮಾಡಲು ಯತ್ನಿಸಿರುವೆ. ಆದರೆ ತಮ್ಮ ಸುತ್ತಲೂ ಕೆಲವು ದುಷ್ಟರು ತಮ್ಮ ಮರಣದವರೆಗೂ ದೇವರಶಿಕ್ಷೆ ಪಡೆಯದಿರುವುದು, ಅನ್ಯಾಯ ಮಾಡದಿರುವವರು ಕಷ್ಟದಲ್ಲಿರುವುದು, ಕಂಡು ; ಪಾಪದಭೀತಿ ವ್ಯರ್ಥ ಎಂಬ ಸಂಶಯಬರಬಹುದು. ಈ ಪುಸ್ತಕವು—ಹಾಗಲ್ಲ. ಇದು ಅರ್ಥ ಕತೆ. ಮರಣದ ಆಚೆಯು ಬಾಳನ್ನೂ ಶಾಸ್ತ್ರದ ಮೂಲಕ ಅರಿತಿರಬೇಕು, ಪಾಪದ ಭೀತಿ ಅತ್ಯಗತ್ಯ—ಎಂಬುದನ್ನು ತಿಳಿಸುತ್ತದೆ, ಈ ೨ ಪುಸ್ತಕಗಳೂ ಕತೆಗಳಿಂದ ತುಂಬಿದ್ದು ಓದಲು ಕಷ್ಟವಲ್ಲ, ತಮ್ಮ ಮಕ್ಕಳನ್ನು ಧರ್ಮದ ದಾರಿ ಹಿಡಿಸಬೇಕೆಂದಿರುವ ತಂದೆ ತಾಯಿಗಳಿಗೆ ಪ್ರಯೋಜನವಾಗದಿರವು.

ಆದರೆ ಸೆಕ್ಯುಲರ್ ಸರ್ಕಾರವು ಧರ್ಮದ ಅಭ್ಯಾಸಕ್ಕೆ ಸನಾತನ ಹಿಂದೂಗಳಿಗೆ ಹಲವು ತೊಡಕುಗಳನ್ನುಂಟುಮಾಡುತ್ತಿದೆ. ಅವರು ತಮ್ಮ ಧರ್ಮ ಬಾಳಬೇಕಾದುದೇ ದೇವರು ಹುಟ್ಟಿಂದ ಕೊಟ್ಟ ಅವರವರ ವರ್ಣದಂತೆ. ಹಾಗೆಮಾಡದಿದ್ದರೆ ಭಯಂಕರಶಿಕ್ಷೆ ಶಾಸ್ತ್ರ ಹೇಳಿದೆ. ಎಂದರೆ ವರ್ಣಧರ್ಮ ನಮಗೆ ಧರ್ಮದತಿರುಳು ; ಬಿಡಲಾಪ ಅಲ್ಪಭಾಗವಲ್ಲ. ಅವರವರ ಧರ್ಮದ ತಿರುಳಂತೆ ಬಾಳುವುದು ಪ್ರಜೆಗಳೆಲ್ಲರ ಮೂಲಭೂತ ಹಕ್ಕು, ವರ್ಣಕ್ರಮಕ್ಕೆ ವಿಜ್ಞಾನದಬೆಂಬಲವೂ ಇದೆ. ಅದು ಮೇಲು ವರ್ಣಧರ್ಮಗಳ ಸಾಧನೆಗೆತಕ್ಕ ಮೇಲು ತರದದೇಹ ಕೊಡುತ್ತದೆ. ಇದನ್ನು ನಮ್ಮ ಮುಖಂಡರಿಗೆ ವಿವರಿಸಿ, ವರ್ಣದ ಖಂಡನೆಯ ತೊಡಕನ್ನು ತೆಗೆಯುವ ಯತ್ನ ಪ್ರತಿ ಸನಾತನ ಹಿಂದೂವಿಗೂ ಕರ್ತವ್ಯ. ನನ್ನ ಪುಸ್ತಕ **ಜಾತಿ ಧರ್ಮದ ಮಹತ್ವ** ಮತ್ತು Conquest of Body ಯಲ್ಲಿ ಬೇಕಾದ ವಿವರಣೆ ನೋಡಿಕೊಳ್ಳಬೇಕು. **"ದೇಶದ ಉದ್ಧಾರಕ್ಕೆ ಏಕಮಾತ್ರ ದಾರಿ"**ಯಲ್ಲಿ ಪುನಃ ದೇಶಕ್ಕೆ ಧಾರ್ಮಿಕ ಸರ್ಕಾರದ ಅವಶ್ಯಕತೆ, ಸರ್ಕಾರ ಸರ್ವಧರ್ಮಗಳ ವಿಭಾಗ ಸೇರಿಸಿಕೊಂಡು ಮಕ್ಕಳಿಗೆಲ್ಲ ಅವರವರ ಧರ್ಮ ಕಲಿಸುವುದರ ಅಪಾರ ಪ್ರಯೋಜನ, ವಿವರಿಸಲ್ಪಟ್ಟಿದೆ. ವಿಜ್ಞಾನವು ಕೇವಲ ದೇಹದಭೋಗ ಪ್ರೇರಿಸಿ, ಅದರ ಪೂಜೆ

ಬೆಳೆಸಿ, ಅದು ಹಬ್ಬದಲ್ಲೆಲ್ಲ ನೈತಿಕತೆ ಕೆಡಿಸುತ್ತ ಬರುವುದನ್ನು ಸ
ಧರ್ಮದ ದೃಷ್ಟಿಯಿಂದ ಶೋಧಿಸಿ ಎಚ್ಚರ ಕೊಡಲಿಕ್ಕೆಂದು **ವಿಜ್ಞಾನ ವ**
ಧರ್ಮ ಬರೆದಿದ್ದೇನೆ. ಅಚ್ಚಾಗಲಿಲ್ಲ.

ದಾನ ಮಾಡಬೇಕು ಅಚ್ಚಾಗಿದೆ. **ದೇವಸ್ಥಾನಗಳ ಸದುಪಯೋ**
ದಲ್ಲಿ ನಮ್ಮ ಮುಖ್ಯ ಧಾರ್ಮಿಕ ಸಂಸ್ಥೆಯಾದ ದೇವಸ್ಥಾನಗಳಲ್ಲಿ
ದೈವಾಪರಾಧ ಮಾಡದೆ ವರ್ತಿಸಿ ಪ್ರಯೋಜನ ಪಡೆಯಬೇಕೆಂಬ ವಿವರ

ಕರ್ಮಯೋಗ, ಭಕ್ತಿಯೋಗ ಜನ್ಮಯೋಗ ಈ ವಿಚಾರ
ಲಿಕ್ಕೆ ಈಗಲೇ ಇತರರ ಪುಸ್ತಕಗಳು ಅನೇಕ ಇವೆ. ಧಾರ್ಮಿಕ ಜೀವನ
ಬೇಕಾದರೆ ಅವನ್ನು ಹಠ ಹಿಡಿದು ಕಲಿಯುವುದು ಮಾತ್ರದಾರಿ.

"ಪುನರ್ಜನ್ಮ" ಬರೆದು ಆರುವರ್ಷಗಳಾದವು. ಈಗ ಮಾತ್ರ ಪ್ರ
ಸಾಧ್ಯವಾಯಿತು. ಅದೂ ಒಬ್ಬರು ಮಿತ್ರರ ಅನಿರೀಕ್ಷಿತ ಪ್ರೋತ್ಸಾಹ
ಅವರಿಗೆ ತುಂಬಾ ಧನ್ಯವಾದ. ಇದನ್ನು ಬರೆಯುವಾಗ ಕಲ್ಯಾಣ ಪತ್ರಿ
ಪರಲೋಕ ಮತ್ತು ಪುನರ್ಜನ್ಮಾಂಕದಲ್ಲಿನ ಕೆಲವು ವಿಷಯಗಳ ಸಂಗ್ರ
ಸಹಾಯಮಾಡಿದ ಹಿಂದೀಪಂಡಿತರು ಶ್ರೀ ಎನ್. ಎನ್. ನಾಯಕರಿಗೂ
ಧನ್ಯವಾದ. ನನ್ನ ಪುಸ್ತಕಗಳನ್ನು ಲಾಭವಿಲ್ಲದೆ ನಾನು ಮಾರುವುದು
ಪ್ರಯೋಜನ ತೋರಿದರೆ ಕೊಂಡು ಕೊಂಡು ಪ್ರೋತ್ಸಾಹಿಸಿರಿ.

ಮಂಗಳೂರು, ೧೯೬೧ **ಕೋಟ ವಾಸುದೇವ ಕಾ**

ಒಂದು ಮನವಿ

ಇಂಥ ಧಾರ್ಮಿಕ ಸಾಹಿತ್ಯ ಕೃತಿಯನ್ನು ಕೊಂಡು ಓದುವ ಹ
ನಮ್ಮಲ್ಲಿ ಸ್ವಲ್ಪಮಟ್ಟಿಗೆ ಇನ್ನೂ ಉಳಿದಿದೆಯಾದರೂ, ಇಂದಿನ ಪ್ರಕಟ
ವೆಚ್ಚದ ಹಿನ್ನೆಲೆಯಲ್ಲಿ ಈ ಪ್ರೋತ್ಸಾಹ ಏನೇನೂ ಸಾಲದು. ಇಂಥ ಮ
ಪೂರ್ಣವಾದ ಉತ್ಕೃಷ್ಟ ಸಾಹಿತ್ಯ ಕೃತಿಯನ್ನು ಅನಂತ ಪ್ರಕಾಶನದ ಅಭಿ
ಗಳೂ ಧಾರ್ಮಿಕ ಸಾಹಿತ್ಯಾಸಕ್ತರೂ ಹೆಚ್ಚಿನ ಸಂಖ್ಯೆಯಲ್ಲಿ ಕೊಂಡು
ಬಂಧು ಮಿತ್ರರಿಗೆ ದಾನಮಾಡಿ, ಅವರ ಓದಿನ ಒಲವನ್ನು ಉತ್ತೇಜ
ಮೂಲಕ ಇಂದಿನ ದಿನಗಳಲ್ಲಿ ಅತ್ಯಂತ ಕಠಿಣತರವಾದ ಈ ಸಾಹಿತ್ಯ
ಕಾರ್ಯಕ್ಕೆ ಸೂಕ್ತನೆರವು ನೀಡಬೇಕಾಗಿ ಪ್ರಾರ್ಥನೆ.

ಕೋ. ವಾ. ಕಾರಂತ ಸಾಹಿತ್ಯಮಾಲೆ **ಸುಧಾರ್ಥಿ, ಹ**
ಬೆಂಗಳೂರು_೪ ಗೌರವ ಕಾರ್ಯ

ಕೃತಿಯನ್ನು ಕುರಿತು

"ಲೋಕ ಕಂಟಕರಾಗಿರುವ ದುಷ್ಟಪ್ರವೃತ್ತಿಯ ಕೆಲವು ಜನರಿಗೆ ಈ ಗ್ರಂಥವು ಪಾಪಭೀತಿಯನ್ನು ಹುಟ್ಟಿಸಿ, ಅಂಥವರನ್ನು ತಿದ್ದುವುದರಲ್ಲಿ ಸಂಶಯ ವಿಲ್ಲ ; ಎಂಥ ದುಷ್ಟರಿಗೂ ಯಾವಾಗಲಾದರೊಮ್ಮೆ ತಮ್ಮ ಪಾಪಕರ್ಮಗಳ ವಿಷಯಕ್ಕೆ ಅರಿವುಂಟಾಗುವುದು ಸಾಧ್ಯವಿದೆ. ಆಗ ಸನ್ಮಾರ್ಗಕ್ಕೆ ಬರಲು ಈ ಗ್ರಂಥದಲ್ಲಿರುವವಿಷಯಗಳು ಖಂಡಿತವಾಗಿ ಸಹಾಯಕವಾಗುವುವು. ಲೇಖಕರ ಈ ಶ್ರಮಕ್ಕೆ ನಮ್ಮ ಅಭಿನಂದನೆಗಳು". —ಅಧ್ಯಾತ್ಮಪ್ರಕಾಶ

೨

"ಪುಸ್ತಕದ ತುಂಬಾ ಪುನರ್ಜನ್ಮದ ಅನುಭವೀ ನಿದರ್ಶನಗಳಿದ್ದು ಓದುಗರ ಮನಸ್ಸನ್ನು ಸೆರೆಹಿಡಿಯುತ್ತವೆ. ವಿಚಾರಪರರನ್ನಾಗಿ ಮಾಡುತ್ತವೆ. ಅಂತರ್ಮುಖಿಗಳನ್ನಾಗಿ ಮಾಡುತ್ತವೆ. ಪದೇ ಪದೇ ಓದಬೇಕಾದ ಪುಸ್ತಕ. ಯಾವ ಭಾಗದಿಂದ ಆರಂಭಿಸಿದರೂ ಓದಿಸಿಕೊಂಡುಹೋಗುವ ಪುಸ್ತಕ. ಎಲ್ಲ ವಿಚಾರಗಳನ್ನೂ ನೂರಾರು ನಿದರ್ಶನಗಳ ಮೂಲಕ ಪ್ರತಿಪಾದಿಸಿದ್ದಾರೆ. ಶಾಸ್ತ್ರ ಗ್ರಂಥಗಳು, ಅನೇಕ ಪತ್ರಿಕಾಲೇಖನಗಳು ಮುಂತಾದವುಗಳಿಂದ ಆಧಾರ ಗಳನ್ನು ವಿಪುಲವಾಗಿಕೊಟ್ಟು ಸಮರ್ಥಿಸಿದ್ದಾರೆ........ಲೇಖಕರು ವಿಜ್ಞಾನ ಶಾಸ್ತ್ರವನ್ನು ಚೆನ್ನಾಗಿಅಧ್ಯಯನಮಾಡಿದವರು, ಅದರಇತಿಮಿತಿಗಳನ್ನು ಚೆನ್ನಾಗಿ ಬಲ್ಲವರು. ಶಾಸ್ತ್ರವೊಂದೇ ಮಾನವನ ಶ್ರೇಯಪ್ರೇಯಗಳ ಮಾರ್ಗದರ್ಶಿ ಎಂಬುದನ್ನು ದೃಢವಾಗಿ ನಂಬಿದವರು. ತಾವು ನಂಬಿದ ಸತ್ಯವನ್ನು ನಿರ್ಭಯ ವಾಗಿ ಪ್ರಚಾರಮಾಡುವ ಧೀಮಂತರು. ಶ್ರೀ ಪರಶುರಾಮರಂತೆ ಧರ್ಮಕ್ಕಾಗಿ ಅಹರ್ನಿಶಿ ಶ್ರಮಿಸುತ್ತಿರುವ ಈ ಅಪೂರ್ವವ್ಯಕ್ತಿ ಒಂದುಸಂಸ್ಥೆಗಿಂತಲೂ ಹೆಚ್ಚಿನ ಕಾರ್ಯನಿರ್ವಹಿಸುತ್ತಿದ್ದಾರೆ........ನಮ್ಮ ತರುಣಪೀಳಿಗೆ ಒಮ್ಮೆಯಾದರೂ ಶ್ರೀ ಕೋಟ ವಾಸುದೇವ ಕಾರಂತರ ಈ ಗ್ರಂಥವನ್ನು ಓದಲೇಬೇಕು".

—ಶ್ರೀ ಶಂಕರಕೃಪಾ

೩

"ಸಾಮಾನ್ಯವಾಗಿ ಒಮ್ಮೊಮ್ಮೆ ಪೂರ್ವಜನ್ಮದ ಸ್ಮರಣೆ ಬಂದವರ ಕಥೆ ಗಳೂ, ಪ್ರೇತಪಿಶಾಚಿಗಳ ಆವೇಶದ ಕಥೆಗಳೂ, ಸತ್ತುಂತಾಗಿ ಮತ್ತೆ ಬದುಕಿದ

ಸುದ್ದಿಗಳೂ ವೃತ್ತಪತ್ರಿಕೆಗಳಲ್ಲಿಬರುವುದನ್ನು ಎಲ್ಲರೂ ನೋಡುತ್ತೇವೆ.
ಅಂಥವನ್ನೆಲ್ಲ ಕ್ರಮಬದ್ಧವಾಗಿ ಆಯ್ದು ಸಂಗ್ರಹಿಸಿ, ಅವುಗಳಿಂದ
ಹಿಂದೂಧರ್ಮದ ಮೂಲನಂಬಿಕೆಗೆ ಒಂದುರೀತಿಯ ಸಮರ್ಥನೆ ಬರು
ಈ ಲೇಖಕರು ಸರಳಶೈಲಿಯಿಂದ ನಿರೂಪಿಸಿದ್ದಾರೆ". —**ಪ್ರಜ**

೪

"ಸನಾತನಧರ್ಮದ ಶಾಖಾಧರ್ಮಗಳಾಗಿ ಹುಟ್ಟಿಬೆಳೆದ ಬೌದ್ಧ
ಮುಂತಾದ ಧರ್ಮಗಳನ್ನು ಬಿಟ್ಟರೆ, ಉಳಿದ ಯಾವಧರ್ಮವೂ ಜೀವ
ಸೃಷ್ಟಿಕ್ರಮವನ್ನು ಸಮರ್ಪಕವಾಗಿ ವಿವರಿಸುವ ಸಾಮರ್ಥ್ಯ, ಪಡೆದಿ
ಈ ಕಾರಣದಿಂದಾಗಿಯೇ ಕ್ರಿಶ್ಚಿಯನ್ನರ ಮತ್ತು ಮುಸ್ಲಿಮರ ಧಾರ್ಮಿ
ಗಳಲ್ಲಿ ಮರುಹುಟ್ಟಿನಬಗ್ಗೆ ಹೆಚ್ಚಿನ ಪ್ರಸ್ತಾಪವೇ ಕಾಣಬರದು. ಮಾ
ಇರುವುದು ಒಂದೇಜನ್ಮ, ಅದರಲ್ಲಿ ಅವರು ಜೀವಿಸುವಕ್ರಮಕ್ಕನುಗು
ಮರಣದನಂತರ ಸ್ವರ್ಗವನ್ನೋ ನರಕವನ್ನೋ ಸೇರಿ ಅಲ್ಲೇ ಶಾಶ್ವ
ನೆಲೆಸುವರೆಂಬುದು ಈ ಧರ್ಮಗಳ ಹೇಳಿಕೆ. ಆದರೆ ಜಗತ್ತಿನಾದ್ಯಂತ
ರುವ ಮರುಹುಟ್ಟಿನ ಪ್ರಕರಣಗಳನ್ನು ಪತ್ತೆಮಾಡಿ, ಪರೀಕ್ಷಿಸಿ ಅವುಗಳ
ಸತ್ಯತೆಯನ್ನು ಖಚಿತಪಡಿಸಿಕೊಂಡಿರುವ ಹಲವಾರು ವಿಜ್ಞಾನಿಗಳೇ ಮ
ನಿಗೆ ಮರುಹುಟ್ಟು ಇರುವುದು ಸತ್ಯವೆಂಬ ನಿರ್ಧಾರಕ್ಕೆಬಂದಿದ್ದಾರೆ. ಆ
ಸನಾತನಧರ್ಮದ ಹೇಳಿಕೆಗಳನ್ನು ಜಗತ್ತಿನ ಎಲ್ಲ ಧರ್ಮದವರೂ ಗೌರ
ಬೇಕಾದ ಅನಿವಾರ್ಯ ಸನ್ನಿವೇಶದ ನಿರ್ಮಾಣವಾಗಿದೆ. ದೇಶವಿದೇ
ನಡೆದಿರುವ ಇಂಥ ಮರುಹುಟ್ಟಿನ ಪ್ರಕರಣಗಳ ವಿವರಗಳನ್ನೆಲ್ಲ ಸಂ
ಅವುಗಳಲ್ಲಿ ಅಡಕವಾಗಿರುವವಿಚಾರಗಳ ಹಿನ್ನೆಲೆಯನ್ನು ವಿಶ್ಲೇಷಿಸಿ, ಆ
ಆಧಾರದಿಂದಲೇ ಸನಾತನ ಹಿಂದೂಧರ್ಮದ ಹೇಳಿಕೆಗಳಿಗೆ ಸಮರ್ಥನೆ
ಒದಗಿಸಿ, ಆಧುನಿಕ ಮನೋಭಾವದವರ ಅಜ್ಞಾನವನ್ನು ಪರಿಹರಿಸು
ಯಲ್ಲಿ ಕೋಟ ವಾಸುದೇವ ಕಾರಂತರು "ಪುನರ್ಜನ್ಮ" ಎಂಬೀ ಕೃತಿ
ಬರೆದಿದ್ದಾರೆ.

ಆಧಾರ ಗ್ರಂಥಗಳು, ಸ್ವಾನುಭವದ ಪ್ರಸಂಗಗಳು, ಪರಾನ
ವಿವರಣೆಗಳಿಂದ ತುಂಬಿರುವ ಈ ಕೃತಿಯು ಬಹಳ ರಭಸವಾಗಿ ಓದಿಸಿಕೆ
ಹೋಗುವ ಗುಣವನ್ನುಳ್ಳದ್ದಾಗಿದೆ. —**ಸು**

ವಿಷಯಾನುಕ್ರಮಣಿಕೆ

೧. ಮಾನವ ಮತ್ತು ಪ್ರಾಣಿಜನ್ಮಗಳು

೧. ಕರ್ಮದ ಫಲ ಅನುಭವಿಸಲಿಕ್ಕೆ ಪುನರ್ಜನ್ಮ ಬೇಕು

(ಸುಲಭ ಓದು ಬೇಕಾದವರು ತತ್ಕಾಲಕ್ಕೆ ಈ ಅಧ್ಯಾಯ ಬಿಡಬಹುದು)

'ದೇವರನ್ನು ನಂಬುವ' ಎಂಬ ಪುಸ್ತಕದಲ್ಲಿ ದೇವರು ಖಂಡಿತ ಇದ್ದಾನೆ; ಸರ್ವಸಮರ್ಥನಾದ ಅವನನ್ನು ಪ್ರಾರ್ಥಿಸಿ ಮೆಚ್ಚಿಸಿ ಸಹಾಯ ಕೇಳಿದವರಿಗೆ ಅವ ಬೇಕಾದ ಸಹಾಯ ಕೊಟ್ಟಿದ್ದಾನೆ, ಅವನನ್ನು ಹೊಂದಲು ದೀರ್ಘ ಸಾಧನೆ ಮಾಡುತ್ತ ಬಂದವರಿಗೆ ಅವ ದರ್ಶನ ಕೊಡುತ್ತ ಬಂದಿದ್ದಾನೆ, ಎಂಬುದಕ್ಕೆ ವರ್ತಮಾನ ಪತ್ರಿಕೆಗಳ ವಾರ್ತೆಗಳು ಮತ್ತು ಇತರ ರೀತಿಯ ಖಾತ್ರಿಯ ದಾಖಲೆಗಳಿರುವ ಸುಮಾರು ೧೦೦ ನಿಜವಾಗಿ ನಡೆದಕತೆಗಳನ್ನು ಕೊಟ್ಟಿದ್ದೇನೆ. ದೇವರ ಸಹಾಯ ಪಡೆಯಲಿಕ್ಕೆ ಅವನು ಮೆಚ್ಚುವಂತೆ ಮಾತ್ರ ಬಾಳುತ್ತ ಆನಂದಸ್ವರೂಪನಾದ ಅವನನ್ನೇ ಕ್ರಮೇಣವಾಗಿ ಹೊಂದಿ ನಮ್ಮ ದುಃಖಗಳನ್ನೆಲ್ಲ ಕಳಕೊಳ್ಳಲಿಕ್ಕೆ ನಮಗಿರುವ ದಾರಿ ಧರ್ಮಶಾಸ್ತ್ರವಾಗಿದೆ. ಅದರಲ್ಲಿ ಜಪ, ಪೂಜೆ, ವ್ರತ ಉಪವಾಸ, ದಾನ ಮುಂತಾದವಕ್ಕೆ ಬಹಳ ಸ್ಥಾನವಿದೆಯಾದರೂ, ಸತ್ಯತೆ, ಅಹಿಂಸೆ, ಭೂತದಯೆ, ಕಳದಿರುವುದು, ಇತರರಿಗೆ ಯಾವ ರೀತಿಯಲ್ಲಿಯೂ ಅನ್ಯಾಯ ಮಾಡದಿರುವುದು, ನಿರ್ವಂಚನೆ, ಬಹಳ ಮುಖ್ಯ ಸ್ಥಾನದ್ದಾಗಿವೆ.

ದೇವರನ್ನು ನಂಬುವವರೆಲ್ಲರೂ ಅವ ಜಗತ್ತಿನ ನಿರ್ಮಾಪಕ, ಅದರ ರಕ್ಷಕ ಪಾಲಕ ಎಂದು ಒಪ್ಪುವರು. ಸರ್ಕಾರವು ದೇಶವನ್ನು ಆಳುವುದರ ಪ್ರಥಮ ಶರ್ತ ಜನರು ಒಬ್ಬರಿಗೊಬ್ಬರು ಅನ್ಯಾಯ ಮಾಡಿ ಹಿಂಸಿಸದಂತೆ ಮಾಡುವುದು; ಅದಕ್ಕಾಗಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ವಿಧಿಸಿ ಅವರನ್ನು ಹಿಮ್ಮೆಟ್ಟಿಸುವುದು. ಅನ್ಯಾಯ ಹೆಚ್ಚಿದ್ದ ರಾಜ್ಯವನ್ನು ಪ್ರಜೆಗಳು ಬಹಳ ವ್ಯರ್ಥವೆಂದೇ ಭಾವಿಸದಿರರು. ದೇವರು ವಿಶ್ವವನ್ನು ಪಾಲಿಸುವುದರಲ್ಲಿಯೂ ಪಾಪ ಕಾರ್ಯಗಳಿಗೆಲ್ಲ ತಕ್ಕ ಶಿಕ್ಷೆ ತಪ್ಪದೆ ವಿಧಿಸುವುದು, ಪುಣ್ಯಕಾರ್ಯಗಳಿಗೆಲ್ಲ ಸಹಾಯ, ಸುಖ ತಪ್ಪದೆ ಕೊಡುವುದು, ನಡೆಯಬೇಕಷ್ಟೆ! ದೇವರು ಸರ್ವಸಮರ್ಥನಿದ್ದು ಅವನ ರಾಜ್ಯದಲ್ಲಿ ಅನ್ಯಾಯಕ್ಕೆ ಶಿಕ್ಷೆ ತಪ್ಪಿಸಿಕೊಳ್ಳುವುದು ಅಸಾಧ್ಯವಾಗಲೇಬೇಕಷ್ಟೆ.

ಆದರೆ ನಮ್ಮ ಸುತ್ತಲೂ ಕಂಡಾಗ ಅನೇಕರು ಅನ್ಯಾಯ ಮಾಡಿ ದೇವರಿಂದ ಶಿಕ್ಷೆ ಪಡೆದಂತೆ–ಕಷ್ಟ ನಷ್ಟ ಹೊಂದಿದಂತೆ–ಕಾಣುತ್ತಾರಾದರೂ, ಬೇರೆ

ಕೆಲವರು ತೀರಾ ದುಷ್ಟತನ ಮಾಡಿದವರು ಸಿಕ್ಕಿ ಬೀಳದೆ ಸುಖ, ಐಶ್ವರ್ಯ
ಆರೋಗ್ಯಗಳನ್ನೆಲ್ಲ ಮರಣ ಕಾಲದವರೆಗೂ ಭೋಗಿಸುವ ದೃಷ್ಟಾಂತಗಳ
ಸಿಕ್ಕುತ್ತವೆ. ಮತ್ತೆ ಕೆಲವರು ಧರ್ಮದಂತೆ ಬಾಳುತ್ತ ಇರುವವರಿಗೆ ದೇವ
ಸುಖ ಸಮೃದ್ಧಿ ಕೊಡುವುದು ತೋರುತ್ತದಾದರೂ, ಬೇರೆ ಕೆಲವರು ಕಷ್ಟ
ನಷ್ಟ ಅನಾರೋಗ್ಯ, ಬಡಸ್ಥಿತಿಗಳಿಗೆ ಗುರಿಯಾಗಿರುವುದನ್ನೂ ಕಾಣಬಹುದ
ಹಾಗಾದರೆ ಧರ್ಮಶಾಸ್ತ್ರ ಸಾರುವಂತೆ ದೇವರು ಅನ್ಯಾಯಕ್ಕೆ ತಪ್ಪದೆ ಶಿ
ವಿಧಿಸುತ್ತಾನೆ ; ನ್ಯಾಯಕ್ಕೆ, ಧಾರ್ಮಿಕ ಜೀವನಕ್ಕೆ, ಉತ್ತಮ ಫಲ ತಪ್ಪ
ಕೊಡುವನು, ಎಂಬುದೆಲ್ಲ ವ್ಯರ್ಥವೇ ?

ದೇವರ ನಂಬಿಕೆ ನಿಜಕ್ಕೂ ವ್ಯರ್ಥವೆಂದು ವಾದಿಸುವ ವರ್ಗ ನಮ್ಮ
ಈಗಲೀಗ ಧಾರಾಳವಾಗಿ ಬೆಳೆದಿದೆ. ಈ ವಾದವನ್ನು ಸ್ವಲ್ಪ ನೋಡುವ
ನಮ್ಮ ದೇಶದಲ್ಲಿ ಸ್ವರಾಜ್ಯ ಲಭಿಸಿದಾಗ ೪೫ ಶತಾಂಶ ಜನರು ಎರಡ
ಊಟಕ್ಕೂ ಇಲ್ಲದವರಿದ್ದರು. ಈಗ ೫೦ ಶತಾಂಶ ಆ ತರದವರಿದ್ದಾರ
ಎಂದರೆ ನಮ್ಮ ಅರ್ಧಪಾಲು ಜನ, ಯಾರಿಗೆ ಯಾವ ಘೋರ ಅನ್ಯಾಯ
ಮಾಡಿದ್ದೂ ತೋರುವುದಿಲ್ಲವಾದರೂ, ನಿಜಕ್ಕೂ ಮಾಡುತ್ತಿಲ್ಲವಾದರೂ
ತಮ್ಮ ಇಡೀ ಜೀವನ ಕೇವಲ ಕಷ್ಟದಲ್ಲಿ—ಬೆಚ್ಚಗಿನ ಮನೆ, ಬೇಕಾದ ಅನ್ನ
ಕಾಯಿಲೆಗೆ ಮದ್ದು, ಕನಿಷ್ಠ ಬಟ್ಟೆಬರೆ—ಇಲ್ಲದೆಯೇ ಬಾಳುತ್ತಿದ್ದಾರಲ್ಲ
ಆದರೆ ಮತ್ತೆ ಕೆಲವರು ಯಾರಿಗೂ ಬಹಳ ಉಪಕಾರ ಏನೂ ಮಾಡದಿದ್ದರೂ
ಐಶ್ವರ್ಯವಂತರ ಮಕ್ಕಳಾಗಿ ಜನಿಸಿ, ಆರಂಭದಿಂದ ಧಾರಾಳ ಭೋಗ, ವಿದ್ಯ
ವಿನೋದ, ಸುಖ ಅನುಭವಿಸುತ್ತ ಬರುತ್ತಿದ್ದಾರಲ್ಲ? ಲೋಕದಲ್ಲಿ ಎಷ್ಟೋ
ಕಾಡುಜನರು ನಾಗರಿಕತೆಯ ಸುಖಗಳ ಗಂಧವೇ ಇಲ್ಲದೆ ಬೆಳೆಯುವಂತೆ
ದೇವರು ಏಕೆ ಮಾಡಿದ? ಏನೂ ಅನ್ಯಾಯ ಮಾಡದ ಮಕ್ಕಳು, ಕುರುಡ
ಕುಂಟ, ಕಿವುಡ, ದರೋಡೆಕಾರರ ಮಗ, ಕುಷ್ಠರೋಗಿಯ ಮಗ, ಆಗಿ ಜನಿಸಿ
ಅವರ ಇಡೀ ಜೀವನ ಕಹಿ ಆಗುವಂತಾಗಲಿಲ್ಲವೇ? ಮತ್ತೆ ಕೆಲವರು
ವಿಶೇಷ ಬುದ್ಧಿ ಚುರುಕುತನ ಇದ್ದವರು ಅದನ್ನು ಕುಹಕೋಪಾಯಗಳಲ್ಲಿ
ಬೆಳೆಸಿ ಜನರನ್ನು ವಂಚಿಸುತ್ತ ತಮ್ಮ ಜೀವನ ಸಾಗಿಸುತ್ತ ಬಾಳುವವರನ್ನು
ದೇವರು ಭಯಂಕರ ರೋಗ ಕೊಟ್ಟು ಏಕೆ ತಟಸ್ಥ ಮಾಡಲಿಲ್ಲ? ಸ್ವಾರ್ಥ
ಸಾಧನೆಯಲ್ಲಿ ಮುಳುಗಿದ ರಾಜಕೀಯ ಮುಖಂಡರು, ಲಂಚನುಂಗುತ್ತ ಬಾಳು
ತ್ತಲೇ ಬಂದ ಸರ್ಕಾರೀ ನೌಕರರು, ಸಂದರ್ಭ ಸಿಕ್ಕಿದಾಗಲೆಲ್ಲ ವ್ಯಾಪಾರದಲ್ಲಿ
ಜನರ ಸುಲಿಗೆ ಮಾಡುವ ವ್ಯಾಪಾರಿಗಳು ಮುಂತಾದ ತರತರದ ಕೇವಲ

ಅನ್ಯಾಯ ಮಾಡಿಯೇ ಬಾಳುತ್ತ ಬಂದವರಿಗೆ ನಮ್ಮಲ್ಲೇನು ಕಡಿಮೆ! ದೇವರು ಅವರನ್ನೇಕೆ ಹಾಗೆಯೇ ಬಿಟ್ಟಿದ್ದಾನೆ?

ಲೋಕದಲ್ಲಿ ಹಲವು ಮಟ್ಟದ ಜೀವಾತ್ಮರಿದ್ದಾರೆ. ಅವರಿಗಾಗಿ ದೇವರು ಹಲವು ಮಟ್ಟದ ಧರ್ಮಗಳನ್ನುಂಟು ಮಾಡಿದ್ದಾನೆ, ಹೆಚ್ಚಿನವರಲ್ಲಿ ಮೇಲಿನ ಪ್ರಶ್ನೆಗಳಿಗೆ ಸಿಕ್ಕುವ ಉತ್ತರ—ಅದೆಲ್ಲ ದೇವರ ಇಷ್ಟ; ಆದರೆ ನಾವು ಆವನನ್ನು ನಂಬಬೇಕು—ಎಂಬುದಾಗಿದೆ. ಅವುಗಳ ಕ್ರಮ, ಚಿಕ್ಕ ಮಕ್ಕಳನ್ನು ತಂದೆ ಎಲ್ಲದಕ್ಕೂ ವಿವರಣೆಕೊಟ್ಟು ತರಬೇತು ಮಾಡುವುದಲ್ಲ, ಅವು ಆಗ ಕೇವಲ ತಂದೆಯ ಮೇಲಿನ ಭರವಸೆಯಿಂದ ಮಾತ್ರ ಹೇಳಿದಂತೆ ವರ್ತಿಸಬೇಕು ಎಂಬುದಾಗಿದೆ. ಆಳವಾದ ವಿವರಣೆ ಕೊಟ್ಟರೂ ಅವಕ್ಕೆ ಆಗ ಅರ್ಥ ಮಾಡಿಕೊಳ್ಳುವ ಶಕ್ತಿಯಿಲ್ಲವಷ್ಟೆ! ಆದರೆ ಮಕ್ಕಳು ಬೆಳೆದಂತೆ, ಅವರ ಬುದ್ಧಿ ಶಕ್ತಿ ಬೆಳೆದಂತೆ, ಅವರಿಗೆ ಹೇಳುವುದನ್ನೆಲ್ಲ ತಂದೆ ಕಾರಣಯುಕ್ತವಾಗಿ ವಿವರಿಸಿ ಹೇಳುವುದೂ ಸಾಧ್ಯ. ಆಗ ಅವರ ಅನುಸರಣೆ ಸುಲಭವೂ ಮೇಲ್ಮಟ್ಟದ್ದೂ ಆಗುತ್ತದೆ. ಸನಾತನಧರ್ಮವು ಮಾತ್ರವೇ ಭೂಲೋಕದ ಎಲ್ಲಧರ್ಮಗಳ ಪೈಕಿ ಅತ್ಯಂತ ಆಳವಾದುದು, ವಿಸ್ತಾರವಾದುದು, ಕಾರಣಯುಕ್ತವಾದುದು, ಅತ್ಯಂತ ಮೇಲ್ಮಟ್ಟದ್ದು ಇದ್ದು ಜನರ ಧಾರ್ಮಿಕ ತರಬೇತಿಯಲ್ಲಿ ಇತರ ಧರ್ಮಗಳನ್ನು ದಾಟಿ ಅತ್ಯಂತ ಮೇಲು ಮಟ್ಟದವರೆಗೂ ಜೀವಾತ್ಮರಿಗೆ ಧಾರ್ಮಿಕ, ಆಧ್ಯಾತ್ಮಿಕ, ಜ್ಞಾನ ಕೊಡಬಲ್ಲುದು ಎಂಬುದಕ್ಕೆ ಈ ಪುಸ್ತಕಮಾಲೆಯಲ್ಲಿ ಅನೇಕಾನೇಕ ದೃಷ್ಟಾಂತಗಳು ಅಲ್ಲಲ್ಲಿ ಕೊಡಲ್ಪಡುವವು. ಅವಲ್ಲಿ ಒಂದಾಗಿ, ಲೋಕದಲ್ಲಿ ಈ ಜನ್ಮದಲ್ಲಿ ಇತರರಿಗೆ ಏನೂ ಅನ್ಯಾಯ ಮಾಡದೆ ಇದ್ದರೂ ದೇವರು ಕೊಟ್ಟ ಜನ್ಮದಿಂದಲೇ ಬಹಳ ಕಷ್ಟಕ್ಕೀಡಾದವರ_ದೇವರಲ್ಲಿ ನ್ಯಾಯಪರತೆ ಎಲ್ಲಿದೆ ಎಂಬ ಸಂಶಯ ತರುವ_ದೃಷ್ಟಾಂತಕ್ಕೆ ಸನಾತನ ಧರ್ಮ ಮಾತ್ರವೇ ಅತ್ಯಂತ ಸಮಾಧಾನಕರವಾದ ಉತ್ತರ ಕೊಡಬಲ್ಲದು. ಅದೇನೆಂದರೆ ೧) ಮಾನವನಿಗೆ ಕೇವಲ ಈ ಒಂದೇ ಜನ್ಮವಲ್ಲ; ಹಿಂದೆ ಕೋಟ್ಯಾಂತರ ಜನ್ಮಗಳಾಗಿದ್ದವು; ಮುಂದೆ ಆಗಲಿಕ್ಕಿವೆ. ಹಿಂದಿನ ಮತ್ತು ಮುಂದಿನ ಜನ್ಮಗಳನ್ನು ಸೇರಿಸಿ ತುಲನೆ ಮಾಡಿದಾಗ ಮಾತ್ರ ನಮಗೆ ದೇವರ ನ್ಯಾಯಪರತೆಯ ಚಿತ್ರ ಸಿಕ್ಕುತ್ತದೆ. ಒಬ್ಬನನ್ನು ಜೈಲಲ್ಲಿಟ್ಟದ್ದು ಮಾತ್ರ ಕಂಡು ಛೀ, ಏನು ಅನ್ಯಾಯ! ಎಂದು ನಾವು ಹೇಳುವುದಿಲ್ಲ. ೨) ನಮ್ಮ ಪ್ರತಿ ಕರ್ಮಕ್ಕೆ ತಕ್ಕ ಫಲ ಇದ್ದೇ ಇದೆ; ಅದನ್ನು ತಪ್ಪಿಸಿಕೊಳ್ಳುವಂತಿಲ್ಲ; ಎಂಬ ನಿಯಮವಿದೆ. ಎಂದರೆ ಲೋಕದಲ್ಲಿ ನಾವು ಮಾಡುವ ಅಧರ್ಮದ

ಕಾರ್ಯಗಳಿಗೆ ಕೆಟ್ಟಫಲ ಅನುಭವಿಸಿಯೇ ತೀರಬೇಕು ; ಅಂತೆಯೇ ಧಾರ್ಮಿ ಕರ್ಮಗಳಿಗೆ ಉತ್ತಮ ಫಲ ತಪ್ಪಿಹೋಗದು ; ಕೆಟ್ಟ ಬೀಜ ಬಿತ್ತಿ ಉತ್ತ ಬೆಳೆ ನಿರೀಕ್ಷಿಸುವುದು ವ್ಯರ್ಥ ; ಅಂತೆಯೇ ಉತ್ತಮ ಬೀಜದಿಂದ ವಿಷವ ಹುಟ್ಟುವುದಿಲ್ಲ ಖಂಡಿತ.

ಕರ್ಮಣಾ ಜಾಯತೇಜಂತುಃ ಕರ್ಮಣೈವ ವಿಲೀಯತೇ ।
ಸುಖಂ ದುಃಖಂ ಭಯಂ ಕ್ಷೇಮಂ ಕರ್ಮಣೈವಾಭಿಪದ್ಯತೇ ॥

ಒಬ್ಬನ ಜನನ (ಎಲ್ಲಿ? ಹೇಗೆ? ಎಂಬುದೆಲ್ಲ) ಅವನ ಕರ್ ಹೊಂದಿದೆ ; ಅಂತೆಯೇ ಅವನ ಮರಣ, ಅವನ ಸುಖ ದುಃಖ, ಭಂ ಕ್ಷೇಮಗಳು ಅವನ ಕರ್ಮಫಲವೆಂಬ ಕಾರಣದಿಂದಲೇ ಉಂಟಾಗುತ್ತವೆ.

ಆದರೆ ಬೀಜ ಬಿತ್ತಿದೊಡನೆ ಅದು ಫಲ ಕೊಡುವುದಿಲ್ಲ, ಕಾ ಬಂದಾಗ ಮೊಳೆತು ಬೆಳೆದು ಹೂಬಿಟ್ಟು ಫಲ ಬೆಳೆದು ಹಣ್ಣಾಗುತ್ತ ಅಂತೆಯೇ ನಮ್ಮ ಕರ್ಮಗಳ ಫಲ ಕೆಲವು ಬೇಗ ಆದರೆ ಕೆಲವು ಬಹಳಕಾಲ ಅನಂತರ ಮಾತ್ರ ತೋರಿಕೊಳ್ಳುತ್ತವೆ. ಈ ಜನ್ಮದಲ್ಲಿ ಕೆಲವಕ್ಕೆ ಇನ ಫಲಕೊಡುವ ಕಾಲ ಬಾರದಿದ್ದರೆ, ಮುಂದಿನ ತಕ್ಕ ಜನ್ಮವೆಂಬ ವ್ಯವ ದೇವರು ಮಾಡುತ್ತಾನೆ. ಮನುಷ್ಯ ಈ ಜನ್ಮದಲ್ಲಿ ಇತರರಿಗೆ ಅನ್ಯಾಂ ಮಾಡುತ್ತಿಲ್ಲವಾದರೂ ಕೇವಲ ಬಡಸ್ಥಿತಿ, ಕಷ್ಟ, ದುಃಖ ಅನುಭವಿಸುತ್ತಿದ್ದ ಅದು ಹಿಂದಿನಜನ್ಮಗಳ ಕೆಟ್ಟಕರ್ಮಗಳ ಫಲವಾಗಿ ಮಾತ್ರ. ಏನೂ ಧಾರ್ಮಿ ಕಾರ್ಯ, ಪರೋಪಕಾರ ಮಾಡದೆ ಬಹಳ ಭೋಗ ಅನುಭವಿಸುತ್ತಿದ್ದರೆ ಅ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯ ಕರ್ಮಗಳ ಫಲವಾಗಿ ಮಾತ್ರ. ಬ ಮಟ್ಟಿನ ಜನರು ಕೆಟ್ಟ, ಒಳ್ಳೆ, ಎರಡೂ ತರದ ಕರ್ಮಗಳನ್ನು ಮಾಡುತ್ತಿ ವುದೇ ಸಾಮಾನ್ಯ ಕ್ರಮ. ಕೆಲವು ತೀರಾ ದುಷ್ಟ ಕರ್ಮಗಳಿಗಾಗಿ ದು ಪ್ರಾಣಿ ಜನ್ಮ ಪಡೆಯಬೇಕಾದೀತು. ಆದ್ದರಿಂದ ಆಗ ಉತ್ತಮ ಕರ್ಮಗ ಫಲಕ್ಕೆ ಪ್ರತ್ಯೇಕ ಉತ್ತಮ ಮಾನವ ಜನ್ಮ ಪಡೆಯುವವರೆಗೂ ಕಾ ಬೇಕಾದೀತು. ಹಿಂದಿನ ಕರ್ಮಫಲ ಭೋಗಿಸುತ್ತಿರುವ ಜನ್ಮದಲ್ಲಿ ಹಿಂದ ಕರ್ಮಗಳ ಫಲ ಅನುಭವಿಸಿ ಮುಗಿಸಿದರೂ ಅವ ಆಗಾಗ ಹೊಸದಾಗಿ ಅನೇ ಕರ್ಮಗಳನ್ನು ಮಾಡುತ್ತಿರುವುದರಿಂದ ಅವುಗಳ ಭೋಗಕ್ಕಾಗಿಯೋ ಶಿ ಗಾಗಿಯೋ ಮುಂದೆ ಅನೇಕ ಜನ್ಮಗಳನ್ನು ಪಡೆಯುತ್ತಿರಬೇಕಾಗುವ ರಿಂದ, ಜೀವರು ಸಾಲುಸಾಲಾಗಿ ಲಕ್ಷಗಟ್ಟಲೆ, ಕೋಟಿಗಟ್ಟಲೆ, ಜನ್ಮಗಳನ ಪಡೆಯುತ್ತಿರುತ್ತಾರೆ. ಆ ಜನ್ಮಗಳ ಸರಪಣಿ ಬೆಳೆಯುತ್ತ ಹೋಗುತ್ತ

ಮುಗಿಸಲಿಕ್ಕಿರುವ ದಾರಿ ಕೇವಲ ಧರ್ಮದ ಅಭ್ಯಾಸ ಮಾಡುವುದು.

ಮಾಡಿದ ಕರ್ಮಗಳಿಗೆ ಫಲವಾಗಿ ಇಲ್ಲಿ ಮಾನವನಾಗಿ ಮಾತ್ರ ಫಲ ಅನುಭವಿಸುವುದಲ್ಲ, ಪ್ರೇತವಾಗಿ ಅಲೆದಾಡುತ್ತ, ಅಥವಾ ನರಕಗಳಲ್ಲಿ ಶಿಕ್ಷೆ ಹೊಂದುತ್ತ, ಅಥವಾ ದೊಡ್ಡ ಪ್ರಾಣಿಗಳು, ಅಲ್ಪತರದವು, ಕ್ರಿಮಿ, ಮರ ಮುಂತಾದವುಗಳ ಜನ್ಮ ಪಡೆದು ಕೂಡ ಕಷ್ಟ ಪಡುವುದು, ಅಥವಾ ಕೆಲವು ಕಾಲ ಸ್ವರ್ಗದ ಭೋಗ ಅನುಭವಿಸುವುದು ಎಲ್ಲ ವಿಧಿಸಲ್ಪಡುವುದುಂಟು.

ಸನಾತನ ಧರ್ಮವು ಅತ್ಯಂತ ಪುರಾತನವಾದದ್ದು, ಶಾಶ್ವತವಾದದ್ದು, (ಅದರ ತಳಹದಿಯಾದ ವೇದಗಳಂಥ ಪುರಾತನ ಧಾರ್ಮಿಕ ಗ್ರಂಥ ಬೇರೆ ಇಲ್ಲವೆಂದೂ ಪಾಶ್ಚಾತ್ಯ ಶೋಧಕರೇ ಒಪ್ಪಿದ್ದಾರೆ) ಪುನರ್ಜನ್ಮ ಮತ್ತು ಕರ್ಮಫಲದ ತತ್ತ್ವ ಅದರ ಒಂದು ಮುಖ್ಯ ತಳಹದಿ. ಅದರೆ ಲೋಕದಲ್ಲಿ ಕಲಿಯ ಮಹಾತ್ಮೆಯಿಂದ ಜನರ ಧಾರ್ಮಿಕ ಸಾಧನಾ ಶಕ್ತಿ ಕಡಿಮೆಯಾಗುತ್ತ ಬಂದಂತೆ, ದೇವರು ಬೇರೆ ಬೇರೆ ಮತಸ್ಥಾಪಕ ಆಚಾರ್ಯರನ್ನು ಕಳುಹಿಸಿ ಕ್ಷೀಣಿಸಿದ ಶಕ್ತಿಯುವರ ಮಟ್ಟಕ್ಕೆ ತಕ್ಕ ಬೇರೆ ಸುಲಭ ಮತಗಳನ್ನು ಸ್ಥಾಪಿಸಿದ್ದಾನೆ. ಸನಾತನ ಧರ್ಮದ ಶಾಖೆಗಳಾದ ಬುದ್ಧ ಧರ್ಮ, ಜೈನಧರ್ಮ, ಲಿಂಗಾಯಿತ ಧರ್ಮ, ಸಿಖ್ಖ ಧರ್ಮ ಮುಂತಾದವು ಸನಾತನ ಧರ್ಮಗಳ ಶಾಖೆಗಳಿದ್ದು, ಅದರ ಅನೇಕ ಭಾಗಗಳನ್ನು ಬಿಟ್ಟು ಸುಲಭ ಮಾಡಲ್ಪಟ್ಟವಾದರೂ ಪುನರ್ಜನ್ಮ, ಕರ್ಮಕ್ಕೆ ಫಲ, ಅತ್ಯಂತ ಕಾರಣಯುಕ್ತವೂ ಪರಿಣಾಮಕಾರಿಯೂ ಆಗಿದ್ದು ಅವನ್ನು ಒಳಗೊಂಡಿದೆ.

ಆದರೆ ಬೇರೆ ಎಲ್ಲ ದೂರದೇಶಗಳ ಧರ್ಮಗಳು, ಹಾಗೆ ಪ್ರಭಾವಿತವಾಗಿರದಿದ್ದು, ಪುನರ್ಜನ್ಮ, ಕರ್ಮಫಲ ಭಾಗಗಳನ್ನು ಒಳಗೊಂಡಿಲ್ಲ. ದೃಷ್ಟಾಂತಕ್ಕೆ ಒಂದೇ ಮೂಲದವಾದ ಯಹೋವ, ಕ್ರೈಸ್ತ, ಮುಸಲ್ಮಾನ ಧರ್ಮಗಳು ಜೀವಾತ್ಮನಿಗೆ ಕೇವಲ ಒಂದು ಜನ್ಮ ಮಾತ್ರ ಎಂದೇ ಹೇಳುತ್ತವೆ. ಅವುಗಳಲ್ಲಿ ಮಾಡಿದ ಪುಣ್ಯ ಪಾಪ ಕರ್ಮಗಳ ತುಲನೆಮಾಡಿ, ರವಷ್ಟು ಹೆಚ್ಚು ಪಾಪವಿದ್ದರೂ ಶಾಶ್ವತವಾದ ಅನಂತಕಾಲ ಯಾತನೆಯ ನರಕಕ್ಕೆ ಜೀವಾತ್ಮರು ನೂಕಲ್ಪಡುತ್ತಾರೆ. ರವಷ್ಟಾದರೂ ಹೆಚ್ಚು ಪುಣ್ಯವಿದ್ದವರು ಸ್ವರ್ಗದ ಭೋಗ ನಿರಂತರವಾಗಿ ಪಡೆಯುತ್ತಾರೆ, ಎನ್ನುತ್ತವೆ ಅವು.

ಸನಾತನ ಧರ್ಮದ ಕಾರಣಯುಕ್ತವಾದ ದೃಷ್ಟಿಯಿಂದ ತುಲನೆ ಮಾಡಿದಾಗ ಇವುಗಳ ನಿಲುವಲ್ಲಿ ಸ್ಪಷ್ಟ ದೋಷ ತೋರದಿರದು. ಅನಂತ ಕಾಲ ನರಕವೆಂದರೆ, ಕೋಟಿ ಕೋಟಿ ವರ್ಷಗಳಾದರೂ ಮುಗಿಯದ್ದು

ಕೇವಲ ಅತಿ ಚಿಕ್ಕದಾದ ಒಂದು ಜನ್ಮದ ಪಾಪಕ್ಕೆ ಅನಂತ ಕಾಲದ ಶಿಕ್ಷೆಯೇ ? ಆದರಲ್ಲಿ ಲಕ್ಷವರ್ಷ ಕಾಲ ನರಕದಲ್ಲಿ ನರಳಿ ಸಾಕು ಸಾಕಾಗಿ ಜೀವಾತ್ಮನ ಕರುಣಾಮಯನೆಂದು ಎಲ್ಲ ಶಾಸ್ತ್ರಗಳೂ ಹೇಳುವ ದೇವರೊಡನೆ ಈ ಒಮ್ಮೆಗೆ ದಯಮಾಡಿ ಕ್ಷಮಿಸು, ಪುನಃ ಪರೀಕ್ಷಿಸು, ನಾನು ತಪ್ಪು ಮಾಡೆನ ಎಂದರೂ ದೇವರಿಗೆ ಕ್ಷಮಿಸುವ ಕರುಣೆ, ಅಥವಾ ಶಕ್ತಿ ಇಲ್ಲವೆಂದಾಗುತ್ತದೆ ಬುದ್ಧಿ ಬರುವ ಮುಂಚೆಯೇ ಸತ್ತ ಬಾಲಕರ ಪಾಪ ಪುಣ್ಯಗಳ ತುಲನೆ ಹೇಗ ಸರಿಯಾಗುತ್ತದೆ ? ಅಂತೆಯೇ ಶಾಸ್ತ್ರ ಕಲಿಯುವ ಸಂದರ್ಭ ಸಿಕ್ಕದವರದ್ದು ಹುಟ್ಟುವಾಗಲೆ ತೀರಾ ಬಡವ, ಕುರುಡ ಅಥವಾ ಮೂಢನಾಗಿ ಹುಟ್ಟಿದವನ ವಿಪರೀತ ಕಷ್ಟಜೀವನಕ್ಕೆ ಕಾರಣವೇನು ? ಒಂದೇ ಜನ್ಮವೆನ್ನುವವರಲ್ಲಿ ಅಪರೂಪಕ್ಕೆ ಮುಂಚೆಯೂ ಪುನರ್ಜನ್ಮಗಳ ಕತೆಗಳ ಘಟನೆಗಳು ನಡೆದಿರ ಬೇಕು ; ಆದರೆ ತಮ್ಮ ಧರ್ಮಕ್ಕೆ ಹೆದರಿ ಗುಟ್ಟಲ್ಲಿಟ್ಟಿರಬೇಕು ಈಗಲಾದರೋ ಪತ್ರಿಕೆಗಳ ಅಪಾರ ಪ್ರಚಾರ ಶಕ್ತಿಯಿಂದ ಅವು ಮುಚ್ಚು ಮರೆಯಿಲ್ಲದೆ ಪ್ರಕಟವಾಗಿವೆ. ಅವನ್ನು ಸುಳ್ಳು ಎನ್ನುವುದಕ್ಕೆ ಅರ್ಥವಿಲ್ಲವಲ್ಲ

ಲೋಕದಲ್ಲಿ ಸ್ಪಷ್ಟವಾಗಿ ಕಾಡುಜನರಿಂದ ಮಹಾಋಷಿಗಳ, ಪರಮ ಹಂಸರವರೆಗೆ ಅಪಾರ ಮಟ್ಟದ ಧಾರ್ಮಿಕ ಶಕ್ತಿಯ ಜೀವಾತ್ಮರಿದ್ದಾರೆ. ಮಾವಿನ ಸಸಿಗಳಲ್ಲಿ ಅತಿ ಚಿಕ್ಕದರಿಂದ, ದೊಡ್ಡ ಸಸಿ, ಮರ, ಅತಿ ದೊಡ್ಡ ಮರಗಳನ್ನು ಕಂಡು ಬಾಲಕನು ; ಮಾವಿನ ಸಸಿಯೇ ಬೆಳೆಯುತ್ತ ಕ್ರಮೇಣ ಬೃಹತ್ ಮರವಾಗುತ್ತದೆಂದು ಸರಿಯಾಗಿಯೇ ತೀರ್ಮಾನಿಸುವಂತೆ, ಪ್ರಾಣಿ ಜನ್ಮದಿಂದ ಆಗತಾನೇ ಕಾಡು ಮನುಷ್ಯನಾಗಿ ಜನ್ಮ ಪಡೆದವ, ಹಾಗೆಯೇ ಸಾಯುತ್ತ ಹುಟ್ಟುತ್ತ ಸುಲಭ ಧರ್ಮಗಳಿಂದ ಮೇಲು ಮೇಲು ಧರ್ಮಗಳಿಗೆ ಜೀವಾತ್ಮನು ಏರಲಿಕ್ಕೆ ಬೇಕಾದ ಹಲವು ಮಟ್ಟದ ಧರ್ಮಗಳಲ್ಲಿ ಜನ್ಮ ಪಡೆಯುವ ಕ್ರಮ ಇರಲೇಬೇಕಷ್ಟೆ ? ತೀರ ಕೆಳಮಟ್ಟದ ಕ್ಲಾಸುಗಳ ಪಠ್ಯ ಪುಸ್ತಕದಲ್ಲಿ ಹಗಲು ರಾತ್ರಿ ಆಗಲಿಕ್ಕೆ ಭೂಮಿ ಆದರ ಅಕ್ಷದ ಸುತ್ತಲೂ ಸುತ್ತಿ ಸೂರ್ಯನ ದಿಕ್ಕಿನ ಮುಖ ಬದಲಾಗುತ್ತಿರುವುದೇ ಕಾರಣ ಎಂದು ಹೇಳು ವುದಿಲ್ಲ, ಏಕೆಂದರೆ ಹೇಳಿದರೆ ಬಾಲಕನಿಗೆ ಅರ್ಥವಾಗದು. ಅಲ್ಲಿ ಮುಖ್ಯ ಬೇಕಾದುದು ಬಾಲಕ ತನಗೆ ವಿಧಿಸಿದ ಪಾಠಗಳನ್ನು ಶ್ರದ್ಧೆಯಿಂದ ಕಲಿತು ತೇರ್ಗಡೆ ಹೊಂದುವುದು. ಅಂಥ ಧರ್ಮದ ಶ್ರದ್ಧೆ ತೋರಿಸಿದ ಜೀವಾತ್ಮ ನಿಗೆ ದೇವರು ಮತ್ತೂ ಮೇಲಿನ ಮಟ್ಟದ ಧರ್ಮದಲ್ಲಿ ನಂತರ ಜನ್ಮ ಕೊಡು ತ್ತಾನೆ. ಹಾಗೆ ಮುಂದರಿದು ಕಟ್ಟಕಡೆಗೆ ತುತ್ತುದಿಯನ್ನು ಮುಟ್ಟಲಾರ.

ಎಂದರೆ ಇಲ್ಲಿ ಬೇಕಾದುದು ಅವನವನಿಗೆ ದೇವರು ಜನ್ಮದ ಮೂಲಕ ಕೊಟ್ಟ ಧರ್ಮದಲ್ಲಿ ಸಂಪೂರ್ಣ ಶ್ರದ್ಧೆ.

ಶ್ರದ್ಧಾವಾನ್ ಲಭತೇ ಜ್ಞಾನಮ್ (ಭಗವದ್ಗೀತೆ ೪, ೩೯)

ಅದರಿಂದ ಕ್ರಮೇಣ ಸರಿಯಾದ ಜ್ಞಾನ, ಸಿಕ್ಕಿಯೇ ಸಿಕ್ಕುತ್ತದೆ. ಆದರೂ ಈಗಲೇ ಸನಾತನ ಧರ್ಮದಲ್ಲಿ ಜನಿಸಿದವರು ತಾವು ಅತ್ಯಂತ ಭಾಗ್ಯವಂತರು, ಬಹಳ ಕಾಲದ ಶ್ರಮದಿಂದ ಮೇಲೆ ಬಂದವರು, ಎಂದು ಸಂತೋಷ ಪಡಲೇಬೇಕಲ್ಲವೆ ?

ದೇವರ ಕ್ರಮದಲ್ಲಿ ಇನ್ನೊಂದು ಆಶ್ಚರ್ಯವೆಂದರೆ, ಸಾಮಾನ್ಯವಾಗಿ ದೇವರೇ ಹುಟ್ಟಿನ ಮೂಲಕ ಕೊಟ್ಟ ಧರ್ಮದ ಬಗ್ಗೆ ಜನರಲ್ಲಿ ಸ್ವಾಭಾವಿಕ ವಾಗಿ, ಆ ಧರ್ಮವೇ ಲೋಕದಲ್ಲಿ ಅತ್ಯುತ್ತಮವಾದದ್ದು ಎಂಬ ಹಿಗ್ಗಿನಭಾವನೆ, ಸರ್ವಸಾಧಾರಣವಾಗಿ ಎಲ್ಲರಲ್ಲೂ ಇತ್ತು. ರೋಮನ್‌ಕೆಥೊಲಿಕನಿಗೆ ಕೆಥೊಲಿಕ್ ಧರ್ಮದಲ್ಲಿ, ಶೀಯಾ ಮುಸಲ್ಮಾನನಿಗೆ ಅದರಲ್ಲಿ, ಲಿಂಗಾಯಿತರವನಿಗೆ ತನ್ನ ಧರ್ಮದಲ್ಲಿ, ಬ್ರಾಹ್ಮಣನಿಗೆ ತನ್ನ ಬ್ರಾಹ್ಮಣ್ಯದಲ್ಲಿ, ಈ ತರದ ವಿಶೇಷ ಆದರ ಸರ್ವತ್ರ ಕಾಣಬಹುದಿತ್ತು. ಈ ಅವರೆಲ್ಲರ ನಿರ್ಧಾರಗಳು ಲೋಕದ ಎಲ್ಲ ಧರ್ಮಗಳ ತುಲನೆಮಾಡಿ ಆಮೇಲೆ ತಮ್ಮದೇ ಉತ್ತಮ, ಎಂದು ಕಂಡುಬಂದ ನಿರ್ಧಾರಗಳೇನಲ್ಲ. ಕೇವಲ ಈ ಜನ್ಮದಲ್ಲಿ ಅವುಗಳನ್ನು ಮಾತ್ರ ಅತಿಚೆನ್ನಾಗಿ ಅಭ್ಯಾಸಿಸಬೇಕೆಂದೇ ದೇವರೇ ಉಂಟುಮಾಡುತ್ತ ಬಂದ ಹಿಗ್ಗು ಅದು! ಅವರ ಮತ್ತೊಂದು ಜನ್ಮ ಅವರಿಗೆ ಬೇರೆ ಧರ್ಮದಲ್ಲೇ ಇರಬಹುದು. ಆದರೂ ಈಗಿನದರಲ್ಲಿ ಮಾತ್ರವೇ ಅವರಿಗೆ ಈಗ ಪ್ರೀತಿ, ಶ್ರದ್ಧೆ!

ಈ ತರದ ಸ್ವಧರ್ಮದ ಶ್ರದ್ಧೆ ಈಗಲೂ ಮುಸಲ್ಮಾನರಲ್ಲಿ, ನಮ್ಮ ದೇಶದ ಕ್ರಿಶ್ಚನರಲ್ಲಿ, ಕಾಣಬಹುದು. ಅದರಿಂದಾಗಿ ಮುಸಲ್ಮಾನರಿಗೆ ಈ ಇಡೀ ದೇಶ ಮುಸಲ್ಮಾನ್ ಆದರಾದೀತು ಎಂತ ಇದ್ದೇ ಇದೆ ; ಅಂತೆಯೇ ಕೆಥೊಲಿಕರಿಗೆ ಮುಂತಾಗಿ, ಆದರೆ ಈಗ ಸನಾತನ ಹಿಂದುಗಳಲ್ಲಿ ಮಾತ್ರ ಆ ತಮ್ಮತಮ್ಮ ಧರ್ಮದ ಹಿರಿಮೆಯ ಶ್ರದ್ಧೆಮಾತ್ರ ಕಾಣುವುದಿಲ್ಲ ; ಅದರ ಬಗ್ಗೆ ಅಸಡ್ಡೆ, ಅದು ಹೇಗೆಬೇಕಾದರೂ ಹಾಳಾಗಲೆಂಬ ತಾತ್ಸಾರ, ತೀರಾಸಾಮಾನ್ಯ ವಾಗುತ್ತ ಬಂದಿದೆ! ಇದಕ್ಕೆ ಕಾರಣ ನಮ್ಮ ನಾಸ್ತಿಕ ಸೆಕ್ಯುಲರ್ ಸರ್ಕಾರ. ಕೇವಲ ದೇಹ ಮಾತ್ರ ನಂಬಿ ತನ್ನ ಕೆಲಸ ಕ್ರಮ ರಚಿಸುವ, ದೇವರ ವಿಚಾರ, ಪಾಪದ ಭಯ, ಆತ್ಮದವಿಚಾರ ಮಕ್ಕಳಲ್ಲಿಲ್ಲದಂತೆ ಮಾಡಿದ, ಧಾರ್ಮಿಕ ಪಾಠ ಕಲಿಸುವ ಕ್ರಮವಿಲ್ಲದ, ಅದು ಕೋಟಿಕೋಟಿ ಹಿಂದೂ ಯುವಕರನ್ನು ಅತ್ಯಂತ

ಹಾಳುಮಾಡಿ ಹಾಳು ಪುನರ್ಜನ್ಮಗಳಿಗೆ ಕಳುಹಿಸುವುದರಲ್ಲಿ ಮಾತ್ರವೇ ಇದ
ಹಾಗೆಮಾಡಲು ಕಾರಣರಾಗುತ್ತಿರುವವರಂತೂ ಯಾವ ಗತಿ ಪಡೆದಾರು
ಅವರ ಪುನರ್ಜನ್ಮಗಳು ಅಪಾರಸಂಖ್ಯೆಯುವು ತೀರಾ ಹಾಳಿರವೇ ?

ನಮಗೆ ಪುನರ್ಜನ್ಮಗಳು ಧಾರಾಳವಾಗಿ ಇವೆ ಎಂದಾದರೆ ಅವನ
ಹೊಂದುವುದು ನಮ್ಮ ಯಾವ ಭಾಗ ? ಅದರ ಅರಿವೇ ನಮಗಿಲ್ಲವಲ್ಲ
ಈ ಕಾಲದ ಒಂದು ಮುಖ್ಯ ಲಕ್ಷಣವೆಂದರೆ ನಮ್ಮ ಹೊಸ ಜನಾಂಗಕ
ಧಾರ್ಮಿಕ ಹಿರಿಯರನ್ನು ಕಂಡರೆ ತಾತ್ಸಾರ. ಅವರಿಗೆ ಏನೂ ಗೊತ್ತಿಲ್ಲ
ಹಳೆಕಾಲದ ಶಾಸ್ತ್ರವ್ಯರ್ಥ ; ವಿಜ್ಞಾನ ಮಾತ್ರ ಅದ್ಭುತ ಜ್ಞಾನದ್ದು ; ಅದ
ಬೆಂಬಲ ಮಾತ್ರ ಮುಖ್ಯ, ಎಂಬುದಾಗಿದೆ. ವಿಜ್ಞಾನಪ್ರಿಯ ಜವಹರ್‌ಲಾಲ
ನೆಹರೂ ಅವರು ದೇಶಕ್ಕೆ ಗೊಡ್ಡುಧರ್ಮದ ಸರ್ಕಾರ ಬೇಡ ಎಂದೇ ನಾಸ್ತಿ
ಸೆಕ್ಯುಲರ್‌ಸರ್ಕಾರ ರೂಢಿಗೆಬರುವಂತೆ ಮಾಡಿದರು! ಆದರೆ ಧರ್ಮ ಬೇಡವಾ
ಹೊಸಜನಾಂಗದ, ಅವರು ಮೆಚ್ಚುವ ವಿಜ್ಞಾನಿಯ, ಒಂದು ಮುಖ್ಯಲಕ್ಷ
ವೆಂದರೆ, ಹೊಸಜ್ಞಾನದ ಗರ್ವಪಡುವ ಅವರು ತಮ್ಮನ್ನೇತಾವು ಅರಿಯರು
ತನ್ನನ್ನೇತಾನು ಅರಿಯದ ತಲೆಕೆಟ್ಟವನ ಮಾತಿಗೆ ನಾವು ಯಾರೂ ಬೆಲೆಕಟ್ಟು
ವುದಿಲ್ಲ ; ಅಂತೆಯೇ ಇವರೂ ಆಗರೇ ? ಆದರೆ ಇವರು ತಮ್ಮನ್ನೇತಾವ
ಅರಿಯದವರು ಎಂಬುದನ್ನು ಮುಂಚೆ ರುಜುಪಡಿಸುವ.

ಒಬ್ಬ ಅನ್ಯಮತದವ ಶ್ರೀ ರಮಣ ಮಹಾಋಷಿಗಳನ್ನು ತರ್ಕದಲ್ಲಿ
ಸೋಲಿಸಬೇಕೆಂದು ಅವರನ್ನು ಭೇಟಿಯಾದ. "ದೇವರಿಗೆ ಆಕಾರವಿದೆಯೇ"
ಎಂದು ಕೇಳಿದ. ಅವನ ಉದ್ದಿಶ್ಯ, ಸರ್ವವ್ಯಾಪಿಯಾದ ದೇವರಿಗೆ ಆಕಾರವಿ
ಲಾರದು ; ಆದರೆ ಹಿಂದುಗಳು ದೇವರನ್ನು ವಿಗ್ರಹಗಳ ಆಕಾರಕೊಟ್ಟು ಪೂಜಿಸು
ತ್ತಾರಲ್ಲ ! ಇದು ತಪ್ಪು, ಎಂದು ವಾದಿಸಬೇಕೆಂಬುದಾಗಿತ್ತು. ಅವರು ಅವನಿಗೆ
"ದೇವರವಿಚಾರ ಹಾಗಿರಲಿ, ನಿನಗೆ ಆಕಾರವಿದೆಯೇ" ಎಂದು ಕೇಳಿದರು. ಅವ
ಕೂಡಲೆ "ಇದೆ, ನೋಡಿ" ಎಂದು ತನ್ನತಲೆ, ದೇಹಮುಟ್ಟಿದ. ಅಷಕ್ಕೆ ಅವರು
ದೇಹವೇ ನಾವಾದರೆ, ಸತ್ತಾಗ "ನನ್ನನ್ನು ಸುಡಲಿಕ್ಕೆ ಹುಗಿಯುಲಿಕ್ಕೆ, ಕೊಂಡು
ಹೋಗಬೇಡಿರಿ ; ನಾನು ಇಲ್ಲಿ ಮನೆಯಲ್ಲೇಇರುವೆ" ಎಂದೇಕೆ ಹೇಳುವುದಿಲ್ಲ
ಎಂದರು. ಅವ ಹೀಗೆ ಆರಂಭದಲ್ಲೆ ತಪ್ಪಿಬಿದ್ದಂತಾಗಿ, ಬೇಗಹೊರಟುಹೋದ.

ನಾವು ಕೇವಲ ದೇಹವಲ್ಲ, ಮನಸ್ಸು, ಬುದ್ಧಿ ಅಲ್ಲ : ನಾವು ಆತ್ಮ ಎನ್ನು
ತ್ತದೆ ಶಾಸ್ತ್ರ. ಉಳಿದವು ಅದರ ಹೊದಿಕೆಗಳು ಮಾತ್ರ. ಅವಕ್ಕೆ ಚೇತನಕೊಡು
ವವನೇ ಆತ್ಮ. ಗಾಢನಿದ್ರೆಯಲ್ಲಿ ದೇಹಜಡ ; ಆಗ ಮನಸ್ಸಿಗೂ ಮಾತುಕೇಳ

ವುದಿಲ್ಲ. ದೃಷ್ಟಿತೋರುವುದಿಲ್ಲ, ಪರಿಮಳಗೊತ್ತಾಗುವುದಿಲ್ಲ, ದೇಹದ ಗಾಯದ ನೋವುಕೂಡ ಭಾಧಿಸುವುದಿಲ್ಲ. ಆದರೆ ಆಗಲೂ ಶ್ವಾಸಬಿಡುತ್ತ ನಾವು ಬಾಳುತ್ತೇವೆ; ನಂತರ ಆ ಗಾಢನಿದ್ರೆ ಸುಖಕರವಾಗಿತ್ತೆಂಬ ಅರಿವನ್ನೂ ಹೇಳುತ್ತೇವೆ. ದೇಹವು ಅತ್ಯಂತಅಲ್ಪತರದ ಜಡವಾದ ಅಲ್ಪಕಾಲ ಬಾಳುವ ಆಹಾರಗಳ ಸಾರದಿಂದ ಮಾಡಿದ್ದು. ಅವನ್ನು ಕೂಡಿಸಿ ಬಾಳಿಸುವವನೂ ಆತ್ಮನೇ. ಏಕೆಂದರೆ ಆತ್ಮನು ದೇಹಬಿಟ್ಟು ಹೊರಟುಹೋದೊಡನೆ ಅದು ಜಡವಾಗಿ ಬಿದ್ದು, ಕೂಡಲೆ ಕೊಳೆಯಲಿಕ್ಕೆ ಆರಂಭಿಸುತ್ತದೆ. ನಮಗೆ ಆತ್ಮದವಿಚಾರ ತಿಳಿಯದೆಯೂ ನಾವು, ನಮ್ಮ ಕೇವಲ ಜಡವಸ್ತುಗಳಾದ ಕೊಡೆ, ಮನೆ, ಹಣ, ನಮ್ಮದು ಎನ್ನುವಂತೆ ನನ್ನದೇಹ ಆರೋಗ್ಯದಲ್ಲಿಲ್ಲ; ನನ್ನಮನಸ್ಸು ಇಂದು ಜಡವಾಗಿದೆ; ನನ್ನಬುದ್ಧಿ ಮೊನ್ನೆ ತಪ್ಪಿಬಿತ್ತು, ಆಗಹೇಳಿದ್ದು ಸರಿಯಲ್ಲ: ಎನ್ನುವಾಗ ನಮ್ಮ ದೇಹದ ನಿಜವಾದ ಯಜಮಾನನಾದ ಆತ್ಮ ಬೇರೆಯೇ ಇದ್ದಾನೆ ಎಂಬ ಅರ್ಥ ಅಡಗಿದೆ. ಮುಂದೆ ಬರುವ ಪುನರ್ಜನ್ಮದ ಕತೆಗಳಲ್ಲೂ ಸಾಯುವಾಗ ನಮ್ಮ ಆತ್ಮನು ಈ ಜನ್ಮದ ಸೂಕ್ಷ್ಮಅನುಭವ, ಒಲವುಗಳ ಸಾರವೆಂಬ ಸೂಕ್ಷ್ಮ ಕವಚದೊಡನೆ ಮತ್ತೆಲ್ಲೋ ಜನಿಸಿದನೆಂದಾಗುತ್ತದೆ. ಒಂದೇ ಅಲ್ಲ ಎರಡು ಅಥವಾ ಹೆಚ್ಚು ಜನ್ಮಗಳಲ್ಲಿಯೂ ಚೇತನಸ್ವರೂಪನಾದ ಆತ್ಮನು ಮಾತ್ರ ನಮ್ಮ ನಿಜವಾದ ಶಾಶ್ವತಭಾಗ ಎಂಬುದು ತಿಳಿಯುತ್ತದೆ. ಎಂದರೆ ಈ ದೇಹವು ಕೇವಲ ಅದರ ತತ್ಕಾಲದ, ಅದಕ್ಕಾಗಿ ಮಾಡಿದ ಮನೆಯಂತೆ, ಅಂಗಿಯಂತೆ, ಮಾತ್ರ. ಆ ತತ್ಕಾಲದ ಮನೆಯೇ ತಾನು ; ಅಂಗಿಯೇ ತಾನು, ಎನ್ನುವುದು ತೀರಾ ಮೂರ್ಖತನವಾಗದೇ ?

ನಮಗೆ ನಮ್ಮ ಆತ್ಮದ ಅರಿವು ಇಲ್ಲ ಸರಿ, ಏಕೆಂದರೆ ಅದು ದೇಹದಂತೆ ಸ್ಥೂಲವಲ್ಲ, ಮನಸ್ಸಿಗಿಂತ ಬುದ್ಧಿಗಿಂತ ಅತ್ಯಂತ ಸೂಕ್ಷ್ಮದ್ದು. ಅದಕ್ಕಿಂತ ಸೂಕ್ಷ್ಮದ್ದು ಬೇರೆ ಇಲ್ಲ. ಸೂಕ್ಷ್ಮವಾದ ವಿದ್ಯುತ್ತೂ ಕಾಣಲೂ ಸಿಕ್ಕುವುದಿಲ್ಲ. ಆದರೆ ವಿಜ್ಞಾನಿ ತನ್ನ ಶ್ರಮದಿಂದ ಅದರ ಕ್ರಮಗಳನ್ನೆಲ್ಲ ಕಂಡುಕೊಂಡಿದ್ದಾನೆ. ಅಂತೆಯೇ ನಮ್ಮ ಋಷಿಗಳು ದೇವರಿಂದಲೇ ಬಂದ ಶಾಸ್ತ್ರಕ್ರಮಗಳ ಸಾಧನೆಯಿಂದ ಆತ್ಮಾನುಭವ ಧಾರಾಳವಾಗಿ ಮಾಡಿಕೊಂಡವರೆ ; ಶಾಸ್ತ್ರದ ದಾರಿ ನಿಜವೆಂದು ರುಜುಪಡಿಸಿದವರೇ. ವಿಜ್ಞಾನಿಯನ್ನು ನಂಬಲೇಬೇಕು, ಆದರೆ ಶಾಸ್ತ್ರವನ್ನಲ್ಲ, ನಮ್ಮ ಋಷಿಗಳನ್ನಲ್ಲ, ಎನ್ನುವುದು ತೀರಾ ಮೊಂಡುವಾದ. ವಿಜ್ಞಾನಿ ಆತ್ಮಶೋಧನೆಗೆ ಹೊರಟವನೇ ಅಲ್ಲ; ಅದರ ಜ್ಞಾನ ಸ್ವಲ್ಪವೂ ಇರುವವನಲ್ಲ. ಅವನಿಗೆ ಆತ್ಮ, ದೇವರು ಇಲ್ಲ ಎನ್ನುವ ಯೋಗ್ಯತೆ ಸ್ವಲ್ಪವೂ ಇಲ್ಲ.

ನಾವು ಕೇವಲ ದೇಹ ಎಂಬ ಅಜ್ಞಾನ ಬಹಳ ಹಾನಿಕರ. ಆಗ ದೇಹವ
ಸರ್ವಸ್ವವೆಂದು ತೋರಿ ಅದರ ಸುಖಭೋಗಗಳೇ ಜೀವನದ ಪೂರ್ಣ ವ್ಯಾಪಾ
ವಾಗುತ್ತದೆ. ಆದರೆ ದೇಹದಲ್ಲಿ ನಿರಂತರವಾಗಿ ಏಳುವ ಭೋಗದ ಆಸೆಗ
ಪೂರೈಕೆಗೆ ಬೇಕಾದುದೆಲ್ಲ ಅದರ ಹೊರಗಿಂದ ಬರಬೇಕು. ಹೆಂಡತಿ, ಮನ
ಹೊಲ, ಅನ್ನ, ತಿಂಡಿ, ಬಟ್ಟೆ, ಹಣ, ಮದ್ಯ, ಮಾಂಸ, ಎಲ್ಲವುಗಳು ನಿರಂತ
ಸಂಗ್ರಹವಾಗಬೇಕು. ಆಸೆ ತಡೆಯುವ ಶಕ್ತಿಬೆಳೆಸದೆ, ಅದೇ ಮುಖ್ಯವೆಂಬವರ
ಈ ಭೋಗದವಸ್ತುಗಳು ನ್ಯಾಯದ ರೀತಿಗಳಲ್ಲಿ ಲಭಿಸದಿದ್ದಾಗ ಅನ್ಯಾಯ
ಕಳವು, ಕೊಲೆ, ಅಧಿಕಾರದ ದುರುಪಯೋಗ ಎಲ್ಲ ಮಾಡದೆ ಇರಲಾರರು. ಅ
ದೇಶ ಅನ್ಯಾಯದಲ್ಲಿ ಮುಳುಗುತ್ತದೆ. ನಾವು ನಾಸ್ತಿಕ ಸರ್ಕಾರ ಆರಿಸಿ, ದೇವ
ಭಯ ಪಾಪದ ಭೀತಿ ದೂರ ಹಾಕುತ್ತ ಬಂದಂತೆ ದೇಶದಲ್ಲಿ ಅನಾಚಾರಗಳ
ಭಯಂಕರ ಮಟ್ಟದಲ್ಲಿ ಹೆಚ್ಚುತ್ತ ಬಂದುದು, ಈ ಕೇವಲ ದೇಹ ತಾವು ಎಂಬ
ಪಂಥದವರಿಂದಲ್ಲವೇ ? ಯಾವ ಭಯಂಕರ ಕೊಲೆ, ಕೂನಿ, ಅನಾಹುತ, ದುಷ್ಟ
ತನ, ಸ್ತ್ರೀಯರಮೇಲೆ ಅತ್ಯಾಚಾರ, ಕಳವು, ಮುಂತಾದವನ್ನು ಮಾಡುವವ
ರನ್ನು ಬೇಕಾದರೂ ನೋಡಿರಿ. ಅದಕ್ಕೆ ಕಾರಣರು ಮನುಷ್ಯರು ಕೇವಲ ದೇಹ
ಭೋಗದಲ್ಲಿ ಮುಳುಗಿರಬೇಕೆಂಬ ಬಯಕೆಯವರೇ ಅಲ್ಲವೆ ?

ಮಾನವನಲ್ಲಿ ಶಾಶ್ವತವಾಗಿ ಬಾಳುವ ಆತ್ಮನಿದ್ದಾನೆ ; ಮರಣದನಂತರ
ಬಾಳುವವ ಅವನೇ ಎಂದು ಯಹೋವ, ಕ್ರಿಶ್ಚನ್, ಮುಸಲ್ಮಾನ ಧರ್ಮಗಳೂ
ಹೇಳುತ್ತವೆ. ಆದರೆ ಅದರ ಮೂಲ, ಸ್ವರೂಪ, ಗುರಿಗಳವಿಚಾರ, ಸನಾತನ
ಧರ್ಮವು ಮಾತ್ರವೇ ಬೇಕಾದ ಎಲ್ಲ ವಿವರ ಕೊಡುತ್ತದೆ. "ಏಕಮೇವಾ
ದ್ವಿತೀಯಮ್ ಬ್ರಹ್ಮ" ಎಂದರೆ ಸೃಷ್ಟಿಯಮುಂಚೆ ಕೇವಲ ಪರಬ್ರಹ್ಮ ಮಾತ್ರ
ವಿತ್ತು. ಸೃಷ್ಟಿಯ ಆಟಕ್ಕಾಗಿ ಅದು ಹಲವಾಗಲು ನಿರ್ಧರಿಸಿ, ಅದರಿಂದ
ಪ್ರಕೃತಿ, ಪರಮಾತ್ಮ, ಉಂಟಾದರು. ಪರಮಾತ್ಮನಿಂದ ಆತ್ಮರು ಹೊರಟಂತೆ
ಪ್ರಕೃತಿದೇವಿ ಅವನ್ನು ದೇಹದ ಹೊದಿಕೆಹಾಕಿ ಪ್ರತ್ಯೇಕ ಪ್ರತ್ಯೇಕ ಜೀವಾತ್ಮ
ರನ್ನಾಗಿ ಮಾಡಿತು. ಕೇವಲ ದೇವರಿಂದ ಬಂದ ಆತ್ಮರು ಚಿನ್ನದ ಗಟ್ಟಿಯ
ತುಂಡುಗಳಂತೆ ದೇವರ ಸ್ವಭಾವದವರೇ ಆಗಿರಬೇಕಷ್ಟೆ ! ದೇವರಂತೆ ಸತ್
ಅಥವಾ ಶಾಶ್ವತರು, ಚಿತ್ ಅಥವಾ ಅರಿವು ಚೈತನ್ಯರೂಪರು, ಆನಂದ ಸ್ವರೂ
ಪರೂ ಆಗಿದ್ದು ಆದರೆ ಆ ಗುಣಗಳನ್ನು ಸೃಷ್ಟಿಯ ಆಟದ ನಿಯಮವಾಗಿ
ದೇಹದ ಬಂಧನದ ಮಟ್ಟದಲ್ಲಿ ಕುಂಠಿಸಿಕೊಂಡಿರುತ್ತಾರೆ. ಪ್ರಕೃತಿದೇವಿಯು
ಅವರಿಗೆ ೮೪ ಲಕ್ಷ ಪ್ರಾಣಿಜನ್ಮಗಳನ್ನು ಕೊಟ್ಟು ಅವರೊಳಗಿರುವ ಸ್ವಂತ

ಆನಂದಸ್ವರೂಪದ ಬದಲಿಗೆ ದೇಹದ ಚಪಲತೆಗಳಿಗೆ ಹೊರಗಿನ ವಸ್ತುಗಳ ಸುಖದ ರುಚಿ ಸಂಪೂರ್ಣ ಹಿಡಿಸುತ್ತಾಳೆ. ಅನಂತರ ಜೀವಾತ್ಮರನ್ನು ಮಾನವ ರಂಗಕ್ಕೆ ಏರಿಸಿ ಸೃಷ್ಟಿಯ ಸ್ವಾರಸ್ಯ ಭಾಗದ ಆಟ ನಡೆಸುತ್ತಾಳೆ. ಮಾನವನಿಗೆ ಒಂದು ಕಡೆಯಲ್ಲಿ ದೇಹದ ಮೋಹದ ಪಾಶಗಳು ಆತ್ಮವನ್ನು ಬಂಧಿಸುತ್ತಿರುವುದು, ಮತ್ತೊಂದು ಕಡೆಯಲ್ಲಿ ಮಾನವನಿಗೆ ಬಂದಿರುವ ವಿವೇಚನಾಶಕ್ತಿ, ಬಿಡುಗಡೆಯ ಜ್ಞಾನಕೊಡುವ ಶಾಸ್ತ್ರಗಳ ಪ್ರೇರಣೆ, ಜೀವಾತ್ಮನನ್ನು ಜೀವನದ ಸೆಳೆದಾಟದಲ್ಲಿ ಮುಳುಗಿಸುವುದು.

ಮನುಷ್ಯ ಆರಂಭದಲ್ಲಿ ಬುದ್ಧಿಶಕ್ತಿಯನ್ನು ಕೇವಲವಾಗಿ ಪಾಕಶಾಸ್ತ್ರದಿಂದ ನಾಲಗೆಚಪಲತೆ ಪ್ರಾಣಿಮಟ್ಟಕ್ಕಿಂತ ಮತ್ತಷ್ಟು ಬೆಳೆಸುತ್ತ, ಗಾಯನ, ಶೃಂಗಾರ, ನೃತ್ಯಗಳಿಂದ ಕಣ್ಣಿನಕಿವಿಯ ದಾಸ್ಯಮತ್ತಷ್ಟೂ ಹೆಚ್ಚಿಸುತ್ತಲೆ ನಿರಂತರ ಕಾಮದ ಪ್ರಚೋದನೆ ಬೆಳೆಸಿ ಅದರ ಗುಲಾಮನಾಗುತ್ತ ದೇಹದ ಬಂಧನದಲ್ಲಿ ಪಶುಗಳ ಮಟ್ಟಕ್ಕೂಹೆಚ್ಚು ಪುನಃಪುನಃ ಇಳಿಯುವನು. ಅದಕ್ಕೆ ಶಿಕ್ಷೆಯಾಗಿ ಅಂಥ ಪಶು ಜನ್ಮಗಳಿಗೇ ಪುನಃಪುನಃ ದೇವರಿಂದ ನೂಕಲ್ಪಡುವುದೂ ನಡೆಯುತ್ತದೆ. ಅಥವಾ ಅವ ಶಾಸ್ತ್ರದ ಜಪ, ಪೂಜೆ, ಸಂಯಮನ, ಶುದ್ಧತೆ, ತಪಸ್ಸು ಮುಂತಾದವುಗಳ ಸಾಧನೆಯಿಂದ ಆತ್ಮಕ್ಕಿರುವ ದೇಹದ ಕಟ್ಟುಗಳನ್ನು ಬಿಡಿಸುತ್ತ ಬರುವುದು ನಡೆಯಬಹುದು. ದೇಹದ ಮೋಹ ಬೆಳೆಸಿದಂತೆ ಕೇವಲ ಸ್ವಾರ್ಥಿಯೂ ದುಷ್ಟನೂ ಆಗುತ್ತಾನಾದರೆ, ಶಾಸ್ತ್ರದಪ್ರೇರಣೆಯಿಂದ ಅವ ಆತ್ಮಗುಣಗಳಾದ ಸತ್ಯತೆ, ಅಹಿಂಸೆ, ಪ್ರೀತಿ, ಕರುಣೆ, ದಯೆ, ಉದಾರತೆ, ದಾನ, ಪರೋಪಕಾರ ಸಾಧಿಸುವಾಗ ಅವನ ಆತ್ಮನು ವಿಸ್ತರಿಸುತ್ತ ಇತರರಲ್ಲಿರುವ ಪರಮಾತ್ಮನ ಅಂಶವೇ ಆದ ಆತ್ಮರನ್ನು ಆಲಂಗಿಸುತ್ತ ಮಹಾಆತ್ಮನೇ ಆಗುತ್ತಾನೆ. ಅವ ಹೀಗೆ ದೇಹದಬಂಧನ ಕಳಚುತ್ತಬರುವುದರ ಮೂಲಕ, ಆತ್ಮದ ವಿಸ್ತಾರವಾಗುವುದರ ಮೂಲಕ, ಅವನಲ್ಲೇ ಹುದಗಿದ್ದ ಆನಂದಸ್ವರೂಪವು ಹೆಚ್ಚು ಹೆಚ್ಚು ಪ್ರಕಟವಾಗುತ್ತ ಹೋಗುತ್ತದೆ. ಕೇವಲ ಪರೋಪಕಾರದಲ್ಲಿ ಆನಂದ ಲಭಿಸುವುದೇ ಹೀಗೆ. ಹಾಗೆ ಮುಂದುವರಿದಂತೆ ಅವರ ಆತ್ಮ ವಿಸ್ತಾರವಾಗುತ್ತ, ಪರಮಾತ್ಮನಲ್ಲಿ ಐಕ್ಯರಾಗುತ್ತಾರೆ. ಮುಂಚೆ ಹೊರಟಲ್ಲಿಗೇ ಸೇರಿ ಸೃಷ್ಟಿಯ ಆಟದ ಹೊಣೆಯಿಂದ ಮುಕ್ತರಾಗುತ್ತಾರೆ.

ಆತ್ಮಾನಂದವು ನಮ್ಮೊಳಗೇ ಇರುವುದು ಪರಿಪೂರ್ಣವಾದದ್ದು ; ಎಣೆ ಇಲ್ಲದ ಹಿರಿಮೆಯದ್ದು ; ಅದೇ ನಾವು ನಿಜವಾಗಿ ಬಯಸುವ ಗುರಿ. ಆದರೆ ಅದರ ಬದಲಿಗೆ ಭ್ರಮೆಯಿಂದ ದೇಹದ ಭೋಗದ ಗುರಿ ಹಿಡಿಯುತ್ತೇವೆ.

ಅದು ತೀರಾ ಅಲ್ಪತರದ್ದು, ಕ್ಷಣಿಕ ಸುಖ ತರುವಂಥದ್ದು, ಕೆಳಕ್ಕೆ ತಳ್ಳುವ ಅಲ್ಪತೆ ಹೆಚ್ಚಿಸುವ, ಹಾನಿಯದು. ಆತ್ಮನು ಪರಮಾತ್ಮನಿಂದ ಬಂದವ ಪರಬ್ರಹ್ಮ ಸ್ವರೂಪದವ. ದೇವರನ್ನೇ ಹೊಂದಬೇಕಾದವ ಕ್ರಿಶ್ಚನ್‌ಧರ್ಮ ಕೂಡ ಹೇಳುತ್ತದೆ Ye are gods (John 10,34) ನೀವು ದೇವತೆಗಳೇ ಆಗಿರುವಿರಿ ಎಂದು, ಆದರೆ ಸೆಕ್ಯುಲರ್‌ಸರ್ಕಾರದ ಹಾನಿಯಿಂದ ಜನರು ಶಾಸ್ತ್ರ ತಾತ್ಸರಿಸುತ್ತ ಆದರ ಕೇವಲ ಪಂಚವಾರ್ಷಿಕಯೋಜನೆಗಳ ದೇಹದ ಪೂಜೆಗಳಲ್ಲಿ ಮುಳುಗಿರುವುದು ತೀರಾಶೋಚನೀಯ. ಜನರು ಅಪರಿಮಿತವಾಗಿ ಹೊಗಳುವ ವಿಜ್ಞಾನಕ್ಕೆ ದೇವರವಿಚಾರ, ಆತ್ಮದವಿಚಾರ ರವಷ್ಟೂ ತಿಳಿಯದು. ಅದರ ಅ ಹೆಚ್ಚಿನ ಯತ್ನವೆಲ್ಲ ಮಾನವನನ್ನು ಸ್ವಾರ್ಥಮಾಡುವ, ಕೆಡಿಸುವ, ದೇಹದ ತರತರದ ಹೊಸ ಭೋಗಗಳ ಸಲಕರಣೆಗಳ ನಿರ್ಮಾಣ ಮಾಡುವುದರಲ್ಲಿದೆ (ವಿಜ್ಞಾನದ ಪೂರ್ಣದೋಷ ಮತ್ತೊಂದು ಪುಸ್ತಕದಲ್ಲಿ ವಿವರಿಸಲ್ಪಟ್ಟಿದೆ.)

ಮರಣದ ಆಚೆಯ ವಿಚಾರವೇ ಬೇಡ : ಈಗ ಆದಷ್ಟು ಭೋಗಿಸುವ ಎನ್ನುವವ, ಅದರಲ್ಲೇ ಗರ್ವ ಪಡುವವ ; ತೀರಾ ಮೂಢ, ಅಂಧ. ಪ್ರಕೃತಿ ದೇವಿ ಹೆಣೆದ ದೇಹದ ಬಂಧನಗಳನ್ನೆಲ್ಲ ಬಿಡಿಸುವುದು ಅತ್ಯಂತ ಕಷ್ಟದ ಕೆಲಸ. ಅನೇಕಾನೇಕ ಜನ್ಮಗಳ ಸಾಧನೆ ಬೇಕಾದ ಸಾಹಸ. ಪರಬ್ರಹ್ಮನಿಗ ಕೇವಲ ಒಂದು ಮೆಟ್ಟು ಕೆಳಗಿನವಳಾದ ಪ್ರಕೃತಿದೇವಿ ಹೆಣೆದ ಬಂಧನಗಳನ್ನು ಬಿಡಿಸಲಿಕ್ಕೆ ಮಾನವನ ಸ್ವಂತ ಬುದ್ಧಿಶಕ್ತಿ ವ್ಯರ್ಥ. ಆದಕ್ಕೆ ದೇವರೇ ನಿರ್ಮಿಸಿದ ಶಾಸ್ತ್ರದ ಬೆಂಬಲ ಪಡೆದು, ಪ್ರತಿಜನ್ಮದ ಸಾಧನೆಯಿಂದ ಮುಂದ ಒಂದೊಂದೇ ಬಿಡುಗಡೆಯ ಮೆಟ್ಟಲುಏರುತ್ತ (ಚಿಕ್ಕಬಾಲಕ ಒಂದನೇ ಕ್ಲಾಸಿಂದ ಎಂ.ಎ.ವರೆಗೆ ಏರಿದಂತೆ) ಮುಕ್ತಿಗೆ ಏರಬೇಕು. ಈ ಪುಣ್ಯಭೂಮಿಯಲ್ಲಿ ಜನ್ಮ ಸನಾತನಧರ್ಮದ ಸಹಾಯ ಎಷ್ಟಕ್ಕೂ ವ್ಯರ್ಥಮಾಡಿಕೊಳ್ಳಕೂಡದು.

೨. ಕೆಲವು ಸಾಮಾನ್ಯ ತರದ ಪುನರ್ಜನ್ಮದ ಕತೆಗಳು

೧. ಬಾಲಕ ಸುನಿಲ್‌ದತ್ತನಿಗೆ ಹಿಂದಿನ ಜನ್ಮದ ಸ್ಮರಣೆ ಬಂದುದು

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಜನವರಿ ೪, ೧೯೬೪ರ ಸಂಚಿಕೆ ಯಲ್ಲಿ ಬೆರೈಲಿಯ ಚಿಡಮ್ಮಿಲಾಲ್ ಸೆಕ್ಸೇನರ ಮಗ ಬಾಲಕ ಸುನಿಲ್‌ದತ್ತ ಹಿಂದಿನ ಜನ್ಮದ ಸ್ಮರಣೆಯಲ್ಲಿದ್ದ ವಾರ್ತೆ ಪ್ರಕಟವಾಯಿತು. ಈ ಹುಡುಗನಿಗೆ ನಾಲ್ಕು ವರ್ಷ ಪ್ರಾಯ ಬಂದಾಗ ತಂದೆತಾಯಿಯವರು ಏನಾದರೂ ಕೆಲಸ ಹೇಳಿದರೆ "ನನಗೇಕೆ ಈ ಬಗ್ಗೆ ಉಪದ್ರ ಕೊಡುವುದು ? ನನ್ನ ಕೆಲಸದವರ

ಹತ್ತಿರ ಹೇಳಕೂಡದೇ?" ಎನ್ನುತ್ತಿದ್ದ. ತಂದೆತಾಯಿ ಇದೇನೋ ಅರ್ಥವಿಲ್ಲದ ಮಾತು, ಮಕ್ಕಳಾಟಿಕೆ ಎಂದು ಅವಕ್ಕೆ ಹೆಚ್ಚು ಲಕ್ಷ್ಯಕೊಡಲಿಲ್ಲ. ಅವನನ್ನು ಶಾಲೆಗೆ ಸೇರಿಸಬೇಕೆಂದು ಒಂದು ಶಾಲೆಗೆ ಕರಕೊಂಡು ಹೋದಾಗ ಅಲ್ಲಿ ಕಲಿಯಲು ಒಪ್ಪದೆ ಬಡೋನಿನಲ್ಲಿರುವ ತನ್ನ ಸ್ವಂತವಾದ ಶ್ರೀಕೃಷ್ಣ ಇಂಟರ್ ಮೀಡಿಯಟ್ ಕಾಲೇಜಿಗೆ ಮಾತ್ರ ಹೋದೇನು ಎಂದ. ಬಡೋನಿನಲ್ಲಿ ಅಂಥ ಕಾಲೇಜು ಇರುವುದು, ಅದನ್ನು ಸೇಟ್ ಶ್ರೀಕೃಷ್ಣ ಎಂಬುವರು ಸ್ಥಾಪಿಸಿದ್ದ ರೆಂಬುದು, ಅವರು ೧೯೫೧ರಲ್ಲಿ ಮೃತರಾದರೆಂಬುದು, ತಂದೆ ವಿಚಾರಿಸಿದಾಗ ತಿಳ ಕೊಂಡರು. ಅವರ ಕುತೂಹಲ ಕೆರಳಿ ಅವನನ್ನು ಬಡೋನಿಗೆ ಕರಕೊಂಡು ಹೋದರು. ಹುಡುಗ ಕಾಲೇಜುಕಟ್ಟಡ ಕಂಡೊಡನೆ ಯಾರೂ ಹೇಳದೆಯೂ ಗುರುತಿಸಿದ. ತನ್ನ ಹೆಸರಿದ್ದ ಹಲಗೆ ಇಲ್ಲವಲ್ಲ ಎಂದ. ನಿಜಕ್ಕೂ ಸ್ಥಾಪಕರ ಹೆಸರಿದ್ದ ಹಲಗೆಯನ್ನು ತೆಗೆದು ಹಾಕಿದ್ದರು. ಕಾಲೇಜಿಗೆ ಹೋದೊಡನೆ ಹುಡುಗ ಪ್ರಿನ್ಸಿಪಾಲರ ಕೋಣೆಗೆ ಹೋದ. ಅಲ್ಲಿ ಅಪರಿಚಿತರು ಪ್ರಿನ್ಸಿಪಾಲರ ಆಸನದಲ್ಲಿ ಕುಳಿತಿರುವುದು ಕಂಡು ತಟಸ್ಥನಾದ. ಇವಕ್ಕೆ ಕಾರಣ ಮುಂಚಿನ ಪ್ರಿನ್ಸಿಪಾಲರು ಮರಣ ಹೊಂದಿ ಮಗದೊಬ್ಬರು ನೇಮಕ ಹೊಂದಿದ್ದರು.

ಅನಂತರ ಹುಡುಗನನ್ನು ಸೇಟ್ ಶ್ರೀ ಕೃಷ್ಣರು ಸ್ಥಾಪಿಸಿದ ಎಣ್ಣೆಮಿಲ್ಲು ಇದ್ದಲ್ಲಿಗೆ ಕರಕೊಂಡು ಹೋದರು. ಅಲ್ಲಿಯೂ ಅವ ಯಜಮಾನ ಕುಳಿತು ಕೊಳ್ಳುವ ಆಸನಕ್ಕೆ ನೇರವಾಗಿ ಹೋಗಿ ಕುಳಿತು ಮುಖ್ಯ ಕೆಲಸದವ ಶಾಘಾತ ನನ್ನು ಕರೆದು ಗುರುತಿಸಿ ಅವನ ಕ್ಷೇಮ ವಿಚಾರಿಸಿದ. ಮಿಲ್ಲಲ್ಲಿದ್ದಾಗ ಅಲ್ಲಿ ಹುಡುಗನ ವರ್ತನೆ ಕೇಳಿ ನೆರೆದಿದ್ದ ಜನರಲ್ಲಿ ಸೇಟ್ ಕೃಷ್ಣರ ಅಕ್ಕ ಮತ್ತು ಭಾವನನ್ನು ಕಂಡೊಡನೆ ಗುರುತಿಸಿ ಅಕ್ಕ ಭಾವ ಎಂದು ಕರೆದು ಅವರ ಪಾದ ಮುಟ್ಟಿ ನಮಸ್ಕರಿಸಿದ.

ಅನಂತರ ಹುಡುಗ ಮಿಲ್ಲಿನ ಹಿತ್ತಲಲ್ಲಿ ಸೇಟ್ ಕೃಷ್ಣರು ವಾಸಿಸುತ್ತಿದ್ದ ಮನೆಗೆ ಹೋಗಿ ಅವರ ಪತ್ನಿ ಶಕುಂತಳಾದೇವಿಯನ್ನು ಕಾಣದೆ, ಅವಳೆಲ್ಲಿ ಎಂದು ವಿಚಾರಿಸಿದ. ಪತಿಯಮರಣದ ಅನಂತರ ಅವಳು ತನ್ನ ದತ್ತಪುತ್ರ ನೊಡನೆ ಬಿರಾಂಪುರ ಮೊಹಲ್ಲದಲ್ಲಿದ್ದಾಳೆಂದು ತಿಳಿದಾಗ ಎಲ್ಲರೂ ಅಲ್ಲಿಗೆ ಹೊರ ಟರು. ದಾರಿಯಲ್ಲಿದ್ದ ಗಾಂಧಿಪಾರ್ಕ್ ಕಂಡು ಅದರ ಭವ್ಯವಾದ ಗೇಟನ್ನು ತಾನು ೧೯೪೮ರಲ್ಲಿ ಕಟ್ಟಿಸಿದ್ದು ಎಂದ. ಅದನ್ನು ಶ್ರೀಕೃಷ್ಣರು ಕಟ್ಟಿಸಿದ್ದು ನಿಜ ವಾಗಿತ್ತು. ಆಮೇಲೆ ಸುನಿಲನನ್ನು ಶ್ರೀಕೃಷ್ಣರ ಪತ್ನಿ ಇದ್ದ ಮನೆಗೆ ಕರಕೊಂಡು ಹೋದರು. ಅವಳೂ ಹುಡುಗನೂ ಒಬ್ಬರ ಮುಖ ಒಬ್ಬರು ನೋಡುತ್ತ

ನಿಂತರು. ಇಬ್ಬರ ಕಣ್ಣಲ್ಲಿಯೂ ನೀರು ಹರಿಯುತ್ತಿತ್ತು. ಹುಡುಗ ತಾನು ಅವಳಿಗೆ ಕೊಟ್ಟಿದ್ದ ಕುಲದೇವರ ವಿಗ್ರಹದ ನೆನಪು ಮಾಡಿದ. ಹುಡುಗ ೧೯೪೭-೪೮ರಲ್ಲಿ ಬಡೋನಿನ ಜಿಲ್ಲಾ ಕಲೆಕ್ಟರರಾಗಿದ್ದ ಜೆ.ಡಿ. ಶುಕ್ಲ ಎಂಬುವ ರನ್ನು ಗುಂಪು ಚಿತ್ರದಲ್ಲಿ ಗುರುತಿಸಿ ತನಗೆ ಅವರ ಪರಿಚಯವಿತ್ತೆಂದ.

ಸುನಿಲ್‌ದತ್ತನ ಪಿತೃಗಳಿಗೆ ಈ ಎಲ್ಲ ವಿಚಾರ ಕಂಡು ಅವನು ಸೇಟ್ ಶ್ರೀಕೃಷ್ಣರೇ ಪುನರ್ಜನ್ಮ ಪಡೆದವ ಎಂಬ ಬಗ್ಗೆ ಏನೂ ಸಂಶಯ ಉಳಿಯಲಿಲ್ಲ. ಆದರೆ ತಂದೆ ಇದರ ಪರಿಣಾಮವೇನು ಎಂಬ ಹೆದರಿಕೆ ಹುಟ್ಟಿ ಹುಡುಗನ ಭಾವಚಿತ್ರ ಕೂಡ ತೆಗೆಯಲು ಬಿಡದೆ ಬೇಗ ಬೆರೈಲಿಗೆ ಕರಕೊಂಡುಹೋದರು.

೨. ಪರಮಾನಂದನು ಪ್ರಮೋದನಾಗಿ ಜನ್ಮ ಪಡೆದ

ಈ ಕತೆಯು ಸವಿವರವಾಗಿ ಅಮೃತ ಬಜಾರ್ ಪತ್ರಿಕೆಯಲ್ಲಿ ಅದರ ಮೊರದಾಬಾದಿನ ಬಾತ್ಮೀದಾರನ ಆಗಸ್ಟ್ ತಾ॥ ೨೩, ೧೯೪೯ರ ವರದಿಯಾಗಿ ಪ್ರಕಟವಾಗಿತ್ತು. ಅದನ್ನು ಋಷಿಕೇಶದ ಸ್ವಾಮಿ ಶಿವಾನಂದರು ಅವರ What Becomes of the Soul after Death ಪುಸ್ತಕದಲ್ಲಿ ಸಂಗ್ರಹಿಸಿದ್ದರು. ಆಚಾರ್ಯ ಬುದ್ಧರಕ್ಕಿಟಾ ತೇರಾರವರು ಪ್ರಮೋದನ ಬಂಧುಗಳ ಮತ್ತು ಪರಮಾನಂದನ ಬಂಧುಗಳೊಡನೆ ಪತ್ರವ್ಯವಹಾರ ನಡೆಸಿ ಅವರ ಸ್ವಯಂ ಸಹಾಯವೆಂಬ ಮಾಸ ಪತ್ರಿಕೆಯಲ್ಲಿ ಫೆಬ್ರುವರಿ ೧೯೬೦ರಲ್ಲಿ ಪ್ರಕಟಿಸಿದ್ದರು. ಎರಡು ವಿವರಣೆಗಳಲ್ಲಿ ವ್ಯತ್ಯಾಸವಿಲ್ಲ. ಇಲ್ಲಿ ಅವುಗಳಸಾರಾಂಶ ಕೊಡಲಾಗಿದೆ.

ಉತ್ತರ ಪ್ರದೇಶದ ಬಿಸೌಲಿಯ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಬಂಕೇಲಾಲ್ ಶರ್ಮ (ಶಾಸ್ತ್ರಿ ಮತ್ತು M.A.) ಅವರಿಗೆ ೧೫ ಮಾರ್ಚಿ ೧೯೪೪ರಲ್ಲಿ ಒಬ್ಬ ಮಗ ಜನಿಸಿದ. ಅವನಿಗೆ ನಾಮಕರಣ ಮಾಡುವಾಗ ಪುರೋಹಿತರು ಅವನ ಜನ್ಮಕುಂಡಲಿಯಂತೆ ಪರಮಾನಂದ ಎಂಬ ಹೆಸರು ಬರುತ್ತದೆ ಎಂದರು. ಆದರೆ ತಂದೆ ಪ್ರಮೋದನೆಂದೇ ಹೆಸರಿಡಲು ಹೇಳಿದರು (ಹೀಗೆ ಕೆಲವುಜೀವಾತ್ಮರಿಗೆ ಹಿಂದಿನಜನ್ಮದ ಹೆಸರುಅಂಟಿಕೊಂಡು ಬಂದ ಬೇರೆ ದೃಷ್ಟಾಂತಗಳೂ ಇವೆ). ಈ ಮಗು ಬೆಳೆದಂತೆ ಬಿಸ್ಕೇಟಲ್ಲಿ ತುಂಬಆಸೆ ತೋರಿಸಿತು. ನಾಲ್ಕುವರ್ಷದವನಾದ ಮೇಲೆ ತನ್ನದೇ ಬಿಸ್ಕೇಟು ಅಂಗಡಿ ಮೊರದಾಬಾದಿನಲ್ಲಿದೆ, ಅದರ ಹೆಸರು ಮೋಹನ್‌ಬ್ರದರ್ಸ್ ; ಆ ಊರಲ್ಲಿ ತನ್ನ ಹೆಂಡತಿ, ನಾಲ್ಕು ಗಂಡುಮಕ್ಕಳು, ಒಬ್ಬಳುಮಗಳು ಇದ್ದಾರೆ. ಅಡಿಗೆಗೆ ತನ್ನ ಹೆಂಡತಿಯನ್ನೇಕೆ ಕರೆಯುವುದಿಲ್ಲ, ಎನ್ನುತ್ತಿದ್ದ. ಬಿಸೌಲಿಯ ಬಿಸ್ಕೇಟು ಅಂಗಡಿ

ಗಳನ್ನು ಕಂಡಾಗ, ತನ್ನದು ಇವಕ್ಕಿಂತ ದೊಡ್ಡದು, ಮೊರದಾಬಾದಿಗೆ ತನ್ನನ್ನು ಕರಕೊಂಡು ಹೋಗಿರಿ ಎಂದು ಹಟಮಾಡಲಾರಂಭಿಸಿದ.

ತಂದೆ ವಿಚಾರಿಸಿದಾಗ ಮೊರದಾಬಾದಿನಲ್ಲಿ ಮೋಹನ್ ಬ್ರದರ್ಸ್ ಎಂಬವರ ದೊಡ್ಡ ಬಿಸ್ಕೇಟು ಅಂಗಡಿ ಇರುವುದು ತಿಳಿಯಿತು. ಆ ಅಂಗಡಿಯವರಿಗೂ ಈ ಹುಡುಗನ ಹೇಳಿಕೆಗಳು ತಿಳಿದು ಬಂದುವು. ಅವರು ನಾಲ್ಕು ಜನ ಅಣ್ಣತಮ್ಮಂದಿರು, ಒಬ್ಬಳು ತಂಗಿ. ಅವರ ಪೈಕಿ ಪರಮಾನಂದ ಎಂಬವ ೩೯ನೆ ವಯಸ್ಸಲ್ಲಿ ಕರುಳಿನ ಪುಚ್ಛದ ರೋಗದಿಂದ (appendicitis) ಮೃತನಾಗಿದ್ದ. ಅವನಿಗೆ ನಾಲ್ಕು ಗಂಡು ಮಕ್ಕಳೂ ಒಬ್ಬಳು ಮಗಳೂ ಇದ್ದುದು ನಿಜವೇ. ಅವನು ಸತ್ತ ೯ ತಿಂಗಳು ೬ ದಿನಗಳ ನಂತರ ಪ್ರಮೋದ ಜನಿಸಿದ್ದು. ಮೋಹನ್ ಸಹೋದರರು ತುಂಬಾ ಕುತೂಹಲ ತಾಳಿ ಅವರಲ್ಲಿಬ್ಬರು ಬಂಕೇಲಾಲ್ ಶರ್ಮಾರಲ್ಲಿಗೆ ಬಂದರು. ಆದರೆ ಪ್ರಮೋದ ಆಗ ಅವನ ಅಜ್ಜನ ಮನೆಗೆ ಹೋಗಿದ್ದ. ಅಲ್ಲಿ ಸಿಕ್ಕಿದ ವಿವರಗಳಿಂದ ಅವನೇ ಪರಮಾನಂದನಾಗಿರಬಹುದೆಂಬ ಭಾವನೆ ಬಲವಾಗಿ, ಬಂಕೇಲಾಲರನ್ನು ಮಗನೊಡನೆ ಆಗಸ್ಟ ೧೫, ೧೯೪೯ ರಂದು ತಮ್ಮ ಮನೆಗೆ ಕರೆಸಿಕೊಂಡರು.

ಶರ್ಮರಾಗಲಿ ಪ್ರಮೋದನಾಗಲಿ ಅಷ್ಟರವರೆಗೆ ಮೊರದಾಬಾದಿಗೆ ಹೋದವರಲ್ಲ. ಅವರನ್ನು ಸಂಧಿಸಲು ರೈಲ್ವೇ ನಿಲ್ದಾಣಕ್ಕೆ ಬಂದಿದ್ದ ಕರಮ್‌ಚಂದರನ್ನು ಕಂಡೊಡನೆ ಪ್ರಮೋದ ಅವರ ಕಾಲು ಮುಟ್ಟಿ, ಅಪ್ಪಿಕೊಂಡ. "ಅದ್ಯಾರು ?" ಎಂದು ಕೇಳಿದ್ದಕ್ಕೆ "ನನ್ನ ದೊಡ್ಡ ಅಣ್ಣ" ಎಂದ. ಎಲ್ಲರೂ ಟಾಂಗಾದಲ್ಲಿ ಮನೆಯ ಕಡೆಗೆ ಹೋಗುತ್ತಿದ್ದಾಗ ಹುಡುಗ ಟೌನ್ ಹಾಲ್ ಎಂದು ಆ ಕಟ್ಟಡ ಗುರುತಿಸಿ ಉದ್ಗರಿಸಿದ. ಅದಕ್ಕಿಂತ ಮುಂಚೆ ಅವ ಆ ಆಂಗ್ಲ ಶಬ್ದ ಕೇಳಿದವನಲ್ಲ. ಟಾಂಗವು ಮೋಹನ್ ಬ್ರದರ್ಸ್ ಅಂಗಡಿ ಮತ್ತು ಮನೆ ಹತ್ತಿರ ಬಂದಾಗ ಪ್ರಮೋದ ಮನೆ ಬಂತು ಎನ್ನುತ್ತ ಟಾಂಗಾ ನಿಲ್ಲಿಸಲು ಹೇಳಿದ. ಮನೆ ಗುರುತಿಸಿ ತನ್ನ ಹಿರೇಮಗನನ್ನು ಬಿಟ್ಟು ಉಳಿದ ಮಕ್ಕಳನ್ನು, ತಂಗಿಯನ್ನು, ಅಣ್ಣಂದಿರನ್ನು ಎಲ್ಲ ಗುರುತಿಸಿದ. ಪತ್ನಿಯನ್ನು ಗುರುತಿಸಿ, ವಿಧವೆಯಾಗಿದ್ದುದರಿಂದ ಹಣೆಯಲ್ಲಿ ಕುಂಕುಮವಿಲ್ಲದ ಅವಳನ್ನು ಕುಂಕುಮ ಏಕೆ ಹಾಕಿಕೊಳ್ಳಲಿಲ್ಲ ಎಂದು ಕೇಳಿದ. ತಾವು ಅಣ್ಣತಮ್ಮಂದಿರು ಒಟ್ಟು ಕುಳಿತು ಫಲಾಹಾರ ಮಾಡುತ್ತಿದ್ದ ಕ್ರಮ ಅವ ನೆನಪಿಗೆ ತಂದಾಗ ಅವರಿಗೆಲ್ಲ ಕಣ್ಣೀರು ಬಂತು. ತಾನು ಪ್ರಾರ್ಥನೆ ನಡೆಸುತ್ತಿದ್ದ ಕೋಣೆ ಹೊಗ್ಗುವಾಗ ನಮಸ್ಕಾರ ಮಾಡಿದ. ಪ್ರಾರ್ಥನೆಗೆ ಕುಳಿತುಕೊಳ್ಳುತ್ತಿದ್ದ

ಜಾಗ ತೋರಿಸಿದ. ಅವ ಅಲ್ಲಿ ಗುರುತಿಸದಿದ್ದುದು ಅವನ ಹಿರೇ ಮಗನನ್ನು ಮಾತ್ರ. ತಂದೆ ಸಾಯುವಾಗ ೧೪ ವರ್ಷದವನಾಗಿದ್ದ ಅವ ೧೯ ವರ್ಷ ವಾಗಿ ಉದ್ದವಾಗಿ ಬೆಳೆದು ಬದಲಾವಣೆ ಹೊಂದಿದ್ದ.

ಮೋಹನ್ ಬ್ರದರ್ಸ್ ಅಂಗಡಿಗೆ ಹೋದಾಗ ಅಲ್ಲಿ ಸೋಡಾ ತಯಾರಿಸುವ ಯಂತ್ರ ಕಂಡು ಅದನ್ನು ಉಪಯೋಗಿಸುವ ಕ್ರಮ ತೋರಿಸಿದ. ಪ್ರಮೋದ ಅಂಥಹದನ್ನು ಮುಂಚೆ ಕಂಡವನೇ ಅಲ್ಲ. ಅಂಗಡಿಯ ಬಿಸ್ಕೇಟು ಮಾಡುವ ಭಾಗಕ್ಕೆ ಬಂದಾಗ ಇದು ತಮ್ಮ ಬೇಕರಿ ಎಂದ. ಆ ಆಂಗ್ಲ ಶಬ್ದವನ್ನೂ ಅವ ಮುಂಚೆ ಕೇಳಿದವನಲ್ಲ. ಮೋಹನ್ ಬ್ರದರ್ಸ್ ವಿಕ್ಟರೀ ಹೋಟೆಲ್ ಕಟ್ಟಡದತ್ತ ಹೋದಾಗ ಅದನ್ನು ಗುರುತಿಸಿದ. ಅದರ ಎರಡನೆ ಉಪ್ಪರಿಗೆ ಹೊಸದಾಗಿ ಕಟ್ಟಿಸಿದ್ದು ಕಂಡು "ಇದು ಮುಂಚೆ ಇರಲಿ ವಲ್ಲ! ಯಾವಾಗ ಕಟ್ಟಿಸಿದ್ದು ?" ಎಂದು ಕೇಳಿದ.

ಮೊರದಾಬಾದಿನ ಅತಿ ಪ್ರಮುಖ ವ್ಯಕ್ತಿಗಳಲ್ಲೊಬ್ಬರಾದ ಸಾಹು ನಂದನ್‌ಲಾಲ್ ಸರನ್ ಎಂಬುವರು ಇದನ್ನೆಲ್ಲ ಕಂಡವರು ಪ್ರಮೋದನೊಬ್ಬ ನನ್ನೇ ತಮ್ಮ ಕಾರಲ್ಲಿ ತಮ್ಮ ದೊಡ್ಡ ಸ್ವಂತ ಕಟ್ಟಡಕ್ಕೆ ಕರಕೊಂಡುಹೋದರು ಪರಮಾನಂದ ಅದರ ಒಂದು ಕೋಣೆಯಲ್ಲಿ ಒಮ್ಮೆ ಅಂಗಡಿ ಇಟ್ಟಿದ್ದ ಹುಡುಗ ನೇರವಾಗಿ ಅಲ್ಲಿಗೆ ಹೋದ. ತಾನು ಮುಂಚೆ ಅಂಗಡಿ ಇಟ್ಟ ವಿಚಾರ ಹೇಳಿದ. ಅಲ್ಲಿಂದ ಹಿಂದಕ್ಕೆ ಬೇರೆ ದಾರಿಯಿಂದ ಬರುವಾಗ ಅಲಹಬಾದ್ ಬ್ಯಾಂಕ್, ಡಿಸ್ಟ್ರಿಕ್ಟ್ ಜೈಲ್, ಸೆಂಟ್ರಲ್ ಪೋಸ್ಟಾಫೀಸುಗಳನ್ನು ಗುರುತಿಸಿದ

ಪ್ರಮೋದ ಮೊರದಾಬಾದಿನಲ್ಲಿ ಅನೇಕ ಇತರ ಜನರನ್ನೂ ಗುರುತಿಸಿ ಅವರ ಪ್ರಶ್ನೆಗಳಿಗೆ ಕೂಡಲೆ ಸರಿಯಾದ ಉತ್ತರ ಕೊಡುತ್ತಿದ್ದುದು ಎಲ್ಲರನ್ನೂ ಆಶ್ಚರ್ಯ ಪಡಿಸಿತು. ಇದನ್ನೆಲ್ಲ ಕಂಡ ಮೇಲೆ ಅವರೆಲ್ಲರಿಗೆ ಪರಮಾನಂದನೆ ಈಗ ಪ್ರಮೋದನಾಗಿ ಜನ್ಮ ಪಡೆದವ ಎಂಬ ಬಗ್ಗೆ ಒಂದಿಷ್ಟೂ ಸಂಶಯ ಉಳಿಯಲಿಲ್ಲ. ಗುಂಪಲ್ಲಿದ್ದ ಪತ್ರಿಕೆಯ ಬಾತ್ಮಿದಾರರೂ ಅದೇ ನಿಜವೆಂಬ ತೀರ್ಮಾನಕ್ಕೆ ಬಂದು ಹಾಗೆಯೇ ಬಾತ್ಮಿ ಕಳುಹಿಸಿದರು.

ಪ್ರಮೋದ ಅವನ ತಂದೆಯೊಡನೆ ಹಿಂದೆ ಹೋಗಲು ಎಷ್ಟಕ್ಕೂ ಒಪ್ಪದ್ದರಿಂದ ಬಂಕೇಲಾಲರು ರಾತ್ರಿ ಅಲ್ಲಿ ಉಳಕೊಂಡು ಬೆಳಗಿನ ಜಾವದಲ್ಲಿ ನಿದ್ದೆಯಲ್ಲಿದ್ದ ಹುಡುಗನನ್ನು ಎಚ್ಚರಿಸದೆ ಹಿಂದೆ ಕರಕೊಂಡು ಹೋದರು ಪ್ರಮೋದನಿಗೆ ತಾನು ಪರಮಾನಂದನೆಂಬ ಭಾವನೆಯೇ ಸಾಮಾನ್ಯವಾಗಿ ಇದ್ದಿತ್ತಾದರೂ, ಪರಮಾನಂದನ ಮರಣ ಕಾಲದ ಎರಡು ಘಟನೆಗಳನ್ನು

ಪ್ರಮೋದ ಹೇಳಿದ್ದುಂಟು. ಒಮ್ಮೆ ಹುಡುಗ ರಾತ್ರಿ ತಡಮಾಡಿ ಮನೆಗೆ ಬಂದಾಗ ತಂದೆ ಎಲ್ಲಿಂದ ಅಷ್ಟು ಹೊತ್ತಿನ ಮೇಲೆ ಬಂದುದು ಎಂದು ಕೇಳಿದ್ದಕ್ಕೆ "ಸಹರಾನ ಪುರದಿಂದ; ಅಲ್ಲಿ ನನ್ನ ಹೊಟ್ಟೆಯೆಲ್ಲ ವದ್ದೆ ಮಾಡಿದರು" ಎಂದಿದ್ದ. ಪರಮಾನಂದ ಸತ್ತದ್ದು ಬಿಸೌಲಿಯಿಂದ ಸುಮಾರು ೧೪೦ ಮೈಲು ದೂರವಿದ್ದ ಸಹರಾನ್‌ಪುರದಲ್ಲಿ. ಅವನ ಹೊಟ್ಟೆ ಕಾಯಿಲೆಗೆ ಅಲ್ಲಿ ಹೊಟ್ಟೆ ತೊಳೆದಿದ್ದರು. ಹುಡುಗನಿಗೆ ಅಷ್ಟರವರೆಗೆ ಯಾರೂ ಸಹರಾನಪುರದ ಹೆಸರು ಹೇಳಿರಲಿಲ್ಲ. ಮತ್ತೊಮ್ಮೆ ಅವನನ್ನು ಮೊರದಾಬಾದಿನಿಂದ ಹಿಂದೆ ತರುತ್ತಿದ್ದಾಗ ಅವನ ರೈಲು ಬಂಡಿಯ ಬಹಳ ಸಮೀಪವಾಗಿ ಒಂದು ರೈಲು ಇಂಜಿನ್ನು ತುಂಬಾ ಹೊಗೆ ಹಾರಿಸುತ್ತ ಓಡುತ್ತಿರುವುದು ಕಂಡು ಅವ ಭಯದಿಂದ ನಡುಗಿದ್ದ. "ಅಂಥ ಹೊಗೆಯೇ ನನ್ನನ್ನು ಹಾರಿಸಿಕೊಂಡು ಹೋದದ್ದು" ಎಂದಿದ್ದ. ಮರಣಕಾಲದಲ್ಲಿ ಅವನ ಜೀವಾತ್ಮ ದೇಹಬಿಟ್ಟು ಹೊರಟ ಘಟನೆಗೆ ಅದರಲ್ಲಿ ಹೊಂದಿಕೆ ಕಂಡಿರಬೇಕು.

೩. ಸ್ವರ್ಣಲತಳ ಕತೆ

ಸ್ವರ್ಣಲತಳು ಮಧ್ಯಪ್ರದೇಶದ ಛತ್ತಾರ್‌ಪುರದಲ್ಲಿ ಶಾಲಾಇನ್‌ಸ್ಪೆಕ್ಟರರ ಆಫೀಸಿನ ಸೂಪರಿಂಟೆಂಡೆಂಟರಾದ ಮನೋಹರಲಾಲ್ ಮಿಶ್ರರ ಮಗಳು. ೧೯೫೩ರಲ್ಲಿ ಮಿಶ್ರರು ನಾಲ್ಕು ವರ್ಷ ಪ್ರಾಯದ ಸ್ವರ್ಣಲತಳೊಡನೆ ಛತ್ತಾರ್‌ಪುರದಿಂದ ಜಬ್ಬಲಪುರಕ್ಕೆ ಹೋಗುತ್ತಿದ್ದವರು ಕಟ್ಣಿಯಲ್ಲಿ ಸ್ವಲ್ಪಕಾಲ ಕಾದಿರಬೇಕಾಗಿತ್ತು. ಆಗ ಅವರು ಚಾಹ ಕುಡಿಯಲಿಕ್ಕೆಂದು ಅದರ ಅಂಗಡಿಗೆ ಹೋದಾಗ ಮಗಳು "ಇಲ್ಲಿ ನನ್ನ ತಂದೆಯ ಮನೆ ಇದೆ; ಅಲ್ಲಿಗೆ ಹೋಗಿ ಚಹ ಕುಡಿಯುವ" ಎಂದಳು. ಮಿಶ್ರರಿಗೆ ಈ ಮಾತು ಹುಚ್ಚಾಗಿ ತೋರಿತು. ಆದರೆ ಹುಡುಗಿ ಮನೆಗೆ ಹಿಂದೆ ಹೋದ ಮೇಲೂ ತನ್ನ ಮನೆ ಕಟ್ಣಿಯಲ್ಲೇ ಎಂದು ಹೇಳುತ್ತಿದ್ದುದರಿಂದ ತಂದೆ ಅವಳಿಗೆ ಬುದ್ಧಿ ಸರಿ ಇಲ್ಲವೆಂದು ಔಷಧ ಮಾಡಿಸಿದರು; ಏನೂ ಪ್ರಯೋಜನವಾಗಲಿಲ್ಲ. ಊರ ಜನರು ಮಿಶ್ರರ ಮಗಳಿಗೆ ಪೂರ್ವಜನ್ಮದ ಸ್ಮರಣೆ ಬಂದಿದೆಯೆಂದು ಮಾತಾಡಲಾರಂಭಿಸಿದರು.

೧೯೫೮ರಲ್ಲಿ ಸಾಗರ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ. ಡಿ. ಪಿ. ಮಿಶ್ರರು ಛತ್ತಾರಪುರಕ್ಕೆ ಬಂದಾಗ ಸ್ವರ್ಣಲತಳ ವಿಚಾರ ಗೊತ್ತಾಗಿ ಮಿಶ್ರರಿಗೆ ಮಗಳೊಡನೆ ಬರಲು ಹೇಳಿ ಕಳುಹಿಸಿದರು. ಸ್ವರ್ಣಲತಳು ತನ್ನ ತಂದೆಯ ಹೆಸರು ಪಾಠಕ ಎಂದೂ, ಅವರು ಕಟ್ಣಿಯುವರೆಂದೂ, ಪಾಠಕ ಕುಟುಂಬದ

ಕೆಲವು ಇತರ ವಿವರಗಳನ್ನೂ ತಿಳಿಸಿದಳು. ಉಪಕುಲಪತಿಯವರು ಕಟ್ಣಿಯ ಪಾಠಕರನ್ನು ಬಲ್ಲವರಾಗಿದ್ದು ಸ್ವರ್ಣಲತಳ ಹೇಳಿಕೆ ನಿಜವಿದ್ದುದು ಕಂಡ ರಾಜಸ್ಥಾನದ ಪರಾಮಾನಸ ಶಾಸ್ತ್ರದ ಪ್ರಾಧ್ಯಾಪಕ ಶ್ರೀ ಬೆನರ್ಜಿಯವರೊಡನ ಈ ಪುನರ್ಜನ್ಮದ ವಿಚಾರ ಪರಿಶೋಧಿಸಲು ಸೂಚಿಸಿದರು. ಶ್ರೀ ಬೆನರ್ಜಿ ಯವರು ಸ್ವರ್ಣಲತಳ ಹೇಳಿಕೆಗಳನ್ನು ರಿಕಾರ್ಡು ಮಾಡಿ, ಕಟ್ಣಿಗೆ ಹೋಗಿ ಪಾಠಕರಿಗೆ ತಿಳಿಸಿ ಅವರ ಹೇಳಿಕೆಗಳನ್ನು ರಿಕಾರ್ಡು ಮಾಡಿಕೊಂಡರು. ಅವೆಲ್ಲ ತುಂಬಾ ಹೋಲಿಕೆಯಿತ್ತು. ಅವರು ಪಾಠಕರೊಡನೆ ಒಮ್ಮೆ ಛತ್ತಾರ ಪುರಕ್ಕೆ ಹೋಗಿ ಸ್ವರ್ಣಲತಳನ್ನು ಕಾಣಲು ಸೂಚಿಸಿದರು.

ಪಾಠಕ ಕುಟುಂಬದ ಹಿರಿಯರಾದ ಹರಿಪ್ರಸಾದರು ಛತ್ತಾರ್‌ಪುರಕ್ಕೆ ಹೋಗಿ, ತನ್ನ ಪರಿಚಯ ತಿಳಿಸದೆ ಸ್ವರ್ಣಲತಳನ್ನು ಕಾಣಲು ಬಯಸುತ್ತೇನೆ ಎಂದರು. ಹುಡುಗಿ ಅವರನ್ನು ಬಹಳ ಲಕ್ಷ್ಯಕೊಟ್ಟು ನೋಡಿದಳು. "ನನ್ನ ಗುರುತು ಸಿಕ್ಕಿತೇ?" ಎಂದು ಕೇಳಿದಾಗ "ಹೌದು, ನೀನು ಹರಿಲಾಲ್ ಪಾಠಕ್. ಈಗ ತುಂಬಾವಯಸ್ಸಾಗಿದೆ; ಕಟ್ಣಿಯವ" ಎಂದಳು. ಹರಿಪ್ರಸಾದ್ ಎನ್ನುವುದರ ಬದಲಾಗಿ ಹರಿಲಾಲ್ ಎಂದು ತಪ್ಪಾಗಿ ಹೇಳಿದ್ದರೂ ಅವರಿಗ ಆವಳ ಎಲ್ಲ ಮಾತಿಂದ ತನ್ನ ಹಿರಿಯ ಅಕ್ಕ ; ೧೯೩೯ರಲ್ಲಿ ತೀರಿಹೋದವಳು ಎಂಬುದು ಖಚಿತವಾಯಿತು. ಅವರು ಮಿಶ್ರರನ್ನು ತಮ್ಮ ಮನೆಗೆ ಆಮಂತ್ರಿಸಿ ದರು. ಅವರು ಅಲ್ಲಿ ಹೋದಾಗ ಮಗಳು ಕಾರ್ ಡ್ರೈವರನಿಗೆ ದಾರಿ ಹೇಳುತ್ತ ಹೋದಳು. ಕಾರು ಪಾಠಕರ ಮನೆ ಎದುರಲ್ಲಿ ನಿಂತಾಗ ತಬ್ಬಿಬ್ಬಾದರೂ ಮನೆ ಹೊಕ್ಕಮೇಲೆ "ಹೌದು, ಇದೇ ಮನೆ" ಎಂದಳು. ಇದಕ್ಕೆ ಕಾರಣ ಮನೆಯ ಮುಂಭಾಗ ಮಾತ್ರ ಅನಂತರ ಬಂಗ್ಲೆಯ ರೂಪಕ್ಕೆ ಬದಲಾಯಿಸಲ್ಪಟ್ಟಿತ್ತು.

ಮನೆಯವರೆಲ್ಲರೂ ಅವಳೆದುರು ಬಂದರು. ಅವಳು ಪೂರ್ವಜನ್ಮದ ಎಲ್ಲ ತಮ್ಮಂದಿರನ್ನೂ ಗುರುತಿಸಿ ಹಿರಿಯ ಅಕ್ಕನಾದ ತಾನು ಅವರನ್ನು ಪ್ರೀತಿಯಿಂದ ಕರೆಯುತ್ತಿದ್ದ ಹೆಸರಲ್ಲೇ ಕರೆದಳು. ಅವರ ನಿಜವಾದ ಹೆಸರು ಅವಳಿಗೆ ಮರೆತುಹೋಗಿತ್ತು. ಈ ಎಲ್ಲ ವಿಚಾರ ಕೇಳಿ ಅಲ್ಲಿ ಬಹಳ ಜನರು ಕೂಡಿದರು. ಅವರಲ್ಲಿ ಪಾಠಕರ ಮನೆಗೆ ಆಗಾಗ ಬಂದು ಹೋಗುತ್ತಿದ್ದ ಮುದುಕರನ್ನು ಅವಳು ಗುರುತಿಸಿದಳು. ಮನೆಯ ಹಳೆಯ ಕೆಲಸದವಳೊಬ್ಬಳನ್ನೂ ಮನೆಯ ಹತ್ತಿರದ ಅಂಗಡಿಯವನನ್ನೂ ಗುರುತಿಸಿ ದಳು. ಹುಡುಗಿಯ ಪೂರ್ವಜನ್ಮದ ಪತಿ ಶ್ರೀ ಚಿಂತಾಮಣಿ ಪಾಂಡೆಯೆಂಬ ವರೂ ಬಂದಾಗ ನಾಚಿ ಮುಖ ತಗ್ಗಿಸಿದಳು. ಸಂಪ್ರದಾಯದಂತೆ ಗಂಡನ

ಹೆಸರು ಹೇಳದಿದ್ದರೂ ಪತಿಯನ್ನು ಗುರುತಿಸಿದ್ದು ಜನರಿಗೆ ತಿಳಿಯಿತು. ಶ್ರೀ ಚಿಂತಾಮಣಿಯವರು ಸ್ವರ್ಣಲತಳ ತಂದೆಯ ಅನುಮತಿಯೊಡನೆ ಅವಳೊಡನೆ ಏಕಾಂತದಲ್ಲಿ ಮಾತನಾಡಿ, ತಮ್ಮೊಡನೆ ನಿಂತಿದ್ದ ಮಗನೊಡನೆ ಇವಳು ನಿನ್ನ ತಾಯಿಯಾಗಿದ್ದವಳು ಎಂದರು. ಹುಡುಗ ತನ್ನ ಹೆಸರನ್ನು ಸುಳ್ಳಾಗಿ ಹೇಳಿದಾಗ ಅವಳು ಅದನ್ನು ಸರಿಪಡಿಸುತ್ತ "ತಾಯಿಯ ಹತ್ತಿರ ಸುಳ್ಳು ಹೇಳುತ್ತೀಯಾ ?" ಎಂದು ಮೂದಲಿಸಿದಳು. ಸ್ವರ್ಣಲತಳು ತನ್ನ ಪೂರ್ವ ಜನ್ಮದ ಮನೆಗೆ ಬಂದದ್ದು ರಕ್ಷಾ ಬಂಧನದ ದಿನ. ಪಾಠಕ ಸಹೋದರರಿಗೆಲ್ಲ ಅವಳು ಕೈಗೆ ರಕ್ಷಾ ಕಟ್ಟಿದಳು. ಅವಳನ್ನು ಅವರೆಲ್ಲ ತಮ್ಮ ಅಕ್ಕನೆಂದೇ ಭಾವಿಸುತ್ತಿದ್ದಾರೆ.

ಸ್ವರ್ಣಲತಳು ೧೯೩೯ರಲ್ಲಿ ಮರಣ ಹೊಂದಿದುದು ಹೃದಯ ರೋಗ ದಿಂದ ಎಂಬುದು Blitz ಪತ್ರಿಕೆಯ ವರದಿಯಲ್ಲಿತ್ತು. ಅವಳು ಸ್ವರ್ಣಲತಳಾಗಿ ಜನ್ಮ ಹೊಂದಿದ್ದು ೧೯೪೮ರಲ್ಲಿ. ಈ ನಡುವೆ ಅವಳು ತಾನು ೯ ವರ್ಷದ ಹುಡುಗಿಯಾಗಿದ್ದಾಗ ಮೋಟರ್ ಕಾರಡಿ ಬಿದ್ದು ಸತ್ತ ಸ್ಮರಣೆಯೂ ಬರುತ್ತಿತ್ತು. ಒಂದು ಅನ್ಯಭಾಷೆಯ ಪದ ನೆನಪಿತ್ತು. ಅದು ಯಾವ ಭಾಷೆಯದು ಎಂದು ಅವಳು ಹೇಳಲಾರದಾದಳು. ಶ್ರೀ ಬೆನರ್ಜಿಯವರು ಅದನ್ನು ಟೇಪ್ ರಿಕಾರ್ಡ್ ಮಾಡಿಕೊಂಡು ವಿಚಾರಿಸಿ ಅಸ್ಸಾಮೀ ಭಾಷೆಯದೆಂದು ಕಂಡು ಕೊಂಡರು. ಅವಳಿಗೆ ತಾನು ಸಿಲ್ಲರ್ (ಅಸ್ಸಾಮಿನ ಈಗ ಪಾಕಿಸ್ಥಾನದಲ್ಲಿರುವ) ಊರಲ್ಲಿ ಜನಿಸಿದ್ದ ನೆನಪೂ, ಅಲ್ಲಿನ ಕೆಲವು ಜನರ ಹೆಸರೂ ತನಗೆ ಕಮಲೇಶ್ ಕುಮಾರಿ ಎಂಬ ಹೆಸರಿದ್ದುದೂ ನೆನಪಿಗೆ ಬರುತ್ತಿತ್ತು. ಆದರೆ ದೀರ್ಘಕಾಲದ ಕಟ್ನೀ ಜೀವನವೇ ಹೆಚ್ಚು ಸುಖಮಯವಾಗಿದ್ದು ಚೆನ್ನಾಗಿ ಸ್ಮರಣೆಯಲ್ಲಿ ಉಳಿದಿರಬೇಕು. ಸ್ವರ್ಣಲತಳ ಕತೆಯ ಅರ್ಥ ಅವಳ ಜೀವಾತ್ಮನು ಮರಣ ಹೊಂದಿ ನರಕಕ್ಕೆ ಹೋಗದೆ ಎರಡು ಜನ್ಮಗಳನ್ನು ಒಂದರ ಅನಂತರ ಒಂದಾಗಿ ಬೇಗ ಬೇಗ ಪಡೆದ ಎಂದಾಗುತ್ತದೆ. ಅವಳ ಕತೆ ''The Universal Mother', 'Organiser', 'Blitz' ಮತ್ತು ಕಸ್ತೂರಿಯಲ್ಲಿ ಬಂದಿದ್ದವು.

೪. ಹಿಂದಿನ ಜನ್ಮದ ಸೊಸೆ

ಪಂಜಾಬಿನ ಒಂದು ಸಿಖ್ಖರ ಮನೆಯಲ್ಲಿ ಒಂದು ಹೆಣ್ಣು ಮಗು ಜನಿಸಿತು. ಮಗುವಿಗೆ ಮೂರು ವರ್ಷಗಳಾದರೂ ಬಾಯಿ ಬರುತ್ತಿರಲಿಲ್ಲ. ಆಮೇಲೆ ಡಾಕ್ಟರರ ಚಿಕಿತ್ಸೆಯಿಂದ ಬೇಗ ಮಗು ಮಾತಾಡತೊಡಗಿತು. ಆದರೆ

ಆಗ ಅದು ತುಂಬಾ ಮಾತಾಡುತ್ತಿದ್ದುದು ಏನೆಂದೇ ಅರ್ಥವಾಗುತ್ತಿರಲಿಲ್ಲ ತಂದೆ ಅವಳ ಮಾತನ್ನು ಟೇಪ್ ರಿಕಾರ್ಡ್ ಮಾಡಿ ಪರಭಾಷೆಯ ಪರಿಚಿತರಿ ಕೇಳಿಸಿದ. ಅವರಲ್ಲೊಬ್ಬ ಮಹಾರಾಷ್ಟ್ರದವ "ಅದು ಮರಾಠಿ ಭಾಷೆ, ನಿ ಮಗು ಅದನ್ನು ಹೇಗೆ ಕಲಿತಿತಪ್ಪ!" ಎಂದ. ಅದು ಏನು ಹೇಳುತ್ತದೆಂಬುದ ಕೇಳಿ ಮತ್ತಷ್ಟು ಆಶ್ಚರ್ಯವಾಯಿತು. ಅದು ಪುಣೆಯ ಒಂದು ಮನೆಯ ಪತ್ತೆ ಹೇಳಿ, "ನಾನು ಅವರ ಸೊಸೆ ; ಅಲ್ಲಿಗೆ ನಾನು ಬೇಗ ಹೋಗಲೇಬೇಕ ಗಿದೆ ; ಬೇಗ ಕರಕೊಂಡು ಹೋಗಿರಿ" ಎನ್ನುತ್ತದೆ ಎಂದ. "ನಾನು ಬೇಗ ಪುಣೆಗೆ ಹೋಗುವವನಿದ್ದೇನೆ, ಆ ವಿಳಾಸದ ಮನೆಗೆ ಹೋಗಿ ವಿಚಾರಿಸಿ ಪತ್ರ ಬರೆಯುತ್ತೇನೆ" ಎಂದೂ ಹೇಳಿದ.

ಮುಂದೆ ಸ್ವಲ್ಪ ದಿನಗಳ ಅನಂತರ ಪುಣೆಯಿಂದ ಅವನ ಪತ್ರವೂ ಬಂತು "ಮಗು ಹೇಳುವ ಮನೆಗೆ ಹೋದೆ. ನಾಲ್ಕು ವರ್ಷಗಳ ಹಿಂದೆ ಆ ಮನ ಯವರ ಸೊಸೆ ಮೃತಳಾಗಿದ್ದಳಂತೆ. ಮಗುವಿನೊಡನೆ ಅಲ್ಲಿಗೆ ಬನ್ನಿರಿ" ಎಂದು ಪತ್ರದಲ್ಲಿತ್ತು. ಸಿಖ್ಖನು ಮಗಳೊಡನೆ ಅಲ್ಲಿಗೆ ಹೋದ. ಮಗು ಆ ಮನೆ ಕಾಲಿಟ್ಟೊಡನೆ ಅಳತೊಡಗಿತು. ಅತ್ತೆ ಬಂದೊಡನೆ ಅವಳ ಪಾದದ ಮೇಲೆ ಬಿದ್ದು ಧಾರಾಳವಾಗಿ ಕಣ್ಣೀರು ಸುರಿಸಿತು. ಅನಂತರ ತನ್ನ ಹಿಂದಿನ ಜನ್ಮದ ಮಕ್ಕಳ ಮತ್ತು ಬಂಧುಗಳ ಮತ್ತು ನೌಕರರ ಯೋಗಕ್ಷೇಮ ಕೇಳಿತು. ಆಮೇಲ ತಾನು ಬಚ್ಚಿಟ್ಟಿದ್ದ ತನ್ನ ಚಿನ್ನದ ಪೆಟ್ಟಿಗೆಯ ವಿಚಾರ ಹೇಳಿ ಅದಿದ್ದ ಜಾಗ ತೋರಿಸಿ ಅಗೆಯಲು ಹೇಳಿತು. ಅಗೆದಾಗ ಚಿನ್ನದ ಪೆಟ್ಟಿಗೆ ಸಿಕ್ಕಿತು. ಅದರಲ್ಲಿ ತುಂಬಾ ಆಭರಣಗಳಿದ್ದವು. ಅವು ಅವಳು ಮದುವೆಯಾಗುವಾಗ ತಂದ ಆಭರಣಗಳಾಗಿದ್ದವು. "ಇವನ್ನು ನಿಮ್ಮ ಮಗಳ ಮದುವೆಗೆ ಉಪಯೋಗಿ ಸಿರಿ" ಎಂದೂ ಮಗು ಹೇಳಿತು.

ನಿಜಕ್ಕೂ ಮಗುವಿನ ಹಿಂದಿನ ನಾದಿನಿಯ ಮದುವೆ ಆಗ ನಿಶ್ಚಯ ವಾಗಿತ್ತು. ಮನೆಗೆ ಮುಂಚಿನ ಐಶ್ವರ್ಯ ಎಲ್ಲ ಹೋಗಿ ಬಡಸ್ಥಿತಿ ಬಂದಿತ್ತು ಮನೆಯವರು, ಸೊಸೆ ಸಾಯುವ ಮುಂಚೆ ಇದ್ದ ಅವಳ ಚಿನ್ನ ಏನಾಯಿತು ಎಂಬುದು ತಿಳಿಯದವರಾಗಿದ್ದರು. ಮದುವೆಯನ್ನು ಹೇಗೆ ಪೂರೈಸುವುದು ಎಂಬ ಚಿಂತೆ ಅವರನ್ನು ಬಲವಾಗಿ ಕಾಡುತ್ತಿತ್ತು. ಅಂಥ ಕಾಲದಲ್ಲಿ ಮಗುವಿನ ರೂಪದಲ್ಲಿ ಬಂದ ಸೊಸೆಯ ಉಪಕಾರ ಬಹಳ ಕೊಂಡಾಡಿದರು ಕೊನೆಗೆ ಮಗು "ಇನ್ನು ನನ್ನ ಕೆಲಸ ಮುಗಿಯಿತು, ನಾನು ಹೋಗುತ್ತೇನೆ ನನ್ನನ್ನು ಮರೆಯಬೇಡಿರಿ" ಎಂದು ಅತ್ತೆಗೆ ನಮಸ್ಕರಿಸಿತು. "ನನ್ನ ಗೃಹಲಕ್ಷ್ಮೀ

ನಿನ್ನ ಉಪಕಾರ ಎಂದೂ ಮರೆಯಲಾರೆವು" ಎಂದು ಅತ್ತೆ ಕಣ್ಣೀರು ಸುರಿಸುತ್ತ ಹೇಳಿದಳು (ಪಂಚಾಮೃತ ಮಾರ್ಚಿ ೧೯೭೪ರ ವಿಶೇಷ ಸಂಚಿಕೆಯಲ್ಲಿ ಎಂ. ಬಿ. ಕೇಶವರ ಲೇಖನದ ಸಾರಾಂಶ). ಇದೊಂದು, ಸೊಸೆಗೆ ಋಣ ಬಾಧೆ ಬಾರದಿರಲಿ ಎಂದು ದೇವರು ನಡೆಸಿದ ಆಟ!

೫. ರೂಪಸಿಂಹನ ಪೂರ್ವಜನ್ಮದ ಸ್ಮರಣೆ

ನಾನು ಓದಿರುವ ಹಲವಾರು ಪುನರ್ಜನ್ಮದ ಕತೆಗಳಲ್ಲಿ ಒಂದು ಇತ್ತೀಚಿನದು, ಜನವರಿ ೧೯೭೫ರ ಕಸ್ತೂರಿಯಲ್ಲಿನ "ರೂಪಸಿಂಹನಿಗೆ ಪೂರ್ವಜನ್ಮದ ಸ್ಮರಣೆಯಾಗಿದೆಯಾ ?" ಎಂಬುದು. ರಾಜಸ್ಥಾನದಲ್ಲಿ ಕೋಟಾ ಎಂಬ ಜಿಲ್ಲೆಯಲ್ಲಿ ಶಿವಗಡ ಎಂಬ ಚಿಕ್ಕ ಹಳ್ಳಿಯಲ್ಲಿ ೧೯೬೯ರಲ್ಲಿ ರಾಮಸಿಂಹಯೆಂಬವನಿಗೆ ರೂಪಸಿಂಹ ಎಂಬ ಮಗ ಜನಿಸಿದ. ಹುಡುಗ ತನ್ನ ಆರನೆ ವರ್ಷದಲ್ಲಿ ದೊಡ್ಡವರಂತೆ ಮಾತಾಡುತ್ತಿದ್ದ. ಮುಖ್ಯವಾಗಿ ಸೈನ್ಯದ ವಿಚಾರ, ಅದರಲ್ಲೂ ವಿಮಾನಗಳವಿಚಾರ, ಅಧಿಕಾರವಾಣಿಯಿಂದ ಹೇಳುತ್ತಿದ್ದ. ತಾನು ಭಾರತೀಯ ವಾಯುಪಡೆಯ ಸೈನಿಕ ; ರಜೆಯ ಮೇಲೆ ಮನೆಗೆ ಹೊರಟಾಗ ಹೇಗೋ ಇಲ್ಲಿ ಸೇರಿಕೊಂಡೆ ; ಇದು ತನ್ನ ಮನೆಯೇ ಅಲ್ಲ, ತನ್ನ ಮನೆಗೆ ಹೋಗಬೇಕು, ಈ ಮನೆಯವರು ಬಿಡುವುದಿಲ್ಲ, ಎಂದೆಲ್ಲ ಹೇಳುತ್ತಿದ್ದ. ಒಮ್ಮೆ ಅವನ ಹಠ ಸಹಿಸಲಾರದೆ ತಂದೆ "ನಿನ್ನ ಮನೆ ಎಲ್ಲಿ" ಎಂದು ಕೇಳಿದ. "ಅದು ಭರತಪುರದ ಬಳಿಯಲ್ಲಿರುವ ಡಿಗ್ ಗ್ರಾಮ" ಎಂದು ಉತ್ತರಿಸಿದ. ಆಮೇಲೆ ಅವ ಮನೆಬಿಟ್ಟು ಹೋಗದಂತೆ ಮಾಡುವುದು ಕಷ್ಟವಾಯಿತು.

ಅವನ ಕತೆಯನ್ನು ಪುನರ್ಜನ್ಮದ ವಿಚಾರ ಸಂಶೋಧನೆಗಾಗಿ ಭಾರತಕ್ಕೆ ಬಂದಿದ್ದ ಪ್ರೊಫೆಸರ್ ಥೋಮ್ಸನ್ ಎಂಬವರು ಕೇಳಿ, ಶಿವಗಡಕ್ಕೆ ಬಂದು ಹುಡುಗನ ಹೇಳಿಕೆಯನ್ನೆಲ್ಲ ತಿಳಕೊಂಡು ಡಿಗ್‌ಗ್ರಾಮಕ್ಕೆ ಹೋಗಿ ರೂಪಸಿಂಹನ ಹಿಂದಿನ ಜನ್ಮದ ತಂದೆ ಎನ್ನುತ್ತಿದ್ದ ಠಾಕೂರ್ ರತನ್ ಸಿಂಹನನ್ನೂ ಕಂಡು ವಿಚಾರಿಸಿದರು. ರತನ್‌ಸಿಂಹನ ಮಗ ಉದಯಸಿಂಹ ಭಾರತೀಯ ವಾಯುಪಡೆಯಲ್ಲಿ ಕೆಪ್ಟನ್ ಆಗಿದ್ದ. ೧೯೬೫ ರ ಭಾರತ-ಪಾಕಿಸ್ಥಾನದ ಯುದ್ಧದಲ್ಲಿ ರಾವಳಪಿಂಡಿಯ ಮೇಲೆ ಬಾಂಬುಗಳನ್ನು ಸುರಿಯಲು ಹೋದಾಗ ಅಲ್ಲಿನ ವಿಮಾನ-ನಿರೋಧ ತೋಪುಗಳ ಹೊಡೆತ ವಿಮಾನಕ್ಕೆ ತಗಲಿತು. ಅದು ಹಾಳಾದದ್ದಲ್ಲದೆ ಉದಯಸಿಂಹನೂ ಘಾಸಿಹೊಂದಿದ. ಹೇಗೋ ಬಹಳ ಪ್ರಯಾಸದಿಂದ ಭಾರತದ ಗಡಿಯೊಳಕ್ಕೆ ಬಂದರೂ ಕೆಳಗಿಳಿಯುವಾಗ ವಿಮಾನ

ನಾಶವಾಯಿತು. ಉದಯಸಿಂಹ ಮರಣ ಹೊಂದಿದ. ಈ ಎಲ್ಲ ವಿಚಾ
ತಿಳಕೊಂಡು ಥೋಮ್ಸನ್ನರು ಪುನಃ ಶಿವಗಡಕ್ಕೆ ಹೋಗಿ ರಾಮಸಿಂಹನೊಡ
ಮಗನನ್ನು ತನ್ನೊಡನೆ ಒಮ್ಮೆ ಕಳುಹಿಸಲು ಕೇಳಿಕೊಂಡರು. ತಂದೆ ಅದನ
ಸಂಪೂರ್ಣನಿರಾಕರಿಸಿದಾಗ, ತಂದೆಮಗ ಇಬ್ಬರನ್ನೂ ಡಿಗ್‌ಗ್ರಾಮಕ್ಕೆಕರ್ರೊಂಡ
ಹೋಗಬಹುದಾಗಿ ತೀರ್ಮಾನವಾಯಿತು. ರತನ್‌ಸಿಂಹನಿಗೆ ಈ ವಿಚಾರ ತಿ
ಸಿದ್ದರಿಂದ ಇವರು ಬರುವಕಾಲದ ನಿರೀಕ್ಷಣೆಯಲ್ಲಿ ಅಲ್ಲಿ ಅನೇಕರು ಸೇರಿದರು

ಕಾರು ಊರನ್ನು ಪ್ರವೇಶಿಸುವಾಗ ಮುಂದೆ ಕುಳಿತಿದ್ದ ರೂಪಸಿಂ
ಫಕ್ಕನೆ ಕಾರು ನಿಲ್ಲಿಸಲು ಹೇಳಿದ. ಹತ್ತಿರದಲ್ಲಿದ್ದ ದೇವಿಯ ಮಂದಿರಕ
ಹೋಗಿ ಸ್ವಲ್ಪಕಾಲ ಮೂರ್ತಿ ನೋಡಿ ಉದ್ದಂಡ ನಮಸ್ಕಾರ ಮಾಡಿದ
"ಮುಂಚೆ ಇಲ್ಲಿ ಬರುತ್ತಿದ್ದೆಯೋ" ಎಂದು ಕೇಳಿದ್ದಕ್ಕೆ "ಆಗಾಗ ಬರುತ್ತಿದ್ದೆ
ನನ್ನ ತಾಯಿಯೂ ಬರುತ್ತಿದ್ದಳು. ಇದು ನಮ್ಮ ಕುಲದೇವತೆ" ಎಂದ
ಅಷ್ಟರಲ್ಲಿ ರತನ್‌ಸಿಂಹನೂ ಅಲ್ಲಿ ನೆರೆದಿದ್ದವರೂ ಕಾರು ನಿಂತಲ್ಲಿಗೆ ಬಂದ
ಸೇರಿಕೊಂಡರು. ರತನ್‌ಸಿಂಹ ತನ್ನ ಮಗನ ನೆನಪಿಂದ ಬಾಲಕನನ್ನು ತನ
ತೊಡೆಯಮೇಲೆ ಕುಳ್ಳಿರಿಸಿಕೊಂಡು ಗಳಗಳನೆ ಅತ್ತುಬಿಟ್ಟ. ಬಾಲಕ ಅವನ
ಕಣ್ಣೊರೆಸುತ್ತ "ದದ್ದಾ! ತಿರುಗಿಬಂದಿದ್ದೇನೆ, ನೋಡು" ಎಂದು ಸಮಾಧಾನ
ಹೇಳಿದ. ಉದಯಸಿಂಹ ತಂದೆಯನ್ನು ದದ್ದಾ ಎಂದೇ ಕರೆಯುತ್ತಿದ್ದನಂತೆ

ಅನಂತರ ಅವರೆಲ್ಲ ನಿಧಾನವಾಗಿ ನಡೆದು ಹೋಗುವಾಗ ಒಂದು ಮರದ
ನೆರಳಿಗೆ ಬಂದರು. ಹುಡುಗ, "ನಾನು ನನ್ನ ಅನೇಕ ಮಿತ್ರರೊಂದಿಗೆ ಇಲ್ಲ
ತುಂಬಾ ಆಡುತ್ತಿದ್ದೆ" ಎಂದ. ಆಗ ನೆರೆದವರಲ್ಲೊಬ್ಬ "ನಾನೂ ಆಗ ಉದಯ
ಸಿಂಹನೊಡನೆ ಇಲ್ಲಿ ಆಡುತ್ತಿದ್ದೆ" ಎಂದು ಉದ್ಗರಿಸಿದ. ರೂಪಸಿಂಹ ಅವನನ್ನು
ಕಂಡೊಡನೆ ಹೋಗಿ ಕೈ ಹಿಡಿದು "ದಾವೂ, ನೀನೂ ಬಂದಿರುವೆಯಾ?"
ಎಂದು, ಹಳೆಯ ಸ್ನೇಹದ ನೆನಪಿಂದ ಅಳತೊಡಗಿದ. ಅವರಿಬ್ಬರೂ ಪ್ರಾಣ
ಸ್ನೇಹಿತರಾಗಿದ್ದರು. ದಾವೂ ತಾಯಿಯು ಮಗನನ್ನು ಪ್ರೀತಿಸುತ್ತಿದ್ದಂತೆಯೇ
ಉದಯಸಿಂಹನನ್ನು ಪ್ರೀತಿಸುತ್ತಿದ್ದಳು. ಅವಳನ್ನು ಉದಯಸಿಂಹ ಚಾಚಿ
ಎಂದು ಕರೆಯುತ್ತಿದ್ದ. ರೂಪಸಿಂಹ ಪಕ್ಕನೆ ಅವಳನ್ನು ಸ್ಮರಿಸಿ "ಚಾಚಿ,
ಚಾಚಿ" ಎನ್ನುತ್ತ ಹತ್ತಿರವಿದ್ದ ದಾವೂನ ಮನೆಗೆ ಓಡಿ ಬಾಗಿಲು ತಟ್ಟಿದ.
"ಚಾಚಿ" ಅವನ ಧ್ವನಿ ಕೇಳಿ ಉದಯಸಿಂಹನ ಧ್ವನಿಯಂತೆ ಕೇಳಿಸುತ್ತಿದೆಯಲ್ಲಾ!
ಎಂದು ಸೊಸೆಗೆ ಹೇಳಿದಳು. ಹುಡುಗ ಅವಳು ಒಳಗೆ ನಿತ್ರಾಣದಿಂದ
ಮಲಗಿದ್ದ ಕೋಣೆಗೆ ಹೋದಾಗ "ಎಲ್ಲಿ ಹೋಗಿದ್ದಿಯಪ್ಪ? ಸೈನ್ಯ ಸೇರಬೇಡ

ವೆಂದು ಎಷ್ಟು ಹೇಳಿದರೂ ನೀನು ಕೇಳಲಿಲ್ಲವಲ್ಲ" ಎಂದಳು. ಅವನಿಗೆ ಮುಂಚೆ ಯಾವಾಗಲೂ ಬಹಳ ಇಷ್ಟವಾಗಿದ್ದ ಬೆಣ್ಣೆ ಸಕ್ಕರೆ ಕೊಡಲು ಸೊಸೆಯೊಡನೆ ಹೇಳಿದಳು. ಹುಡುಗ ಅದನ್ನು ತಿಂದು ಮನೆಯ ಕಡೆಗೆ ಹೊರಟ.

ಹುಡುಗ ಮನೆಯಲ್ಲಿ "ಅಮ್ಮಾ, ಅಮ್ಮಾ" ಎಂದು ಕರೆಯುತ್ತ ತಾಯಿಯನ್ನು ಗುರುತಿಸಿ ಕಾಲಿಗೆ ಬಿದ್ದ. ಹಿಂದಿನ ಜನ್ಮದ ತಮ್ಮಂದಿರ ಮತ್ತು ಇವನ ವಿಚಾರ ಕೇಳಿ ಬಂದಿದ್ದ ತಂಗಿಯ ಹೆಸರು ಹೇಳಿ ಗುರುತಿಸಿ ಮಾತಾಡಿಸಿದ. ಉದಯಸಿಂಹನ ಪತ್ನಿ ತನ್ನ ಚಿಕ್ಕ ಮಗನೊಡನೆ ಬಂದು ಕಣ್ಣಲ್ಲಿ ನೀರು ತುಂಬಿಕೊಂಡು ರೂಪಸಿಂಹನ ಬಳಿ ಮಗನನ್ನು ಕುಳ್ಳಿರಿಸಿ ಅವನನ್ನು ನೋಡಿದಳು. ಹುಡುಗರಿಬ್ಬರಿಗೂ ಈಗ ಸುಮಾರು ಒಂದೇ ಪ್ರಾಯವಾಗಿತ್ತು. ರೂಪಸಿಂಹ "ಮಗ"ನನ್ನು ಕಂಡು ಬಹಳ ಸಂತೋಷ ತೋರಿಸಿ ಮುದ್ದಾಡಿದ. ಆಮೇಲೆ ಅವ ಅಲ್ಲಿ ನೆರೆದಿದ್ದ ಎಷ್ಟೋ ಜನ ಊರವರ ಗುರುತು ಹಿಡಿದು ಹಳೆಗಾಲದ ವಿಷಯಗಳನ್ನು ನೆನಪಿಗೆ ತಂದು ಮಾತಾಡಿದ. ಎಲ್ಲರೂ ರೂಪಸಿಂಹನೇ ಉದಯಸಿಂಹನೆಂಬ ಬಗ್ಗೆ ಸಂಶಯವಿಲ್ಲದಾದರು. ಥೋಮ್ಸನ್ನರೂ ಇದು ಪುನರ್ಜನ್ಮದ ಒಂದು ಸ್ಪಷ್ಟ ಉದಾಹರಣೆ ಎಂದರು. ರೂಪಸಿಂಹ ವಾಪಸ್ಸು ಹೋಗಲು ಎಷ್ಟಕ್ಕೂ ಒಪ್ಪದ್ದರಿಂದ ರಾತ್ರಿ ಅಲ್ಲಿ ಉಳಕೊಂಡರು. ನಂತರ ಆ ಎರಡು ಮನೆಯವರಿಗೂ ಮಗ ಎಂಬ ಒಪ್ಪಂದವಾಯಿತು.

ಹಿಂದೆ ಹೇಳಿದ ಕತೆಗಳು ಪುನರ್ಜನ್ಮದ ಘಟನೆಗಳ ಸಾಮಾನ್ಯ ರೂಪವಿದ್ದು ಮಾದರಿಗಾಗಿ ಕೊಡಲ್ಪಟ್ಟಿವೆ. ಅವಲ್ಲಿ ಪ್ರಾಯಮೀರಿ ಅಲ್ಲ, ಅದಕ್ಕಿಂತ ಮುಂಚೆಯೇ, ಎಲ್ಲರಿಗಿರುವಂತೆ ಇನ್ನೂ ಕೆಲವು ಕಾಲ ಬಾಳಬೇಕೆಂಬ ಉತ್ಸಾಹ ತುಂಬಾ ಇರುವಾಗಲೇ, ಅಕಸ್ಮಾತ್ತಾಗಿ, ಮರಣ ಹೊಂದಿದವರ ಜೀವಾತ್ಮರು ಬೇಗ ಬೇರೆಲ್ಲೋ ಜನ್ಮವೆತ್ತುವುದು, ಮಾತನ್ನಾಡುವ ಶಕ್ತಿ ಬಂದೊಡನೆ ಮಗು ತಾನಿನ್ನೂ ಹಿಂದಿನ ಜನ್ಮದ ವ್ಯಕ್ತಿಯೇ ಎಂಬ ಭಾವನೆಯಲ್ಲಿದ್ದು ಹಿಂದಿನ ನೆನಪುಗಳನ್ನು ಹೇಳುವುದು, ಹಿಂದೆ ಇದ್ದ ಊರಿಗೆ, ಬಂಧುಗಳಿದ್ದಲ್ಲಿಗೆ, ಹೋದಾಗ ಊರನ್ನು, ಬಂಧುಗಳನ್ನು ಆಶ್ಚರ್ಯವಾದ ರೀತಿಯಲ್ಲಿ ಗುರುತಿಸಿ ಹಿಂದಿನ ಘಟನೆಗಳನ್ನು ನೆನಪಿಗೆ ತರುವುದು, ಅವರ ಬಗ್ಗೆ ಅತಿಯಾಗಿ ಮಮತೆ ತೋರಿಸುವುದು ಕ್ರಮ. (ಸ್ವರ್ಣಲತಳು ಕಂಡದ್ದು ಅವಳ ಹಿಂದಿನ ಜನ್ಮದ ಬಂಧುಗಳನ್ನಲ್ಲ, ಮತ್ತೂ ಹಿಂದಿನ ಜನ್ಮದವರನ್ನು. ಆದ್ದರಿಂದ ಅವಳಲ್ಲಿ ಬಾಂಧವ್ಯದ ಮಮತೆ ಅಷ್ಟು ಅಧಿಕವಾಗಿ ತೋರಿಕೊಳ್ಳಲಿಲ್ಲ). ಇಂಥ ಕತೆಗಳ ವರದಿ ಧಾರಾಳವಾಗಿ ಬರುತ್ತಲೇ ಇವೆ. ಪುನರ್ಜನ್ಮ ನಂಬುವ ನಮ್ಮ

ದೇಶದಲ್ಲಿ ಮಾತ್ರವಲ್ಲ, ಪುನರ್ಜನ್ಮ ನಂಬದ ಕ್ರಿಶ್ಚನರಲ್ಲೂ ಮುಸಲ್ಮಾನರಲ್ಲ
ಭೂಲೋಕದ ಹಲವು ಬೇರೆ ಬೇರೆ ಊರುಗಳಲ್ಲಿಯೂ ವಾರ್ತಾ ಪತ್ರಿಕೆ
ಪ್ರಭಾವದಿಂದ ಇಂಥ ಕತೆಗಳ ವರದಿಗಳು ಬರುವುದು ಸಾಧ್ಯವಾಗಿವೆ. ಪ
ದೇಶಗಳ ಇಂಥ ವರದಿಗಳಲ್ಲಿ ಕೆಲವನ್ನು ಇಲ್ಲಿ ದೃಷ್ಟಾಂತವಾಗಿ ಚುಟುಕಾ
ಕೊಡುತ್ತೇನೆ.

೬. ಪೋಲಕ್ಕರ ಅವಳಿಜವಳಿ ಮಕ್ಕಳು

ಇಂಗ್ಲೆಂಡಿನ ನೋರ್ತಂಬರ್‌ಲೇಂಡಿನ ಹೆಕ್ಸೇಮ್ ಎಂಬಲ್ಲಿ ೧೯೫೭ ನ
ಇಸವಿಯಲ್ಲಿ ಜಾನ್ ಪೋಲಕ್ ಎಂಬುವನ ಎರಡು ಹೆಣ್ಣು ಮಕ್ಕಳು, ೧
ವರ್ಷದ ಜೋಆನಾ, ೬ ವರ್ಷದ ಜೆಕ್ವಿಲ್ಯಾನ್, ಒಂದು ಆದಿತ್ಯವಾ
ಇಗರ್ಜಿಗೆ ಹೋಗುತ್ತಿದ್ದಾಗ ಕಾರಿನ ಅಡಿಬಿದ್ದು ಮೃತರಾದರು. ಇದಾದ ೧
ತಿಂಗಳ ನಂತರ ಪೋಲಕ್ಕರ ಹೆಂಡತಿ ಅವಳಿಜವಳಿ ಹೆಣ್ಣುಮಕ್ಕಳನ್ನು ಹೆತ್ತಳ

ಅವಲ್ಲಿ ಜೆನಿಫರ್ ಎಂಬ ಮಗಳಿಗೆ ಹಿಂದಿನ ಮಗಳಾಗಿದ್ದ ಜೆಕ್ವಿಲ್ಯಾ
ಳಂತೆಯೆ ಹಣೆಯಲ್ಲಿ ಬಲಗಣ್ಣ ಮೇಲೆ ಒಂದು ಉದ್ದವಾದ ಕಲೆಇತ್ತು
ಜೆಕ್ವಿಲ್ಯಾನಳಿಗೆ ಈ ಕಲೆ ಉಂಟಾದದ್ದು ಅವಳೊಮ್ಮೆ ಮೆಟ್ಟಲಿಂದ ಕೆಳ
ಬಿದ್ದಾಗ. ಜೆನಿಫರಳಿಗೆ ಈ ಕಲೆ ಹುಟ್ಟುವಾಗಲೇ ಬಂತು. ಜೆಕ್ವಿಲ್ಯಾನ
ಸೊಂಟದಲ್ಲಿದ್ದ ದೊಡ್ಡ ಕೆಂಪುಮಚ್ಚೆಯುತರದ್ದೇ ಜೆನಿಫರಳಿಗೆ ಅದೇ ಭಾ
ದಲ್ಲಿತ್ತು. ಜೆನಿಫರಳು ಬೆಳೆದಂತೆ ಜೆಕ್ವಿಲ್ಯಾನಳ ವಿಶೇಷ ಅಭ್ಯಾಸದಂ
ಪೆನ್ಸಿಲನ್ನು ನಡುಬೆರಳಿನ ಬದಿಯಲ್ಲಿ ಹಿಡಿಯುತ್ತಿದ್ದಳು. ಅವಳದ್ದೇ ಅ
ಮತ್ತೂ ಕೆಲವು ಅಭ್ಯಾಸಗಳೂ ಬಂದಿದ್ದವು.

ಗಿಲಿಯನ್ನಳೆಂಬ ಎರಡನೆ ಹುಡುಗಿ ಜೋಆನಳ ಕೆಲವು ಲಕ್ಷಣಗಳನ
ತೋರಿಸುತ್ತಿದ್ದಳು. ಅವರಿಬ್ಬರೂ ತಾವು ಹಿಂದಿನ ಜನ್ಮದಲ್ಲಿ ಆಡುತ್ತಿದ
ತಮ್ಮ ಬೊಂಬೆಗಳನ್ನು ಗುರುತಿಸಿ ಅವಕ್ಕೆ ಆಗ ತಾವು ಕೊಟ್ಟಿದ್ದ ಹೆಸರ
ಗಳಿಂದಲೇ ಕರೆಯಲಾರಂಭಿಸಿದರು. ಗಿಲಿಯನ್ನಳು ಹಿಂದಿನ ಜನ್ಮದ ಕೆಲ
ಅನುಭವಗಳನ್ನು, ಅವನ್ನು ಅವಳಿಗೆ ಯಾರು ಹೇಳಿರದ್ದಿದರೂ, ತಿಳಿಸ
ತ್ತಿದ್ದಳು. ಜೆನಿಫರಳಿಗೆ ತಾವು ಹಿಂದಿನ ಜನ್ಮದಲ್ಲಿ ಕಾರಡಿ ಬಿದ್ದಾ
ಜೆಕ್ವಿಲ್ಯಾನಳಿಗಾಗಿದ್ದ ಗಾಯಗಳನ್ನು ತಪ್ಪಿಲ್ಲದೆ ವಿವರಿಸಿದಳು.

ಪೋಲಕ್ ದಂಪತಿಗಳು ರೋಮನ್ ಕೆಥೊಲಿಕರು. ಆದ್ದರಿಂದ ಅ
ರಿಗೆ ಪುನರ್ಜನ್ಮದಲ್ಲಿ ನಂಬಿಕೆ ಇರುವುದನ್ನು ಅವರ ಧರ್ಮ ಖಂಡಿಸುತ್ತದೆ

ಆದೇಕೋ ಈ ದಂಪತಿಗಳಿಗೆ ತಮ್ಮ ಮಕ್ಕಳು ಸತ್ತಂದಿನಿಂದ ಅವು ಪುನಃ ತಮ್ಮಲ್ಲಿ ಜನಿಸುತ್ತಾರೆ ಎಂಬ ನಂಬಿಕೆ ಬಂದಿತ್ತು. ಆದ್ದರಿಂದ ಅವರು ಕ್ರಿಶ್ಚನರಕ್ರಮದಂತೆ ಆ ಮಕ್ಕಳ ಗೋರಿಗಳಿಗೆ ಹೋಗುತ್ತಿರಲಿಲ್ಲ. ಪೋಲಕ್ಕಳು ಗರ್ಭಿಣಿಯಾಗಿದ್ದಾಗ ತನ್ನ ಮಕ್ಕಳಲ್ಲೊಬ್ಬಳು ಪುನಃ ಹುಟ್ಟುತ್ತಾಳೆ ಎಂಬ ಭಾವನೆ ಅವಳಲ್ಲಿ ಬಲವಾಗಿ ಇತ್ತಂತೆ. ಮಕ್ಕಳು ಹುಟ್ಟಿ ಬೆಳೆಯುತ್ತ ಬಂದಂತೆ ಅವು ಪುನರ್ಜನ್ಮ ಪಡೆದು ಬಂದವು ಎಂಬ ಭಾವನೆ ದಂಪತಿಗಳಲ್ಲಿ ಧೃಡವಾಗಿ ಉಂಟಾಯಿತು. ಈ ವರದಿ Illustrated Weekly of India, May 1966ರಲ್ಲಿ ಬಂದಿತ್ತು.

೭. ತುರ್ಕಿಸ್ಥಾನದ ಇಸ್ಮಾಯಿಲ್ ಎಂಬವನ ಕತೆ

ರಾಜಾಸ್ಥಾನ ವಿಶ್ವವಿದ್ಯಾಲಯದ ಪರಮನೋಶಾಸ್ತ್ರದ ಪ್ರಾಧ್ಯಾಪಕ ರಾದ ಶ್ರೀ ಬೆನರ್ಜಿಯವರು ಇಸ್ಮಾಯಿಲ್ ಎಂಬ ಹುಡುಗನ ಹಿಂದಿನ ಜನ್ಮದ ಸ್ಮರಣೆಯ ಕತೆ ಕೇಳಿ ಹುಡುಗನನ್ನೂ ಸಂಬಂಧಿಕರನ್ನೂ ಕಂಡು ವಿಚಾರಿಸಿ ಸಂಗ್ರಹಿಸಿದ ಕತೆಯಿದು. ಕೆಲವು ಆಂಗ್ಲ ಭಾಷಾ ಪತ್ರಿಕೆಗಳಲ್ಲಿಯೂ ಕನ್ನಡ ದಲ್ಲಿ 'ಪ್ರಪಂಚ'ದಲ್ಲಿಯೂ (ಜುಲೈ ೨೨, ೧೯೬೭) ಇದು ಪ್ರಕಟವಾಗಿತ್ತು.

ಬಾಲಕ ಇಸ್ಮಾಯಿಲ್‌ನು ಮಹಮದ್ ಅಲ್ತಿನ್ ಕ್ಲಿಶನೆಂಬ ಸಾಮಾನ್ಯ ಮಟ್ಟದ ಕಿರಾಣಿವ್ಯಾಪಾರಿ ಮತ್ತು ಕಟುಕನ ಮಗ. ತುರ್ಕಿಸ್ಥಾನದ ಮಿದುಕ್ ಜಿಲ್ಲೆಯವ. ೧೯೬೨ರಲ್ಲಿ ಜನಿಸಿದ. ಇಸ್ಮಾಯಿಲ್ ೧೮ ತಿಂಗಳ ಮಗುವಾಗಿ ದ್ದಾಗಲೇ ತನಗೆ ತನ್ನಮಕ್ಕಳನ್ನುಕಾಣಬೇಕೆಂಬ ಆಸೆಯಾಗುತ್ತದೆ, ಎನ್ನುತ್ತಿದ್ದ. ಸ್ವಲ್ಪಕಾಲದ ಅನಂತರ ತಾನು ಇಸ್ಮಾಯಿಲ್ ಅಲ್ಲ, ಅಬಿತ್ ಸುಜುಲ್ಮಸ್, ಸ್ವಲ್ಪಕಾಲದ ಹಿಂದೆ ಕೊಲೆಮಾಡಲ್ಪಟ್ಟವ, ಎಂದೂ ಹೇಳುತ್ತಿದ್ದ. ಅಬಿತ್ ಸುಜುಲ್ಮಸ್ ಎಂಬವ ಅದೇ ಊರಿನ ಒಬ್ಬ ಧನಿಕ ತೋಟಗಾರನಾಗಿದ್ದ. ತರಕಾರಿ ಮತ್ತು ಹಣ್ಣುಗಳನ್ನು ಬೆಳೆಸಿ ಮಾರಾಟ ಮಾಡುತ್ತಿದ್ದ. ಅವನ ಪ್ರಥಮ ಹೆಂಡತಿ ಹತೀಸಳಲ್ಲಿ ಮಕ್ಕಳಾಗದ್ದರಿಂದ ಅವಳನ್ನು ತ್ಯಜಿಸಿ ಸಹೀದಾ ಎಂಬವಳನ್ನು ವಿವಾಹ ಮಾಡಿಕೊಂಡು ಅವಳಿಂದ ಕೆಲವು ಮಕ್ಕಳನ್ನು ಪಡೆ ದಿದ್ದ. ಆದರೂ ಮೊದಲಿನಹೆಂಡತಿಗೆ ತನ್ನ ಮನೆಯ ಹತ್ತಿರವೇ ಮನೆಮಾಡಿ ಕೊಟ್ಟು ಜೀವನಕ್ಕೆ ಕೊಡುತ್ತಿದ್ದ. ಅವನು ತೋಟದ ಕೆಲಸಕ್ಕೆ ಅನೇಕ ಕೆಲಸದವರನ್ನು ನೇಮಿಸಿಕೊಂಡಿದ್ದ. ಒಮ್ಮೆ ಅವನ ಕೂಲಿಯವರು ಸೇರಿ ಅವನಮೇಲೆ ಏನೋ ದ್ವೇಷ ಕಟ್ಟಿಕೊಂಡು ಅವನನ್ನು ಹಿತ್ತಲಲ್ಲಿನ ಕುದುರೆ

ಲಾಯಕ್ಕೆ ಕರಕೊಂಡು ಹೋಗಿ ಅಲ್ಲಿ ತಲೆಗೆ ಬಲವಾಗಿ ಬಡಿದರು. ಅ
ಚೀರುತ್ತ ಬಿದ್ದು ಸತ್ತ. ಅವನ ಕೂಗು ಕೇಳಿ ಅವನ ಹೆಂಡತಿ ಸಹೋದ
ಮತ್ತು ಎರಡು ಮಕ್ಕಳು ಓಡಿಬಂದರು. ಕೊಲೆಗಾರರು ಅವರನ್ನೂ ಕೊಂದ
ಪಲಾಯನ ಮಾಡಿದರು. ಆದರೆ ಸರ್ಕಾರ ಅಪರಾಧಿಗಳನ್ನು ಹಿಡಿದು ಶಿಕ್
ಕೊಟ್ಟಿತು.

ಬಾಲಕ ಇಸ್ಮಾಯಿಲ್ಲನಿಗೆ ಹುಟ್ಟುವಾಗ ತಲೆಯಮೇಲೆ ಒಂದು ದೊಡ್ಡ
ಗಾಯದ ಕಲೆಯಿತ್ತು. ಕೆಲವು ವರ್ಷಗಳವರೆಗೂ ಅದು ಕಾಣುತ್ತಿತ್ತು
ಇಸ್ಮಾಯಿಲ್ಲನು ತನ್ನನ್ನು ತನ್ನ (ಪೂರ್ವ)ಮನೆಗೆ ಕರಕೊಂಡು ಹೋಗಬೇಕೆಂದ
ಆಗಾಗ ಹಠಮಾಡುತ್ತಿದ್ದ. ಅವನು ಮೂರು ವರ್ಷದವನಾಗಿದ್ದಾಗ ಅವನ
ತಂದೆತಾಯಿ ಅವನನ್ನು ಅಬೀತ್‌ಸುಜುಲ್ಮಸನ ಮನೆಗೆ ಕರಕೊಂಡುಹೋದರು
ಅದು ಅವರ ಮನೆಯಿಂದ ಮುಕ್ಕಾಲು ಮೈಲು ಮಾತ್ರ ದೂರವಿತ್ತು
ಇಸ್ಮಾಯಿಲ್ಲನೇ ದಾರಿ ಹೇಳುತ್ತಿದ್ದ. ಅಲ್ಲಿಗೆ ಹೋದ ನಂತರ ಅಲ್ಲಿ ತನ್ನ
ಹಿಂದಿನಜನ್ಮದ ಕೆಲವುಮಕ್ಕಳನ್ನೂ ಅಲ್ಲಿದ್ದ ಕುಟುಂಬದವರನ್ನೂ ಗುರುತಿಸಿದ
ಆಮೇಲೆ ಹತೀಸಳ ಮನೆಗೆ ಹೋದಾಗ ಅವಳನ್ನು ತಬ್ಬಿಕೊಂಡ. ಆಗ ಅಲ್ಲಿಗ
ಅಬೀತ್ ಸುಜುಲ್ಮಸನ ಮತ್ತೊಬ್ಬಳು ಮಗಳು ಗುಲ್‌ಸರೀನಳೆಂಬುವಳ
ಬಂದಳು. ಅವರಿಬ್ಬರೂ ಒಂದು ಗಂಟೆಕಾಲ ತುಂಬಾ ಮಾತನಾಡಿದ ಮೇಲ
ಆ ಹುಡುಗಿ ಅವ ತನ್ನ ತಂದೆಯಾಗಿದ್ದವನೇ ಎಂದು ಹೇಳಿದಳು.

ಒಮ್ಮೆ ಬಾಲಕ ಇಸ್ಮಾಯಿಲನ ತಂದೆ ಅವನಿಗೆ ಕೆಲವು ಹಣ್ಣುಗಳನ್ನ
ತಂದು ಕೊಟ್ಟಾಗ ಇಸ್ಮಾಯಿಲನು ಅವಲ್ಲಿ ದೊಡ್ಡವನ್ನು ಆರಿಸಿ ತನ್ನ ಮಗಳ
ಗುಲ್‌ಸರೀನಳಿಗೆ ಕಳುಹಿಸಿಕೊಡಬೇಕೆಂದು ತಂದೆಗೆ ಹೇಳಿದ. ಅವ ಒಪ್ಪದಿದ್ದಾ
ಅತ್ತ. ಮತ್ತೊಮ್ಮೆ ಅವರಲ್ಲಿಗೆ ಐಸ್‌ಕ್ರಿಮ್ ವ್ಯಾಪಾರಿಯೊಬ್ಬ ಬಂದಾ
ಇಸ್ಮಾಯಿಲ್ ಅವನೊಡನೆ ಮಾತಾಡುತ್ತ, ತನ್ನ ಗುರುತು ಸಿಕ್ಕಿತೇ ಎಂದ
ಕೇಳಿದ. ಅವನಿಗೆ ಗುರುತು ಸಿಕ್ಕಿರಲಿಲ್ಲ. ಇಸ್ಮಾಯಿಲ್ ಅವನಿಗೆ ಹೇಳಿ
"ನೀನು ಮುಂಚೆ ಈ ವ್ಯಾಪಾರದಲ್ಲಿರಲಿಲ್ಲ. ಪಲ್ಯಕಾಯಿ ಹಣ್ಣು ಮಾರ
ತ್ತಿದ್ದಿ. ಅವನ್ನು ತನ್ನಲ್ಲಿಂದ ಕೊಂಡುಹೋಗುತ್ತಿದ್ದಿ. ಕಡೆಸಾರಿ ಕೊಂಡ
ಹೋದುದರ ಹಣ ಇನ್ನೂ ಬಾಕಿಯಿದೆ" ಎಂದು ಎಲ್ಲ ವಿವರ ಹೇಳಿದ
ಐಸ್‌ಕ್ರೀಮ್ ವ್ಯಾಪಾರಿ ಕೆಲವುಕಾಲ ಮಾತುಕತೆ ನಡೆಸಿ ಅವ ಅಬೀತ್
ಸುಜುಲ್ಮಸನು ನಿಜ ಎಂದು ಒಪ್ಪಿದ. ತನ್ನ ಮೇಲೆ ಹಣ ಬಾಕಿಯಿದ್ದುದ
ಒಪ್ಪಿ ತಾನು ಕೊಟ್ಟ ಐಸ್‌ಕ್ರೀಮಿಗೆ ಹಣ ತಕ್ಕೊಳ್ಳಲಿಲ್ಲ.

೮. ಇಮದ್ ಏಲಾವರನ ಕತೆ

ಈ ಕತೆಯನ್ನು ಪ್ರಾಧ್ಯಾಪಕ ಬೆನರ್ಜಿಯವರಂ ಪರಿಶೀಲಿಸಿದ್ದರು. ಇಮದ್ ಏಲಾವರ ಲೆಬೆನೋನ್ ದೇಶದವ. ಬೆನರ್ಜಿಯವರು ಅವನ ವಿಚಾರ ತಿಳಿಯಲು ೧೯೬೩ರಲ್ಲಿ ಎರಡುಸಾರಿ ಆ ದೇಶಕ್ಕೆ ಹೋಗಿದ್ದರು. ಹುಡುಗನಿಂದ ಅವನ ಪೂರ್ವಜನ್ಮದ ವಿಚಾರ ೫೭ ವಿಷಯಗಳನ್ನು ಆರಿಸಿ ಇಟ್ಟುಕೊಂಡರು. ಹುಡುಗ ಹಿಂದಿನಜನ್ಮದ್ದೆಂದು ಹೇಳಿದ ಊರಿಗೆ ಅವ ಹೋಗುವ ಮುಂಚೆಯೇ ಬೆನರ್ಜಿಯವರು ಅಲ್ಲಿ ಹೋಗಿ ವಿಚಾರಿಸಿದಾಗ ಅವಲ್ಲಿ ೫೧ ಸಂಪೂರ್ಣ ನಿಜ ಎಂದು ಅವರಿಗೆ ಕಂಡುಬಂತು.

ಇಮದ್ದನು ಈ ಸಾರಿ ಜನಿಸಿದ್ದು ಕೊರ್ನಾಯೆಲ್ ಎಂಬ ಹಳ್ಳಿಯಲ್ಲಿ. ಅವನ ಹೇಳಿಕೆಯಂತೆ ಅವನ ಹಿಂದಿನ ಜನ್ಮದ ಊರು ಅಲ್ಲಿಂದ ೨೫ ಮೈಲುಗಳ ದೂರದಲ್ಲಿದ್ದ ಖಿರ್ಬಿ ಎಂಬಲ್ಲಿ. ಒಂದು ಪರ್ವತದ ಬಳಿ. ಪರ್ವತಕ್ಕೆ ಸುತ್ತುತ್ತ ಏರುವ ರಸ್ತೆಯ ಬಳಿ ತನ್ನ ಮನೆ, ತನ್ನ ಹೆಸರು ಇಬ್ರಾಹಿಮ್ ಬೌಹಾಮ್ಸಿ, ಕ್ಷಯರೋಗದಿಂದ ನರಳುತ್ತಿದ್ದೆ. ಎನ್ನುತಿದ್ದ ಹುಡುಗ. ಖಿರ್ಬಿಯೆಂಬಲ್ಲಿ ವಿಚಾರಿಸಿದಾಗ ಇಬ್ರಾಹಿಮ್ ಎಂಬವ ತನ್ನ ೨೫ ವಯಸ್ಸಲ್ಲಿ ಒಂದು ವರ್ಷ ಆಸ್ಪತ್ರೆಯಲ್ಲಿ ನರಳಿ ೧೯೪೯ರಲ್ಲಿ ಮೃತನಾದನೆಂಬುದು ನಿಜ ಎಂದು ತಿಳಿದು ಬಂತು. ಹುಡುಗನು ಹೇಳಿದ್ದ ಉಳಿದ ಹೇಳಿಕೆಗಳೂ ಬಹುಮಟ್ಟಿಗೆ ಹೊಂದಿಕೆಯಾಗಿ ಬಂದವು. ಈ ಕತೆಯಲ್ಲಿ ಮರಣಕ್ಕೂ ಪುನರ್ಜನ್ಮಕ್ಕೂ ೯ ವರ್ಷಗಳ ಅಂತರವಿದೆ. ಆದ್ದರಿಂದ ಹುಡುಗನ ಹೇಳಿಕೆಯಲ್ಲಿ ಸ್ವಲ್ಪಅಂಶ ಮರೆವೆಯಿಂದ ಹೊಂದಿಕೆಬಾರದಂತಾಗಿರಬಹುದು.

ಟರ್ಕಿಯ ಪುನರ್ಜನ್ಮದ ಕತೆಗಳು

ತಾ॥ ೧೪–೬–೧೯೭೩ರಲ್ಲಿ ಹಿಂದೂ ಪತ್ರಿಕೆಯಲ್ಲಿ ಜಿನೋವಾ ನಗರದಲ್ಲಿ ನಾಲ್ಕುದಿನ ನಡೆದ ಪರಾಮಾನಸ ಶಾಸ್ತ್ರಜ್ಞರ ವಿಶ್ವ ಕಾಂಗ್ರೆಸ್ಸಿನ ಚುಟುಕಾದ ವರದಿ ಬಂದಿತ್ತು. ಟರ್ಕಿಸ್ಥಾನದ ಪ್ರಾಧ್ಯಾಪಕ ಬಿಸಾಟ್ ಬೇಯರ್ಸ್ ಎಂಬ ಪರಾಮಾನಸ ಸಂಘದ ಅಧ್ಯಕ್ಷರು ಅಲ್ಲಿ ಹೇಳಿದಂತೆ ತನ್ನ ದೇಶ ಒಂದರಲ್ಲೇ ಸುಮಾರು ೧,೫೦೦ ಪುನರ್ಜನ್ಮದಕತೆಗಳು ವೈಜ್ಞಾನಿಕ ಬಿಗುವಿನಿಂದ ಶೋಧನೆ ಮಾಡಲಾಗಿತ್ತಂತೆ. ಈ ಕತೆಗಳನ್ನು ಅವರಂ ಪುನರ್ಜನ್ಮದ ಕತೆಗಳೆಂದೇ ಕರೆದದ್ದರಿಂದ ಈ ಬಿಗುವಾದ ಶೋಧನೆಯಲ್ಲಿ ಅವುಗಳು ಪುನರ್ಜನ್ಮದ ಕತೆಗಳೆಂದು ಸಮರ್ಥಿಸಲ್ಪಟ್ಟಿರಬೇಕೆಂದು ಊಹಿಸಬೇಕಾಗುತ್ತದೆ. ಮುಸಲ್ಮಾನ

ಧರ್ಮ ಪುನರ್ಜನ್ಮ ಒಪ್ಪದಿದ್ದರೂ, ದೇವರು ಪುನರ್ಜನ್ಮದಕ್ರಮ ಮುಸಲ್ಮಾ
ರಲ್ಲಿಯೂ ನಡೆಸುತ್ತಲೇ ಇದ್ದಾನೆ ಖಂಡಿತ.

೯. ಹಿಲ್ಲ್ ಎಂಬವನ ಹಿಂದಿನ ಜನ್ಮದ ಅನುಭವದ ಸ್ಮರಣೆ

ಇಂಗ್ಲೆಂಡಿನ ಕಾರ್ಡಿಫ್‌ನಗರದ ಸಿ.ಎಫ್.ಎಸ್. ಹಿಲ್ಲ್ ಎಂಬವ ಅಲ್ಲಿ
People ಎಂಬ ಪತ್ರಿಕೆಗೆ ತನ್ನ ಅನುಭವ ಬರೆದಿದ್ದ. ಹಾಗೆ ಆದ ಪ್ರಕಟ
ಯನ್ನು ಕಲ್ಕತ್ತಾದ ಟ್ರುತ್‌ಪತ್ರಿಕೆಯು (೭-೬-೧೯೬೮) ಪ್ರಕಟಿಸಿತ್ತು. ಅವ
ಕತೆ ಸ್ವಾಮಿ ಶಿವಾನಂದರ ಪುನರ್ಜನ್ಮದ ಸಂಗ್ರಹದಲ್ಲೂ ಇದೆ (ಪುಟ ೧೮೭

ಹಿಲ್ಲನು ವಿದ್ಯಾರ್ಥಿಯಾಗಿದ್ದಾಗ ಅವನಿಗೆ ದಕ್ಷಿಣ ಅಮೇರಿಕದ ಬ್ರೆಸಿ
ಮುಂತಾದ ಭಾಗಗಳು ತಾನು ಮುಂಚೆ ಕಂಡವಿದ್ದು ತುಂಬಾ ಪರಿಚಿತವಾದ
ಎಂಬ ಭಾವನೆ ಆಗಾಗ ಬರುತ್ತಿತ್ತು. ಆ ಭಾಗದ ಭೂಗೋಳಶಾಸ್ತ್ರದ ಪಾ
ಗಳು ನಡೆಯುತ್ತಿದ್ದಾಗ ಅಲ್ಲಿನ ದೇಶದ ಮತ್ತು ಜನರ ಜೀವನಕ್ರಮಗಳನ
ಅವ ಅತಿ ಧಾರಾಳವಾಗಿ ವಿವರಿಸುತ್ತಿದ್ದುದು ಅವನ ಉಪಾಧ್ಯಾಯರನ
ಬೆರಗುಮಾಡಿತ್ತು. ಏಕೆಂದರೆ ಅವ ಈ ಜನ್ಮದಲ್ಲಿ ಅಲ್ಲಿಗೆ ಹೋದವನೇ ಅಲ್ಲ
ಅವನಿಗೆ ಆಗಾಗ ಒಂದು ಸ್ವಪ್ನ ಬೀಳುತ್ತಿತ್ತು. ಅದರಲ್ಲಿ ತಾನೊಬ್ಬ ಅಪರಿಚ
ಭೂಪ್ರದೇಶಗಳ ಶೋಧಕನಾಗಿ ಒಬ್ಬನೇ ಕಗ್ಗಾಡುಗಳಲ್ಲಿ ತಿರುಗುತ್ತಿದ್ದೇನೆ
ಆಗ ಫಕ್ಕನೆ ಕಾಡುಜನರ ತಂಡ ಬಂದು ತನ್ನನ್ನು ಮುತ್ತುತ್ತದೆ. ತಾನು ಅವ
ಭಾಷೆಯಲ್ಲೇ ಮಾತನಾಡಿ ಅವರಿಗೆ ಕೊಡಲು ಇನಾಮುಗಳನ್ನು ತೋರಿ
ತನಗೆ ಮುಂದೆ ನೀರಿನ ಆಶ್ರಯವಿರುವ ಎಡೆ ತಿಳಿಸಲು ಕೇಳುತ್ತಿದ್ದೇನೆ; ಆದ
ಅದ್ಯಾವ ಕಾರಣದಿಂದಲೋ ಅವರು ಫಕ್ಕನೆ ತನ್ನಮೇಲೆ ಸಿಟ್ಟಾಗುತ್ತಾರ
ಅವರ ಮುಖಂಡ ತನ್ನ ಭರ್ಜಿ ಎತ್ತಿ ತನ್ನನ್ನು ಇರಿಯುತ್ತಾನೆ; ತನ
ಭಯಂಕರ ನೋವಾಗುತ್ತದೆ; ಫಕ್ಕನೆ ಭಯದಿಂದ ಎಚ್ಚರವಾಗಿ ಸ್ವ
ಮುಗಿಯುತ್ತದೆ, ಎಂಬುದಾಗಿತ್ತು. ಶಾಲೆಬಿಡುವ ಪ್ರಾಯಬಂದಾಗ
ಅನುಭವಗಳು ಬರುವುದೂ ನಿಂತವು.

ಹಿಲ್ಲನು ದೊಡ್ಡವನಾದಾಗ ಇಂಗ್ಲೆಂಡಿಂದ ದಕ್ಷಿಣಅಮೇರಿಕದ ಬ್ರೆಸಿ
ನಗರಕ್ಕೆ ಮತ್ತು ದಕ್ಷಿಣಅಮೇರಿಕಕ್ಕೆ ಟಪ್ಪಾಲು ಕೊಂಡುಹೋಗುವ ಒಂ
ಸ್ಟೀಮರ್ ಕಂಪೆನಿಯಲ್ಲಿ ಉಗ್ರಾಣಾಧಿಕಾರಿಯಾದ. ಅದರಿಂದಾಗಿ ದಕ್ಷಿ
ಅಮೇರಿಕದ ರಿಯೋಡಿಜನೆರಿಯೋ, ಸಾಂಟೋಸ್, ಬಿನೋಆರೆಸ್ ನ
ಗಳಿಗೆ ಆಗಾಗ ಹೋಗುವ ಪ್ರಸಂಗ ಬರುತ್ತಿತ್ತು. ಆ ಪಟ್ಟಣಗಳಲ್ಲಿ ಅ

ಸಂಚರಿಸುತ್ತಿದ್ದಾಗ ಆವುಗಳ ಬೀದಿಗಳು ತನಗೆ ಹಿಂದಿನಿಂದ ತುಂಬಾ ಪರಿಚಿತವಾದವು ಎಂಬ ಭಾವನೆ ಬರುತ್ತಿತ್ತು. ಮುಂದೆ ಬರುವ ಬೀದಿಗಳ ಹೆಸರನ್ನು ಮುಂಚೆಯೇ ಸರಿಯಾಗಿ ಊಹಿಸಲಿಕ್ಕೂ ಆಗುತ್ತಿತ್ತು. ಅಲ್ಲಿನ ಮುಖ್ಯಕಟ್ಟಡಗಳೆಲ್ಲಾ ಪರಿಚಿತವಾಗಿ ತೋರುತ್ತಿದ್ದವು.

ಒಮ್ಮೆ ಸಾಂಟೋಸ್ ನಗರದಲ್ಲಿ ಒಬ್ಬ ಡೆನ್ಮಾರ್ಕಿನ ಪ್ರವಾಸಿ ಮತ್ತು ಗ್ರಂಥಕರ್ತ ಆವರ ಸ್ಟೀಮರನ್ನು ಹತ್ತಿದ. ಆಮೇಲೆ ಒಮ್ಮೆ ಅವ ಹಿಲ್ಲನ ಮುಖವನ್ನು ಪುನಃಪುನಃ ತೀಕ್ಷ್ಣವಾಗಿ ನೋಡಿದ. ಅಂದು ಸಂಜೆಗೆ ಅವನನ್ನು ತನ್ನ ಕೋಣೆಗೆ ಕರೆಸಿಕೊಂಡು ಹೇಳಿದ "ಒಂದು ಆಶ್ಚರ್ಯಕರವಾದ ರೂಪದ ಹೊಂದಿಕೆಯಿದ್ದಂತೆ ಕಾಣುತ್ತದೆ. ಅಥವಾ ಮತ್ತೇನೋ ತಿಳಿಯದು" ಎಂದು ಹೇಳುತ್ತಾ ಹಿಲ್ಲನ ಎದುರಿಗೆ ಕಿತ್ತಲೆಹಣ್ಣಿನ ಗಾತ್ರಕ್ಕೆ ಚಿರುಟಿಸಲ್ಪಟ್ಟಿದ್ದ ಬಿಳಿಜನರೊಬ್ಬನ ತಲೆಬುರುಡೆ ಇಟ್ಟ. "ಇದನ್ನು ನಾನು ಎಮೇಸನ್ ಪ್ರಾಂತ್ಯದ ಕಾಡುಜನರಿಂದ ಕೊಂಡುಕೊಂಡಿದ್ದೆ" ಎಂದ. ಆ ಪ್ರಾಂತ್ಯದ ಒಂದುವರ್ಗದ ಕಾಡುಜನರು ಮನುಷ್ಯರ ತಲೆಕಡಿದು ಅದು ಆಕಾರಕೆಡದಂತೆಯೇ ಚಿರುಟಿಸುವ ಗುಟ್ಟು ಬಲ್ಲವರಾಗಿದ್ದರು. ಹಾಗೆ ಮಾಡುತ್ತಿದ್ದರು.

ಹಿಲ್ಲನ ಮೈ ಜುಂ ಎಂದಿತು. ಅವನಿಗೆ ಕೂಡಲೆ ಅರ್ಥವಾಯಿತು, ಆ ತಲೆಬುರುಡೆ ತನ್ನ ತಲೆಯನ್ನೇ ಹೋಲುತ್ತದೆ ಎಂದು. ಅವನಿಗೆ ಚಿಕ್ಕಂದಿನಲ್ಲಿ ಬರುತ್ತಿದ್ದ ಭೀಕರ ಸ್ವಪ್ನಗಳು ತನ್ನ ಹಿಂದಿನ ಜನ್ಮದ ಅನುಭವವೇ ಆಗಿತ್ತು ಎಂಬುದೂ ಫಕ್ಕನೆ ತಲೆಗೆ ಹೊಳೆಯಿತು. ಎಂದರೆ ಹಿಂದಿನ ಜನ್ಮದಲ್ಲಿ ಅವನೇ ಎಮೇಸನ್ನಿನ ಅಪರಿಚಿತ ಪ್ರಾಂತ್ಯಗಳ ಶೋಧನೆಯಲ್ಲಿದ್ದವ. ಆಗ ಕಾಡುಜನರಿಂದ ತಿವಿಯಲ್ಪಟ್ಟು ಅವರು ಅವನ ತಲೆಕಡಿದು ಸುರುಟಿಸಿರಬೇಕು. ಕ್ರಮೇಣ ಅದು ಡೆನ್ಮಾರ್ಕಿನ ಪ್ರವಾಸಿಗೆ ಮಾರಲ್ಪಟ್ಟಿತು, ಎಂದು ಅರ್ಥಮಾಡಿಕೊಂಡ. ಹೀಗೆ ತನ್ನ ಪೂರ್ವಜನ್ಮದ ತಲೆ ತನಗೆ ಕಾಣಲು ಸಿಕ್ಕಿದ ಸಂದರ್ಭ ಪ್ರಾಯಶಃ ಹಿಲ್ಲನಿಗೆ ಮಾತ್ರ ದೊರೆತದ್ದಿರಬೇಕು!

ಜನರು ಮೃತರಾದಾಗ ಅವರ ಜೀವಾತ್ಮರು ತಾವು ಬಹಳಕಾಲ ಬಾಳಿಕೊಂಡಿದ್ದ ತಮ್ಮ ದೇಹವೆಂಬ ಮನೆಬಿಟ್ಟು ದೇಹರಹಿತರಾಗಿರಲು ಬಯಸುವುದಿಲ್ಲ. ಬಾಳುವ ಆಸೆಯಿಂದ ಅಲ್ಲೆ ಸುಳಿಯುವುದುಂಟು. ದೇಹ ಹುಗಿದು ಅಥವಾ ಸುಟ್ಟ ನಂತರ ಅದು ನಾಶವಾದಾಗ ಆ ದೇಹವನ್ನು ಮರೆಯುತ್ತಾರೆ. ಆದರೆ ಹಿಲ್ಲನ ಹಿಂದಿನ ತಲೆ ಹಾಳಾಗದೆ ಉಳಿದದ್ದು ಅವನ ಸ್ವಪ್ನಗಳಿಗೂ, ಪುನಃ ದಕ್ಷಿಣಅಮೇರಿಕದ ಪ್ರವಾಸಗಳಿಗೂ ಕಾರಣವಾಗಿರಬಹುದೋ ಏನೋ!

೧೦. ಜೋರ್ಜ ಕೇಸ್ಪರನ ಪೂರ್ವಜನ್ಮದ ನೆನಪುಗಳು

ಜೋರ್ಜ ಕೇಸ್ಪರನೆಂಬವ ತನ್ನ ಪೂರ್ವಜನ್ಮದ ನೆನಪುಗಳನ್ನು ಲಂಡನ್ನಿ ಸಂಡೆ ಎಕ್ಸ್‌ಪ್ರೆಸ್ ಪತ್ರಿಕೆಗೆ ಬರೆದು, ಅದು ಪ್ರಕಟವಾಗಿತ್ತು. ಅವ ೧೮೮ ರಲ್ಲಿ ಜನಿಸಿದ್ದ. ಚಿಕ್ಕವನಾಗಿದ್ದಂದಿನಿಂದ ನಿದ್ರೆಯಲ್ಲಿ ಕೆಲವುವೇಳೆ ಬರ್ಮಿಭಾ ಮಾತಾಡುತ್ತಿದ್ದ. ೧೯೦೭ರಲ್ಲಿ ಅವ ಸೈನ್ಯಕ್ಕೆ ಸೇರಿ ೧೯೧೯ರಲ್ಲಿ ಸೈನ್ಯದೊಡ ಬರ್ಮದ ಮ್ಯೆಮಿಯೋಕ್ಕೆ ಹೋದ. ಅಲ್ಲಿ ಅವನಿಗೆ ತಾನು ಬರ್ಮಾದೇಶದ ಮುಂಚೆ ಬಾಳಿಕೊಂಡಿದ್ದೆ. ಬರ್ಮಿಭಾಷೆ ಮಾತಾಡುತ್ತಿದ್ದೆ. ಅಲ್ಲಿನ ಪ್ರಸಿದ ವಾದ ಇರಾವದೀ ನದಿಯನ್ನು ಮುಂಚೆ ಕಂಡಿದ್ದೆ ಎಂಬ ಭಾವನೆಗಳು ಆಗಾ ಬರುತ್ತಿದ್ದವು. ಆಗ ಅವ ಇರಾವದಿಯನ್ನು ದಾಟಿರದಿದ್ದರೂ ತನ್ನ ಸೈನ್ಯ ಲಾನ್ಸ್‌ಕೊರ್ಪೋರಲ್ ಕೆರ್‍ರಿಗೋನಿನೊಡನೆ ಇರಾವದಿನದಿಯ ಆಚೆ ಒಂದ ಅತಿದೊಡ್ಡ ದೇವಸ್ಥಾನವಿದೆ, ಅದರಲ್ಲಿ ಅತಿದೊಡ್ಡ ಗಂಟೆಯಿದೆ, ದೇವಸ್ಥಾನ ಪೌಳಿಯು ದೊಡ್ಡಗೋಡೆ ಮೇಲಿಂದಕೆಳಗಿನವರೆಗೂ ಬಿರುಕುಬಿಟ್ಟಿದೆ, ಎಂದ ಹೇಳಿದ್ದ. ಅನಂತರ ವಿಚಾರಿಸಿದಾಗ ಅದೆಲ್ಲ ನಿಜವೆಂದು ತಿಳಿದುಬಂತು. ಆದ ರಿಂದ ಕೇಸ್ಪರನು ಹಿಂದಿನ ಜನ್ಮದಲ್ಲಿ ಬರ್ಮಾದಲ್ಲಿ ಹುಟ್ಟಿ ಬೆಳೆದಿದ್ದು ಅಲ್ಲಿ ಭಾಷೆಯನ್ನೂ ಕೆಲವು ನೆನಪುಗಳನ್ನೂ ಪುನರ್ಜನ್ಮದಲ್ಲಿ ಪಡೆದಿದ್ದ ಎಂದ ಊಹಿಸಬೇಕಾಗುತ್ತದೆ (ಈ ಕತೆ ಸ್ವಾಮಿ ಶಿವಾನಂದರ ಸಂಗ್ರಹದಲ್ಲಿದೆ)

೧೧. ಕಾಶಿಯ ಬ್ರಾಹ್ಮಣಹುಡುಗ ದಕ್ಷಿಣಅಮೇರಿಕದ ಕಗ್ಗಾಡಲ್ಲಿ ಪುನರ್ಜನ್ಮ ತಾಳಿದ

ದಕ್ಷಿಣ ಅಮೇರಿಕದ ಎಮೇಸನ್ ಪ್ರಾಂತ್ಯದ ಪೇರು ಎಂಬಲ್ಲಿನ ಕಗ್ಗಾಡ ಗಳಲ್ಲಿ ಅಯುಮಾರಾ ಇಂಡಿಯನ್ನರು ಎಂಬ ನಿವಾಸಿಗಳು ವಾಸಿಸುತ್ತಾರೆ ಅವರು ಎಷ್ಟು ಅನಾಗರಿಕರೆಂದರೆ ಅವರಿಗೆ ಅವರ ದೇಶದ ಹೆಸರು ಕೂ ತಿಳಿಯದು. ರಾಷ್ಟ್ರದ ರಾಜಕೀಯ ಭಾಷೆಯಾದ ಸ್ಪೇನಿಶ್ ಕೇಳಿದವರಲ್ಲ ಅಂಥವರ ಒಂದು ಹಳ್ಳಿಯ ಇಗರ್ಜಿ ನಡೆಸಲಿಕ್ಕೆ ಒಬ್ಬಗುರು, ಲಿಮಾ ಪಟ್ಟ ದಿಂದ ನೇಮಕಗೊಂಡು ಬಂದ. ಅಲ್ಲಿ ಅವನೊಬ್ಬನೇ ನಾಗರಿಕ. ಒಮ್ಮೆ ಅವನಲ್ಲಿಗೆ ಅಯುಮಾರಾ ಗಂಡಹೆಂಡತಿ ತಮ್ಮ ಏಳು ವರ್ಷದ ಮಗನೊಡ ಬಂದರು. ಹುಡುಗನಿಗೆ ಏನೋ ಭೂತಬಾಧೆಯಿದೆ; ತನ್ನ ತಂದೆ ತಾಯಿ ಬೆನಾರಸಲ್ಲಿದ್ದಾರೆ, ತನಗೆ ಅಲ್ಲಿಗೆ ಹೋಗಬೇಕು ಎಂದು ಆಗಾಗ ಅಳುತ್ತಾನೆ ಎಂದರು. ಪಾದ್ರಿಯು ಆ ಹುಡುಗನೊಡನೆ ಬೆನಾರಸ್ ಎಲ್ಲಿದೆ, ಮುಂತಾದ

ಪ್ರಶ್ನೆಗಳನ್ನು ಕೇಳಿದ್ದಕ್ಕೆ ಅದು ಇಂಡಿಯಾದಲ್ಲಿದೆ, ಅಲ್ಲಿರುವ ತನ್ನ ಬ್ರಾಹ್ಮಣ ತಂದೆ ತಾಯಿಗಳ ಹೆಸರು, ಬೀದಿಯ ಹೆಸರು ಎಲ್ಲ ಹೇಳಿದ. ಅವನ ತಂದೆ ಅವನ ಏಳನೆವರ್ಷದ ಹುಟ್ಟುಹಬ್ಬಕ್ಕೆ ಅವನಿಗೆ ಆಡಲಿಕ್ಕೆ ಒಂದು ಆಡು ಎಳೆಯುವ ಗಾಡಿ ಕೊಟ್ಟು "ಹಿತ್ತಲಲ್ಲಿ ಮಾತ್ರ ಆಡು, ಹೊರಗೆ ರಸ್ತೆಗೆ ಹೋಗಬೇಡ" ಎಂದುಎಚ್ಚರಿಸಿದ್ದನಂತೆ. ಹುಡುಗ ಹಗಲೆಲ್ಲ ಹಿತ್ತಲಲ್ಲಿ ಆಡಿ ಬೇಸತ್ತು ಸಂಜೆಯವೇಳೆ ತಂದೆಯ ಮಾತುಮೀರಿ ಹೊರಗೆ ರಸ್ತೆಗೆ ಗಾಡಿಬಿಟ್ಟ. ಬೀದಿಗೆ ಇಳಿದವನೇ ಒಂದುಕಾರಿನ ಅಡಿ ಬಿದ್ದುಸತ್ತ. ಪಾದ್ರಿಯೊಡನೆಯೂ, ತನಗೆ ತನ್ನ ಆ ಮನೆಗೆ ಹೋಗಬೇಕೆಂದು ಪುನಃಪುನಃ ಹೇಳಿ ಅತ್ತ. ಏಳನೆ ವರ್ಷದಲ್ಲಿ ಮರಣ ಹೊಂದಿದ ಹುಡುಗನಿಗೆ ಪೇರುವಿನಲ್ಲಿ ಏಳನೆ ವರ್ಷಕ್ಕೆ ಕಾಲಿಟ್ಟೊಡನೆ ಈ ಹಿಂದಿನ ವಿಚಾರ ಸ್ಮರಣೆಗೆ ಬಂದು ಹಿಂದಿನ ಉತ್ತಮ ಜೀವನದ ನೆನಪಿಂದ. ಅಲ್ಲಿಗೆ ಹೋಗಬೇಕೆಂದು ಕಾಡತೊಡಗಿದ.

ಗುರುವಿಗೆ ಆತ್ಯಾಶ್ಚರ್ಯವಾಯಿತು. ಹುಡುಗನ ಹೇಳಿಕೆಯಲ್ಲಿ ಯಾವ ತರದ ಕೃತಕತೆಯೂ ಮೋಸವೂ ಇಲ್ಲವೆಂಬುದು ಸ್ಪಷ್ಟ ತೋರಿದ್ದರಿಂದ ಅವ ಈ ವಿವರಗಳನ್ನೆಲ್ಲ ಲಿಮಾ ನಗರದಲ್ಲಿರುವ ತನ್ನ ಮಿತ್ರ ಮಾನಸ ಶಾಸ್ತ್ರದಲ್ಲಿ ತುಂಬಾ ಆಸಕ್ತಿಯಿದ್ದವ, ಆಗಸ್ಟೋ ಎಂಬ ನ್ಯಾಯವಾದಿಗೆ ಬರೆದು ತಿಳಿಸಿದ. ಅಗಸ್ಟೋ ಬೆನಾರಸ್ ಮುನ್ಸಿಪಾಲಿಟಿಗೆ ಆ ಬ್ರಾಹ್ಮಣಕುಟುಂಬದ ಯಜಮಾನನಹೆಸರು ಬಾಳಿಕೊಂಡಿರುವ ಮತ್ತು ಮೃತರಾದ ಮಕ್ಕಳ ವಿಚಾರಗಳನ್ನು ದಯಮಾಡಿತಿಳಿಸಬೇಕು, ಆ ಕುಟುಂಬದವರು ಅಗತ್ಯವಾಗಿ ತಿಳಿಯಬೇಕಾದ ಒಂದು ವಿಚಾರ ತನಗೆ ತಿಳಿದಿದೆ, ಅವರಿಗೆ ತಿಳಿಸಬೇಕಾಗಿದೆ, ಆದ್ದರಿಂದ ವಿವರ ಕೇಳಿದ್ದು, ಎಂದು ಪತ್ರ ಬರೆದ. ಹಲವುತಿಂಗಳುಗಳ ಮೇಲೆ ಉತ್ತರ ಬಂತು. ಆ ಬ್ರಾಹ್ಮಣ ಕುಟುಂಬ ಆ ಬೀದಿಯಲ್ಲೇ ಇದೆ ನಿಜ. ಅವರ ಹಿರೇ ಹುಡುಗ ಏಳನೆ ಜನ್ಮದಿನದಂದು ಕಾರಿನ ಅಡಿ ಬಿದ್ದು ಮೃತನಾಗಿದ್ದ. ಬೇರೆ ಕೆಲವು ಮಕ್ಕಳಿದ್ದಾರೆ, ಎಂದು ಮುಂತಾಗಿ ಅದರಲ್ಲಿತ್ತು. ಆ ವಿವರಗಳೆಲ್ಲ ಹುಡುಗ ಹೇಳಿದವಕ್ಕೆ ಸಂಪೂರ್ಣ ಹೊಂದಿಕೆಯಾಗಿದ್ದವು. ಈ ಕತೆಯನ್ನು ಆ ನ್ಯಾಯವಾದಿ ಲಿಮಾದ ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ.

ಜೀನ್ ಬಗ್ಲೆರ್ ಎಂಬವರು ತಿರುವನ್ನಾಮಲೆಯ ರಮಣಾಶ್ರಮದ ಪ್ರಕಟಣೆಯಾದ Mountain Path ಎಂಬ ಮಾಸಪತ್ರಿಕೆಯಲ್ಲಿ (Nov. 3, 1966) From the Ganges to the Amazon ಎಂಬ ಶಿರೋನಾಮದ ಕೆಳಗೆ ಈ ವಿಚಾರ ಪ್ರಕಟಿಸಿದರು. "ಮತ್ತೇನಾಯಿತೆಂದು ನನಗೆ ತಿಳಿಯದು.

ಏಕೆಂದರೆ ಅಷ್ಟರವರೆಗೆ ಲಿವಾದಲ್ಲಿದ್ದ ನಾನು ಆ ಪಟ್ಟಣ ಬಿಟ್ಟು ಬಂದೆ. ಈ ಘಟನೆ ನಡೆದದ್ದು ೧೯೪೬ರಲ್ಲಿ" ಎಂದೂ ಬರೆದಿದ್ದರು.

ಈ ಅಧ್ಯಾಯದಲ್ಲಿ ಪುನರ್ಜನ್ಮ ಖಂಡಿತ ಇದೆ ಎಂಬುದಕ್ಕಾಗಿ, ಪತ್ರಿ ಗಳಲ್ಲಿ ಮುಂತಾಗಿ ಪ್ರಕಟವಾದ ಸಾವಿರಾರು ಅಂಥ ಕತೆಗಳಲ್ಲಿ ಸ್ವಲ್ಪವನ್ನು ಮಾದರಿಯಾಗಿ ಇಲ್ಲಿ ಕೊಡಲಾಯಿತು. ಇನ್ನು ಇಂಥ ಕತೆಗಳಿಂದ ಏನಾದರೂ ಪಾಠ ಕಲಿಯಲು ಸಾಧ್ಯವೇ ಎಂಬುದನ್ನೂ ನೋಡುವ.

೩. ಮರಣಕಾಲದ ಬಯಕೆಯ ಜನ್ಮಗಳು

ಭಗವದ್ಗೀತೆಯಲ್ಲಿ ಹೇಳುತ್ತದೆ (೮,೬), "ಎಲೆ ಅರ್ಜುನ! ಮರಣಕಾ ದಲ್ಲಿ ಯಾವ ಭಾವನೆಯನ್ನು ಸ್ಮರಿಸುತ್ತ ದೇಹ ತ್ಯಜಿಸುತ್ತಾನೆಯೋ, ಅ ಯಾವಾಗಲೂ ಆ ಭಾವನೆಯಿಂದ ಕೂಡಿರುವುದರಿಂದ ಮರಣದ ಅನಂತ ದಲ್ಲಿಯೂ ಅದನ್ನೇ ಹೊಂದುವನು", ಎಂದು.

ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಂ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ ॥

ಎಂದರೆ ಸಾಯುವವನಲ್ಲಿದ್ದ ಭಾವನೆಯು ಏಕಮುಖದ್ದೂ ಬಲಿಷ್ಠವೂ ಆಗಿದ್ದರೆ ಅದರಂತೆ ಮುಂದೆ ಜನ್ಮ ಲಭಿಸುತ್ತದೆ.

೧. ಚಿಕ್ಕಹುಡುಗಿಗೆ ಬಯಕೆಯಂತೆ ಪುನರ್ಜನ್ಮ

ಒಬ್ಬಳು ಮೂರೂವರೆ ವರ್ಷದ ಹುಡುಗಿ ಬರ್ಮಾದಲ್ಲಿ ಅಕ್ಟೋಬರ ೧೯೩೯ರಲ್ಲಿ ಮೃತಳಾದಳು. ಅವಳ ಮನೆ ಪಂಜಾಬಿನ ಅಮೃತಸರದಲ್ಲಿತ್ತು ಅದರಲ್ಲಿ ಅವಳ ಅಣ್ಣ ಸುಂದರಸಿಂಗ್ ಮತ್ತು ಅತ್ತಿಗೆ ಇದ್ದರು. ಈ ಮಗ ವಿಗೆ ಅವರೆಂದರೆ ತುಂಬಾ ಪ್ರೀತಿಯಿತ್ತು. ಹುಡುಗಿ ಸಾಯುವ ಕಾಲದ ಅವರನ್ನು ನೋಡಬೇಕೆಂದು ಬಹಳವಾಗಿ ಬಯಸಿತ್ತು. ಮೇ ೧೯೪೦ರಲ ಹುಡುಗಿ ಅಮೃತಸರದ ಇನ್ನೊಬ್ಬರ ಮನೆಯಲ್ಲಿ ಜನಿಸಿತು. ಅದಕ್ಕೆ ಮಹೀಂ ಕುಮಾರಿ ಎಂದು ಹೆಸರಿಟ್ಟರು. ಮೂರು ವರ್ಷ ಕಳೆದ ಮೇಲೆ ಹುಡು ನನ್ನನ್ನು ನನ್ನ ಮನೆಗೆ ಕರೆದುಕೊಂಡು ಹೋಗಿರಿ, ನನಗೆ ನನ್ನ ಅತ್ತಿಗೆಯನ್ನೂ ಅಣ್ಣನನ್ನೂ ನೋಡಬೇಕು ಎಂದು ಹೇಳುತ್ತ ಆಗಾಗ ಹಠಮಾಡುತ್ತಿತ್ತು ಅವರೆಲ್ಲಿದ್ದಾರೆ ಎಂದು ಕೇಳಿದ್ದಕ್ಕೆ, ತಾನು ಕರಕೊಂಡುಹೋಗುತ್ತೇನೆ, ಎನ ತ್ತಿತ್ತು. ಅವಳ ಹಠ ವಿಪರೀತವಾದಾಗ ತಾಯಿ ಬೇರೆ ಉಪಾಯ ಕಾಣ

ಂದುದಿನ ಹುಡುಗಿಯೊಡನೆ ಹೊರಟಳು. ಅವರಿದ್ದ ಮಂಶ್ಕಿಮೊಹಲ್ಲದಿಂದ ಚ್ಚಾ ಬೆರಿವಾಲ ಎಂಬ ವಠಾರಕ್ಕೆ ಹುಡುಗಿ ತಾಯಿಯನ್ನು ಕರಕೊಂಡುಹೋಗಿ ಲ್ಲಿ ಒಂದುಮನೆಯ ಬಾಗಿಲುತಟ್ಟಿತು ; ಅತ್ತಿಗೆಯನ್ನು ಕರೆಯಿತು. ಮನೆಯ ೃಹಿಣಿ ನೆರೆಮನೆಯಲ್ಲಿದ್ದವಳು ಅದನ್ನು ಕಂಡು ಬಂದಳು. ಮಹೀಂದ್ರ ಮಾರಿ ಒಡನೆಯೇ ಅವಳ ಕಾಲುಗಳನ್ನು ಅಪ್ಪಿಕೊಂಡು ಅತ್ಯಂತ ಂತೋಷ ತೋರಿಸಿತು. ಅವಳಮಗ ಮತ್ತು ಮನೆಯಲ್ಲಿದ್ದ ಇತರಬಂಧುಗಳ ುರುತನ್ನೂ ಹೇಳಿತು. ತನ್ನ ಚಿನ್ನದ ಸರ ಮತ್ತು ಇತರ ಸಾಮಾನುಗಳನ್ನು ುರುತಿಸಿತು. ಮರಣದ ಕಾಯಿಲೆಯಲ್ಲಿ ಮಲಗಿದ್ದಾಗ ತೆಗೆದಿದ್ದ ತನ್ನಚಿತ್ರ ನ್ನೂ ಗುರುತಿಸಿತು. ಹುಡುಗಿಯ ಮರಣಕಾಲದ ತೀವ್ರವಾದ ಬಯಕೆಯೇ ವಳು ಅಮೃತಸರದಲ್ಲಿ ಜನ್ಮವೆತ್ತುವಂತೆ ಮಾಡಿರಬೇಕಲ್ಲವೇ? (ಈ ಕತೆ ್ವಾಮಿ ಶಿವಾನಂದರ ಸಂಗ್ರಹದಲ್ಲಿದೆ, ಪುಟ ೮೭)

೨. ತಾಯಿಯ ಕೇಳಿಕೆಯಂತೆ ಮುನ್ನು ಪುನರ್ಜನ್ಮದಲ್ಲಿ ಹಿಂದೆ ಬಂದಳು

ಡೆಹರಾಡೂನಿನ ಒಂದು ಬಹಳ ಐಶ್ವರ್ಯವಂತ ಮನೆಯಲ್ಲಿ ಮುನ್ನು ಎಂದು ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಹಿರಿಯಮಗಳು ತಂದೆ ತಾಯಿಗಳಿಗೆ ಬಹಳ ಪ್ರಿಯವಾಗಿದ್ದಳು. ೧೯೪೫ರಲ್ಲಿ ಎಂ.ಎ. ಕಲಿಯುತ್ತಿದ್ದಾಗ ಅವಳಿಗೆ ನಾಲಿಗೆಯ ಏಡಿ ಹುಣ್ಣಿನರೋಗ ಬಂದು ಬೇಗ ಮೃತಳಾದಳು. ಅನಂತರ ೨೦೦೦ ಮೈಲುದೂರದ ನಾಸಿಕದಲ್ಲಿ ಜನಿಸಿದಳು. ಅವಳತಂದೆ ಮೃತನಾದ. ದೈವಿಸಂಕಲ್ಪದಿಂದ ತಾಯಿ ತನ್ನ ಏಕಮಾತ್ರ ಚಿಕ್ಕಮಗಳೊಡನೆ ಡೆಹರಾಡೂನಿಗೆ ಒಂದು ಕೆಲಸಹೊಂದಿ ಹೋದಳು. ಒಮ್ಮೆ ಅಲ್ಲಿ ನಡೆದ ಒಂದುಯಜ್ಞಕ್ಕೆ ಈ ತಾಯಿ ಮಗಳೊಡನೆಹೋದಾಗ ಮಗಳು ಹಿಂದಿನಜನ್ಮದ ತಂಗಿಯನ್ನು ಕಂಡು "ನಾನು ನಿನ್ನ ಅಕ್ಕ ಮುನ್ನು ಅಲ್ಲವೇ" ಎಂದುಹೇಳಿದಳು. ಹಿಂದಿನ ಕುಟುಂಬ ನವರ ವಿಚಾರ ಪ್ರಶ್ನೆಗಳಮಳೆಯನ್ನೇ ಸುರಿಸಿದಳು. ಹಿಂದಿನ ಆಪ್ತರ ವಿಚಾರ ಬಹಳ ಮಾತನ್ನಾಡಿದಳು ; ತಂಗಿಯನ್ನು ಅತ್ಯಾಶ್ಚರ್ಯದಲ್ಲಿ ಮುಳುಗಿಸಿ ಬಿಟ್ಟಳು. ಅವಳು ನಿಜಕ್ಕೂ ತನ್ನ ಅಕ್ಕ ಆಗಿದ್ದವಳು ಎಂಬ ಭಾವನೆ ಬಂದು ತಂಗಿ ಅವಳನ್ನು ತಬ್ಬಿಕೊಂಡಳು. ತನ್ನ ಮನೆಗೆ ಕಾರಿನಲ್ಲಿ ಕರಕೊಂಡು ಹೋದಳು. ಅಲ್ಲಿ ಚಿಕ್ಕಹುಡುಗಿಯ ಗಡಿಬಿಡಿ ಅಷ್ಟಿಷ್ಟಲ್ಲ. ಮನೆಯನ್ನೆಲ್ಲ ಸುತ್ತಾಡುತ್ತ ತಂದೆತಾಯಿಗಳೊಡನೆ ಎಷ್ಟೆಲ್ಲ ಹಿಂದಿನ ಜನ್ಮದ ಕುರುಹುಗಳನ್ನು

ಹೇಳಿದಳೆಂದರೆ ಆವರು ದಿಗ್ಭ್ರಾಂತರಾದರು. ಹಿಂದಿನ ನೆನಪೆಲ್ಲ ಅವರ ಉಕ್ಕಿ ಬಂತು. "ಅಮ್ಮ, ನಾನುಹೋಗುವಾಗ ಹಿಂದೆ ಬರಬೇಕು, ಎಂದಿ ಖಂಡಿತಬರುತ್ತೇನೆ ಎಂದು ನಾನು ಮಾತುಕೊಟ್ಟಿದ್ದೆ. ಬಂದಿದೇನೆ ನೋಡ ಏಕೆ ಮಾತಾಡುವುದಿಲ್ಲ?" ಎಂದಾಗ ಮುದಿ ತಾಯಿ ಕಣ್ಣುಗಳಲ್ಲಿ ನೀ ಸುರಿಸುತ್ತ ಮಗುವನ್ನು ತಬ್ಬಿಕೊಂಡಳು. ಇಪ್ಪತ್ತುವರ್ಷಗಳ ಕಾಲವೆಲ್ಲ ತ ತಾಯಿಗಳಿಗೆ ಅತ್ಯಂತ ಪ್ರಿಯವಾಗಿಬಾಳಿದ್ದ ಆ ಮನೆ, ಮತ್ತು ಆ ತಾ ಹುಡುಗಿಗೆ ತನ್ನ ಈಜನ್ಮದ ತಾಯಿಗಿಂತ ಎಷ್ಟೋ ಹೆಚ್ಚುಪ್ರಿಯವಾಗಿ ತೋ ದಳು. ಆದರೆ ತನ್ನ ಪತಿಯನ್ನು ಕಳಕೊಂಡಿದ್ದ, ಬೇರೆ ಮಕ್ಕಳೂ ಇದ್ದಿ ಆ ಹೊಸತಾಯಿಗೆ ಇದು ಉಭಯ ಸಂಕಟಕ್ಕೀಡು ಮಾಡಿತು. ಆದ್ದರಿಂದ ಹಿಂದಿನ ಜನ್ಮದ ನೆನಪು ಬಾರದಿರುವುದೇ ಲೇಸು!

ಈ ಹುಡುಗಿ ಸ್ವಾಮಿಶಿವಾನಂದರ ಆಶ್ರಮಕ್ಕೆ ಹಿಂದಿನ ಜನ್ಮದ ಮ ಈ ಜನ್ಮದ ಇಬ್ಬರೂ ತಾಯಂದಿರೊಡನೆ ಹೋಗಿತ್ತು. ಸ್ವಾಮಿಜೀಯವ ಅವರಿಂದಲೇ ಈಕತೆ ಕೇಳಿದ್ದು. ಹೀಗಾಗಿ ಅದು ಅವರ ಸಂಗ್ರಹಸೇರಿತು. ಕತೆಯಲ್ಲಿ ತಾಯಿ ಏಕೆ ಮಗಳು ಸಾಯುವಾಗ ಹಿಂದೆ ಬಾ ಎಂದಳು ಎಂಬು ತಿಳಿಯುವುದಿಲ್ಲ. ದೇವರಲ್ಲಿ ಮತ್ತು ಶಾಸ್ತ್ರದಲ್ಲಿ ಶ್ರದ್ಧೆ ಬಹಳಕಡಿಮೆಯಾ ತ್ತಿರುವಾಗ, ಅಪರೂಪಕ್ಕೆ ಕೆಲವು ಪುನರ್ಜನ್ಮದಕತೆಗಳು ಪ್ರಕಟವಾಗಲಿ, ವರಾದರೂ ಪ್ರಯೋಜನ ಹೊಂದಲಿ, ಎಂಬುದು ದೈವಸಂಕಲ್ಪವಿರಬಹುದ

೩. ಲಲಿತ ಬೇಕೆಂದೇ ಅಣ್ಣನ ಮಗಳಾಗಿ ಜನಿಸಿದಳು

ಪಿ. ಎಲ್. ಭಟ್ಟರ Yogic Powers and God Realisati (Bhavans) ಎಂಬ ಪುಸ್ತಕದಿಂದ ಈ ಪುನರ್ಜನ್ಮದ ಕತೆ ಸಂಗ್ರಹಿಸಿದ್ದಾಗಿ (ಪುಟ 132). ಬೊಂಬಾಯಿಯ ನೇತ್ರ ವೈದ್ಯ ಡಾ॥ ಆಜಗೋಂಕಾ ಎಂಬವರ ಪತ್ನಿ ಲಲಿತ ಜೂನ್ ೭, ೧೯೫೨ ರಲ್ಲಿ ಏಡಿಹುಣ್ಣಿನ ರೋಗದಿ ಮೃತಳಾದಳು. ಅವಳಿಗೆ ದೇವರಲ್ಲಿ ಭಕ್ತಿಯಿತ್ತು. ೨೫ ವರ್ಷಗಳಿಂದ ಪೌರ್ಣಮಿ ವ್ರತದ ಅಂಗವಾಗಿ ಆವಳು ಅಂದು ಉಪವಾಸ ಮಾಡುತ್ತಿದ್ದ ಆವಳು ಮರಣ ಹೊಂದಿದುದು ಹಾಗೆ ಉಪವಾಸವಿದ್ದ ದಿನ. ಅವಳ ದಹನ ನಡೆಯಿತು. ಮರುದಿನ ಬೆಳಗಿನ ಜಾವಕ್ಕೆ ಅವಳ ಅಣ್ಣ ಆರ್. ಸಮಂತರೆಂಬ ನ್ಯಾಯವಾದಿ ತಮ್ಮ ಭಾವನೊಡನೆ ಅವಳ ಕ್ರಿಯಾಸಂಸ್ಕಾ ಅವಳ ಅಸ್ಥಿಯೊಡನೆ ನಾಸಿಕಕ್ಕೆ ಹೊರಡಬೇಕೆಂದಿದ್ದವರು ಬಹಳ ರಾತ್ರಿಯ

ವಾಗಲೇ ಎದ್ದು ಸ್ನಾನಮುಗಿಸಿದರು. ಆಗ ಅವರಿಗೆ ಸತ್ತ ತಂಗಿ ತೋರಿಕೊಂಡಳು. ಅತ್ಯಂತ ಸ್ಪಷ್ಟವಾಗಿ ಕಾಣಿಸಿಕೊಂಡ ಅವಳನ್ನು ಕಂಡು, ತನ್ನನ್ನು ತಾನು ನಂಬಲಾರದೆ, ಇದು ಸ್ವಪ್ನವಲ್ಲವಲ್ಲ ಎಂಬುದನ್ನು ಖಂಡಿತ ಮಾಡಿಕೊಳ್ಳಲಿಕ್ಕೆ ತನ್ನನ್ನು ತಾನೇ ಚಿವುಟಿಕೊಂಡು, ನೋವಾಗಿತ್ತಾದ್ದರಿಂದ ಎಚ್ಚರದಲ್ಲಿದ್ದೇನೆಂದು ನಿರ್ಧರಿಸಿದರು. ತಂಗಿಯನ್ನು ಸೋಫಾದಲ್ಲಿ ಕುಳ್ಳಿರಿಸಿದರು.

ಅವಳು ಹೇಳಿದಳು,"ನನಗೆ ವಟಪೂರ್ಣಿಮೆ ವ್ರತದ ಉಪವಾಸ ವಿಸರ್ಜನೆ ಮಾಡಲಿಕ್ಕಾಗಲಿಲ್ಲ. ಆದ್ದರಿಂದ ಒಂದು ಲೋಟ ಕಾಫಿ ಮಾಡಿಕೊಡಬೇಕು" ಎಂದಳು. ಅವರು ಅದನ್ನು ತಯಾರಿಸುತ್ತಿದ್ದಾಗ, ಹಾಲು ಸಿಕ್ಕದಿದ್ದಾಗ ಅದು ಎಲ್ಲಿದೆ ಎಂದು ತಿಳಿಸಿದಳು. ಅವರು ಕಾಫಿ ಕೊಡಲು ಬಂದಾಗ "ನೀನೇ ಕುಡಿದರೆ ಸಾಕು, ನನ್ನ ಉಪವಾಸ ಸಮಾಪ್ತಿಯಾಗುತ್ತದೆ" ಎಂದು ಹೇಳಿ ಫಕ್ಕನೆ ಮಾಯವಾದಳು.

ಲಲಿತಳ ಸಹೋದರ ಸಮಂತರಿಗೆ ಮಕ್ಕಳಿರಲಿಲ್ಲ. ಅವರ ಮನಸ್ಸಲ್ಲಿ ಅದೊಂದು ದೊಡ್ಡ ಕೊರತೆಯಾಗಿ ಉಳಿದಿತ್ತು. ಆಮೇಲೊಮ್ಮೆ ಈ ತಂಗಿ ಅವರಿಗೆ ಸ್ವಪ್ನದಲ್ಲಿ ತೋರಿಕೊಂಡು "ನಾನು ನಿನಗೊಂದು ಮಗು ಹುಟ್ಟಲಿ ಎಂದು ದೇವರೊಡನೆ ಬಹಳ ಬೇಡಿಕೊಳ್ಳುತ್ತಾ ಇದ್ದೆ. ಅತ್ತಿಗೆಯನ್ನು ಪುನಃ ಡಾಕ್ಟರರಿಂದ ಪರೀಕ್ಷೆ ಮಾಡಿಸು" ಎಂದು ಸೂಚಿಸಿದಳು. ಆ ಡಾಕ್ಟರರು ಸಮಂತರ ಪತ್ನಿಯನ್ನು ಹಿಂದೆ ಮೂರುಸಲ ಪರೀಕ್ಷಿಸಿದ್ದರು. "ಅವಳ ಗರ್ಭಕೋಶದಲ್ಲಿ ದೋಷವಿದೆ. ಮಕ್ಕಳು ಜನಿಸುವುದು ಅಸಾಧ್ಯ" ಎಂದಿದ್ದರು. ಆದರೆ ತಂಗಿಯ ಸೂಚನೆಯಂತೆ ಪುನಃ ಆ ಡಾಕ್ಟರ್ ಕರಂಡೆಯವರನ್ನೇ ಕಂಡಾಗ, ಆವರು "ಗರ್ಭಕೋಶ ಈಗ ಹೇಗೋಸರಿಯಾಗಿದೆ. ಗರ್ಭನಿಂತಿದೆ" ಎಂದರು. ಇನ್ನು ಸ್ವಲ್ಪಕಾಲದ ಅನಂತರ ಲಲಿತ ಮತ್ತೊಮ್ಮೆ ಸ್ವಪ್ನದಲ್ಲಿ ಕಾಣಿಸಿಕೊಂಡು "ನಾನೇ ನಿನ್ನ ಮಗಳಾಗಿ ಜನಿಸುವವಳಿದ್ದೇನೆ" ಎಂದು ತಿಳಿಸಿದಳು. ಗರ್ಭ ಬೆಳೆದ ಅನಂತರ ಶಸ್ತ್ರಚಿಕಿತ್ಸೆ ಮಾಡಿ ಮಗುವನ್ನು ತೆಗೆದರು. ಅದು ಹೆಣ್ಣಾಗಿತ್ತು. ಸಮಂತರು ಅದಕ್ಕೆ ತಂಗಿಯ ಹೆಸರನ್ನೇ ಇಟ್ಟರು. ವಿ. ಎಲ್ ಭಟ್ಟರು ಈ ವಿಚಾರವಾಗಿ "ನಾನು ಮಗುವನ್ನು ಕಂಡಿದ್ದೇನೆ. ಅದರ ಅಪೂರ್ವತರದ ಜನ್ಮದ ಕತೆಯನ್ನು ಮಗುವಿನ ತಂದೆ ತಾಯಿ ಮತ್ತು ಡಾಕ್ಟರ್ ಕರಂಡೆಕಯವರಿಂದ ತಿಳಕೊಂಡೆ" ಎಂದು ಬರೆದಿದ್ದಾರೆ.

ಏಡಿ ಹುಣ್ಣಿನ ಕಾಯಿಲೆಯಲ್ಲಿದ್ದ ಲಲಿತ ತಾನು ಸಾಯುವುದು ಖಂಡಿತ ಎಂದು ತಿಳಿದಾಗ ಅಣ್ಣನಮಗಳಾಗಿ ತಾನೇಜನಿಸಿ ಅವನ ವ್ಯಸನ ಏಕೆ ಪರಿಹರಿಸ

ಬಾರದು ಎಂಬ ಯೋಚನೆ ಹೊಂದಿ ಆಗಾಗ ಚಿಂತಿಸಿ ಮರಣ ಕಾಲದಲ್ಲಿಯೂ ಆ ಭಾವನೆ ಅವಳಿಗೆ ಬಂದಿರಬೇಕು. ತನ್ನ ಅಂತಿಮ ಆಸೆಯಂತೆ ಅವಳ ಕೂಡಲೆ ಹುಟ್ಟಲಿಕ್ಕಿದ್ದು, ಇತರರಂತೆ ಯಮಲೋಕಕ್ಕೆ ಪ್ರಯಾಣ ಮಾಡದ ತನ್ನ ಯತ್ನ ಸಫಲವಾದುದು ಕಂಡು ಅಣ್ಣನಿಗೆ ಸೂಚನೆಗಳನ್ನು ಕೊಟ್ಟಿ ಬೇಕು. ಪ್ರೇತವಾದ ಮೇಲೆ ತಾವೇ ತಮ್ಮ ಜನ್ಮ ರೂಪಿಸಲಾರವು.

೪. ಭಾಗವತದಿಂದ ಜಡಭರತರ ಕತೆ

ಭಾಗವತದಲ್ಲಿ ಸಾಯುವ ಕಾಲದ ಭಾವನೆಯು ಮುಂದಿನ ಜನ್ಮವನ್ನು ರೂಪಿಸುತ್ತದೆ ಎಂಬುದರ ದೃಷ್ಟಾಂತವಾಗಿ ಭರತರ ಕತೆಬರುತ್ತದೆ. ಭರತರ ಅತ್ಯಂತಪ್ರಖ್ಯಾತ ರಾಜರಾಗಿದ್ದು ಅವರ ಕಾಲದಲ್ಲಿಯೇ ಈ ದೇಶಕ್ಕೆ ಭಾರ ಎಂದು ಹೆಸರು ಬಂತಂತೆ (ಭಾಗವತ ೫,೭,೩) ಅವರು ಬಹಳಕಾಲದವರೆಗೆ ಈ ದೇಶವನ್ನು ಅತ್ಯಂತ ಧಾರ್ಮಿಕರೀತಿಯಲ್ಲಿ ಆಳಿ ಆಮೇಲೆ ಮಕ್ಕಳಿಗೆ ರಾಜ ಒಪ್ಪಿಸಿ ಮೋಕ್ಷದಸಾಧನೆಗಾಗಿ ಗಂಡಕಾ ನದಿಯತಟಕ್ಕೆ ತಪಸ್ಸಿಗೆ ಹೋದರು ಅಲ್ಲಿ ಕೇವಲ ಗಡ್ಡೆ ಗೆಣಸು ಚಿಗುರಲೆ ಮತ್ತು ನೀರು, ಇವುಗಳ ಆಹಾರದಲ್ಲಿ ಜೀವಿಸುತ್ತ ದೇಹದಬಂಧನಸಂಪೂರ್ಣಗೆದ್ದರು. ಆದರೆ ಆಗ ಸ್ವಂತಮಕ್ಕಳನ್ನ ತ್ಯಜಿಸಿ ಬಂದ ಅವರಿಗೆ ಒಂದು ಪ್ರಬಲವಾದ ಹೊಸಬಂಧನ ಅಲ್ಲಿ ಅಂಟ ವಂತಾಯಿತು.

ಒಮ್ಮೆ ಭರತರು ನದಿಯ ತೀರದಲ್ಲಿ ಧ್ಯಾನಕ್ಕೆ ಕುಳಿತಿದ್ದಾಗ ಒಂದ ಸಿಂಹದ ಭಯಂಕರ ಗರ್ಜನೆ ಕೇಳಿಸಿತು. ಅವರು ಕಣ್ಣು ತೆರೆದರು. ಅದೆ ಕಾಲಕ್ಕೆ ಅಲ್ಲಿ ನೀರು ಕುಡಿಯಲುಬಂದಿದ್ದ ಒಂದು ಜಿಂಕೆ, ನೀರಿಗೆ ಬಾಯಿ ಹಾಕಿದ್ದುದು ಕಂಡರು. ಅದು ಫಕ್ಕನೆ ಭಯಹೊಂದಿ ತನ್ನ ಸಂಪೂರ್ಣಪ್ರಾ ಹಾಕಿ ಹೊಳೆಯ ಮತ್ತೊಂದು ದಡಕ್ಕೆ ಜಿಗಿಯಿತು. ಆದರೆ ಅದು ಗರ್ಭಿ ಯಾಗಿದ್ದು ಸಿಂಹದಗರ್ಜನೆಯ ಭಯ, ಹಾರಿದ ವಿಶೇಷ ರಭಸದಘಾತ, ಇ ಗಳಿಂದಾಗಿ ಆದಕ್ಕೆ ಗರ್ಭಪತನವಾಯಿತು. ಮರಿ ಜಿಂಕೆ ನೀರಿಗೆ ಬಿತ್ತು ತಾಯಿ ಸ್ವಲ್ಪ ದೂರ ಓಡಿ ಸತ್ತಿತ್ತು.

ಭರತರು ನೀರಲ್ಲಿ ತೇಲಿ ಹೋಗುತ್ತಿದ್ದ. ತಾಯಿಕಳಕೊಂಡ, ಆದ ಜೀವ ಇದ್ದ ಅನಾಥ ಜಿಂಕೆಮರಿಗಾಗಿ ಮರುಕಗೊಂಡರು. ಅದನ್ನು ಎತ್ತಿ ತಂದರು. ತನ್ನ ಕಣ್ಣೆದುರೇ ಅನಾಥವಾಗಿ ತನ್ನ ಸಹಾಯವಿಲ್ಲದಿದ್ದರೆ ಖಂಡಿ ಸಾಯುತ್ತಿದ್ದ ಮರಿ ತನಗೆ ಶರಣು ಬಂದಂತೆ; ಅದರ ರಕ್ಷಣೆ ಇನ್ನು ತನ

ಹೊಣೆ, ಎಂದು ತೀರ್ಮಾನಿಸಿ ಅದನ್ನು ಆಶ್ರಮದಲ್ಲಿಯೇ ಸಾಕಿದರು. ಅದರ ಲಾಲನೆಪಾಲನೆ ಮಾಡುತ್ತಿದ್ದಂತೆ ಅದರಮೇಲೆ ಬಹಳ ಮೋಹಉಂಟಾಯಿತು. ಅದರ ಆಟಕಂಡು ಸಂತೋಷ, ಅದರ ಪ್ರೀತಿ ಕಂಡು ಆನಂದ, ಅದು ಕಣ್ಮರೆಯಾದಾಗ ಅದರ ರಕ್ಷಣೆಗಾಗಿ ಕಾಂಕ್ಷೆ, ಮುಂತಾದವು ಅವರ ಧ್ಯಾನಕ್ಕೆ ಭಂಗ ತಂದವು. ಅವರು ಸಾಯುವ ಕಾಲಬಂತು. ಆದರೆ ಆಗಲೂ ಮನಸ್ಸು ಧ್ಯಾನದಲ್ಲಿರದೆ ತನ್ನ ಮುದ್ದು ಜಿಂಕೆಯಲ್ಲೇ ಇತ್ತು. ಅದನ್ನು ಕಾಣುತ್ತಲೇ ದೇಹ ಬಿಟ್ಟರು.

ಆದರಿಂದಾಗಿ ಅವರು ಅನಂತರ ಜಿಂಕೆಯ ಜನ್ಮವನ್ನೇ ಹೊಂದಿದರು. ಆದರೆ ಹಿಂದೆಮಾಡಿದ್ದ ಅಪಾರಮಟ್ಟದ ಪುಣ್ಯಕರ್ಮಗಳಿಂದಾಗಿ, ತಪಸ್ಸಿಂದಾಗಿ, ಜಿಂಕೆಗೆ ತನ್ನ ಪೂರ್ವಜನ್ಮದಸ್ಮರಣೆಇತ್ತು. ಜಿಂಕೆಯ ಮರಿಯ ಮೇಲಿದ್ದ ಮೋಹವೇ ತನ್ನನ್ನು ಮೋಕ್ಷದ ಸಾಧನೆಯಿಂದ ತಪ್ಪಿಸಿ ಈ ಮೃಗಜನ್ಮಕ್ಕೇ ನೂಕಿತಲ್ಲ ಎಂಬುದು ಅವರ ಮನಸ್ಸನ್ನು ಆಗಾಗ ಚುಚ್ಚುತ್ತಿತ್ತು. ಆದ್ದರಿಂದ ಜಿಂಕೆಯಾಗಿರುವಾಗ ಕೇವಲ ಒಕ್ಕುಂಟಿಯಾಗಿ ಬಾಳುತ್ತ ನಿರಂತರವಾಗಿ ದೇವರ ಚಿಂತನೆ ನಡೆಸಿದರು. ಹಾಳು ಜಿಂಕೆಯಜನ್ಮ ಬೇಗ ಮುಗಿಯಿತು. ಬ್ರಾಹ್ಮಣಜನ್ಮ ಬಂತು. ಆಗಲೂ ಲೋಕದವಿಚಾರಗಳ ಬಗ್ಗೆ ಎಲ್ಲ ಅತ್ಯಂತ ವೈರಾಗ್ಯ, ತಾತ್ಸಾರ, ಬೆಳೆಸಿದ್ದರಿಂದ ಜಡಭರತನೆಂದು ಕರೆಯಲ್ಪಡುತ್ತಿದ್ದರು. ಆದರೆ ಅಂತರ್ಯದಲ್ಲಿ ನಿರಂತರವಾಗಿ ಪರಮಾತ್ಮನಧ್ಯಾನ ನಡೆಸಿ, ಸಂಸಾರದಬಂಧನ ಸಂಪೂರ್ಣಗೆದ್ದು ಜ್ಞಾನಿಯಾಗಿ ಮೋಕ್ಷಹೊಂದಿದರು.

ಮರಣಕಾಲದಲ್ಲಿ ದೇವರಭಾವನೆ ಬರಬೇಕು

ನಮ್ಮ ಮರಣಕಾಲದ ಭಾವನೆಯು ನಮ್ಮ ಮುಂದಿನ ಬಾಳನ್ನು ರೂಪಿಸುತ್ತದೆ ಎಂಬುದರಿಂದ ಆಗ ದೇವರನ್ನು ತಪ್ಪದೆ ಚಿಂತಿಸಿ ಅವನನ್ನು ಸೇರಬೇಕು ಎಂಬುದು ಹಿಂದೂಗಳಲ್ಲಿ ಮುಂಚೆ ಸರ್ವತ್ರವಾಗಿದ್ದು, ಅದಕ್ಕಾಗಿ ಬೇಕಾದ ಪ್ರಯತ್ನ ನಡೆಯುತ್ತಿತ್ತು. ಅದಕ್ಕಾಗಿ ಆಗ ಮಾಡಬೇಕಾದ ಅನೇಕ ವಿಶೇಷ ಧಾರ್ಮಿಕಕಾರ್ಯಗಳ ವಿಚಾರ ಮುಂದೆ ಮತ್ತೊಂದು ಅಧ್ಯಾಯದಲ್ಲಿ ಬರುತ್ತದೆ. ಆದರೆ ಇಲ್ಲಿ ಒತ್ತಿ ಹೇಳಬೇಕಾದ ವಿಷಯವೆಂದರೆ ಜೀವನದಲ್ಲೆಲ್ಲ ಲೌಕಿಕಭಾವನೆಯೇ ಇರುವವನಿಗೆ ಮರಣಕಾಲದಲ್ಲಿ ಮಾತ್ರ ದೈವೀಭಾವನೆ ಬರುವ ಸಂಭವ ತೀರಾ ಕಡಿಮೆ (ಅಥವಾ ಹಾಗಾದರೆ, ಅದಕ್ಕಿಂತ ಮುಂಚೆ ಮಾಡಿದ್ದ ಪುಣ್ಯ ವಿಶೇಷ ಏನೋ ಇದ್ದೇ ಇರಬೇಕು).

ಸಾಮಾನ್ಯ ಮಾನವನು ಇಡೀ ಜೀವನದಲ್ಲೆಲ್ಲ ಮರಣಕ್ಕೆ ಹೆದರಿಯೆ
ಬಾಳುತ್ತಾನೆ. ಆದ್ದರಿಂದ ಮರಣಕಾಲದಲ್ಲಿ ಅವನ ಕಳವಳ ಬಲವಾಗಿರುತ್ತದೆ
ಮನಸ್ಸು ಶಾಂತವಾಗಿರಲಾರದು. ದೇವರ ನೆನಪನ್ನು ಬದಿಗೊತ್ತಿ ಜೀವಿಸಿದಾ
ನಿಗೆ ಹತ್ತಿರವಿದ್ದ ಬಂಧುಗಳು ದೇವರ ಸ್ಮರಣೆಗೆ ಎಚ್ಚರಿಸಿದರೂ ಅತಿ ದೀರ್ಘ
ಕಾಲದ ಲೌಕಿಕ ಜೀವನದ ಬಂಧನಗಳು ತಮ್ಮ ಸೆಳೆತ ಬಿಡವು. ಒಬ್ಬ ಸ್ಮೃ
ತಪ್ಪಿ ಮರಣೋನ್ಮುಖನಾದವ ಹಿಂದಿನ ನಶ್ಯದ ಅಭ್ಯಾಸದ ಸೆಳೆತದಿಂದಾ
ಕೈಬೆರಳುಗಳನ್ನು ಮೂಗಿಗೆ ಆಗಾಗ ಕೊಂಡುಹೋಗುವುದನ್ನು ಸ್ವಾಮಿ ಶಿವ
ನಂದರು ತಿಳಿಸಿದ್ದಾರೆ. ತುಂಬಾ ಹಣದಸಂಗ್ರಹದಲ್ಲೇ ಮುಳುಗಿದ್ದವನಿಗ
ಆದರ ವ್ಯವಸ್ಥೆ ಪೂರ್ಣವಾಗಿ ಮಾಡಿರದಿದ್ದರೆ ಆ ಚಿಂತನೆ, ಮಕ್ಕಳು ಉತ್ತಮ
ರಿಲ್ಲದಿದ್ದರೆ ಅವರು ದುಂದುಗಾರಿಕೆಯಿಂದ ಅದರ ನಾಶಮಾಡುವರಲ್ಲ ಎಂ
ಕಾಂಕ್ಷೆ, ಹೆಂಡತಿಮಕ್ಕಳ ಮೇಲೆ ವಿಪರೀತ ಮೋಹವಿದ್ದವನಿಗೆ ಅವರನ್ನು
ಅಗಲಲು ಮನಸ್ಸುಬಾರದೆ ಹಿಂದೆ ಸೆಳೆತ, ಅಬಲನಾದ ಪ್ರೀತಿಯ ಮಗನಿ
ಮುಂದೆ ಗತಿಯೇನು ಎಂಬ ಚಿಂತೆ, ತನ್ನವರೆಂಬವರು ಸುತ್ತ ಅಳುವಾಗ ಅವ
ದುಗುಡ ಮತ್ತಷ್ಟು ಹೆಚ್ಚುವುದು, ಮದ್ಯಲಂಪಟನಿಗೆ ಮದ್ಯದ ನೆನಪು ಬರ
ವುದು, ಕಾಮುಕನಿಗೆ ಸ್ತ್ರೀಯ ನೆನಪು, ಮುಂತಾದವೆಲ್ಲ ಮನಸ್ಸನ್ನು ದೇವ
ಕಡೆಗೆ ಹೋಗಲು ಸುಲಭವಾಗಿ ಬಿಡುವುದಿಲ್ಲ.

ಸಾಲದ್ದಕ್ಕೆ ಮರಣ ಕಾಲದಲ್ಲಿ ಆಲೋಚನಾ ಶಕ್ತಿ ಕ್ಷೀಣಿಸುತ್ತದ
ಮರಣಕ್ಕೊಂದು ನೆಪಬೇಕೆಂದು ನಮ್ಮಲ್ಲಿರುವ ಪ್ರಕೃತಿದೇವಿಯು ಏನಾದರ
ರೋಗದ ನಿಮಿತ್ತ ತರುತ್ತಾಳೆ. ಕಫ, ಕೆಮ್ಮು ಮುಂತಾದವುಗಳ ಹಿಂ
ಪೀಡಿಸುತ್ತವೆ. ಗಂಟಲು ಕಟ್ಟುತ್ತ ಬರುತ್ತದೆ, ದೃಷ್ಟಿ ಮಂದವಾಗುತ್ತದ
ಮನಸ್ಸು ತನ್ನ ಶಕ್ತಿ ಕಳಕೊಳ್ಳುತ್ತದೆ. ಮರಣಕಾಲದಲ್ಲಿ ಅತಿಪ್ರಬಲವಾ
ರುವ ಸ್ಮರಣೆ ಹಿಂದಿನ ದೀರ್ಘಕಾಲದ ಅಭ್ಯಾಸಗಳವು ಮಾತ್ರ ಆಗು
ಸಂಭವವೇ ಅತಿಹೆಚ್ಚಾದ್ದರಿಂದ ದೇವರಚಿಂತನೆ ಕಡೆಯಕಾಲಕ್ಕೆ ಮಾಡು
ಎಂದು ಮುಂದರಿಸಿದವನಿಂದ ಆಗದು. ಆದರೆ ಶ್ರೀರಾಮನ ಪರಮಭಕ್ತರಾ
ಮಹಾತ್ಮಾಗಾಂಧಿಯವರಿಗೆ ಎದೆಗೆ ಫಕ್ಕನೆ ಗುಂಡುಬಿದ್ದು ಅವರು ಬೀಳುತ್ತಿ
ವಾಗಲೂ ಅವರ ಬಾಯಿಯಿಂದ ಅಭ್ಯಾಸಬಲದಿಂದ ರಾಮನಾಮ ಬಂದಿತ್ತು
ನನ್ನ ತಾಯಿಗೆ ತುಂಬಾ ದೈವಭಕ್ತಿಯ ದೀರ್ಘಕಾಲದ ಅಭ್ಯಾಸದ ಬಲವಿತ್ತು
ಮರಣಕಾಲದಲ್ಲಿ ಬಹುಮಟ್ಟಿಗೆ ಗಂಟಲು ಕಟ್ಟಿದ್ದರೂ ನಾನು ಹೇಳುತ್ತಿದ
ರಾಮನಾಮಕ್ಕೆ ತಪ್ಪದೆ ಅಸ್ಪಷ್ಟವಾಗಿ ಕಡೆಯುವರೆಗೂ ಮರುಧ್ವನಿ ಕೊಡ

ದ್ದಳು. ಮರಣಕಾಲದ ದೈವೀಭಾವನೆಗೆ ಧಾರಾಳವಾದ ಹಿಂದಿನಕಾಲದ ಭ್ಯಾಸಮಾತ್ರವೇ ಭದ್ರವಾದ ದಾರಿ. ಈ ಕಾಲದಲ್ಲಂತೂ ಹೃದಯರೋಗದ ಕ್ಕನೆ ಮರಣ ಹೆಚ್ಚುತ್ತಿರುವಾಗ ಮರಣಕಾಲದಲ್ಲಿ ದೇವರಚಿಂತನೆ ಮಾಡು ನೆ, ಸಾಕು ಎಂಬ ಛಲ ತೀರಾ ಮೂರ್ಖತನ.

ನನ್ನ ಹಿರಿಯ ಬಂಧುಗಳಲ್ಲಿ ಮೂರುಜನರು ತಮ್ಮ ಇಷ್ಟದೇವರನಾಮ ುದ್ಗರಿಸುವ ಕ್ರಮದವರಾಗಿದ್ದರು. ಶ್ರೀ ಜ್ಞಾನೇಶ್ವರ ಮಹಾರಾಜರ ಮಾಧಿಕ್ಷೇತ್ರವಾದ ಆಲಂದಿಯಲ್ಲಿ ನಾನು ಊಟಕ್ಕಿದ್ದ ಕ್ಷೇತ್ರಪುರೋಹಿತರ ಾಯಿ ಚಪಾತಿ ಮಾಡಿಹಾಕುತ್ತ ದೇವರನಾಮ ಹೇಳುತ್ತಲೇ ಇದ್ದರು. ಆದರೆ ಮೇಲೆ ನಾನು ಇತರರಲ್ಲಿ ಈ ಅಭ್ಯಾಸ ಕಂಡದ್ದಿಲ್ಲ! ಇದು "ಸುಧಾರಣೆ" ಲ್ಲ! ಅವನತಿ.

ಅಂತಿಮಕಾಲದ ಚಿಂತನೆ ದೇವರದ್ದೇ ಆಗಲಿಕ್ಕೆ ಮಗನಮಗನ ಮುಖ ಂಡಮೇಲೆ ಎಂದರೆ ಸುಮಾರು ೬೦ ವರ್ಷದ ನಂತರ ಶಾಸ್ತ್ರವು ಬ್ರಾಹ್ಮಣರಿಗೆ ನ್ಯಾಸೀಜೀವನ ವಿಧಿಸಿತ್ತು. ಅಥವಾ ಮನೆಬಿಟ್ಟು ಕಾಶಿಗೆ ಹೋಗಿ ಗಂಗಾ ೀರದ ಅತಿಪವಿತ್ರ ವಾತಾವರಣದಲ್ಲಿ ದೇವರ ಚಿಂತನೆಯಲ್ಲೇ ಆದಷ್ಟು ುನಸ್ಸುಹಾಕಿ ಅಲ್ಲಿ ಮರಣಹೊಂದಲು ಹೇಳಿದೆ. ಕೋಟ್ಯಾಧೀಶ ಬಿರ್ಲಾ ುಟುಂಬದ ಸ್ಥಾಪಕರು ಹಾಗೆ ಮಾಡಿದ್ದನ್ನು ಓದಿದ್ದೆ. ಗುಣವಾಗದ ರೋಗ ಿಂದಿರುವವರು ದೇವರಚಿಂತನೆ ಮಾಡುತ್ತ ಕಾಶಿಗೆ ಹೋಗಿ ಅಲ್ಲಿ ಗಂಗೆಯಲ್ಲಿ ಪ್ರಾಣಬಿಡಬಹುದು ; ಅದು ಆತ್ಮಹತ್ಯೆಯಲ್ಲ, ಮುಕ್ತಿ ತರುತ್ತದೆ, ಎಂದೂ ಶಾಸ್ತ್ರದಲ್ಲಿದೆ. ಆದರೆ ಈ ಕಾಲದಲ್ಲಿ ಶಾಸ್ತ್ರದಲ್ಲಿ ಶ್ರದ್ಧೆಯಿರುವ ಬಹಳಜನರಿಗೆ ಮೇಲೆ ಹೇಳಿದ ಕ್ರಮಗಳು ಇನ್ನು ಸರಿಬೀಳವು. ಆದರೆ ಅವರು ಚಿಕ್ಕವರಾಗಿ ದ್ದಾಗ ೧೦-೧೫ ವರ್ಷ ಚೆನ್ನಾಗಿಪಾಠಗಳನ್ನು ಅಥವಾ ತಮ್ಮ ಉದ್ಯೋಗವನ್ನು ಗೃಹಸ್ಥಜೀವನದ ಸುಖದ ಗುರಿಇಟ್ಟು ಶ್ರಮವಹಿಸಿ ಕಲಿತಂತೆ, ಮುಂದೆಬರುವ ಮರಣ ಖಂಡಿತ, ಅದರ ಆಚೆಯ ಜೀವನವೂ ಖಂಡಿತ, ಅದನ್ನೂ ಉತ್ತಮ ಮಾಡಲಿಕ್ಕೆ ೧೦–೨೦ ವರ್ಷ ಶ್ರಮಿಸಲೇಬೇಕು, ಎಂದು ನಿರ್ಧರಿಸಬೇಕು. ಹುದ್ದೆಯಿಂದ ನಿವೃತ್ತರಾದೊಡನೆ (ಅಥವಾ ಲೌಕಿಕ ಉದ್ಯೋಗ ಮಕ್ಕಳಿಗೆ ವಹಿಸಿ) **ಆಗಲೂ ಅನಂತರ ವಿರಾಮದ ಯೋಚನೆಯನ್ನೇ ಮಾಡದೆ, ಆಲಸ್ಯದ ಅಭ್ಯಾಸ ಬೆಳೆಯಲು ಬಿಡದೆ, ಮರಣದ ಆಚೆ ನಮ್ಮೊಡನೆ ತಪ್ಪದೆಬರುವ ಏಕಮಾತ್ರನಿಧಿಯಾದ ಧರ್ಮದಸಂಗ್ರಹಮಾಡಬೇಕು.** ಸಮಯವನ್ನು ಪಟ್ಟಾಂಗ, ಕ್ಲಬ್ಬು, ಕತೆ, ಕಾದಂಬರಿ, ಆಲಸ್ಯ, ವಿನೋದ,

ಒಣರಾಜಕೀಯ ಚರ್ಚೆಗಳಲ್ಲಿ ಹಾಕುವುದನ್ನು ಧೃಡಮಾಡಿ ದೂರಹಾಕಿ ಅ
ತರದ ಸಂಗಾತಿಗಳನ್ನೂ ದೂರಹಾಕಿ, ಆದಷ್ಟು ಹೆಚ್ಚು ಜಪ, ಪೂಜೆ, ಸಹ
ನಾಮಪಠನ, ದಾನ, ವ್ರತಗಳ ಅಭ್ಯಾಸ, ಆಗಾಗ ಇಷ್ಟದೇವರನಾಮ ಎ
ಹೇಳುವಅಭ್ಯಾಸ, ತಿನ್ನುವುದನ್ನು ದೇವರಿಗೆ ಅರ್ಪಿಸಿಯೇತಿನ್ನುವುದು, ಶು
ಆಹಾರಗಳಸೇವನೆ, ಊರದೇವಸ್ಥಾನದಲ್ಲಿ ದೇವರಚಿಂತನೆ ಮಾಡುತ್ತ ನಿಧಾ
ವಾಗಿ ಸುತ್ತು ತೆಗೆಯುವುದು, ಅಲ್ಲಿ ಕುಳಿತು ಜಪ ಮಾಡುವುದು. ಉತ್ತ
ಧಾರ್ಮಿಕಗ್ರಂಥಗಳ ಓದು, ಶ್ರವಣ, ಮನನ, ಸತ್ಸಂಗ, ಅಧ್ಯಾತ್ಮಚಿಂತ
ಅತಿಸರಳಜೀವನ, ನಿರಹಂಕಾರ, ದೇಹಗೆಲುವ ಸಾಧನೆಗಳು, ನಾಲಗೆಚಪಲ
ಗೆಲುವನಿರ್ಧಾರ, ಕಾಮದ ಹತೋಟಿ ಸಾಧನೆ, ಧರ್ಮ ಪ್ರಚಾರದ ಕಾಯ
ಮುಂತಾದುವನ್ನು ಅಭ್ಯಸಿಸಬೇಕು. ವೇದ ಪಾಲಿಸಲಿಕ್ಕೆ ಸಹಾಯವಾ
ವುದು ಉತ್ತಮ. ಶ್ರೀರಾಮಕೃಷ್ಣ ಪರಮಹಂಸರು ಬೋಧಿಸಿರುವಂತೆ ಅ
ದೂರದ ಉತ್ತಮಕ್ಷೇತ್ರಕ್ಕೆ ಕೆಲವುತಿಂಗಳಿಗೊಮ್ಮೆ ಹೋಗುತ್ತ ಕೆಲವುದಿನಗ
ಅಲ್ಲಿ ನಿಂತು, ಮನೆ, ತಾಪತ್ರಯಗಳನ್ನೆಲ್ಲ ಸಂಪೂರ್ಣಮನಸ್ಸಿಂದ ದೂರಹಾ
ಅತಿ ಹೆಚ್ಚು ಸಮಯ ದೇವರ ಚಿಂತನೆಯಲ್ಲಿರುವ ಅಭ್ಯಾಸ ಮಾಡಬೇಕ
ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಏನು ಮಾಡಬೇಕು, ಏನು ಮಾಡಕೂಡ
ಎಂಬುದಕ್ಕೆ ಶಾಸ್ತ್ರ ನೋಡು ಎಂದಿದ್ದಾನೆ. ಸರ್ಕಾರವು ರಾಜ್ಯ ಆಳಲಿ
ಕಾನೂನುಗಳನ್ನುಮಾಡಿ ಎಲ್ಲರಪ್ರಯೋಜನಕ್ಕಾಗಿ ಪ್ರಕಟಿಸಿರುವಂತೆ, ದೇವ
ಎಲ್ಲರ ಪ್ರಯೋಜನಕ್ಕಾಗಿ ಅವರು ಹೇಗೆ ಮಾತ್ರ ಬಾಳಬೇಕು ಎಂಬುದನ
ತಿಳಿಸಲಿಕ್ಕೆ ಶಾಸ್ತ್ರಮಾಡಿ ಧಾರಾಳವಾಗಿ ಪ್ರಚಾರಮಾಡಿದ್ದಾನೆ. ಅದನ
ಕಲಿಯದೆ, ತಮ್ಮ ಧಾರ್ಮಿಕಹಿತ ತಾವೇ ನಿರ್ಧರಿಸುವುದು ಮೂರ್ಖತ
ಅದು ಸರ್ಕಾರದಕಾನೂನುಗಳನ್ನು ಬದಿಗೊತ್ತಿ ತಾವೇ ನಿರ್ಧರಿಸಿದಂತೆ ವರ್ತಿ
ದಂತೆ ಅಪಾಯಕರ. ಲೋಪದ, ತಪ್ಪು ನಿರ್ಧಾರದ ಪಾಪಗಳು ಖಂಡಿ
ಬಾರದಿರವು. ತನ್ನ ಧರ್ಮ ಏನೆಂದು ತಿಳಿದಿರಬೇಕು. ಶಾಸ್ತ್ರ ಪುನಃಪು
ಓದುತ್ತ ಅದರಿಂದ ಅದರಸಾಧನೆಗೆ ಹುರುಪು ತುಂಬಿಸಿಕೊಳ್ಳುತ್ತಿದ್ದರೆ ಮಾ
ಸರಿಯಾದ ಸಾಧನೆಸಾಧ್ಯ. ಶಾಸ್ತ್ರವನ್ನು ಈ ಕಾಲದ ಸಾಮಾನ್ಯರು ಎಣಿಸಿ
ಕ್ಕಿಂತ ಎಷ್ಟೋ ಹೆಚ್ಚಿನಮಟ್ಟದಲ್ಲಿ ಶ್ರದ್ಧೆಉಂಟಾದವ ಸಾಧಿಸಲು ಸಾಧ
ಹೊರಗಿನ ಆಚರಣೆ ಕಷ್ಟವಾದಷ್ಟಕ್ಕೂ, ಶ್ರೀಶ್ರೀ ಚಂದ್ರಶೇಖರಭಾರತಿಯವ
ಹೇಳಿರುವಂತೆ (ಗುರುವಿನೊಡನೆ ಸಂವಾದ) ತನ್ನಷ್ಟಕ್ಕೇ ಮಾಡುವ ಅಂತರಂ
ಸಾಧನೆಹೆಚ್ಚಿಸುವುದು ಖಂಡಿತ ಸಾಧ್ಯ.

೪. ಪುನರ್ಜನ್ಮದಲ್ಲಿ ಹಿಂದಿನಜನ್ಮದ ವಿಶೇಷ ಕುಶಲತೆಯ ಪ್ರದರ್ಶನ

ನಮಗೆ ಅತಿಹೆಚ್ಚಿನ ಮಟ್ಟದಲ್ಲಿ ದೈಹಿಕ, ಮಾನಸಿಕ ಅಥವಾ ಧಾರ್ಮಿಕ ಶಕ್ತಿ ಬರಬೇಕಾದರೆ ಅತಿ ಧೀರ್ಘಕಾಲದ ಅಭ್ಯಾಸವು ಅಗತ್ಯವಾಗುತ್ತದೆ. ಬಹಳ ಎಳೆಯಮಕ್ಕಳು ಯಾವತರಬೇತಿಯೂ ಇಲ್ಲದೆ ಈ ತರದಶಕ್ತಿ ಅಥವಾ ಕುಶಲತೆ ಪ್ರದರ್ಶಿಸಿದರೆ, ಅವರ ತಂದೆತಾಯಿಗಳು ಆ ತರದ ವಿಶೇಷಮಟ್ಟದವರೇ ಅಲ್ಲದಿದ್ದು ಅನುವಂಶಿಕವಾಗಿ ಆ ಕುಶಲತೆ ಬಂತೆಂದು ಹೇಳುವಂತಿಲ್ಲದಿದ್ದಾಗ, ಅದೆಲ್ಲ ಹಿಂದಿನಜನ್ಮದಿಂದ ಬಂತು, ಎಂದೇ ನಿರ್ಧರಿಸಬೇಕಾಗುತ್ತದೆ. ಪುನರ್ಜನ್ಮದ ಈತರದ ರುಜುವಾತನ್ನು ಕೆಲವನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಗಾಯನಕಲೆಯಲ್ಲಿ ಜಗದ್ವಿಖ್ಯಾತನಾದ ಮೊಸಾರ್ಟನು ಅದಕ್ಕೆ ಯಾವ ತರಬೇತೂ ಪೊಂದದೆ ಚಿಕ್ಕವನಾಗಿರುವಾಗಲೇ ಪ್ರಥಮ ಪ್ರಯತ್ನದಲ್ಲಿಯೇ ಪಿಯಾನೋದಲ್ಲಿ ಶಾಸ್ತ್ರೀಯಸಂಗೀತವನ್ನು ಯಾವತಪ್ಪೂ ಇಲ್ಲದೆ ನುಡಿಸಿದ್ದ. ನಾಲ್ಕನೇವರ್ಷದಲ್ಲಿ ಸ್ವತಂತ್ರತರದ ರಾಗಗಳನ್ನು ನಿರ್ಮಿಸುತ್ತಿದ್ದ. ಏಳನೆ ವರ್ಷದಲ್ಲಿ ಪಿಟೀಲು ಮತ್ತು ಇನ್ನೆರಡು ಗಾಯನದ ಸಲಕರಣೆಗಳಲ್ಲಿ ಯುರೋಪಿನ ಅತ್ಯಂತಮೇಲ್ಮಟ್ಟದ ಸಂಗೀತದಲ್ಲಿ ವಿದ್ವಾಂಸರಿಗೆ ಏನೂಕಡಿಮೆಯಲ್ಲದ ಪ್ರವೀಣತೆ ಹೊಂದಿದ್ದ. ಹದಿನಾಲ್ಕನೆವರ್ಷದಲ್ಲಿ ತಾನು ಕೆಲವು ಗಂಟೆಗಳ ಕಾಲ ಕೇಳುತ್ತಿದ್ದ ಗಾಯನದ ರಾಗ ಲಿಖಿತವನ್ನು ಒಂದಿಷ್ಟೂ ತಪ್ಪಿಲ್ಲದೆ ಕೇವಲ ನೆನಪಿನಿಂದ ಬರೆದಿದ್ದ.

ಇಂಗ್ಲೆಂಡಿನ ಮೇಬೆಲ್ ಥೋಮ್ಸನ್ ಎಂಬ ಬಾಲಕಿಯು ೨೦ನೇ ತಿಂಗಳಲ್ಲಿ ಓದಲುಕಲಿತು ೨೬ನೇ ತಿಂಗಳಲ್ಲಿ ಚೆನ್ನಾಗಿ ಬರೆಯಲು ಕಲಿತಳು. ೧೯೬೬ ರಲ್ಲಿ ತನ್ನ ನಾಲ್ಕನೆ ವರ್ಷದಲ್ಲಿ ಗಣಿತಶಾಸ್ತ್ರದ ಅತಿಕಠಿಣ ಭಾಗದಲ್ಲಿ ಜ್ಞಾನ ತೋರಿಸಿದ್ದಳು.

ಲುಬೆಕ್ ಕ್ರಿಶ್ಚನ್ ಹೈನೆಕೆನ್ ಎಂಬವ ಹುಟ್ಟಿದ ಸ್ವಲ್ಪ ಗಂಟೆಗಳಲ್ಲೇ ಮಾತನಾಡುತ್ತಿದ್ದನಂತೆ! ತನ್ನ ಮೂರನೆವರ್ಷದಲ್ಲಿ ಬಹಳ ಬುದ್ಧಿವಂತ ಮನುಷ್ಯರಿಗಿಂತ ಚೆನ್ನಾಗಿ ತರ್ಕಬದ್ಧವಾಗಿ ತುಂಬಾ ವಾಕ್‌ಚಾತುರ್ಯದಿಂದ ಮಾತನಾಡುತ್ತಿದ್ದನಂತೆ. ತನಗೆ ಬೇಗ ಮರಣ ಸಂಭವಿಸಲಿಕ್ಕಿದೆ ಎಂದು ಭವಿಷ್ಯ ಹೇಳಿ ನಾಲ್ಕನೆವರ್ಷದಲ್ಲಿ ಮೃತನಾದ.

ಲೋಕವಿಖ್ಯಾತ ನ್ಯಾಯಶಾಸ್ತ್ರಜ್ಞ ಜೆರೆಮಿ ಬೆಂತೆಮ್ ತನ್ನ ನಾಲ್ಕನೆ

ವರ್ಷದಲ್ಲಿ ಇಂಗ್ಲೀಷು, ಲ್ಯಾಟಿನ್ ಮತ್ತು ಗ್ರೀಕ್‌ಭಾಷೆಗಳನ್ನು ಓದಲಿಕೂ ಬರೆಯಲಿಕ್ಕೂ ಬಲ್ಲವನಾಗಿದ್ದ. ಆಕ್ಸ್‌ಫರ್ಡ್ ಯೂನಿವರ್ಸಿಟಿಗೆ ಹನ್ನೆರಡ ವರ್ಷದಲ್ಲಿ ಸೇರಿದ. ಜಗದ್ವಿಖ್ಯಾತ ಜಾನ್ ಸ್ಟು ಆರ್ಟ್ ಮಿಲ್ಲ್ ತನ್ನ ಏಳ ವರ್ಷದಲ್ಲಿ ಪ್ರಖ್ಯಾತ ಗ್ರೀಕ್ ತತ್ವಜ್ಞಾನಿ ಪ್ಲೇಟೋವಿನ ಕೃತಿಗಳನ್ನೆಲ್ಲ ಬಲ್ಲ ನಾಗಿದ್ದ. ಇಂಗ್ಲೆಂಡಿನ ಮುಖ್ಯಮಂತ್ರಿಯಾಗಿ ವಿಖ್ಯಾತನಾಗಿದ್ದ ವಿಲಿಯ ಪಿಟ್ ೭ ವರ್ಷದ ಬಾಲಕನಾಗಿದ್ದಾಗ ತನ್ನ ಉಪಾಧ್ಯಾಯನಿಗೆ ತಿಳಿಯ ವಿಚಾರ ವಿವರಿಸುತ್ತಿದ್ದ. ಪ್ರಖ್ಯಾತಕವಿ ಪೋಪನು ಬಾಲಕನಾಗಿದ್ದಾಗಲ ಉತ್ತಮಕವಿತೆಗಳನ್ನು ಬರೆಯುತ್ತಿದ್ದ ವಿಲ್ಲಿಫೇರೇರೊ ಎಂಬ ಗಾಯನವಿಶಾರ ಕೇವಲ ಏಳನೆ ವಯಸ್ಸಿನಿಂದಲೇ ಯೂರೋಪಿನ ಅತಿ ಪ್ರಖ್ಯಾತ ಸಂಗೀ ಮೇಳದ ನಿರ್ದೇಶಕನಾಗಿದ್ದ (ಸಂಗ್ರಹ Earnest Briggsರ Reincarnatio in the West ಎಂಬ ಪ್ರಬುದ್ಧ ಭಾರತದಲ್ಲಿನ ಅಕ್ಟೋಬರ್ ೧೯೬೧ ಲೇಖನದಿಂದ).

ಸ್ವಾಮಿ ಅಭೇದಾನಂದರು ತಮ್ಮ Life Beyond Death ಎಂ ಗ್ರಂಥದಲ್ಲಿ ಇಂಥ ಕೆಲವು ದೃಷ್ಟಾಂತಗಳನ್ನು ಕೊಟ್ಟಿದ್ದಾರೆ. ಅವರ ಕಂಡಿದ್ದ ಪೋಲೆಂಡಿನ ಹುಡುಗನೊಬ್ಬ ಕೇವಲ ತನ್ನ ೫ನೇವರ್ಷದಲ್ಲಿ ಲಂಡನ್ನಿ ಮತ್ತು ಪ್ಯಾರಿಸ್ಸಿನ ಚದುರಂಗಆಟದ ತಜ್ಞರಲ್ಲಿ ಒಮ್ಮೆಗೆ ಮೂರುಜನರೊಡ ಆಡುತ್ತ ಸೋಲಿಸಿದ್ದನಂತೆ. ಅವನ ತಂದೆತಾಯಿ, ಅಣ್ಣತಮ್ಮಂದಿರು ತೀರ ಸಾಮಾನ್ಯ ಮಟ್ಟದವರಿದ್ದರಂತೆ. ಸ್ವಾಮಿಜೀಯವರು ನ್ಯೂಯಾರ್ಕದಲ್ಲಿ ನೋಡಿದ ಒಂದು ಹುಡುಗಿ ಕೇವಲ ತನ್ನ ೬ನೇ ವರ್ಷದಲ್ಲಿ ಪಾಶ್ಚಾತ್ಯ ಗಾಯ ದಲ್ಲಿ ಅತ್ಯಂತ ಖ್ಯಾತರಾದ ಬಾಚ್, ಬೀತೋವನ್ ಮುಂತಾದವರ ಅತಿಶೀಘ್ರ ಗಾಮಿ ಗಾಯನವನ್ನು ಅದ್ಭುತ ರೀತಿಯಲ್ಲಿ ನುಡಿಸುತ್ತಿದ್ದಳಂತೆ. ಅವಳ ತಂ ತಾಯಿ ಸಂಗೀತ ಅಭ್ಯಾಸ ಮಾಡಿದವರೇ ಅಲ್ಲವಂತೆ. ಜರ್ಮನ್ ದೇಶ ಅದ್ವಿತೀಯ ತತ್ವಜ್ಞಾನಿ ಗೊತ್ತೆ ತನ್ನ ೧೦ನೇ ವರ್ಷದಲ್ಲಿ ೧೭ ಭಾಷೆಗಳಲ್ಲಿ ತಜ್ಞ ನಾಗಿದ್ದ. ಸಬ್ರೊಕ್ಲೋಬನ್ ಎಂಬವ ತನ್ನ ೮ನೇ ವರ್ಷದಲ್ಲಿ ಗಣಿತಶಾಸ್ತ್ರದ ಬಹಳ ಕಷ್ಟದ ಪ್ರಶ್ನೆಗಳಿಗೆ ಪೆನ್ಸಿಲ್ಲು ಕಾಗದವಿಲ್ಲದೆ ಉತ್ತರಕೊಡುತ್ತಿದ್ದನಂತೆ.

ಸ್ವಾಮಿ ಶಿವಾನಂದರು ಅವರ What Becomes of the Sou after Death ಪುಸ್ತಕದಲ್ಲಿ ಕಮ್ಲೇಶ ಕುಮಾರಿಯ ಕತೆ ಹೇಳಿದ್ದಾರೆ. ಅವಳ ಮಾತು ಕಲಿಯುವಾಗಲೇ ಭಗವದ್ಗೀತೆಯ ಶ್ಲೋಕಗಳನ್ನು ಅಸ್ಪಷ್ಟವಾ ಹೇಳಲಾರಂಭಿಸಿದ್ದಳಂತೆ. ತನ್ನ ಎರಡೂವರೆ ವರ್ಷದಲ್ಲಿ, ತಂದೆಯೊಡ

್ವಾಮಿ ಕೃಷ್ಣಾನಂದರ ಗೀತಾ ಪ್ರವಚನಗಳು ನಡೆಯುವಲ್ಲಿ ಹೋದಾಗ, ುಡುಗಿ ತಾನೂ ಭಾಷಣಮಾಡಬೇಕೆಂದು ಹಠಮಾಡಿ ತನ್ನ ಪ್ರಥಮ ಗೀತಾ ಾಷಣದಿಂದ ಜನರನ್ನು ಬೆರಗು ಮಾಡಿದಳಂತೆ. ಸ್ವಾಮೀಜಿಯವರು ಆಗ ವಳಿಗೆ ಕೊಟ್ಟ ಹಿಂದೀ ಧಾರ್ಮಿಕಪುಸ್ತಕವನ್ನು ಕೂಡಲೆ ಗಟ್ಟಿಯಾಗಿ ಓದಿದ ಂತೆ. ಅನಂತರ ಅನೇಕ ಕಡೆಗಳಲ್ಲಿ ಧಾರ್ಮಿಕ ಪ್ರವಚನ ಮಾಡುತ್ತಿದ್ದಾಳೆ, ಂದು ಸ್ವಾಮಿ ಶಿವಾನಂದರು ಬರೆದಿದ್ದಾರೆ.

ಮದರಾಸಲ್ಲೊಬ್ಬ ಚಿಕ್ಕಹುಡುಗ ಶಾಸ್ತ್ರೀಯ ಗಾಯನ ಯಾವುದು ಕೇಳಿ ರೂ ಅದರ ರಾಗಹೇಳುತ್ತಿದ್ದ. ಗಣಿತದಲ್ಲಿ ಅದ್ಭುತ ಪ್ರವೀಣತೆ ತೋರಿಸಿದ ಾಲಕರ ವಿಚಾರವೂ ವರದಿ ಬಂದಿದೆ. ನಮ್ಮಲ್ಲಿ ಮರಣಕಾಲದಲ್ಲಿ ದೇವರ ಿಂತನೆಯನ್ನೇ ಮಾಡುವ ಅಭ್ಯಾಸದಿಂದಾಗಿ ಪಾಶ್ಚಾತ್ಯ ದೇಶಗಳಷ್ಟು ಇಂಥ ೌಕಿಕ ಕ್ಷೇತ್ರಗಳ ವರದಿ ಇಲ್ಲ.

೩. ಆಗಾಗ ಮಾತ್ರ ಹಿಂದಿನಜನ್ಮದ ಸ್ಮರಣೆ

ಬಹುಮಟ್ಟಿನ ಪುನರ್ಜನ್ಮದ ಕತೆಗಳಲ್ಲಿ ಹೊಸಜನ್ಮ ಪಡೆದ ಜೀವಾತ್ಮ ಿಕ್ಕಪ್ರಾಯದಲ್ಲಿ ತಾನಿನ್ನೂ ಹಿಂದಿನ ಜನ್ಮದಲ್ಲಿದ್ದೇನೆಂದು ಭಾವಿಸಿ, ಅಂತೆಯೇ ಾತಾಡುವುದು, ಹಿಂದಿನ ಪರಿಚಿತ ಜನರನ್ನು ಗುರುತಿಸುವುದು, ಅನುಭವ ಳನ್ನು ಸ್ಮರಿಸಿ ತಿಳಿಸುವುದು ಸಾಮಾನ್ಯ ಕ್ರಮ. ಆದರೆ ಈ ಸ್ಮರಣೆ ಕೆಲವು ವರ್ಷಗಳಲ್ಲಿ ಮರವೆಯಾಗುತ್ತದೆ. ಅಪರೂಪಕ್ಕೆ ಕೆಲವರಲ್ಲಿ ಹಿಂದಿನಜನ್ಮದ ್ಮರಣೆ ಬಹಳಕಾಲ ಜೀವನದಲ್ಲಿ ಉಳಿದಿರುತ್ತದೆ. ಆದರೆ ಅವರಿಗೆ ಅದು ಆರಂಭದಲ್ಲಾಗಲಿ, ಅನಂತರವಾಗಲಿ ಬಹಳ ಬಲವಾಗಿರುವುದಿಲ್ಲ.

ಮಹಾರಾಷ್ಟ್ರದ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವೀಧರೆ ಯಾದ ೩೭ ವರ್ಷದ ಉತ್ತರಾ ಹುದ್ದಾರ್ ಎಂಬವಳು ಮರಾಠಿ ಉಪನ್ಯಾಸಕಿ, ಚರ್ಮದ ಕಾಯಿಲೆಗೆಂದು ನಾಗಪುರದ ಆಸ್ಪತ್ರೆ ಸೇರಿದ ಉತ್ತರಾ ಒಮ್ಮೆ ಫಕ್ಕನೆ, ಅವಳಿಗೆ ತಿಳಿದಿರದಿದ್ದ ಬಂಗಾಳೀಭಾಷೆಯಲ್ಲಿ ಮಾತಾಡುತ್ತ "ಈ ಸಪ್ತ ಗ್ರಾಮ ನನ್ನಹುಟ್ಟೂರು. ನಾನು ಶಾರದಾ. ನನ್ನತಂದೆ ಕಂಕಾಲೀದೇವಸ್ಥಾನದ ಅರ್ಚಕರು. ನೋಡಿರಿ, ನನ್ನ ಪತಿ ಕುದುರೆಯ ಮೇಲೆ ಬರುತ್ತಿದ್ದಾರೆ" ಎಂದಳು. ಆಗ ಹೀಗೆ ಹತ್ತು ಮಿನಿಟು ಮಾತ್ರ ಶಾರದಾ ಎಂದು ಭಾವಿಸಿದ ವಳು ಆಮೇಲೆ ಆಗಾಗ ಹೆಚ್ಚು ಹೆಚ್ಚುಕಾಲ, ಕಡೆಗೆ ತಿಂಗಳುಗಟ್ಟಲೆ ಅವಳು ಭ್ರಮಣೆಯಲ್ಲಿಯೇ ಇರುತ್ತಾಳೆ. ಹಾಗೆ ಇದ್ದಾಗ ತನ್ನ ಈಜನ್ಮದ ಬಂಧುಗಳ,

ಪರಿಚಿತರ ಗುರುತೇ ಇಲ್ಲವಾಗುತ್ತದೆ. ಸಾಮಾನ್ಯ ಚಿಕಿತ್ಸೆ ಪ್ರಯೋ
ವಾಗದ್ದರಿಂದ ಮನೋವಿಜ್ಞಾನರಿಗೆ ವಿಚಾರಿಸಲು ತಿಳಿಸಲಾಯಿತು. ಖ್ಯಾ
ಮನೋವಿಜ್ಞಾನಿ ಡಾ॥ ಸ್ಟಿವನ್‌ಸನ್ ಎಂಬವರು ಬಂಗಾಳೀ ಮನೋವಿಜ್ಞಾ
ಗಳಿಬ್ಬರ ಸಹಾಯದಿಂದ ಶೋಧನೆ ನಡೆಸಿದರು. ಶಾರದಾಳಾದಾಗ ಹೇ
ತ್ತಿದ್ದ ವಿಚಾರಗಳನ್ನು ಟೇಪ್ ರಿಕಾರ್ಡ್ ಮಾಡಿಕೊಂಡರು. ಅದರಿ
ತಿಳಿದದ್ದೇನೆಂದರೆ ಶಾರದ ಚಿಕ್ಕವಳಾಗಿದ್ದಾಗಲೇ ತಾಯಿಯನ್ನು ಕಳಕೊಂಡಳ
ತಂದೆ ಬ್ರಜನಾಥ್ ಚಟ್ಟೋಪಾಧ್ಯಾಯ ಎಂಬವರಲ್ಲಿ ಬೆಳೆದಳು. ವಿಶ್ವನಾ
ಎಂಬ ವೈದ್ಯರನ್ನು ವಿವಾಹವಾದಳು. ೨೨ನೇ ವಯಸ್ಸಲ್ಲಿ ಮನೆ ಅಂಗಳದ
ಸರ್ಪ ಕಚ್ಚಿ ವಿಷವೇರಿತು. ವೈದ್ಯಪತಿ ಕುದುರೆ ಮೇಲೆ ಬೇಗ ಬಂದು ಚಿಕಿ
ಮಾಡಿದರೂ ಮರಣ ಸಂಭವಿಸಿತು. ಡಾ॥ ಸ್ಟಿವನ್‌ಸನ್‌ರ ಶೋಧನೆಯ
೧೫೦ವರ್ಷಗಳ ಹಿಂದೆ ಸಪ್ತಗ್ರಾಮದಲ್ಲಿ ತುಂಬಾ ಜನರ ವಸತಿಯಿತ್ತು. ಅ
ಕಂಕಾಲಿ ದೇವಸ್ಥಾನವಿದ್ದುದು, ಅದರ ಅರ್ಚಕರು ಬಜ್ರನಾಥರಾಗಿದ್ದುದು ತಿ
ಯಿತು. ಈಗ ದೇವಸ್ಥಾನ ಶಿಥಿಲವಾಗಿ ನಿವೇಶನ ಮಾತ್ರ ಇದೆ. ಶಾ
ಹೇಳಿದ ಬ್ರಜನಾಥರ ತಮ್ಮಂದಿರ ಹೆಸರು ಸರಿಯೇ, ಅವರ ಪೀಳಿಗೆಯವ
ಈಗಲೂ ಅಲ್ಲಿದ್ದಾರೆ. ಅವರನ್ನು ಗುರುತಿಸಲಾಯಿತು. ಅವಳ ಪತಿ ಮುದ
ರಾದಾಗ ತೆಗೆದ ಫೋಟೋವೂ ಸಿಕ್ಕಿತು. ಅವಳಿಗೆ ತೋರಿಸಿದಾಗ, ಅವ
ಗುರುತಿಸಿದಳು ; ಆದರೆ ಅವರು ಇಷ್ಟು ಮುದುಕರಾಗಿರಲಿಲ್ಲ, ಪ್ರಾಯಃ
ಪತಿಯತಂದೆಯ ಚಿತ್ರ ಅದು ಎಂದಳು. ಶಾರದಳಿಗೆ ಈಗ Electric Shoc
Treatment ಕೊಟ್ಟು ಹಿಂದಿನ ಜನ್ಮದ ನೆನಪು ಮರೆಸುವ ಯತ್ನ ನಡ
ಲಾಯಿತು.

೬. ಪುನರ್ಜನ್ಮದಲ್ಲಿ ಲಿಂಗ ಬದಲಾವಣೆ

೧. ಚಂಚಲಕುಮಾರಿಯ ಕಥೆ

ಚಂಚಲಕುಮಾರಿ ಎಂಬ ಹುಡುಗಿಯ ತಾಯಿ ಒಂದು ಕಡೆಗೆ ಹರಿಕ
ಕೇಳಲು ಹೋಗಿಬಂದಳು. "ಅಲ್ಲಿ ಏನು ಕತೆಕೇಳಿದಿ" ಎಂದು ಮಗಳು ಕೇ
ದ್ದಕ್ಕೆ ತಾಯಿ "ನೆನಪಿಲ್ಲ" ಎಂದಳು. "ನಿನಗೆ ಅಷ್ಟೂನೆನಪಿಲ್ಲವೇ? ನನಗೆ ನ
ಹಿಂದಿನಜನ್ಮದ ಕಥೆ ಕೂಡ ನೆನಪಿದೆ" ಎಂದಳು. ಅವಳಿಗೆ ಆಗ ೯ ವಷ
ಆಗಿತ್ತು. ಮತ್ತೆ ಮಾತು ಮುಂದುವರಿಸುತ್ತ ನಾನು ಪಾಣಿಪಟ್‌ನ
ಕೃಷ್ಣಲಾಲ್ ಎಂಬ ಶಾಲಾ ಉಪಾಧ್ಯಾಯನಾಗಿದ್ದೆ. ತಂದೆತಾಯಿ ಸಹೋದರ

ನಪಿದೆ. ನನ್ನ ೨೫ನೇವರ್ಷದಲ್ಲಿ ಹೊಟ್ಟೆ ನೋವಿಂದ ಮೃತನಾದೆ. ವಿವಾಹ
ಾಗಿರಲಿಲ್ಲ. ನಂತರದ ಜನ್ಮದಲ್ಲಿ ಪಂಜಾಬಿನ ಶಾಥರಾಜಿಲ್ಲೆಯ ಮುಸಲ್ಮಾನ
ಟುಂಬದವರಲ್ಲಿ ದನವಾಗಿದ್ದೆ. ಹಾಲು ಬಹಳಕಡಿಮೆ ಕೊಡುತ್ತಿದ್ದುದರಿಂದ
ುಜಮಾನ ಒಮ್ಮೆ ಸಿಟ್ಟಿಂದ ಬಡಿದ; ಸತ್ತೆ. ಅನಂತರ ಇಲ್ಲಿ ಜನಿಸಿದ್ದು
ಂದಳು. ಆಮೇಲೆ ಪಾಣಿಪಟ್ಟಿನಮನೆಗೆ ಕರಕೊಂಡುಹೋಗಬೇಕೆಂದು ಬಹಳ
ಠಮಾಡಿದ್ದರಿಂದ ಅವಳನ್ನು ಅಲ್ಲಿಗೆ ಕರಕೊಂಡುಹೋದರು. ಅವಳು ತಾನಿದ್ದ
ುನೆ ಗುರುತಿಸಿದಳು. ಅಲ್ಲಿ ಮುಂಚೆ ಕೃಷ್ಣಲಾಲ್ ಎಂಬ ಉಪಾಧ್ಯಾಯ
ದ್ದುದನ್ನು ಇತರರು ಒಪ್ಪಿದರು. ಆದರೆ ಅವನ ಕುಟುಂಬದವರು ಯಾರೂ
ಲ್ಲಿ ಇರಲಿಲ್ಲ. ಈ ಕತೆಯು ಡಿಲ್ಲಿಯ 'ಹಿಂದೂಸ್ಥಾನ್' ದಿನಪತ್ರಿಕೆಯಲ್ಲಿ
_೨_೧೯೬೬ರಲ್ಲಿ ರೋಹಕ್ ಎಂಬಲ್ಲಿನ ವಾರ್ತೆಯಾಗಿ ಪ್ರಕಟವಾಗಿತ್ತು.
ಂತರ ಕಲ್ಯಾಣದ ಪರಲೋಕ ಪುನರ್ಜನ್ಮದ ಅಂಕಣದಲ್ಲಿ ಬಂತು. ದನದಜನ್ಮ,
ಂಗಬದಲಾವಣೆ, ಏಕೆ ಆಯಿತೆಂದು ಈ ಕತೆಯಲ್ಲಿ ತಿಳಿಯುವುದಿಲ್ಲ.

. ಸಿಲೋನಿನ ಒಂದು ಕಥೆ

ಸಿಲೋನಿನ ಕೊಟ್ಮಾಲೆಯ ಹದುನಾವಾ ಎಂಬ ಚಿಕ್ಕಹಳ್ಳಿಯಲ್ಲಿ ಅಪ್ಪು
ಾಮಿ ಎಂಬವನಿಗೆ ಜ್ಞಾನತಿಲಕೆ ಎಂಬ ಮಗಳಿದ್ದಳು. ಅವಳು ತನ್ನ
ಾಲ್ಕೂವರೆ ವರ್ಷದಲ್ಲಿ ತಾನು ಹಿಂದೆ ಟೆಲ್ಲಿಕರಬ್ನೆ ಎಂಬ ಹುಡುಗನಾಗಿದ್ದೆ;
ವೆಂಬರ ೧೯೫೪ರಲ್ಲಿ ೧೩ನೇವಯಸ್ಸಲ್ಲಿ ಮೃತನಾದೆ ಎಂದು ಸಾಧಿಸುತ್ತಿದ್ದಳು.
ಳ ತಿಂಗಳ ಅನಂತರ ಹುಡುಗಿಯಾಗಿ ಜನ್ಮಬಂತು. ಅವಳ ಪುನರ್ಜನ್ಮದ ಕತೆ
ಲವರು ಪ್ರಮುಖರನ್ನು ಆಕರ್ಷಿಸಿತು. ಅವಳು ಹಿಂದಿನ ಜನ್ಮದವಿಚಾರ
ೇಳುತ್ತಿದ್ದ ಅನೇಕಾನೇಕ ಘಟನೆಗಳು ಶೋಧನೆ ಮಾಡಿದವರಿಗೆ ನಿಜವೆಂದು
ೊತ್ತಾಯಿತು. ಅವಳು ತನ್ನ ಹಿಂದಿನ ಜನ್ಮದ ತಂದೆತಾಯಿ, ಅಣ್ಣತಂಗಿ,
ಾಲೆಯ ಉಪಾಧ್ಯಾಯರನ್ನು ಗುರುತಿಸಿದಳು; ಅವಳು ಹೇಳಿದ ಹಿಂದೆನಡೆದವು
ಂಬ ಎಷ್ಟೋ ಘಟನೆಗಳೂ ನಿಜವೆಂದು ತಿಳಿಯುಬಂದವು. ಈ ಶೋಧನೆಯ
ಅನೇಕ ಭಾಗಗಳು ಟೇಪ್‌ರಿಕಾರ್ಡ್ ಆದವು ಮತ್ತು ಕತೆಯವಿವರ ರೇಡಿಯೋ
ಲೋನಿನಲ್ಲಿ ಒಮ್ಮೆ ಒಂದು ಗಂಟೆ ಪ್ರಸಾರವಾಗಿತ್ತು (Times of India,
9_2_1961). ಈ ಕತೆಯಲ್ಲಿಯೂ ಲಿಂಗಬದಲಾವಣೆಗೆ ಕಾರಣ ಇಲ್ಲ.
ಲಿಂಗಬದಲಾವಣೆ ಅಪರೂಪಕ್ಕಾದರೂ ನಡೆದದ್ದುಂಟು ಎನ್ನಲಿಕ್ಕೆ ಸ್ವಲ್ಪ ಇತರ
ಕತೆಗಳೂ ಪ್ರಕಟವಾಗಿವೆ.

೭. ಸಾಲುಸಾಲು ಜನ್ಮಗಳು : ಬಿಡುಗಡೆ ಎಂದೋ ಏನೋ

೧. ಬೋಯಿವರ್ಸೆಗೆ ಅತಿ ಹಿಂದಿನ ಕಾಲದಿಂದ ತನ್ನ ಅನೇಕ ಪೂ ಜನ್ಮಗಳ ನೆನಪು

ಬೋಯಿವರ್ಸೆ ತನ್ನ ಪುನರ್ಜನ್ಮಗಳ ಕತೆ ಹೇಳಿದಾಗ ದಕ್ಷಿಣಆಫ್ರಿ ಪ್ರಿಟೋರಿಯಾದಲ್ಲಿ ವಿದ್ಯಾರ್ಥಿನಿ. ಅವಳ ತಂದೆ ಬ್ಯಾಲರ್ ರಿಪೇರಿ ಮಾ ವವ. ತಾಯಿ ಆಫೀಸಿನ ಕೆಲಸದಲ್ಲಿದ್ದವಳು. ವರ್ಸೆ ೨-೩ ವರ್ಷ ಪ್ರಾ ದಲ್ಲಿಯೇ ತನ್ನ ಹಿಂದಿನಜನ್ಮಗಳ ಕೆಲವು ಅನುಭವಗಳನ್ನು ವಿವರಿಸುವು ತಾನು ಹಿಂದೆಕಂಡಿದ್ದ ವಸ್ತುಗಳ ಚಿತ್ರ ಬರೆಯುವುದು ಮಾಡುತ್ತಿದ್ದಳು. ಕಾಲದಲ್ಲಿ ಪುನರ್ಜನ್ಮದ ಕತೆಗಳ ಪ್ರಚಾರವಿದ್ದಿಲ್ಲವಾದ್ದರಿಂದ ಅವಳ ತಂ ಈತರದ ಮಾತೆಲ್ಲ ವಿಪರೀತ ಕಲ್ಪನಾವಿಚಾರವೆಂದು ಮಾತ್ರ ತೋರುತ್ತಿದ್ ಆದರೆ ಹಿಂದಿನಕಾಲಗಳ ವಿಚಾರ ಬಲ್ಲವರು ಅವಳ ಮಾತು ಕೇಳಿದಾಗ ಅವ ಅವಲ್ಲಿ ಕೆಲವು ಹೊಂದಿಕೆಗಳು ತೋರಿದವು. ಶಾಲೆಯಲ್ಲಿ ಅವಳ ಮಾತಿಂದ ಮಾನಸಿಕಶಾಸ್ತ್ರಜ್ಞರು ಅವಳ ಅನುಭವ ಅರ್ಥಮಾಡಿಕೊಳ್ಳಲು ಯತ್ನಿಸಿದ ಅವಳು ಹೇಳಿದ ಊರುಗಳಲ್ಲಿ ಅನೇಕವು ಗೊತ್ತಾಗದಿದ್ದರೂ, ಇತರ ವಿವ ಗಳಿಂದ ಘಟನೆಗಳು ಯಾವಯಾವ ಶತಮಾನಗಳವು, ಯಾವಯಾವ ದೇಶ ವಿಚಾರಗಳು, ಎಂದು ಗೊತ್ತುಹಚ್ಚುವುದು ಸಾಧ್ಯವಾಯಿತು.

ಅವಳ ಪ್ರಥಮಕತೆಯಲ್ಲಿ ಅವಳು ಅರಮನೆಯಷ್ಟು ದೊಡ್ಡಗಾತ ಪ್ರಾಣಿ ಒಮ್ಮೆ ತನ್ನನ್ನು ಬೆನ್ನಟ್ಟಿಕೊಂಡು ಬಂದುದು, ತಾನು ತನ್ನ ಯಾದ ಗುಹೆಯನ್ನು ಹೊಕ್ಕದ್ದು, ಅದಕ್ಕೆ ಕೇವಲ ಒಂದೇ ಚಿಕ್ಕ ದ್ವಾರವಿ ದರಿಂದ ಆ ಪ್ರಾಣಿಯಿಂದ ಪಾರಾದುದು, ಹೇಳಿದ್ದಳು. ಅಂಥ ಪ್ರಾಣಿಬಂದ ಲೆಲ್ಲ ಆದು ಪ್ರಾಣಿಗಳನ್ನು ತಿಂದು ಕೆಲವೆಡೆಗಳಲ್ಲಿ ರಕ್ತಚೆಲ್ಲಿದ್ದು ಕಾಣುತ್ತಿತ್ತ ಅವಳು ವಿವರಿಸಿದ ಆ ಪ್ರಾಣಿ Dinosour ಎಂಬ ೧೦ ಮಿಲಿಯ ವಷ ಹಿಂದಿನಕಾಲದ ಭೀಮಕಾಯದಮೃಗವನ್ನು ಹೋಲುತ್ತದೆ (ಅದು ಆನೆಗಿಂತ ಅತಿದೊಡ್ಡದು. ಅದರ ಪೀಳಿಗೆ ಎಂದೋ ನಾಶಹೊಂದಿದೆ ; ಅ ಅಸ್ಥಿಪಂಜರ ದೊರಕಿವೆ).

ಅವಳ ಅನಂತರದ ಅನುಭವ ದೊಡ್ಡ ಅರಮನೆಯಲ್ಲಿ ಗುಲಾಮಳ ದ್ದುದು. ಆ ಗುಲಾಮರು ತಮ್ಮೊಳಗೆ ಹೆಚ್ಚು ಮಾತಾಡುತ್ತಿದ್ದರೆ ರಾಜ ನಾ

ಕತ್ತರಿಸುತ್ತಿದ್ದನಂತೆ. ಅರಮನೆಯಲ್ಲಿ ಗೋಲಾಕಾರದ ಒಂದು ಬಿಂಬದ ಸುತ್ತಲೂ ಗುಲಾಮರು ಕೂಗುತ್ತ ಸುತ್ತುತ್ತ ಕುಣಿಯುತ್ತಿರುವ ಕ್ರಮವಿತ್ತಂತೆ. ರಾಜ ಅತ್ಯಂತ ಭಯಂಕರತರದವ. ಒಮ್ಮೆ ಅವನ ಸುಂದರಪತ್ನಿಯ—ನೀಳ ತಲೆಕೂದಲಿದ್ದವಳ—ತಲೆಕಡಿದು ಹರಿವಾಣದಲ್ಲಿತಂದು ಅವನೆದುರಿಗೆ ಇಡಲಿಕ್ಕೆ ಅವನ ದೀರ್ಘಕಾಯದ ಸೇವಕನಿಗೆ ಆಜ್ಞಾಪಿಸಿದ. ಅವ ಹಾಗೆಯೇ ಮಾಡಿ ಬಿಟ್ಟ. ಆಮೇಲೊಮ್ಮೆ ಬೋಯಿವರ್ಜೆಯನ್ನು ಅವ ಕರೆಸಿದ. ಅವಳು ಹೆದರಿಹೋಗಲಿಲ್ಲ. ಆಗ ಅದೇ ಸೇವಕ ಬಂದು ಅವಳನ್ನು ಬಲಾತ್ಕಾರದಿಂದ ಕೊಂಡುಹೋದ. ಅವಳ ಕುತ್ತಿಗೆಯೂ ಕತ್ತರಿಸಲ್ಪಟ್ಟಿತಂತೆ.

ಮೂರನೆಜನ್ಮದ ಕತೆಯಲ್ಲಿ ವರ್ಜೆಯು ಒಂಟೆಸವಾರಿ ಹೇಳಿದ್ದು ಐಗುಪ್ತ ದೇಶದ ವಿವರಣೆ ಹೋಲುತ್ತದೆ. ನಾಲ್ಕನೇಜನ್ಮದ ನೆನಪಲ್ಲಿ ಅವಳು ಪ್ರಾಯಶಃ ರೋಮ್ ಪಟ್ಟಣದಲ್ಲಿ ಇತರ ಕೆಲವು ಹೆಂಗಸರೊಡನೆ ಬಣ್ಣಬಣ್ಣದ ರೇಶ್ಮೆ ನೂಲುಗಳಿಂದ ಬಟ್ಟೆ ನೇಯುತ್ತಿದ್ದುದು. ಐದನೆ ಜನ್ಮದ ನೆನಪಲ್ಲಿ ದೇವರ ಪುತ್ರ ಜನಿಸಲಿಕ್ಕಿದ್ದಾನೆ (ಏಸುಕ್ರಿಸ್ತ ?) ಎಂಬ ವಾರ್ತೆಪ್ರಚಾರ ಮಾಡುವವನ ಮೇಲೆ ಅವಳು ಕಲ್ಲೆಸೆದುದು, ಅನಂತರದ ಜನ್ಮದಲ್ಲಿ ಅವಳು ಗೋಡೆಗಳ ಮೇಲೆ ದೊಡ್ಡ ದೊಡ್ಡ ಚಿತ್ರ ಬಿಡಿಸುತ್ತಿದ್ದುದು ಕಂಡಳು. (ಪ್ರಾಯಶಃ ಅದು ರೋಮಿನ ೧೫ನೆ ಶತಮಾನದ ಕಲೆಯ ಪುನರುಜ್ಜೀವನದ ಕಾಲ). ಅನಂತರದ ಜನ್ಮದ ನೆನಪು ಆವಳು ಕುಳ್ಳಾದ ಕಾಡು ಜನರಲ್ಲಿ ಜನಿಸಿದ್ದು. ಸಮುದ್ರದ ಬದಿಯಲ್ಲಿ ಕಡಲ ಆಮೆಗಳು ಬಂದು ಹುದುಗಿ ಹೋದ ಮೊಟ್ಟೆ ಗಳನ್ನು ಸಂಗ್ರಹ ಮಾಡಿ ಹಡಗಲ್ಲಿ ಬರುತ್ತಿದ್ದ ವ್ಯಾಪಾರಸ್ಥರಿಗೆ ಮಾರು ತ್ತಿದ್ದುದು. (೧೭ನೆ ಶತಮಾನದಲ್ಲಿ ದಕ್ಷಿಣಆಫ್ರಿಕದ Cape of Goodhopeಗೆ ಹಡುಗುಗಳು ಬಂದು ಆಹಾರ ತುಂಬಿಸಿಕೊಂಡು ಮುಂದೆ ಹೋಗುವ ಕ್ರಮ ವಿತ್ತು, ಅದಾಗಿರಬೇಕು.) ಆಮೇಲಿನ ಜನ್ಮ ಟ್ರೆನ್ಸ್‌ವಾಲಲ್ಲಿ ಉತುಪೊಲ್ ಅಧ್ಯಕ್ಷನಾಗಿದ್ದ ಕಾಲಕ್ಕೆ ೧೮೮೩_೧೯೦೦ ಸಂಬಂಧಿಸಿದ್ದು. ವರ್ಜೆಯ ಈಗಳಿನ ಜನ್ಮದ ಹೇಳಿಕೆಗಳನ್ನು ದಕ್ಷಿಣ ಆಫ್ರಿಕದ ಜೋಹನಸ್‌ಬರ್ಗ್ ನಗರದ ಒಂದು ವಿಶ್ವವಿದ್ಯಾಲಯದ ಮಾನಸಶಾಸ್ತ್ರಜ್ಞ ಬ್ಲೇಕ್ಸ್ಲಿಯವರು ಪರಿಶೋಧಿಸಿ ಕೆಲವು ಹೊಂದಿಕೆಗಳ ವಿಚಾರಗಳ ಬಗ್ಗೆ ಆಶ್ಚರ್ಯಪಟ್ಟರು. ಅವಳಿಗೆ ಹಿಂದೆ ನಡೆ ದದ್ದು, ದೂರದಲ್ಲಿ ನಡೆದದ್ದು ತಿಳಿಯುವ ಶಕ್ತಿಇರಬಹುದೇ ಎಂದು ಸಂಶಯ ಪಟ್ಟರು. ಆದರೆ ಅವಳು ತನ್ನದೇ ಅನುಭವಗಳು ಎಂಬ ಭಾಗದಲ್ಲಲ್ಲದೆ ಇತರ ಯಾವ ವಿಚಾರವನ್ನೂ ಹೇಳುತ್ತಿರಲಿಲ್ಲ ಎಂಬುದೂ ನಿಜ ಎನ್ನುತ್ತಿದ್ದರು. ಈ

ಕತೆಯನ್ನು ಪ್ರಾಧ್ಯಾಪಕ ಹೇಮೇಂದ್ರ ಬೆನರ್ಜಿಯವರು ಕಲ್ಯಾಣದ ಪರಲೋ
ಪುನರ್ಜನ್ಮ ಅಂಕಣದಲ್ಲಿ ಪ್ರಕಟಿಸಿದ್ದರು.

೨. ಮಹಾಭಾರತದಿಂದ ಒಂದು ಪುನರ್ಜನ್ಮದ ಕತೆ

ಇದು ಅನುಶಾಸನಿಕ ಪರ್ವ, ಅ ೧೧೭–೧೮೧ರಲ್ಲಿ ಬರುತ್ತದೆ.

ಒಮ್ಮೆ ಶ್ರೀ ಕೃಷ್ಣದ್ವೈಪಾಯನ ವ್ಯಾಸರು ಒಂದು ರಸ್ತೆಯಮೇ
ಹೋಗುತ್ತಿದ್ದಾಗ ಒಂದು ಹುಳು ಆದಷ್ಟು ಬೇಗ ರಸ್ತೆದಾಟಲು ಯತ್ನಿಸ
ವುದನ್ನು ಕಂಡರು. ಆ ಮಹಾಪುರುಷರಿಗೆ ಎಲ್ಲ ಪ್ರಾಣಿಗಳ ಭಾಷೆ ತಿಳಿದಿದ
"ನೀನು ಬಹಳ ಗಾಬರಿಯಾಗಿ ಹೋಗುವುದು ಯಾವ ಹೆದರಿಕೆಯಿಂದ" ಎಂದ
ಕೇಳಿದರು. ಹುಳು, "ನನಗೆ ದೂರದಲ್ಲಿ ರಥಬರುವ ಶಬ್ದ ಕೇಳುತ್ತಿದೆ, ಅದರ
ಬಿದ್ದರೆ ಸಾವೇ ಗತಿ : ಆದ್ದರಿಂದ ನನ್ನ ಅವಸರ" ಎಂದಿತು. ವ್ಯಾಸರು "ನಿ
ಬಾಳಲ್ಲಿ ಏನೂ ಸುಖವಿಲ್ಲ. ಮರಣಕ್ಕೆ ಏಕೆ ಭಯಪಡುತ್ತಿ ?" ಎಂದು ಕೇ
ದರು. ಹುಳು "ಜೀವವಿದ್ದವರಿಗೆಲ್ಲ ಪ್ರಾಣದ ಆಸೆಯಿದೆ ; ದೇಹದ ತಕ್ಕುದಾ
ಸುಖವಿದೆ. ನಾನು ಹಿಂದಿನ ಜನ್ಮದಲ್ಲಿ ಮನುಷ್ಯನಾಗಿದ್ದು, ಕ್ರೂರ ತರ
ಶೂದ್ರನಾಗಿದ್ದು ಬಹಳ ಅನ್ಯಾಯಮಾಡಿ ಹಣ ಸಂಗ್ರಹಿಸಿದೆ. ಕರುಣೆಯಿಲ್ಲ
ಇತರರ ಐಶ್ವರ್ಯ ಅಪಹರಿಸಿದೆ. ದಾನಧರ್ಮ ಮಾಡಲಿಲ್ಲ. ಆ ಬಗ್ಗೆ ತುಂಬ
ದುಃಖವಾಗುತ್ತದೆ. ಆದರೆ ಒಮ್ಮೆ ನಾನು ನನ್ನ ತಾಯಿಯನ್ನು ಪೂಜಿಸಿದ್ದೆ
ವಿದ್ಯಾವಂತ ಬ್ರಾಹ್ಮಣನೊಬ್ಬ ಮನೆಗೆ ಬಂದಾಗ ಗೌರವಿಸಿದ್ದೆ. ಆದ್ಧರಿಂದಲ
ಇರಬೇಕು, ನನಗೆ ಹಿಂದಿನಜನ್ಮದ ಸ್ಮರಣೆ ಇದೆ. ಮಹಾಪುರುಷರೇ! ನನ
ಕಲ್ಯಾಣಕ್ಕೆ ಏನಾದರೂ ತಿಳಿಸಿರಿ" ಎಂದಿತು.

ವ್ಯಾಸರು, "ಹೌದು, ಆ ಎರಡು ಪುಣ್ಯಕಾರ್ಯಗಳಿಂದ ನಿನಗೆ ಹಿಂದಿ
ಸ್ಮರಣೆಯಿದೆ. ನನಗೆ, ನನ್ನ ದರ್ಶನಮಾಡಿದವರ ಉದ್ಧಾರಮಾಡುವ ಶ
ಯಿದೆ. ಹುಳುವಿನಜೀವ ಒಂದು ಶೂನ್ಯದಬಾಳಂತೆ. ಆದರೆ ಮುಂದೆ ನೀನ
ಮಂತ್ರ ಜಪಿಸುವ ಬ್ರಾಹ್ಮಣನಾಗುವುದು ಸಾಧ್ಯ" ಎಂದರು. ಹುಳು ಇದ
ಒಪ್ಪಿ, ರಸ್ತೆಬಿಡದೆ ರಥದ ಅಡಿಬಿದ್ದು ಹುಳುಜನ್ಮ ಕಳಕೊಂಡಿತು. ಅನಂತ
ಮುಳ್ಳುಹಂದಿ, ಜಿಂಕೆ, ಹಕ್ಕಿ, ಚಂಡಾಲ, ಶೂದ್ರ, ವೈಶ್ಯಜನ್ಮಗಳನ್ನು ದಾ
ಕ್ಷತ್ರಿಯನಾಗಿ ಜನಿಸಿತು. ವ್ಯಾಸರ ಕರುಣೆಯಿಂದ ಹೀಗೆ ಮೇಲೆ ಬಂದ
ಕ್ಷತ್ರಿಯನು ವ್ಯಾಸರನ್ನು ಹುಡುಕಿಕೊಂಡುಹೋಗಿ ಉದ್ದಂಡ ನಮಸ್ಕರಿಸಿ ತನ
ಹಿಂದಿನಜನ್ಮಗಳನ್ನು ಹೇಳಿದ. "ನಿಮ್ಮ ಕೃಪೆಯಿಂದ ಹುಳು ಆಗಿದ್ದ ನಾನ

ಗಬೇಕಾದ ರಾಜಭೋಗಗಳಿರುವ ರಾಜನಾಗಿರುವೆ. ನನ್ನ ಶುಭಕ್ಕೆ ಉಪದೇಶ ಾಡಿರಿ" ಎಂದುಬೇಡಿದ. ಅದಕ್ಕೆ ವ್ಯಾಸರು "ನಿನ್ನ ಪಾಪ ಇನ್ನೂ ನಾಶವಾಗ ್ಲ. ಧನಾಸೆಯಿಂದ ಬ್ರಾಹ್ಮಣರ ಹಣ ಕೂಡ ಅಪಹರಿಸಿದ್ದೆ, ಅವರನ್ನು ೀಪಿಸಿದ್ದೆ. ನನ್ನ ದರ್ಶನದ ಪುಣ್ಯ ನಿನಗೆ ಸಹಾಯಮಾಡಿತು. ಈಗ ಪುನಃ ್ನನ್ನು ಪೂಜಿಸಿರುವೆ. ನಿನ್ನ ಜೀವನವನ್ನು ಬ್ರಾಹ್ಮಣರ ಮತ್ತು ಗೋವಿನ ವೆಗಾಗಿ ಉಪಯೋಗಿಸು. ಮುಂದೆ ಅನೇಕ ಯಜ್ಞಗಳನ್ನು ಮಾಡಿ ಬ್ರಹ್ಮ ನ್ನರಿತು ಮುಕ್ತಿಪಡೆಯುವೆ. ಕ್ರಿಮಿ. ಪಶುಜನ್ಮ ಪಡೆದವರು ಅನಂತರ ದ್ರುಜನ್ಮ ಪಡೆಯುವರು, ಶೂದ್ರರು ವೈಶ್ಯಜನ್ಮ, ವೈಶ್ಯರು ಕ್ಷತ್ರಿಯಜನ್ಮ, ನ್ಮ ಕರ್ತವ್ಯಬಲ್ಲ ಕ್ಷತ್ರಿಯರು ಬ್ರಾಹ್ಮಣಜನ್ಮ ; ಅದನ್ನು ಶಾಸ್ತ್ರೋಕ್ತವಾಗಿ ಳಿ ಮುಕ್ತಿಪಡೆಯುವರು" ಎಂದರು.

ಆ ಕ್ಷತ್ರಿಯ ರಾಜನು ಅನಂತರ ಅತಿಕಠಿಣ ತಪಸ್ಸನ್ನಾಚರಿಸಿದ. ಆಗ ್ಯಸರು ಅವನನ್ನು ಕಂಡು, "ಕ್ಷತ್ರಿಯರಿಗೆ ಪ್ರಜೆಗಳ ರಕ್ಷಣೆಯೇ ವಿಧಿಸಲ್ಪಟ್ಟ ಪಸ್ಸು. ಅದನ್ನು ಆಚರಿಸಿದರೆ ಬ್ರಾಹ್ಮಣಜನ್ಮ ಪಡೆಯುವೆ" ಎಂದು ಪದೇಶಿಸಿದರು. ಆದ್ದರಿಂದ ಕ್ಷತ್ರಿಯನು ಕಾಡನ್ನು ಬಿಟ್ಟು ಪುನಃ ರಾಜನಾಗಿ ಜೆಗಳನ್ನು ಚೆನ್ನಾಗಿ ಪಾಲಿಸಿ ದೇಹ ಸವೆದ. ಆಗ ವ್ಯಾಸರು ಪುನಃ ಅವನಿಗೆ ೀರಿಕೊಂಡು "ಇನ್ನು ನೀನು ಯಾವುದಕ್ಕೂ ಹೆದರಬೇಕಿಲ್ಲ. **ಧರ್ಮ ಹಿರನಾಗದಂತೆ ಮಾತ್ರ** ಇರಬೇಕು. ನಿನ್ನ ಧರ್ಮ ಪಾಲಿಸು" ಎಂದರು. ವ ಅನಂತರ ಸಾವಿರಾರು ಯಜ್ಞಗಳನ್ನು ಮಾಡಿ ಬ್ರಹ್ಮಲೋಕಕ್ಕೆ ಹೋದ ; ್ರಹ್ಮವನ್ನೇ ಪಡೆದ.

ರಾಮಾಯಣ ಕಾಲದ ಬಿಮಲ

ಬಿಮಲ್ ಎಂಬ ೮ ವರ್ಷದ ಹುಡುಗ ಕಾಶಿಯ ರಾಮಕೃಷ್ಣ ಆಶ್ರಮ ಲ್ಲಿ ಕೆಲವುಕಾಲ ಇದ್ದ. ಅವ ಸ್ವಲ್ಪ ಬುದ್ಧಿಕೆಟ್ಟವನಂತೆ ವರ್ತಿಸುತ್ತಿದ್ದ. ಆಗ ್ವಾಮಿ ಅದ್ಭುತಾನಂದರು (ಶ್ರೀರಾಮಕೃಷ್ಣ ಪರಮಹಂಸರ ಪ್ರಥಮಶಿಷ್ಯರು) ಆಶ್ರಮದಲ್ಲಿದ್ದರು. ಬಿಮಲ ಸ್ವಾಮಿ ಅದ್ಭುತಾನಂದರಿಗೆ ಕೃತ್ತಿವಾಸರ ಂಗಾಳೀ ರಾಮಾಯಣ ತಾನು ಓದಿ ಹೇಳುವುದೆಂದರೆ ತುಂಬಾ ಆಸಕ್ತಿ ೀರಿಸುತ್ತಿದ್ದ. ವಾಚನನಡೆಸುವಾಗ ಅವನಿಗೆ ಅತ್ಯಂತ ಉತ್ಸಾಹ ಉಂಟಾಗು ತ್ತು. ಅನೇಕಾವರ್ತಿ ಅವನ ಕಣ್ಣುಗಳಿಂದ ನೀರು ಧಾರಾಳವಾಗಿ ಸುರಿಯು ತ್ತು. ಒಂದುದಿನ ಸ್ವಾಮಿ ಅದ್ಭುತಾನಂದರು ಅವನ ಹತ್ತಿರ "ಹಾಗೆ ಏಕೆ

ಕಣ್ಣೀರು ಸುರಿಸುತ್ತಿ" ಎಂದು ಕೇಳಿದರು. ಅದಕ್ಕೆ ಅವ ನಗುತ್ತ "ರಾ
ರಾವಣರ ಯುದ್ಧದಲ್ಲಿ ನಾನೂ ಭಾಗವಹಿಸಿದ್ದೆ, ಗೊತ್ತಿಲ್ಲವೆ ಮಹಾರಾ
ಎಂದ. "ಯಾರಪಕ್ಷದಲ್ಲಿ" ಎಂದು ಅವರು ಕೇಳಿದ್ದಕ್ಕೆ "ರಾಮರ ಪಕ್ಷದಲ್ಲಿ
ನೋಡಿರಿ, ನನಗೆ ಬಾಲವಿದೆ" ಎಂದ. ಅವ ಕೆಲವು ವೇಳೆ ಸ್ವಾಮಿ ಅದ್
ನಂದರ ಪಾದಗಳಮೇಲೆ ಕೈಆಡಿಸುತ್ತಿದ್ದ. ಆಗ ಅವನ ಮುಖ, ಎದೆ, ಕೈ
ಭಾವೋದ್ರೇಕದಿಂದ ಕೆಂಪಾಗುತ್ತಿದ್ದವು. ಅವ ಅವರಿಗೆ ಅಕಾಲದಲ್ಲಿ
ಏನಾದರೂ ತಿಂಡಿ ಅರ್ಪಿಸಿ, ಪ್ರಸಾದವೆಂದು ಬಹಳ ಭಕ್ತಿಯಿಂದ ತಿನ್ನುತ್ತಿ
ಇತರರಿಗೆ ಅವರು ಹಾಗೆಲ್ಲ ಮಾಡಲು ಬಿಡುತ್ತಿರಲಿಲ್ಲ (ವೇದಾಂತ ಕೇ
ಅಕ್ಟೋಬರ ೧೯೬೭). ರಾಮರಾವಣರ ತ್ರೇತಾಯುಗದ ಯುದ್ಧವಾಗಿ
ಲಕ್ಷವರ್ಷಗಳಾದವು. ಇನ್ನೂ ಬಿಮಲನಿಗೆ ಸ್ವಲ್ಪ ಮಂಗಚೇಷ್ಟೆ ಇರಬೇ
ಪವಿತ್ರಭಾವನೆಯಿದ್ದರೂ ಮೋಕ್ಷ ಸಿಗಲಿಲ್ಲವಲ್ಲ !

೮. ಹಣದ ಋಣಪರಿಹಾರಕ್ಕೆ ಜನ್ಮಗಳು

೧. ಸಾಧುಬೇಲದ ಸಾಧುವಿನ ಕತೆ

ಇದು ಸಾಧುಬೇಲ ಎಂಬಲ್ಲಿದ್ದ ಒಬ್ಬ ಸಾಧು ಅಥವಾ ಬೈರಾಗಿಯ
ತಾನೇಕೆ ಮನೆಮಾರು ಬಿಟ್ಟು ಸಾಧುವಾದೆ ಎಂಬುದನ್ನು ಜನರು ತಿಳಕೊ
ಅವರು ವಂಚನೆ ಮಾಡುವುದನ್ನು ಬಿಟ್ಟಾರು ಎಂಬ ಸದುದ್ದೇಶದಿಂದ
ಸಾಧುವು ತನ್ನ ಕತೆಯನ್ನು ಇತರ ಸಾಧುಗಳಿಗೆ ತಿಳಿಸಿ ಪ್ರಚಾರಮಾಡಲು
ಕೊಳ್ಳುತ್ತಿದ್ದ. ಶ್ರೀ ರಾಮಶರಣದಾಸ್ ಎಂಬವರು ಈ ಕತೆಯನ್ನು ರವಿ
ಚಂದ್ರಜೀ ಎಂಬೊಬ್ಬ ಸಾಧುವಿನ ಮೂಲಕತಿಳಕೊಂಡು ಕಲ್ಯಾಣ ಮಾಸಪ
ಯಲ್ಲಿ (ಆಗಸ್ಟ್ ೧೯೫೩) ಪ್ರಕಟಿಸಿದರು.

ಈ ಸಾಧು ಮುಂಚೆ ಕರಾಚಿಯಲ್ಲಿ ಒಬ್ಬ ಪಾಲುಗಾರನೊಡನೆ ವ್ಯಾ
ನಡೆಸುತ್ತಿದ್ದ. ಒಮ್ಮೆ ಅವರಿಬ್ಬರೂ ಸೇರಿ ಬೊಂಬಾಯಿಯ ಹತ್ತಿಯ ದ
ಸಟ್ಟಾಗೆ (ಜುಗಾರಿ) ಹಣಹಾಕಿ ಒಂದು ಲಕ್ಷ ರೂಪಾಯಿ ಲಾಭಪಡೆದರು.
ಹಣಪಡೆಯಲಿಕ್ಕೆ ಮತ್ತು ಬೊಂಬಾಯಿ ನೋಡಲಿಕ್ಕೆ ಇಬ್ಬರೂ ಒಟ್ಟುಹೊ
ಸಿಕ್ಕಿದಹಣ ಪಾಲುಮಾಡಿಕೊಂಡು ಮತ್ತೂ ೪ ದಿನ ಅಲ್ಲೇ ನಿಂತರು. ಅ
ಅಷ್ಟರಲ್ಲಿ ನಮ್ಮ ಕಥಾನಾಯಕನಿಗೆ ತನ್ನ ಪಾಲುಗಾರನನ್ನು ಕೊಂದರೆ ಆ
ಹಣವೂ ತನಗೇ ಸಿಕ್ಕುತ್ತದಲ್ಲ, ಎಂಬ ಧನಾಸೆ ಉಂಟಾಯಿತು. ರಾತ್ರಿ ಅ
ಹಾಲಲ್ಲಿ ವಿಷಹಾಕಿ ಅವನನ್ನು ಕೊಂದು, ಆ ರಾತ್ರಿಯಲ್ಲೇ ಟ್ಯಾಕ್ಸಿಯ

ಧಾರಾಳ ಹಣಕೊಟ್ಟು ಶವವನ್ನು ಸಮುದ್ರವಿದ್ದಲ್ಲಿಗೆ ಸಾಗಿಸಿ ನೀರಿಗೆಸೆದ. ಮರುದಿನವೇ ಕರಾಚಿಗೆ ಹಿಂತಿರುಗಿದ. ಪಾಲುಗಾರನ ಕುಟುಂಬದವರೊಡನೆ, "ಅವ ಬೊಂಬಾಯಿಯಲ್ಲಿ ನನಗೆ ನಾಪತ್ತೆಆದ. ನನ್ನ ಹತ್ತಿರ ೧೦,೦೦೦ ರೂ. ಕೊಟ್ಟಿದ್ದ; ಅದನ್ನು ತಕ್ಕೊಳ್ಳಿ" ಎಂದು ಕೊಟ್ಟ. ಆದ್ದರಿಂದ ಅವರಿಗೆ ಸಂಶಯ ಬರಲಿಲ್ಲ. ಇದು ಭಾರತ ವಿಭಾಗವಾದುದಕ್ಕಿಂತ ಮುಂಚಿನ ಕತೆ. ಆಗ ೯೦,೦೦೦ ರೂಪಾಯಿ ಎಂದರೆ ದೊಡ್ಡ ಐಶ್ವರ್ಯವಾಗಿತ್ತು. ಹೊಸ ಶ್ರೀಮಂತಿಕೆಯಿಂದ ಅವ ಬಹಳ ಸುಖವಾಗಿ ಬಾಳಲಾರಂಭಿಸಿದ.

ಒಂದುವರ್ಷದ ಅನಂತರ ಅವನಿಗೊಬ್ಬ ಮಗ ಜನಿಸಿದ. ಅವನ ಸುಖ ಸಂತೋಷ ಮತ್ತಷ್ಟು ಹೆಚ್ಚಿತು. ಅವ ಆ ಮಗುವನ್ನು ಬಹಳವಾಗಿ ಪ್ರೀತಿಸುತ್ತಿದ್ದ. ಹುಡುಗ ತುಂಬಾ ಚುರುಕಿದ್ದು ಕರಾಚಿಯಲ್ಲಿ ಶಿಕ್ಷಣ ಮುಗಿಸಿ ಇಂಗ್ಲೆಂಡಿನಲ್ಲಿ ಮತ್ತೂಹೆಚ್ಚಿನ ವಿದ್ಯೆಪಡೆದು ಹಿಂದೆ ಬಂದ. ಅವನ ಲಗ್ನಕ್ಕಾಗಿ ೨೫,೦೦೦ ರೂಪಾಯಿವರೆಗೂ ವರದಕ್ಷಿಣೆಕೊಡಲು ಜನರು ಮುಂದೆಬಂದರು. ಆದರೆ ಒಂದುಲಕ್ಷ ರೂಪಾಯಿಗಳ ಆಸೆ ತಂದೆಯಲ್ಲಿತ್ತು.

ಮಗನಿಗೆ ಒಂದುದಿನ ವಿಪರೀತ ಜ್ವರ ಆರಂಭವಾಯಿತು. ಅತ್ಯುತ್ತಮ ತರದ ಚಿಕಿತ್ಸೆನಡೆಸಿದರೂ ಖಾಯಿಲೆ ಜೋರಾಗುತ್ತಹೋಯಿತು. ಅದೊಂದು ಅತಿ ಕಠಿಣತರದ ಕ್ಷಯರೋಗ, ಸ್ವಿಸರ್‌ಲೇಂಡಿಗೆ ಚಿಕಿತ್ಸೆಗೆ ಕೊಂಡುಹೋಗುವುದು ಉತ್ತಮ ಎಂದು ತಜ್ಞರು ತಿಳಿಸಿದರು. ತಂದೆ ಮಗ ಇಬ್ಬರೂ ಅಲ್ಲಿಗೆ ಹೋದರು. ಹಣ ನೀರಿನಂತೆ ಖರ್ಚಾಯಿತು. ಪ್ರಯೋಜನವಾಗದೆ ಕರಾಚಿಗೆ ಹಿಂದೆಬಂದರು.

ಕೆಲವುದಿನಗಳ ಮೇಲೆ ಮಗನ ಮರಣಕಾಲವು ಸಮೀಪಿಸಿದೆ ಎಂದು ತಿಳಿದಾಗ ತಂದೆತಾಯಿ ಎಲ್ಲ ಸುತ್ತಲೂ ಕುಳಿತು ಅಳುತ್ತಿದ್ದರು. ಆಗ ಮಗ ತಂದೆಯನ್ನೇ ನೋಡುತ್ತ ಜೋರು ನಗಾಡಿದ. ಮತ್ತು ಹೇಳಿದ. "ನನ್ನನ್ನು ಚೆನ್ನಾಗಿ ನೋಡು. ನೀನು ಹಣಕ್ಕಾಗಿ ಕೊಲೆ ಮಾಡಿದ ನಿನ್ನ ಮುಂಚಿನ ಪಾಲುಗಾರ ನಾನು! ನನ್ನ ಹಣವನ್ನು ನಿನ್ನಿಂದ ನನ್ನ ವಿದ್ಯೆ ಆರೈಕೆ ಮುಂತಾದವುಗಳಿಗಾಗಿ ವಸೂಲು ಮಾಡಿದ್ದಾಯಿತು. ಅದರಲ್ಲಿ ಇನ್ನೂ ೫೪೦ ರೂ. ಬಾಕಿ ಇದೆ. ಅದನ್ನು ನನ್ನ ಉತ್ತರಕ್ರಿಯೆಗೆ ಉಪಯೋಗಿಸು" ಎಂದು ಹೇಳಿ ದೇವರನಾಮ ಸ್ಮರಿಸುತ್ತ ಅಸುನೀಗಿದ.

ತಂದೆಗೆ ಸಿಡಿಲು ಬಡಿದಂತಾಯಿತು. ಫಕ್ಕನೆ ತನ್ನ ಘೋರಪಾಪದ ಭೀತಿ ಅವನನ್ನು ಭಯದಲ್ಲಿ ಮುಳುಗಿಸಿತು. ಅದರಿಂದ ಅವ ಸಂಪೂರ್ಣ ಬೇರೆಯೇ

ಮನುಷ್ಯನಾದ. ಮಗನ ಉತ್ತರಕ್ರಿಯೆ ಅತಿಚೆನ್ನಾಗಿ ನಡೆಸಿ, ಸಂಸಾರ, ಮ ಐಶ್ವರ್ಯ ಎಲ್ಲ ತ್ಯಜಿಸಿ, ತನ್ನ ಭವಿಷ್ಯ ಸಂಪೂರ್ಣ ತಿದ್ದಿಕೊಳ್ಳಲಿಕ್ಕೆಂ ಸಾಧುವಾಗಿ ಹೊರಟ. ಅವನೇ ಸಾಧುಬೇಲದ ಸಾಧು ; ತನ್ನ ಅಪೂ ಅನುಭವದಿಂದ ಇತರರು ಅನ್ಯಾಯದ ದಾರಿಹಿಡಿಯದಂತಾಗಲೆಂದು ಆಶಿ ಪಶ್ಚಾತ್ತಾಪದಲ್ಲಿ ಮುಳುಗಿದ್ದ ಮನುಷ್ಯ.

೨. ಮೂರುಜನ್ಮಗಳಲ್ಲಿ ಸಾಲತೀರಿಸದಿದ್ದುದಕ್ಕಾಗಿ ವ್ಯಥೆ

ಭಾರತದ ರಾಜಪುತಾನ ಭಾಗದ ರೈಲ್ವೆ ಇಲಾಖೆಯಲ್ಲಿ ತಂತಿವಿಭಾಗದ ಹುದ್ದೆಯಲ್ಲಿದ್ದ ಶಿವದಾಸಶರ್ಮ ಪುಷ್ಕೀಕರ್ ಎಂಬವರು ೧೯೩೦ರಲ್ಲಿ ಮಕರ ಎಂಬ ರೈಲ್ವೆನಿಲ್ದಾಣದಲ್ಲಿ ತಂತಿಕೆಲಸ ಮಾಡುತ್ತಿದ್ದಾಗ ಅಲ್ಲಿ ಪ್ರತ್ಯಕ್ಷ ಕಂ ತಿಳಿಸಿದ ಕತೆ ಇದು. ಈ ನಿಲ್ದಾಣವು ಉಸುಬುಪ್ರಾಂತ್ಯದ ಅಂಚಲ್ಲಿದೆ. ಒಂ ಸಂಜೆ ಇಬ್ಬರು ವೈಶ್ಯ ಪತಿಪತ್ನಿಯರು ಒಂದು ವರ್ಷದ ಅವರ ಬಾಲಕನೊ ಉಗಿಬಂಡಿಯಿಂದ ಮಕರಣದಲ್ಲಿಳಿದು, ಸಮೀಪವಿದ್ದ ಧರ್ಮಶಾಲೆಯಲ್ಲಿ ಉ ಕೊಂಡರು. ಮರುದಿನ ಅವರು ಬಾಡಿಗೆಯ ಒಂಟೆಯ ಮೇಲೆ ಕುಳಿತು ಸವ ಮಾಡಿ ದೂರವಿರುವ ತಮ್ಮ ಊರನ್ನು ಸೇರುವವರಿದ್ದರು. ಸಂಜೆ ಅ ಮಗು ಧರ್ಮಶಾಲೆಯ ಅಂಗಳದಲ್ಲಿ ಆಡುತ್ತಿದ್ದಾಗ ಥಕ್ಕನೆ ಒಂದು ಕಾಳಸ ಬಂದು ಅವನಿಗೆ ಸುತ್ತಿ ತನ್ನ ಹೆಡೆಯನ್ನು ಬಾಲಕನ ಮುಖದೆದುರು ಎತ್ತಿ ಮಗುವಿಗೆ ಸರ್ಪದ ಭೀತಿ ಬರಲಿಲ್ಲ ; ಅವ ಅದರ ಹೆಡೆಗೆ ಪುನಃಪುನಃ ಮು ಎರಚುತ್ತಿದ್ದ. ಸರ್ಪ ಹೆಡೆ ಬಗ್ಗಿಸುತ್ತಿತ್ತು, ಆದರೆ ಕಚ್ಚುವ ಯತ್ನದಲ್ಲಿರಲಿ ಇದನ್ನು ಕಂಡವರೆಲ್ಲ ಮಗುವಿಗಾಗಿ ಬಹಳ ಭಯಪಟ್ಟರು. ತಂದೆತಾಯಿ ಲಾರಂಭಿಸಿದರು. ಅಷ್ಟರಲ್ಲಿಸವಾರಿಒಂಟೆತಂದಿದ್ದ ರಜಪೂತನೊಬ್ಬ ಅಲ್ಲಿಗೆಬಂ ಮಗುವಿನ ತಂದೆಗೆ ತನ್ನ ಕೋವಿತೋರಿಸಿ "ನಾನು ಗುರಿಇಟ್ಟುಹೊಡೆಯುವ ರಲ್ಲಿ ಅತ್ಯಂತನಿಪುಣ. ಹಾವನ್ನು ಕೊಲ್ಲಬಲ್ಲೆ. ಆದರೆ ಗ್ರಹಚಾರವಶಾತ್ ಮ ವಿಗೆ ಗುಂಡುತಾಗಿದರೆ ನಾನು ಅಪರಾಧಿಯಾಗುವುದಿಲ್ಲ ಎಂದು ಬರೆದುಕೊಟ್ಟ ಸರ್ಪಕ್ಕೆ ಗುಂಡುಹಾಕಿ ಕೊಲ್ಲುತ್ತೇನೆ" ಎಂದ. ತಂದೆ ಭಯದಿಂದ ಕಂಗಾಲಾ ಬೇರೆ ಉಪಾಯಕಾಣದೆ ಹಾಗೆಯೇ ಬರೆದುಕೊಟ್ಟ. ರಜಪೂತ ಚೆನ್ನಾಗಿ ಗ ಇಟ್ಟು ಹೊಡೆದು ಸರ್ಪವನ್ನು ಕೊಂದು ಕೊಂಡುಹೋಗಿ ಅದನ್ನು ಹೊ ಬಿಸಾಡಿದ, ತಂದೆ ತಾಯಿ ತಮ್ಮ ಅಪಾರಸಂತೋಷದಿಂದ ಅವನಿಗೆ ಇನಾ ಕೊಡಲುಬಂದಾಗ ಅದನ್ನು ಸ್ವೀಕರಿಸಲಿಲ್ಲ,

ರಾತ್ರಿ ಛತ್ರದಜಗಲಿಯಲ್ಲಿ ಮಲಗಿದ್ದ ಆ ರಜಪೂತನು ಮರುದಿನಬೆಳಿಗ್ಗೆ ನೋಡುವಾಗ ಸತ್ತುಬಿದ್ದಿದ್ದ. ಕಾಲಲ್ಲಿ ಸರ್ಪಕಚ್ಚಿದ್ದ ಗುರುತು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಕತೆ ಊರಲ್ಲಿ ಹಬ್ಬಿತು. ಹಲವರು ಅಲ್ಲಿ ಕೂಡಿದರು. ದೈವವಶಾತ್ ಅವರಲ್ಲೊಬ್ಬರು ನಾಗದೇವರ ಉಪಾಸಕರು ಮತ್ತು ಮಂತ್ರವಾದಿ, ನಡೆದವಿಚಾರ ತಿಳಿದಮೇಲೆ "ಆ ಸರ್ಪದಜೀವಾತ್ಮನನ್ನು ನಾನು ಯಾರ ಮೇಲಾದರೂ ಆವಾಹನೆ ಮಾಡಿ ಈ ಮನುಷ್ಯ ಸರ್ಪವಿಷದಿಂದ ಸತ್ತುದರ ಕಾರಣ ಕೇಳಬಲ್ಲೆ" ಎಂದರು. ಅವರ ಮಾತುಕೇಳಿ ಆಶ್ಚರ್ಯವಾಗಿ ಮತ್ತೂ ಹೆಚ್ಚುಜನರು ಅಲ್ಲಿ ಕೂಡಿದರು. ನಾಗನ ಉಪಾಸಕರು ಒಬ್ಬ ಬಾಲಕನ ಮೇಲೆ ನಾಗನ ಆವಾಹನೆ ಮಾಡಿ ಪ್ರಶ್ನೆ ಕೇಳಿದರು. ಆಗ ಅದು ಹೇಳಿತು :

"ನಾನು ನಿನ್ನೆಬಂದ ಸರ್ಪವೇ. ನನಗಾದಪೆಟ್ಟಿಂದ ನಾನು ಸತ್ತಂತಾದರೂ ಶರೀರ ತುಂಡಾಗದ್ದರಿಂದ ಪ್ರಾಣಹೋಗಲಿಲ್ಲ. ಬೇಲಿಯಮೇಲೆ ಎಸೆಯಲ್ಪಟ್ಟ ನನಗೆ ರಾತ್ರಿ ತಂಪುಗಾಳಿಬೀಸಿದೊಡನೆ ಪ್ರಜ್ಞೆಬಂತು. ಸ್ವಲ್ಪಮಟ್ಟಿಗೆ ಗಾಯವೂ ಗುಣವಾಯಿತು. ಆದ್ದರಿಂದ ನಾನು ಅಲ್ಲಿಂದ ಹೊರಟು ಗಾಢನಿದ್ರೆಯಲ್ಲಿ ಮಲಗಿದ್ದ ಇವನನ್ನು ಕಚ್ಚಿ ಸೇಡುತೀರಿಸಿಕೊಂಡೆ" ಎಂದಿತು. ಅದಕ್ಕೆ ನಾಗನ ಉಪಾಸಕರು "ಮಗುವನ್ನು ಉಳಿಸಲಿಕ್ಕಾಗಿ ಮಾತ್ರ ಗುಂಡು ಹೊಡೆಯಬೇಕಾಯಿತು ; ನಿನ್ನ ಮೇಲಿನ ದ್ವೇಷದಿಂದಲ್ಲ, ಈ ರಜಪೂತನ ವಿಷಹೀರಿ ಬದುಕಿಸಬೇಕು" ಎಂದು ಪ್ರಾರ್ಥಿಸಿದರು. ಅದಕ್ಕೆ ಹುಡುಗನಮೂಲಕ ಸರ್ಪ ಹೇಳಿತು, "ಮೂರುಜನ್ಮಗಳ ಹಿಂದೆ ಆ ಮಗುವೂ ನಾನೂ ಮನುಷ್ಯರಾಗಿದ್ದೆವು. ಅವನಿಂದ ನಾನು ಹಣ ಸಾಲಪಡೆದೆ. ಆದರೆ ಆ ಜನ್ಮದಲ್ಲಿ ಅದನ್ನು ಹಿಂತಿರುಗಿಸಲಿಕ್ಕಾಗಲಿಲ್ಲ. ಅನಂತರ ನಾನು ಮನುಷ್ಯಜನ್ಮ ಪಡೆಯದ್ದರಿಂದ ಇನ್ನೂ ಆ ಋಣದಲ್ಲಿ ಸಿಲುಕಿರುವೆ. ಕರ್ಮಧರ್ಮಸಂಯೋಗದಿಂದ ನಿನ್ನೆ ಆ ಬಾಲಕನನ್ನು ನೋಡಿ ಗುರುತಿಸಿ, ಅವನಿಗೆ ನನ್ನ ಮನಃಪೂರ್ವಕವಾದ ವ್ಯಸನವನ್ನು ತಿಳಿಸಬೇಕೆಂದು ಅವನಿಗೆ ತಲೆಬಗ್ಗಿಸಿ ಕ್ಷಮೆಬೇಡಿದೆ. ಆದರೆ ಬಾಲಕನು 'ಮೂರು ಜನ್ಮಗಳಾದರೂ ನಿನ್ನಿಂದ ಋಣಪರಿಹಾರವಾಗಲಿಲ್ಲವಲ್ಲ, ಧಿಕ್ಕಾರ' ಎನ್ನುತ್ತ ನನಗೆ ಮಣ್ಣುಬಿಸಾಡುತ್ತಿದ್ದ ; ಅಸಮಾಧಾನ ತೋರಿಸುತ್ತಲೇ ಇದ್ದ. ಹೀಗೆ ನಮ್ಮಿಬ್ಬರ ಮಾತುಕತೆ ನಡೆಯುತ್ತಿದ್ದಾಗ ಈ ಮನುಷ್ಯ ನನಗೆ ಗುಂಡಿಕ್ಕಿದ. ನನ್ನನ್ನು ಬಾಧಿಸುವ ಈ ಹಳೆಯ ಋಣವನ್ನು ಈಗ ನನ್ನ ಮುಂದೆಯೇ ೩೦೦ ರೂ. ಕೊಟ್ಟು ತೀರಿಸಿದರೆ ನಾನು ಅವನ ವಿಷ ಹೀರಿಕೊಳ್ಳುತ್ತೇನೆ" ಎಂದಿತು. ಆಗ ಅಲ್ಲಿ ನೆರೆದವರಲ್ಲೊಬ್ಬ ಶ್ರೀಮಂತರು ಇದೆಲ್ಲ ನೋಡುತ್ತ ಆಶ್ಚರ್ಯ

ಪಡುತ್ತ, ಒಬ್ಬ ಪರೋಪಕಾರಿಯ ಜೀವ ಉಳಿಸುವುದು ಸಾಧ್ಯವಾದರೆ ಆಗ
ಎಂದು ಮಗುವಿಗೆ ೩೦೦ ರೂ. ಒಪ್ಪಿಸಿದರು. ಫಕ್ಕನೆ ಒಂದು ಬದಿಯಿಂ
ಹಿಂದಿನದಿನದ ಕಾಳಸರ್ಪ ಬಂದು ರಜಪೂತನನ್ನು ಕಚ್ಚಿ ವಿಷಹೀರಿತು; ಓ
ಹೋಯಿತು. ಸ್ವಲ್ಪಸಮಯದ ಮೇಲೆ ಅವ ಎಚ್ಚೆತ್ತು ಕುಳಿತ. ಎಲ್ಲ ಕ
ಕೇಳಿ ತನ್ನ ಒಂಟೆ ಮಾರಾಟಮಾಡಿ ಆ ಶ್ರೀಮಂತರ ಹಣ ಹಿಂದೆಕೊಟ್ಟ. ಅ
ನಿಗೂ ಯಾರ ಋಣವೂ ಬೇಡವಾಗಿತ್ತು. ಆ ಕಾಲ ಹಾಗಿದ್ದು! ಈ ಕ
ಯಾವುದೋ ಉತ್ತರ ಹಿಂದೂಸ್ಥಾನದ ಪತ್ರಿಕೆಯಲ್ಲಿ ಪ್ರಥಮವಾಗಿ ಬಂದಿ
ಬೇಕು, ನಾನು ಮಾರ್ಚಿ ೧೯೬೧ರ ಜೀವೋತ್ತಮ ತ್ರೈಮಾಸಿಕ ಕನ್ನಡ ಪತ್ರಿ
ಯಿಂದ ಸಂಗ್ರಹಿಸಿದ್ದು.

೩. ದರೋಡೆ ಕೊಲೆಗಳ ಋಣಪರಿಹಾರಕ್ಕೆ ಮೃತನ ಪ್ರೇತವೇ ಕ್ರಮ ಕೈಗೊಂಡಿತು

ಮುಂದೆಬರುವ ಕತೆ ಪುಣೆಯ ಸನಾತನಿ ಎಂಬ ಪತ್ರಿಕೆಯಲ್ಲಿ ಬಂದಿತ್ತು
ಒಬ್ಬ ಎಂಟುವರ್ಷ ಪ್ರಾಯದ ಬಾಲಕ ಒಂದು ಪಿಶಾಚದಬಾಧೆಯಿಂದ ಬಹ
ಕಷ್ಟಪಡುತ್ತಿದ್ದ. ತಂದೆ ಐಶ್ವರ್ಯವಂತನಿದ್ದು ಮಗನನ್ನು ಗುಣಪಡಿಸಲ
ಬಹಳ ಖರ್ಚುಮಾಡಿದ. ಆದರೆ ಸಫಲನಾಗಲಿಲ್ಲ. ಕಟ್ಟಕಡೆಗೆ ನರಸೋ
ವಾಡಿಯ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ಪಿಶಾಚಿಗಳಬಾಧೆ ಪರಿಹಾ
ವಾಗುತ್ತದೆಂಬ ಆ ದೇವಸ್ಥಾನದ ಕೀರ್ತಿ ಕೇಳಿ ತಾಯಿತಂದೆ ಮಗನೊಡನೆ ಅ
ಹೋಗಿ ೨ ತಿಂಗಳಿದ್ದರು. ದೇವರಿಗೆ ಬೇರೆ ಬೇರೆ ತರದ ಸೇವೆಗಳನ್ನು ನಡೆ
ದರು, ಪ್ರಾರ್ಥಿಸಿದರು. ಕಟ್ಟಕಡೆಗೆ ಒಂದು ದಿನ ಪಿಶಾಚ ಬಾಯಿಬಿಟ್ಟಿತು
ಹುಡುಗನಮೇಲೆ ಆವೇಶಬಂದು ಹೇಳಿತು, "ನಾನು ಸುಮ್ಮನೆ ನನ್ನ ದಾರಿಯ
ಹೋಗುತ್ತಿದ್ದಾಗ ಇವ ನನ್ನ ಕುತ್ತಿಗೆಗೆ ಉರುಳುಹಾಕಿ ನನ್ನ ಕೊಲೆಮಾಡಿದ
ನನ್ನಹತ್ತಿರವಿದ್ದ ೫೦೦ರೂ. ಅಪಹರಿಸಿದ. ನಾನು ಪಿಶಾಚಿಯಾದೆ. ಮುಯಿ
ತೀರಿಸಲೇಬೇಕೆಂದು ಕಳೆದ ಏಳುಜನ್ಮಗಳಕಾಲವೆಲ್ಲ ಇವನನ್ನು ಹುಡುಕುತ್ತಿದ್ದೆ
ಆಮೇಲೆ ನನ್ನ ಕೈಗೆ ಸಿಕ್ಕಿಬಿದ್ದ, ಇವನನ್ನು ಬಿಡುವುದಿಲ್ಲ" ಎಂದು ಉದ್ಗ
ಸಿತು. ಮಗನ ಬಗ್ಗೆ ಬಹಳ ದುಃಖದಲ್ಲಿದ್ದ ತಂದೆ ಅಂಗಲಾಚಿಬೇಡುತ್ತ ನಿ
೫೦೦ ರೂ. ಬಡ್ಡಿ ಕೂಡ ನೀನು ಹೇಳಿದಂತೆ ವ್ಯವಸ್ಥೆಮಾಡುತ್ತೇನೆ. ಮಗ
ಜೀವ ಬಿಟ್ಟುಕೊಡು" ಎಂದು ಹೇಳಿದ. ಅದು "ಇವ ನನ್ನ ಜೀವ ತೆಗೆದ
ನಾನು ಇವನ ಜೀವ ತೆಗೆಯದೆಬಿಡೆನು" ಎಂದಿತು. ಪಿಶಾಚ ಹುಡುಗನನ

ಟ್ಟು ತೊಲಗಲಿಲ್ಲ. ಹುಡುಗ ಆಮೇಲೆ ಬೇಗ ಮರಣಹೊಂದಿದ. ಅನಂತರ ಶಾಚವು ತನ್ನ ಋಣದಸಂದಾಯಕ್ಕಾಗಿ ಹುಡುಗನ ಪ್ರೇತವನ್ನು ಎಷ್ಟೆಲ್ಲಕಾಲ, ಶವರ್ತಿಯಾಗಿ ಮಾಡಿಕೊಂಡು ಹಿಂಸಿಸಿತೋ ಏನೋ! ಶಿಕ್ಷೆಯ ಹೊಣೆ ನೇ ವಹಿಸಿಕೊಂಡ ಪಿಶಾಚಕ್ಕೂ ಅಷ್ಟರವರೆಗೆ ಆ ಅಲ್ಪಜನ್ಮವೇ ಗತಿ!

ಮನುಷ್ಯ ಋಣಬಾಧೆಯಿಂದ ನಾಯಿಜನ್ಮ ಪಡೆದ

ಕಲ್ಕತ್ತಾದ ಶಾಸ್ತ್ರಧರ್ಮ ಪ್ರಚಾರಸಭೆಯ ೧೯೭೩ರ ವಾರ್ಷಿಕಾಧಿವೇಶನ ಲ್ಲಿ ಒಬ್ಬರು ಖಂಡಿತನಡೆದದ್ದು ಎಂದು ಕೇಳಿದ್ದ ಒಂದು ಋಣಬಾಧೆಯ ಕತೆ ಳಿದ್ದು ಟ್ರುತ್ ಪತ್ರಿಕೆಯ ವರದಿಯಲ್ಲಿ ಬಂದಿತ್ತು. ಒಬ್ಬರು ಇನ್ನೊಬ್ಬ ೊಡನೆ ಸಾಲಮಾಡಿ ಕೊಟ್ಟಮಾತಂತೆ ಅದನ್ನು ತೀರಿಸಲಾರದೆ ಮೃತರಾದರು. ಮೇಲೆ ನಾಯಿಜನ್ಮ ಪಡೆದು ಸಾಲಕೊಟ್ಟವರ ಮನೆಯಲ್ಲಿ ನಾಯಿಯಾಗಿ ವೆಸಲ್ಲಿಸುತ್ತಿದ್ದರು. ನಾಯಿಗೆ ಪೂರ್ವಜನ್ಮದ ಸ್ಮರಣೆಯಿದ್ದು ತನ್ನ ಪರಿ ತಿಗೆ ಬಹಳ ವ್ಯಥೆಯಾಗುತ್ತಿತ್ತು. ಅದು ಒಮ್ಮೆ ತನ್ನ ಪೂರ್ವಜನ್ಮದ ಮಗ ನ್ನು ಎದುರಿಸಿದಾಗ ಮಾನವಭಾಷೆಯಲ್ಲೇ ತನ್ನ ವಿಷಯತಿಳಿಸಿ, ಹೇಗಾದರೂ ಾಡಿ ಹಳೆಯ ಸಾಲ ತೀರಿಸಲು ಬೇಡಿಕೊಂಡಿತು. ಮಗನಿಗೆ ಅತ್ಯಂತ ಶ್ಚರ್ಯವೂ ದುಃಖವೂ ಆಗಿ ಬೇಕಾದ ಯತ್ನಮಾಡಿ ಆ ಸಾಲದ ಋಣತೀರಿ ದ. ಆದಾದೊಡನೆಯೇ ಆ ನಾಯಿ ಪ್ರಾಣಬಿಟ್ಟಿತಂತೆ (ಪ್ರಾಣಿಮನುಷ್ಯನಂತೆ ಮಾತಾಡಿದ ಒಂದು ಘಟನೆ ಇಂಗ್ಲೆಂಡಿನ ಖ್ಯಾತ Times ಪತ್ರಿಕೆಯೂ ಕಟಿಸಿತ್ತು).

ದೇವಸ್ಥಾನದ ವಸ್ತುವಿನ ಅಪಹರಣಕ್ಕೆ ನಾಯಿಜನ್ಮ

ಉತ್ತರ ರಾಮಾಯಣದಲ್ಲಿ ಪುನರ್ಜನ್ಮದ ಒಂದು ಕತೆ ಬರುತ್ತದೆ, ಶ್ರೀ ಮಚಂದ್ರನು ಒಡ್ಡೋಲಗದಲ್ಲಿ ಕುಳಿತಿದ್ದಾಗ ಒಂದು ನಾಯಿ ಇತರರಿಂದ ನಗಾದ ಕಷ್ಟದ ದೂರನ್ನು ದೊರೆಗೆ ತಿಳುಹಿಸಲು ಬಂತು. ತಾನು ಏನೂ ಪ್ಪು ಮಾಡಿರದಿದ್ದರೂ, ಒಬ್ಬ ಬ್ರಾಹ್ಮಣನು ತನಗೆ ಹೊಡೆದ ಎಂದೂ ಅವ ನ್ನು ವಿಚಾರಿಸಿ ಶಿಕ್ಷಿಸಬೇಕೆಂದೂ ಕೇಳಿಕೊಂಡಿತು. ಆ ಬ್ರಾಹ್ಮಣನನ್ನು ಕರೆಸಿ ಚಾರಿಸಿದಾಗ, ತಾನು ತುಂಬಾ ಮನಸ್ಸಿನವ್ಯಾಕುಲತೆಯಿಂದ ಹೋಗುತ್ತಿದ್ದಾಗ ನಾಯಿ ಪುನಃಪುನಃ ಅಡ್ಡಬಂತು; ಸಿಟ್ಟಿಂದ ಹೊಡೆದದ್ದು ನಿಜ; ಎಂದು ಪ್ಪಿಕೊಂಡ. ಅದಕ್ಕಾಗಿ ಅವನಿಗೆ ಏನು ಶಿಕ್ಷೆ ಕೊಡಬಹುದು ಎಂದು ಸೂಚಿ

ಸಲು ನಾಯಿಯನ್ನೇ ಶ್ರೀರಾಮಚಂದ್ರನು ಕೇಳಿದಾಗ, ಅವನನ್ನು ಬ
ದೇವಸ್ಥಾನದ ಆಡಳಿತದ ಕೆಲಸಕ್ಕೆ ನೇಮಿಸಬೇಕೆಂದಿತು. ಇದು ಹೇಗೆ
ಯಾಗುತ್ತದೆ? ಆದರಿಂದ ಬ್ರಾಹ್ಮಣನಿಗೆ ಬಹಳ ಉಪಕಾರವೇ ಆಗ
ಎಂದು ಸಭಿಕರು ತಮ್ಮ ಆಶ್ಚರ್ಯ ಸೂಚಿಸಿದರು. ನಾಯಿಯನ್ನೇ ಆ ವಿ
ವಾಗಿ ವಿವರಣೆ ಕೇಳಿದಾಗ "ಹಿಂದಿನಜನ್ಮದಲ್ಲಿ ನಾನು ಮಾನವಜನ್ಮದಲ್ಲಿ
ಒಂದು ದೇವಸ್ಥಾನದ ಆಡಳಿತದಲ್ಲಿದ್ದೆ. ದೇವಸ್ಥಾನದವಸ್ತುಗಳನ್ನು ಅಪಹ
ಮಾಡದೆ ಜಾಗ್ರತೆಯಲ್ಲಿದ್ದೆ. ಆದರೆ ಅಲ್ಲಿನ ಕೆಲಸದವರಿಗಾಗಿ ಮಾಡಿದ
ವನ್ನು ಮಾತ್ರ ನಾನೂ ಭೋಜಿಸುತ್ತಿದ್ದೆ. ಈ ಅಪಹರಣದಿಂದಾಗಿ ನ
ಈಗ ನಾಯಿಜನ್ಮ ಬಂದಿದೆ. ಈ ಬ್ರಾಹ್ಮಣನಿಗೂ ಹಾಗಾಗಲಿ ಎಂದು ಆಶ
ಸೂಚಿಸಿದೆ" ಎಂದಿತು. ಎಂದರೆ ದೇವಸ್ಥಾನದ ಸಾಮಾನಿನ ಅಪಹರಣೆ ಬ
ಅಪಾಯಕರ; ಅಲ್ಪಜನ್ಮ ತರುತ್ತದೆ ಎಂಬ ಬಗ್ಗೆ ಎಚ್ಚರಿಕೆ ತರಲಿಕ್ಕೆ ಈ
ಬಂದಂತೆ ತೋರುತ್ತದೆ.

ಋಣದಬಾಧೆಯಿಂದ ತಪ್ಪಿಸಿಕೊಳ್ಳುವಂತಿಲ್ಲ

ಋಣವೆಂದರೆ ಒಬ್ಬನಿಂದ ಏನಾದರೂ ಹಿಂದೆಕೊಡುವ ಶರ್ತದ ಮೇ
ಪಡೆದು ಹಿಂದೆಕೊಡದಿರುವುದು; ಒಬ್ಬನಿಗೆ ಅವ ಮಾಡಿದ ಕೆಲಸಕ್ಕೆ,
ಮಾಡಿದ ಸಹಾಯಕ್ಕೆ ಮುಂತಾಗಿ ಸಲ್ಲಿಸಬೇಕಾದುದನ್ನು ಸಲ್ಲಿಸದಿರುವು
ದೇವರ ರಾಜ್ಯದಲ್ಲಿ ಇನ್ನೊಬ್ಬನಿಗೆ ಕೊಡಬೇಕಾದುದನ್ನು ಕೊಡದೆ ತ
ಕೊಳ್ಳುವಂತೆಯೇ ಇಲ್ಲ ಮತ್ತು ಋಣಸಂದಾಯ ಆಗುವವರೆಗೂ ದೇವ
ಬೇರೆತರದ ಕಷ್ಟಗಳನ್ನು ಕೊಡುತ್ತಾನೆ. ಪಡೆದದ್ದನ್ನು ಹೇಗಾದರೂ ಹಿ
ಕೊಡಲೇಬೇಕು, ಆದರೊಡನೆ ಜಾಸ್ತಿಯಾಗಿ ಕಷ್ಟವನ್ನು ಅನುಭವಿಸಬೇಕೆ
ದರೆ, ಋಣಕ್ಕೆ ಬೀಳುವುದೇ ಮೂರ್ಖತನವಲ್ಲವೇ? ಆದ್ದರಿಂದ ಇನ್ನೊ
ಋಣವೇ ಬೇಡ ಎಂಬ ಭಾವನೆ ಈ ದೇಶದ ಜನರಲ್ಲಿ ಅತ್ಯಂತ ಧಾರಾಳ
ಇತ್ತು. ಆದ್ದರಿಂದ ಪರರ ಸೊತ್ತನ್ನು ಆಶಿಸುವುದು ತೀರಾತೀರಾ ವಿರಳ
ಗಿದ್ದು, ಮನೆಬಿಟ್ಟು ಹೋಗುವಾಗ ಜನರು ಮನೆಗೆ ಬೀಗಹಾಕುವ ಕ್ರಮ
ಇರಲಿಲ್ಲವೆಂದು ಇಲ್ಲಿಗೆ ಬಂದ ಪ್ರವಾಸಿಗಳು ಬರೆದಿಟ್ಟದ್ದುಂಟು! ಸಾಲ
ಹಣವನ್ನು ಪಡೆಯುವಾಗ, ಗೇಣಿಗೆ ಆಸ್ತಿಯನ್ನು ಪಡೆಯುವಾಗ. ದಾ
ಪತ್ರಕ್ಕೆ ಕೇವಲವಾಗಿ ಸೂರ್ಯಚಂದ್ರರು ಸಾಕ್ಷಿ ಎಂದು ಹಾಕುತ್ತಿದ್ದ
ಏಕೆಂದರೆ ಅವರು ನಮ್ಮ ಎಲ್ಲಕಾರ್ಯ ಕಾಣುತ್ತಾರೆ ಎಂದು ಶಾಸ್ತ್ರಹೇಳುತ್ತ

ರಾಜರು, ಉದಾರಿಗಳು, ದೇವಸ್ಥಾನಗಳಿಗೆ ಆಸ್ತಿಯನ್ನು ಕಾಣಿಕೆಕೊಟ್ಟದಾಖಲೆಯಿರುವ ಶಿಲಾಶಾಸನಗಳಲ್ಲಿಯೂ ಸೂರ್ಯಚಂದ್ರರ ಚಿತ್ರವನ್ನು ಪ್ರಪ್ರಥಮವಾಗಿ ಮೇಲುಭಾಗದಲ್ಲಿ ಕೆತ್ತುವುದೇ ವಾಡಿಕೆಯಾಗಿತ್ತು.

ಸಾಧ್ಯವಿದ್ದರೆ ಇನ್ನೊಬ್ಬನ ಋಣಕ್ಕೆ ಬೀಳಲೇಕೂಡದು ಎಂಬ ಬಗ್ಗೆ ನಮ್ಮ ಜನರಿಗಿದ್ದ ಅತ್ಯುತ್ತಮಭಾವನೆಯ ನಿದರ್ಶನವಾಗಿ ಅಲೆಕ್ಸಾಂಡರನು ಈ ದೇಶದ ವಾಯುವ್ಯಭಾಗವನ್ನು ಗೆದ್ದಾಗ ನಡೆದ ಒಂದು ಕತೆ ಗ್ರೀಕರ ಚರಿತ್ರಾಭಾಗದಲ್ಲಿ ಬರುತ್ತದೆ. ಅವ, ಈ ದೇಶದಲ್ಲಿ ಅತ್ಯಂತಹಿರಿಮೆಯ ತಪಸ್ವಿಗಳು, ಜ್ಞಾನಿಗಳಿದ್ದಾರೆ, ಜನರ ನ್ಯಾಯಪರತೆ ಅತ್ಯದ್ಭುತವಾದದ್ದು ಎಂದು ಕೇಳಿದ್ದ. ಇಲ್ಲಿಯ ರಾಜರು ವ್ಯವಹರಣೆ ತೀರ್ಮಾನಿಸುವ ಕ್ರಮತಿಳಿಯಲಿಕ್ಕೆ ಒಮ್ಮೆ ತನ್ನ ಆಶ್ರಿತರಾಜನೊಡನೆ ಕುಳಿತಿದ್ದ. ತೀರ್ಮಾನಕ್ಕೆ ಬಂದ ವ್ಯವಹರಣೆಯಲ್ಲಿ ಒಬ್ಬ ಇನ್ನೊಬ್ಬ ತನ್ನ ವರ್ಣದವನಿಂದ ಒಂದು ಆಸ್ತಿಯನ್ನು ಕ್ರಯಕ್ಕೆಪಡೆದಿದ್ದ. ಪಡೆದವನಿಗೆ ಅದರಲ್ಲಿ ಒಂದುದೊಡ್ಡ ನಿಧಿಸಿಕ್ಕಿತು. ತಾನು ವಿಕ್ರಯಿಸಿಪಡೆದದ್ದು ಕೇವಲ ನೆಲವನ್ನು, ಅದರ ನಿಧಿಯನ್ನಲ್ಲ ಎಂದು ಆ ನಿಧಿಯನ್ನು ಮೂಲಹಕ್ಕುದಾರನಿಗೆ ಕೊಡಲುಹೋದ. ಆದರೆ ಅವ ಅದನ್ನು ಪಡೆಯಲು ಒಪ್ಪಲಿಲ್ಲ. ತಾನು ಆಸ್ತಿಯಲ್ಲಿದ್ದ ಹಕ್ಕನ್ನೆಲ್ಲ ಸಂಪೂರ್ಣವಾಗಿ ಮಾರಿದವ, ಈ ನಿಧಿಯ ಋಣ ತನಗೆ ಖಂಡಿತ ಬೇಡ ಎಂದು ಆ ನಿಧಿಯನ್ನು ನಿರಾಕರಿಸಿದ. ಹಾಗಾಗಿ ಈ ವಾದವು ತೀರ್ಮಾನಕ್ಕೆ ರಾಜನಲ್ಲಿಗೆ ಬಂದಿತ್ತು. ಇತರ ಯಾವ ದೇಶದಲ್ಲಾದರೂ ರಾಜ ಆ ನಿಧಿಯನ್ನು ತನಗೇ ಸೇರಬೇಕಾದುದೆಂದು ಅಪಹರಿಸಿ ಋಣಕ್ಕೆ ಬೀಳುತ್ತಿದ್ದ. ಈ ರಾಜ ಹಾಗೆಮಾಡುವ ಯೋಚನೆಗೇಹೋಗಲಿಲ್ಲ. ಚೆನ್ನಾಗಿ ಯೋಚಿಸಿ, ವಾದಮಾಡುವ ಒಬ್ಬನಿಗೆ ಮಗನಿದ್ದಾನೆ, ಮತ್ತೊಬ್ಬನಿಗೆ ಮಗಳು ಇದ್ದಾಳೆ ಎಂದು ತಿಳಿದು, ಅವರಿಗೆ ವಿವಾಹಮಾಡಿ, ಈ ನಿಧಿಯನ್ನು ಅವರಿಗೆ ಕೊಡಬೇಕು ಎಂದು ತೀರ್ಮಾನಿಸಿದ! ಈ ನ್ಯಾಯಪರತೆ ಅಲೆಕ್ಸಾಂಡರನನ್ನು ಬಹಳ ಮೆಚ್ಚಿಸಿತ್ತು.

ನಾನು ಚಿಕ್ಕವನಾಗಿದ್ದ ಕಾಲದಲ್ಲಿ ಹಳ್ಳಿಯ ಬಹುಮಟ್ಟಿನಜನರು ತಮಗೆ ಬರಬೇಕಾದ ಹಣಕ್ಕೆ ಅಥವಾ ಗೇಣಿಗೆ ತೊಂದರೆ ಬಂದರೆ ಕೋರ್ಟು ವ್ಯವಹರಣೆಯ ತಾಪತ್ರಯಕ್ಕೆಹೋಗುವ ಸಮರ್ಥತೆ ಇಲ್ಲದವರಾಗಿದ್ದರು. ಆದ್ದರಿಂದ ಊರಿನ ಭೂತದಹತ್ತಿರ ಸಹಾಯಕೇಳುವುದು, ಅದಕ್ಕೆ ಹೊಯಿಲುಕೊಡುವುದು ಅಥವಾ "ನನ್ನ ಋಣದಲ್ಲಿ ಬಿದ್ದಿರು ಅಥವಾ ಇದನ್ನು ದೇವರು ನೋಡಿಕೊಳ್ಳಲಿ" ಎಂದು ಎಚ್ಚರಿಸಿ ಆ ಭಾಗದ ಮನಸ್ಸಿನ ದುಗುಡಬದಿಗೊತ್ತುವುದು

ಕ್ರಮವಾಗಿತ್ತು. ಋಣಬಾಧೆಯ ಈ ತರದ ಎಚ್ಚರಿಕೆ ಕೆಲವರಲ್ಲಾದರೂ
ಮನಸ್ಸನ್ನು ಪೀಡಿಸಿ, ಸಲ್ಲಬೇಕಾದುದನ್ನು ಕೊಟ್ಟಿದ್ದುಂಟು. ದೇಶದ ನೆಮ್ಮದಿಗ
ಈ ಪಾಪದ ಭಯದ ಭಾವನೆ ಬಹಳ ಸಹಾಯಕವಾಗಿತ್ತು. ಆದರೆ ಈಗಲೀಗ
ಮಾತ್ರ ಸರಕಾರವು ರಾಜ್ಯಗಳನ್ನು ಬಿಟ್ಟುಕೊಟ್ಟ ರಾಜರಿಗೆ ಹಿಂದೆಕೊಡಲ
ಒಪ್ಪಿದ ಪರಿಹಾರ ಹಣಕೊಡಲು ನಿರಾಕರಿಸಿದ್ದು, ಆಸ್ತಿಗಳಿಗೆ ಬೇಕಾದ ಪರಿ
ಹಾರ ಕೊಡದೆ ಒಕ್ಕಲುಗಳ ಭೋಗಕ್ಕೆ ಕೊಡಿಸಿದ್ದು, ಸಾಲಮಾಡಿದವನ
ಅಡವಿನ ವಸ್ತು ಕಸಿದು ಹಿಂದೆಕೊಡಿಸಿ ಸಾಲದಿಂದ ಬಿಡುಗಡೆ ಮಾಡಿದ್ದು
ಕಾರ್ಖಾನೆ ಮುಂತಾದವನ್ನು ಸರ್ಕಾರ ವಶಮಾಡಿಕೊಂಡು ಬಂಡವಾಳ ಹಾಕಿ
ದವರಿಗೆ ಯಾವ ಪರಿಹಾರವನ್ನು ಕೊಡದಿದ್ದುದು, ಎಲ್ಲ ನಡೆದದ್ದರಿಂದ ಜನರ
ಅತಿದೊಡ್ಡ ವರ್ಗದಲ್ಲಿ ಋಣದಬಾಧೆಯ ಬಾವನೆಯೇ ಮಾಯಕವಾಗುವಂತಾ
ಗಿದೆ! ಮಾತ್ರವಲ್ಲ ಋಣದ ಭಾವನೆಯು ಧಿಕ್ಕಾರದ ಅನೇಕ ಹೊಸರೂಪಗಳ
ಬಹಳ ಪ್ರಬಲವಾಗಿ ದೇಶದ ಶಾಂತಿಭಂಗ ಮಾಡುತ್ತಿವೆ.

ಈ ಭಾಗದಲ್ಲಿ ಹಿಂದೆ ಉದಹರಿಸಿದ ಪುನರ್ಜನ್ಮದ ಕತೆಗಳ ವಿಮರ್ಶೆ
ಮಾಡುವ. ಸಾಧುಬೇಲದ ಸಾಧುವಿನಕತೆಯಲ್ಲಿ ದೇವರೇ ಕೊಲೆಮಾಡಲ್ಪಟ್ಟ
ಪಾಲುಗಾರನನ್ನು ಅತ್ಯಂತ ಪ್ರೀತಿಯ ಮಗನಾಗಿ ಜನಿಸುವಂತೆ ಮಾಡಿ ಸಲ್ಲ
ಬೇಕಾದ ಹಣವನ್ನೆಲ್ಲ ಅವನಿಗಾಗಿ ಖರ್ಚುಮಾಡಿಸಿದ. ತಂದೆತಾಯಿಗಳು
ಮಕ್ಕಳನ್ನು ಸಾಕಿಸಲಹುವಾಗ ಧಾರಾಳವಾಗಿ ಅವರ ಸೇವೆಮಾಡುತ್ತಾರೆ. ಅದ
ಕ್ಕಾಗಿ ಮಕ್ಕಳು ದೊಡ್ಡವರಾದ ಮೇಲೆ ಶಕ್ತಿಹೀನರಾದ ಆ ತಂದೆತಾಯಿಗಳ
ಸೇವೆಮಾಡಿ ಪಿತೃಋಣ ತೀರಿಸಬೇಕು ಎನ್ನುತ್ತದೆ ಶಾಸ್ತ್ರ. ಆದರೆ ಈ ಕತೆಯಲ್ಲಿ
ಸಾಲದವಸೂಲಿಗೆ ಬಂದ ಮಗ ಅದನ್ನು ತಂದೆತಾಯಿಗಳ ಅಕ್ಕರೆಯ ಸೇವೆ
ಯೆಂಬ ಬಡ್ಡಿಯಮೂಲಕ ವಸೂಲುಮಾಡಿದ್ದರಿಂದ ಆ ಋಣ ಮುಗಿದೊಡನೆ
ಸತ್ತ. ಅವನ ಕ್ಷಯರೋಗಕ್ಕೆ ಅವನದ್ದೇ ಮತ್ಯಾವುದೋ ಪಾಪವು ಕಾರಣ
ವಾಗಿರಬೇಕು. ಹುಡುಗನಿಗೆ ಆ ಮನೆಯಲ್ಲಿ ಧಾರ್ಮಿಕ ತರಬೇತಿಯೂ ಸಿಕ್ಕಿರ
ಬೇಕು. ಏಕೆಂದರೆ ಪಾಶ್ಚಾತ್ಯದೇಶಗಳಲ್ಲಿ ವಿದ್ಯೆ ಕಲಿತಿದ್ದರೂ ಅವ ಸಾಯು
ವಾಗ ದೇವರ ಸ್ಮರಣೆ ಮಾಡಿ ತನ್ನ ಮುಂದಿನ ಜೀವನ ಬಹಳ ಉತ್ತಮವಾಗು
ವಂತೆ ಮಾಡಿಕೊಂಡ. ಪ್ರಾಯಶಃ ಅವನ ತಂದೆ ಆ ಅತಿದೊಡ್ಡ ಐಶ್ವರ್ಯದ
ಆಸೆಗೆಸೋತು ಧರ್ಮತಪ್ಪಿ ಕೊಲೆ ಕೂಡಮಾಡಿದ್ದರೂ ತಾನುಮಾಡಿದ ಪಾಪ
ದೇವರು ಕ್ಷಮಿಸಲಿ ಎಂದು ಮನೆಯಲ್ಲಿ ಧಾರಾಳವಾಗಿ ದಾನ, ಪೂಜೆಪುರಸ್ಕಾರ
ಗಳನ್ನು ನಡೆಸುತ್ತಿದ್ದಿರಬೇಕು. ಫಕ್ಕನೆ ಭೋಗದ ಮನೆ ಬಿಟ್ಟು ಸಾಧುವಾಗಿ

ಲೆದಾಡುವ ಅತಿ ಕಷ್ಟದ ಜೀವನವನ್ನು ಹಿಡಿಯಲಿಕ್ಕೆ, ಕೊಲೆಮಾಡಿದ ಾಪಕ್ಕೆ ಪಶ್ಚಾತ್ತಾಪ ಪಡಲಿಕ್ಕೆ, ಉತ್ತಮವಾದ ಹಿಂದಿನಸಂಸ್ಕಾರ ಇದ್ದವನೇ ಗಿರಬೇಕು. ಆದರೆ ಕೊಲೆ ಮಾಡಿದ್ದಕ್ಕೆ ಯಾವ ಶಿಕ್ಷೆ ಬಂತೆಂದು ಕತೆಯಲ್ಲಿ ೊತ್ತಾಗುವುದಿಲ್ಲ ; ಅದು ಖಂಡಿತ ಮುಂದೆ ಲಭಿಸಿರಬೇಕು.

ಮೂರುಜನ್ಮಗಳಲ್ಲಿ ಸಾಲತೀರಿಸದ್ದಕ್ಕಾಗಿ ಹಾವಾಗಿ ವ್ಯಥೆಪಟ್ಟಕತೆಯಲ್ಲಿ ಾಲಗಾರನಿಗೆ ಮೂರುಜನ್ಮಗಳಲ್ಲಿ ಪ್ರಾಣಿಯಾಗಿರಬೇಕಾಗಿ ಬಂದ ಅತಿದೊಡ್ಡ ಕ್ಷೆ ಇಲ್ಲಿ ಬರುವ ಸಾಲದಬಗ್ಗೆ ಅಲ್ಲ. ಅದೇನೋ ಬೇರೆಯೇ ಆದ ಮತ್ತೂ ಿಚ್ಚಿನ ಪ್ರಾರಬ್ಧಕರ್ಮಕ್ಕಾಗಿರಬೇಕು. ಆದರೂ ಈ ಸಾಲದಬಾಬಿನ ಋಣದ ಿಂತನೆಯಿಂ ಕಷ್ಟ ಅನುಭವಿಸುತ್ತಿದ್ದ. ಸರ್ಪವು ತನ್ನ ಋಣದಪರಿಹಾರಕ್ಕಾಗಿ ೦೦ ರೂ. ಕೊಡಲುಹೇಳಿದ್ದು, ಅಸಲು, ಬಡ್ಡಿ ಸೇರಿ ಇರಬಹುದು. ಮನು ೃತಿಯಲ್ಲಿ (೮, ೧೫೧) ಹೇಳಿದಂತೆ ಸಾಲಕ್ಕೆ ಎಷ್ಟೇಕಾಲವಾದರೂ ಮೂಲದ ರಡುಪಾಲಿಗಿಂತ ಹೆಚ್ಚು ಬಡ್ಡಿ ಸಲ್ಲಲೇಬೇಕೆಂದಿಲ್ಲ.

ಮೂರನೆಯಕತೆಯಲ್ಲಿ ಕೊಲೆಯಾದವ ತನಗೆ ನ್ಯಾಯಸಿಗಲಿಕ್ಕೆ ತನಗಾದ ನ್ಯಾಯವನ್ನು ದೇವರಿಗೆ ಒಪ್ಪಿಸಲಿಲ್ಲ. ಅದು ಮಾತ್ರವೇ ಸುರಕ್ಷಿತವಾದ ಾರ್ಗ, ಸ್ವಪ್ರಯತ್ನದಫಲವಾಗಿ ಅವನಿಗೆ ಆಗಿಹೋದ ಆರು ಪಿಶಾಚಿಜನ್ಮ ಳಲ್ಲದೆ, ಮುಂದೆಯೂ ಕೊಲೆಗಾರ ಹುಡುಗನಾಗಿ ಜನ್ಮ ಪಡೆದವನನ್ನೂ ಶಾಚಮಾಡಿ ತನ್ನ ಗುಲಾಮನಾಗಿ ಮಾಡಿಕೊಂಡು ಧಾರಾಳವಾಗಿ ಪೀಡಿಸಿ ೀವೆ ಮಾಡಿಸಿಕೊಂಡು, ತನ್ನ ಋಣಸಂದಾಯ ಮಾಡಿಕೊಳ್ಳಲಿಕ್ಕಿದ್ದಾನೆ. ಅವನಿಗಾದ ಅನ್ಯಾಯ ಬಹಳ ಹೆಚ್ಚಾದ್ದರಿಂದ ದೇವರು ಅವನ ಕೈತಡೆಯಲು ರಲಿಲ್ಲ. ಎಂದರೆ ಅಷ್ಟರವರೆಗೂ ಇಬ್ಬರಿಗೂ ಶ್ರೇಯಸ್ಸಿನಮಾರ್ಗ ಅಸಾಧ್ಯ. ಾಶ್ಚಾತ್ಯರ ಅನುಕರಣೆಯಿಂದಾಗಿ ಮತ್ತು ನಮ್ಮ ಸೆಕ್ಯುಲರ್‌ಸರ್ಕಾರದಿಂದಾಗಿ ದೇಶದಲ್ಲಿ ಪಾಪದಭೀತಿ ಬಹಳ ಕಡಿಮೆಯಾಗುತ್ತ ಬಂದು, ಯುವಕರು ಕಳವು ದರೋಡೆಮಾಡುವಾಗ ಕೊಲೆ ಕೂಡಮಾಡುವುದೇ ಹೆಚ್ಚುತ್ತಿದೆ. ಈ ಕತೆಯ ಹುಡುಗನ ಐಶ್ವರ್ಯವಂತ ತಂದೆತಾಯಿಗಳಿಗೆ ಅವ ಹಿಂದಿನಜನ್ಮದಲ್ಲಿ ಕೊಲೆ ಮಾಡಿದ ಭಯಂಕರ ಪಾಪಿ ಎಂದು ತಿಳಿದಾಗಲೂ ಅವನ ಮೇಲಿನ ಮೋಹ ಹೋಗಲಿಲ್ಲ. ಅದರ ಅರ್ಥ ನಾವು ಧರ್ಮಿಷ್ಟರಲ್ಲದಿದ್ದರೆ, ಎಂಥ ಭಯಂಕರ ಪಾಪಿಯೂ ನಮ್ಮ ಮುದ್ದು ಮಗನಾಗಿ ಜನಿಸಬಹುದು! ಅಂಥವನಿಗಾಗಿ ತಂದೆತಾಯಿ, ಲಂಚ ಕಾಳಸಂತೆ ಮುಂತಾದವನ್ನೂ ಮಾಡುತ್ತಿರಬಹುದು! ಪರಮಹಂಸ ಯೋಗಾನಂದರು ತಮ್ಮ ಒಂದುಅನುಭವ ತಿಳಿಸಿದ್ದಾರೆ. ಅವರ

ಶಿಷ್ಯೆಯೊಬ್ಬಳು ಆವಳ ಮುದ್ದುಮಗುವನ್ನು ಅವರ ಕೈಮೇಲೆ ಹಾಕಿದ
ಆದರೆ ಫಕ್ಕನೆ ದೇವರು, ಅದು ಹಿಂದೆ ಕೆಟ್ಟ ಕೊಲೆಗಾರನಾಗಿದ್ದವ ಎಂ
ತಿಳಿಸಿದ. ಫಕ್ಕನೆ ಕೈಬಿಡಲಿಕ್ಕಿದ್ದ ಅವರು ಪ್ರಯತ್ನಪಟ್ಟು ತಡಕೊಂಡ
ಆದರೆ ತಾಯಿಗೆ ಅದು ಅತಿ ಮುದ್ದುಮಗು! ಎಂಥ ಮಾಯಾ ಪ್ರಪಂ

ನಾಲ್ಕನೇ ಕತೆಯಲ್ಲಿ ಸಾಲ ಸಂದಾಯ ಮಾಡದ್ದಕ್ಕೆ ಸಾಲಕೊಟ್ಟ
ಮನೆಯ ನಾಯಿಯಾಗಿಹುಟ್ಟಿದ್ದು, ಬ್ರಾಹ್ಮಣನಾಗಿದ್ದ ಹಿಂದಿನಜನ್ಮದ ಸ್ಮ
ದೃಷ್ಟಾಂತಕ್ಕೆ ಒಬ್ಬ ಹುಟ್ಟುಕುರುಡ ಬಹಳ ಹಿಂದಿನಜನ್ಮದಲ್ಲಿ ತ ಪಂಗಡದಕಾಡುಜನರು ಸೆರೆಹಿಡಿದ ಶತ್ರುಗಳಕಣ್ಣಿಗೆ ಕೆಂಡದಕೋಲು ತುರುಕು ಹುದ್ದೆಯಲ್ಲಿದ್ದ. ಕೈಸೀ ಆ ದೋಷದ ಆಧಾರದಮೇಲೆ ಚಿಕಿತ್ಸೆ ಹೇಳಿ ಕಣ ಗುಣಪಡಿಸಿದ. ಕಣ್ಣುಬಂದನಂತರ ಅವ ಪ್ರಾಧ್ಯಾಪಕನಾದ. ಮತ್ತೊಬ್ ಯಾವಾಗಲೂ ಕಾಯಿಲೆ (ರಕ್ತಹೀನತೆ)ಯಲ್ಲಿದ್ದವ ಹಿಂದಿನಜನ್ಮದಲ್ಲಿ ಪೇರು ನಲ್ಲಿ ಒಬ್ಬನ ರಾಜ್ಯ ಕಿತ್ತುಕೊಂಡು ತಾನೇ ರಾಜನಾಗಲು ಅಪಾರಮಟ್ಟದ ರಕ್ತಪಾತನಡೆಸಿದ್ದ. ಆದ್ದರಿಂದ ಈಗ ಕಾಯಿಲೆ ಬಂತು ಎಂದು ತಿಳಿಯಿತ ಒಬ್ಬಳು ತಂತಿ ಇಲಾಖೆಯಲ್ಲಿ ಚಿಕ್ಕ ಕೆಲಸವಿದ್ದವಳಿಗೆ, ನೀನು ಹಿಂದಿನಜನ್ಮದ ಚಿತ್ರಕಲೆಯಲ್ಲಿ ನಿಪುಣಳಾಗಿದ್ದೆ. ಆ ಶಕ್ತಿಯ ಪ್ರಯೋಜನಬೀಳುವ ವೃ ಹಿಡಿ, ಎಂದಾಗ ಹಾಗೆ ಮಾಡಿ ಬೇಗ ಉತ್ತಮಮಟ್ಟಕ್ಕೆ ಏರಿದಳು. ಒಬ್ಬ ಸುಂದರಳೂ ಸಮರ್ಥಳೂ ಆಗಿ ಕಾರ್ಯದರ್ಶಿಯ ಕೆಲಸ ಮಾಡುತ್ತಿದ್ದವಳ ತನ್ನವರೆಂಬವರು ಯಾರೂ ಇರಲಿಲ್ಲ, ಆದರೆ ಎಷ್ಟೇ ಆಶಿಸಿದರೂ ಅವಳ ವಿವಾಹವಾಗುವವರು ಸಿಕ್ಕಲಿಲ್ಲ. ಒಕ್ಕುಂಟಿತನದ ವ್ಯಥೆ ಬಹಳಕಾಡುತ್ತಿತ್ತು ಅದಕ್ಕೆ ಕಾರಣ ಕೈಸಿ ಕಂಡುಕೊಂಡು ತಿಳಿಸಿದ. ಹಿಂದಿನಜನ್ಮದಲ್ಲಿ ಅವಳ ಗಂಡ, ಎರಡು ಮಕ್ಕಳು ಇದ್ದರು. ಆದೇಕೋ, ಗಂಡ ಥಕ್ಕನೆ ಸಮಾಜದ

ರ್ಯಾದೆ ಕಳಕೊಂಡ. ಆಗ ಅವನ ಪತ್ನಿ ತಾನು ಇನ್ನು ಹೇಗೆ ಸಮಾಜದಲ್ಲಿ ಖತೋರಿಸಲಿ ಎಂದು ಕೇವಲ ತನ್ನ ಕಷ್ಟ ಮಾತ್ರ ಎಣಿಸುತ್ತ ಜೀವ ್ಕಂಡಳು. ಪತಿಯ ಅತ್ಯಂತ ಕಷ್ಟದಕಾಲದಲ್ಲಿ ಅವನ ಬೆಂಬಲಕ್ಕೆ ನಿಲ್ಲುವ, ಾಧಾನಕೊಡುವ, ತಾನು ಸತ್ತರೆ ಮಕ್ಕಳ ಗತಿ ಏನು ಎಂದು ಚಿಂತಿಸುವ ಸಕ್ಕೆ ಹೋಗಲಿಲ್ಲ. ಆದ್ದರಿಂದ ಈಗ ತನ್ನನ್ನು ಪ್ರೀತಿಸುವವರು ಬರಲಿ ದು ಪೇಚಾಡುವ ಸ್ಥಿತಿ ಬಂತು!

ಕೈಸಿ ಬಹಳಸರಳನೂ ಸೌಮ್ಯನೂ ಪರೋಪಕಾರಿಯೂ ಆಗಿದ್ದ. ಅವ ಧರ್ಮ ನಂಬುವವನೂ ಆಗಿದ್ದು ಕ್ರಿಶ್ಚನರು ನಂಬದ ಹಿಂದಿನಜನ್ಮಗಳ ರ ಹೇಳಲಾರಂಭಿಸಿದಾಗ, ತನ್ನೊಳಗೆ ಏನೋ ಪಿಶಾಚ ಸೇರಿಕೊಂಡು ಹೀಗೆ ಡುತ್ತಿದೆಯೋ ಎಂದು ಹೆದರಿದ. ಆದರೆ ಕ್ರಿಶ್ಚನ್ ಧರ್ಮದ ಆದಿಕಾಲ ಪುನರ್ಜನ್ಮ ನಂಬುತ್ತಿದ್ದರು ಎಂದು ಅವ ಕೇಳಿದಾಗ ಸಮಾಧಾನ ಂದಿದ. ಹಿಂದೂ ಮತ್ತು ಬುದ್ಧ ಧರ್ಮಗಳಲ್ಲಿ ಪುನರ್ಜನ್ಮಗಳ ವಿಚಾರ ಾಳವಾಗಿ ಇದೆ ಎಂದು ತಿಳಿದು ಅವನ್ನು ಆದಷ್ಟು ಓದಿದ. ಕರ್ಮ, ಕರ್ಮ ಎಂಬವುಗಳ ಭಾವನೆಗಳು ಅವನಿಗೆ ಅತ್ಯುಪಯುಕ್ತವಾಗಿ ತೋರಿದವು ಶ್ಚನ್‌ಧರ್ಮದಲ್ಲಿ ಅವಿಲ್ಲ). Many Mansions ಪುಸ್ತಕದಲ್ಲಿ ಕರ್ಮ ಶಬ್ದ ಬಹಳ ಸಾರಿ ಬರುತ್ತದೆ. ಕರ್ಮದಫಲ ಅನುಭವಿಸಲೇಬೇಕಾಗು ; ಜೀವಾತ್ಮ ದೇವರ ಅಂಶ ; ನಮ್ಮ ಎಲ್ಲಕಷ್ಟಗಳಿಗೂ ನಾವೇಕಾರಣರು, ುದನ್ನು ಕೈಸಿ ಒತ್ತಿ ಹೇಳುತ್ತಿದ್ದ.

ನಮಗೆ ಹಿಂದಿನಜನ್ಮಗಳ ಸ್ಮರಣೆ ಏಕಿಲ್ಲ ಎಂಬವಾದಕ್ಕೆ ಅವನ ಉತ್ತರ, ನಡೆಯುತ್ತೇವಾದರೂ ನಡೆಯಲುಕಲಿತ ಶ್ರಮ ನೆನಪಿದೆಯೆ? ನಾಟಕ ನಟಿಸುವವ ಆ ಕಾಲಕ್ಕೆ ಬೇರೆಎಲ್ಲ ಮರೆತಿರುವುದಿಲ್ಲವೇ? ಎಂಬುದಾಗಿತ್ತು. ತಸ್ಥರಿಗೆ ಶಿಕ್ಷೆಕೊಡುವಾಗ ಅವರು ಮಾಡಿದತಪ್ಪು ತಿಳಿಸುವುದು ಮಾತ್ರ ಮವಲ್ಲವೇ ಎಂಬುದಕ್ಕೆ, ಬೇಕಾದುದು ಅನುಭವದ ಸಾರಾಂಶ, ದೇವರ ಗಳನ್ನೆಲ್ಲ ಆದಷ್ಟು ಹೆಚ್ಚು ಆಚರಿಸಬೇಕು ಎಂಬ ಪರಿಣಾಮ ; ಹೊರತು ದೇ ಬುದ್ಧಿಯ ತರ್ಕ ಪ್ರಯೋಜನವಿಲ್ಲ, ಎನ್ನುತ್ತಿದ್ದ.

ಕೈಸಿಯು ಚಿಕಿತ್ಸೆ ಹೇಳಿದ ೩೦,೦೦೦ ಜನರ ವಿಚಾರದಲ್ಲಿ ೨,೫೦೦ಜನರ ರ್ಜನ್ಮದ ಪರಿಶೀಲನೆ ಮಾಡಿದ್ದ. ಕೈಸಿಯು ಜೋತಿಷ್ಯವೂ ತುಂಬಾ ಾರಿ ; ನವರತ್ನಗಳನ್ನು ಧರಿಸುವುದು ತುಂಬಾ ಪ್ರಯೋಜನಕಾರಿ ಎಂದೂ ದ್ದ. ಕಾಮವನ್ನು ಪರಿಶುದ್ಧದ ದಾರಿಗೆ ತಿರುಗಿಸುವುದರ ಅವಶ್ಯಕತೆ

ತುಂಬಾ ಹೇಳಿದ್ದ. ಕೆಟ್ಟ ಕಾಯಿಲೆ ಬಂದಾಗ ಕೇವಲ ಡಾಕ್ಟರರನ
ನೋಡುವುದಲ್ಲದೆ ಹಿಂದಿನ ಕರ್ಮಫಲಕ್ಕೆ ಹೋಮ, ಪ್ರಾರ್ಥನೆ, ಮಂತ್ರಾ
ಪರಿಹಾರ ಮಾಡಿಸುವ ಹಿಂದೂಕ್ರಮ ವ್ಯರ್ಥವಲ್ಲ; ಕಾರಣಯುಕ್ತವಾದು
ಎಂದಾಯಿತು.

೧೫. ಠಕ್ಕು ಪುನರ್ಜನ್ಮದ ಕತೆಗಳು

ಪುನರ್ಜನ್ಮದ ಕತೆಗಳಲ್ಲಿ ಠಕ್ಕುತರದವೂ ಉಂಟಾದದ್ದುಂಟು. ಜಂ
ಪುರದ ವಿಶ್ವವಿದ್ಯಾಲಯದ ಡಾಕ್ಟರ್ ವ್ಯಾಸರು ಮತ್ತು ರತನ್‌ಸಿಂಗ್ ಎಂ
ಮನಶಾಸ್ತ್ರಜ್ಞರು ಪುನರ್ಜನ್ಮದಕತೆಗಳ ಶೋಧನೆಯಲ್ಲಿ ಮೂರುಠಕ್ಕುಕತೆಗ
ಎಂದು ಕಂಡುಬಂದ ವಿಚಾರವನ್ನುಪ್ರಕಟಿಸಿದ್ದರು. ಒಂದುಕತೆಯಲ್ಲಿ ಒಬ್ಬ
ಯುವತಿ ಗಂಡನ ಕುಟುಂಬದೊಡನೆ ಬಾಳಲು ಸರಿಬೀಳದೆ ಚಡಪಡಿಸುತ್ತಿ
ವಳು, ತಾನು ತನ್ನ ಪತಿಯ ತೀರಿಹೋಗಿದ್ದ ತಾಯಿ, ತನಗೆ ಕುಟುಂಬದ
ಉನ್ನತಸ್ಥಾನ ಸಿಕ್ಕಬೇಕು ಎಂದು ಹೇಳಿಕೊಳ್ಳುತ್ತಿದ್ದಳು. ತನ್ನ ಹಿಂದಿನಜ
ದಲ್ಲಿ ಸಾಯುವ ಮುಂಚೆ ಹಿತ್ತಲಲ್ಲಿ ತಾನು ಹುಗಿದಿಟ್ಟಿದ್ದ ಬೆಳ್ಳಿಪಾತ್ರ ಇನ
ಅಲ್ಲೇ ಇರಬೇಕು, ಎಂದೂ ತಿಳಿಸಿದಳು. ಅವಳು ಸೂಚಿಸಿದಲ್ಲಿ ನೆಲಅಗಿದಾ
ಬೆಳ್ಳಿಪಾತ್ರವೂ ಸಿಕ್ಕಿತು. ಅದೊಂದು ಅವಳ ಕತೆಗೆ ರುಜುವಾತಾಯಿತು.

ಎರಡನೆಯ ಕತೆಯಲ್ಲಿ ಒಬ್ಬ ಯುವತಿ ತಾನು ಹಿಂದಿನಜನ್ಮದಲ್ಲಿ ತ
ಪತಿಯ ದೊಡ್ಡಪ್ಪನ ಪತ್ನಿಯಾಗಿದ್ದೆ ಎಂದು ಹೇಳಲಾರಂಭಿಸಿದಳು. ಅ
ಅವಳೂ ಅವಳ ಪತಿಯು ಪತ್ನಿಕಳಕೊಂಡ ಪತಿಯ ದೊಡ್ಡಪ್ಪನೊಡನೆ ವಾಸಿ
ತ್ತಿದ್ದರು. ಆ ದೊಡ್ಡಪ್ಪನ ಅತಿ ಬಿಗುವಾದ ಮರ್ಜನ್ನು ಅವಳು ಸಹಿ
ತ್ತಿರಲಿಲ್ಲ. ತನ್ನ ಪುನರ್ಜನ್ಮದ ರುಜುವಾತಾಗಿ ಅವಳು ತನ್ನ ಕಾಲಕ
ಮುಂಚಿನದಾದ ಆ ದೊಡ್ಡಪ್ಪನ ಹಳೇಜೀವನದ ಅಚಾತುರ್ಯದ ವರ್ತ
ಗಳನ್ನು ಸಾರಿ ಅವರನ್ನು ಬಹಳ ನಾಚಿಕೆಗೇಡಿನ ಸ್ಥಿತಿಗೆ ತಂದಳು.

ಮತ್ತೊಂದು ಕತೆ ೧೦ ವರ್ಷಪ್ರಾಯದ ಹುಡುಗನ ವಿಚಾರದ್ದು. ಅ
ತಾಯಿಯನ್ನು ಕಳಕೊಂಡವ. ಅಜ್ಜಿಯೊಡನೆ ಬೆಳೆಯುತ್ತಿದ್ದ. ಆದರೆ ಅವ
ಅಲ್ಲಿ ತನ್ನಮನೆಯಲ್ಲಿದ್ದ ಮಮತೆ, ಸ್ಥಾನಇರಲಿಲ್ಲ. ಅವ ತಾನು ಹಿಂದಿನಜ
ದಲ್ಲಿ ಸೈನ್ಯದಲ್ಲಿ ಕೆಪ್ಟನ್ ಆಗಿದ್ದೆ. ಕಾಶ್ಮೀರದ ಕದನದಲ್ಲಿ ಮೃತನಾದೆ. ತ
ಬಂದೂಕುಗಳಪರಿಚಯ ಚೆನ್ನಾಗಿದೆ, ಉಪಯೋಗಿಸುತ್ತಿದ್ದೆ ಎನ್ನುತಿದ್ದ. ವಿ
ಕಲಿಯುವುದುಬಿಟ್ಟು ಹಿರಿಯರನ್ನು ಗದರಿಸುವುದು, ಅವರಿಗೆ ಪೆಟ್ಟುಹೊಡೆ

ಕ್ಕೊ ಹೋಗುವುದು ಆರಂಭಿಸಿದ. ಹಿಂದಿನಜನ್ಮ ಸ್ಮರಿಸಿದವ ಎಂಬ ಖ್ಯಾತಿ ರಲ್ಲಿ ಹಬ್ಬಿಸಿದ.

ಈ ಮೂರೂ ಕತೆಗಳಲ್ಲಿ ಮನೆಯವರು ಮನಃಶಾಸ್ತ್ರಜ್ಞರ ಸಹಾಯ ಗುಸಿದರು. ಮನಃಶಾಸ್ತ್ರಜ್ಞರ ಅನುಭವವೇನೆಂದರೆ ಯಾರಾದರೂ ವಿಶೇಷ ರ್ತನೆ ತೋರಿಸಿಕೊಳ್ಳುತ್ತಿದ್ದರೆ, ಅದಕ್ಕೆ ಅವರಲ್ಲಿ ಹುದುಗಿರುವ, ಈಗ ತ್ಯಕ್ಷವಾಗಿ ಏನೂತೋರದ, ಏನೋ ಮುಖ್ಯವಾದ ಭಯ, ಅಸಮಾಧಾನ, ೀಷ ಕೆಲಸಮಾಡುತ್ತಿರುವುದು, ಎಂಬ ಶಂಕೆ. ಆದ್ದರಿಂದ ಅವರು ವ್ಯಕ್ತಿ ರಣೆ ಖಂಡಿಸದೆ ಸಂಶಯಬಾರದ ರೀತಿಯಲ್ಲಿ ಹಿನ್ನೆಲೆಯಲ್ಲಿರಬಹುದಾದ ಶೇಷ ಅಸಮಾಧಾನದ ಸೂಚನೆಗಳ ಬಗ್ಗೆ ಅನುಕಂಪ ತೋರಿಸಿ, ಅದನ್ನು ರ್ಣ ಶೋಧಿಸಿ ಹೊರಗೆಡಹುತ್ತಾರೆ. ತಮಗಾಗುವ ಅಸಹನೀಯವಾದ ನ್ಯಾಯಕ್ಕೆ ಪ್ರತೀಕಾರವಾಗಿ ಬೇರೆದಾರಿ ಕಾಣದೆ ಈ ಪುನರ್ಜನ್ಮದ ನಟನೆಯ ವಶ್ಯಕತೆ ಉಂಟಾಯಿತಲ್ಲವೇ ಎಂದು ಸೂಚಿಸಿ, ನಿಜತ್ವ ಹೊರಗೆಡಹಲು ತ್ನಿಸುತ್ತಾರೆ. ಮೇಲಿನ ಮೂರುಕತೆಗಳಲ್ಲೂ ಮನಃಶಾಸ್ತ್ರಜ್ಞರು ಹೀಗೆ ಜತ್ವ ಹೊರಗೆಡಹಿದರು.

ಪ್ರಥಮಕತೆಯಲ್ಲಿ ಬೆಳ್ಳಿ ಪಾತ್ರೆ ತಾನೇ ಮಣ್ಣಲ್ಲಿ ಅಡಗಿಸಿ ಇಟ್ಟು, ದಿನಜನ್ಮದಲ್ಲಿಟ್ಟದ್ದು ಎಂದು ಸುಳ್ಳುಹೇಳಿದ್ದನ್ನು ಯುವತಿ ಒಪ್ಪಿದಳು. ಡನೆಕತೆಯಲ್ಲಿ ಹೆಂಗಸು ಊರಿನ ಒಬ್ಬಳು ಮುದುಕಿಯಿಂದ ತನ್ನ ಪತಿಯ ಪ್ಪನ ಹಿಂದಿನಕಾಲದ ತಪ್ಪುವರ್ತನೆಗಳ ವಿಚಾರವನ್ನು ಸಂಗ್ರಹಿಸಿ ಂಡು, ಅದೆಲ್ಲ ತನ್ನಸ್ಮರಣೆಯದು ಎಂಬ ಉಪಾಯ ಹೂಡಿದ್ದು ಒಪ್ಪಿ ು. ಅವಳು ಪತಿಯೊಡನೆ ಬೇರೆಬಿಡಾರ ಮಾಡಿದ ಮೇಲೆ ಅವಳ ವರ್ತನೆ ಯಾಯಿತು. ಹುಡುಗನ ವಿಚಾರದಲ್ಲಿ, ಅವನ ಅಸಮಾಧಾನಕ್ಕೆ ತನಗೆ ಜಿ ಮನೆಯಲ್ಲಿ ಹಿಂದಿನ ಸ್ಥಾನಮಾನ ಇರದ್ದು ಕಾರಣವಾದರೂ ಅವ ಕೆಂದೇ ವಂಚಿಸಲು ಹೊರಟವನಲ್ಲ. ಯುದ್ಧದ ವೀರರ ಕಾರ್ಯಗಳ ರ್ಣನೆ ಕೇಳುತ್ತ ತಾನೂ ವೀರನಂತೆ ಕಾದಾಡಿ ಕೀರ್ತಿ ಗಳಿಸಬೇಕು, ನರಲ್ಲಿ ಕೀರ್ತಿ, ಮೆಚ್ಚಿಗೆ, ಪಡೆದು ಬಾಳಬೇಕು ಎಂಬ ಭ್ರಮೆ ತಾನು ಕ್ಕೂ ಯುದ್ಧದಲ್ಲಿ ಕಾದಿದವ, ಮಡಿದವ, ಎಂಬ ಭಾವನೆಹೊಂದುವಂತೆ ಡಿರಬೇಕು. ಆ ಪ್ರಾಯದಲ್ಲಿ ಅದು ಸಾಧ್ಯ. ಆ ಹುಡುಗ ವಿಶೇಷ ಟ್ಟದಲ್ಲಿ ಬುದ್ಧಿ ಚುರುಕುತನ ಇದ್ದವ ; ತನ್ನ ಮನೋರಾಜ್ಯದಲ್ಲಿ ಆಗಾಗ ಳುಗಿರುವ ಅಭ್ಯಾಸದವ. ಪಾಕಿಸ್ಥಾನದ ಯುದ್ಧದಕಾಲದಲ್ಲಿ ಅವ

ರೇಡಿಯೋ ಪ್ರಸಾರವನ್ನು ಬಹಳ ಲಕ್ಷ್ಯಕೊಟ್ಟು ಕೇಳುತ್ತಿದ್ದನಂತೆ. ಯುದ್ಧದ ವಿಚಾರದ ಮಾತಂಗಳನ್ನು ನೆನಪಿಟ್ಟುಕೊಂಡವ ; ಪುಸ್ತಕಗಳಲ್ಲಿ ಯುದ್ಧದ ಶಸ್ತ್ರಗಳ ವಿವರ ನೋಡಿಕೊಂಡವ. ಆದ್ದರಿಂದ ಹೀಗೆಲ್ಲ ಆಗಿ ಪುನರ್ಜನ್ಮದ ಕಲ್ಪನಾ ರಾಜ್ಯದಲ್ಲಿ ಸಿಕ್ಕಿಬಿದ್ದವ, ಎಂದು ಶೋಧಕರು ತೀರ್ಮಾನಕ್ಕೆ ಬಂದರು. ಅವನಿಗೆ ಮೂರುತಿಂಗಳ ಕಾಲ ಇದಕ್ಕೆ ವಿರುದ್ಧ ಸೂಚನೆಗಳನ್ನು ಕೊಡುತ್ತ ಮಾನಸಿಕ ಚಿಕಿತ್ಸೆ ನಡೆಸಿದಾಗ ಅವ ಗುಣಹೊಂದಿ ಕಾಲ್ಪನಿಕತೆ ಮರೆತು ಪಾಠಕಲಿಯಲಾರಂಭಿಸಿದ, ವಿಧೇಯತೆ ಬೆಳೆಸಿ ಗುಣಹೊಂದಿದ.

ಮೇಲೆಹೇಳಿದ ಶೋಧನೆಗಳ ರುಜುವಾತಿಂದ ಪುನರ್ಜನ್ಮಕತೆಗಳೆಲ್ಲ ಠಕ್ಕು ಎಂಬ ಭಾವನೆಗೆ ಆಸ್ಪದ ಬರಲಾರದು. ಮೇಲಿನ ಪ್ರಥಮ ಎರಡುಕತೆಗಳಲ್ಲಿ ಕುಟುಂಬದವರೊಡನೆ ಬಾಳಲು ಒಗ್ಗದ ಆದರೆ ತಮ್ಮ ಪತಿಯರನ್ನು ಕುಟುಂಬಗಳಿಂದ ಪ್ರತ್ಯೇಕಿಸಲಾರದಾದ ಯುವತಿಯರು, ಬೇಕಾದಷ್ಟು ಬೆಳೆದವರಿದ್ದು ತಮ್ಮ ವಂಚಕ ಸ್ವಭಾವದಿಂದ ಪ್ರೇರಿತರಾಗಿ ಠಕ್ಕು ಪುನರ್ಜನ್ಮದ ಕತೆಗಳನ್ನು ಹೆಣೆದರು. ಪತಿಯರನ್ನು ವಂಚಿಸಿದರು ; ಇತರ ಹಿರಿಯರನ್ನೂ ಅಗೌರವಿಸಿದರು. ಆದರೆ ಬಹುಮಟ್ಟಿನ ಪುನರ್ಜನ್ಮದಕತೆಗಳಲ್ಲಿ ಅತಿ ಚಿಕ್ಕಮಕ್ಕಳು ತಮ್ಮ ತಂದೆತಾಯಿಯರಲ್ಲಿ ಯಾವ ದ್ವೇಷ, ಪ್ರೀತಿಯಕೊರತೆ, ಕಂಡವರಲ್ಲ. ಕೇವಲ ಅಂತರ್ಯದಿಂದ ಬಂದ ಹಿಂದಿನಜನ್ಮದ ಸ್ಮರಣೆ ತಡಕೊಳ್ಳಲಾರದೆ ಅವನ್ನು ಹೇಳುತ್ತ ಬಂದರೇ ಹೊರತು ಯಾರಮೇಲೂ ದ್ವೇಷಸಾಧಿಸುವ ಭಾವನೆಯೇ ಅವರಲ್ಲಿ ಸಾಧ್ಯವಿರಲಿಲ್ಲ. ಹಿಂದಿನಜನ್ಮಗಳ ಬಂಧುಗಳನ್ನು ಕಂಡಾಗ ಅವರ ಬಗ್ಗೆ ಈಗಿನವರಿಂದ ಎಷ್ಟೋ ಹೆಚ್ಚು ಪ್ರೀತಿ ಅವರಲ್ಲಿದ್ದುದು ಅವರೊಡನೆ ಬಹಳ ಹೆಚ್ಚುಕಾಲ ಬಾಳಿದ್ದರಿಂದ ಹೊರತು, ಈಜನ್ಮದ ಬಂಧುಗಳ ಪ್ರೀತಿಯ ಕೊರತೆಯಿಂದೇನಲ್ಲ. ಪುರ್ನಜನ್ಮದಸ್ಮರಣೆ ಬಂದ ಹಸುಳೆಗಳು ಬಹುಮಟ್ಟಿನವು ಬೆಳೆದಂತೆ ಆ ಸ್ಮರಣೆ ಕಳಕೊಳ್ಳುವುದೇ ವಾಡಿಕೆಯಂತೆ. ಆದರೆ ಕೇಸ್ಟರ್ ಮುಂತಾದ ಕೆಲವರಲ್ಲಿ ಕಡೆಯವರೆಗೂ ಆ ಸ್ಮರಣೆ ಉಳಿದದ್ದುಂಟು. ಆದರೆ ಅವರಿಗೂ ಯಾರಮೇಲೂ ದ್ವೇಷವಿದ್ದುದು ಅದಕ್ಕೆ ಕಾರಣವಲ್ಲ. ತಾನು ಕಳೆದ ಘೋರಯುದ್ಧದಲ್ಲಿ ಮಡಿದ ಇಂಗ್ಲಿಷರವ, ಎನ್ನುವವನೊಬ್ಬ ಡಿಲ್ಲಿಯಲ್ಲಿ ಜನಿಸಿ ಅಲ್ಲಿ ವಾಸಿಸುವವ, ಇಂಗ್ಲಿಷ್ ಕಲಿಯದೇ ಆ ಭಾಷೆಚೆನ್ನಾಗಿ ಮಾತಾಡುತ್ತಾನೆ ; ಮತ್ತು ಹಿಂದೂ ಜೀವನಕ್ರಮ ಒಗ್ಗದಿದ್ದು ಬಿಳಿಜನರಂತೆ ಈಗಲೂ ಊಟಕ್ಕೆ ಚಮಚೆ, ಚೂರಿ, ಫೋರ್ಕ್ ಉಪಯೋಗಿಸುತ್ತಿದ್ದಾನೆ. ಮನಃಶಾಸ್ತ್ರದ ಡಾಕ್ಟರ್ ಯಮುನಾಪ್ರಸಾದರು ಅವನ ವಿಚಾರ ಸಂಗ್ರಹಿಸಿ

ಕಟಿಸಿದ್ದರು (ಆನಂದ ಬಜಾರ್ ಪತ್ರಿಕೆ ೧೧-೯-೧೯೬೪). ಈ ಊಟದ ಮದ ಹವ್ಯಾಸ ಯಾರ ಮೇಲಿನ ದ್ವೇಷದಿಂದಲೂ ಅಲ್ಲ; ಹಿಂದಿನ ಚಟ ಾತ್ರವೇ ಇರಬೇಕಷ್ಟೆ!

ಮೂರನೆಕತೆಯ ಬಾಲಕ ಯುದ್ಧದಲ್ಲಿ ತಾನು ಮಡಿದವನೊಬ್ಬನೆಂದನೇ ೊರತು ರತನ್‌ಸಿಂಗನಂತೆ, ತಾನೇ ಉದಯ ಸಿಂಗನೆನ್ನಲಿಲ್ಲ. ಅವನ ನರ್ಜನ್ಮಕ್ಕೆ ರುಜುವಾತು, ಅವ ಹಿಂದಿನಜನ್ಮದ ಊರಿಗೆ ಹೋಗಿ ಅಲ್ಲಿನ ದಿನ ಬಂಧುಗಳನ್ನೆಲ್ಲ ಗುರುತಿಸಿ, ಹಳೆಯಘಟನೆಗಳನ್ನು ನೆನಪಿಗೆತಂದದ್ದು, ದಿನ ಬಂಧುಗಳಲ್ಲಿ ಅಪಾರಪ್ರೀತಿ ತನ್ನಷ್ಟಕ್ಕೆ ಉಕ್ಕಿಬಂದದ್ದು, ಎಲ್ಲ ಕೇವಲ ್ನದು ಪುನರ್ಜನ್ಮಎಂಬ ಬೆಂಬಲವಿಲ್ಲದ ಹೇಳಿಕೆಯಂತಲ್ಲ. ಇತರ ಕತೆ ಲ್ಲೂ ಅಷ್ಟೇ.

ಎರಡನೆಕತೆಯ ಯುವತಿ ಹಳ್ಳಿಯ ಮುದುಕಿಯ ಬಾಯಿಯಿಂದ ತನ ಗದ ಮಾವನ ಹಿಂದಿನ ಕೆಟ್ಟನಡತೆಯ ವಿಚಾರ ಸ್ವಲ್ಪಕೇಳಿದೊಡನೆಯೇ ಪಾಯಮಾಡಿ ಅವಳಿಂದ ಆದಷ್ಟು ಹೆಚ್ಚು ಅಂಥ ಸಂಗ್ರಹ ಮಾಡಿದ್ದು ಳಲ್ಲಿ ಕುಹಕಬುದ್ಧಿ ಇದ್ದುದರಿಂದ. ಚಿಕ್ಕಮಕ್ಕಳಿಗೆ ಪುನರ್ಜನ್ಮ ಎಂದರೇ ಬ ಭಾವನೆಯೇ ಸರಿಯಾಗಿ ಇರಲಾರದು. ಕೇಳಿದ ವಾರ್ತೆಗಳನ್ನು ತಮ್ಮ ಪಯೋಗಕ್ಕಾಗಿ ಪುನರ್ಜನ್ಮದ ನೆಪಹೇಳಿ ಹೇಗಾದರೂ ಉಪಯೋಗಿಸಿ ಳ್ಳಬೇಕೆಂಬಷ್ಟು ಬುದ್ಧಿವಂತಿಕೆ ಅವರಲ್ಲಿರಲಾರದು. ಕ್ರಿಶ್ಚನ್ ದೇಶಗಳಲ್ಲಿ, ಸಲ್ಮಾನ ದೇಶಗಳಲ್ಲಂತೂ ಸಾಮಾನ್ಯವಾಗಿ ಪುನರ್ಜನ್ಮದ ಮಾತೇ ಬರು ಿಲ್ಲ. ಆದರೆ ಅಲ್ಲೂ ಪುನರ್ಜನ್ಮದ ಘಟನೆಗಳು ಇವೆ.

ಮುಖ್ಯವಾಗಿ ನಮ್ಮ ದೇಶದವರು ದಿವ್ಯಜ್ಞಾನದ್ವಾದ ವೇದ ಮತ್ತು ಸ್ತ್ರಗಳಲ್ಲಿ ಪುನರ್ಜನ್ಮದ ಕತೆಗಳು ಅತಿ ಧಾರಾಳವಾಗಿ ಇವೆ ಎಂಬುದರಿಂದ, ರ್ಜನ್ಮಗಳ ಕತೆಗಳು ತಕ್ಕ ವಿವರಗಳೊಡನೆ ಪ್ರಕಟವಾದಾಗ ಅವನ್ನು ುತ್ತಾರೆ. ಪುನರ್ಜನ್ಮವನ್ನು ಸನಾತನಧರ್ಮ ಮಾತ್ರವಲ್ಲ, ಅದರ ಾಖಾಧರ್ಮಗಳಾದ ಬುದ್ಧಧರ್ಮ, ಜೈನಧರ್ಮ, ಲಿಂಗಾಯತಧರ್ಮ, ್ಖಧರ್ಮ, ಆರ್ಯಸಮಾಜ, ಬ್ರಹ್ಮೋಸಮಾಜ, ಎಲ್ಲಾ ಒಪ್ಪುತ್ತವೆ. ಾತ್ಮ ಕರ್ಮಫಲ ಅನುಭವಿಸಬೇಕಾದುದೂ ಒಪ್ಪುತ್ತವೆ. ಕರ್ಮಗಳಫಲ ುಭವಿಸಲಿಕ್ಕೆ ಪುನರ್ಜನ್ಮಗಳು ಅಗತ್ಯ ಎಂಬುದನ್ನೂ ಈ ಶಾಖಾಧರ್ಮಗಳು ಒಪ್ಪುತ್ತವೆ. ಪುನರ್ಜನ್ಮ, ಕರ್ಮಫಲ ಇವು ಮಾತ್ರವೇ ಮಾನವ ನನದ ಸಮಸ್ಯೆಗಳನ್ನು ಅತಿಕಾರಣಯುಕ್ತವಾಗಿ ವಿವರಿಸಲಾಪವು. ಅವನ್ನು

ಎಲ್ಲಹಿಂದುಗಳೂ ತಪ್ಪದೆನಂಬಿ ಜೀವನದ ಸಮಸ್ಯೆಗಳ ವಿಚಾರದಲ್ಲಿ ದಾರಿಕಾ
ವುದು ಸರ್ವತ್ರ ಕ್ರಮವಾಗಿತ್ತು. ಆದರೆ ಈಗಿನ ಅನೇಕಾನೇಕ ಯುವಕರಿ
ನಮ್ಮ ಧರ್ಮದ ಜ್ಞಾನಬೇಡ. ಆದೊಂದು ತೊಡಕು ಎಂಬುದೇ ಅ
ಭಾವನೆ. ಸಾಲದ್ದಕ್ಕೆ, ಈ ತತ್ವಗಳಿಲ್ಲದ ಕ್ರಿಶ್ಚನ್ ಮುಂತಾದ ಏಕಮಾ
ಜನ್ಮ ಬೋಧಿಸುವ ಧರ್ಮದವರಿಗೂ ಪುನರ್ಜನ್ಮಗಳ ಕತೆಗಳು ಎಷ್ಟೆ
ಬಂದರೂ ಒಪ್ಪಲುಮನಸ್ಸಿಲ್ಲದೆ ಅವು ಸುಳ್ಳೇಇರಬೇಕು ಅಥವಾ ರುಜುವಾ
ಸಾಲದು, ಎಂಬ ದೃಷ್ಟಿಕೋನಮಾತ್ರ ತೋರಿಸುತ್ತಾರೆ. ಹಿಂದೂ ಆದವರ
ನಾಸ್ತಿಕ ಪಾಶ್ಚಾತ್ಯ ಸಂಸ್ಕೃತಿಯ ಗುಲಾಮ–ಶಾಸ್ತ್ರಜ್ಞರೂ ಪುನರ್ಜನ್ಮದ ಕ
ಗಳಲ್ಲಿದೋಷಕಾಣುವುದೇ ವಾಡಿಕೆ. ಅದರಿಂದಲೂ ನಮ್ಮ ಯುವಕರಿಗೆ ತವ
ನಾಸ್ತಿಕಧೋರಣೆಯ ಒಲವು ಉಳಿಯುತ್ತದೆ. ಆದ್ದರಿಂದ ಈ ಪುನರ್ಜ
ಗಳ ಕತೆಗಳು ಏಕೆ ಠಕ್ಕಲ್ಲ ಎಂಬುದನ್ನು ಮತ್ತಷ್ಟೂ ವಿಮರ್ಶೆಮಾಡುತ್ತೇನ

ಇವರ ಒಂದು ಸಾಮಾನ್ಯ ಆಕ್ಷೇಪ ಆಪರೂಪಕ್ಕೆ ಕೆಲವರಲ್ಲಿ ಇತರ
ಮನಸ್ಸಲ್ಲಿರುವ ವಿಚಾರ ತಿಳಿಯುವ ಶಕ್ತಿಯಿದೆ, ತಮ್ಮದು ಪುನರ್ಜನ್ಮ ಎಂ
ವರು ಈ ಶಕ್ತಿ ಪಡೆದವರಿದ್ದು ಇತರರ ಮನಸ್ಸಿನಲ್ಲಿದ್ದ ವಿಚಾರ ತಿಳಿದು ಅ
ತಮ್ಮದೇ ಅನುಭವ ಎಂದು ಹೇಳುತ್ತಾರೆ ಎಂಬ ವಾದ. ಆದರೆ ಆ ಮಕ್ಕಳ
ಆ ಶಕ್ತಿಯಿದ್ದರೆ ಅವರು ಆ ಶಕ್ತಿಯನ್ನು ಕೇವಲವಾಗಿ ಹೊಂದಿಕೆ ಬರು
ಹಿಂದಿನಜನ್ಮದ ಕತೆ ಹೆಣೆಯಲಿಕ್ಕೆ ಮಾತ್ರ ಏಕೆ ಉಪಯೋಗಿಸಿಕೊಳ್ಳುತ್ತಾರೆ
ಇನ್ನಾವ ವಿಚಾರದಲ್ಲಿಯೂ ಏಕೆ ಅದರ ಉಪಯೋಗ ಮಾಡುತ್ತಿಲ್ಲ? ಅ
ವಾದ ವಿಚಾರಶೀಲತೆ ಇಲ್ಲದವರಾದ ಮಕ್ಕಳು ತಮಗೆಗೊತ್ತಾದ ವಿಷಯಗ
ನ್ನೆಲ್ಲ ಸ್ವಾಭಾವಿಕವಾಗಿಯೇ ಮರೆಮಾಚದೆ ಹೇಳದೆ ಬಿಡುತ್ತಿದ್ದರೇ? ಅವ
ಹಿಂದಿನಜನ್ಮದ ಬಂಧುಗಳೆಂಬವರನ್ನು ಮಾತ್ರವೇ ಏಕೆ ಗುರುತಿಸಿದರು? ತವ
ಕತೆಗೆ ಹೊಂದಿಕೆಯಾದ ಕಟ್ಟಡಗಳವಿಚಾರಮಾತ್ರ ಏಕೆ ಉತ್ಸಾಹ ತೋರಿ
ದ್ದರು? ಮನೆಗೆ ಮುಂಚೆ ಉಪ್ಪರಿಗೆ ಇದ್ದಿರಲಿಲ್ಲವಲ್ಲ, ಮರ ಇಲ್ಲಿದ್ದ
ಏನಾಯಿತು ಎಂಬ ತರದ ಎಲ್ಲವಿಚಾರ ಅಲ್ಲಿದ್ದ ಇತರರಮನಸ್ಸಿಗೆ ಹೊಳೆ
ಅಲ್ಲಿಂದ ಇವರ ಮನಸ್ಸಿಗೆ ಬರುವುದು ಸ್ವಾಭಾವಿಕವೇ?

ಪುನರ್ಜನ್ಮದ ಕತೆಗಳಲ್ಲಿ ಕೆಲವಲ್ಲಿ, ಒಂದು ಸಾಂಕೇತಿಕ ಘಟನೆ ನಡೆದಾ
ಮಾತ್ರ ಹಿಂದಿನಸ್ಮರಣೆ ಆರಂಭವಾಯಿತು. ಸ್ವರ್ಣಲತ ತನ್ನ ಹಿಂದಿ
ಪರಿಚಿತ ಊರಿಗೆ ಹೋದಾಗಮಾತ್ರ ತನ್ನವರ ಮನೆಹತ್ತಿರವೇ ಇದೆ ಎಂದಳ
ಪ್ರಮೋದನಿಗೆ ಊರಿನ ಬಿಸ್ಕೆಟು ಅಂಗಡಿಕಂಡು ಹಿಂದಿನಸ್ಮರಣೆ ಆರಂ

ಯಿತು. ಎಂಟುವರ್ಷದ ಒಬ್ಬಳು ಹಿಂದೂಹುಡುಗಿ ಮಥುರಾಕ್ಕೆ ಪ್ರಥಮ ರಿಗೆ ಹೋದಾಗ ಅದನ್ನು ಚೆನ್ನಾಗಿಗುರುತಿಸಿ, ಆಗ ಮಾತ್ರವೇ ತಂದೆಯನ್ನು ತ್ತಾಯಿಸಿ ತನ್ನಮನೆ ಎಂಬಲ್ಲಿಗೆ ಖಚಿತವಾಗಿ ದಾರಿಬಲ್ಲವಳಂತೆ ಕರಕೊಂಡು ೋದಳು. ಅಲ್ಲಿ ತನ್ನ ಪೂರ್ವಜನ್ಮದಪತಿ, ಮಗನನ್ನು ಗುರುತಿಸಿದಳು. ಳು ಹುಟ್ಟುವ ಮೂರುವರ್ಷದ ಮುಂಚೆ ಆವ ಪತ್ನಿಯನ್ನುಕಳಕೊಂಡಿದ್ದ. ರನ್ನು ಎಷ್ಟಕ್ಕೂ ಬಿಡಲಾರೆ ಎಂದು ಹಠಮಾಡಿದ ಹುಡುಗಿಯನ್ನು ವತ್ತಾ ಸಿ ಕರಕೊಂಡುಹೋದಾಗ ಆವಳು ಅತ್ಯಂತದುಃಖದಿಂದ ಸ್ಮೃತಿಭ್ರಂಶತೆ ೊಂದಿದಳಂತೆ (ಸ್ವಾಮಿ ಶಿವಾನಂದರ ಸಂಗ್ರಹ ಪುಟ ೧೯೭). ಕಾಶಿಯಲ್ಲಿ ನೇ ವಯಸ್ಸಲ್ಲಿ ಸತ್ತ ಹುಡುಗ ಎಮೇಸನ್ ಪ್ರಾಂತ್ಯದಲ್ಲಿ ಜನಿಸಿದ ಬಾಲಕ ನೆ ವರ್ಷಬಂದಾಗ ಮಾತ್ರ ಹಿಂದಿನಜನ್ಮ ನೆನೆದ ಏಕೆ ?

ಮತ್ತೊಂದು ವಿಶೇಷವೂ ಆಕ್ಷೇಪಕರಿಂದ ವಿವರಿಸಲಾಗದ ತರದ್ದು. ೇಲಕ್ಕರ ಒಬ್ಬಳು ಮಗಳಿಗೆ ಹಿಂದಿನಜನ್ಮದ ಎರಡು ದೇಹಕಲೆಗಳಿದ್ದವು. ್ಲಿಯಲ್ಲಿರುವ. ಹಿಂದೆ ಯುದ್ಧದಲ್ಲಿಮಡಿದ ಆಂಗ್ಲರವ ತನ್ನ ಮರಣಉಂಟು ಡಿದ ಗುಂಡು ದೇಹಕ್ಕೆ ಹೊಕ್ಕಲ್ಲಿ ಈಗಲೂ ಕಲೆ ಇರುವುದು ತೋರಿಸು ನೆ. ಆಬಿತ್‌ಸುಜಲ್ಮಸನಿಗೆ ಕೊಲ್ಲಲಿಕ್ಕೆ ತಲೆಗೆ ಹೊಡೆದಾಗ ಆದ ಗಾಯದಕಲೆ ನ ಪುನರ್ಜನ್ಮದಲ್ಲಿಯೂ ಇಸ್ಮಾಯಿಲ್ಲನತಲೆಯಲ್ಲಿ ಇತ್ತು. ಗ್ವಾಲಿಯರಿನ ದುಹಳ್ಳಿಯ ಶ್ಯಾನುಭಾಗ ತನ್ನಲ್ಲಿದ್ದ ಚೊಟೇಲಾಲ್ ಎಂಬವನ ಆಸ್ತಿಗಳ ಖಲೆಗಳಲ್ಲಿ ಫೋರ್ಜರಿ ಮಾಡಿ ಅವನಿಗೆ ಬಹಳ ಹಾನಿಮಾಡಿದ. ಅವ ್ಟಿಂದ ಶ್ಯಾನುಭಾಗನನ್ನು ಕೊಂದದ್ದಲ್ಲದೆ, ಫೋರ್ಜರಿ ಮಾಡಲು ಸಹಾಯ ದವೆಂದು ಅವನ ಮೂರು ಬೆರಳುಗಳನ್ನು ಕತ್ತರಿಸಿಬಿಟ್ಟ. ಪುನರ್ಜನ್ಮ ೆದ ಮಗುವಿಗೆ ಬಲಕೈಯಲ್ಲಿ ಮೂರುಬೆರಳುಗಳಿರಲಿಲ್ಲ! ಇದರ ಹಿನ್ನೆಲೆಯ ಮಗುವೇ ತಂದೆಗೆ ತಿಳಿಸಿತು (ಸ್ವಾಮಿಶಿವಾನಂದರ ಸಂಗ್ರಹದಿಂದ). ಟರ್ಕಿ ನದ ಪರಾಮಾನಸ ಸಂಘದ ಅಧ್ಯಕ್ಷ ಬಿಸಟ್‌ಬೇಯರರು ಪ್ರಕಟಿಸಿದ ಒಂದು ರ್ಜನ್ಮದ ಕತೆಯಲ್ಲಿ ಹಲವುವರ್ಷಗಳ ಮುಂಚೆ ಗುಂಡುಹಾಕಿ ಕೊಲ್ಲಲ್ಪಟ್ಟ ುದುಕನೊಬ್ಬನ ಪುನರ್ಜನ್ಮದ ದೇಹದಲ್ಲಿ (ತಾನು ಆ ಮುದುಕನೇ ಎಂದ ಡುಗನ ದೇಹದಲ್ಲಿ) ಗುಂಡುಗಳು ಮುದುಕನ ಮೈಹೊಕ್ಕಿದ್ದ ಏಳು ಸ್ಥಾನ ಲ್ಲಿಯೇ ಏಳು ಕಲೆಗಳಿದ್ದವಂತೆ.

ಪುನರ್ಜನ್ಮವಿದೆ ಎಂದು ಒಪ್ಪಲು ಮನಸ್ಸಿಲ್ಲದವರ ಮತ್ತೊಂದು ವಾದ ನೆಂದರೆ ತಮ್ಮ ಹಿಂದಿನಜನ್ಮದವಿಚಾರ ಹೇಳುವವರಲ್ಲಿ ಯಾವುದೋ

ಪ್ರೇತವು ಸೇರಿಕೊಂಡು ತನ್ನ ಜನ್ಮದ ವಿಚಾರ ಅದು ಹೇಳುತ್ತದೆ ಎಂಬುದ
ಆದರೆ ಪಿಶಾಚದಬಾಧೆಯಿರುವವರ ಲಕ್ಷಣಗಳು ಕೆಲವುಇವೆ. ಅವು ಕೆಲವುವ
ಕೂಗುತ್ತವೆ. ಮೈ ನಡುಕ ಹುಟ್ಟುತ್ತದೆ, ಕಣ್ಣು ತಿರುಗುತ್ತದೆ, ದೀರ್ಘಶ್ವ
ಬಿಡುತ್ತವೆ. ಒಂದು ಚೆಂಬು ನೀರು ಪೂರ್ಣ ಕುಡಿದುಬಿಡುತ್ತವೆ. ಮತ್ತೊಂ
ಮುಖ್ಯಗುರುತು ಪಿಶಾಚಬಾಧೆ ಇರುವವನನಾಡಿಬಡಿತ ಅತ್ಯಂತ ನಿಧಾನವಾ
ವುದು, ಅನಂತರ ಅತ್ಯಂತ ಜೋರಾಗುವುದು ಆಗುತ್ತಲೇ ಇರುತ್ತದಂ
ಅಂತೂ ನಮ್ಮಲ್ಲಿ ಭೂತಬಾಧೆ ಅಪೂರ್ವವಲ್ಲದಿದ್ದು ಗುರುತಿಸುವವರು ಅ
ಇದ್ದಾರೆ. ಆದರೆ ನಮ್ಮ ಪುನರ್ಜನ್ಮದಕತೆಗಳಲ್ಲಿ ಯಾರಿಗೂ ಈ ಸಂಶ
ಬಂದದ್ದೇ ಇಲ್ಲ! ಪಿಶಾಚ ಹಿಡಿದವರು ಗೋಕರ್ಣದ ಪಿತೃಸ್ಥಳಿಯ
ನರಸವಾಡಿಯಲ್ಲಿ ಅಥವಾ ಗಾಣಗಾಪುರದಲ್ಲಿ ಮುಂತಾಗಿ, ತಾವು ಹಿಡಕೊ
ದೇಹಬಿಟ್ಟು ಹೋಗಲು ತಮ್ಮಬಗ್ಗೆ ಏನು ಮಾಡಬೇಕು ಎಂದು ತಿಳಿಸುವು
ವಾಡಿಕೆ.

ಅಮೇರಿಕದ ಪ್ರಾಧ್ಯಾಪಕ ಆಯನ್ ಸ್ಟಿವನ್‌ಸನ್ ಎಂಬ ಮನಃಶಾಸ್ತ್ರ
ತಜ್ಞರು ೧೯೬೧ ರಲ್ಲಿ ಇಂಡಿಯಾಕ್ಕೆ ಬಂದಾಗ ಇಲ್ಲಿನ ಪುನರ್ಜನ್ಮದ ಕತೆಗಳನ
ಕೇಳಿ ಆ ಭಾಗದ ಶೋಧನೆ ಕೈಗೊಂಡರು. ಇಪ್ಪತ್ತು ಪುನರ್ಜನ್ಮಗಳನ
ಆರಿಸಿ ಪುನರ್ಜನ್ಮ ಸೂಚಿಸುವ ೨೦ ಕತೆಗಳು (Twenty Cases Sugges
tive of Re-incarnation) ಎಂಬ ಗ್ರಂಥ ಪ್ರಕಟಿಸಿದರು. ಆಮೇ
ಭೂಲೋಕದ ಬೇರೆ ಬೇರೆ ಕಡೆಗಳ ಸುಮಾರು ೩೦೦ ಕತೆಗಳನ್ನು ಶೋಧ
ಅವಲ್ಲಿ ೪ಳನ್ನು ಸವಿವರವಾಗಿ ಚರ್ಚಿಸಿ ಮತ್ತೊಂದು ಅಂಥ ಗ್ರಂಥ ಪ್ರಕಟ
ದರು. ಇವೆಲ್ಲ ನಿಜವಾಗಿ ಪುನರ್ಜನ್ಮದಕತೆಗಳಲ್ಲ ಎಂದು ಒಡ್ಡುವಕಾರಣಗ
ಸಮರ್ಪಕವಲ್ಲ ; ಅತಿ ಚಿಕ್ಕಮಕ್ಕಳು ತಮ್ಮ ಹಿಂದಿನಜನ್ಮದ ಹೇಳಿಕೆಗಳನ
ಅವು ಸುತ್ತಲಿನ ಜನರಿಂದ ಸಂಗ್ರಹಿಸಿರಬೇಕೆಂಬುದು ಅಸಾಧ್ಯ; ಅದು ಅವು
ಮನಸ್ಸಿನ ವಿಶೇಷಶಕ್ತಿಯಿಂದ ಸಂಗ್ರಹಿಸಲ್ಪಟ್ಟವು ಎಂಬುದೂ ಸಮರ್ಪಕವ
ಎಂದು ಅವರು ತಿಳಿಸಿರುವರು.

೧೯೭೨ರಲ್ಲಿ ಅವರು ಪುನಃ ಈ ದೇಶಕ್ಕೆ ಬಂದಾಗ ಡಿಲ್ಲಿಯಲ್ಲಿ ಭಾಷ
ಮಾಡುತ್ತ ತಾವು ಅಷ್ಟರಲ್ಲಿ ೧,೨೦೦ ಇಂಥಕತೆಗಳನ್ನು ಶೋಧನೆ ಮಾಡಿರು
ಅವಲ್ಲಿ ೧೭೦ ಈ ದೇಶದವು, ಉಳಿದವು ಅತಿಹೆಚ್ಚಿನವು ಸಿಲೋನು, ಥೈಲೆಂಡ
ಬರ್ಮಾ, ಟರ್ಕಿ, ಸಿರಿಯಾ ಮತ್ತು ಲೆಬನೋನಿನವು. ಅವಲ್ಲಿ ಬಹುಮಟ್ಟಿನ
ಅತಿ ಚಿಕ್ಕ ಮಕ್ಕಳು ತಮ್ಮ ಹಿಂದಿನಜನ್ಮ ಸ್ಮರಿಸಿದವಾಗಿವೆ ; ತಂದೆ, ತಾಯ

ೂರ ಸ್ನೇಹಿತರ ಪತ್ತೆ ಹಚ್ಚಿದ್ದಾಗಿವೆ. ಅವನ್ನೆಲ್ಲ ಪುನರ್ಜನ್ಮದ ಕತೆಗಳಲ್ಲ ನ್ನಲಿಕ್ಕೆ ಏನೂ ಕಾರಣಸಾಲದು, ಅವು ಪುನರ್ಜನ್ಮವನ್ನೇ ಸಮರ್ಥಿಸುತ್ತವೆ ಂದಿರುವರು. ತನ್ನ ಶೋಧನೆಯಲ್ಲಿ ಕೇವಲ ಒಂದು ಠಕ್ಕು ಪುನರ್ಜನ್ಮದ ಕತೆ ಾತ್ರಇತ್ತು ಎಂದಿರುವರು. ಕೆಲವುಮಕ್ಕಳು ಸಿಡಿಲು ಬಡಿದೋ, ಬೆಂಕಿ ಿಂದಲೋ, ನೀರಿಂದಲೋ ಮಡಿದವರು, ಪುನರ್ಜನ್ಮದಲ್ಲಿ ಇವಕ್ಕೆ ವಿಶೇಷ ಯಪಡುವುದು ಕಾಣಬರುತ್ತದೆ. ಪುನರ್ಜನ್ಮದಕತೆಗಳಲ್ಲಿ ಬಹುಮಟ್ಟಿನವು ರ್ಮರಣದಿಂದ ಫಕ್ಕನೆ ಮೃತರಾದವರದ್ದು, ಕೆಲವರ ಹಿಂದಿನಜನ್ಮದ ಘನ ೋಗಗಳು ಮರುಜನ್ಮದಲ್ಲೂ ಬಂದಿವೆ, ಎಂದಿರುವರು (ಹಿಂದೂ ಪತ್ರಿಕೆ ೪-೧೦-೧೯೭೨). ಈ ದೇಶದಲ್ಲಿ ಪುನರ್ಜನ್ಮ ನಂಬುವವರೇ ಇರುವುದರಿಂದ ಥ ಕತೆಹೇಳುವ ಮಕ್ಕಳನ್ನು ಹೆದರಿಸಿ ಬಾಯಿಕಟ್ಟಿಸುವ ಕ್ರಮವಿಲ್ಲದ್ದರಿಂದ ೋಧನೆಗೆ ಈ ದೇಶ ಅನುಕೂಲ ಎಂದೂ ಅವರು ಹೇಳಿರುವರು.

ಆದ್ದರಿಂದ ಈ ಎಲ್ಲ ಪುನರ್ಜನ್ಮದಕತೆಗಳು ಪುನರ್ಜನ್ಮ ಖಂಡಿತ ಇದೆ ಬುದನ್ನು ಸ್ಥಾಪಿಸುತ್ತವೆ. ಆ ಬಗ್ಗೆ ಸಂಶಯಬೇಡ. ಆದರೆ ಹಾಗೆ ನಮ್ಮ ಚ್ಚರಕ್ಕಾಗಿ ದೇವರು ಆರಿಸುವ, ತೀರಾತೀರಾ ಅಪರೂಪದ ದೃಷ್ಟಾಂತಗಳ ವಾತ್ಮರು ಮುದುಕರಾಗಿ ಜೀವನದಲ್ಲಿ ಉತ್ಸಾಹ ಕಳಕೊಂಡವರಲ್ಲ. ರೋಗ ದ ಬಹಳ ಕಂಗೆಟ್ಟು ಸತ್ತರೆಸಾಕು ಎಂಬ ಸ್ಥಿತಿ ಮುಟ್ಟಿದವರಲ್ಲ. ಇನ್ನೂ ಳಬೇಕೆಂದು ಬಹಳ ಬಯಸಿದವರು ಅಕಾಲ ಮರಣಕ್ಕೀಡಾಗಿ ಸಾಯುವಾಗ ಳಬೇಕೆಂಬ ಯೋಚನೆಯೇಇದ್ದವರಲ್ಲಿ ಸ್ವಲ್ಪಜನರನ್ನು ದೇವರು ಕೂಡಲೆ ಕಯಾತನೆಯಲ್ಲಿಡದೆ, ಆ ಶಿಕ್ಷೆ ಮುಂದೆ ಹಾಕಿ, ಹಿಂದಿನಜನ್ಮದ ವಿವರಗಳು ರವೆಯಾಗುವಮುಂಚೆಯೇ ಪುನರ್ಜನ್ಮ ಕೊಟ್ಟಂತಿದೆ. ಆದರೆ ಈ ಒಂದೇ ದ ವರ್ಗದವರಿಂದ ಬೇಕಾದಷ್ಟು ಧರ್ಮದ ಮಾಹಿತ್ಯಬರುವುದಿಲ್ಲ. ರ್ಜನ್ಮ ಇದೆ ಎಂಬುದು ಮಾತ್ರ ಚೆನ್ನಾಗಿ ಸ್ಥಾಪಿಸಲ್ಪಡುತ್ತದೆ. ಪ್ರಶ್ನೆ ಳುವವರೂ ಹಿಂದೂಧರ್ಮದ ತತ್ವಗಳಿಗೆ ಸಮರ್ಥನೆಸಿಕ್ಕುವ ತರದ ಪ್ರಶ್ನೆ ನ್ನು ಕೇಳುತ್ತ ಬಂದುದಿಲ್ಲ.

೬. ಜೀವಾಣುಗಳೂ ಜೀವಾತ್ಮರೇ?

ಪುನರ್ಜನ್ಮ ಒಪ್ಪುವವರನ್ನು ವಿಜ್ಞಾನಿಗಳು ಮತ್ತೊಂದು ರೀತಿಯಲ್ಲಿ ಸ್ಮೃ ಶಾಸ್ತ್ರದ ಅಪನಂಬಿಕೆಗೆ ನೂಕುವುದುಂಟು. ಅದಕ್ಕೆ ಹೂಡಲ್ಪಟ್ಟವಾದ ನ್ನ ಅಲ್ಲಗಳೆದದ್ದು ನಾನು ಕಾಣಲಿಲ್ಲ. ಆದ್ದರಿಂದ ಅದನ್ನು ಇಲ್ಲಿ ಯಂತ್ರಿಸು

ತ್ತೇನೆ. ಜೀವವಿಜ್ಞಾನಶಾಸ್ತ್ರದಲ್ಲಿ ಹಲವುತರಗಳ ಜೀವಕಣಗಳ ವಿವರಣೆಯಿದ
ನಮ್ಮದೇಹ, ಪ್ರಾಣಿಗಳದೇಹ, ವನಸ್ಪತಿಗಳದೇಹ ಎಂಬ ಜೀವಾತ್ಮನ ಮ
ಗಳೆಲ್ಲ ಜೀವಾಣುಗಳಿಂದ ನಿರ್ಮಿತವಾದವು. ಅವುಗಳಲ್ಲದೆ ಸ್ವತಂತ್ರವಾ
ಬಾಳುವ ಏಕಾಣುಜೀವಿಗಳು, ಕೆಲವು ನಮಗೆ ಉಪಕಾರ ಮಾಡುವವು, ಕೆಲ
ಕಾಲರಾ ಮುಂತಾದ ರೋಗ ತರುವವು, ಇವೆ ಎಂದೆಲ್ಲ ವಿಜ್ಞಾನ ಕಂ
ಕೊಂಡಿದೆ. ಇದು ನಮ್ಮಶಾಸ್ತ್ರದ ಜೀವಾತ್ಮನ ಮತ್ತು ಪುನರ್ಜನ್ಮದ ಕಲ್ಪನೆ
ವಿರುದ್ಧವಾಗಿದೆ ಎಂಬ ಆಕ್ಷೇಪ ಬಂದಿದೆ. ಈ ಹೊಸಭಾಗದ ಜ್ಞಾನಕ
ನಮ್ಮ ಶಾಸ್ತ್ರದ ಕಲ್ಪನೆಗೂ ಹೊಂದಿಕೆ ಇಲ್ಲವೆಂದಾದರೆ, ಧರ್ಮದಬ
ಉತ್ಸಾಹಕುಂದಲಿಕ್ಕೆ ಇದೂ ಒಂದು ನೆಪವಾಗಬಹುದು.

ಸಾಮಾನ್ಯ ಭಾವನೆಯಂತೆ ಜೀವಕ್ಕೂ ಜಡವಸ್ತುವಿಗೂ ಇರು
ವ್ಯತ್ಯಾಸ, ಜೀವಿ ಆಹಾರ ಹೀರಿ ಜೀರ್ಣಿಸಿಕೊಂಡು ಬೆಳೆಯುಬಲ್ಲದು ; ಸು
ಲಿನ ವಾತಾವರಣದಿಂದ ಉಂಟಾಗುವ ಅನುಕೂಲವಾದ ಅಥವಾ ಪ್ರತಿಕೂ
ವಾದ ಅರಿವುತೋರಿಸುವುದು ; ಬೆಳೆದು ಎಂದಾದರೂ ಮುಂದೆ ತನ್ನಂತೆ ಜೀ
ಯಾಗುವ ಸಂತಾನಉಂಟುಮಾಡಬಲ್ಲದು. ಒಂದು ಹುಂಡು ಕೊಳುಕುನೀರನ
ನೂರಾರುಪಾಲು ದೊಡ್ಡದುಮಾಡಿ ತೋರಿಸುವ ಸೂಕ್ಷ್ಮದರ್ಶಕದ ಮೂಲ
ಪರೀಕ್ಷಿಸಿದಾಗ ಅದರಲ್ಲಿ ಅಮಿಬಾ ಎಂಬ ಜೀವಾಣು ತೋರಬಹುದು. ಅದ
ಒಂದು ಹೊದಿಕೆಯಿದೆ ; ಕೈಕಾಲಿಲ್ಲ. ಅದರೊಳಗೆ ಸ್ವಲ್ಪ ದ್ರವವಿದೆ. ನಡು
ಅತಿಚಿಕ್ಕ ತಿರುಳುಭಾಗವಿದೆ. ಈ ಅಮಿಬಾವು ಹೊರಗಿನ ನೀರಿನಿಂದ ಆಹಾ
ಹೀರಿಕೊಂಡು ಬೆಳೆಯಲಾಪುದು. ಬೇಕಾದಷ್ಟುಬೆಳೆದಾಗ ಅದರತಿರಳು ಎರ
ಭಾಗವಾಗುತ್ತದೆ. ಆಮೇಲೆ ಹೊದಿಕೆಯು ಚೀಲ ಉದ್ದವಾಗಿ, ಅಮಿಬಾ
ವಿಭಾಗವಾಗುತ್ತದೆ. ಎರಡರಲ್ಲೂ ಮುಂಚಿನ ತಿರುಳಿನ ಒಂದೊಂದು ಭಾ
ಮತ್ತು ಸ್ವಲ್ಪ ದ್ರವ ಇರುತ್ತದೆ. ಎಂದರೆ ಈಗ ಅಲ್ಲಿಎರಡು ಅಮಿಬಾಗಳಿ
ಇವು ಪ್ರತ್ಯೇಕವಾಗಿ ಬೆಳೆಯುತ್ತವೆ. ವಿಭಾಗಿಸಿ ನಾಲ್ಕಾಗುತ್ತವೆ, ಆಮೇಲೆ
೧೬ ಮುಂತಾಗಿ ಆಗುತ್ತವೃದ್ಧಿಯಾಗುತ್ತವೆ. ಹೀಗೆ ಅಮಿಬಾಕ್ಕೆ ಸ್ವತಂ
ಜೀವಿಯ ಲಕ್ಷಣಗಳಿವೆ. ಅದರಲ್ಲಿದ್ದ ಮೂರು ವಿಭಾಗಕ್ಕೆ ಕಡಿಮೆಯಿರು
ಜೀವಿತ ಲಕ್ಷಣವಿರುವ ವಸ್ತು ಬೇರೆಇಲ್ಲ. ಆದ್ದರಿಂದ ಈ ಮೂರು ಭಾಗಗ
ರುವ ಅಮಿಬಾ ಏಕಾಣು ಜೀವಾತ್ಮನೇ ?

ನಮ್ಮ ಸುತ್ತಲೂ ನೀರಲ್ಲಿ, ಮಣ್ಣಲ್ಲಿ, ಗಾಳಿಯಲ್ಲಿ, ಧೂಳಲ್ಲಿ, ಜನ
ಎಂಜಲಲ್ಲ, ಮಲದಲ್ಲಿ ಮುಂತಾಗಿ ಹಲವುತರದ ಏಕಾಣುಜೀವಿಗಳಿವೆ. ಕೆಲ

ಾರುಪಾಲು ದೊಡ್ಡದುಮಾಡಿ ತೋರಿಸುವ ಸೂಕ್ಷ್ಮದರ್ಶಕದಲ್ಲಿ ಕಾಣ
ವು. ಇನ್ನುಕೆಲವು ವಿಪರೀತ ಚಿಕ್ಕವಿದ್ದು ೧,೦೦೦ ಪಾಲಿಗಿಂತ ಹೆಚ್ಚು
ರು ಸೂಕ್ಷ್ಮದರ್ಶಕದಲ್ಲಿ ಮಾತ್ರ ತೋರುವವು. ಕೆಲವು ಸಸ್ಯವರ್ಗದವು;
ವು ಹಾನಿಕರವಲ್ಲ. ಕೆಲವು ಸನ್ನಿಪಾತ, ಆಮಶಂಕೆ, ಮಲೇರಿಯಾ, ವಾಂತಿ
, ಟೈಫ್ಯಾಡ್, ಕ್ಷಯ ಸಿಡುಬು ಮುಂತಾದ ರೋಗಕ್ಕೆ ಕಾರಣವಾಗಿ,
ಾಯ ತರದವು ಆಯಾಯ ರೋಗದವರ ಮಲದಲ್ಲಿ, ರಕ್ತದಲ್ಲಿ, ಕಫ
ಮುಂತಾಗಿ ಧಾರಾಳವಾಗಿ ಕಾಣಬರುವುದರಿಂದ ಆಯಾಯ ರೋಗಗಳಿಗೆ
ಕಾರಣ, ಎಂದು ತಿಳಿದುಬಂದಿದೆ. ಒಂದುಜೀವಾಣು ಸರಿಯಾದ ಆಹಾರ
ಾಗ ಅರ್ಧಗಂಟೆಗೆ ಎರಡಾಗುತ್ತದೆ; ೫ ಗಂಟೆಗೆ ೧,೦೨೪ ಆಗುತ್ತದೆ;
ಗಂಟೆಗೆ ೨,೬೨,೧೪೪ ಆಗುತ್ತದೆ.

ನಮ್ಮ ದೇಹಕ್ಕೆ ಕಾರಣ ತಂದೆತಾಯಿಗಳ ಶುಕ್ರ ಶೋಣಿತದಲ್ಲಿದ್ದ
ಡು ಜೀವಾಣುಗಳು ಕೂಡಿ ಒಂದೇ ಜೀವಾಣುವಾಗುವುದು. ಆಗ ಅದರ
ಖ್ಯಭಾಗಗಳೂ ಮೇಲೆಹೇಳಿದಂತೆ ಮೂರೇ, ಅದರ ಕೇಂದ್ರ (ತಿರುಳು)
ತ್ರ ಎರಡುಭಾಗಗಳೂ ಮಿಲನವಾಗಿ ಒಂದಾದದ್ದು. ಆದ್ದರಿಂದಲೇ
ಕ್ಕೆ ಅದ್ಭುತ ತರದ ಹೊಸಶಕ್ತಿಯಿದೆ. ಆ ಗರ್ಭಕೋಶಾಣು ವಿಭಾಗ
ುತ್ತ ಹೆಚ್ಚುತ್ತ ಹೋಗುತ್ತದೆ. ಆದರೆ ಅಮೀಬಾದಂತೆ ಈ ವಿಭಾಗ
ಲ್ಲ ಕೇವಲ ಮೂಲದಂತಲ್ಲ. ಕೆಲವು ಮಾಂಸದಜೀವಾಣುಗಳ ತಂಡ,
ವು ಚರ್ಮದ ಜೀವಾಣುಗಳ ತಂಡ, ಕೆಲವು ರಕ್ತದಜೀವಾಣುಗಳ ತಂಡ,
ವು ನರಗಳಜೀವಾಣುಗಳ ತಂಡ, ಕೆಲವು ಮೂಳೆಯಜೀವಾಣುಗಳ ತಂಡ,
ಂತಾಗಿ ದೇಹದ ಬೇರೆಬೇರೆ ತರದ ಎಲ್ಲಾ ಭಾಗಗಳೂ ಉಂಟಾಗುತ್ತವೆ.
ಘ ಪ್ರತಿಭಾಗವನ್ನೂ ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿದರೆ ಅದು
ಲ ಅದರ ಒಂದೇತರದ ಜೀವಾಣುಗಳಿಂದ ರಚಿತವಾದದ್ದು ಎಂದು
ತ್ತಾಗುತ್ತದೆ. ಮತ್ತು ಒಂದೊಂದು ತರದ ಗುಂಪೂ ತನ್ನದೇಆದ ತರದ
ಸವನ್ನು ತನ್ನ ಒಗಟ್ಟಿಂದ ನಡೆಸಬಲ್ಲುದು. ದೃಷ್ಟಾಂತಕ್ಕೆ ಹೃದಯದ
ಯ ಮಾಂಸದ ಜೀವಾಣುಗಳೆಲ್ಲ ಹೃದಯದ ಬಡಿತದಕೆಲಸವನ್ನು ಒಗ್ಗ
ಗಿಮಾಡಿ ದೇಹದ ರಕ್ತದ ಚಲನೆ ನಡೆಸುತ್ತಲೇ ಇರುತ್ತವೆ. ಅಂತೆಯೇ
ದಲ್ಲಿರುವ ಅಪಾರಸಂಖ್ಯೆಯ ಕೆಂಪುಜೀವಾಣುಗಳು ನಿರಂತರವಾಗಿ ಆಮ್ಲ
ಕ ಮತ್ತು ಅಪಾರ ಸತ್ವವನ್ನು ದೇಹದ ಎಲ್ಲ ಭಾಗಗಳಿಗೂ ಸಾಗಿಸುತ್ತವೆ.
ಲ್ಲಿನ ಕಶ್ಮಲವನ್ನು ಹೀರಿ ಶುದ್ಧೀಕರಣಕ್ಕೆ ತರುತ್ತವೆ.

ದೇಹದ ಯಾವಭಾಗಕ್ಕಾದರೂ ಒಂದು ಮುಳ್ಳುಚುಚ್ಚಿ ಅದರ ತ
ಯಲ್ಲಿದ್ದ ಕೆಟ್ಟ ರೋಗಾಣು ಆ ದೇಹ ಹೊಗ್ಗಿತೆಂದರೆ ಅದು ರಕ್ತವಾ
ಗಳೆಂಬ ಪೌಷ್ಟಿಕಆಹಾರ ಸಿಕ್ಕಿ ಬಹುಬೇಗ ೨-೪-೮ ಮುಂತಾಗಿ ಬೆಳೆದು ನವ
ಕೆಟ್ಟರೋಗಸಂಭವಿಸುವ ಸಂಭವವುಂಟು. ಆದರೆ ನಮ್ಮರಕ್ತದಲ್ಲಿರುವ
ಕಣಗಳೆಂಬ ಜೀವಾಣುಗಳು ಕೂಡಲೆ ಈ ಶತ್ರುವಿರುವಲ್ಲಿಗೆ ಧಾವಿಸಿ ಸು
ಕೋಟೆಕಟ್ಟಿ ಆ ಕೆಟ್ಟರೋಗಾಣುವಿನೊಡನೆ ಹೋರಾಟಮಾಡುತ್ತವೆ. ತ
ಸಂಖ್ಯೆ ಸಾಲದಾದರೆ ಹೊಸ ಬಿಳಿಕಣಗಳ ನಿರ್ಮಾಣ ಕೂಡಲೆ ಆಗುತ್ತ
ಹೀಗೆ ಅಲ್ಲಿ ಈ ಜೀವಾಣುಗಳೂ ರೋಗಾಣುಗಳೂ ತುಂಬುವುದರಿಂದ ಅ
ಚರ್ಮದ ಉಬ್ಬುವಿಕೆ, ನೋವು ಉಂಟಾಗುತ್ತದೆ. ಈ ಯುದ್ಧದಲ್ಲಿಮ
ಎರಡುಪಕ್ಷದ ಅಣುಗಳೇ ಅಲ್ಲಿ ತೋರುವ ರಸಿಕೆ, ನಮ್ಮ ರಕ್ತದಜೀವಾ
ಗಳು ಗೆದ್ದರೆ ಅಲ್ಲಿಗೆ ಹಾನಿನಿಲ್ಲುತ್ತದೆ. ಇಲ್ಲವಾದರೆ ದುಷ್ಟರೋಗಾಣುಗ
ದೇಹಕ್ಕೆಲ್ಲ ಹಬ್ಬಿ ಇಡೀ ದೇಹದಲ್ಲಿ ಯುದ್ಧ ನಡೆಯುತ್ತದೆ. ಅದೇ ನವ
ಆಗ ಬರುವ ಜ್ವರಕ್ಕೆ ಒಂದು ಕಾರಣ.

ಅಂತೆಯೇ ನಾವು ಆಹಾರತಿಂದಾಗ ಹೊಟ್ಟೆಯ ಬದಿಯಲ್ಲಿರು
ಮಾಂಸದ ಜೀವಾಣುಗಳು ಒಗ್ಗಟ್ಟಿಂದ ಕೆಲಸಮಾಡಿ ಜೀರ್ಣರಸಗಳನ್ನುಂ
ಮಾಡಿ ಆಹಾರವನ್ನುಕರಗಿಸುತ್ತವೆ. ಆಹಾರಕೋಶದಲ್ಲಿ ಮತ್ತೂ ಮುಂ
ಇರುವವು ಆಹಾರದ ಸತ್ವಾಂಶ ಹೀರುತ್ತವೆ. ಶ್ವಾಸಕೋಶದ ಸ್ನಾಯುಗ
ಜೀವಾಣುಗಳು ಶ್ವಾಸೋಚ್ಛ್ವಾಸ ಕಾರ್ಯ ಮಾಡಿಸುತ್ತವೆ.

ಒಂದು ಕಟ್ಟಡಕಟ್ಟುವಲ್ಲಿ ನೂರಾರುಜನರು ಕೆಲಸ ಮಾಡುವಲ್ಲಿ ಒ
ಮೇಸ್ತ್ರಿ ಅಲ್ಲಿದ್ದು ಆ ಕೆಲಸನಡೆಸುವುದು ಕಾಣುತ್ತೇವೆ. ಐವತ್ತು ಉಪಾಧ
ಯರು ಕೆಲಸಮಾಡುವ ಶಾಲೆಯಲ್ಲಿ ಒಬ್ಬರು ಮುಖ್ಯೋಪಾಧ್ಯಾಯರಾ
ಇದ್ದೇಇರುತ್ತಾರೆ. ಸಿಪಾಯಿಗಳ ಒಂದುತಂಡ ಯುದ್ಧಮಾಡುತ್ತಿರುವಲ್ಲಿ ಒ
ಕೆಪ್ಟನ್ ಯುದ್ಧನಡೆಸಲಿಕ್ಕೆ ಇದ್ದಾನೆ. ನಮ್ಮ ದೇಹದಲ್ಲಿ ಕೋಟಿಕೋ
ಗಟ್ಟಲೆ ಸ್ನಾಯುಗಳ ಜೀವಾಣುಗಳನ್ನು ರಕ್ತಚಲನೆ ನಡೆಸಲಿಕ್ಕೋ, ಆಹಾ
ಜೀರ್ಣಮಾಡಲಿಕ್ಕೋ, ಶ್ವಾಸಕೋಶದ ಕೆಲಸ ನಡೆಸಲಿಕ್ಕೋ, ಆಹಾರದ ಸ
ದೇಹದ ಭಾಗಗಳಿಗೆ ಕೊಂಡೊಯ್ಯಲಿಕ್ಕೊ, ರೋಗಾಣು ದೇಹಹೊಕ್ಕಾ
ಅವರೊಡನೆ ಯುದ್ಧಮಾಡಿ ನಾಶಸಾಧಿಸಲು ನಿರ್ದೇಶಿಸಲಿಕ್ಕೊ ಮುಂತಾ
ವಕ್ಕೆ ದೇಹದ ಯಜಮಾನನಾದವನು ತಾನೇ ಹೋಗುವುದಿಲ್ಲ. ಹಾಗಾವ
ಅದೆಲ್ಲ ಹೇಗೆ ನಡೆಯುತ್ತದೆಂದು ಕೂಡ ಅವ ಅರಿತಿಲ್ಲ! ಅವನ ನಿದ್ರೆಯಲ್ಲೂ

ದ್ಧಿಯಿಲ್ಲದ ಚಿಕ್ಕ ಮಗುವಿನಲ್ಲೂ, ಒಬ್ಬ ಮೂರ್ಛೆಹೋದಾಗಲೂ ಕೂಡ ಲ್ಲ ಕೆಲಸ ನಡೆಯುತ್ತಲೇಇವೆಯಲ್ಲ!

ಆದ್ದರಿಂದ ಈ ಕೆಲಸವನ್ನು ನಡೆಸುವುದು, ಶಾಸ್ತ್ರವು ನಮಗೆ ತನ್ನದಿವ್ಯ ನದಿಂದ ತಿಳಿಸುವಂತೆ, ನಮ್ಮೊಳಗಿರುವ ಪ್ರಕೃತಿದೇವಿಯೇ. ನಾವು ಜನಿಸು ಗ ದೇವರು ನಮ್ಮ ಪ್ರಾರಬ್ಧಕರ್ಮ ತೆಗೆದಿಟ್ಟು ಆದರ ಅನುಭೋಗಕ್ಕೆ ಾದತರದ ದೇಹ, ಆಯುಸ್ಸು ಕೊಟ್ಟು, ಪ್ರಕೃತಿದೇವಿಗೆ ಪ್ರಾರಬ್ಧದ ರೈಕೆಗೆ ಜವಾಬ್ದಾರಿ ಕೊಡುತ್ತಾನೆ. ಆದ್ದರಿಂದ ನಾವು ತಿಳಿದಿರಲಿ ತಿಳಿಯ ಲಿ, ಅಷ್ಟುಕಾಲ ಪ್ರಕೃತಿ ನಮ್ಮ ದೇಹ ಬಾಳಿಸುತ್ತಾಳೆ. ನಡುವೆ ಕಷ್ಟದ ಭವಕ್ಕೆ ಬೇಕಾದ ರೋಗಗಳನ್ನು, ಪಾಪಪುಣ್ಯಗಳ ವರ್ತನೆಗೆ ಬೇಕಾದ ವುಗಳನ್ನೂ ದೇಹದಲ್ಲಿ ಉಂಟುಮಾಡುತ್ತಾಳೆ. ಆಯುಸ್ಸು ಮುಗಿದಾಗ ೀಗ ಅಥವಾ ಮತ್ತೇನಾದರೂ ಕಾರಣ ಉಂಟುಮಾಡಿ ದೇಹಿಗೆ ಸಾಯಲು ನಸ್ಸಿಲ್ಲದಿದ್ದರೂ ಮರಣತರುತ್ತಾಳೆ. ಅವಳು ದೇಹದ ಅವ್ಯಕ್ತ ಯಜಮಾನಿ.

ಆದರೆ ದೇಹಕ್ಕೆ ಜೀವಾತ್ಮನೂ ಖಂಡಿತ ಯಜಮಾನನಾಗಿದ್ದಾನೆ. ಂದರೆ ಅವನು ನಡೆಯುವಾಗ, ಹಿಡಿಯುವಾಗ, ತಿನ್ನುವಾಗ, ಹಾಡುವಾಗ, ೀಡುವಾಗ, ಚಿಂತಿಸುವಾಗ ಎಲ್ಲ ದೇಹದ ಬೇರೆಬೇರೆ ವಿಭಾಗದ ಜೀವಾಣು ತಂಡವನ್ನು ಅವನ ಇಚ್ಛೆಯಂತೆ ಕೆಲಸಕ್ಕೆ ಹಿಡಿಸುತ್ತಾನೆ. ಜೀವಾತ್ಮನು ಹಬಿಟ್ಟು ಹೋದಾಗ ಅದು ಬಿದ್ದು ಕೊಳೆಯುತ್ತದೆ. ಆದ್ದರಿಂದ ದೇಹ ್ಲ "ನಾನು" ಎಂಬ ಜೀವಾತ್ಮನೂ ದೇಹದ ವ್ಯಕ್ತ ನಿರ್ದೇಶಕ. ಒಂದೇ ೂಲ ಗರ್ಭಜೀವಾಣುವಿನಿಂದ ಮಾಂಸ, ರಕ್ತ ಮುಂತಾದ ತರತರದ ವಾಣುಗಳಾಗುವುದು. ಪ್ರಕೃತಿದೇವಿ ಮತ್ತು ಪ್ರಾಣಿಗಳ ಜೀವಾತ್ಮನು ೇಶಿದಂತೆ ವರ್ತಿಸುವುದು, ಜೀವಾತ್ಮನ ಸ್ವಭಾವವು ಉತ್ತಮವಾದಂತೆ ಸನ ತಾಮಸಿಕ, ಅನಂತರ ರಾಜಸಿಕ, ಸಾತ್ವಿಕಸ್ವಭಾವಕ್ಕೆ ಹೊಂದಿಕೆಯಾಗಿ ಹ ಮಾರ್ಪಡುವುದು, ಈ ಲಕ್ಷಣಗಳಿರುವ ಜೀವಾಣುಗಳನ್ನು ಪ್ರಗತಿ ವಾಣುಗಳು ಎಂದು ನಿರ್ದೇಶಿಸುವ.

ಪ್ರಾಣಿಗಳ ದೇಹ ನಿರ್ಮಿಸುವ ಪ್ರಗತಿ ಜೀವಾಣುಗಳಲ್ಲದೆ ಲೋಕದಲ್ಲಿ ವುಗಳಿಗಿಂತ ಅಪಾರಸಂಖ್ಯೆಯಲ್ಲಿ ಹೆಚ್ಚಾಗಿರುವ ಜೀವಾಣುಗಳೆಲ್ಲವೂ ಕೇವಲ ್ಕಂಟಿಯಾಗಿ ಬಾಳುವವು. ಅವು ಕೆಲವು ಚಿಕ್ಕ ಸರದಂತೆ ಒಂದಕ್ಕೊಂದು ಚಿಕೊಂಡು ಇರುವುದುಂಟು. ಆದರೆ ಗರ್ಭಾರಂಭದಲ್ಲಾದಂತೆ ಯಾವ ಜಾತಿಯವು ಎರಡು, ಅಥವಾ ಭಿನ್ನಜಾತಿಯವು ಎರಡು, ಜೀವಾಣುಗಳಾ

ದರೂಕೂಡಿ ಒಂದೇಜೀವಾಣು ಆಗುವುದೆಂಬುದಿಲ್ಲ. ಮತ್ತು ನಮ್ಮ ಸ್ನಾ
ಗಳೆಲ್ಲಾದಂತೆ ಒಗ್ಗಟ್ಟಿಂದ ಒಂದೇರೀತಿ ಕೆಲಸಮಾಡುವಂತೆ ವರ್ತಿಸುವುದಿ
ದೇಹಹೊಕ್ಕು ರೋಗಉಂಟುಮಾಡುವವು, ಪ್ರತಿಯೊಂದು ವೈಯಕ್ತಿಕವ
ತನ್ನಸ್ವಭಾವದಂತೆ ಆಹಾರ ತಿಂದು ಹೆಚ್ಚುವುದರಮೂಲಕ ರೋಗಹೆಚ್ಚಿ
ತ್ತದೆಯೇ ಹೊರತು ರಕ್ತದಬಿಳಿಕಣಗಳಂತೆ ಉದ್ದೇಶಪೂರ್ವಕವಾಗಿ ಒಮ್ಮ
ವಾಗಿ ಸಮರಕ್ಕಿಳಿದಂತೆ ವರ್ತಿಸುವುದಿಲ್ಲ. ಎಂದರೆ ಈ ಬಿಡು ಜೀವಾಣು
ಮೇಲ್ತರದ ಜೀವಶಕ್ತಿಯ ಆದೇಶದಂತೆ ಗುಂಪಾಗಿ ವರ್ತಿಸಲುಅರಿಯ
ತಾವು ಆರಂಭದಲ್ಲಿ ಉಂಟಾದಂದಿನಿಂದ ಅಮಿಾಬಾ, ವಾಂತಿ ಭೇದಿರೋಗಾ
ಮುಂತಾದವು ಎಷ್ಟೆಲ್ಲ ಅಪರಿಮಿತ ಸಂಖ್ಯೆಗಳಲ್ಲಿ ಉಂಟಾಗುತ್ತಲೇ ಬಂ
ಯಾದರೂ ಅವು ಈಗಲೂ ಹೆಚ್ಚಿನಶಕ್ತಿ, ಬದಲಾವಣೆ, ಬೆಳೆಸಿದ್ದಿಲ್ಲ. ಇ
ತಮ್ಮ ತಮ್ಮ ಮೂಲರೂಪದ ಕೆಲಸಕ್ಕೆ ಬೇಕಾದಮಟ್ಟದಲ್ಲಿವೆ ಎಂದರೆ ಸ್ವ
ಏಳಿಗೆ ಹೊಂದುವ ಪ್ರಗತಿ ಜೀವಾಣುಗಳ ತರದವಲ್ಲ. ಮೂಢ ವೈಯ
ತರದವು. ಈ ವರ್ಗದವನ್ನು ಪ್ರಕೃತಿದೇವಿಯು ಸಂಪೂರ್ಣ ಬೇರೆಯೇ
ಕೆಲಸಕ್ಕಾಗಿ ನೇಮಿಸಿದ್ದಾಳೆ ಹೊರತು ಜೀವಾತ್ಮರಿಗೆ ಜೀವನದ ಅನು
ಕೊಡುವ ಕೆಲಸಕ್ಕಲ್ಲ.

ಲೋಕದಲ್ಲಿ ಮರಗಳಎಲೆಗಳೆಲ್ಲ, ಸತ್ತಮರಗಳ ಕಾಂಡಗಳೆಲ್ಲ, ಪ್ರಾ
ಗಳ ಮಲವೆಲ್ಲ, ಅವುಗಳ ಮೃತದೇಹವೆಲ್ಲ, ಹಾಗೆಯೇ ದಾಸ್ತಾನು ಆಗು
ಬಂದಿದ್ದರೆ ಭೂಮಿಯು ಅವುಗಳಿಂದ ತುಂಬಿಹೋಗಿ ಹೊಸ ಜೀವಾತ
ಬಾಳ್ವಿಕೆಗೆ (ಮರ, ಪ್ರಾಣಿ, ಮಾನವರಾಗಿರಲಿಕ್ಕೆ) ಇಲ್ಲಿ ಸ್ಥಳವೇ ಇರುತ್ತಿರಲಿ
ಆದರೆ ಪ್ರಕೃತಿಯ ಮೂಢ ಜೀವಾಣುಗಳು ಅವನ್ನೆಲ್ಲ ಕೊಳೆಯಿಸಿ, ತಿಂ
ನಾಶಮಾಡುತ್ತವೆ ; ತಾವೂ ಕುರುಹು ಇಡದೆ ನಾಶಹೋದುತ್ತವೆ. ಇ
ಕೆಲವುತರದವು ಗಿಡಮರಗಳಿಂದ ಹೀರಲ್ಪಟ್ಟ ನೆಲದಸಾರ ಪುನಃ ಉಂಟಾಗಲಿ
ಕೆಲಸಮಾಡುತ್ತವೆ. ಮತ್ತೊಂದುವರ್ಗ ಜನರ ಕರ್ಮಫಲವಾಗಿ ಕಷ್ಟದುಃ
ಹೊಂದಲಿಕ್ಕೆ ರೋಗಗಳನ್ನುಂಟುಮಾಡಿ ಪ್ರಕೃತಿದೇವಿಯ ಆಜ್ಞೆ ನಡೆಸುತ್ತ
ಹೀಗೆ ಇವೆಲ್ಲ ಪ್ರಕೃತಿಯದೇವಿಯ ಮುಖ್ಯ ಕೆಲಸವಾದ ದೇವರಿಂದ ಬ
ಆತ್ಮರು ದೇಹಹೊಂದಿ ಜೀವಾತ್ಮರಾಗಿ ಬಾಳಿ ಪಾಠಕಲಿತು, ದೇವರ ಕ
ಹೋಗುವಯಾತ್ರೆಯಲ್ಲಿ ಉಪಸಹಾಯಕ ಕೆಲಸದ ಪೂರೈಕೆಗಾಗಿ ಪ್ರಕೃತಿ
ಜವಾನರಾಗಿ ಶ್ರಮಪಡುವ ಮೂಢ ಅಥವಾ ಬೊಡ್ಡು ಜೀವಾಣುಗಳ ವರ್ಗ
ಸ್ಪಷ್ಟಬೇರೆ. ವಿಜ್ಞಾನಿಯು ಜೀವನ ಎಂದು ಕರೆದದ್ದನ್ನೇ ಶಾಸ್ತ್ರವು ಜೀ

ು ಕರೆಯಬೇಕೆಂದಿಲ್ಲವಷ್ಟೆ. ಒಂದು ಸಾಂಕ್ರಾಮಿಕ ರೋಗದ ಮೂಲ ಗಾಣುವು ದೇಹದಲ್ಲಿ ಕೋಟಿಗಟ್ಟಲೆ ಆಗಿ ಮದ್ದಿಂದ ಅವೆಲ್ಲ ನಾಶವಾಗಿ ು ಮಾತ್ರ ಉಳಿದರೂ, ಆ ವೈಯಕ್ತಿಕ ಸ್ವಭಾವದ ರೋಗಾಣುವಿಗೆ ನದ ಪ್ರಾಣಿ ಲಕ್ಷಣವಾದ ದುಃಖ ವ್ಯಾಕುಲತೆ ಆಗಲಾರದು.

ತರತರದ ಮರ, ಪ್ರಾಣಿ, ಮಾನವ ದೇಹಗಳನ್ನು ಜೀವಾಣುಗಳಿಂದ ತಿದೇವಿ ಬೆಳೆಸುತ್ತಾಳಾದರೂ, ಜೀವಾತ್ಮನು ದೇಹಗಳಿಂದ ಪ್ರತ್ಯೇಕವೇ ಆ ದೇಹಗಳಲ್ಲಿ ಹೆಚ್ಚು ಹೆಚ್ಚಾಗಿ ತನ್ನದು ಎಂಬ ಮಂಕು ಭಾವನೆ ುತ್ತಬರುವಂತೆ ಮಾಡುವುದು ಪ್ರಕೃತಿಯ ಹೊಣೆ.

ಮರದ ಮುಕ್ಕಾಲು ಪಾಲು ಗೆಲ್ಲು ಕಡಿದರೂ ಅದರಲ್ಲಿರುವ ಜೀವಾತ್ಮ ನ್ನ ಆ ದೇಹವನ್ನು ಪೂರ್ಣತನ್ನದೆಂದು ಮಾಡಿಕೊಂಡಿರುವುದರಿಂದ ದೇಹ ಪೆಟ್ಟಿಗೆ ಬಹಳ ಘಾಸಿಹೊಂದಿ ಅದನ್ನುಬಿಟ್ಟುಹೋಗುವುದಿಲ್ಲ. ಮರ ಚಿಗುರುತ್ತದೆ. ನಾಯಿಗೆ ಅಷ್ಟೆಲ್ಲಪೆಟ್ಟಾದಾಗ ಜೀವಾತ್ಮನಿಗೆ ಅದುತನಗೇ ೀತಘಾಸಿಯಾದಂತಾಗಿ ದೇಹ ಬಿಟ್ಟು ಹೋಗುತ್ತಾನೆ. ದೇಹ ಸಾಯು . ಆದರೆ ಕಡಿಮೆಪೆಟ್ಟಾದಾಗ ಡಾಕ್ಟರರ ಸಹಾಯವಿಲ್ಲದೆ ಗುಣಹೊಂದಿ ುತ್ತದೆ. ಮಾನವನಲ್ಲಿ ದೇಹದ ಬಂಧನ ಅತಿ ಬಲವಾಗಿದ್ದು, ಸ್ವಲ್ಪ ಟ್ಟದರೂ ಜೀವಾತ್ಮ ಬಹಳ ಕಷ್ಟಪಡುತ್ತಾನೆ. ಎಂದರೆ ಅವನಲ್ಲಿ ದೇಹದ ನಸ ಪೂರ್ಣರೂಪದಲ್ಲಿ ಸಾಧಿಸಲ್ಪಟ್ಟಿದೆ. ಪ್ರಕೃತಿದೇವಿ ತನ್ನ ಕೆಲಸ ೈಸಿದ್ದಾಳೆ. ಪ್ರವೃತ್ತಿಮಾರ್ಗದ ತುದಿಮುಟ್ಟಿಸಿದ್ದಾಳೆ. ಆಮೇಲೆ ಮಾನವ ಾತ್ಮನು ಶಾಸ್ತ್ರಓದಿ ತಾನು ದೇಹಅಲ್ಲ. ಪ್ರತ್ಯೇಕನಾದ ಅಪಾರಹಿರಿಮೆಯು , ಪ್ರಕೃತಿದೇವಿಯ ದೇಹಗಳ ಸುಖದಅಮಲಲ್ಲಿ ಮುಳುಗಿರಬೇಕಾದ ್ರನಲ್ಲ ಎಂದು ತಿಳಿದು, ಧಾರ್ಮಿಕಸಾಧನೆಮಾಡುತ್ತ ದೇಹದ ಮಮತೆ ನ್ನು ಕಿತ್ತುಹಾಕಿ ಪ್ರತ್ಯೇಕವೇ ಆದಾಗ ನಿರ್ವಿಕಲ್ಪ ಸಮಾಧಿಯಲ್ಲಿ ದೇಹದ ನನೆಯೇ ಬಾರದವನಾಗುತ್ತಾನೆ (ಅಂತೆಯೇ ಪರಕಾಯ ಪ್ರವೇಶಮಾಡಿ ನ ದೇಹ). ಶ್ರೀ ರಾಮಕೃಷ್ಣಪರಮಹಂಸರು ಮೂರುದಿನ ಹಾಗಿದ್ದಾ ೂ ಅವರದೇಹ ಸ್ವಲ್ಪವೂಕೆಡಲಿಲ್ಲ. ಎಂದರೆ ಆಗ ಆತ್ಮನೆಂಬ ಯಜಮಾನ ುವ ದೇಹದಲ್ಲಿ, ದೇಹದಲ್ಲಿರುವ ರೋಗಾಣುಗಳು ಸತ್ತವರಲ್ಲಾಗು ೆ ದೇಹಕೊಳೆಸುವ ಕೆಲಸ ಕೂಡಲೆ ಆರಂಭಿಸುವುದಿಲ್ಲ. ಆ ದೇಹವನ್ನು ರಬ್ಧ ತೀರುವವರೆಗೆ ಬಾಳಿಸುವ ಹೊಣೆಯಿರುವ ಪ್ರಕೃತಿದೇವಿಯ ಆಜ್ಞೆ ತೆ ಅವಳ ಮೂಢ ಜೀವಾಣುಗಳು ಆಗ ತಟಸ್ಥವಾಗಿರುತ್ತವೆ.

ಹೀಗೆ ಪ್ರಗತಿ ಜೀವಕಣಗಳಿಂದುಂಟಾದ ದೇಹದ ಹೊಣೆಯೇ ಬೇ
ಆತ್ಮನ ಪ್ರವೃತ್ತಿಮಾರ್ಗ, ನಿವೃತ್ತಿಮಾರ್ಗ ಎರಡಕ್ಕೂ ಹೊಂದಿಕೊಂಡಿರ
ತರದ್ದು. ನಮ್ಮಶಾಸ್ತ್ರವು ಇರುವುದು ಕೇವಲವಾಗಿ ಮಾನವ ಜೀವಾತ
ಪ್ರಯೋಜನಕ್ಕಾಗಿ. ಈ ಶಾಸ್ತ್ರವು ಜೀವಾತ್ಮ ಎಂದು ಕರೆಯುವ ವರ್ಗ
ಮಾತ್ರ ಅದು ಅನ್ವಯಿಸುತ್ತದೆ. ಲೋಕದ ಬೇರೆ ಏನೆಲ್ಲ ಜ್ಞಾನವಿರಬ
ದಾದರೂ ಧಾರ್ಮಿಕ ಜೀವನಕ್ಕಾಗಿ ಇರುವ ಶಾಸ್ತ್ರಕ್ಕೆ ಅದೆಲ್ಲ ಬೇಡವಾಗಿ
ಆದ್ದರಿಂದ ಈ ಕ್ಷೇತ್ರಮೀರಿದ ಅರ್ಥ ಕಟ್ಟಕೂಡದು.

ನಮ್ಮದೇಹದಮಾಂಸ ಮಾಂಸದಜೀವಕಣಗಳಿಂದ, ಉಗುರು ಉಗು
ಜೀವಕಣಗಳಿಂದ, ಚರ್ಮ ಚರ್ಮಜೀವಕಣಗಳಿಂದ ಮುಂತಾಗಿ ಮಾಡಲ್ಪಟ್ಟಿ
ಯಷ್ಟೆ. ಉಗರು ಬೆಳೆದಂತೆ ಕೂದಲುಬೆಳೆದಂತೆ ಕತ್ತರಿಸಿದರೆ ಹೊಸತು ಹಿ
ನಿಂದ ಬೆಳೆದುಬರುತ್ತದೆ. ಅಂತೆಯೇ ದೇಹದ ಪ್ರತಿಭಾಗದ ಜೀವಕಣಗಳ
ಏಳುವರ್ಷದೊಳಗೆ ನಾಶಹೊಂದಿ ಅವುಗಳ ಸ್ಥಾನದಲ್ಲಿ ಹೊಸ ಕಣಗ
ಬಂದಿರುತ್ತವೆ, ಬೇಸಾಯಗಾರ ವರ್ಷಕ್ಕೆ ಮೂರು ಭತ್ತದಬೆಳೆ ಬೆಳೆಸುವಾ
ಅವನ ಗದ್ದೆ ಕಂಡಾಗಲೆಲ್ಲ ಭತ್ತದ ಪೈರಿನಿಂದ ತುಂಬಿರುವುದು ತೋರುತ್ತ
ಆದರೆ ಅಲ್ಲಿ ಖಾಯಂ ಇರುವುದು ಗದ್ದೆಯ ನೆಲ ಮತ್ತು ಯಜಮಾ
ಅಂತೆಯೇ ಇದು ನನ್ನದೇಹ ಎಂದು ಭಾವಿಸುವ ನಾವು ಖಾಯಂ ಇದ್ದೇ
ಆದರೆ ದೇಹದಪ್ರತಿ ಇಟ್ಟಿಗೆ ಬದಲಾಗುತ್ತ ಬಂದಿದೆ. ಪುನರ್ಜನ್ಮದಿಂದ
ದೇಹದಬಗ್ಗೆ ಆದರೆ ಒಮ್ಮೆಗೇ ಬೇರೆ ದೇಹ ಬರುವುದಕ್ಕೆ ನಾವು ಭಯಪ
ಬೇಕಾಗಿಲ್ಲ.

ಶಾಸ್ತ್ರದಲ್ಲಿ ಜೀವಿ ಎಂದರೇ ಆತ್ಮನು ಪ್ರಕೃತಿ ಕೃತ ದೇಹದೊ
ಪ್ರಕೃತಿ ದೇಹದಮೋಹ ಬೆಳೆಸುವ ಜೀವಾತ್ಮ ಮಾತ್ರ. ಹೀಗೆ ಪ್ರಕ
ಜೀವಾತ್ಮರಿಬ್ಬರ ಆಡಳಿತವಿರುವ ಚೈತನ್ಯ ದೇಹ ಹೊರತು ಕೇವಲ ಪ್ರಕ
ತನ್ನದೇ ಆದ ಏನೋ ಬೇರೆ ಕೆಲಸಕ್ಕೆ ಮಾಡುವ (ದೃಷ್ಟಾಂತಕ್ಕೆ ರೋ
ತರಲಿಕ್ಕೆ) ಜೀವಾಣುಗಳ ದೇಹಗಳಲ್ಲ.

ವಿಜ್ಞಾನಿಯ ತರ್ಕ ಏನೆಂದರೆ, ಪುನರ್ಜನ್ಮ ಎಂದರೆ ದೇಹಕ್ಕೆ ಜೀ
ಕೊಡುವಶಕ್ತಿ ಒಂದುದೇಹದಲ್ಲಿದ್ದದ್ದು ಅದನ್ನು ಬಿಟ್ಟು ಮತ್ತೊಂದು ದೇ
ಪಡೆಯುವುದಲ್ಲವೆ? ಆಗ ಮುಂಚಿನ ದೇಹ ಅಲ್ಲಿ ಸತ್ತುಬೀಳಬೇಕು
ಸಂಪೂರ್ಣ ಹೊಸದೇಹ ಫಕ್ಕನೆ ಚೈತನ್ಯ ಪಡೆಯಬೇಕು. ಆದರೆ ಜೀವಾ
ಗಳ ಆರಂಭಕಾಲದಿಂದ ಅದು ಒಂದು ಎರಡಾಯಿತು, ಎರಡು ನಾಲ

. ಮುಂತಾಗಿ ಆಗುತ್ತ ಬಂದಾಗ, ಅವಕ್ಕೆ ಪ್ರತಿಯೊಂದಕ್ಕೂ ಜೀವನ ಗಳಿದ್ದು ಆದ್ದರಿಂದ **ವಿಜ್ಞಾನಿಯ ಭಾಷೆಯಲ್ಲಿ** ಅವೆಲ್ಲ ಜೀವಾತ್ಮಗಳೇ ೂ ಎಲ್ಲೂ ಯಾವ ದೇಹವೂ ಮೃತವಾಗಿ ಬೀಳಲಿಲ್ಲ. ಅಪ್ಪರವರೆಗೆ ವಾಗಿದ್ದ ಹೊಸ ಚಿಕ್ಕದೇಹ ಚೈತನ್ಯಹೊಂದಿ ಥಕ್ಕನೆ ಬೆಳೆಯಲಾರಂಭಿ . ಮಾನವನ ದೇಹವೆಲ್ಲ ಇಂಥ ಜೀವಾಣುಗಳಿಂದ ಮಾಡಲ್ಪಟ್ಟದ್ದಾದ್ದ ಇಲ್ಲಿಯೂ ಪುನರ್ಜನ್ಮ ಏನೂ ಇಲ್ಲ, ಎಂಬುದು ಅವನ ವಾದ.

ಅವನ ಮತ್ತೊಂದು ತರ್ಕ ಏನೆಂದರೆ ನಾವು ಸಾಮಾನ್ಯವಾಗಿ ಜೀವಿ ವ ಮನುಷ್ಯನಲ್ಲಿ ಬುದ್ಧಿಶಕ್ತಿ, ನೈತಿಕಭಾವನೆ ಮುಂತಾದವೆಲ್ಲ ಇವೆ ಸರಿ. ಅವ ಹುಟ್ಟಿದ ಮಗುವಾಗಿದ್ದಾಗ ಅವು ಇರಲಿಲ್ಲ. ಕೇವಲವಾಗಿ ಹಾಲು ವ, ಆದರಿಂದಾಗಿ ಬೆಳೆಯುವ, ಅಹಿತವಾದ ಬಿಸಿ ತಾಗಿದಾಗ ಗುರುತಿಸಿ ವಶಕ್ತಿ ಮಾತ್ರ ಅದಕ್ಕಿತ್ತು. ಆದರೂ ಅದನ್ನು ಜೀವಿ ಎಂದೇ ಕರೆಯು . ಅಂತೆಯೇ ಗರ್ಭದಲ್ಲಿ ಆದು ಕೈಕಾಲು ಬೆಳೆಸಿತಾದರೂ ಅದರ ಧದ ಗರ್ಭದ ಜೀವಾಣುವಿಗೆ ಕೇವಲ ಇತರ ಜೀವಾಣುಗಳಂತೆ ವಿಭಾಗ ವ, ಬೆಳೆಯುವಶಕ್ತಿ ಮಾತ್ರ ಇದ್ದಿತ್ತಲ್ಲವೆ? ಅಂದಿನಿಂದ ಮಾನವನಾಗುವ ೂ ಆದರ ಶಕ್ತಿ ಕ್ರಮವಾಗಿ ಬೆಳೆಯುತ್ತ ಬಂದಿತ್ತೇ ಹೊರತು, ಹೊಸ ಥಕ್ಕನೆ ಹೊಕ್ಕಂತೆ, ಒಂದು ನಿರ್ದಿಷ್ಟಕಾಲದ ಅನಂತರ ಮಾತ್ರ ಹಾಗದ ಆದ್ದರಿಂದ ಜೀವಾಣುಗಳೆಲ್ಲವೂ ಜೀವಿಗಳೇ. ಗರ್ಭದ ಆದಿಜೀವಾಣು ಹಿಂದಿನ ತಂದೆತಾಯಿಗಳ ಜೀವಾಣುಗಳಿಂದ ಬಂತು. ಅವರಜೀವಾಣು ಮತ್ತೂ ಹಿಂದಿನಿಂದ ಬಂದವು. ಅತ್ಯಂತ ಆದಿಜೀವಾಣುವೇ ಅಲ್ಲವೆ ವಲ್ಲೂ ಕ್ರಮವಾಗಿ ಮುಂದುವರಿಸಿಕೊಂಡು ಬಂದುದು ? ಥಕ್ಕನೆ ಹೊಸ ಆದದ್ದಿಲ್ಲ ಜೀವಾಣುಗಳಿಲ್ಲದೆ ಜೀವಿಯೇ ಇಲ್ಲ. ಇದೂ ಅವರ ವಾದ.

ಆದರೆ ನಮ್ಮ ಶಾಸ್ತ್ರದ ಹೇಳಿಕೆ ಆತ್ಮನು ತನಗೆ ತಕ್ಕುದಾಗಿ ನಿರ್ಮಿ ಟ್ಟಿರುವ ದೇಹ ಸೇರಿಕೊಳ್ಳುತ್ತಾನೆ ಎಂದೇ ಹೊರತು, ಆರಂಭದಿಂದ ಅದು ತ್ತು ಎಂದಲ್ಲ. ಗರ್ಭೋಪನಿಷತ್ತಿನಲ್ಲಿ ಹೇಳಿದಂತೆ ಎಲ್ಲೋ ಇರುವ ತ್ಮನು ದೈವೀ ನಿರ್ದೇಶದಂತೆ ಗರ್ಭಕ್ಕೆ ಏಳುತಿಂಗಳು ಹಿಡಿದಾಗ, ಅದು ಅಂಗಗಳನ್ನುಹೊಂದಿ ತಯಾರಾದಾಗ ಮಾತ್ರವೇ, ಅದನ್ನು ಪ್ರವೇಶಿಸಿ ಜೀವಾತ್ಮನಾಗುತ್ತಾನೆ. ಅಂದಿನಿಂದ ಗರ್ಭದ ಶಿಶುವು ತನ್ನದೇ ಆದ ರ್ಜನ್ಮದ ಕುರುಹು ತೋರಿಸಿಕೊಳ್ಳುತ್ತದೆ. ಆದರೂ ಅನಂತರವೂ ಅದು ಯಂಜೀವದ ಭಾಗವಾಗಿ, ಬೆಳೆಯಬೇಕಾದ್ದರಿಂದ ಥಕ್ಕನೆ ವ್ಯಕ್ತ ಬದ

ಲಾವಣೆಯಾಗಲಿಲ್ಲ. ಆ ಜೀವಾತ್ಮನಿಗೆ ಅವನ ಕರ್ಮಫಲಕ್ಕೆ ತಕ್ಕುದಾಗಿ
ನಿರ್ದಿಷ್ಟ ತಾಯಿಯಲ್ಲಿ ದೇಹ ತಯಾರಾಗುತ್ತ ಬಂದುದರಿಂದ ಅದು, ಮ
ಸ್ಥಳ ತಕ್ಕೊಂಡವ ಅಲ್ಲಿ ಬಾಳದೆ, ಕಟ್ಟಡ ಕಟ್ಟಿಸಿ ಪೂರ್ಣವಾದ ಮೇಲೆ ಗ
ಪ್ರವೇಶ ಮಾಡಿದಂತೆ. ಜೀವಾತ್ಮ ದೇಹ ಹೊಕ್ಕ ಮೇಲೆ ಪ್ರಕೃತಿ ಮ
ಜೀವರ ಜೊತೆ ಆಡಳಿತ ಅಲ್ಲಿ ಆರಂಭವಾಗುತ್ತದೆ.

ಹಾಗಲ್ಲ, ಜೀವಾತ್ಮವು ಪ್ರತಿ ಜೀವಾಣುವಿನಲ್ಲಿದೆ ಎಂದಾದರೆ ಎ
ಗೋದಾಮಿನಲ್ಲಿನ ಭತ್ತದ, ಕಡಲೆಯ, ಉದ್ದಿನ, ಸಾವಿರಾರು ಮೂಟೆಗ
ಕೋಟಿಕೋಟಿ ಜೀವಾತ್ಮರು ಬಂಧನದಲ್ಲಿದ್ದಾರೆ, ಎಂದಾಯಿತು. ಹಾ
ಬೇಸಾಯಗಾರ ತಕ್ಕರೀತಿಯಲ್ಲಿ ಭತ್ತ ನೆಟ್ಟಾಗಮಾತ್ರ ಪ್ರಕೃತಿ ಅದಕ್ಕೆ ಪ್ರೇ
ಕೊಡಲು ಮೊಳಕೆ ಬರುವಾಗ ದೇವರು ಎಲ್ಲೋ ಆ ಸಸಿಯ ಜನ್ಮಕ್ಕೆ
ಜೀವಾತ್ಮನನ್ನೂ ಅಲ್ಲಿ ಸೇರಿಸುತ್ತಾನೆ ಎಂಬ ವಿವರಣೆ ಹೆಚ್ಚು ಸಮಂ
ತೋರುತ್ತದೆ.

ಹಿಂದಿನ ಅಪಾರ ಸಂಖ್ಯೆಯ ತಮ್ಮದೇ ಆದ ಜನ್ಮಗಳ ಕಾರ್ಯಗಳ
ಬೇರೆಬೇರೆ ಕರ್ಮ, ಒಲವುಬೆಳೆಸಿದ ಅಪಾರಸಂಖ್ಯೆಯ ಜೀವಾತ್ಮರಿಗೆ ಅವ
ರಿಗೆತಕ್ಕ ಮಾನವಜನ್ಮ ಕೊಡಲಿಕ್ಕೆ ಅದರಲ್ಲಿ ಅಪರಿಮಿತ ಚಿಕ್ಕವ್ಯತ್ಯಾಸಗ
ಬೇಕೇಬೇಕು. ಆದ್ದರಿಂದ ಮೈಥುನರೀತಿಯ ಪ್ರಕೃತಿ ಜೀವಾಣುಗಳ ಕ್ರ
ಮಾತ್ರ Gene ಮೂಲದಿಂದ ಅಂಥ ದೇಹಗಳ ಸಿದ್ಧತೆ ಮಾಡಲು ಸಾ
ಹೊರತು ಒಂದೇ ಮೂಲಜೀವಿಯ ಪೀಳಿಗೆಯ ಕ್ರಮದಿಂದಲ್ಲ. (ಆದ
ಪ್ರಕೃತಿಯಲ್ಲಿ ಒಂದೇ ಮೂಲದ ಜೀವಾತ್ಮನಿಂದ ಹೆಚ್ಚು ಭಾಗಗಳಿರುವ ದೆ
ಕಟ್ಟುವ ಕೆಲಸವೂ ನಡೆದದ್ದುಂಟು. ಎರೆಹುಳು ಕತ್ತರಿಸಿದರೆ ಅದರ ಎರ
ಭಾಗಗಳೂ ಬೇರೆ ಹುಳುಗಳಾಗುತ್ತವೆ. ಗುಲಾಬಿ ಗೆಲ್ಲು ನೆಟ್ಟರೆ ಬೇರೆ ಬೇ
ಇರುವ ಸಸಿಯೇ ಆಗುತ್ತದೆ. ಆದರೆ ಇದರಿಂದ ಬೇಕಾದ ಮೇಲೆ ಹೇ
ಮಟ್ಟದ ದೇಹಗಳ ಅಪಾರ ಭಿನ್ನತೆ ಅಸಾಧ್ಯವಾಗಿದ್ದು ಆ ಕ್ರಮ ಹಿಂದೆಬಿ
ಎಂದು ನಿರ್ಧರಿಸಬೇಕಾಗುತ್ತದೆ.)

ಮುಖ್ಯವಾಗಿ ಶಾಸ್ತ್ರದ ಲಕ್ಷ್ಯವಿರುವುದೆಲ್ಲ ದೇವರಿಂದ ಬಂದ ಆತ್ಮ
ದೇಹಹೊಂದಿ ಜೀವಾತ್ಮನಾಗಿ ಅದರಲ್ಲಿ ಬಂಧನ ಹೊಂದಿದವರನ್ನು ದೆ
ದಿಂದ ಬಿಡುಗಡೆ ಮಾಡಿಸುವುದರಲ್ಲಿದೆ ಹೊರತು ಅವನಿಗಾಗಿ ಪ್ರ
ದೇವಿಯು ರಚಿಸಿದ ಜೀವಕಣಗಳೆಂಬ ಇಟ್ಟಿಗೆಗಳಿಂದುಂಟಾದ ದೇಹವೆ
ಜೀವಾತ್ಮನ ತಾತ್ಕಾಲಿಕಮನೆಯ ಜೀವಕಣಗಳ ಉದ್ಧಾರವಲ್ಲ. ಆ ಜೀವ

ಆತ್ಮಗುಣಗಳಾದ ಕರುಣೆ, ಪ್ರೀತಿ ಮುಂತಾದವುಗಳನ್ನು ಬೆಳೆಸುವಶಕ್ತಿ,
ಶಕ್ತಿ ಬೆಳೆಸುವ ಸಾಧ್ಯತೆ, ಸ್ವಲ್ಪವೂ ಇಲ್ಲ. ಅವು ಈ ಆತ್ಮನ ವಿಕಾಸತೆಯ
ರ್ಗದಲ್ಲಿ ಕೇವಲ ಉಪಕರಣಗಳಾಗಿ ಮಾತ್ರವೇ ಉಳಿದಾವು ಮಾತ್ರ.
ರೆ ಶಾಸ್ತ್ರ ಹೇಳುವ ಪುನರ್ಜನ್ಮ ಜೀವಾತ್ಮನಿಗೆ ಮಾತ್ರ ಸಾಧ್ಯ.

ನನ್ನ ಈ ಶಾಸ್ತ್ರದ ಜ್ಞಾನ ಬಹಳ ಕಡಿಮೆ. ಬಲ್ಲವರು ಶಾಸ್ತ್ರದಲ್ಲಿ
ಧ್ವಂತರು ಮೇಲೆ ಹೇಳಿದ ದಾರಿಯಲ್ಲಿ ಮುಂದುವರಿದರೆ ನಮ್ಮಶಾಸ್ತ್ರ
ಲ್ಲ ಎಂದು ರುಜು ಮಾಡಬಲ್ಲರು ಎಂದು ನನಗೆ ತೋರುತ್ತದೆ.
ವರೆ ಸನಾತನಧರ್ಮದ ಜ್ಞಾನವು ಬಹಳ ಆಳವಾಗಿದ್ದು ತಪ್ಪಿಲ್ಲದ್ದು.

). ಪ್ರೇತ, ಪಿಶಾಚಿ ಮತ್ತು ಭೂತಗಳು

. ಕೆಲವು ಪ್ರೇತಗಳ ಕತೆಗಳು

ನಮ್ಮಶಾಸ್ತ್ರದಲ್ಲಿ ಕೆಲವುವೇಳೆ ಭೂತ, ಪ್ರೇತ ಪಿಶಾಚಗಳೆಂಬ ಪದಗಳಲ್ಲಿ
ತ್ಯಾಸವೇ ಇಲ್ಲವೆಂಬಂತೆ ಉಪಯೋಗಿಸಿದ್ದುಂಟು. ಆದರೆ ಶಾಸ್ತ್ರದಲ್ಲಿ ಮರಣ
ಂದಿದ ಮಾನವರೆಲ್ಲ ಪ್ರೇತವಾಗುತ್ತಾರೆ ಎಂದಿದೆ. ಅವರಲ್ಲಿ ನರಕಕ್ಕೆ,
ರ್ಗಕ್ಕೆ ಹೋಗದೆ ಹಾಗೆಯೇ ಇಲ್ಲಿ ಉಳಿದವನ್ನು ಪ್ರೇತಗಳೆಂದು ಈ ಪುಸ್ತಕ
ಕರೆದಿರುವೆ. ಅವಲ್ಲಿ ಇತರರಿಗೆ ತೋರಿಕೊಂಡು ಉಪದ್ರ ಕೊಡುವವನ್ನು
ಚಗಳೆಂದು ಕರೆದಿರುವೆ. ಭೂತ ಎಂಬ ಪದವನ್ನು ಅವಲ್ಲಿ ವಿಶೇಷತರದ
ಕ್ಕೆ ಮಾತ್ರ ಉಪಯೋಗಿಸಿರುವೆ. ಪ್ರೇತಗಳು ಉಪದ್ರುವ ಕೊಡಲಿಕ್ಕಲ್ಲ,
ತ್ರ ಕಷ್ಟದಿಂದಾಗಿ ತೋರಿಕೊಳ್ಳುವುದುಂಟು. ಆಗ ಕಂಡವರಿಗೆ ಭಯ ಆಗ
ದು. ಆದರೆ ಭಯ ಪ್ರೇತಬೇಕೆಂದೇ ಉಂಟುಮಾಡವುದಲ್ಲ. ಅಂಥವನ್ನು
ತ ಅಥವಾ ಪಿಶಾಚ ಎಂಬ ಎರಡು ರೀತಿಯಲ್ಲಿಯೂ ಕರೆಯಬಹುದು.

ಜೀವಾತ್ಮರು ದೂರ ಇರುವವರಿಗೆ ಮರಣಕಾಲದಲ್ಲಿ ಕಾಣಿಸಿದ್ದು

ಅಪರೂಪಕ್ಕೆ ಕೆಲವರಿಗೆ ತಮ್ಮಮರಣಕಾಲ ಬಂದಾಗ ದೂರ ಇರುವ
ಪ್ರಿಯರಾದವರನ್ನು ನೋಡುವಬಯಕೆಯುಂಟಾಗಿ, ಅವರಿಗೆ ಫಕ್ಕನೆ
ರಿಕೊಂಡು ಮಾಯಕವಾದುದು ನಡೆದಿದೆ. ಇಂಥ ಸುಮಾರು ೧,೫೦೦
ಳನ್ನು ಸಿ. ಫ್ಲೇಮೇರಿಯನ್ ಎಂಬವರು ಸಂಗ್ರಹಿಸಿ ಅವಲ್ಲಿ ಮುಖ್ಯ

ವಾದವನ್ನು ವಿವರಗಳೊಡನೆ ತಮ್ಮ The Unknown ಎಂಬ ಗ್ರಂಥ
ಪ್ರಕಟಿಸಿರುವರು. ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯ ಸ್ವಾಮಿ ಅಭೇ
ನಂದರಿಗೆ ಅಮೇರಿಕದಲ್ಲಿದ್ದಾಗ, ಪರಮಹಂಸರ ಮತ್ತೊಬ್ಬರು ಶಿಷ್ಯ ಸ್ವಾ
ಅದ್ಭುತಾನಂದರು ಒಮ್ಮೆ ತನ್ನನ್ನು "ಕಾಳಿ, ಕಾಳಿ, ನಿನ್ನನ್ನು ನೋಡಲುಬಂ
ಎಂದು ಹೇಳಿದ್ದು ಕೇಳಿಸಿತು. ಹಾಗಾದರೆ ತನ್ನ ಪ್ರಿಯಸಹಪಾಠಿ ದೇಹತ್ಯ
ದನೇ ಎಂಬ ಚಿಂತನೆ ಬಂತು. ಹಾಗೆ ಆಗಿತ್ತೆಂದು ಮರುದಿನ ಇಂಡಿಯಾದಿ
ತಂತಿ ಬಂತು (Life Beyond Death ಪುಟ 277).

೨. ಆಸ್ಪತ್ರೆಯಲ್ಲಿ ಪ್ರೇತಗಳು

ಕಾಶಿನಾಥ ಸೆನ್‌ಗುಪ್ತ ಎಂಬವ ಕಲ್ಕತ್ತಾದ ಕರ್ಸಾನಿ ಮೆಮೋರಿಯ
ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತ ಮಲಗಿದ್ದ. ಅಲ್ಲೆ ಮತ್ತೊಂದು ಹಾ
ಯಲ್ಲಿ ಒಬ್ಬ ಸಿಖ್ಖರವನಿಗೆ ಮೆದುಳಿನ ಶಸ್ತ್ರಚಿಕಿತ್ಸೆ ನಡೆದಿತ್ತು. ಅವನಪರಿಸ್ಥಿ
ಬಹಳಕೆಟ್ಟಿತ್ತು. ಅವನ ಮರಣದಯಾತನೆಯನ್ನು ಇತರರೋಗಿಗಳು ಕಾ
ದಿರಲಿ ಎಂದು ಅವನಹಾಸಿಗೆಯ ಸುತ್ತಲೂ ಪರದೆಹಾಕಿದ್ದರು. ಸೆನ್‌ಗುಪ್ತ
ರಾತ್ರಿ ೩ ಗಂಟೆಗೆ ಮೂತ್ರಶಂಕೆಗೆ ಹೋದ. ಅಲ್ಲಿ ಪಾಯಿಖಾನೆಯ ಒಂ
ಬಾಗಿಲ ಬಳಿ ಆ ಸಿಖ್ಖರವ ನಿಂತಿದ್ದ. ಇವ ಮತ್ತೊಂದು ಬಾಗಿಲಿಂದ ಹೋ
ಅನಂತರ ಹೊರಗೆ ಬರುವಾಗಲೂ ಆ ಸಿಖ್ಖರವ ಮುಂಚೆ ನಿಂತಲ್ಲೇ ಇದ್ದು
ಕಂಡು, ಇವ ವಿಪರೀತ ಕಾಯಿಲೆಯವ ನಿಂತಲ್ಲೇ ಇದ್ದಾನೆ ಏಕೆ, ಎಂ
ಯೋಚಿಸುವಾಗ, ಫಕ್ಕನೆ ಅದು ಅವನ ಪಿಶಾಚವಾಗಿರಬಹುದೇ ಎಂಬ ಶ
ಬಂತು ; ಭಯವಾಯಿತು. ಆವ ವಾರ್ಡ್ ಹುಡುಗ ಜೆಕೋಬನನ್ನು ಎಬ್ಬಿ
ಸಿಖ್ಖರವನು ಪಾಯಿಖಾನೆ ಬಳಿಯಲ್ಲೇ ನಿಂತಿರುವುದಾಗಿ ತಿಳಿಸಿದ. "ಅ
ಮಧ್ಯರಾತ್ರಿಯಲ್ಲೇ ಸತ್ತಾಗಿತ್ತು. ನೀನು ಕಂಡದ್ದು ಅವನ ಪ್ರೇತವನ್ನಿರಬೇಕ
ಎಂದು ಹೇಳಿದ ವಾರ್ಡ್ ಹುಡುಗ ಸಿಖ್ಖನಮೃತದೇಹ ತೋರಿಸಿದ. "ಆಸ್ಪ
ಯಲ್ಲಿ ಇದೆಲ್ಲ ಅಪರೂಪವಲ್ಲ ; ಸುಮ್ಮನೆ ಮಲಗು" ಎಂದು ಹೇಳಿ
ಸೆನ್‌ಗುಪ್ತ ಅತ್ಯಂತ ಭಯಪಡುತ್ತ ತನ್ನ ಹಾಸಿಗೆ ಸೇರಿದ. ಮೆದುಳಿನ ಶ
ಚಿಕಿತ್ಸೆಯಾಗಿದ್ದ ಸಿಖ್ಖರವನಿಗೆ ಬುದ್ಧಿ ಮಂದವಾಗಿದ್ದಾಗ ಮರಣ ಉಂಟಾ
ಬೇಕು ಸಾಮಾನ್ಯವಾಗಿ ತುಂಬಾ ನರಳಿ ಸಾಯುವವರು ಪಿಶಾಚವಾಗುವುದಿ
ಆದರೆ ತಲೆಒಡೆದು ಚಿಕಿತ್ಸೆ ಎಂದರೆ ಅದೊಂದು ದುರ್ಮರಣವೇ. ದುರ್ಮ
ದಲ್ಲಿ ಪಿಶಾಚತ್ವ ಬರುವುದುಂಟು. ಸಿಖ್ಖರವ ತಾನು ಬಹಳ ಕಷ್ಟ ಹೊಂದಿ

ರತ್ಯಜಿಸಿ, ಆದರೆ ಮುಂದೆ ಏನುಮಾಡುವುದೆಂಬುದು ನಿಶ್ಚಯಿಸಲಾರದ
ಕು ಅವಸ್ಥೆಯಲ್ಲಿ ಪ್ರೇತವಾಗಿ ಪಾಯಿಖಾನೆಯ ಬಳಿ ನಿಂತಿರುವಂತಾಗಿರ
ು. ಬಹುಮಟ್ಟಿನ ಪ್ರೇತಗಳು ತಾವು ಇತರರಿಗೆ ತೋರಿಕೊಂಡಾಗಲೂ
ಲ ತಮ್ಮ ಸಮಸ್ಯೆಯಲ್ಲಿಯೇ ಮುಳುಗಿರುತ್ತವೆಯೇ ಹೊರತು ಇತರರಿಗೆ
ುದರೆಕೊಡುವ ಆಲೋಚನೆಯಲ್ಲಿರುವುದಿಲ್ಲ. ಸಾಮಾನ್ಯವಾಗಿ ಅವುಗಳ
ರವಾಗಿ ಧೈರ್ಯದಿಂದಿರಬೇಕು. ಜೆಕೋಬನಿಗೆ ಅಲ್ಲಿ ಚೆನ್ನಾಗಿ ನಿದ್ರೆ ಬರು
ಲಿಲ್ಲವೇ ? (ಟ್ರುತ್ ಪತ್ರಿಕೆಯಿಂದ) ಆದರೂ ಆಸ್ಪತ್ರೆಗಳು ಮರಣಕಾಲ
ರೋಗಿಗಳಿಗೆ ಇರಬೇಕಾದ ಮನಸ್ಸಿನಶಾಂತತೆಗೆ ಏನೂ ಅನುಕೂಲವಲ್ಲ!

ಆಸ್ಪತ್ರೆಯಲ್ಲಿ ಪ್ರೇತ ಇನ್ನೊಂದು ದೇಹ ಹೊಕ್ಕಿತು

ಒಂದು ಆಸ್ಪತ್ರೆಯಲ್ಲಿ ಎರಡು ಹತ್ತಿರದ ಹಾಸಿಗೆಗಳಲ್ಲಿ ಒಬ್ಬಳು ಕೆಲವು
ಟ್ಟಿಗೆ ಐಶ್ವರ್ಯ ಇದ್ದವಳು, ಮತ್ತೊಬ್ಬಳು ತೀರಾ ಬಡವಳು, ಮಲ
ರು. ಬಡವಳನ್ನು ಯಾರೂ ಮಾತಾಡಿಸಲು ಬರುತ್ತಿರಲಿಲ್ಲ. ಆದರೆ
ತ್ತೊಬ್ಬಳಿಗೆ ಅವಳ ಬಂಧುಗಳು ಆಗಾಗ ಹಣ್ಣುಹಂಪಲು, ಅವಳ ಇಷ್ಟದ
ತಿ ತಂದುಕೊಡುತ್ತಿದ್ದರು. ಇಬ್ಬರೂ ಸಾಧಾರಣ ಒಂದೇ ಕಾಲದಲ್ಲಿ
ರಬೇಕು. ಆದರೆ ಐಶ್ವರ್ಯವಂತಳ ದೇಹ ಪುನಃ ಚೇತರಿಸಿಕೊಂಡಿತು.
ಳನ್ನು ಮನೆಗೆ ಕರಕೊಂಡು ಹೋದರು. ಆದರೆ ಅವಳವರ್ತನೆ ಮುಂಚಿನ
ತ್ಯತರದ್ದಿರದೆ, ಬಂಧುಗಳಲ್ಲಿ ಪ್ರಿಯತರದ್ದಿರದೆ, ಕೇವಲ ತಿಂಡಿಬಾಕ
ದ್ದು ಕಂಡು ಆಶ್ಚರ್ಯಹುಟ್ಟಿಸಿತು. ಇನ್ನೂ ಗುಣವಾಗಿರದ್ದರಿಂದ
ಕ್ಕೆಗಾಗಿ ಆಯುರ್ವೇದವೈದ್ಯರು ಬರುತ್ತಿದ್ದರು. ಅವರು ಸಮರ್ಥನಾಡಿ
ೖರೂ ಆಗಿದ್ದರು. ಸುಮಾರು ೬೦೦ ತರದ ನಾಡಿ ಬಡಿತಗಳಪೈಕಿ ಒಂದ
ಬಡಿತ ತೀರಾತೀರಾ ಜೋರಾಗುವುದು, ತೀರಾತೀರಾ ಲಘುವಾಗುವುದು,
ಟ್ಟೆ ತೀರಾ ಜೋರಾಗುವುದುಂಟು. ಅದು ಬಹಳ ಅಪರೂಪ, ಆದರೆ
ಾಚಬಾಧೆಯ ಲಕ್ಷಣ. ಅವರು ಇವಳದ್ದು ಪ್ರೇತಬಾಧೆ ಎಂದರು.
ಗಿಯ ತಿಂಡಿಬಾಕತನವೂ ಪ್ರೇತಬಾಧೆಯಿಂದಲೇ ಇರಬೇಕು ಎಂಬಸಂಶಯ
ು. ಮಂತ್ರವಾದಿಯನ್ನು ಕರೆಸಿ ಪಿಶಾಚದ ಉಚ್ಚಾಟನೆ ಮಾಡಿದಾಗ
ಸು ಗುಣ ಹೊಂದುವ ಬಗ್ಗೆ ಸತ್ತುಬಿದ್ದಳು. ಆದ್ದರಿಂದ ಆ ದೇಹದಲ್ಲಿ
ರಗಿಂದ ಬಂದು ಹಿಡಿದ ಪ್ರೇತಮಾತ್ರ ಹೊರತು ಆ ಹೆಂಗಸಿನ ಜೀವಾತ್ಮ
ರಲಿಲ್ಲ. ಆದದ್ದು ಏನು ಎಂದರೆ ಬಡಹೆಂಗಸಿಗೆ ಬಾಯಿ ನೀರು ಬರು

ವಂತೆ ಅವಳೆದುರಲ್ಲೇ ಮತ್ತೊಬ್ಬಳು ರುಚಿರುಚಿ ತಿಂಡಿಗಳನ್ನು ಅಗ
ತಿನ್ನುತ್ತ ಇದ್ದುದು ಅವಳಲ್ಲಿ ವಿಪರೀತ ತಿಂಡಿಯಆಸೆ ಬೆಳೆಸಿತು. ಹತ್ತಿ
ದವಳು ಮರಣ ಹೊಂದಿದೊಡನೆ ಸಾಯಲಿಕ್ಕಿದ್ದ ಇವಳ ಜೀವಾತ್ಮನು
ದೇಹದ ಮೂಲಕ ತಿಂಡಿಯಬಯಕೆ ಈಡೇರಿಸುವ ಆಸೆಯಿಂದ, ಸೆ
ಕೊಂಡಿತು. ಅದು ಮಂತ್ರವಾದಿಯಿಂದ ಓಡಿಸಲ್ಪಟ್ಟಾಗ ಕೇವಲ ಶವಮಾ
ಉಳಿಯಿತು (ಆಧಾರ ಟ್ರುತ್ ಪತ್ರಿಕೆ).

ನಮ್ಮಸಂಸ್ಕೃತಿಯಲ್ಲಿ ಇತರರ ಎದುರಲ್ಲಿ ನಾವುಮಾತ್ರ ತಿನ್ನುವ ಕ್ರಮ
ಇರಲಿಲ್ಲ. ಬಡವರುಕಂಡರೆ ಅವರಿಗೆ ಸ್ವಲ್ಪಕೊಡದಿರುತ್ತಿರಲಿಲ್ಲ. ರಸ್ತೆ
ಮೇಲೆ, ಬಸ್ಸಲ್ಲಿ, ಶಾಲೆ ಬಿಟ್ಟಾಗ ಬಡಮಕ್ಕಳೆದುರಲ್ಲಿ ದುಡ್ಡಿದ್ದ ಮಕ್ಕಳ
ತಿನ್ನುತ್ತಿರುವ ಕ್ರಮ ಇತ್ತಲಾಗಿ ಹಬ್ಬಿದುದು ಒಂದು ದುಷ್ಟ ಆಚರಣೆ.

೪. ಹಳೆ ಮನೆಗಳಲ್ಲಿ ಪಿಶಾಚಗಳು

ಪಾಶ್ಚಾತ್ಯದೇಶಗಳಲ್ಲಿ ಹಳೆಮನೆಗಳಲ್ಲಿ ಪಿಶಾಚಗಳು ತೋರಿಕೊಳ್ಳು
ದುಂಟು. ಅವು ತಮ್ಮದೇ ಆದ ಕಷ್ಟದಲ್ಲಿರುತ್ತವೆ. ಅವುಗಳ ಬಗ್ಗೆ ಸ್ವ
ಸಹಾನುಭೂತಿ ತೋರಿಸಿ ತಕ್ಕುದಾಗಿ ವರ್ತಿಸಿದರೆ ಅವುಗಳು ತೋರಿಕೊ
ದಂತಾಗುತ್ತದೆ ಎಂಬುದು, ಅವನ್ನು ಮನೆಯಿಂದ ಉಚ್ಚಾಟನೆಮಾಡುವುದರ
ಸಮರ್ಥರೆಂದೆಸರುಪಡೆದ ಡೋಮ್ ರಾಬರ್ಟ್ ಎಂಬ ಎಂಗ್ಲಿಕನ್ ಇಗ
ಗುರು ಒಬ್ಬರ ಅನುಭವ.

ಒಂದು ಹಳೆಮನೆಗೆ ಹೊಸತಾಗಿಹೋದ ಕುಟುಂಬದವರಿಗೆ ಅಲ್ಲಿ ಒಂ
ಪಿಶಾಚವು ರಾತ್ರಿ ಉಪ್ಪರಿಗೆಮೆಟ್ಟಲುಗಳನ್ನು ಬಡಬಡ ಶಬ್ದಮಾಡುತ್ತ ಏ
ವುದು, ಇಳಿಯುವುದು ಅನೇಕಸಾರಿ ಕೇಳುತ್ತಿತ್ತು. ಅವರಿಗೆ ಡೋಮ
ರೋಬರ್ಟರು ಕೊಟ್ಟ ಸೂಚನೆ, "ಅದು ಈ ಮನೆಯಲ್ಲಿ ಮುಂಚೆ ವಾಸಿ
ತ್ತಿದ್ದ ಒಬ್ಬನ ಪಿಶಾಚವಾಗಿರಬೇಕು. ಈಗ ಯಾರೂ ತನಗೆ ಅಲ್ಲಿ ಲಕ್ಷ್ಯವನ
ಕೊಡುವುದಿಲ್ಲವಲ್ಲ ಎಂಬ ಬೇಸರದಿಂದ, ತನ್ನ ಕಡೆಗೆ ಲಕ್ಷ್ಯ ಸೆಳೆಯಲಿಕ್ಕೆ ಅ
ಹಾಗೆ ಮಾಡುತ್ತಿರಬೇಕು, ನೀವು ಅದಕ್ಕೆ ಹೆದರಬೇಕಿಲ್ಲ. ಹಾಗೆ ಶ
ವಾದಾಗಲೆಲ್ಲ "ಜಿಮ್! ನೀನಲ್ಲಿದ್ದೀಯಾ, ಸಂತೋಷ, ಹೇಗಿದ್ದಿ? ಎಂ
ಸಂತೋಷಪಟ್ಟವರಂತೆ ಮಾತನಾಡಿಸಿರಿ" ಎಂಬುದಾಗಿತ್ತು. ಮನೆಯವ
ಹಾಗೆ ಮಾಡುತ್ತ ಬಂದರು. ಪಿಶಾಚಕ್ಕೆ ತೃಪ್ತಿಯಾಗಿ ಅದು ಹೊರ
ಹೋಯಿತು.

ಡೋಮ್‌ರಾಬರ್ಟರ ಹೇಳಿಕೆಯಂತೆ ಹಳೆಮನೆಯಲ್ಲಿ ಯಾರಾದರೂ ಂಟಿಯಾಗಿ ಬಾಳಿಕೊಂಡಿದ್ದು ಅಲ್ಲಿ ಭದ್ರತೆಗಾಗಿ ಅವರು ನಿಧಿ ಇಟ್ಟಿದ್ದರೆ, ವಾ ಆ ಮನೆಯಲ್ಲಿನ ಹಿಂದಿನ ತಮ್ಮ ಪ್ರೀತಿಯ ಅನುಭವಗಳಲ್ಲಿ ಅವರ ಸ್ಸು ಇನ್ನೂ ನೆಟ್ಟಿದ್ದರೆ, ಮರಣದನಂತರವೂ ಆ ನೆನಪುಗಳಿಂದಾಗಿ ಅವರ ತಗಳು ಆ ಮನೆಗೆ ಬಂಧಿತರಾಗುತ್ತವೆ. ಆ ಬಂಧನದಿಂದ ಬಿಡುಗಡೆಯಾಗದೆ ಹಿತಕರವಾಗುವ ಮುಂದಿನ ದಾರಿಹಿಡಿಯಲಾರವು. ಅದರಿಂದಾಗಿ ಅವು ೀ ತೊಡಕಿನಲ್ಲಿ ಸಿಕ್ಕಿಬಿದ್ದವರಂತೆ ಕಷ್ಟಪಡುತ್ತ, ಅದೇನೆಂದು ತಿಳಿಯದೆ, ಚರೂಪದಲ್ಲೂ ತೋರಿಕೊಳ್ಳುವುದುಂಟು. ಅವುಗಳ ಹಿತಕ್ಕಾಗಿ ಮನೆಯ ಸಿಗಳು ದೇವರಪ್ರಾರ್ಥನೆ ಕೀರ್ತನೆ ನಡೆಸಿ ಅವಕ್ಕೆ ಶಾಂತಿ ಸಿಕ್ಕುವಂತೆ ಡಿದರೆ ಅವುಗಳು ತಮ್ಮ ಕಷ್ಟದಿಂದ ಪಾರಾಗುತ್ತವೆ ಎಂದು ರಾಬರ್ಟರು ಳುತ್ತಿದ್ದರು. ಇದೂ ಅಲ್ಲದೆ ಮುಂಚೆ ಯಾವಾಗಲಾದರೂ ಮನೆಯಲ್ಲಿ ಶ್ಚಾತ್ಯರು ಕಂಡುಹಿಡಿದ) ಪ್ರೇತಆವಾಹನೆ ಕೂಟಗಳು ನಡೆಯುತ್ತಿದ್ದರೆ ಮನೆಯಲ್ಲಿ ಪಿಶಾಚಗಳು ಸೇರಿಕೊಳ್ಳುವುದುಂಟು ಎಂಬುದೂ ರಾಬರ್ಟರ ಕೆ (ಈ ವಿಚಾರ ಮುಂದೆಯೂ ಬರುತ್ತದೆ).

ಪ್ರೇತಳಾದ ಇಂಗ್ಲಿಷ್ ಹುಡುಗಿ

ಮಾರ್ಗರೆಟ್‌ಲಾರೆನ್ಸ್ ಎಂಬ ಆಂಗ್ಲೆಯರವಳು ತಾನೊಮ್ಮೆ ಕಂಡಿದ್ದ ತದವಿಚಾರವನ್ನು ಸ್ವಾಮಿ ಶಿವಾನಂದರಿಗೆ ತಿಳಿಸಿದ್ದು ಅವರ ಪುನರ್ಜನ್ಮಗಳ ಗ್ರಹದಲ್ಲಿದೆ. ಅದರಿಂದ ಆರಿಸಿಕೊಂಡಿರುವೆ. ಅವಳು ಯುವತಿಯಾಗಿ ಗ ಲಂಡನ್ನಿನ ಒಂದು ಹಳೆಮನೆಯ ಅತಿಮೇಲಿನ ಕೋಣೆಯಲ್ಲಿವಾಸಿಸುತ್ತ ಕಲೆ ಅಭ್ಯಸಿಸುತ್ತಿದ್ದಳು. ಮನೆಯ ಮುದುಕ ಯಜಮಾನ ಪ್ರಥಮ ಳಿಗೆಯಲ್ಲಿ ವಾಸಿಸುತ್ತಿದ್ದು, ಕೆಳಗೆ ರಸ್ತೆಯಬದಿಯಲ್ಲಿ ಅಂಗಡಿಇಟ್ಟಿದ್ದ. ್ಮ ನವೆಂಬರ್‌ತಿಂಗಳಲ್ಲಿ ಸಂಜೆ ಕತ್ತಲೆಯಾಗುತ್ತಿದ್ದಾಗ ಲಾರೆನ್ಸಳು ರಸ್ತೆಯ ಯಿಂದ ಮನೆ ಸೇರಲು ರಸ್ತೆಯಮೇಲಿನ ವಾಹನಗಳ ಸಾಲಲ್ಲಿ ಸ್ವಲ್ಪ ಬಿಡು ಗಲಿ ಎಂದು ಕಾದಿದ್ದಳು. ಆಗ ಫಕ್ಕನೆ ಒಂದುಹುಡುಗಿ ಆ ಕಾಲದವರಂತೆ ಬ್‌ಕಟ್ ಮಾಡಿಕೊಳ್ಳದೆ ಹಿಂದಿನವರಂತೆ ನೀಳವಾಗಿ ತಲೆಕೂದಲು ದ್ದವಳು, ಆ ತಿಂಗಳಲ್ಲಿ ಎಲ್ಲೂ ಸಿಗದಿರುವ ವೈಲೆಟ್ ಎಂಬ ಪರಿಮಳದ ವಿನಗೊಂಚಲನ್ನು ಹಿಡಕೊಂಡು ಲಾರೆನ್ಸಳ ಬದಿಯಿಂದಲೇ ರಸ್ತೆಗೆ ಇಳಿದು ಗಳನ್ನೆಲ್ಲ ಹೇಗೋ ತಪ್ಪಿಸಿಕೊಂಡು ದಾಟಿ ಲಾರೆನ್ಸಳಿದ್ದ ಕಟ್ಟಡಸೇರಿ

ಮೆಟ್ಟಿಲೇರುವುದು ಕಂಡಳು. ಲಾರೆನ್ಸಳು ಮತ್ತೂ ಕೆಲವು ನಿಮಿಷ ಕಾ
ರಸ್ತೆಯಲ್ಲಿ ಸ್ವಲ್ಪಬಿಡುವಾದಾಗ ಅದನ್ನು ದಾಟಿ ತನ್ನಕಟ್ಟಡ ಸೇರಿದಳು.

ಅಲ್ಲಿ ಅಂಗಡಿಯ ಕೆಲಸದವನ ಹತ್ತಿರ "ಸ್ವಲ್ಪಮುಂಚೆ ವೈಲೆಟ್‌ಹೂ
ಗೊಂಚಲು ಹಿಡಕೊಂಡು ಬಂದು ಮೆಟ್ಟಿಲೇರಿದ ಹುಡುಗಿ. ಯಾರು" ಅ
ಕೇಳಿದಳು. ಆದಕ್ಕೆ ಅವ "ಓಹೋ. ನೀನು ಆ ಹುಡುಗಿಯನ್ನು ಕಂಡೆಯಾ
ನನಗೆ ಹೂವಿನಪರಿಮಳ ಮಾತ್ರಬಂತು. ಅನೇಕಸಾರಿ ಹಾಗಾದುದುಂಟ
ಅದು ಯಜಮಾನನ ಮೃತಳಾದ ಏಕಮಾತ್ರ ಪುತ್ರಿಯ ಪ್ರೇತ. ಅವ
ವೈಲೆಟ್‌ಹೂಗಳೆಂದರೆ ಪ್ರಾಣವಾಗಿತ್ತಂತೆ" ಎಂದು ತಿಳಿಸಿದ. ಅವಳ ತ
ಅವಳ ದೇಹವನ್ನು ಸುಡಿಸಿ ಚಿತಾಭಸ್ಮವನ್ನು ತನ್ನ ಕೋಣೆಯಲ್ಲಿ ಕರಡಿಕೆಯ
ಇಟ್ಟುಕೊಂಡಿದ್ದ. ಅದು ತಂದೆ ಮಗಳ ಮುಂಚಿನ ಸವಿನೆನಪುಗಳನ್ನು ಕೇಂದ್ರ
ಕರಿಸಿ ಮತ್ತು ಕ್ಷೀಣಿಸಲಿಕ್ಕೆ ಏನೂಬಿಡದೆ ಅವಳ ಪ್ರೇತತ್ವವನ್ನು ಒಂದೇರಿ
ಯಾಗಿ ಮುಂದುವರಿಸುತ್ತಿತ್ತು (ಹಿಂದೆ ಹಿಲ್ಲನ ಕತೆಯಲ್ಲಿ ಅವನ ತಲೆಬುರು
ಇನ್ನೂ ಇದ್ದಾಗ ಅವನ ಹಿಂದಿನಜನ್ಮದ ಸ್ಮರಣೆ ಕಾಪಾಡುತ್ತ ಬಂದಂತೆಯ
ಇದೂ). ಪ್ರೇತವನ್ನು ಲಾರೆನ್ಸಳುಕಂಡಳು, ಅಂಗಡಿಯುವ ಕಂಡಿರಲಿಲ್ಲ ಏಕೆಂ
ಅಪರೂಪಕ್ಕೆ ಕೆಲವರು ಹೆಂಗಸರಿಗೆ ಮಾತ್ರವೇ ಪ್ರೇತಪಿಶಾಚಗಳನ್ನು ಕಾಣ
ಶಕ್ತಿಅಧಿಕಮಟ್ಟದಲ್ಲಿರುತ್ತದೆ. ಅನೇಕರಿಗೆ ಪ್ರೇತಗಳು ತೋರುವುದಿಲ್ಲ. ಅ
ವರು ಪ್ರೇತ ಎಲ್ಲ ಸುಳ್ಳು ಎಂದು ವಾದಿಸುವುದು ಸಾಮಾನ್ಯಕ್ರಮ. ಆದ
ಅದು ತಪ್ಪು. ನಾನು ಹುಟ್ಟಿ ಬೆಳೆದ ಕೋಟದ ಮನೆಯ ಬದಿಯಲ್ಲಿ ಒಂ
ಮುಸಲ್ಮಾನರಸ್ಮಶಾನವಿದೆ. ಅೀರಾಅಪರೂಪಕ್ಕೆ ಅಲ್ಲಿ ಶವಹುಗಿಯುತ್ತಿದ್ದರ
ನಾನು ವಿವಾಹವಾಗಿ ಒಂದು ಸ್ವಲ್ಪ ಕಾಲದಲ್ಲಿಯೇ ನನ್ನ ಪತ್ನಿಗೆ ಹಿತ್ತ
ಎತ್ತರವಾದ ಗೋಡೆಯಮೇಲಿಂದ ಎರಡು ಪಿಶಾಚಗಳು ಕೆಲವುಸಾರಿ ಇಣು
ವುದು ತೋರಿತ್ತು. ಮನೆಯಲ್ಲಿದ್ದ ಇತರರಿಗೆ ಅವು ಯಾರಿಗೂ ತೋರಿದ್ದಿ
ಆದರೆ ಪೂಜೆಜಪಇದ್ದ ಮನೆಯಾದ್ದರಿಂದ ಈ ಪ್ರೇತಗಳಬಾಧೆ ಏನೂ ಇರಲಿ

೬. ಶ್ರೀ ರಾಮಕೃಷ್ಣ ಪರಮಹಂಸರಿಗೆ ಪ್ರೇತಗಳು ತೋರಿದ್ದು

ಶ್ರೀ ರಾಮಕೃಷ್ಣ ಪರಮಹಂಸರು, ಅವರ ಪರಮಭಕ್ತಳಾದ, ಬಾ
ಗೋಪಾಲನ ರೂಪದಲ್ಲಿ ದೇವರನ್ನು ಅತ್ಯಂತ ಧಾರಾಳವಾಗಿ ಸಾಕ್ಷಾತ್ಕ
ಕೊಂಡಿದ್ದ ಗೋಪಾಲಮಾ (ದೇವರನ್ನು ನಂಬುವ, ಪುಟ ೨೨೬) ಎಂಬ
ಆಮಂತ್ರಣದಂತೆ ಅವಳಲ್ಲಿಗೆ ರಾಖಲರೊಡನೆ (ಅನಂತರ ಸ್ವಾಮಿ ಬ್ರ

ರಾದವರು) ಊಟಕ್ಕೆಹೋಗಿದ್ದರು. ಅವಳು ಕಮಾರಹಾಟಿಯಲ್ಲಿ ಒಬ್ಬ ನುದಾರ ಕಟ್ಟಿಸಿದ್ದ ದೇವಸ್ಥಾನದ ಒಂದು ಚಿಕ್ಕಕೋಣೆಯಲ್ಲಿ ವಾಸಿಸು ಳು. ಜಮೀನುದಾರ ಆಗ ಮೃತನಾಗಿದ್ದ. ಅವನಿಗಿದ್ದ ಎರಡುಹೆಣ್ಣು ಳು ವಿವಾಹವಾಗಿಹೋಗಿದ್ದರು. ದೇವಸ್ಥಾನದ ಬಳಿಯಲ್ಲೇ ಇದ್ದ ನ ದೊಡ್ಡಮನೆ ಬಹುಮಟ್ಟಿಗೆಖಾಲಿಯಿತ್ತು. ಗೋಪಾಲಮಾ ಇವರಿಬ್ಬ ಊಟವಾದ ಅನಂತರ ಸ್ವಲ್ಪ ಮಲಗಲಿಕ್ಕೆ ಜಮೀನುದಾರನ ಮನೆಯ ಡಿಯಮೇಲೆ ಶುದ್ಧಬಟ್ಟೆ ಹಾಸಿದ್ದಳು. ರಾಖಲರಿಗೆ ಬೇಗ ನಿದ್ರೆಬಂತು. ಅಷ್ಟರಲ್ಲಿ ಅಲ್ಲಿ ಒಂದು ದುರ್ಗಂಧ ಹೊರಟಿತು. ಆ ಕೋಣೆಯ ಲೆಯಲ್ಲಿ ಎರಡು ಪ್ರೇತಗಳು ತೋರಿಕೊಂಡವು. ಅವಕ್ಕೆ ಕಾಮಕರ ಖಿ, ಜೋಲುತ್ತಿರುವ ಹೊಟ್ಟೆಯಕರುಳು, ಅಸ್ಥಿಪಂಜರದ ವೈಕಟ್ಟು ವಂತೆ. ಅವು ಶ್ರೀ ರಾಮಕೃಷ್ಣರೊಡನೆ "ನಿಮ್ಮ ದರ್ಶನದಿಂದ ನಮಗೆ ಳ ಕಷ್ಟವಾಗುತ್ತದೆ. ದಯಮಾಡಿ ಹೋಗಿರಿ" ಎಂದು ಬೇಡಿಕೊಂಡವು. ರಿಂದ ಅವರು ರಾಖಲರನ್ನು ಎಬ್ಬಿಸಿ ಗೋಪಾಲಮಾರ ಅನುಮತಿ ಪಡೆದು ರಟುಹೋದರು. ದಾರಿಯಲ್ಲಿ ತಾನು ಪ್ರೇತಕಂಡದ್ದು ಹೇಳಿ "ಅವು ತ್ತಲಿನ ಮಿಲ್ಲಿನ ಆಂಗ್ಲ ಅಧಿಕಾರಿಗಳು ಮಾಂಸ ತಿಂದು ಬಿಸಾಡಿದ ಮೂಳೆ ಡುಗಳನ್ನು ಮೂಸುವುದರ ಮೂಲಕ (ಗ್ರಹಣ ಭಕ್ಷಣ) ತೃಪ್ತಿ ಪಡುತ್ತವೆ. ಯ ಕೋಣೆ ದೀಪ ಹಚ್ಚದೆ ಖಾಲಿ ಇದ್ದುದರಿಂದ ಅಲ್ಲಿ ವಾಸಿಸುತ್ತಿವೆ. ಪಾಲಮಾಳಿಗೆ ತಿಳಿಸಿದರೆ ಅವಳು ಹೆದರಿಯಾಳು ಎಂದು ಈ ವಿಚಾರ ಲಿಲ್ಲ ಎಂದರು (ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ ೪ನೇ ಭಾಗ, ೭ನೆ ್ಯಾಯ). ಮೇಲೆ ಹೇಳಿದ ಪ್ರೇತಗಳಿಗೆ ಬೇಕಾದಷ್ಟು ಧಾರಾಳವಾಗಿ ಲಸು ಆಹಾರ, ನಿವಾಸಕ್ಕೆ ಜಾಗ ಇದ್ದುದರಿಂದ ಅದೇ ಸುಖವಾಗಿರಬೇಕು. ರಿಂದ ಶ್ರೀ ರಾಮಕೃಷ್ಣರೊಡನೆ ತಮ್ಮ ಮೋಕ್ಷಕ್ಕೆ ಸ್ವಲ್ಪ ಪ್ರಾರ್ಥನೆ ಡಲು ಹೇಳಿರಲಿಲ್ಲ. ಅವುಗಳ ಜೋಲುವ ಹೊಟ್ಟೆಕರಳು, ಅಪಘಾತದಿಂದ ಗ ದೇಹಕ್ಕಾದ ಹಾನಿಯ ಚಿಹ್ನೆಯಿರಬಹುದು.

ವಾಶಿಂಗ್ಟನ್‌ನಲ್ಲಿ ಪಿಶಾಚಿಗಳಿವೆ

ಅಮೇರಿಕದ ವಾಶಿಂಗ್ಟನ್ನಿನ ಕ್ಯಾಪಿಟೋಲ್‌ನಲ್ಲಿರುವ ಕಾಂಗ್ರೆಸ್‌ಭವನದ ರ್ಜ ಹಾಲ್‌ನಲ್ಲಿ ಸುಮಾರು ಒಂದು ಶತಮಾನದಿಂದ ಮಾಜಿ ಅಧ್ಯಕ್ಷ ಜಾನ್ ಎಡಮ್ಸ್‌ನ ಪ್ರೇತ ಆಗಾಗ ಶತಪಥ ಹಾಕುತ್ತಿದೆಯೆಂದು ಆಸುಪಾಸಿನ

ಜನ ನಂಬುತ್ತಾರೆ. ಎಡಮ್ಸರು ೧೮೪೪೮ರ ಫೆಬ್ರುವರಿಯಲ್ಲಿ ಸೆಟರ್ಡೆ ಹ
ನಲ್ಲಿ ಆಗ ನಡೆಯುತ್ತಿದ್ದ ಪ್ರತಿನಿಧಿ ಸಭೆಯಲ್ಲಿ ಭಾಷಣ ಮಾಡುತ್ತಿದ್ದಂತೆ
ಹೃದಯಾಘಾತಕ್ಕೊಳಗಾಗಿ ಬಿದ್ದು ಸತ್ತರು. ಈಗ ಅಲ್ಲಿ ಸಭೆಗಳಾಗುವುದಿ
ಅಲ್ಲಿ ವಿಶೇಷ ಬೆಳಕಿನ ವ್ಯವಸ್ಥೆಯೂ ಇಲ್ಲ. ಎಡಮ್ಸರ ಪ್ರೇತವು ಇಂದಿ
ಆಗಾಗ್ಗೆ ಅಲ್ಲಿ ಹೊಗೆಯಾಕಾರದಲ್ಲಿ ಕಾಣಿಸಿಕೊಳ್ಳುತ್ತದಂತೆ. ಜಾನ್‌ಅಲೆಕ್ಸೆ
ರರ "ವಾಶಿಂಗ್ಟನ್ನಿನ ಅತ್ಯಂತ ಹೆಸರುವಾಸಿ ಪ್ರೇತದ ಕತೆಗಳು" ಎಂಬ ಪು
ದಲ್ಲಿ ಸುಮಾರು ೬೦ ವಾಶಿಂಗ್‌ಟನ್ ಪ್ರಾಂತ್ಯದ ಖ್ಯಾತ ಪ್ರೇತಗಳ ಕತೆಗಳಿ
ಅವಲ್ಲಿ ಎಡಮ್ಸರದ್ದೊಂದು. ಸುತ್ತಲಿರುವ ಅನೇಕ ಮನೆಗಳು ಪಿಶಾಚಿ
ವಾಸದಿಂದಾಗಿ ಬಹಳ ಕಾಲದಿಂದ ಖಾಲಿ ಇವೆಯಂತೆ. ಅವುಗಳು ಅ
ವಾಸಿಸುವುದು ಖಂಡಿತ ಎಂದು ಅಲೆಕ್ಸೆಂಡರರು ತಿಳಿಸಿದ್ದಾರೆ. ಅಲ್ಲಿ ಪಿಶ
ಗಳ ವಾಸದಿಂದಾಗಿ ಕೆಲವು ಮನೆಗಳನ್ನು ನಾಶಮಾಡಿ ತೆಗೆದದ್ದುಂಟ
(ಸಂಗ್ರಹ ಉದಯವಾಣಿ ೧೫-೧೦-೧೯೭೫).

೮. ಇಂಗ್ಲೆಂಡಿನ ಟ್ಯೂಡರ್‌ಹೌಸಿನಲ್ಲಿ ಪಿಶಾಚಿಗಳು

ಇಂಗ್ಲೆಂಡಿನ ಟ್ಯೂಡರ್ ಹೌಸ್ ಎಂಬ ಅರಮನೆಯಲ್ಲಿ ಎಂಟನೆ ಹ
ಅರಸ ವಾಸಿಸುತ್ತಿದ್ದ. ಅವನಿಗೆ ಒಬ್ಬಳ ಅನಂತರ ಒಬ್ಬಳೆಂದು ಐದುಪತ್ನಿ
ರಾದರು. ಅವರಲ್ಲಿ ಜೇನ್ ಸೆಮೋರ್ ಮತ್ತು ಕೆತರೀನ್ ಹೊವಾಡ
ಎಂಬುವರು ಪಿಶಾಚಗಳಾಗಿ ಈಗಲೂ ಅಲ್ಲಿ ತೋರಿಕೊಳ್ಳುವುದುಂಟೆಂ
ಸೆಪ್ಟೆಂಬರ್ ೧೯೭೨ರ ರೀಡರ್ಸ್ ಡೈಜೆಸ್ಟ್‌ನಲ್ಲಿತ್ತು. ಅವರು ಕೊಲ್ಲಲ್ಪಟ್ಟವ
ಬೇಕು.

೯. ಕನ್ಯೆಯರ ಪ್ರೇತಗಳು

ಮಂಗಳೂರು ನಗರಿಯ ಲೇಡಿಹಿಲ್ ಹತ್ತಿರವಲ್ಲಿ ಒಂದು ಇಗ
ಮತ್ತು ದೊಡ್ಡ ಕ್ರಿಶ್ಚನ್ ಹೆಣಹೂಳುವ ಸ್ಥಳವಿದೆ. ಬದಿಯಲ್ಲಿ ಮಂಗಳೂ
ಉಡುಪಿ ರಸ್ತೆಯಿದೆ. ಒಮ್ಮೆ ಮಧ್ಯರಾತ್ರಿಯಲ್ಲಿ ಚಂದ್ರಪ್ರಕಾಶ ಚೆನ್ನಾ
ಇರುವಾಗ ರಾಮಪ್ಪ ಎಂಬವನಿಗೆ ಆ ರಸ್ತೆಯಲ್ಲಿ ಹೋಗುವಾಗ ಲಂಗಧರಿಸಿ
ಸುಮಾರು ೧೫ ಕ್ರಿಶ್ಚನ್ ಹುಡುಗಿಯರತಂಡ ಕಂಡಿತು. ಅವರು ಅವ ಹೋ
ತ್ತಿದ್ದ ದಾರಿಯಲ್ಲೇ ಮುಂದೆ ಹೋಗುತ್ತಿದ್ದರು. ಇಂಥ ರಾತ್ರಿಯ
ತೋರುವ ತಂಡ ಯಾರಿರಬಹುದೆಂದು ಹತ್ತಿರದಿಂದ ನೋಡುವ ಎ

ಮಪ್ಪ ಸ್ವಲ್ಪ ಜೋರು ನಡೆದಾಗ ಅವೂ ಜೋರು ನಡೆದು, ಅವರನಡುವೆ ತರ ಕಡಿಮೆಯಾಗಲಿಲ್ಲ. ಅಷ್ಟರಲ್ಲಿ ರಾಮಪ್ಪನಿಗೆ ತನ್ನ ಮನೆಗೆಹೋಗುವ ಲುದಾರಿ ಬಂದು ಅದಕ್ಕೆ ತಿರುಗಿದ. ಮರುದಿನ ಈ ವಿಚಾರವನ್ನು ಅವನ ಹಿತ ಕ್ರಿಶ್ಚನ್ನರವ ಬೌತೀಸನೊಡನೆ ಪ್ರಸ್ತಾಪಿಸಿದ. ಅದಕ್ಕೆ ಬೌತೀಸ "ಅವು ತಗಳ ಗುಂಪು. ನನಗೂ ಒಮ್ಮೆ ರಾತ್ರಿ ೧ ಗಂಟೆಗೆ ಅವು ತೋರಿದ್ದವು. ಡಿಹಿಲ್ ಬಳಿ ಮೈದಾನದಲ್ಲಿ ಕುಳಿತು ಏನೋ ಆಟಆಡುತ್ತಿದ್ದಂತೆ ತೋರಿ ನು ಹತ್ತಿರಹೋದಾಗ ತುಂಬಾ ಕಲ್ಲುಬಿತ್ತು. ನಾನು ಓಡಿಹೋದೆ ; ಹಿಂದಿ ದ ಓಡಿಸಿಕೊಂಡುಬಂದವು. ಈ ವಿಚಾರ ಮನೆಯಲ್ಲಿ ತಿಳಿಸಿದಾಗ ಅದು ತಗಳ ಗುಂಪು ನಿಜ, ಮುಂಚೆಯೂ ತೋರಿದ್ದುಂಟು, ಅವು ನಮ್ಮವರಲ್ಲಿ ಶ್ಚನರಲ್ಲಿ) ವಿವಾಹವಾಗದ ಯುವತಿಯರು, ಅಪಮೃತ್ಯುವಿನಿಂದ ಸತ್ತವರ ತಗಳು ಎಂದು ಹೇಳಿದ್ದರು" (ಶ್ರೀ ಬಿ. ವಿ. ಬಾಳಿಗರ ಭೂತದ ಕತೆಗಳು, ಗ ಐದರಿಂದ) ಎಂದ.

ಹಿಂದೂ ಧರ್ಮದಂತೆ ಹೆಂಗಸರಿಗೆ ಧಾರ್ಮಿಕ ರೀತಿಯ ವಿವಾಹವು ಅವ ನ್ನ ಉತ್ತಮಮಾಡುವ ಅತಿಮುಖ್ಯ ಸಂಸ್ಕಾರ. ಅದಾಗದವರು ಕಲಿಯುಗ ಮರಣಾನಂತರ ಪಿತೃಲೋಕ ಪಡೆಯಲಾರರು ಪ್ರಾಯಶಃ ಕ್ರಿಶ್ಚನ ಯೂ ಧಾರ್ಮಿಕ ವಿವಾಹ-ಸಂಸ್ಕಾರಕ್ಕೆ ಅದೇತರದ ಹಿರಿಮೆಯಿದೆ. ಆದರೆ ಗಲೀಗ ಲೇಡಿಹಿಲ್ ಬಳಿ ರಾತ್ರಿ ೨ ಗಂಟೆಗಳವರೆಗೂ ವಾಹನಗಳ ಚಲನೆ ದೆ. ಪ್ರೇತಗಳ ಸಂಚಾರವಿದ್ದಂತಿಲ್ಲ.

. ಹುಡುಗನಿಗೆ ಹಿಂದಿನ ಪ್ರೇತಜನ್ಮ, ಅದಕ್ಕೂ ಹಿಂದಿನ ಮಾನವಜನ್ಮ ನೆನಪಿದೆ

ಶಿಖಾರಪುರದ ಲಕ್ಷ್ಮೀಚಂದ್ರನ ಮಗ ಮರಣ ಹೊಂದಿದ. ಅಲೀಪ್ರುರದ ರಾಮನ ಮಗನಾಗಿ ಜನಿಸಿ ತನ್ನ ಮೂರನೆವರ್ಷದಲ್ಲಿ ತನ್ನಹಿಂದಿನಜನ್ಮದ ರ ಮಾತಾಡಲಾರಂಭಿಸಿದ. ಈ ವಾರ್ತೆಪರಡಿ ಲಕ್ಷ್ಮೀಚಂದ್ರ ಅವನನ್ನು ಡಲು ಬಂದಾಗ ಹುಡುಗ ಗುರುತಿಸಿ ಅವನನ್ನು ತಬ್ಬಿಕೊಂಡು ಸಂತೋಷ ದ ಕೂಗಿದ. ಸತ್ತ ಒಂಬತ್ತು ವರ್ಷ ಅವ ಅವನ ಮನೆಯ ಹಿತ್ತಲಲ್ಲಿದ್ದ ದಲ್ಲಿ ಪಿಶಾಚಿಯಾಗಿದ್ದು ಎಲ್ಲ ನೋಡುತ್ತಿದ್ದ ; ಗೊತ್ತಾಗುತ್ತಿತ್ತು ; ರೆ ತಾನೇನೂ ಮಾಡಲಿಕ್ಕಾಗುತ್ತಿರಲಿಲ್ಲ ಎನ್ನುತ್ತಿದ್ದ. ೧೯೬೧ರಲ್ಲಿ ಕಲ್ಯಾಣ ಕೆಯಲ್ಲಿ ಈ ವಾರ್ತೆ ಪ್ರಕಟವಾಗಿತ್ತು.

೧೧. ಮೀರತ್ತಿನ ಹೆದ್ದಾರಿಯಲ್ಲಿ ಕೆಟ್ಟ ಪಿಶಾಚವಿದೆ

"ಪ್ರೇತದ ಹೆದ್ದಾರಿ" ಎಂಬ ಶಿರೋನಾಮದಲ್ಲಿ ೨೫-೫-೧೯೮೦ ರ ಪ್ರಜಾಮತದಲ್ಲಿ ಒಂದು ಪಿಶಾಚವು ಮೂರು ದಶಕಗಳಿಂದ ಉತ್ತರಪ್ರದೇಶದ ಮೀರತ್ತಿನಲ್ಲಿ ಅವಘಡಗಳನ್ನು ನಡೆಸುತ್ತಿರುವ ಕತೆ ಬಂದಿತ್ತು. ಅದು ನೇಣ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಒಬ್ಬ ಬ್ರಿಟಿಶ್‌ಸೈನಿಕನದ್ದು ಎಂದ ಅಲ್ಲಿಯ ಜನರ ನಂಬಿಕೆ. ಅದು ಮೀರತ್-ರೂರ್ಕಿ ಹೆದ್ದಾರಿಯಲ್ಲಿ ಗಾಂಧಿ ಪಾರ್ಕಿನ ಬಳಿ ಪಶುವೈದ್ಯಶಾಲೆಗೆ ಅಡ್ಡರಸ್ತೆ ಆರಂಭವಾಗುವಲ್ಲಿ ಹೆಚ್ಚಿಂ ಹುಣ್ಣಿಮೆಯ ಬೆಳದಿಂಗಳಲ್ಲಿ ಖಾಕಿ ನಿಕ್ಕರ್ ಮತ್ತು ಬನಿಯನ್ ಹಾಕಿಕೊಂಡ ಆದರೆ ಯಾವಾಗಲೂ ರುಂಡವಿಲ್ಲದ ಭಯಾನಕ ರೂಪದಲ್ಲಿ ಬಹಳ ಜನರಿ ತೋರಿದ್ದುಂಟು. ಲೇಖನದಲ್ಲಿ ಅದನ್ನು ಆ ರೂಪದಲ್ಲಿ ಅಲ್ಲಿ ಕಂಡ ಕೆಲವ ಹೇಳಿಕೆಗಳಿವೆ. ಈ ಅಡ್ಡರಸ್ತೆ ಆರಂಭವಾಗುವಲ್ಲಿ ಅನೇಕ ಕೆಟ್ಟ ಅಪಘಾ ಗಳಾದುದುಂಟು. ಆದಕ್ಕೆ ಈ ಪಿಶಾಚವೇ ಕಾರಣ ಎಂಬುದು ಅಲ್ಲಿನವ ನಂಬಿಕೆ. ಒಂದು ದೃಷ್ಟಾಂತ ಉದಹರಿಸಲ್ಪಡುವುದು. ಒಮ್ಮೆ ಹೆಂಗಸರ ಮಕ್ಕಳು ಕುಳಿತಿದ್ದ ಎರಡು ಎತ್ತುಗಳ ಬಂಡಿಯೊಂದು ದೂರದ ಹಳ್ಳಿಯಿಂ ರೂರ್ಕಿಗೆ ಹೋಗಲಿಕ್ಕೆ ಆ ಅಡ್ಡರಸ್ತೆಯಿಂದ ಹೆದ್ದಾರಿಗೆ ಸೇರಲು ಬರುತ್ತಿತ್ತು ಆಗಲೇ ಒಂದು ಟ್ರಕ್ಕು ರೂರ್ಕಿಯಿಂದ ಮೀರತ್ತಿಗೆ ಹೆದ್ದಾರಿಯಮೇಲೆ ಬರ ತ್ತಿತ್ತು. ಅಡ್ಡರಸ್ತೆಯ ಬಳಿ ಬಂದಾಗ ಈ ಪಿಶಾಚವು ಫಕ್ಕನೆ ತೋರಿಕೊಂಡ ಅದನ್ನು ಅಡ್ಡರಸ್ತೆಗೆ ತಿರುಗಿಸಲು ಸೂಚಿಸಿತು. ಡ್ರೈವರ ಹೆದರಿ ಹಾಗೆಮಾಡಿದ ಅವನಿಗೆ ಅಡ್ಡ ರಸ್ತೆಯಲ್ಲಿದ್ದ ಎತ್ತಿನಗಾಡಿ ತೋರಲೇ ಇಲ್ಲವಂತೆ. ಟ್ರಕ ಅದಕ್ಕೆ ಬಡಿದು ಕೆಡೆದು ಒಂದು ಎತ್ತು ಸತ್ತಿತು (ಪ್ರಾಯಶಃ ತನ್ನೂಲ ಅದರ ರಕ್ತ ಪಿಶಾಚಕ್ಕೆ ಬೇಕಿತ್ತು).

ಸುರೇಂದ್ರರಾಯ್ ಕಪೂರರೆಂಬವರ ಮನೆ ಈ ವಠಾರಕ್ಕೆ ಸಮೀಪವ ಇದೆ. ಅವರು ಈ ಪಿಶಾಚ ಕಂಡವರಲ್ಲೊಬ್ಬರು. ಒಮ್ಮೆ ಅದು ಅವ ತಂದೆ ಬರ್ಕತ್‌ರಾಯ್ ಕಪೂರರಿಗೂ ತೋರಿಕೊಂಡಿತು. ಕೆಲವು ದಿನಗಳ ಆ ತಂದೆ ಖಾಯಿಲೆ ಬಿದ್ದರು. ಅವರಿಗೆ ರಕ್ತಕ್ಯಾನ್ಸರ್ ಎಂದು ಡಾಕ್ಟರ ತಿಳಿಸಿ ಚಿಕಿತ್ಸೆನಡೆಸಿದರು. ಆದರೆ ಸ್ಥಿತಿ ಕೆಡುತ್ತಲೇಬಂತು. ಮತ್ತು ಪಿಶಾಚವೇ ಅವರಿಗೆ ಆಮೇಲೆ ಪುನಃ ಪುನಃ ಪ್ರತೀಸಾರಿ ಹೆಚ್ಚುಹೆಚ್ಚು ಸಮೀ ಬಂದು ತೋರಿಕೊಳ್ಳುತ್ತಿತ್ತು. ಆಮೇಲೆ ಅವರು ಕಾಯಿಲೆಯಿಂದಲೆ ಮೃತರಾದರು. ಹತ್ತನೇದಿನ ಆದು ಸುರೇಂದ್ರರಾಯ್ ಕಪೂರರಿಗೆ ತನ್ನ ತಂ

ನ್ನು ತನ್ನ ತೋಳಲ್ಲಿ ಹಿಡಿದುಕೊಂಡಿದ್ದಂತೆ ತೋರಿತು ! ಎಂದರೆ ಅವರನ್ನು
ಂದು ಅದು ವಶಮಾಡಿಕೊಂಡಿತ್ತು. ಅದು ತಂದೆಗೆ ಹತ್ತಿರ ಹತ್ತಿರ
ೇರಿಕೊಂಡಂತೆ ಅವರ ಕಾಯಿಲೆ ಜಾಸ್ತಿಯಾದದ್ದು ತಿಳಿದೂ ಅವರನ್ನು
ಗೊಂದುಮನೆಗೆ ಕಳಿಸದಿದ್ದುದು, ಮಂತ್ರವಾದ ಮಾಡಿಸದ್ದು, ಆಶ್ಚರ್ಯ!
ಪ, ಆ ಮನುಷ್ಯ ಅದರ ಅಡಿಯಾಳಾಗಿ ಇನ್ನು ನರಳುತ್ತಿರುವಂತಾ
ತು. ಈ ಘಟನೆ ನಡೆದದ್ದು ನವೆಂಬರ್ ೧೯೭೭ರಲ್ಲಿ.

. ಲೆನಿನ್ ಮತ್ತು ಸ್ಟೆಲಿನ್ನರ ಪ್ರೇತಗಳು

ಕಮ್ಯೂನಿಸ್ಟ್‌ನಾಸ್ತಿಕರು ಮರಣದಾಚೆ ಏನಾದರೂಇದೆ ಎಂದು ನಂಬು
ಲ್ಲ. ಇದು ಅವರ ಸರ್ವತಂತ್ರ ಸ್ವತಂತ್ರದ ರಾಜ್ಯಕ್ರಮಕ್ಕೆ ಅತ್ಯಗತ್ಯ.
ಂದರೆ ಮರಣದಆಚೆ ಜೀವಾತ್ಮ ಬಾಳುತ್ತಾನೆ, ಪ್ರೇತಾನ್ವೇಷಣೆ ಸಂಘದ
ು ಕಂಡುಕೊಂಡಂತೆ ಪ್ರೇತಆಗಿ ಇರುತ್ತಾನೆ, ಎಂಬುದು ನಂಬಿದರೆ ಆಮೇಲೆ
ಕಯಾತನೆಇದೆ, ದೇವರಿದ್ದಾನೆ, ದೇವರು ನರಕಶಿಕ್ಷೆಕೊಡುತ್ತಾನೆ, ಅದನ್ನು
ಸಿಕೊಳ್ಳಬೇಕಾದರೆ ಬೈಬಲ್ ಮುಂತಾದ ಧರ್ಮಶಾಸ್ತ್ರ ನಂಬಬೇಕು,
ವರನ್ನು ನಂಬಬೇಕು, ಅವನ ಪ್ರಾರ್ಥನೆಮಾಡಬೇಕು, ಅವನನ್ನೇ ಅತ್ಯಂತ
ವರೆ ತಮ್ಮ ಮುಖಂಡರಿಗಿಂತ ಮೇಲ್ಮಟ್ಟದವ ಎಂದು ಒಪ್ಪಬೇಕು
ಂತಾದ ಆಸ್ತಿಕತೆಯ ಸರಪಣಿ ಬೆಳೆಯುತ್ತದೆ. ಆಗ ಜನರು ಕಮ್ಯೂನಿಸ್ಟ್
ಖಂಡರನ್ನೇ ಎಲ್ಲವಿಚಾರದಲ್ಲಿ ಸರ್ವಜ್ಞರು, ಅವರುಹೇಳಿದ್ದೇ ವೇದವಾಕ್ಯ,
ರಿಗಿಂತ ಹೆಚ್ಚಿನ ದೇವರಿಲ್ಲ, ಎಂದು ನಂಬಬೇಕಾದ ಶಿಸ್ತಿಗೆ ಹಾನಿಬರುತ್ತದೆ.
ತೊಡಕು ಎಷ್ಟಕ್ಕೂ ಇರಕೂಡದು, ಆದ್ದರಿಂದ ಆ ವಿಚಾರವೇಬೇಡ
ುದು ಅವರ ಕ್ರಮ. ಏನಾದರೂ ಪಿಶಾಚದ ಉಪದ್ರ ಅಲ್ಲಿ ಇಲ್ಲಿ
ೇರಿದರೆ ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಬಿಡದಿದ್ದರಾಯಿತು, ವಾರ್ತೆ
ದು ಎಂಬುದು ಅವರ ಧೋರಣೆ. ಆದರೆ ದೇವರನ್ನು ಅಲ್ಲಗಳೆಯುವ
ಯೂನಿಸ್ಟರಿಗೆ ದೇವರರಾಜ್ಯಬಿಟ್ಟು ದೂರಹೋಗಿ ತಮ್ಮದೇರಾಜ್ಯಕಟ್ಟಲಿಕ್ಕೆ
ತ್ರ ಆಗಲಿಲ್ಲ. ಅವನ ರಾಜ್ಯದಲ್ಲೇ ತಮ್ಮದುಕಟ್ಟಿದಾಗ ಅವ ಏನಾದರೂ
ಮಾಡದೆ ಬಿಟ್ಟಾನೆಯೇ ? ಹೀಗಾಗಿ ರಷ್ಯಾದಲ್ಲಿ ೧೦,೦೦೦ ಸಾಮಾನ್ಯ
ತಗಳ ಕತೆಗಳಿಗಿಂತ ಹೆಚ್ಚಿನ ಗಮನ ಸೆಳೆಯುವ ಮಹತ್ತಿನ ಕತೆಯಾಗಿ, ಆ
ದ ಅತ್ಯಂತ ಖ್ಯಾತ ಮುಖಂಡರಾಗಿದ್ದ ಲೆನಿನ್ನರು ಮತ್ತು ಸ್ಟೆಲಿನ್ನರು
ತಗಳಾಗಿ ಕಷ್ಟಪಡುವ ಘಟನೆಗಳು ನಡೆದು ಜನರ ಲಕ್ಷ್ಯ ಸೆಳೆದಿವೆ.

ರಷ್ಯಾದ ಚಕ್ರವರ್ತಿ ಆಡಳಿತದ ಕ್ರಮ ನಾಶಮಾಡಿ ಕಮ್ಯೂನಿಸ್ಟ್‌ರಾ ಸ್ಥಾಪಿಸಿ ಅದರ ಪ್ರಥಮ ಮುಖಂಡರಾಗಿ ಹೊಸಕ್ರಮದ ರಾಜ್ಯದ ಬೆಳವಣಿಗೆ ಅತಿ ಸಮರ್ಥ ತಳಗಟ್ಟು ಹಾಕಿದವರು ಲೆನಿನ್. ಆ ದೇಶವು ಅವರನ ಇಂದಿನವರೆಗೂ ಅಪಾರಮಟ್ಟದಲ್ಲಿ ಗೌರವಿಸುತ್ತದೆ. ೧೯೨೪ರಲ್ಲಿ ಅವ ಮೃತರಾದಾಗ ಅವರ ದೇಹವು ಕೊಳೆಯದಂತೆ ರಾಸಾಯನಿಕ ಮದ್ದು ಹಾ ಮಾಸ್ಕೋನಗರದ ಖ್ಯಾತ ಕೆಂಪುಚೌಕದಲ್ಲಿ ಒಂದು ಅತ್ಯಂತ ಭವ್ಯವಾದ ಗೋ ಕಟ್ಟಿ ಅದರಲ್ಲಿ ಅವರ ದೇಹ ಇಡಲ್ಪಟ್ಟಿದೆ.

ಲೆನಿನ್ನರ ಅಧಿಕಾರ ಮುಗಿಯುತ್ತ ಬರುವಾಗ ಸ್ಟೈಲಿನ್ನರು ಬಹ ಮೇಲ್ಮಟ್ಟಕ್ಕೆ ಏರಿ ಆಳುವ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದರು ಆದರೆ ಸ್ಟೈಲಿನ್ನರೆಂದರೆ ಲೆನಿನ್ನರಿಗೆ ಅತ್ಯಂತ ತಾತ್ಸರ. ಅವರು ತನ್ನ ಅತ್ಯಂ ಭರವಸೆಯುಳ್ಳ ಆಪ್ತರೊಡನೆ ಸ್ಟೈಲಿನ್ನನು "ಅತ್ಯಂತ ಭಯಂಕರ ಕ್ರೂ ವಿಪರೀತ ಅಧಿಕಾರಪ್ರಿಯ, ಅವನೆಂದರೆ ನನಗೆ ತೀರಾ ಅಸಹ್ಯ" ಎಂದಿದ್ದರು ಆದರೆ ಸ್ಟೈಲಿನ್ನರು ಬಹಳವೆಲ್ಲ ಕುತಂತ್ರ ನಡೆಸಿ ತನ್ನ ಸ್ಥಾನ ಬಹಳ ಭ ಮಾಡಿಕೊಂಡಾಗಿತ್ತು. ಲೆನಿನ್ನರ ಅನಂತರ ಅವರೇ ರಷ್ಯಾದ ಮುಖಂ ರಾದರು. ಅವರು ತಮ್ಮ ಆಪ್ತರು, ಮಿತ್ರರು, ಸಹೋದ್ಯೋಗಿಗಳು ಎಂ ವರೇ ತನ್ನ ಏಳಿಗೆಗೆ ಅಡ್ಡಬಂದಾರೆಂದು ಅವರಿಗೆತೋರಿದ ಸುಮಾರು ೭೫ ಅ ಮೇಲ್ಮಟ್ಟದ ಅಧಿಕಾರಿಗಳನ್ನು ಬಹಳ ಉಪಾಯದಿಂದ ಸೈಬೀರಿಯಾ ಭಯಂಕರ ಚಳಿಗೆ ನೂಕಿದ್ದರು ; ಅಥವಾ ಕೊಲೆಮಾಡಿಸಿಬಿಟ್ಟಿದ್ದರು. ತಮ ಸರ್ಕಾರೀ ಕೃಷಿಯೋಜನೆಗೆ ವಿರುದ್ಧ ಬಂದ ತನ್ನದೇಶದವರೇ ಆದ ಸುಮಾ ಹಟನ್ನೈದು ಮಿಲಿಯ ರಷ್ಯಾದ ಪ್ರಜೆಗಳನ್ನೇ ಕೊಲ್ಲಿಸಿದ್ದರು. ರಷ್ಯಾ ಎಂದ ಸ್ಟೈಲಿನ್, ಸ್ಟೈಲಿನ್ ಎಂದರೆ ರಷ್ಯಾ ಎಂಬ ಮಟ್ಟಕ್ಕೆಏರಿದ್ದ ಅವರ ಹೆಣವನ ಕೆಂಪುಚೌಕದಲ್ಲಿಯೇ ಲೆನಿನ್ನರ ಗೋರಿಯ ಅತಿ ಸಮೀಪದಲ್ಲಿ ಮತ್ತೊಂ ಭವ್ಯವಾದ ಗೋರಿಯಲ್ಲಿ ಇಟ್ಟರು.

ಆದರೆ ಆಮೇಲೆ ಕಾಲಹೋದಂತೆ ಸ್ಟೈಲಿನ್ನರ ಅತಿಭಯಂಕರದ ಕ್ರೂ ಕಾರ್ಯಗಳ ನಿಜತ್ವ ಬೆಳಕಿಗೆಬಂದವು. ಅವರಬಗ್ಗೆ ಇದ್ದ ಗೌರವ ತೀರಾ ಕು ಯಿತು. ಲೆನಿನ್ನರಪ್ರೇತಕ್ಕೆ ಸ್ಟೈಲಿನ್ನರ ಶವ ತೀರಾಸಮೀಪಕ್ಕೆ ಬಂದಂದಿನಿಂ ಉಂಟಾದ ಅಸಹ್ಯತೆ ಅಸಹನೀಯವಾದ ಕಷ್ಟವಾಗಿತ್ತು. ಆದರೆ ಬೇ ಉಪಾಯಕಾಣದೆ ಚಡಪಡಿಸುತ್ತಿರುವುದು ಮಾತ್ರಸಾಧ್ಯವಾಗಿತ್ತು. ಸ್ಟೈಲಿನ್ ಹೆಸರು ತೀರಾ ಕೆಟ್ಟಿದ್ದುದು ಕಂಡಾಗ, ಅವರ ಪಂಗಡ ಬಹಳ ಕ್ಷೀಣಿಸಿದ್ದು

ಾಗ ತನ್ನ ಕಷ್ಟದಿಂದ ಬಿಡುಗಡೆಗೆ ದಾರಿಮಾಡಲು ಮನಸ್ಸುಹಾಕಿತು. ತನ್ನ
ು ಆಪ್ತಳೂ ಆಗ ಕಮ್ಯೂನಿಸ್ಟ್ ಅಧಿಕಾರಿಗಳಲ್ಲೊಬ್ಬಳು ಮುಖ್ಯಸ್ಥಳೂ
ವಳಿಗೆ ಪ್ರತ್ಯಕ್ಷವಾಗಿ ತೋರಿಕೊಂಡು ಸ್ಟೆಲಿನ್ನರ ಶವ ದೂರ ಹಾಕುವ
ನ್ನ ನಡೆಸಲು ಸೂಚಿಸಿತು. ಲೆನಿನ್ನರ ಬಗ್ಗೆ ಎಲ್ಲರ ಗೌರವ ರವಷ್ಟೂ ಕುಸಿ
ಿಲ್ಲವಾದ್ದರಿಂದ ಅಂಥವರ ಮಟ್ಟದಲ್ಲೇ ಸಮೀಪದಲ್ಲೇ ಸ್ಟೆಲಿನ್ನರ ಶವ
ಟ್ಟ ಸರಿಸಮಾನ ಗೌರವ ತೋರಿಸುವುದುಸರಿಯಲ್ಲ ಎಂಬ ಭಾವನೆ ಪ್ರಚಾರ
ಡಿದಾಗ ಅದನ್ನು ದೂರ ಸಾಗಿಸಿ ತೀರಾ ಅಲ್ಪತರದಲ್ಲಿ ಇಡಬೇಕೆಂಬ
ೋಚನೆಗೆ ಬೆಂಬಲ ಸಿಕ್ಕಿತು.

ಆದ್ದರಿಂದ ತಾ॥ ೩೧–೧೦–೧೯೬೧ರಂದು ಮಧ್ಯರಾತ್ರಿಯಲ್ಲಿ ಸ್ಟೆಲಿನ್ನರ
ರಿ ಒಡೆಯಲ್ಪಟ್ಟು ಹೆಣದಪೆಟ್ಟಿಗೆ ಎತ್ತಿ ದೂರ ಕೊಂಡುಹೋಗಿ
ಲ್ಲೊಂದು ಸಾಮಾನ್ಯಗೋರಿಯಲ್ಲಿಹಾಕಿ ಅದರಮೇಲೆ ಕೇವಲವಾಗಿ ಸ್ಟೆಲಿನ್ನರ
ು, ಜನನಮರಣಗಳ ತಾರೀಖುಗಳು ಇರುವ ಕಲ್ಲು ನಿಲ್ಲಿಸಲಾಯಿತು
ಾರ Lenin's Spirit Asked for Solitude, Kurt Singer,
day Standard, 2-7-1967). ಸ್ಟೆಲಿನ್ನರ ಶವ ದೂರ ಹಾಕಬೇಕೆಂಬ
್ಯೂನಿಸ್ಟ್ ಪಕ್ಷದ ನಿರ್ಣಯವು ಬೇರೆ ಕೆಲವು ಇತರ ಪತ್ರಿಕೆಗಳಲ್ಲಿಯೂ
ಿತ್ತು. ೧೯೭೨ರಲ್ಲಿ ಬಂದ ಒಂದು ಪತ್ರಿಕೆಯ ವರದಿಯಂತೆ ಸ್ಟೆಲಿನ್ನರ
ದಿನದಲ್ಲಿ ಅವರ ಗೋರಿಯಮೇಲೆ ಒಂದೇ ಒಂದು ಹೂಮಾಲೆಯೂ
ರಲಿಲ್ಲವಂತೆ!

ಸ್ಟೆಲಿನ್ನರುಅಧಿಕಾರದಲ್ಲಿದ್ದಾಗ ಅವರ ಅತಿದೊಡ್ಡ ಚಿತ್ರಗಳನ್ನು ಅಪಾರ
್ಯೆಯಲ್ಲಿ ಕೋಲಲ್ಲಿ ಎತ್ತಿಕೊಂಡು ಮೆರವಣಿಗೆ ಆಗಾಗ ನಡೆಯುತ್ತಿದ್ದುದರ
ಟೋಚಿತ್ರಗಳು ಪತ್ರಿಕೆಗಳಲ್ಲಿ ಬಂದಿದ್ದವು. ಪ್ರಾಯಶಃ ಬೇರೆಯಾವ ದೇವ
ಇಷ್ಟೆಲ್ಲ ಅಪಾರಮಟ್ಟದ ಚಿತ್ರಗಳ ಜಾಗ ಸಿಕ್ಕಿದ್ದಿಲ್ಲ. ಆಮೇಲೆ
ಚೌಕದ ಭವ್ಯವಾದಗೋರಿಯಿಂದ ಸ್ಟೆಲಿನ್ನರ ಹೆಣಎತ್ತಿ ತೀರಾ ಅಗೌರವ
ತಿ ದೂರ ಎಲ್ಲೊ ಸಾಮಾನ್ಯಗೋರಿಯಲ್ಲಿಟ್ಟುದಕ್ಕೆ ಸ್ಟೆಲಿನ್ನರ ಪ್ರೇತಕ್ಕೆ,
ೇನೂ ಮಾಡಲಾರದೆ ತೀರಾತೀರಾ ಚಡಪಡಿಸುತ್ತಿರುವ ಗತಿ ಎಂದರೆ
ಅಧಃಪತನ ಬಂತು! ಆದರೆ ಆಮೇಲೆ ರಷ್ಯಾದ ಕಮ್ಯೂನಿಸ್ಟ್ ಪಕ್ಷದ
೧೯೭೯ರ ಹೊಸ ಕ್ಯಾಲೆಂಡರಲ್ಲಿ ಸ್ಟೆಲಿನ್ನರ ಮರಣದದಿನ ಪ್ರಥಮಬಾರಿಗೆ
ಲ್ಪಟ್ಟಿದೆಎಂದು ಮಾಸ್ಕೋನಗರದ ೨೫–೧೨–೧೯೭೮ರ ವಾರ್ತೆ ತಿಳಿಸಿದೆ.
ದ ಅಪ್ರತಿಮ ಮುಖಂಡ ಮಾಓ ಅವರ ಮಾತೆಲ್ಲ ವೇದವಾಕ್ಯವಾಗಿತ್ತು

ದರೂ, ಮರಣ ಹೊಂದಿದ ಮೂರು ವರ್ಷಗಳಲ್ಲೇ ಅವಕ್ಕೆ ಅಲ್ಪತೆ ಕೊಡು
ಹೊಸ ಧೋರಣೆ ಆರಂಭವಾಯಿತು.

ಹೀಗೆ ಕಮ್ಯೂನಿಸ್ಟರು ಮುಖಂಡರನ್ನು ಅವರು ಬಲಿಷ್ಠರಾಗಿದ್ದಾ
ಸ್ವರ್ಗಕ್ಕೂ ಮೇಲೆ ಏರಿಸುವುದು, ಆನಂತರ ನರಕದಬುಡಕ್ಕೆ ಹೊತ್ತು ಹಾ
ವುದು ಎಂಬ ವಿಚಿತ್ರ ಕ್ರಮದ ಅರ್ಥ ಏನು? ಅವರ ಕ್ರಮವೇ ತೀರ
ಅಂಧತೆಯದ್ದು ಎಂದಲ್ಲವೆ? ಸಾಮಾನ್ಯ ಧಾರ್ಮಿಕ ಕ್ರಮದ ಕೋಟಿ ಕೋ
ಜನರು ಸಾವಿರಾರು ವರ್ಷಕಾಲವೆಲ್ಲ ಶ್ರೀರಾಮ, ಶ್ರೀಕೃಷ್ಣ, ಬುದ್ಧ, ಕ್ರಿಸ್ತ
ಮಹಮ್ಮದ ಪೈಗಂಬರರನ್ನು ನಂಬುತ್ತ ಅತ್ಯಂತ ಗೌರವಿಸುತ್ತ ಬಂದವರಿ
ಅವರ ವಿಚಾರದ ಭಾವನೆ ಅಡಿಮೇಲೆ ಆದದ್ದೆಂಬುದೇ ಇಲ್ಲವಲ್ಲ! ದೇವ
ದ್ದಾನೆ, ಮರಣದ ಆಚೆ ಬಾಳು ಇದೆ, ಎಂಬ ಅತ್ಯಂತ ಮಹತ್ವದ ನಿಜತ್ವಗಳಿ
ಬೇಕೆಂದೇ ಕಣ್ಣುಮುಚ್ಚಿಕೊಳ್ಳುವ ಕಮ್ಯೂನಿಸ್ಟರ ಕ್ರಮಗಳು ತೀರಾ ತಪ್ಪು
ಎಂದೇ ಆಗುತ್ತದೆ.

೧೩. ಪ್ರೇತ ಪಿಶಾಚಗಳ ವಿಚಾರ ಪಾಶ್ಚಾತ್ಯರ ಸಂಶೋಧನೆ

ಮುಂಚೆ ಪ್ರೇತಗಳನ್ನು ನಂಬದವರು ಬಹಳ. ಆದರೆ ಈಗ ಪಾಶ್ಚಾತ್ಯರ
ಮೃತರೆಲ್ಲ ಪ್ರೇತರಾಗುತ್ತಾರೆಂದು ರುಜುಪಡಿಸಿದ್ದಾರೆ. ಪ್ರೇತಪಿಶಾಚಗ
ಸಂಶೋಧನೆ ಪಾಶ್ಚಾತ್ಯ ದೇಶಗಳಲ್ಲಿ ಆರಂಭವಾದದ್ದು ೧೮೪೮ರಲ್ಲಿ. ಫೋಕ
ಎಂಬವನೊಬ್ಬನ ಕುಟುಂಬವು ಅಮೇರಿಕದ ನ್ಯೂಯಾರ್ಕ್ ಪ್ರಾಂತ್ಯದ ಒಂದ
ಚಿಕ್ಕ ಪೇಟೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿತ್ತು. ಆ ಮನೆಗೆ
ಕುಟುಂಬವು ಬರುವ ಮುಂಚೆಯೂ ಅಲ್ಲಿ ಪಿಶಾಚದ ಉಪದ್ರವಿತ್ತಂತೆ. ರಾ
ಯಾರೋ ಬಾಗಿಲನ್ನು ತಟ್ಟಿದಂತಾಗುವುದು, ಬಾಗಿಲು ತೆರೆದು ನೋಡಿದ
ಅಲ್ಲಿ ಯಾರೂ ಕಾಣದಿರುವುದು, ನಡೆಯುತ್ತಿತ್ತು. ಫೋಕ್ಸನ ಕಡೆಯ ಮಗಳ
ಕೇಟ್ ಎಂಬವಳು ಬಹಳಧೈರ್ಯಶಾಲಿ. ಇದು ಎಂಥ ಉಪದ್ರವೆಂಬುದನ
ಕಂಡೇಬಿಡಬೇಕೆಂದು ಕೇಟಳು ತೀರ್ಮಾನಿಸಿದಳು. ಆದ್ದರಿಂದ ಒಮ್ಮೆ
ತರದ ಬಡಿತ ಕೇಳಿದಾಗ, "ಏ ಪಿಶಾಚಿ! ಹಾಗಾದರೆ ನಾನೂ ಬಡಿಯುತ್ತೇನ
ನೀನು ನಾನು ಬಡಿದಂತೆಯೇ ಬಡಿ, ನೋಡುವ" ಎಂದು ಕೂಗಿ ಹೇಳಿ ಬ
ಗಿಂದ ಮೇಜನ್ನು ಎರಡುಸಾರಿ ಬಡಿದಳು. ಪಿಶಾಚಿಯೂ ಎರಡು ಸಾ
ಬಾಗಿಲು ಬಡಿಯಿತು; ನಾಲ್ಕುಸಾರಿಬಡಿದಳು, ಅದೂ ನಾಲ್ಕುಸಾರಿಬಡಿಯಿತು
ಆಗ ಅವಳು ಈ ತರದ ಬಡಿತದ ಮೂಲಕ ಪಿಶಾಚದೊಡನೆ ಭಾಷಾಸಂಪಕ

ಸಲು ನಿರ್ಧರಿಸಿದಳು. ಅವಳ ಅಕ್ಕನಿಗೂ ಈ ತಮಾಷೆ ಕಂಡು ಧೈರ್ಯ ದು ಈ ಆಟದಲ್ಲಿ ಸೇರಿಕೊಂಡಳು.

ಬಡಿತದ ಶಬ್ದಗಳ ಮೂಲಕ ಭಾಷಾಸಂಪರ್ಕ ನಡೆಸುವುದನ್ನು ತಂತಿ ಖೆಯವರು ಈಗಲೂಮಾಡುತ್ತಾರೆ. ಅವರ ತಂತೀ ಆಫೀಸುಗಳಲ್ಲಿ ಕ್ಕಾಗಿ ಒಂದು ಸಲಕರಣೆಯಿದೆ. ಅದರ ಹಿಡಿಯನ್ನು ಬೆರಳಿಂದ ಫಕ್ಕನೆ ಬಿಟ್ಟರೆ ಕಟ್ ಶಬ್ದವಾಗುತ್ತದೆ. ಕ್ಷಣಕಾಲ ಜಾಸ್ತಿ ಒತ್ತಿಬಿಟ್ಟರೆ ಕಡ್ ವಾಗುತ್ತದೆ. ಈ ಎರಡುತರದ ಶಬ್ದಗಳ ಬೇರೆಬೇರೆತರದ ಸಂಯೋಜನೆ ದ ಎ ಬಿ ಸಿ ಡಿ ಮುಂತಾದ ಅಕ್ಷರಗಳಿಗೆ, ಸಂಖ್ಯೆಗಳಿಗೆ, ವಿರಾಮಕ್ಕೆ, ಂತಾಗಿ ಸಂಜ್ಞೆಗಳನ್ನು ಮೋರ್ಸ್ ಎಂಬವ ತಯಾರಿಸಿದ್ದು ತಂತಿ ಇಲಾಖೆ ಲ್ಲಿ ಪ್ರಯೋಗದಲ್ಲಿವೆ. ದೃಷ್ಟಾಂತಕ್ಕೆ ಎ.___ ; ಬಿ___... ; ಸಿ___.___... ; ...

ಒಂದು ತಂತಿಆಫೀಸಿನ ಈ ತರದ ಸಲಕರಣೆಯನ್ನು ಸರಿಗೆ ಮತ್ತು ಟರಿ ಮೂಲಕ ಮತ್ತೊಂದುಆಫೀಸಿನ ಅಂಥ ಸಲಕರಣೆಗೆ ಜೋಡಿಸಿದಾಗ, ದ ಇದರ ಹಿಡಿ ಅರೆಕ್ಷಣ ಒತ್ತಿದಾಗ ಅಲ್ಲಿನದರ ಹಿಡಿ ವಿದ್ಯುತ್ ಸ್ಕಾಂತದಿಂದ ಅರೆಕ್ಷಣ ಸೆಳೆಯಲ್ಪಟ್ಟು ಕಟ್ ಮಾಡುತ್ತದೆ. ಇಲ್ಲಿ ಸ್ವಲ್ಪ ಚ್ಚು ಒತ್ತಿದರೆ ಅಲ್ಲಿಯೂ ಸ್ವಲ್ಪಹೆಚ್ಚು ಸೆಳೆಯಲ್ಪಟ್ಟು ಕಡ್ ಶಬ್ದ ಆಗು . ಆದ್ದರಿಂದ ಇಲ್ಲಿಂದ ಕಳುಹಿಸಿದ ಸಂದೇಶ ಅಲ್ಲಿ ಅರ್ಥಮಾಡಿಕೊಳ್ಳ ದು.

ಕೇಟ್‌ಫೋಕ್ಸಳು ಈ ತರದ ಭಾಷೆ ಅಭ್ಯಸಿಸಿ ಎರಡುತರದ ಬಡಿತದ ಲಕ ಅದನ್ನು ಪ್ರೇತಕ್ಕೂ ಕಲಿಸಿದಳು. ಅನಂತರ ಅವಳಿಗೂ ಪಿಶಾಚಕ್ಕೂ ಷಣೆ ಸಾಧ್ಯವಾಯಿತು. ಆಗ ಆ ಪಿಶಾಚವು ತಾನು ಯಾರು, ಏತಕ್ಕಾಗಿ ಲಂತಟ್ಟುತ್ತಿದ್ದುದು ಎಂಬುದನ್ನು ತಿಳಿಸಿತು. ಅದು ಮುಂಚೆ ಒಬ್ಬ ರೀ ವ್ಯಾಪಾರಿಯಾಗಿದ್ದನಂತೆ. ಒಮ್ಮೆರಾತ್ರಿ ಆ ಊರನ್ನು ತಲುಪಿದಾಗ ನೆಯಲ್ಲಿ ಆಶ್ರಯ ಬೇಡಿ ಮಲಗಿ ನಿದ್ರಿಸಿದನಂತೆ. ಮನೆಯವನು ಅವನ ಕ್ಕಾಗಿ ಅವನನ್ನು ಕೊಲೆಮಾಡಿ ಹೆಣವನ್ನು ಹಿತ್ತಲಲ್ಲಿ ಹುಗಿದನಂತೆ. ನನಿಗೆ ತನಗಾದ ಈ ವಿಪರೀತ ಅನ್ಯಾಯವನ್ನು ಲೋಕಕ್ಕೆ ತಿಳಿಸಲೇಬೇಕು ಒಂದೇ ಛಲವು ಕಾಡಿಸಿತ್ತು. ಆದರೆ ಅದಕ್ಕಾಗಿ ಮತ್ತೇನನ್ನೂ ಮಾಡ ದೆ ಅದು ಕೇವಲವಾಗಿ ಆ ಮನೆಯ ಬಾಗಿಲನ್ನು ಬಹಳ ಕಾಲದಿಂದ ತ್ತ ಬಂತು. ತನ್ನದೇಹವನ್ನು ಎಲ್ಲಿ ಹುಗಿದದ್ದು ಎಂದು ಪಿಶಾಚವು

ತಿಳಿಸಿದಾಗ ಅಲ್ಲಿ ಅಗೆದು ನೋಡಿದರು. ಮನುಷ್ಯನಮೂಳೆ, ತಲೆಕೂದಲು ಅಲ್ಲಿದ್ದವು. ಆದ್ದರಿಂದ ಪಿಶಾಚದ ಕತೆ ನಿಜ ಎಂದು ಖಂಡಿತವಾಯಿತು.

ಫೋಕ್ಸ್ ಸಹೋದರಿಯರು ತಮ್ಮ ಪಿಶಾಚಸಂಪರ್ಕದ ಕತೆಯನ್ನು ವರ್ತಮಾನ ಪತ್ರಿಕೆಗಳಿಗೆ ಕಳುಹಿಸಿದರು. ವಾರ್ತೆಬಹುಬೇಗ ಅಮೇರಿಕದಲ್ಲೆಲ್ಲ ಹಬ್ಬಿತು. ಪಿಶಾಚಗಳ ಉಪದ್ರವವಿರುವ ಅನೇಕ ಮನೆಗಳವರು ಈ ತರದ ಪಿಶಾಚಗಳ ಸಂಪರ್ಕ ನಡೆಸಿದರು. ಇದಕ್ಕೆ ಬಾಗಿಲುತಟ್ಟುವುದಲ್ಲ, ಹೊಸ ಕ್ರಮಗಳೂ ಕಂಡುಹಿಡಿಯಲ್ಪಟ್ಟವು. ಈ ಸಂಪರ್ಕಕ್ರಮವು ಯೂರೋಪಿಗೂ ಹಬ್ಬಿತು ; ಅಲ್ಲಲ್ಲಿ ಈ ತರದ ಶೋಧನಾಸಂಘಗಳು ಸ್ಥಾಪಿತವಾದವು. ಈ ವಿದ್ಯೆಯ ಪತ್ರಿಕೆಗಳೂ ಪ್ರಕಟವಾಗಲಾರಂಭಿಸಿದವು.

ಅಪರೂಪಕ್ಕೆ ಕೆಲವರಿಗೆ (ಬಹುಮಟ್ಟದಲ್ಲಿ ಹೆಂಗಸರಿಗೆ) ಪ್ರೇತಗಳನ್ನು ಕಾಣುವ ಅಥವಾ ಆಕರ್ಷಿಸುವಶಕ್ತಿ ಎಷ್ಟೋ ವಿಶೇಷ ಮಟ್ಟದಲ್ಲಿರುತ್ತದೆ. ಅಂಥವರು ಯತ್ನಿಸಿದಾಗ ತಮಗೆ ಬೇಕಾದ ಪ್ರೇತವನ್ನು ಆಕರ್ಷಿಸಲಾಪರು ಎಂಬ ವಿಚಾರವು ಈ ಪ್ರೇತಶೋಧಕ ಸಂಘಗಳಿಗೆ ಬೇಗ ತಿಳಿಯಿತು. ಕೇಟಳು ಅಂಥವಳೊಬ್ಬಳಾಗಿದ್ದಳು. ಅಂಥ ಶಕ್ತಿ ಹೆಚ್ಚು ಇದ್ದವರು ಪ್ರೇತಸಂಪರ್ಕ ಕೂಟಗಳ ಕೇಂದ್ರಗಳಾದರು. ಅವರನ್ನು ಪ್ರೇತಪಾತ್ರಿಗಳು (mediums) ಎಂದು ಕರೆಯುವ. ನಮ್ಮ ದೇಶದಲ್ಲಿ ಭೂತಾರಾಧನೆ ಇರುವಲ್ಲೆಲ್ಲ ಆರಾಧಿಸಲ್ಪಡುವ ಪ್ರತಿಭೂತವು ಒಬ್ಬ ಆರಾಧಕನನ್ನು ಮಾಡಿಕೊಂಡು ಅವನ ತಕ್ಕ ರೀತಿಯಲ್ಲಿ ಆವಾಹಿಸಿದಾಗ ಅವನ ಮೈಮೇಲೆ ಬರುತ್ತದೆ ; ಹಗಲ್ಲಿ ಬೇಕಾದರೆ ಹಗಲಲ್ಲಿ, ರಾತ್ರಿಯಲ್ಲಿ ಬೇಕಾದರೆ ರಾತ್ರಿಯಲ್ಲಿ. ಪಾಶ್ಚಾತ್ಯ ಕ್ರಮದ ಪ್ರೇತಪಾತ್ರಿಗಳು ನಿರ್ದಿಷ್ಟ ಪ್ರೇತವನ್ನಲ್ಲ ; ತಮ್ಮ ಸಹಾಯ ಪಡೆಯಲು ಬಂದವರು ಹೇಳುವ ಪ್ರೇತವನ್ನು ತಮ್ಮಮೇಲೆ ಆವಾಹಿಸಿಕೊಳ್ಳ ಬೇಕಾಗುತ್ತದೆ. ಇದಕ್ಕೆ ಕತ್ತಲೆಕೋಣೆ ಉಪಯುಕ್ತ ಎಂದು ಕಂಡುಬಂದು ಪ್ರೇತ ಆವಾಹಕರು ತಮ್ಮದೇ ಆದ ಪ್ರೇತಾವಾಹನೆ ಮಂದಿರವನ್ನು (Sceance Room) ಮಾಡಿಕೊಂಡಿರುತ್ತಾರೆ. ಅಲ್ಲಿ ಕುಳಿತು ಬೇಕಾದವ ಬಗ್ಗೆ ಪ್ರೇತಸಂಪರ್ಕ ಮಾಡಿ ಜೀವಿಸುವವೃತ್ತಿ ಉಂಟಾಯಿತು.

ದೂರದ ಒಂದು ಪಟ್ಟಣದ ಹೆಸರು, ಅದರ ವಿಭಾಗದ ಅಂಚೆ ಸಂಖ್ಯೆ ಬೀದಿಯ ಹೆಸರು, ಮನೆನಂಬರ್ ಮತ್ತು ನಮ್ಮ ಮಿತ್ರನ ಹೆಸರು ಸ್ಪಷ್ಟವಾ ಅಂಚೆ ಕಾಗದದಲ್ಲಿ ಹಾಕಿದರೆ ಅಂಚೆಯವರು ಅವನ ಪತ್ತೆಮಾಡಿ ಆ ಕಾಗ ತಲಪಿಸುತ್ತಾರೆ. ಆದರೆ ಪ್ರೇತಲೋಕದಲ್ಲಿ ನಮಗೆ ಬೇಕಾದ ಪ್ರೇತದ ಕ

ಕದ ಹೆಸರಲ್ಲದೆ ಬೇರೆಯಾವ ವಿವರಣೆಯೂ ನಮ್ಮಲ್ಲಿಲ್ಲ. ಪಾತ್ರಿಯೂ ತ್ಯಂತ ವಿಶಾಲವಾದ ಲೋಕ ಕಂಡವಳೇ ಅಲ್ಲ. ಆದರೂ ಅವಳಲ್ಲಿಗೆ ೋ ಅಪರಿಚಿತರು ಬಂದು ಮೃತನಾಗಿರುವ ತನ್ನ ಬಂಧು ಇಂಥ ಹೆಸರಿ ನ್ನು ಮಾತಾಡಿಸಬೇಕು ಎಂದರೆ ಅದುಹೇಗೆ ಸಾಧ್ಯ ? ಪ್ರೇತಲೋಕದವ ೆ ನರಕಕ್ಕೂ ಸ್ವರ್ಗಕ್ಕೂ ಹೋಗದವರು ಎಂದು ತೋರುತ್ತದೆ. ಆದ್ದ ಅವರಿಗೆ ನಿರ್ಬಂಧವಿಲ್ಲ ; ನಿರ್ದಿಷ್ಟ ಕೆಲಸವೂ ಇಲ್ಲ. ಅವರು ವಾಸಿಸಿದ್ದ ಸ್ಥೂಲಲೋಕದ ವಿಚಾರವಾಗಿ ಅವರಿಗೆ ನೋಡಲಿಕ್ಕೆ, ತಿಳಿಯಲಿಕ್ಕೆ ಹಲವಿದ್ದಂತೆ ತೋರುತ್ತದೆ. ಆದ್ದರಿಂದ ಇರಬೇಕು, ಯಾರಾದರೂ ಪಾತ್ರಿ ಪ್ರೇತಾನ್ವೇಷಣೆಗೆ ಯತ್ನಿಸುವಾಗ ಪ್ರೇತಗಳಲ್ಲಿಯೋ ಯಾರಾ ಉತ್ಸಾಹೀ ಪ್ರೇತ ಮುಂದೆ ಬಂದು ಅವಳ ಸಂಪರ್ಕಮಾಡಿ ಅವಳ ಲೋಕದ ಏಜೆಂಟಾಗಿ ಪ್ರೇತಗಳ ಅನ್ವೇಷಕನಾಗಿ ಕೆಲಸಮಾಡಲು it Guide) ಒಪ್ಪುತ್ತದೆ. ಇಂಥ ಪ್ರೇತಾನ್ವೇಷಕರಲ್ಲಿ ಕೆಲವರು ಮೇಲು ಕದವರಿದ್ದು ಎಲ್ಲಾ ಭಾಗಕ್ಕೂ ಹೋಗಲಾಪರು ; ಕೆಲವರು ಕೆಳಮಟ್ಟ ದ್ದು ಅಷ್ಟು ಚೆನ್ನಾಗಿ ತಮ್ಮ ಕೆಲಸ ಮಾಡಲಾರರು ಎಂಬ ಬೇಧಗಳಿವೆ ೆ. ಅಂತೂ ಅವರಲ್ಲಿ ಯಶಸ್ವಿಯಾಗುವವರು ಅನೇಕರಿದ್ದಾರೆ, ಪಾತ್ರಿ ೂ ಶಕ್ತಿ ಬೇಧಗಳು ಇವೆ.

ನಮ್ಮಲ್ಲಿ ಪಿತೃಶ್ರಾದ್ಧದಲ್ಲಿ ಪುರೋಹಿತರ ನಿರ್ದೇಶದಂತೆ ಹಾಕಿದ ಪಿಂಡ ೋಕದಲ್ಲಿ ಎಲ್ಲೋ ಏನೋ ಇರುವವರಿಗೆ ಖಂಡಿತ ತಲ್ಪಲಾರದು ನಾಸ್ತಿಕರು ವಾದಿಸುವುದುಂಟು. ಈ ಕಾಲದಲ್ಲಿ ಪ್ರೇತಾವಾಹನೆ ತ ಸಾಧ್ಯ ಎಂದು ರುಜುವಾಗಿರುವಾಗ, ಮಂತ್ರಗಳ ಸಹಾಯದಿಂದ ವ ಸಾರವನ್ನು ಮೃತ ಪಿತೃಗಳಿಗೆ ತಲ್ಪಿಸುವುದು ಅಸಾಧ್ಯ ಎಂದು ುವುದು ಏನೂ ಸರಿಯಲ್ಲ. ಒಂದು ಪ್ರೇತವನ್ನು ಒಮ್ಮೆ ಕರೆಸಿದ ರ ಆ ಪ್ರೇತಪಾತ್ರಿಯು ಅದನ್ನು ಪುನಃಪುನಃ ಸಂಪರ್ಕ ಮಾಡುವುದು ುಲಭವಂತೆ, ಕೇಟಳ ಪ್ರೇತ-ಸಂಭಾಷಣೆ ಕ್ರಮವು ಸುಧಾರಣೆಯಾಗಿ ರೂಪವಾಗಿ ಒಂದುಉರುಟಾದ, ಅಕ್ಷರಮಾಲೆಯ ಅಕ್ಷರಗಳು ಸುತ್ತಲೂ ರುವ ಮಣೆ, ನಡುವೆ ಗೂಟ, ಅದರ ಮೇಲೆ ಕೈ ಇಡಲಾಪ, ಮತ್ತು ಇರುವ, ಗೂಟದ ಮೇಲೆ ಸುತ್ತಲೂ ತಿರುಗಲಾಪ ಟೊಪ್ಪಿ ಇದೆ ಬೋರ್ಡ್), (ಇದರ ಮುಂಚಿನ ರೂಪಕ್ಕೆ ಪ್ಲೇಂಚೆಟ್ ಎಂದುಹೆಸರು. ಲ್ಲಿ ನಡುವೆ ಮೂತಿ ಇರುವ ಗಾಡಿ ಇದೆ ; ಗೂಟ, ಟೊಪ್ಪಿ, ಅಲ್ಲ).

ಪ್ರೇತದ ಆವಾಹನೆಯಾದ ಅನಂತರ ಪಾತ್ರಿಯು ಔಜಾ ಬೋಡಿ
ನಡುವಣ ಟೊಪ್ಪಿಯ ಮೇಲೆ (ಅಥವಾ ಪ್ಲೇಂಚೆಟ್ಟಿನ ಗಾಡಿಯ ಮೇಲೆ) ತ
ಕೈ ಇಡುತ್ತಾಳೆ. ಆದರೆ ತಾನೇಅದನ್ನು ತಿರುಗಿಸಲು ಶಕ್ತಿ ಹಾಕುವುದಿ
ಪ್ರೇತವೇ ಅವಳ ಕೈಮೂಲಕ ಟೊಪ್ಪಿಯ ಮೂಜನ್ನು ಬೇಕಾದ ಅಕ್ಷರ
ಕಡೆಗೆ ತೋರಿಸುತ್ತ ಹೋಗುತ್ತದೆ. ಅವನ್ನು ಬರಕೊಂಡು ಅದರ ಹೇ
ತಿಳಕೊಳ್ಳಲು ಸಾಧ್ಯವಾಗುತ್ತದೆ. ಕೆಲವು ಪ್ರೇತಗಳು ಇಟ್ಟ ಸ್ಲೇಟಿನ ಮೇ
ತಾವೇ ಉತ್ತರ ಬರೆಯುತ್ತವೆ. ಮತ್ತೆ ಕೆಲವು ನೇರವಾಗಿ ಮಾತಾಡುತ್ತ
ಪ್ರೇತದ ಸ್ವರವು ಬಹಳ ಕ್ಷೀಣವಿದ್ದರೆ ಕಿವಿಗೆ ತುತ್ತೂರಿ ಇಟ್ಟುಕೊಂಡು ಕೇಳ
ಸಾಧ್ಯವಾಗುತ್ತದೆ. ಪ್ರೇತದಮಾತುಕೇಳುವಾಗ ಅದರಮಾತಿನ ಶೈಲಿ ಸು
ವಾಗಿ ಗುರುತಿಸುವಷ್ಟು ಮೃತನ ಮಾತಿನ ಶೈಲಿಯೇ ಆಗಿರುತ್ತದೆ.

ಪ್ರೇತಾನ್ವೇಷಣೆಯ ಚರಿತ್ರೆಯ ಒಂದು ಕಾಲದಲ್ಲಿ ಆದೆಲ್ಲ ವಂ
ಮಾತ್ರ ಎಂಬ ಕೆಟ್ಟಹೆಸರು, ತುಂಬಾ ಖಂಡನೆ ಅದಕ್ಕೆ ಬಂದದ್ದುಂಟ
ಸಮರ್ಥನೆಸಾಲದಿದ್ದ ಪಾತ್ರಿಗಳು ಅನೇಕರಿದ್ದುದು ಇದಕ್ಕೆ ಕಾರಣ. ಅವ
ಬೇಕಾದ ಪರಲೋಕದ ಏಜೆಂಟರಿಲ್ಲದಿದ್ದುದು, ಬೇಕಾದ ಪ್ರೇತವನ್ನು ಕರೆ
ಲಾಗದಿದ್ದಾಗ, ತಮ್ಮ ಅಸಮರ್ಥತೆ ಮುಚ್ಚಲಿಕ್ಕಾಗಿ ಅವರು ಬೇಕಾದ ಪ್ರೆ
ಬಂದಿದೆ ಎಂದು ನಟಿಸುತ್ತಿದ್ದುದು, ಪ್ರೇತಾನ್ವೇಷಣೆಯ ಕತ್ತಲೆಕೋಣೆಯ
ಪ್ರೇತಗಳ ಅಮಾನುಷಕಾರ್ಯಗಳೆಂಬಂತೆ ತಾವೇ ಏನೇನೋ ಮಾಡುವುದ
ಅವರಲ್ಲಿಬರುವ ಬಹುಮಟ್ಟಿನವರಿಗೆ ಬಿಗಿಯಾದ ಪರೀಕ್ಷೆಗೆ ಶಕ್ತಿ ಇಲ್ಲದಿದ್ದುದ
ಮುಖ್ಯಕಾರಣ. ಮತ್ತೊಂದು ಕಾರಣ, ಪ್ರೇತಾನ್ವೇಷಣೆಗೆ ತಯಾರಿ ನಡೆ
ತ್ತಿರುವಾಗ ಅಲ್ಲಿ ಬೇಕಾದ ಪ್ರೇತವಲ್ಲ, ಕುತೂಹಲ ತುಂಬಿರುವ, ಜನ
ಸಂಪರ್ಕ ಬಯಸುವ, ಮತ್ಯಾವುದೋ ಪ್ರೇತ ಬಂದು ಪ್ರೇತಪಾತ್ರಿಯನ
ಹೊಕ್ಕು ಏನೇನೋ ಹೇಳುವುದೂ ನಡೆಯುತ್ತಿತ್ತು. ಇಂಥ ಕೆಲವು ಬೇ
ವಾದ ಪ್ರೇತಗಳು ಪ್ರೇತಾನ್ವೇಷಣೆ ಮಂದಿರಕ್ಕೆ ಬಂದವರಲ್ಲಿ ತಮ್ಮ ಒ
ಶತ್ರುವನ್ನುಕಂಡಾಗ ಪಾತ್ರಿಯ ದೇಹವನ್ನೇ ಉಪಯೋಗಿಸಿಕೊಂಡು ಅವನ
ಘಾಸಿ ಮಾಡಿದ್ದುಂಟು.

ಆದರೆ ಪ್ರೇತಗಳಸಂಪರ್ಕವು ನಿಜಕ್ಕೂ ಸಾಧ್ಯವೆಂಬುದಕ್ಕೆ ಅನೇಕಾನೆ
ಖಚಿತ ದೃಷ್ಟಾಂತಗಳೂಇದ್ದವು. ಹಾಗಿದ್ದರೆ ಮಾನವನ ಜ್ಞಾನಭಂಡಾ
ವಿಸ್ತರಿಸಲಿಕ್ಕೆ ಇದೂ ಒಂದುದಾರಿಯೇ ; ಖಚಿತಜ್ಞಾನ ಎಲ್ಲಿಂದ ಬಂದರೇನ
ಆದ್ದರಿಂದ ಈ ಹೊಸದಾರಿಯನ್ನು ಚೆನ್ನಾಗಿ ಪರೀಕ್ಷಿಸಲೇಬೇಕು, ಹೊರ

ಂಗೆ ಮಾಡದೆಯೇ ಅದರ ತಾತ್ಪರ, ಖಂಡನೆ, ತಿರಸ್ಕಾರ ಸರಿಯಲ್ಲ ಎಂದು
ಂವು ಅತ್ಯಂತಪ್ರಖ್ಯಾತ ಪಾಶ್ಚಾತ್ಯ ಮೇಧಾವಿಗಳು ತೀರ್ಮಾನಿಸಿ ಆ ಬಗ್ಗೆ
ತಿಕ ವಿಜ್ಞಾನದ ಶೋಧನಾ ಕ್ರಮಗಳ ತರದ ಅತಿ ಬಿಗುವಾದ ಜಾಗ್ರತೆ
ನ್ನು ಸೇರಿಸಿ ೧೮೭೦ರಲ್ಲಿ ತಮ್ಮದೇ ಶೋಧನೆ ಆರಂಭಿಸಿದರು.

ಅವರಲ್ಲಿ ಸರ್‌ವಿಲಿಯಮ್ ಕ್ರೂಕ್ಸ್, ಪ್ರಿನ್ಸಿಪಾಲ್ ಸರ್ ಒಲಿವರ್
ಜ್ ಎಂಬ ಜಗದ್ವಿಖ್ಯಾತ ಭೌತಿಕ ವಿಜ್ಞಾನಿಗಳು, ವಿಲಿಯಮ್ ಮೇಯರ್ಸ್
ಬ ಅಮೇರಿಕದ ಅತಿ ಪ್ರಖ್ಯಾತ ತತ್ವಜ್ಞಾನಿ, ಕೋನಾನ್ ಡ್ಯೊಲ್
ಬ ಪತ್ತೆದಾರಿಕತೆಗಳ ಜಗದ್ವಿಖ್ಯಾತ ಬರಹಗಾರ, ಬಾಲ್ಫರ್ ಎಂಬವ
ಂತರ ಬ್ರಿಟನ್ನಿನ ಮುಖ್ಯ ಮಂತ್ರಿಯಾದವ, ಮುಂತಾದವರಿದ್ದರು.
೮೭ರಲ್ಲಿ ಇಂಥ ಶೋಧಕರ ಸೈಕಿಕಲ್ ರಿಸರ್ಚ್ ಸಂಘ (Society for
ychical Research P.R.S) ಲಂಡನ್ನಲ್ಲಿ ಸ್ಥಾಪಿತವಾಯಿತು. ಅನೇಕ
ರ್ಷಗಳಕಾಲ ಈ ಸಂಘದ ಅಧ್ಯಕ್ಷರಾಗಿದ್ದ ಪ್ರಾಧ್ಯಾಪಕ ಮೇಯರ್ಸ್‌ರವರು
ಮ್ಮ (Human Personality and Its Survival after Death)
ಬ ಬೃಹದ್‌ಗ್ರಂಥದಲ್ಲಿ ಈ ಸಂಘದ ಶೋಧನೆಗಳು ಎಷ್ಟೆಲ್ಲ ಜಾಗರೂಕತೆ
ಂದ, ಮನಃಪೂರ್ವಕತೆಯಿಂದ, ತಾಳ್ಮೆಯಿಂದ ಮತ್ತು ಅತ್ಯಂತ ಆಳವಾಗಿ
ಸಲ್ಪಟ್ಟವು ಎಂಬುದನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ; ಶೋಧನೆಗಳ
ೂಲಕ ಏನೆಲ್ಲ ಖಚಿತ ವಿಷಯಗಳು ಕಂಡುಬಂದವು ಎಂದೂ ತಿಳಿಸಿದ್ದಾರೆ.
ಥ ಸಂಘಗಳು ಬೇರೆ ದೇಶಗಳಲ್ಲೂ ಈಗ ಇವೆ. ಪ್ರೇತಸಂಪರ್ಕ ಕೂಟ
ು ನಮ್ಮ ದೇಶದಲ್ಲಿಯೂ ಬೊಂಬಾಯಿ, ಕೊಯಮತ್ತೂರು ಮುಂತಾದ
ಗಳಲ್ಲಿ ಇವೆ.

ಪಿ.ಆರ್.ಎಸ್.ನ ಅತಿ ಸಮರ್ಥ ಸಂಶೋಧಕರು ತಮ್ಮ ಸತ್ಯಾನ್ವೇಷ
ಣ ಕಾರ್ಯದಲ್ಲಿ ಅತಿಶಕ್ತಿವಂತರಾದ ಮತ್ತು ತಮ್ಮವರಾಗಿದ್ದ ನಂಬಿಗಸ್ಥ
ದ ಪ್ರೇತಪಾತ್ರಿಗಳನ್ನು ಉಪಯೋಗಿಸುತ್ತಿದ್ದರು. ತಮ್ಮ ಗೃಹಗಳಲ್ಲಿಯೇ
ೇಕವೇಳೆ ಪ್ರೇತ ಆವಾಹನೆ ನಡೆಸುತ್ತಿದ್ದರು. ಅಥವಾ ಇತರ ಪಾತ್ರಿಗಳ
ತ ಆವಾಹನೆ ಮಂದಿರಗಳಲ್ಲಿ ಶೋಧನೆ ನಡೆಸುವಾಗ ಆವಾಹನೆಯ ಮುಂಚೆ
ರ ಪ್ರತಿ ಮೂಲೆಯನ್ನೂ ಪರೀಕ್ಷಿಸುವುದು ಅದರ ಕಿಟಕಿಗಳಿಗೆ ವಿದ್ಯುತ್
ಗೆಗಳನ್ನು ಕಟ್ಟಿ ಕಿಟಕಿಯು ಬಾಗಿಲು ತೆರೆದು ಅದರ ಮೂಲಕ ವಂಚನೆ
ಸಲು ಯತ್ನಿಸಿದರೆ ಗಂಟೆ ಬಾರಿಸುವಂತಾಗುವುದು ಮುಂತಾದ ಜಾಗ್ರತೆ
ಡಿದ್ದರು.

ಹೀಗೆ ವಂಚನೆ ಅಸಾಧ್ಯ ಮಾಡಿದಾಗಲೂ ಅದ್ಭುತ ರೀತಿಗಳಲ್ಲಿ ಪ್ರೇ ಸಂಪರ್ಕ ನಡೆಯುವುದು ಕಂಡುಬಂತು. ಪ್ರೇತ ಬಂದೊಡನೆ ಸೂಚಕವಾ ಅದು ಮೇಜನ್ನು ನೂಕುವುದು, ಅಥವಾ ಬಡಿಯುವುದು, ಅಥವಾ ಎತ್ತಿ ಕೆಳಗಿಡುವುದು, ನಡೆಯುತ್ತಿತ್ತು. ಬಂದ ಪ್ರೇತವು ತನ್ನ ಹಿಂದಿನ ಪರಿಚಿ ರಿಗೆ ನಿಸ್ಸಂಶಯವಾಗುವ ರೀತಿಯಲ್ಲಿ ತನ್ನದೇ ಆದ ಮಾತಿನ ಕ್ರಮದಮೂಲಕ ಹೇಳುವ ವಿಷಯಗಳ ಮೂಲಕ, ಕುರುಹುಕೊಡುತ್ತಿತ್ತು. ಕೆಲವು ಪ್ರೇ ಗಳು ನೇರವಾಗಿ ಮಾತಾಡುತ್ತಿದ್ದವು. ಮತ್ತೆ ಕೆಲವು ಸ್ಪರ್ಶಿಸುತ್ತಿದ್ದವು ಕೆಲವು ತಮ್ಮ ಹಿಂದಿನ ತರದ ಬಟ್ಟೆಬರೆಸಹಿತ ಘನೀಭವಿಸುತ್ತಿದ್ದವು; ಅನಂತ ಮಾಯಕವಾಗುತ್ತಿದ್ದವು. ತಮ್ಮ ಫೋಟೋ ತೆಗೆಯಲುಬಿಟ್ಟವು. ಫೋಟೋ ದಲ್ಲಿ ಚಿತ್ರಗಳೂ ಸರಿಯಾಗಿ ಬರುತ್ತಿದ್ದವು. ಕೆಲವು ಬೀಗಹಾಕಿಇಟ್ಟ ಪೆಟ್ಟಿಗೆ ಯೊಳಗಿದ್ದ ವಾದ್ಯಗಳನ್ನುಬಾರಿಸಿದವು. ಆಗತಾನೇ ದೂರದಲ್ಲಿ ನಡೆಯುತ್ತಿ ಎಂದು ಅವು ತಿಳಿಸಿದ ಘಟನೆಗಳು ನಿಜವೆಂದು ಕಂಡುಬಂದವು. ಹೀಗೆ ಹಲವು ರೀತಿಗಳಲ್ಲಿ ಪ್ರೇತಗಳಿವೆ ಎಂಬುದೂ, ಅವುಗಳ ಸಂಪರ್ಕಕ್ರಮವು ಏನೂರಕ್ಕಲ್ಲ ಎಂಬುದೂ ಚೆನ್ನಾಗಿ ರುಜುಮಾಡಲ್ಪಟ್ಟಿತು. ಡಾ॥ ಹಡ್ಸನ್ನರು ಹೇಳಿದ್ದುಂಟು ಪ್ರೇತಗಳು ನಿಜಕ್ಕೂಇವೆ ; ಸತ್ತವರು ಪ್ರೇತರಾಗುತ್ತಾರೆ ಎಂಬುದೂನಿಜ ; ಈ ಸತ್ಯಗಳನ್ನು ಇನ್ನೂಕೂಡ ನಂಬದವರು ಕೇವಲ ಮೂಢರೇ ಎಂದು ತೀರ್ಮಾ ನಿಸಬೇಕಾಗುತ್ತದೆ ಎಂದಿದ್ದರು.

ಪ್ರೇತಸಂಪರ್ಕದ ಶೋಧನೆಗಳಲ್ಲಿ ತುಂಬಾ ಕೆಲಸನಡೆಸಿದ್ದ ಪ್ರಾಧ್ಯಾಪ ಡಾ॥ ಮೇಯರ್ಸ್ನರು, ಅಮೆರಿಕದ ಪಿ.ಆರ್.ಎಸ್.ನ ಶಾಖೆಯ ಕಾರ್ಯದರ್ಶಿ ಖ್ಯಾತ ತತ್ವಜ್ಞಾನಿ ವಿಲಿಯಮ್ ಜೇಮ್ಸರು, ತಮ್ಮ ತಮ್ಮ ಮರಣದ ನಂತರ ತಾವು ಖಂಡಿತವಾಗಿಯೂ ಪ್ರೇತವಾಗಿ ಬಂದು ತಿಳಿಸುವುದಾಗಿ ಮರಣದ ಮುಂಚೆ ಮಾತುಕೊಟ್ಟವರು, ಮರಣದ ಅನಂತರ ಬಹುಬೇಗಬಂದು ತಮ್ಮ ಪ್ರೇತಸಂಪರ್ಕನಡೆಸಿ ಅದು ತಾವೇ ಎಂಬಬಗ್ಗೆ ಖಚಿತ ಗುರುತುಗಳನ್ನು ಕೊಟ್ಟಿ ದ್ದರು. ಸರ್ ಒಲಿವರ್ ಲಾಜ್‌ರವರ ಮಗ ಯುದ್ಧದಲ್ಲಿ ಮೃತನಾದವ ಬೇಗ ತಂದೆಯ ಸಂಪರ್ಕ ಮಾಡಿದ.

ಪ್ರೇತಾವಾಹನೆಯ ವಿಚಾರ ಜೀವಿತರಾಗಿದ್ದಾಗ ನಂಬದಿದ್ದ ಖ್ಯಾತ ಬರಹಗಾರರು ಹಾಲ್ ಕೈನ್ ಮತ್ತು ಎಡ್ಗರ್ ವಾಲೇಸರೂ ಪ್ರೇತಲೋಕದಿಂದ ಆವಾಹಿತರಾಗಿಬಂದು ತಮ್ಮ ಮುಂಚಿನ ಅಪನಂಬಿಕೆಯಬಗ್ಗೆ ವಿಷಾದ ಸೂಚಿಸಿ ದ್ದರು. ಪ್ರಥಮ ಘೋರಯುದ್ಧದಲ್ಲಿ ವಿಮಾನ ಪಡೆಯಲ್ಲಿದ್ದ ಪೆರೋಲ್

ಬವ ಕಮ್ಯೂನಿಸ್ಟನಾಗಿದ್ದ, ದೇಹದ ಮರಣದೊಡನೆ ತನ್ನ ಸಂಪೂರ್ಣನಾಶ
ದು ಭಾವಿಸುತ್ತಿದ್ದವ ತಾನು ಯುದ್ಧದಲ್ಲಿ ಮರಣಹೊಂದಿದ ಮೇಲೂ
ತವಾಗಿ ಬಾಳುತ್ತಿದ್ದಾಗ ಪ್ರೇತಾವಾಹನೆಯಲ್ಲಿ ಬಂದು, ಕಮ್ಯೂನಿಸ್ಟರ ಈ
ವ ಭಾವನೆ ತೀರಾ ತಪ್ಪು, ತನಗೆ ದೇಹಇದ್ದಾಗಲೇ ಈ ತಪ್ಪು ತಿಳಿದಿದ್ದರೆ
ಳ ಉತ್ತಮವಾಗುತ್ತಿತ್ತು, ಹಾಗಾಗಿರದ ಬಗ್ಗೆ ಬಹಳ ವ್ಯಸನಪಟ್ಟೆ ಎಂದು
ಸಿದ್ದ.

ಟೈಟೇನಿಕ್ ಎಂಬ ಸ್ಟೀಮರು ಆ ಕಾಲದ ಪ್ರಯಾಣದಸ್ಟೀಮರುಗಳಲ್ಲೇ
ತ್ಯಂತದೊಡ್ಡದೂ ಭವ್ಯವಾದದ್ದೂ ಆಗಿ ನಿರ್ಮಿತವಾದದ್ದು, ತನ್ನ ಪ್ರಥಮ
ಯಾಣಕ್ಕೆ ಇಂಗ್ಲೆಂಡಿಂದ ಅಮೇರಿಕಕ್ಕೆ ಹೊರಟಿತು. ಅದು ಮುಳುಗಲು
ಸ್ಯವೇಇಲ್ಲ ಎಂಬ ಭರವಸೆಯಿಂದ ಅದರ ಪ್ರಯಾಣಿಕರು ಅವರ ಹಲವು
ದ ವಿನೋದಗಳಲ್ಲಿಮಗ್ನರಾಗಿದ್ದರು. ಆದರೆ ಅದಕ್ಕಿಂತ ಅತಿದೂರದಲ್ಲಿದ್ದ
ುದಗಡ್ಡೆಯ ಭಾರಿ ದೊಡ್ಡ ದ್ವೀಪದ ಅಡಿಭಾಗ ವಿಪರೀತ ದೂರದವರೆಗೆ
ಡಿಯಲ್ಲಿ ಚಾಚಿಕೊಂಡಿದ್ದುದಕ್ಕೆ ಸ್ಟೀಮರು ಬಡಿದು ಅದು ಒಡೆದುಮುಳು
. ಹೆಚ್ಚಿನಜನರು ಸತ್ತರು. ಅದರೊಡನೆ, ಅತ್ಯಂತಸಮರ್ಥನೆಂದು ಆದರ
ನ್ನನಾಗಿ ನೇಮಕಗೊಂಡಿದ್ದವನೂ ಮುಳುಗಿದ. ಆದರೆ ಆಗ ಅವನ ಅತಿ
ನಕಳವಳ, ತಾನು ಸಾಯುತ್ತಿದ್ದೇನಲ್ಲ ಎಂದಲ್ಲ, ತನ್ನ ತಪ್ಪಿಲ್ಲದೆ ತನ್ನ
ರು ಕೆಡುತ್ತದಲ್ಲ, ಎಂದು. ಆದ್ದರಿಂದ ಈ ಘಟನೆಯಾದ ಎರಡುದಿನ
ಲ್ಲೇ ಅವನ ಪ್ರೇತವು, ಆವಾಹಿಸಲ್ಪಡದೆಯೂ ಅಮೇರಿಕದಲ್ಲಿ ನಡೆಯು
ದ್ದ ಒಂದು ಪ್ರೇತಸಂಪರ್ಕಕೂಟದಲ್ಲಿ ಪಾತ್ರಿಯನ್ನು ಪ್ರವೇಶಿಸಿ ಈ
ಘಡವು ತಾನು ತಪ್ಪಿಸಲಾರದ ರೀತಿಯಲ್ಲಿ ಹೇಗೆನಡೆಯಿತು ಎಂಬುದನ್ನು
ರಿಸಿತು. ಆಮೇಲೆ ಸ್ಟೀಮರಿನಮಾಲಿಕರು ಅದರ ನಾಶಕ್ಕೆಕಾರಣತಿಳಿಯಲು
ಮಿಸಿದ ತಜ್ಞರ ಕಮಿಟಿಯ ವರದಿಯೂ ಕೆಪ್ಟನ್ನನ ಪ್ರೇತದವರದಿಯನ್ನೇ
ಪಡಿಸಿತಂತೆ.

ಹೀಗೆಲ್ಲ ಪ್ರೇತಸಂಪರ್ಕ ನಿಜ ಎಂಬುದಕ್ಕೆ ಪಿ.ಆರ್.ಎಸ್. ಮುಂತಾದ
ಘಗಳ ಅನೇಕಾನೇಕ ವರದಿಗಳೂ, ಸದಸ್ಯರಗ್ರಂಥಗಳೂ, ಅತಿಧಾರಾಳವಾಗಿ
ಮ್ಮ ವರದಿಕೊಡುತ್ತವೆ. ಆದರೆ ಕೆಲವರಲ್ಲಿ ಆಮೇಲೂ ಒಂದು ತರದ
ಯವು ಹಾಗೆಯೇ ಉಳಿಯುತ್ತಿತ್ತು. ಅದೇನೆಂದರೆ ಕೆಲವು ಪ್ರೇತಪಾತ್ರಿ
ಗೆ ಇತರರ ಮನಸ್ಸಲ್ಲಿದ್ದುದನ್ನು ತಿಳಿಯುವಶಕ್ತಿಇದೆ. ಪ್ರಶ್ನೆಕೇಳಿದವರಿಗೆ
ದ್ದರೂ ಬೇರೆಯಾರಿಗಾದರೂ ವಿಚಾರತಿಳಿದಿದ್ದು ಅದನ್ನೇ ಅವರು ಪ್ರೇತ

ತಿಳಿಸಿದ್ದು ಎಂದು ಹೇಳುವುದು ಸಾಧ್ಯವಲ್ಲವೇ ? ಇದಕ್ಕೂ ಖಚಿತ ಸಮಾಧಾ ತರುವ ಅನೇಕ ಅಪರೂಪದ ಘಟನೆಗಳಿವೆ. ಕೇವಲ ಒಂದನ್ನು ಇಲ್ಲಿ ಉ ಹರಿಸುತ್ತೇನೆ. ಪತ್ತೇದಾರಿ ಕತೆಗಳ ಖ್ಯಾತಬರಹಗಾರ ಕೊನೊನ್ ಡ್ಯೊಲ ಮಗ ಪಿ.ಎಸ್. ಕೊನೊನ್ ಡ್ಯೊಲರು ಅದನ್ನು ಹೇಳಿದ್ದು ೨೧-೧೧-೧೯೬ Sunday Standard ನಲ್ಲಿ ಪ್ರಕಟವಾಗಿತ್ತು.

ಆಸ್ಟ್ರೇಲಿಯಾದ ಮೆಲ್‌ಬೋರ್ನಿನ ಒಂದು ಪ್ರಖ್ಯಾತ ಮನೆಯ ಎರಡ ಹುಡುಗರು ಫ್ರೆಂಕ್ ಮತ್ತು ಬ್ರೌನ್ ಎಂಬುವರು ಒಮ್ಮೆ ಸಮುದ್ರದ ವಿಹಾರಕ್ಕೆ ತಮ್ಮದೇ ದೋಣಿಹತ್ತಿ ಹಾಯಿಬಿಟ್ಟು ಹೋದರು. ಅವರ ಪತ್ತೆ ಯಾಗಲಿ, ದೋಣಿಯಾಗಲಿ, ಶವಗಳಾಗಲಿ ಸಿಕ್ಕಲಿಲ್ಲ. ಹುಡುಗರ ತಂ ಒಂದು ಪ್ರೇತಸಂಪರ್ಕದ ಕೂಟಕ್ಕೆ ಹೋಗಿ ಫ್ರೆಂಕನ ಪ್ರೇತಕರೆಸಿ ಮಾತಾಡಿಸಿ ಪ್ರೇತ ಹೇಳಿದ್ದೇನೆಂದರೆ, ಸಮುದ್ರದಲ್ಲಿದ್ದಾಗ ಫಕ್ಕನೆ ಒಂದು ಬಿರುಗಾ ಬಂದು ಅವರ ದೋಣಿ ಮಗುಚಿ ನೀರು ತುಂಬಿ ಮುಳುಗಿತು. ತಾವಿಬ್ಬರು ನೀರಲ್ಲಿ ಪೇಚಾಡುತ್ತಿದ್ದಾಗ ಒಂದು ದೊಡ್ಡ ಶಾರ್ಕ್ ಮೀನು ಬ್ರೌನನನ್ನು ಹಿಡಿದು ನುಂಗಿತು. ತಾನು ನೀರಲ್ಲಿ ಮುಳುಗಿಹೋದೆ ಎಂದ. ಸ್ವಲ್ಪಕಾಲ ಮೇಲೆ ಬೆಸ್ತರು ಅಲ್ಲೇ ಸಮುದ್ರದಿಂದ ಒಂದು ದೊಡ್ಡ ಶಾರ್ಕ್ ಮೀನನ್ನು ಹಿಡಿದರು. ಅದರ ಹೊಟ್ಟೆಯಲ್ಲಿ ಬ್ರೌನನ ಹೆಸರಿದ್ದ ಅವನ ವಾಚು ಸಿಕ್ಕಿತು ಆದ್ದರಿಂದ ಬ್ರೌನನ ಮರಣದ ಕ್ರಮ ಫ್ರೇಂಕನ ಪ್ರೇತಸಂಪರ್ಕದ ಕಾಲದವರೆ ಯಾರೊಬ್ಬರಿಗೂ ತಿಳಿದಿರಲಾರದಿದ್ದು, ಫ್ರೇಂಕನ ಪ್ರೇತದಮೂಲಕಮಾತ್ರವೆ ಹೇಳಲ್ಪಟ್ಟಿದ್ದರಿಂದ ಹೊರತು ಪಾತ್ರಿಯ ವಿಶೇಷ ಮಾನಸಿಕ ಶಕ್ತಿಯಿಂ ತಿಳಿದುಬಂದ ವಿಚಾರವೇ ಅಲ್ಲ ಎಂದು ರುಜುವಾಯಿತು.

೧೮. ದುರ್ಮರಣದಿಂದ ಪಿಶಾಚತ್ವ

ಮನುಷ್ಯ ವಯಸ್ಸಾಗಿ ಅಥವಾ ಕಾಯಿಲೆಯಿಂದ ಸಾಯದೆ ಆತ್ಮಹತ್ಯೆ ಮಾಡಿಕೊಳ್ಳುವುದು ಅತಿ ಕೆಟ್ಟ ಅಥವಾ ದುರ್ಮರಣ ; ಅದರಿಂದ ತಪ್ಪಿಸಿ ಕೊಳ್ಳಲೇಬೇಕಾದುದು. ಆಕಸ್ಮಾತ್ತಾಗಿ ನೀರಿಗೆಬಿದ್ದು, ಅಥವಾ ಮರದಿಂ ಬಿದ್ದು, ವಾಹನಗಳ ಅಡಿಬಿದ್ದು, ದುಷ್ಟಪ್ರಾಣಿಗಳು ಕಚ್ಚಿ ಅಥವಾ ತಿವಿದು ಕೊಲ್ಲಲ್ಪಡುವುದು, ಇತರರಿಂದ ಕೊಲೆಮಾಡಲ್ಪಡುವುದು, ಬೆಂಕಿಯಲ್ಲಿ ಸಾವು ವಿಷಹಾಕಲ್ಪಟ್ಟು ಮೃತನಾಗುವುದು ಮುಂತಾದವೂ ದುರ್ಮರಣಗಳು, ಇ ಕೆಟ್ಟ ಮರಣಗಳು. ಈ ಎರಡನೆ ಗುಂಪಿನ ಮರಣಗಳು ಗ್ರಹಚಾರ ದೋ

ಬರುತ್ತವೆ, ಆದರೆ ನಾವೂ ಆ ಬಗ್ಗೆ ಜಾಗರೂಕರಾಗಿದ್ದು ಅವು ಸಂಭ
ಹುಂದಾದ ವಾತಾವರಣ, ಅಜಾಗ್ರತೆ, ದೂರವಮಾಡಬೇಕು. ದುರ್ಮರಣ
ಪಿಶಾಚತ್ವ ಸಂಭವಿಸುವುದು ಹೆಚ್ಚು.

ತ್ಮಹತ್ಯದಿಂದ ಪಿಶಾಚತ್ವ

"ಸುರೇಖಾಳು ಆತ್ಮಹತ್ಯಮಾಡಿಕೊಂಡದ್ದಕ್ಕೆ ಮೊಸಳೆಯ ಜನ್ಮಪಡೆಯು
ದೇವರು ಏಕೆ ಮಾಡಿದ ಎಂಬುದು ಅವಳ ಕತೆಯ ವಿಮರ್ಶೆಯಲ್ಲಿ
ಪ್ಪಟ್ಟಿದೆ. ಆತ್ಮಹತ್ಯಕ್ಕೆ ಇನ್ನೊಂದು ಸಾಮಾನ್ಯ ಶಿಕ್ಷೆ ದೀರ್ಘಕಾಲ
ವಾಗುವುದು. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಮದರಾಸಲ್ಲಿ
ಕಾಲ ಇದ್ದಾಗ ಕೆಲವುಪಿಶಾಚಗಳು ಅವರ ಲಕ್ಷ್ಯ ಸೆಳೆದವು. ಅವು ಆತ್ಮ
ಮಾಡಿಕೊಂಡವರ ಪಿಶಾಚಗಳಾಗಿದ್ದವು. ಸ್ವಾಮಿ ವಿವೇಕಾನಂದರಿಗೆ
ವಾರ್ತೆಗಳನ್ನು ತಿಳಿಸುತ್ತಿದ್ದವು. ಆದರೆ ಅವಲ್ಲಿ ಅನೇಕವು ಸುಳ್ಳೆಂದು
ಗ ಅವರು ಅವನ್ನು ತುಚ್ಛೀಕಾರ ಮಾಡಿದರು. ಆಗ ಅವು ತಮ್ಮ
ತಿ ಅತ್ಯಂತ ಶೋಚನೀಯ, ಸತ್ಯಕ್ಕೂ ಸುಳ್ಳಿಗೂ ತಮಗೆ ವ್ಯತ್ಯಾಸ
ದು. ತಮ್ಮ ಆತ್ಮಶಾಂತಿಗಾಗಿ ಅವರು ಸಹಾಯ ಮಾಡಬೇಕು ಎಂದು
ಬೇಡಿಕೊಂಡವು. ಆಗ ಅವರು ಅವುಗಳ ಹೀನಸ್ಥಿತಿಗೆ ಕನಿಕರಪಟ್ಟು
ದ್ರದ ಬಳಿಯಲ್ಲಿ ಅವಕ್ಕೆ ಪಿಂಡ ಹಾಕಿ, ಅವುಗಳ ಬಿಡುಗಡೆಗೆ ದೇವರಲ್ಲಿ
ನೆ ಸಲ್ಲಿಸಿದರು. ಆ ದಿವ್ಯ ಪುರುಷರ ಈ ಕಾರ್ಯದಿಂದಾಗಿ ಅವು
ಚತ್ವದಿಂದ ಬಿಡುಗಡೆಹೊಂದಿರಬೇಕು; ಆಮೇಲೆ ಅವುತೋರಿಕೊಳ್ಳಲಿಲ್ಲ.
ಸ್ವಾಮಿ ಅಭೇದಾನಂದರು ಅಮೇರಿಕದಲ್ಲಿದ್ದಾಗ ಒಂದು ಸಂಜೆಯವೇಳೆ
ಃಖದಲ್ಲಿದ್ದ ಪಿಶಾಚವೊಂದು ಅವರೆದುರಲ್ಲಿ ಅಲೆದಾಡುತ್ತಿತ್ತು. ಅವರು
"ನಿನಗೆ ಏನು ಕಷ್ಟವಿದೆ" ಎಂದು ಕೇಳಿದರು. ಅದಕ್ಕೆ ಆ ಪಿಶಾಚಿ
ಆತ್ಮಹತ್ಯೆ ಮಾಡಿಕೊಂಡವ. ಬಹಳ ಕಷ್ಟ ಪಡುತ್ತಿದ್ದೇನೆ. ಸಹಾಯ
ರಿ" ಎಂದು ಬೇಡಿತು. ಅವರು ಅದರ ಆತ್ಮಶಾಂತಿಗಾಗಿ ಪ್ರಾರ್ಥನೆ
ದರು. ಅದು ತನ್ನ ಹರ್ಷವನ್ನು ವ್ಯಕ್ತಗೊಳಿಸುತ್ತ ಮಾಯವಾಯಿತು.
Beyond Death, p. 276).

ಕಳೆದ ಘೋರಯುದ್ಧದಕಾಲದಲ್ಲಿ ಮದರಾಸುಪಟ್ಟಣ ಅಭದ್ರ ಎಂದು
ರ ಸಾರಿದ್ದರಿಂದ ನಾನು ಆಫೀಸ್ಸನ್ನು ಬೇರೆಕಡೆಗೆ ಸಾಗಿಸಿ, ಭಯ ಇಲ್ಲ
ದಾಗ ಮದರಾಸಿನಲ್ಲೊಬ್ಬರೊಡನೆ ಒಂದು ಖಾಲಿಮನೆ ಹುಡುಕಿಸಿ,

ಆದರಲ್ಲಿ ನಾನೊಬ್ಬನೇ ಕೆಲವುಕಾಲ ವಾಸಿಸಿದೆ. ಆಮೇಲೆ ನನ್ನಪತ್ನಿ ಮ
ಕೆಲವರು ಬಂದು ಸೇರಿಕೊಂಡರು. ಸ್ವಲ್ಪದಿನಗಳ ಅನಂತರ ಗರ್ಭಿಣಿಯಾ
ನನ್ನ ಪತ್ನಿ ಏನೂ ಮುನ್ಸೂಚನೆಯಿಲ್ಲದೆ ಏಳೂವರೆ ತಿಂಗಳಲ್ಲೇ ಹೆತ್ತಳು.
ದಿನಗಳಾದಾಗ ನನ್ನಪತ್ನಿ "ಕಳೆದ ಎರಡುದಿನಗಳಲ್ಲಿ ಮಧ್ಯರಾತ್ರಿಯ ವೇಳೆ
ಅತ್ಯಂತದುಃಖದ ಮುಖವಿರುವ ಒಂದು ಪ್ರೇತಹೆಂಗಸು ನನ್ನ ಕೋಣೆ
ಬಾಗಿಲಬಳಿ ಬಂದು ಸ್ವಲ್ಪ ಕುಳಿತುಹೋದಳು" ಎಂದಳು. ಆಕಸ್ಮಾತ್ತಾ
ದಿನವೇ ನನಗೆ ನನ್ನ ನೆರೆಹಿತ್ತಲಿನವರ ಪರಿಚಯವಾದಾಗ ಅವರು "ನೀ
ಮನೆ ಕೆಲವುಕಾಲ ಖಾಲಿಇತ್ತು. ಒಂದು ಹೆಂಗಸು ಆದರಲ್ಲಿ ಬಾವಿಗೆಹಾರಿ ಜ
ತೆಗೆದುಕೊಂಡಿದ್ದಳು" ಎಂದರು. ನಾನು ಬೇಗ ಮನೆ ಬದಲಾಯಿಸಿದೆ, ಪ
ತೀರಾ ಅಕಾಲವಾಗಿ ಪ್ರಸವವಾಗಲಿಕ್ಕೆ ಪ್ರೇತಬಾಧೆ ಕಾರಣವಾಗುತ್ತದೆ ಎ
ಬಹಳ ಕಾಲದಮೇಲೆತಿಳಿಯಿತು. ಪ್ರೇತಗಳು ತಮ್ಮ ಅತಿಕಷ್ಟದ ಸ್ಥಿತಿ ತಿ
ಲಿಕ್ಕೆ ತೋರಿಕೊಳ್ಳುವುದು ; ಅವರ ಬಂಧುಗಳಿಗೆ ಆ ವಿಚಾರತಿಳಿಯಲಿ, ಅ
ಶಾಸ್ತ್ರೋಕ್ತರೀತಿಯಲ್ಲಿ ಪರಿಹಾರ ಮಾಡುವಂತಾಗಲಿ, ಎಂಬುದಕ್ಕೆಂದು
ನಾನು ತಿಳಿದಿರಲಿಲ್ಲ.

ಆತ್ಮಹತ್ಯೆ ಮಾಡಿಕೊಂಡವರು ನರಕಕ್ಕೆ ಹೋದರೆ ಅಲ್ಲಿ ಅತ್ಯ
ಭಯಂಕರ ತರದ ನರಕಯಾತನೆ ಅನುಭವಿಸಬೇಕಾಗುತ್ತದೆ ಎಂಬು
'ಸುಭದ್ರಾ' ಎಂಬ ಪುಸ್ತಕದಲ್ಲಿ ಬಂದಿತ್ತು. ಸುಭದ್ರಾ ಎಂಬವಳು ವಿವಾ
ಆಸ್ಪತ್ರೆಯಲ್ಲಿ ರೋಗದಿಂದ ಮೃತಳಾದಳು. ಅವಳಪತಿ ಅವಳನ್ನು ಬ
ಪ್ರೀತಿಸುತ್ತಿದ್ದವ ತುಂಬಾ ದುಃಖದಲ್ಲಿದ್ದವ ಪ್ರೇತಗಳಸಂಪರ್ಕದ ಕ್ರಮವ
ಪಾಶ್ಚಾತ್ಯರು ಕಂಡುಕೊಂಡಿದ್ದಾರೆ ಎಂಬುದನ್ನು ತಿಳಕೊಂಡು ಅದನ್ನು ಕಲಿ
ಪತ್ನಿಯಪ್ರೇತವನ್ನು ಆಗಾಗ ಆವಾಹಿಸಿ ಸಂಭಾಷಣೆ ನಡೆಸಿದುದರ ಸಾರಾಂಶ
'ಸುಭದ್ರಾ' ಪುಸ್ತಕ.

ಅದರಲ್ಲಿ ಸುಭದ್ರಾಳ ಪ್ರೇತಲೋಕದ ಪರಿಚಿತಳೊಬ್ಬಳು ಆತ್ಮಹ
ಮಾಡಿಕೊಂಡು ನರಕಯಾತನೆಅನುಭವಿಸಿ ಬಿಡುಗಡೆಹೊಂದಿದವಳು, ತನಗಾ
ಕಷ್ಟವನ್ನು ತಿಳಿಸಿದ್ದುಬರುತ್ತದೆ. ಅವಳುಹೇಳಿದ್ದು, "ಈಗ ನಾನು ಸುಖಿಯಾ
ದ್ದೇನೆ. ಆದರೆ ಜೀವತೆಗೆದುಕೊಂಡ ಅನಂತರ ಕೆಲವುಕಾಲ ಭಯಂಕರಕ
ಅನುಭವಿಸಿದೆ. ಬೇರೆ ಎಂಥ ಕಷ್ಟವನ್ನೂ ಅನುಭವಿಸಬಹುದು ; ಅದನ್ನ
ಜೈಲ್ ಅಧಿಕಾರಿಗಳು ಮೈಮೇಲೆ ಸ್ವಲ್ಪವೂಬಿಡದೆ ಮುಳ್ಳುಗಳನ್ನು ಚುಚ
ತ್ತಾಲೇ ಇದ್ದಂತಾಗುತ್ತಿತ್ತು. ಆ ವೇದನೆ ಅಸಾಧ್ಯ ಕ್ರೂರತರದ್ದು. ಎಷ್ಟ

ಟ್ಟಿಗೆಂದರೆ ಅಂಥ ಹಿಂಸೆಯನ್ನು ನನ್ನ ಅತಿಕೆಟ್ಟಶತ್ರುವೂ ಅನುಭವಿಸುವುದು ೇಡ. ಅವರು ಆತ್ಮಹತ್ಯೆ ಮಾಡಿಕೊಳ್ಳದಿರಲಿ. ನನ್ನ ನಿರಂತರಪ್ರಾರ್ಥನೆ ತ್ತು ಗುರುವಿನ ಕರುಣೆಗಳಿಂದ ನನ್ನಕಷ್ಟ ಮುಗಿದವು. ಆದರೆ ಈ ನನ್ನ ನುಭವವನ್ನು ಪ್ರೇತಸಂಪರ್ಕ ಕೂಟಗಳ ಮೂಲಕ ದಯಮಾಡಿ ಪ್ರಚಾರ ಾಡು" ಎಂದು ಅವಳು ಸುಭದ್ರಳನ್ನು ಕೇಳಿಕೊಂಡಳಂತೆ.

. ಕೊಲೆಯಾದವರ ಪ್ರೇತಗಳು

ಮಾರ್ಚಿ ೧೯೭೩ರ ಭವ್ಯವಾಣಿ ಮಾಸಿಕ ಪತ್ರಿಕೆಯಲ್ಲಿ ಶ್ರೀ ಸಿ. ಪಿ. ಗಣ್ಣ ಚಡಚಣ ಎಂಬವರು ಲಕ್ಷ್ಮೇಶ್ವರದ ಹತ್ತಿರದ ತಮ್ಮ ಊರಲ್ಲಿನ ದು ಪಿಶಾಚದಕತೆ ತಿಳಿಸಿದ್ದಾರೆ. ಅವರ ಊರು ಕರ್ಣಾಟಕ ಮತ್ತು ಹಾರಾಷ್ಟ್ರಗಳ ಗಡಿಯ ಹತ್ತಿರವಿದೆ. ಅಲ್ಲಿ ಪ್ರತಿವರ್ಷ ಒಂದು ಬಹಳ ಡ್ಡ ಜಾನುವಾರು ಸಂತೆ ನಡೆಯುತ್ತದೆ. ಒಬ್ಬಕನ್ನಡಿಗ ಅಲ್ಲಿಗೆ ಜಾನು ರು ಕೊಂಡುಕೊಳ್ಳಲಿಕ್ಕೆ ರೂ. ೭,೦೦೦ ತಕ್ಕೊಂಡು ಬಂದ. ಅಲ್ಲಿ ಬ್ಬರು, ಎತ್ತುಗಳ ಲಕ್ಷಣ ತಾವು ಚೆನ್ನಾಗಿ ಬಲ್ಲೆವು, ಮಾರಾಟಮಾಡುವ ವರ ಪರಿಚಯ ಚೆನ್ನಾಗಿದೆ, ಎಂದು ಹೇಳುತ್ತಾ, ಅವನ ಸ್ನೇಹ ಬಹುಬೇಗ ಸಿದರು. ಅವರು ಇವನಿಗೆ, ಇವ ಅವರಿಗೆ ತಿಂಡಿ ತಿನಿಸುಕೊಟ್ಟು ಉಪ ಸಿದರು. ಆಮೇಲೆ ಮರುದಿನ ಸಂಜೆಗೆ ಅವರು ಅವನಿಗೆ ತುಂಬಾ ಉಪ ಸುತ್ತ ವಿಪರೀತ ಸಾರಾಯಿಕುಡಿಸಿ, ಕೇವಲವಾಗಿ ನಡೆಯುವಷ್ಟು ಮಾತ್ರ ಜ್ಞೆ ಉಳಿದಾಗ ಕರಕೊಂಡು ಹೋಗಿ ಗಡಿಯನ್ನು ದಾಟಿಸಿ ಅನಂತರ ಂದು ತುಂಡು ತುಂಡು ಮಾಡಿ ಅವನ ಹಣವನ್ನೆಲ್ಲ ಅಪಹರಿಸಿ ಪಲಾಯನ ಾಡಿದರು. ಕರ್ಣಾಟಕದ ಪೊಲೀಸರು ಹೆಣ ತಮ್ಮ ಗಡಿಯೊಳಗಿಲ್ಲ ಎಂದು ಾರಣೆಗೆ ಹೋಗಲಿಲ್ಲ; ಮಹಾರಾಷ್ಟ್ರದ ಪೊಲೀಸರಿಗೆ ಆ ಗಡಿ ದೂರವಿದ್ದು ವರೂ ಏನೂ ಮಾಡಲುಬರಲಿಲ್ಲ. ಸ್ವಲ್ಪಕಾಲದ ಅನಂತರ ಊರಿನ ಒಂದು ಗಸಿಗೆ ಕಾಯಿಲೆ ಶುರುವಾಯಿತು. ಏನು ಮದ್ದುಮಾಡಿದರೂ ಗುಣವಾಗ ೩. ಅದಕ್ಕೆ ಪಿಶಾಚಬಾಧೆಯಿದೆ ಎಂಬುದು ಸ್ಪಷ್ಟವಾದಾಗ, ಆ ಪಿಶಾಚವು ಗಸಿನ ಮೂಲಕ ತಾನು ಜಾನುವಾರು ಕೊಂಡುಕೊಳ್ಳಲು ರೂ. ೭,೦೦೦ ಕ್ಕೊಂಡು ಬಂದವನು ಠಕ್ಕು ಮಿತ್ರರಿಂದ ಕೊಲೆಮಾಡಲ್ಪಟ್ಟ ವಿಚಾರ ಹೇಳಿ, ಗಾಗಿ ತುಂಬಾ ವ್ಯಾಕುಲತೆ ಹೊಂದಿದ್ದು ಬಹಳವಾಗಿ ವಿಚಾರಿಸುತ್ತಿರಬಹು ವ ತಂದೆಗೆ ಈ ವಾರ್ತೆ ತಲ್ಪಿಸಬೇಕೆಂದು ಅದು ಬೇಡಿಕೊಳ್ಳುತ್ತಿತ್ತು.

ಮತ್ತೂ ವಿವರವಾಗಿ ಅದು ಹೇಳಿತು ; ದೇಹದ ರುಂಡ, ಕೈಕಾಲು ಕಡಿದಂತೆ ಅವು ಬೀಳುತ್ತಿರುವುದು ತನ್ನ ಕೈಕಾಲು ಎಂದು ಅದಕ್ಕೆ ತೋರುತ್ತಿತ್ತು. ಆಮೇಲೆ ಅದು ಗಾಳಿಯಿಂದ ಹಾರಿಸಲ್ಪಟ್ಟು ಊರಿನ ಬಳಿಯ ಒಂದು ಮರ ಸೇರಿತಂತೆ. ಅಲ್ಲಿ ಬೇರೆ ಕೆಲವು ಪ್ರೇತಗಳಿದ್ದರೂ, ಅದರ ಪರಿಚಿತರ್‍ಯಾರೂ ಅಲ್ಲಿರಲಿಲ್ಲವಂತೆ. ತಾನು ಕೊಲೆಯಾದ ವಿಚಾರತುಂಬಾಮರುಗುತ್ತಿರುವ ತನ್ನ ತಂದೆಗೆ ತಿಳಿಸಲೇಬೇಕು ಎಂಬ ಆಸೆ ಬಹಳಬಲವಾದಾಗ ಆ ಸ್ತ್ರೀ ದೇಹಹೊಕ್ಕು ಅವಳಮೂಲಕ ಲೋಕಕ್ಕೆ ತನ್ನ ಕೊಲೆಯವಿಚಾರ ತಿಳಿಸುವ ಯೋಚನೆಬಂದು ಹಾಗೆಮಾಡಿತಂತೆ. ಈ ಕತೆಯ ಆಧಾರದಮೇಲೆ ಪೊಲೀಸರುತನಿಖೆ ನಡೆಸಿದ್ದರೆ ಕೊಲೆಗಾರರು ಸಿಕ್ಕುತ್ತಿದ್ದರೇನೋ. ಆದರೆ ಅವರು ಏನೂ ಮಾಡಲಿಲ್ಲವಂತೆ.

೩. ಫಿಶ್ಶರನ ಪ್ರೇತ

ಆಸ್ಟ್ರೇಲಿಯದ ಸಿಡ್ನೀ ನಗರದ ಸಮೀಪವಿರುವ ಕೇಂಬೆಲ್ ಪಟ್ಟಣದಲ್ಲಿ ಒಮ್ಮೆ ಹಗಲಲ್ಲೇ ಫ್ರೆಡರಿಕ್ ಫಿಶ್ಶರ್ ಎಂಬ ಆ ಹಿಂದೆ ಕೊಲೆಯಾಗಿದ್ದವನ ಪ್ರೇತವು ಅವನ ಹಿತ್ತಲಗೋಡೆಯ ಮೇಲೆಕುಳಿತಿದ್ದು ಮತ್ತು ಅವನನ್ನು ಕೊಲೆಮಾಡಿದ ಮೇಲೆ ದೇಹಅಡಗಿಸಲಿಕ್ಕೆ ಸಮೀಪದಲ್ಲಿ ಹುಗಿದಿದ್ದಜಾಗ, ಕೈ ನೀಡಿತೋರಿಸುತ್ತಿತ್ತು. ಅದು ಫಿಶ್ಶರನಪಿಶಾಚ ಎಂದು ಅವನ ಪರಿಚಿತರನೇಕರು ಚೆನ್ನಾಗಿ ಗುರುತಿಸಿದರು. ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಈ ಘಟನೆ ಅತ್ಯಂತ ಅಪೂರ್ವತರದ್ದೆಂದು ಅನಂತರ ಅಲ್ಲಿ ಪ್ರತಿವರ್ಷ ಪಿಶಾಚ ತೋರಿದ ತಾರೀಖಿನ ದಿನ ಒಂದು ಜಾತ್ರೆ ನಡೆಸುತ್ತಾರಂತೆ (ಆನಂದ ಬಜಾರ್ ೧೧–೫–೧೯೬೭). ಆದರೆ ಈ ವಾರ್ತೆಯಲ್ಲಿ ಕೊಲೆ ಮಾಡಿದವನ ಪತ್ತೆಯಾಯಿತೋ ಪ್ರೇತ ಪ್ರತ್ಯಕ್ಷವಾದ ಶ್ರಮ ಫಲಿಸಿತೋ ಎಂಬ ವಿಚಾರವಿಲ್ಲ.

೪. ಕೊಲೆಯಾದವನ ಪ್ರೇತ ತಿಳಿಸಿ ಕೊಲೆ ತುಬ್ಬಾಯಿತು

ಮಹಾರಾಷ್ಟ್ರದ ಒಬ್ಬ ಜಮೀನುದಾರ ದೂರದ ಒಂದುಗ್ರಾಮಕ್ಕೆ ಗೇಣಿ ವಸೂಲಿಗೆಹೋದವ ಅಲ್ಲಿ ಹಾವು ಕಚ್ಚಿ ಮೃತನಾದ, ಅವನ ಹೆಣ ಸುಡಲ್ಪಟ್ಟಿತು ಎಂದು ಅವನ ಮನೆಗೆ ವರ್ತಮಾನ ಬಂತು. ಆದರೆ ಕೆಲವು ದಿನಗಳನಂತರ ಅವನಪತ್ನಿಗೆ ಅವ ಸ್ವಪ್ನದಲ್ಲಿ ತೋರಿಕೊಂಡು ಆ ದೂರದ ಗ್ರಾಮದ ಪಟೇಲನಿಗೂ ತನಗೂ ವಿವಾದವುಂಟಾಗಿ ಅವ ತನ್ನನ್ನು ಖೂನಿಮಾಡಿ ಕೊಂದ ಎಂದು ತಿಳಿಸಿತು. ಅವಳು ವಿಚಾರವನ್ನು ಪೊಲೀಸರಿಗೆ ತಿಳಿಸಿ ವಿಚಾ

ನಡೆಸಲು ಕೇಳಿಕೊಂಡಳು. ಅವರು ತನಿಖೆ ನಡೆಸಿದಾಗ ಕೊಲೆಮಾಡಿ ಬೇಕಾದದಾಖಲೆಸಿಕ್ಕಿ ಪಟೇಲ ತಪ್ಪು ಒಪ್ಪಿಕೊಂಡ. ಅವನಿಗೆ ತಕ್ಕ ಶಿಕ್ಷೆ ಯಿತು. ಅಲ್ಲಿನ ಪತ್ರಿಕೆಯೊಂದು ಇದನ್ನು ಪ್ರಕಟಿಸಿತ್ತು (ಮೇ ೧೯೬೭ರ ಂತ ಕೇಸರಿಯಲ್ಲಿ ಈ ವಿಚಾರವು ಒಂದು ಪುಸ್ತಕದ ವಿಮರ್ಶೆಯಲ್ಲಿ ು ದೃಷ್ಟಾಂತವಾಗಿ ಬಂದಿತ್ತು).

ಕೆಲವು ದುರದೃಷ್ಟ ಮರಣಗಳಿಂದ ಪಿಶಾಚತ್ವ

ಅ] ನೀರಲ್ಲಿಮುಳುಗಿ ಸತ್ತವ ಪಿಶಾಚಿಯೊಡನೆ : ಸ್ವಾಮಿ ಅಭೇದಾ ರು ಒಮ್ಮೆ ಅಮೇರಿಕದಲ್ಲಿದ್ದಾಗ ಒಂದು ಪಿಶಾಚವು ತೋರಿಕೊಂಡಿತು. ಕಣ್ಣು ಇಲ್ಲದವನಂತೆ ದಾರಿ ಬಳಚುತ್ತ ಮುಂದುವರಿಯುತ್ತಿತ್ತು. ು ಅದಕ್ಕೆ ಏನುಕಷ್ಟ ಎಂದು ಕೇಳಿದರು. "ನಾನು ನಾವಿಕನಾಗಿದ್ದೆ. ುದ್ರದಲ್ಲಿ ಮುಳುಗಿಹೋದೆ. ನನಗೆ ಏನಾಗಿದೆ ಎಂದು ಹೇಳಲಾರೆ. ುಮಾಡಿ ಸಹಾಯಮಾಡಿರಿ" ಎಂದು ಬೇಡಿತು. ಅವರು ಅದರ ಶ್ರೇಯಸ್ಸಿ ಪ್ರಾರ್ಥನೆಮಾಡಿದರು. ಅದು ಮುಖದಲ್ಲಿ ಸಂತೋಷ ಸೂಚಿಸುತ್ತ ್ಯವಾಯಿತು (Life Beyond Death p. 276).

ಆ] ಕಾರಿನ ಅಡಿಬಿದ್ದು ಸತ್ತವ ಪಿಶಾಚಿಯೊಡನೆ : ಒಬ್ಬ ಕಾರಿನ ಿದ್ದು ತೊಡೆಮುರಿದು ಸತ್ತ. ಸುಮಾರು ೪೫ ವರ್ಷಗಳನಂತರ ಅವನ ುಂಬದ ಒಬ್ಬಳು ವಯಸ್ಸಾದಹೆಂಗಸು, ಅವಳ ಕಾಲುಗಳು ಸರಿಯಿದ್ದರೂ ಕಾಲು ಮುರಿದಿದೆ, ನಾನುಸಾಯುತ್ತೇನೆ" ಎಂದು ಹೇಳಲಾರಂಭಿಸಿದಳು. ಪ್ರಯೋಜನಕಾರಿಯಾಗದೆ ಮರಣಹೊಂದಿದಳು. ಅವಳು ಮನೆಯುವ ತುಂಬಾ ಬೇಕಾದವಳಾಗಿದ್ದಳು. ಅವಳ ಗತಿ ಹೀಗಾಗಲು ವಿಶೇಷಕಾರಣ ೀಕೆಂಬ ಸಂಶಯಬಂದು ಬಂಧುಗಳು ಮಂತ್ರವಾದಿಗಳಲ್ಲಿ ಪ್ರಶ್ನೆಕೇಳಿದರು. ಮರಣಕ್ಕೆ ಕುಟುಂಬದಲ್ಲಿ ೪೫ ವರ್ಷಗಳಹಿಂದೊಬ್ಬ ಕಾರಿನ ಅಡಿಬಿದ್ದು ಮುರಕೊಂಡು, ತಕ್ಕ ಪಿತೃಕಾರ್ಯ ಹೊಂದದೆ ಪಿಶಾಚನಾಗಿದ್ದವನೇ ು. ಈ ಹೆಂಗಸಿನಪ್ರೇತವೂ ಪಿಶಾಚವಾಗಿ ಹಳೆಪಿಶಾಚದ ಅಧೀನದಲ್ಲಿದ್ದು ಾಣದಾಗಿದೆ ಎಂದು ತಿಳಿಸಿದರು. ಬಂಧುಗಳು ಅವಳ ಪರಿಸ್ಥಿತಿಗೆ ವ್ಯಸನ ಅವಳ ಸದ್ಗತಿಗೆ ವ್ಯವಸ್ಥೆಮಾಡಿಸಿದರು. ಕಾಲುಮುರಿದು ಸತ್ತವನ ಚವು ಒಂದು ಭೂತಸ್ಥಾನದಲ್ಲಿ ಅಡಿಯಾಳಾಗಿತ್ತೆಂದು ತಿಳಿದು ಆ ಭೂತದ ುತಿ ಪಡೆದು ಬಿಡುಗಡೆಮಾಡಿಸಿ, ಇಬ್ಬರಿಗೂ ಕ್ರಮದಂತೆ ಪಿಶಾಚತ್ವದ

ಪರಿಹಾರಕ್ಕೆ ಕ್ರಿಯೆಮಾಡಿಸಿದರು. ಕಾಲುಮುರಿದು ಸತ್ತವನ ದುರ್ಮರ ಕಾರಿನವರ ದುಷ್ಟತನದಿಂದಾಯಿತು. ಅವ ಪ್ರೇತವಾಗಿ ೪೫ ವರ್ಷ ಕಷ್ಟಪಟ ನಂತರ ಕುಟುಂಬದ ಸ್ತ್ರೀಯ ಮೂಲಕ ಪಿಶಾಚತ್ವ ಪರಿಹರಿಸಿಕೊಳ್ಳುವ ದಾ ಯನ್ನು ದೇವರೇ ವ್ಯವಸ್ಥೆಮಾಡಿದ. ಈ ಕತೆ, ಹೀಗೆ ಮಂತ್ರವಾದ ನಡೆಸಿದ ರಿಂದ ತಿಳಿದುಬಂದದ್ದು.

ಇ] ರೈಲ್ವೆಎಂಜಿನ್ನನ್ನು ನಡೆಸಿದ ಪ್ರೇತ : ಆಫ್ರಿಕಾಖಂಡದ ಘಾ ದೇಶದ ಕುಮಾಸಿ ಎಂಬಲ್ಲಿ ಒಂದು ರೈಲ್ವೆ ಎಂಜಿನ್ನನ್ನು ಡ್ರೈವರನ ಕೆಳಗೆ ಕೆಲ ಮಾಡುವವರು ಅಂದಿನ ಅದರಕೆಲಸಕ್ಕಾಗಿ ಬಾಯ್‌ಲರ್‌ಗೆ ಬೆಂಕಿಹಾಕಿ ಬೇಕಾ ಉಗಿ ಉತ್ಪತ್ತಿಮಾಡಿ ಏಕೋ ಇಳಿದುಹೋದರು. ಡ್ರೈವರು ಬಂದು ಅದನ ಹತ್ತುವ ಮುಂಚೆಯೇ, ಅದರಲ್ಲಿ ಯಾರೂ ಇಲ್ಲದಿದ್ದಾಗಲೇ ಅದು ಹೊರಟ ಬಿಟ್ಟಿತು. ರೈಲ್ವೆಸಿಬ್ಬಂದಿಗಳು ಏನಾದರೂ ಅವಘಢವಾಗದಿರದು ಎಂದು ಹೆದ ೧೭ ಮೈಲಿದೂರದ ಮುಂದಿನರೈಲ್ವೆಸ್ಟೇಶನ್ನಿಗೆ ತಂತಿಕೊಟ್ಟು ಅದರಮಾರ್ಗ ತಡೆಹಾಕಿಸಿದರು, ಎಂಜಿನ್ ಹಳಿತಪ್ಪಿ ಮಣ್ಣಲ್ಲಿ ಚಕ್ರ ಹುಗಿದು ನಿಂತಿತ ೨ ತಿಂಗಳ ಮುಂಚೆ ಆ ಲೈನಲ್ಲಿ ನಡೆದ ಅವಘಢದಲ್ಲಿ ಸತ್ತ ಎಂಜಿನ್ ಡ್ರೈವರ ಪ್ರೇತವಾಗಿ ಎಂಜಿನನ್ನು ನಡೆಸಿರಬೇಕೆಂದು ಅಲ್ಲಿಯವರ ಹೇಳಿಕೆ. ಈ ಘಟ ಯನ್ನು ರೈಟರ್ ವಾರ್ತಾಸಂಸ್ಥೆಯ ವರದಿಯಾಗಿ ಇಂಡಿಯನ್ ಎಕ್ಸ್‌ಪ್ರೆಸ ಪತ್ರಿಕೆ ೨-೨-೧೯೬೭ರಲ್ಲಿ ಪ್ರಕಟಿಸಿತ್ತು.

ಈ] ಮೋಟರ್ ಟ್ಯಾಕ್ಸಿ ಸವಾರಿ ಬೇಕಾದ ಪ್ರೇತ : ಅಮೇರಿ ದಲ್ಲೊಂದು ಪಟ್ಟಣದಲ್ಲಿ ಒಂದುಕಡೆಯಲ್ಲಿ ಒಂದು ಟ್ಯಾಕ್ಸಿಓಡುತ್ತಿದ್ದಾಗ ಒಬ ಕೈಎತ್ತಿ ನಿಲ್ಲಿಸಿ ಹತ್ತಿದ. ಮುಂದೆ ಒಂದುಕಡೆಗೆ ಹೋಗಲು ಹೇಳಿದ. ಹಾ ಹೋಗಲಿಕ್ಕೆ ದಾರಿ ಒಂದು ಸ್ಮಶಾನದ ಬಳಿಯಿಂದ ಆಗಿತ್ತು. ಸ್ಮಶಾನ ದಾ ಸ್ವಲ್ಪಮುಂದೆ ಹೋದಮೇಲೆ ಡ್ರೈವರನು ಹಿಂದೆನೋಡಿದಾಗ ಕಾರಲ್ಲಿ ಯಾರು ಇರಲಿಲ್ಲ. ಒಂದು ಪ್ರೇತ (ವಿಳಾಸ, ಆ ಸ್ಮಶಾನ!) ಇನ್ನೂ ಕೆಲವರು ಟ್ಯಾ ಯುವರಿಂದ ಹೀಗೆ ಪುಕ್ಕಟೆಕಾರುಸವಾರಿ ಪಡೆದಿತ್ತೆಂದು ಅನಂತರ ತಿಳಿದುಬಂತ ಈ ಕತೆಯು ರೀಡರ್ಸ್ ಡೈಜೆಸ್ಟ್‌ನಲ್ಲಿ ಬಂದಿತ್ತು. ಹಿಂದಿನ ಕತೆಯಂತೆ ಇದು ಒಂದು ದುರ್ಮರಣಹೊಂದಿದ ಕಾರುಸವಾರಿ ಪ್ರಿಯನ ಕತೆಯಾಗಿರಬೇಕು.

೧೯. ಕೆಲವು ದುಷ್ಟ ಪಿಶಾಚಗಳು

ಈ ಹಿಂದೆ ಕೊಟ್ಟ ಪ್ರೇತದ ಕತೆಗಳಲ್ಲಿ ಪ್ರೇತಗಳು ಕೆಲವುವೇಳೆ ತೋ

ತು, ಆದ್ದರಿಂದ ನೋಡಿದವರಲ್ಲಿ ಭಯಹುಟ್ಟಿಸಿದ್ದರೂ ಇತರರಿಗೆ ಹಾನಿ ತಬೇಕೆಂಬುದು ಅವುಗಳ ಉದ್ದೇಶವಾಗಿರಲಿಲ್ಲ. ತನ್ನ ಕುಟುಂಬದ ಸ್ತ್ರೀ ನ್ನ ಹಿಡಿದ ಪ್ರೇತವೂ ತನ್ನ ಕಷ್ಟದ ಪರಿಸ್ಥಿತಿಯಿಂದ ಪ್ರೇರಿತವಾಗಿ ಚನೆಗೆ ಹಾಗೆ ದಾರಿಮಾಡಿಕೊಂಡದ್ದು ಮಾತ್ರ ; ಅವಳ ಪೀಡನೆಗಲ್ಲ. ಂದ ಬಹುಮಟ್ಟಿಗೆ ನಾವು ಪ್ರೇತಗಳಬಗ್ಗೆ ಹೆದರಬೇಕಾಗಿಲ್ಲ ; ಧೈರ್ಯ ಕೊಂಡರಾಯಿತು. ಆದರೆ ಅತಿದುಷ್ಟ ಪ್ರೇತಗಳೂ ಇವೆ ಎಂಬುದಕ್ಕೆ ದೃಷ್ಟಾಂತಗಳನ್ನು ಕೊಡುತ್ತೇನೆ.

ಕಾಶಿಯಲ್ಲಿ ಕೆಟ್ಟ ಪಿಶಾಚ

ಗೊಂದಾವಳಿಯ ಶ್ರೀಬ್ರಹ್ಮಚೈತನ್ಯ ಮಹಾರಾಜರು (೧೮೪೪_೧೯೧೩) ರಾಷ್ಟ್ರದ ಒಬ್ಬರು ಬಹಳಪ್ರಖ್ಯಾತ ಮಹಾಪುರುಷರು; ಜೀವನ್ಮುಕ್ತರು. ಶಿಷ್ಯರಲ್ಲಿ ಭವಾನಿರಾವ್ ಎಂಬವ ಬ್ರಹ್ಮಚೈತನ್ಯರ ಆಶ್ರಮದಲ್ಲಿ ಕಟ್ಟಿಗೆ ಗ ನೋಡಿಕೊಂಡಿದ್ದ. ಅವ ಬಹಳಬಲಾಢ್ಯ, ಭಯವಿಲ್ಲದವ, ಗುರು ಸಂಪೂರ್ಣವಾಗಿ ನಂಬಿದವನಾಗಿದ್ದ. ಶ್ರೀಬ್ರಹ್ಮಚೈತನ್ಯರು ಕೆಲವುಶಿಷ್ಯ ನೆ ಯಾತ್ರೆಮಾಡುತ್ತಾ, ಕಾಶಿಯಲ್ಲಿಉಳಕೊಳ್ಳಲು ತಮ್ಮನ್ನು ಸ್ವಾಗತಿಸಿ ಲ್ಲಿಗೆ ಭವಾನಿರಾಯನನ್ನು ಮುಂದಾಗಿ ಕಳುಹಿಸಿದರು. ಅವ ಅಲ್ಲಿ ತನಗೆ ಕ್ಕೆ ಕುಳಿತುಕೊಳ್ಳಲು ಒಂದು ನಿರ್ಜನ ಸ್ಥಳ ತೋರಿಸಲು ಕೇಳಿದಾಗ ದ ಖಾಲಿಮನೆ ತೋರಿಸಲಾಯಿತು. ಆದರೆ ಅದರಲ್ಲಿ ಪಿಶಾಚಬಾಧೆ ಎಂದೂ ತಿಳಿಸಿದ್ದರು. ಅಲ್ಲಿ ಭವಾನಿರಾಯನು ತನ್ನ ಧ್ಯಾನಮುಗಿಸಿ ಅಗಿಯಲಿಕ್ಕೆ ಕುಳಿತಾಗ ಒಬ್ಬ ಸನ್ಯಾಸಿ ಬಂದು ಒಂದಿಷ್ಟು ಸಿಹಿತಿಂಡಿ . ಭವಾನಿರಾಯ ಅದನ್ನು ಅನಂತರ ತಿನ್ನುವ ಎಂದು ಬದಿಯಲ್ಲಿಟ್ಟು ತ. ಸ್ವಲ್ಪಸಮಯದ ಅನಂತರ ಒಂದು ವಿಕಾರರೂಪದ ಕರೀಮನುಷ್ಯ ಆ ತಿಂಡಿಯನ್ನು ಕೇಳಿದ. ಭವಾನಿರಾಯ ಕೊಡಲಿಲ್ಲ. ಅವರೊಳಗೆ ವಾಗಿ ಅದು ಭವಾನಿರಾಯನನ್ನು ಕೆಳಗೆ ಕೆಡೆದು ಕುತ್ತಿಗೆ ಒತ್ತಿಹಿಡಿಯಲು ಸಿತು. ಭವಾನಿರಾಯ ರಕ್ಷಣೆಗೆ ತನ್ನ ಗುರುವಿನ ಹೆಸರುಹೇಳಿ ಕೂಗಿದ. ಲೇ ಶ್ರೀ ಬ್ರಹ್ಮಚೈತನ್ಯರು ತೋರಿಕೊಂಡು ಆ ಪಿಶಾಚಕ್ಕೆ ತೊಲಗಲು ಮಾಡಿದರು. ಅದು ಮಾಯಕವಾಯಿತು. ಗುರುಗಳೂ ಅದೃಶ್ಯರಾದರು. ಶಿಷ್ಯರೊಡನೆ ೩ ದಿನಗಳನಂತರ ಮಾತ್ರವೇ ಕಾಶಿ ತಲ್ಪಿದ್ದು. ಆದರೆ ರಾಯ ಆ ಮೂರು ದಿನಗಳಲ್ಲಿಯೂ ಗುರುವಿನಲ್ಲಿನ ಭರವಸೆಯಿಂದ

ಅಲ್ಲಿಯೇ ಮಲಗುತ್ತಿದ್ದ (The Sage of Gondavali, K.V. Balsar
p. 126). ಆದರೆ ಶೂನ್ಯಗೃಹದಲ್ಲಿ ಮಲಗಬಾರದು (ಮನು ೪,೫೭).

೨. ಅಮರನಾಥಶರ್ಮರಿಗೆ ಪಿಶಾಚದ ಬಾಧೆ

ಅಮರನಾಥಶರ್ಮರು ಡಿಲ್ಲಿಯಲ್ಲಿ ನ್ಯಾಯವಾದಿ ; ಶ್ರೀರಾಮನಭಕ್ತರ
೧೯೪೦ರಲ್ಲಿ ಅವರಿಗೆ ಒಬ್ಬ ಅತಿ ಪ್ರಖ್ಯಾತಿ ಜ್ಯೋತಿಷಿ, ೧೯೪೨ರಲ್ಲಿ ಅವ
ಏಕಮಾತ್ರ ಪುತ್ರನ ಮರಣವನ್ನು, ಸ್ವಲ್ಪಕಾಲದ ಅನಂತರ ಅವರ ಮರ
ವನ್ನೂ ಖಂಡಿತ ಎಂದು ಭವಿಷ್ಯ ಹೇಳಿದ. ೧೯೪೨ರಲ್ಲಿ ಮಗ ಸತ್ತ. ಅವ
ದೇವರಸ್ಮರಣೆಯ ಅಭ್ಯಾಸ ಬಹಳ ಹೆಚ್ಚಿಸಿಕೊಂಡರು. ದೇವರಕೃಪೆಯಿಂ
ವೃಂದಾವನದಲ್ಲಿ ಅವರಿಗೆ ಅತಿ ಮೇಲ್ಮಟ್ಟದ ಮಹಾತ್ಮರ ಕರುಣೆ ಲಭಿಸಿ ಅ
ರಿಂದ ಮಂತ್ರದೀಕ್ಷೆಪಡೆದರು. ಅದನ್ನು ಧಾರಾಳವಾಗಿ ಅಭ್ಯಸಿಸುತ್ತ ಜೀವನ
ಹಲವು ಪ್ರಬಲತೊಡಕುಗಳನ್ನು ಸುಲಭವಾಗಿದಾಟಿದರು. ಬೇಗ ಬರಲಿಕ್ಕಿರು
ಪತಿಯ ಮರಣದಬಗ್ಗೆ ಪತ್ನಿಗಿದ್ದ ದುಗುಡ ಒಮ್ಮೆ ಕಂಡ ಗುರುಗಳು "ನೀ
ಸೌಭಾಗ್ಯವತಿಯಾಗಿಯೇ ಬಾಳು" ಎಂದುದೂ ಸತ್ಯವಾಯಿತು.

ಒಮ್ಮೆ ಅವರು ಮಲಗಿದ್ದಾಗ, ನಿದ್ರೆಯೂಅಲ್ಲ, ಎಚ್ಚರವೂಅಲ್ಲ ಎಂ
ಸ್ಥಿತಿಯಲ್ಲಿದ್ದಾಗ, ಒಂದು ಅತ್ಯಂತಭೀಕರರೂಪದ ಪಿಶಾಚವು ಅವರ ಸಾಮ
ಕೋಣೆಯಿಂದ ಹೊರಗೆ ಬಂದು ಅದರ ಅತ್ಯಂತ ಉದ್ದವಾದ ಚೂಪಾದ ನ
ಗಳನ್ನು ಅವರ ದೇಹದೊಳಗೆ ಕಂತಿಸಲು ಯತ್ನಿಸಿತು. ತುಂಬಾ ಭಜ
ಕೀರ್ತನೆ ನಡೆಯುವ ಮನೆಯಲ್ಲಿ ಇದೇಕೆ ಹೀಗಾಗುತ್ತದೆ ಎಂಬ ಭಯದೊಡ
ಶರ್ಮರು ಕೂಗಿದರು. ಫಕ್ಕನೆ ಗುರುವಿನ ಸ್ಮರಣೆಯೂ ಬಂತು. ಆಗ "ಅದ
ಖಂಡಿತ ಸಾಯುತ್ತದೆ" ಎಂಬ ಶಬ್ದ ಅವರಿಗೆ ಕೇಳಿಸಿತು. ಮತ್ತೆ ತೊಂದ
ಬರಲಿಲ್ಲ (ದೇವರನ್ನು ನಂಬುವ, ಪುಟ ೫೭–೬೦) ; ಅವರ ಗುರು ಅವ
ರಕ್ಷಣೆಗೆ ಬಂದಿದ್ದರು.

೩. ಒಬ್ಬ ಆತ್ಮಹತ್ಯೆಮಾಡಿಕೊಂಡವನ ದುಷ್ಟಪಿಶಾಚ

ಕಲ್ಕತ್ತಾದ ಒಂದುಪತ್ರಿಕೆಯಲ್ಲಿ ಸಿಖಾಡೆ ಎಂಬವಳು "ಸತ್ತ ದನ ಹುಲ್ಲ
ತಿನ್ನಲಾಪುದೇ ?" ಎಂಬ ಶಿರೋನಾಮದ ಕೆಳಗೆ ಮೃತರಿಗೆ ಪಿಂಡದಾನಮಾಡ
ವುದು ವ್ಯರ್ಥ, ಏಕೆಂದರೆ ಮರಣದ ಆಚೆ ಏನೂ ಇಲ್ಲ ; ಅದು ಸತ್ತ ದನ
ಹುಲ್ಲುಕೊಟ್ಟಂತೆ ಎಂದು ವಾದಿಸಿ ಬರೆದಿದ್ದಳು. ಪಿ. ಬಿ. ಗುಪ್ತ ಎಂ

ತ್ರೋಕೇಟರು ಅದಕ್ಕೆಉತ್ತರವಾಗಿ ತಾನುಚಿಕ್ಕವನಾಗಿದ್ದಾಗ ಕಂಡಿದ್ದ ಒಂದು ಟನೆಯನ್ನು ಬರೆದುಕಳುಹಿಸಿದರು. ಅದು ೩೧-೧-೧೯೦೫ರ ಟ್ರುತ್ ಪತ್ರಿಕೆ ಲ್ಲೂ ಪ್ರಕಟವಾಗಿದ್ದು ನನಗೆ ಓದಲು ಸಿಕ್ಕಿತು.

ಪಿ.ಬಿ. ಗುಪ್ತರ ದೊಡ್ಡಪ್ಪನವಂಗಳು ಸುವರ್ಣ ಎಂಬವಳು ಕಲ್ಕತ್ತಾದ ಗಂಜ್‌ನಲ್ಲಿ ಪತಿಯೊಡನೆ ಇದ್ದಳು. ಗರ್ಭವತಿಯಾಗಿದ್ದಾಗ ಅವಳು ಯಿಲೆ ಬಿದ್ದಳು. ಅವಳಿಗೆ ಅಪಸ್ಮಾರರೋಗ ಹೆಚ್ಚುತ್ತಬಂತು. ಒಬ್ಬ ಕ್ಟರರ ಸೂಚನೆಯಂತೆ ಹವಾ ಬದಲಾವಣೆಗೆ ಅವಳ ಚಿಕ್ಕತಂದೆಯ ಮನೆಗೆ ಂಚಿಗೆ ಅವಳನ್ನು ತಂದರು (ಎಂದರೆ ಪಿ. ಬಿ. ಗುಪ್ತನಿದ್ದ ಮನೆಗೆ; ಬಾಲಕ ಪ್ತ ಅನಂತರ ನಡೆದ ಘಟನೆ ಕಾಣಲಿಕ್ಕಾಯಿತು). ಆದರೆ ರಾಂಚಿಯಲ್ಲಿ ವರ್ಣಳ ಕಾಯಿಲೆಹೆಚ್ಚಿತು. ಡಾಕ್ಟರರುಗಳಿಗೆ ಏನೂಗುಣಮಾಡಲಿಕ್ಕಾಗಲಿಲ್ಲ. ಮ್ಮೆ ಅವಳಿಗೆ ೪ ದಿನಗಳಾದರೂ ಸ್ಮೃತಿಬಾರದಿದ್ದಾಗ ಮನೆಯವರ ಆಪ್ತರು ವರು ದೇವೇಂದ್ರ ಮೋಹನಗುಪ್ತರೆಂಬ ಖ್ಯಾತ ಮಂತ್ರವಾದಿಯನ್ನು ಕರೆ ು ಸೂಚಿಸಿದರು. ಅವರನ್ನು ಕಂಡು ಎಲ್ಲ ವಿಚಾರ ಹೇಳಿದ್ದಾಯಿತಂ.

ಮಂತ್ರವಾದಿಗಳು ಮರುದಿನ ಮಧ್ಯಾಹ್ನಕ್ಕೆ ಬಂದರು. ಒಂದುಹೊಸ ಡಕೆಯಲ್ಲಿ ರೇಪ್ (Rape) ಎಂಬ ಎಣ್ಣೆತೆಗೆಯಲಿಕ್ಕೆ ಬರುವ ಬೀಜಗಳನ್ನು ಕೆಕೊಂಡು ಬಂದಿದ್ದರು. ಎಡಗೈಯಲ್ಲಿ ಮಡಕೆ ಎತ್ತಿಹಿಡಿದು ಬಲಹಸ್ತದ ೂಲಕ ಬೀಜಗಳನ್ನು ನಿಧಾನವಾಗಿ ಬೀಳಿಸುತ್ತ ಮಂತ್ರ ಹೇಳಲಾರಂಭಿಸಿ ು. ಹಾಗೆ ಮಾಡಲಾರಂಭಿಸಿದೊಡನೆಯೇ ಸುವರ್ಣಳು ಕಣ್ಣುತೆರೆದು ಕುಳಿ ು. ಕಷ್ಟದಲ್ಲಿರುವವಳಂತೆ ಅತಿಗಟ್ಟಿಯಾಗಿ ನರಳಲಾರಂಭಿಸಿದಳು. ಮಂತ್ರ ದಿಗಳು ಹೊರಜಗುಲಿಯಿಂದ ನಡುವಿನ ಹಾಲನ್ನು ದಾಟಿ ಸುವರ್ಣಳುಇದ್ದ ೋಣೆಯ ಕಡೆಗೆ ನಿಧಾನವಾಗಿ ನಡೆಯುತ್ತಿದ್ದರು. ಸುವರ್ಣಳಹತ್ತಿರ ಇದ್ದ ು ಅವಳು ನರಳುವುದುಕಂಡು ಏನಾಯಿತೆಂದು ಕೇಳಿದ್ದಕ್ಕೆ ಉತ್ತರಬರಲಿಲ್ಲ. ರ ಅರಿವೇ ಅವಳಿಗೆಇರಲಿಲ್ಲ. ಮಂತ್ರವಾದಿಗಳು ಹತ್ತಿರಬಂದಂತೆ ನರಳು ು ಬಹಳಹೆಚ್ಚಾಯಿತು. ಅವರು ಅವಳ ಕೋಣೆಹೊಕ್ಕೊಡನೆ "ಇವಳನ್ನು ಟ್ಟುಹೋಗು, ಇಲ್ಲವಾದರೆ ನಿನಗೆ ಕಠಿಣಶಿಕ್ಷೆ ಕೊಡಂತ್ತೇನೆ" ಎಂದರು. ಕ್ಕೆ ಉತ್ತರವಾಗಿ "ನಾನು ಈ ದೇಹ ಬಿಡುವುದಿಲ್ಲ. ಅವಳು ನನ್ನ ಮೇಲೆ ಉ ಹಾಕಿದಳು" ಎಂಬ ಉತ್ತರಬಂತು.

ಮಂತ್ರವಾದಿಗಳು ಅವಳ ಬದಿಯಲ್ಲಿನಿಂತು ಅವಳ ತಲೆಗೆ ಮಡಿಕೆಯನ್ನು ಸಿ ರೇಪು ಬೀಜಗಳನ್ನು ಸುರಿಸುತ್ತ ಮಂತ್ರ ಹೇಳಿದರು. ರೋಗಿಯ

ಬಾಯಿಂದ "ನನಗೆ ಗಯಾದಲ್ಲಿ ಪಿಂಡ ಹಾಕಿಸಲು ಖಂಡಿತವಾಗಿ ಒಪ್ಪಿದರೆ ನಾನು ಬಿಟ್ಟುಹೋಗುತ್ತೇನೆ" ಎಂಬ ಮಾತು ಬಂತು. ಮಂತ್ರವಾದಿಗಳು ಇದಕ್ಕೆ ಒಪ್ಪಿ, ಪ್ರೇತದ ಹೆಸರು, ತಂದೆಯ ಹೆಸರು, ಗೋತ್ರ, ಇರುವ ಸ್ಥಳದ ವಿಳಾಸ ಕೇಳಿದರು. ಪಿಶಾಚವು ತಾನು ಬಿಹಾರಿಲಾಲ್‌ಗುಪ್ತ, ತಂದೆಯ ಹೆಸರು ಮತ್ತು ಕಲ್ಕತ್ತಾದಲ್ಲಿ ಬೆಲ್ಲಿಗಂಜಿನಲ್ಲಿ ಇರುವಮನೆ ವಿಳಾಸ ತಿಳಿಸಿತು. ಅದನ್ನೆಲ್ಲ ಬರೆದುಕೊಂಡೊಡನೆ ಫಕ್ಕನೆ ಸುವರ್ಣ ಮಡಿಕೆಯಿಂದ ತಲೆ ದೂರ ಮಾಡಿ ಕೊಂಡಳು. ಸರೀ ಎಚ್ಚರ ಬಂದು ಹತ್ತಿರ ಅಪರಿಚಿತ ಗಂಡಸರಿರುವುದನ್ನು ಕಂಡು ನಾಚಿಕೆಯಿಂದ ಸೀರೆ ಸರಿಮಾಡಿಕೊಂಡು ಮತ್ತೊಂದು ಕೋಣೆಗೆ ಓಡಿ ದಳು. ಮಂತ್ರವಾದಿಗಳು ರೇಪ್‌ಬೀಜವನ್ನು ಸ್ವಲ್ಪವನ್ನು ಸುವರ್ಣಳ ಸೆರಗಲ್ಲಿ ಕಟ್ಟಿ ಇಡಲಿಕ್ಕೆ, ಉಳಿದದ್ದನ್ನು ಮನೆಯಸುತ್ತಲೂ ಚೆಲ್ಲಲಿಕ್ಕೆ, ಕೊಟ್ಟು ಗಯಾ ದಲ್ಲಿ ಪಿಂಡ ಪ್ರದಾನವನ್ನು ಬೇಗ ಮಾಡಲಿಕ್ಕೆ ಹೇಳಿ ಹೊರಟುಹೋದರು. ಒಂದುತಿಂಗಳಲ್ಲಿ ಒಬ್ಬರು ಬ್ರಾಹ್ಮಣಪುರೋಹಿತರನ್ನು ಆ ಕೆಲಸಕ್ಕಾಗಿ ಗಯಾ ಕ್ಷೇತ್ರಕ್ಕೆ ಕಳುಹಿಸಿಕೊಟ್ಟು ಆ ಕೆಲಸ ನಡೆಸಲ್ಪಟ್ಟಿತು. ಸುವರ್ಣಳು ಬೇಗ ಆರೋಗ್ಯ ಹೊಂದಿದಳು. ಸುಖಪ್ರಸವವೂ ಆಯಿತು. ಆಮೇಲೆ ೨೦ವರ್ಷ ಬಾಳಿ ಮೃತಳಾದಳು.

ಸುವರ್ಣಳ ತಂದೆ ಒಮ್ಮೆ ಬೆಲ್ಲಿಗಂಜ್‌ಗೆ ಹೋದಾಗ ಅಲ್ಲಿ ಪಿಶಾಚದ ವಿಳಾಸದಪತ್ತೆಯಂತೆ ವಿಚಾರಿಸಿದಾಗ ಬಿಹಾರಿಲಾಲ್‌ಗುಪ್ತ ಎಂಬ ಯುವಕ ಹಿಂದಿನಘಟನೆಯ ಎರಡುವರ್ಷಗಳ ಮುಂಚೆ ಆತ್ಮಹತ್ಯೆ ಮಾಡಿಕೊಂಡುಸತ್ತಿದ್ದ ವಿಚಾರ ತಿಳಿಯಿತು. ಗುಪ್ತ ಎಂದರೆ ವೈಶ್ಯವರ್ಣದವ. ವೈಶ್ಯರಿಗೆ ಶೂದ್ರರಿ ಗಿಂತ ಆತ್ಮಹತ್ಯೆಯ ಪಾಪಹೆಚ್ಚು. ಬಿಹಾರಿಲಾಲ್‌ಗುಪ್ತ ಯುವಕನಿದ್ದು ಏನೋ ಸಿಡುಕಿಂದ ಆತ್ಮಹತ್ಯೆ ಮಾಡಿಕೊಂಡಿರಬೇಕು. ಆಮೇಲೆ ಪಿಶಾಚಿ ಯಾಗಿ ತಾನು ಹಿಂದೆಎಣಿಸದಿದ್ದಷ್ಟು ಕಷ್ಟಪಟ್ಟಿರಬೇಕು. ಸುವರ್ಣಳು ತನ್ನ ಮೇಲೆ ಮಲ ಹಾಕಿದ್ದರಿಂದ ಅವಳನ್ನು ಹಿಡಿದದ್ದು ಎಂಬ ಆ ಪಿಶಾಚದ ತರ್ಕ ಅರ್ಥವಿಲ್ಲದ್ದು. ಭೂತಗಳಿಗೆ ಸ್ಪಷ್ಟ ಭೂತಸ್ಥಾನಗಳಿವೆ ; ಅಲ್ಲಿ ಮಲಹಾಕಿದರೆ ಅವು ತೊಂದರೆಕೊಡುವುದು ಖಂಡಿತ. ಆದರೆ ಪಿಶಾಚಕ್ಕೆ ಹಾಗೆ ಸ್ಪಷ್ಟಸ್ಥಾನ ಇಲ್ಲದಿರುವಾಗ ಮಲಹಾಕಿದವರದ್ದು ತಪ್ಪಾಗದು. ಪ್ರಾಯಶಃ ಈ ಪಿಶಾಚಕ್ಕೆ ತನ್ನ ಆ ಜನ್ಮ ಅತಿಕಷ್ಟ ತೋರಿ ಸುವರ್ಣಳ ಗರ್ಭಸೇರಿ ಪುನಃ ಮಾನವಜನ್ಮ ವನ್ನೇ ಹೊಂದುವುದುತ್ತಮ ಎಂಬ ಯೋಚನೆ ಬಂದು ಅವಳನ್ನು ಹಿಡಿದಿರ ಬಹುದು. ಗಯಾಶ್ರಾದ್ಧದ ಮಹತ್ವವೂ ನೆನಪಿಗೆ ಬಂದು ಯಾರಾದರೂ ಆ

ಕ ತನ್ನ ಬಿಡುಗಡೆಮಾಡ್ಯಾರೇ ಎಂಬ ಆಲೋಚನೆಯೂ ಇದ್ದಿರ ು. ಅಂತೂ ಸುವರ್ಣಳ ಕಡೆಯುವರು ಪಿಶಾಚ ಮತ್ತು ಮಂತ್ರವಾದ , ಮರಣದ ಆಚೆ ಸತ್ತದಿನದಹಾಗೆ ಎಂಬ ಭಾವನೆಯುವರಾಗಿರುತ್ತಿದ್ದರೆ ಳು ಪಿಶಾಚದಿಂದ ಮೃತಳಾಗಿ ಗುಪ್ತನ ಪಿಶಾಚದ ಗುಲಾಮನಾಗು ಇಬ್ಬರ ಕಷ್ಟವೂ ಮುಗಿಯುತ್ತಿರಲಿಲ್ಲ. ನಾಸ್ತಿಕರಿಗೆ ಮರಣದ ಪಿಶಾಚ-ಬಾಳನ್ನು ರದ್ದುಮಾಡುವ ಶಕ್ತಿ ಏನಿಲ್ಲ. ಆಗಿನ ಕಷ್ಟ ರು ಪಾಲು ಹೆಚ್ಚಿಸಿಕೊಳ್ಳುವ ಮೂರ್ಖತನ ಮಾತ್ರ ಇದೆ!

ಟ್ಟ ಬಾಡಿಗೆಮನೆಗಳಿಂದ ಅಪಾಯವಿದೆ

ಈ ಕಾಲದಲ್ಲಿ ಜನರು ಬೇರೆಬೇರೆ ಕಡೆಗಳಲ್ಲಿ ಹುದ್ದೆಗಳಲ್ಲಿರಬೇಕಾದವರು ಮನೆಗಳಲ್ಲಿ ವಾಸಿಸಬೇಕಾಗುತ್ತದೆ. ಬಹಳ ಅಪರೂಪಕ್ಕಾದರೂ ಕೆಲ ಲ್ಲಿನ ಪಿಶಾಚವಾತಾವರಣದಿಂದ ಕೆಡುಕಾಗಬಹುದು. ಮಹಾಪುರುಷ ಪೇಂದ್ರಮೋಹನರು (ದೇವರನ್ನು ನಂಬುವ, ಪುಟ ೧೧-೩) ತಮ್ಮ ನೊಬ್ಬನ ಹೊಸ ಬಿಡಾರದ ಮನೆಗೆ ಕಾಲಿಟ್ಟೊಡನೆ "ಈ ಮನೆಯ ವರಣ ಬಹಳ ಕೆಟ್ಟದ್ದು. ಇಲ್ಲಿ ಹಿಂದೆ ಏನೋ ಅತಿಕೆಟ್ಟದ್ದು ನಡೆದಿದೆ" ು. ವಿಚಾರಿಸಿದಾಗ ಅಲ್ಲಿ ೩೦ ವರ್ಷಗಳ ಹಿಂದೆ ಒಂದುಹೆಂಗಸಿನ ಭೀಕರ ನಡೆದಿತ್ತಂತೆ. ೩೦ ವರ್ಷಗಳು ಕಳೆದಿದ್ದರೂ ಆ ಕೆಟ್ಟ ವಾತಾವರಣ ವಾಗಿರಲಿಲ್ಲ ಎಂದಾಯಿತು. ಹಿಂದೂಗಳು ಸ್ವಂತಮನೆ ಕಟ್ಟಿಸಿದಾಗ ಗೃಹ ಶ ಕಾರ್ಯದಭಾಗವಾಗಿ ಮನೆಗೆ ರಕ್ಷೆಕಟ್ಟಿ, ಹೋಮ, ದಾನ, ಬ್ರಾಹ್ಮಣ ರ್ಣೆ ನಡೆಸುವುದು ಸರ್ವತ್ರ ಕ್ರಮವಾಗಿತ್ತು. ಆದರೆ ಬಾಡಿಗೆಮನೆಗಳಲ್ಲಿ ಲಿಕ್ಕೆಹೋದಾಗ ಅದೆಲ್ಲ ಸಾಧ್ಯವೇಅಲ್ಲ. ಆದರೆ ಏನೂಮಾಡದಿರುವುದು ುಕ್ಕೆ ಕಾರಣವಾಗಬಹುದು. ಸರ್ಕಾರ ಹೊಸತಾಗಿ ನಿರ್ಮಿಸಿದ ನೌಕರರ ನಿಯಲ್ಲಿ ನನ್ನ ಅಳಿಯನಿಗೆ ಒಂದು ಮನೆ ವಾಸಕ್ಕೆ ಸಿಕ್ಕಿತು. ಉತ್ತಮ ೂರ್ತನೋಡಿ ಮನೆಯಲ್ಲಿ ಗಣಹೋಮ ಮಾಡಿಸಿ, ಅಳಿಯ, ಮಗಳು, ಅಲ್ಲಿ ೬ ವರ್ಷವಾಸಿಸಿದರು. ನಿತ್ಯವೂ ಸಣ್ಣಮಟ್ಟಿನಲ್ಲಿ ಜಪ ಪೂಜೆ ನಡೆ ತ್ತು. ಆಮೇಲೆ ವರ್ಗವಾಗಿ ಅಳಿಯ ಆ ಮನೆ ಊರು ಬಿಟ್ಟುಹೋದ. ಅನಂತರ ಆ ಮನೆಗೆ ಒಬ್ಬ ನೀರಲ್ಲಿಮುಳುಗಿ ಕೆಲಸ ಮಾಡುವ ಸರ್ಕಾರಿ ೕಗಿಯ ಬಿಡಾರಬಂತು. ಅವ ಸ್ವಲ್ಪಕಾಲದಲ್ಲಿಯೇ ನೀರಿನಅಡಿ ಕೆಲಸ ವಾಗ ಮೃತನಾದ. ಆಮೇಲೆ ಆ ಮನೆಗೆ ಬಿಡಾರಕ್ಕೆ ಬಂದವನ ಎರಡು

ಮಕ್ಕಳು ಬೇಗ ಸತ್ತವು. ಕೆಲವು ಕಾಲ ಆ ಮನೆಗೆ ಬರಲು ಯಾರೂಒಪ್ಪ
ಅದು ಖಾಲಿಇತ್ತು. ಅನಂತರ ಒಬ್ಬನೌಕರ, ತನಗೆ ಭೂತಪಿಶಾಚಿಗಳಲ್ಲಿ ನಂ
ಇಲ್ಲ ಎನ್ನುತ್ತಿದ್ದವ ಅಲ್ಲಿ ಬಂದು ವಾಸಿಸಿದ. ಅವನಿಗೆ ಒಮ್ಮೆ ಕಾಲಿಗೆ ಒಂ
ಕಾರೇಮುಳ್ಳು ನಾಟಿತು. ಅತಿ ಹತ್ತಿರದಲ್ಲಿಯೇ ಕಾಲೋನಿಯವರಿಗಾಗಿ
ಇದ್ದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿಕೊಂಡರೂ ಟಿಟೇನಸ್ ವಿಷದಿ
ಮೃತನಾದ. ಮನೆಗೆ ಬಿಡಾರಕ್ಕೆ ಬರುವವರಿಲ್ಲದೆ ಅದು ಕೆಲವುಕಾಲ ಸ್ಟೋ
ಆಗಿತ್ತು ; ಅನಂತರ ಒಂದು ಬ್ಯಾಂಕುಇದೆ. ಅಲ್ಲಿ ಮನೆಕಟ್ಟಲಿಕ್ಕೆ ಆರಂಭ
ವಾಗಲೇ ಅದು ಕೆಟ್ಟ ಪಿಶಾಚದಸ್ಥಳ ಎಂದು ಜಾಗ್ರತೆಕೊಟ್ಟಿದ್ದರಂತೆ. ಆ
ಸೆಕ್ಯುಲರ್ ಸರ್ಕಾರಕ್ಕೆ ಅದೆಲ್ಲ ಇಲ್ಲವಷ್ಟೆ!

ಆದರೆ ಗೃಹಸ್ಥ ದ್ವಿಜ ನೌಕರರು ತಮ್ಮ ಹೊಸಬಿಡಾರದ ಮನೆಯ
ತಪ್ಪದೆ ಆರಂಭಕ್ಕೆ ಗಣಹೋಮ, ಆಮೇಲೆ ನಿತ್ಯ ಜಪ, ಪೂಜೆ, ಮಾಡುವು
ಉತ್ತಮವಾದೀತು. ಸಂಧ್ಯೋಪಾಸನೆಯಲ್ಲಿ ಬರುವ "ಧ್ರುವಾಸುತ್ವಾ ಸ
ಎಂಬ ಪ್ರಾರ್ಥನೆಯ ವೇದಮಂತ್ರ ಪಠಿಸುತ್ತಿರುವಲ್ಲಿ ಪ್ರೇತಬಾಧೆಬಾರ
ಎಂದು ಋಗ್‌ವಿಧಾನದಲ್ಲಿದೆ. ಬಹಳ ಗಾಯತ್ರೀ ಮಂತ್ರದ ಜಪ ಒಂ
ಉತ್ತಮರಕ್ಷೆ ; ದೇವರನಾಮ ಜಪ, ಸಂಕೀರ್ತನೆಗಳಿಗಿಂತ ಉತ್ತಮವು
ಪ್ರೇತ ತೋರಿಕೊಂಡರೆ ಗಾಯಂತ್ರಿ ಪಠಿಸುವುದು, ಅದರ ಬಾಧೆಯಿದ್ದಲ್ಲಿ ೧೦
ಗಾಯಂತ್ರಿ ಪಠಿಸಿದ ನೀರು ಕುಡಿಸುವುದು ಅಥವಾ ಭಸ್ಮ ತಲೆಗೆಕಟ್ಟುವು
ಉತ್ತಮ. ಒಮ್ಮೆ ಒಂದು ಬಿಡಾರದಲ್ಲಿದ್ದಾಗ ನನ್ನ ಮಗಳಮಗುವನ್ನು ಹೊ
ಕೆಲಸದ ಹುಡುಗಿ ಎತ್ತಿಕೊಂಡು ತಿಳಿಯದೆ ಅಲ್ಲಿಂದ ಸ್ವಲ್ಪದೂರ ಇರುವ ಅ
ಕೆಟ್ಟಜಾಗವೆಂಬ ಪ್ರತೀತಿ ಇದ್ದಲ್ಲಿಗೆಹೋದಳು. ಮಗು ಮೂರ್ಛೆಹೊಂದಿತು
ಯಾರಿಗೂ ಏನೂ ಮಾಡಲಿಕ್ಕಾಗಲಿಲ್ಲ. ನಾಲ್ಕು ಮೈಲು ದೂರದಲ್ಲಿ
ಡಾಕ್ಟರರಿಗೆ ತೋರಿಸಿದ್ದಾಯಿತು. ಪ್ರಯೋಜನವಾಗಲಿಲ್ಲ. ಆಲ್ಲಿ ಯಾರೊ
"ಮಗುವನ್ನು ಎತ್ತಿಕೊಂಡು ಗಾಯತ್ರಿ ಪಠಿಸಿರಿ" ಎಂದರು ; ಅಳಿಯ ಹಾ
ಮಾಡಿದೊಡನೆ ಮಗು ಕಣ್ಣುತೆರೆಯಿತು.

೨೦. ಪುರಾಣಗಳಲ್ಲಿ ಕೆಲವು ಪ್ರೇತದ ಕತೆಗಳು

೧. ಪದ್ಮಪುರಾಣದಲ್ಲಿನ ಪಿಶಾಚಿಯ ಕತೆ

ಕೇರಳದಲ್ಲಿ ವಸು ಎಂಬ ವೇದ ಪಾರಂಗತನಾದ ಬ್ರಾಹ್ಮಣನಿದ್ದ
ದಾಯಾದಿಗಳಿಂದ ಅವನ ಭೂಮಿ ಅಪಹರಿಸಲ್ಪಟ್ಟು ಅವನು ದೇಶವೆಲ್ಲ ಅ

ತ್ತಿದ್ದ. ಒಂದು ಮಹಾಅರಣ್ಯದಲ್ಲಿ ಸಿಕ್ಕಿಬಿದ್ದು ವ್ಯಾಧಿಗಳಿಂದ ಪೀಡಿತ
ವಿಂಧ್ಯಪರ್ವತದ ಬಳಿಯಲ್ಲಿ ಮೃತನಾದ. ಅವನಿಗೆ ಔರ್ಧ್ವ ದೇಹಕ್ರಿಯೆ
ನುದಿದ್ದರಿಂದ ಅಪಪ್ರೇತನಾದ. ಮಾನವನಾಗಿದ್ದಾಗ ತನ್ನ ಬಡಸ್ಥಿಕೆಯಿಂದ
ದಾನಧರ್ಮ ಮಾಡದ್ದರಿಂದ ವಿಪರೀತ ಹಸಿವು ತೃಷೆಗಳಿಗೆ ಈಡಾದ.
ಕಾಡಲ್ಲಿ ಕ್ರೂರಪ್ರಾಣಿಗಳು ತಿಂದುಳಿದ ಸ್ವಲ್ಪ ಮಾಂಸವಿರುತ್ತದೆ. ಗಿಳಿ
ಗ ತಿಂದು ಉರುಳಿಸಿದ ಹಣ್ಣುಗಳಿರುತ್ತವೆ. ಕಂದಮೂಲಗಳು, ಜೇನು
. ಅಲ್ಲಲ್ಲಿ ನದಿಗಳ ನೀರುಇದೆ. ಆದರೆ ಆ ಪ್ರೇತಕ್ಕೆ ತಾನು ಮಾಡಿದ
ದಿಂದಾಗಿ ಇವು ತೋರುತ್ತಿರಲಿಲ್ಲ. ಕೇವಲ ಗಾಳಿನುಂಗಿಕೊಂಡು ಹಸಿ
, ಬಾಯಾರಿಕೆಯಿಂದ, ಕಷ್ಟಪಡುತ್ತಿತ್ತು.

ಒಮ್ಮೆ ಆ ಕಾಡಿನ ದಾರಿಯಾಗಿ ಒಬ್ಬ ತನ್ನ ಪ್ರಯಾಗದ ಯಾತ್ರೆಮುಗಿಸಿ
ಣಿ ತೀರ್ಥವನ್ನು ಹೆಗಲಮೇಲೆ ತೂಗಿಕೊಂಡು ತನ್ನ ಊರಿಗೆ ಹೋಗು
ತೋರಿತು. ಕೂಡಲೆ ಪ್ರೇತ ಅವನಿಗೆ ತೋರಿಕೊಂಡು, ಭಯಪಡ
ಎಂದು ಹೇಳಿ ತನ್ನಕಷ್ಟ ಹೇಳಿತು. "ನಾನು ಯಾರಿಗೂ ದಾನಧರ್ಮ
ಡಿರಲಿಲ್ಲ. ಪರಾನ್ನ ತಿನ್ನುತ್ತಿದ್ದೆ (ಅದರಿಂದ ಅವರ ಪಾಪ ಇವನಿಗೆ ಬರು
). ನಿತ್ಯ ವೈಶ್ವದೇವ ಮಾಡಲಿಲ್ಲ (ಇದು ನಮಗೆ ಮಳೆಕೊಟ್ಟು ಬೆಳೆ
ಸುವ ದೇವತೆಗಳಿಗೆ ಪ್ರತ್ಯುಪಕಾರವಾಗಿ ಮಾಡಬೇಕಾದ ನಿತ್ಯಕರ್ಮ.
ಡದವ ಕೇವಲ ಕಳ್ಳ ಎಂದು ಗೀತೆಯಲ್ಲಿದೆ ೩, ೧೨). ಅದರ ಅಂಗವಾಗಿ
ರಗೆ ನಿತ್ಯ ಕಾಗೆಗೆ ಅನ್ನಹಾಕಲಿಲ್ಲ; ಬಾಯಾರಿಬಂದ ಪ್ರಯಾಣಿಕರಿಗೆ ನೀರು
ಕಲಿಲ್ಲ. ಬಡವರಿಗೆ ಬಟ್ಟೆಬರೆ ಕೊಡೆ ಪಾದರಕ್ಷೆ ಧರ್ಮಮಾಡಲಿಲ್ಲ.
ಿಸತ್ಕಾರ ಮಾಡಲಿಲ್ಲ (ಕೇವಲ ತನಗಾಗಿ ಅನ್ನ ಬೇಯಿಸುವುದು ಬಹಳ
ಕರ ಎನ್ನುತ್ತದೆ ಶಾಸ್ತ್ರ; ಮನು ೩, ೧೧೮). ರೋಗಿಗಳಿಗೆ ಸಹಾಯ
ಡಲಿಲ್ಲ. ಪಾಪಪರಿಹಾರಕ್ಕೆ ಆಗಾಗ ಎಳ್ಳು ದಾನಕೊಡಲಿಲ್ಲ. ಸಂಕ್ರಾಂತಿ,
ರ್ಯ ಮತ್ತು ಚಂದ್ರಗ್ರಹಣ ಕಾಲಗಳಲ್ಲಿ ದೇವರಪೂಜೆ, ಪಿತೃತರ್ಪಣ,
ಒಂದೂ ಮಾಡಲಿಲ್ಲ (ಗ್ರಹಣಕಾಲದ ದಾನಕ್ಕೆ ಇತರಕಾಲದ ದಾನಕ್ಕಿಂತ
ರಪಾಲು ಹೆಚ್ಚುಫಲ! ಆಗ ನಿದ್ರೆ ಮಾಡುವುದು, ಉಣ್ಣುವುದು ಬಹಳ
ಕರ). ಕಾರ್ತಿಕಮಾಸದಲ್ಲಿ ದೇವರಿಗೆ ವಿಶೇಷ ದೀಪಹಚ್ಚುವುದು, ದೀಪ
ನಡೆಸಲಿಲ್ಲ; ಮಾಘಮಾಸದ ಪ್ರಾತಃಸ್ನಾನಗಳನ್ನು ಮಾಡಲಿಲ್ಲ. ಅಶ್ವತ್ಥ
ನೆಡಲಿಲ್ಲ. ಶರಣಾಗತರ ರಕ್ಷಣೆ ಮಾಡಲಿಲ್ಲ. ಪಾಪ ಪರಿಹಾರಕ್ಕೆ
ಾಂದ್ರಾಯಣಾದಿ ಕೃಚ್ಛ್ರಗಳನ್ನು ಮಾಡಲಿಲ್ಲ (ದೀರ್ಘ ಉಪವಾಸಗಳು).

ಇದರ ಪರಿಣಾಮವಾಗಿ ಈಗ ಆಹಾರ ನೀರು ಇದ್ದರೂ ಇಲ್ಲದಾಗಿ ಭಯಂಕ
ಕಷ್ಟದಲ್ಲಿದ್ದೇನೆ, ನನಗೆ ನೀರು ದಾನಮಾಡು, ಎಂದು ಬೇಡಿತು.

ಪಥಿಕನು ಬಹಳ ದೂರದಿಂದ ತಂದ ತೀರ್ಥ ಅದು. ಆದರೆ ಅವನಿ
ನೆನಪಿಗೆ ಬಂತು–

ಪರೋಪಕಾರಜಂ ಪುಣ್ಯಂ ನಸ್ಯಾತ್ ಕ್ರತುಶತೈರಪಿ ॥

ಎಂದರೆ ಪರೋಪಕಾರದಿಂದ ಬರುವ ಪುಣ್ಯವು ನೂರು ಯಜ್ಞಗಳಿಂದಲ
ಬಾರದು ಎಂದು. ಆದ್ದರಿಂದ ನೀರನ್ನು ಪ್ರೇತಕ್ಕೆಕೊಟ್ಟ. ಅದು ಕುಡಿದ
ಸ್ವಲ್ಪವನ್ನು ತಲೆಯಮೇಲೆ ಪ್ರೋಕ್ಷಣೆ ಮಾಡಿಕೊಂಡಿತು. ಗಂಗಾಜಲ
ಮಹಿಮೆಯಿಂದಾಗಿ ಪ್ರೇತತ್ವ ಕಳಕೊಂಡಿತು. ಆ ಜೀವಾತ್ಮ ಪಥಿಕನಿ
ಬಹಳಅಭಿನಂದನೆಮಾಡಿ ಸ್ವರ್ಗಸೇರಿತು. ಈ ಕತೆಯನ್ನು ಈಗಿನ ಬ್ರಾಹ್ಮಣರ
ಮಂಥನ ಮಾಡಬೇಕು (ಪದ್ಮಪುರಾಣ, ಉತ್ತರಖಂಡ, ಅಧ್ಯಾಯ ೨೫೦
ರಘುನಾಥಾಚಾರ್ಯರ ಪರಲೋಕ ಎಂಬ ಗ್ರಂಥದಿಂದ ಸಂಗ್ರಹ).

೨. ಸ್ಕಾಂದಪುರಾಣದಲ್ಲಿ ಪ್ರೇತದ ಕತೆ

ಅದರ ನಾಗರ ಖಂಡದ ೧೭೭ನೆ ಅಧ್ಯಾಯದಲ್ಲಿ ಪ್ರೇತಗಳ ಕತೆಯಿದೆ
ಹೈಹಯದೇಶದ ವಿರೂಥನೆಂಬ ರಾಜನು ಘೋರಾರಣ್ಯದಲ್ಲಿ ಬೇಟೆಯಾಡುತ್ತ
ಒಬ್ಬನೇ ಆದ. ಅಲ್ಲಿ ಅವನಿಗೆ ಮೂರುಪ್ರೇತಗಳು ತೋರಿಕೊಂಡವು
ಅವಕ್ಕೆ ಮೇಲ್ಮುಖವಾಗಿ ಕೂದಲುಗಳು, ಕೆಂಪುಕಣ್ಣು, ಅತ್ಯಂತ ಕೃಶವಾದ
ಹೊಟ್ಟೆ, ಕಪ್ಪು ಹಲ್ಲುಗಳು, ಕುರೂಪಿಶರೀರ ಇದ್ದವು. ರಾಜನು ಅವಕ್ಕೆ
ತಾನು ಯಾರೆಂದು ತಿಳಿಸಿದಾಗ ಅವು ತಮ್ಮ ಪ್ರೇತತ್ವದ ಪರಿಹಾರಕ್ಕೆ ಅವನ
ಸಹಾಯಬೇಡಿದವು. ಅವು ಮೂವರೂ ಬ್ರಾಹ್ಮಣರಾಗಿದ್ದರು. ಒಬ್ಬ
ನಾಲಗೆಯ ಚಪಲತೆಯಿಂದ ಮಾಂಸ ತಿನ್ನುತ್ತಿದ್ದುದರಿಂದ ಪ್ರೇತನಾದ
ಮತ್ತೊಬ್ಬ ದೇವರಪೂಜೆಮಾಡದೆ ಊಟ ಮಾಡುತ್ತಿದ್ದುದರಿಂದ ಪ್ರೇತನಾದ
ಮೂರನೆಯವ ಸಾರ್ವಜನಿಕರಿಂದ ಕೆರೆ ಕಟ್ಟಿಸುತ್ತೇನೆಂದು ಹಣ ಸಂಗ್ರಹಿಸಿ
ಅದನ್ನು ಅಪಹರಿಸಿದ್ದ. ಮೂರು ಜನರಿಗೂ ರಾಜ ಗಯಾಶ್ರಾದ್ಧ ಮಾಡಿ
ಸಿದರೂ ಪ್ರಥಮ ಇಬ್ಬರು ಮಾತ್ರ ಪ್ರೇತತ್ವದಿಂದ ಮುಕ್ತರಾಗಿ ಅದನ್ನು
ರಾಜನಿಗೆ ಸ್ವಪ್ನದಲ್ಲಿ ತಿಳಿಸಿದರು. ಆದರೆ ಮೂರನೆಯವನದ್ದು ಮತ್ತೂ
ಘೋರ ಪಾಪವಾಗಿದ್ದರಿಂದ ರಾಜ ಆಮೇಲೆ ಹಾಟಕೇಶ್ವರ ಕ್ಷೇತ್ರದಲ್ಲಿರುವ
ಗಯಾಶಿರಸ್ಸಲ್ಲಿಯೂ ಶ್ರಾದ್ಧ ಮಾಡಿದಾಗ ಅವನೂ ಉದ್ಧಾರನಾದ.

ಗರುಡಪುರಾಣ ಸಾರೋದ್ಧಾರದಲ್ಲಿ ಪ್ರೇತದ ಉದ್ಧಾರದ ಕತೆ

ಸುದೇವನೆಂಬ ವೈಶ್ಯನು ತುಂಬಾ ಐಶ್ವರ್ಯವಂತನಾಗಿದ್ದು ದಾನಧರ್ಮ ರಪೂಜೆ ಮಾಡುತ್ತಿದ್ದನು. ಅವನಿಗೆ ಸಂತಾನವಾಗಲಿ, ಬಂಧುಗಳಾಗಲಿ, ಂತರಾಗಲಿ ಇರಲಿಲ್ಲ. ಅವನು ಮರಣಹೊಂದಿದಾಗ ಅವನ ಔರ್ಧ್ವ ಕ ಕ್ರಿಯೆಯನ್ನು ಯಾರೂ ಮಾಡಲಿಲ್ಲ. ಹದಿನಾರುಮಾಸಿಕ ಶ್ರಾದ್ಧ ನ್ನು ಮಾಡಿ ಉಂಟಾಗಬೇಕಾದ ಪಿತೃದೇಹ ಆಗದೆ ಪ್ರೇತದೇಹವೇ ಸ್ಥಿರ ಯಿತು. ಅವನು ಒಂದುಕಾಡನ್ನು ಸೇರಿದ. ಅಲ್ಲಿ ಬಬ್ರುವಾಹನನೆಂಬ ಬೇಟೆಯಾಡುತ್ತ ವಿಶ್ರಾಂತಿಗಾಗಿ ಕುಳಿತಿದ್ದಾಗ ಸುದೇವನ ಪ್ರೇತ ಅವ ತೋರಿಕೊಂಡು ತನ್ನ ಕತೆ ಹೇಳಿ "ರಾಜನು ಎಲ್ಲ ಧರ್ಮದವರಿಗೂ ಸುವು; ನನ್ನ ಅಂತಿಮಕ್ರಿಯೆಮಾಡಿ ನನ್ನನ್ನುಉದ್ಧರಿಸು" ಎಂದು ಬೇಡಿತು. ನು ಅವನ ಕೇಳಿಕೆಯಂತೆ ವೇದಮಂತ್ರಗಳಿಂದ ಅಂತಿಮಕ್ರಿಯೆ, ವಿಷ್ಣುವಿನ ೩, ಪ್ರೇತಘಟದಾನ ಮಾಡಿದಾಗ ಪ್ರೇತತ್ವದ ನಿವಾರಣೆಯಾಯಿತು.

ಶ್ರೀವಿಷ್ಣುವು ಗರುಡನಿಗೆ ಈ ಕತೆ ಹೇಳಿ, ಜನರಿಗೆ ಅಂತಿಮ ಕ್ರಿಯೆ ಗಿ ನಡೆದು ಪ್ರೇತತ್ವದಿಂದ ವಿಮೋಚನೆ ಹೊಂದಲಿಕ್ಕೆ ಪುತ್ರನು ಅವಶ್ಯಕ ರಿಂದ ಮಗ ಇಲ್ಲದಿದ್ದವ ಹರಿವಂಶದ ಕಥೆ ಹೇಳುವುದರಿಂದಾಗಲಿ, ಶತ ೀ ವಿಧಾನದಿಂದಾಗಲಿ, ಭಕ್ತಿಯಿಂದ ಶಿವನನ್ನು ಆರಾಧಿಸುವುದರಿಂದಾಗಲಿ, ವಂತನು ಪುತ್ರೋತ್ಪತ್ತಿ ಉಂಟುಮಾಡಿಕೊಳ್ಳಬೇಕು ಎಂದು ಬೋಧಿಸಿ ನೆ (ಅ ೭).

ಹರಿವಂಶಕಥಾಂ ಶ್ರುತ್ವಾ ಶತಚಂಡೀ ವಿಧಾನತಃ ।
ಭಕ್ತ್ಯಾ ಶ್ರೀ ಶಿವಮಾರಾಧ್ಯ ಪುತ್ರ ಮುತ್ಪಾತಯೇತ್ಸುಧೀಃ ॥ ೮ ॥

ಭಾಗವತಸಪ್ತಾಹದಿಂದ ಪಿಶಾಚತ್ವದ ನಾಶ

ಪದ್ಮಪುರಾಣದಲ್ಲಿ ಭಾಗವತ ಸಪ್ತಾಹದಿಂದ ಪಿಶಾಚತ್ವನಿವಾರಣೆಯಾದ ಇದೆ. ಧುಂಧುಲಿಯೆಂಬ ದುಷ್ಟಬ್ರಾಹ್ಮಣಿಯೊಬ್ಬಳು ಧುಂಧುಕಾರಿಯೆಂಬ ವಲ್ಲದ ಮಗುವನ್ನು ತನ್ನದೆಂದು ಪತಿಗೆ ಸುಳ್ಳುಹೇಳಿ ಬೆಳೆಸಿದಳು. ಅವನು ಡ್ಡವನಾದ ಮೇಲೆ ಯಾವ ಬ್ರಾಹ್ಮಣ ಆಚಾರವೂ ಇಲ್ಲದ ಅತ್ಯಂತ ಕೆಟ್ಟ ದ ಭ್ರಷ್ಟನಾದ. ಶೀರಾ ಅಶುದ್ಧ ಆಹಾರ ತಿನ್ನುವುದು, ಕಳವುಮಾಡು . ಇತರರಮನೆಗೆ ಬೆಂಕಿಹಾಕುವುದು, ನೀಚರ ಸಂಗ, ಮಕ್ಕಳನ್ನು ಬಾವಿಗೆ ಕುವುದು, ವ್ಯಭಿಚಾರ ಎಲ್ಲ ಮಾಡುತ್ತಿದ್ದ. ಅವನ ಸಾಕುತಾಯಿಗೂ

ವಿಪರೀತ ಹಿಂಸೆಕೊಟ್ಟು ಅದನ್ನು ಸಹಿಸಲಾರದೆ ಅವಳು ಆತ್ಮಹತ್ಯೆಮಾ ಕೊಂಡಳು. ದರೋಡೆ ಮತ್ತು ವ್ಯಭಿಚಾರದಲ್ಲಿ ಮುಳುಗಿದ್ದ ಅವನನ್ನು ಅವ ಸೂಳೆಯರೇ ಕೊಂದರು. ಅವನ ಸಾಕು ತಮ್ಮ ಅವನಿಗೆ ಗಯೆಯಲ್ಲಿ ಅಂತಿವ ಕ್ರಿಯೆ ಮಾಡಿದರೂ ಅವ ಕೆಟ್ಟಪಿಶಾಚಿಯಾಗಿಯೇ ಉಳಿದ. ಕೇವಲ ಗಾ ಭುಜಿಸುತ್ತ, ಹಸಿವಿಂದ ಅಪಾರಹಿಂಸೆ ಅನುಭವಿಸಿದ. ಅದನ್ನು ಸಹಿಸಲಾರ ಅದು ತಮ್ಮನಿಗೆ ತೋರಿಕೊಂಡು ತನ್ನ ವಿಪರೀತಕಷ್ಟದಿಂದ ಕಾಪಾಡಲು ಬೇ ಕೊಂಡಿತು. ಅದರ ಉದ್ಧಾರಕ್ಕಾಗಿ ತಮ್ಮ ಭಾಗವತ ಪುರಾಣದ ಸಪ್ತಾ (ಏಳುದಿನದಲ್ಲಿ ಓದಿ ಮುಗಿಸುವುದು) ಮಾಡಿದಾಗ ಪ್ರೇತವು ಭಾಗವತವನ್ನೂ ಅರ್ಥವಿವರಣೆಯನ್ನೂ ಬಹಳ ಶ್ರದ್ಧೆಯಿಂದ ಕೇಳಿತು. ಸಪ್ತಾಹಮುಗಿಯಲ ಪ್ರೇತತ್ವವು ನಾಶವಾಗಿ ಅವ ಉತ್ತಮ ದೇಹಹೊಂದಿ ತಮ್ಮನ ಉದಾರ ಯನ್ನು ಬಹಳವಾಗಿ ಹೊಗಳುತ್ತ ಉತ್ತಮ ಲೋಕಕ್ಕೆ ತೆರಳಿದ.

೫. ಪ್ರೇತತ್ವದ ಕಷ್ಟಗಳು

ನಮ್ಮ ಪುರಾಣಗಳಲ್ಲಿ ಪಿಶಾಚಿ ಜನ್ಮಗಳ ಕಷ್ಟ ಬಹಳ ಹೇಳಿದೆ. ಆದ ಪಾಶ್ಚಾತ್ಯರ ಪ್ರೇತಸಂಪರ್ಕದ ವೇಳೆ ಪ್ರೇತಗಳು ತಮ್ಮ ಬಂಧುಗಳೊಡನ ಏನೂ ಕಷ್ಟಹೇಳುವುದಿಲ್ಲ. ತಾವಿರುವಲ್ಲಿ ತಮಗೆ ಸ್ವಲ್ಪ ಪ್ರಾರ್ಥನೆ, ಪೂಜ ಮಾಡಲಿಕ್ಕಿದೆ, ಉಳಿದ ಸಮಯದಲ್ಲೆಲ್ಲ ವಿರಾಮ, ಸುಮ್ಮನಿರಬಹುದು ಮಿತ್ರರೊಡನೆ ಮಾತಾಡುತ್ತ ಸಮಯಕಳೆಯಬಹುದು, ತಿರುಗಾಡಬಹುದು ಗಾಯನಮಾಡಬಹುದು ಎಂದು ನಾನು ಓದಿದಾಗ ಪುರಾಣದ ಹೇಳಿಕೆಗೆ ಇದೆಲ್ಲ ತೀರಾ ವಿರುದ್ಧವಾಗಿ ತೋರಿತು. ಸ್ವಾಮಿ ಅಭೇದಾನಂದರ Life Beyond Death ಪುಸ್ತಕದಲ್ಲಿ ಪ್ರೇತಗಳ ಫೋಟೋ ಚಿತ್ರಗಳು ಇವೆ. ಅವಲ್ಲಿ ಆವಾಹಿಸಿದ ಮುಖ್ಯ ಪ್ರೇತ ದೊಡ್ಡದಾಗಿಯೂ ಅದರಸುತ್ತಲೂ ದ್ರಾಕ್ಷಿಯ ಹಣ್ಣಿನ ಜೊಂಪೆಯಂತೆ ನೂರಾರು ಪ್ರೇತಗಳರುಂಡಗಳು ಮಾತ್ರ ಅತಿಚಿಕ್ಕದಾಗಿ ತೋರುತ್ತಿರುವುದೂ ಕಾಣಬಹುದು. ಪ್ರೇತಸಂಪರ್ಕಗಳು ನಡೆಯುವಲ್ಲಿ ಅನೇಕ ಇತರಪ್ರೇತಗಳೂ ಕಲೆಯುವುದುಂಟು. ಈ ಚಿತ್ರಗಳನ್ನು ಕಂಡರೆ ಅನೇಕಾನೇಕ ಪ್ರೇತಗಳು ತಮಗೇನೂ ನಿರ್ದಿಷ್ಟಕೆಲಸವಿಲ್ಲವೆ ಬೀದಿಯಮಕ್ಕಳು ಅಲೆದಾಡುವಂತೆ, ಎಲ್ಲಾದರೂ ಏನಾದರೂ ವಿಶೇಷ ನಡೆಯುವಲ್ಲಿ ಸುತ್ತುಗಟ್ಟಿ ನಿಲ್ಲುವಂತೆ, ಇವೂ ಮಾಡುತ್ತವೆ; ಅವಕ್ಕೆ ಯಾವ ತಡೆಯೂ ಇಲ್ಲ, ಎಂದರೆ ಕಷ್ಟವೂ ಇಲ್ಲ ಎಂದೇ ಊಹಿಸಬೇಕಾಗುತ್ತದೆ.

ಮತ್ತು ಪಾಶ್ಚಾತ್ಯಪ್ರೇತಗಳಂ ತಮ್ಮ ಬಂಧುಗಳೊಡನೆ, ತಮಗೆ ಈ ಬಹಳಕಷ್ಟ, ಅದರ ನಿವಾರಣೆಗೆ ಇಗರ್ಜಿಯಲ್ಲಿ ಪ್ರಾರ್ಥನೆ ಮಾಡಿಸಿರಿ, ಶಾಗಿಯೂ ಹೇಳಿದ್ದಿಲ್ಲ, ಪ್ರೇತತ್ವ ಮುಗಿಯಬೇಕು, ಅದು ಮುಗಿಯಲು ಎಂಬ ಭಾವನೆಯೇ ಅವಕ್ಕಿಲ್ಲ. ಟ್ಯಾಕ್ಸಿ ನಿಲ್ಲಿಸಿ ಹತ್ತಿ ಸವಾರಿಮಾಡು ರೈಲು ಇಂಜಿನ್ನು ಓಡಿಸಿ ತೃಪ್ತಿ ಪಡುವುದು ಮುಂತಾದ ವಿನೋದ ನಡೆಸುತ್ತವೆ ; ಹೊರತು ಪ್ರೇತತ್ವದ ಬಿಡುಗಡೆಗೆ ಯತ್ನಗಳನ್ನಲ್ಲ. ಅಭೇದಾನಂದರಿಗೆ ತೋರಿಕೊಂಡು ಕುರುಡರಂತೆ ಚಲಿಸುತ್ತಿದ್ದಪ್ರೇತ ಲ್ಲಿತ್ತು ಸರಿ ; "ತನಗೆ ಏನೂ ಗೊತ್ತಾಗುವುದಿಲ್ಲ, ನನಗಾಗಿ ಪ್ರಾರ್ಥನೆ ರಿ" ಎಂದಿತ್ತು ಸರಿ. ಆದರೆ ಅದು ನೀರಲ್ಲಿಮುಳುಗಿ ದುರ್ಮರಣದಿಂದ ನ ಪ್ರೇತ. ಏನೂ ತೋರದ ಅದಕ್ಕೆ ಆ ಮಹಾತ್ಮರು ತೋರಿದರು. ರೆ ಅದರ ಪ್ರೇತತ್ವದ ನಿವಾರಣೆಗೆ ದೇವರೇ ಸಂದರ್ಭಮಾಡಿದ್ದ. ಂದು ಅಪೂರ್ವ ಘಟನೆ ; ಸಾಮಾನ್ಯಪ್ರೇತಗಳ ಕ್ರಮವಲ್ಲ. ಪಾಶ್ಚಾತ್ಯ ಸಂಪರ್ಕಕ್ರಮ ಪ್ರತ್ಯಕ್ಷಅನುಭವ. ಅದು ಸುಳ್ಳೆನ್ನುವಂತಿಲ್ಲ. ಹಾಗಾದರೆ ು ಹೇಳುವ ಪ್ರೇತಗಳ ಕಷ್ಟ ಸುಳ್ಳೇ ? ವಿಜ್ಞಾನವೂ ಕೆಲವು ಧರ್ಮಗಳ ಗಳನ್ನು ಸುಳ್ಳೆಂದುತೋರಿಸಿದೆ. ಆದರೆ ನಮ್ಮಶಾಸ್ತ್ರವನ್ನು ಸಮರ್ಥಿ ಸುಳ್ಳೆಂದು ಮಾಡಲಿಲ್ಲ.

ವಿಜ್ಞಾನವು ಬೈಬಲ್ಲಲ್ಲಿ ಬರುವ ಕೆಲವು ವಿಚಾರಗಳನ್ನು ದೃಷ್ಟಾಂತಕ್ಕೆ ನಮ್ಮ ಭೂಮಿಯೇಕೇಂದ್ರ ಅದರ ಸುತ್ತಲೂ ಸೂರ್ಯ ಚಂದ್ರ ನಕ್ಷತ್ರ ಸುತ್ತುತ್ತವೆ ; ಭೂಮಿಯು ಕೇವಲ ೬೦೦೦ ವರ್ಷಗಳ ಹಿಂದೆ ನಿರ್ಮಿತ ತು ; ಅದನ್ನು ದೇವರು ಕೇವಲ ಆರುದಿನಗಳಲ್ಲಿ ಮಾಡಿದ, ಮುಂತಾದ ಂಗಳೆಲ್ಲ ಶೀರಾ ತಪ್ಪೆಂದು ತೋರಿಸಿದೆ. ಹಾಗಿದ್ದರೆ ಬೈಬಲ್ಲಿನ ಇತರ ಳೂ ತಪ್ಪಾದವಿರಬೇಕು ಎಂಬ ಭಾವನೆ ಹುಟ್ಟಿಸಿ, ಪಾಶ್ಚಾತ್ಯರಲ್ಲಿ ಕತೆ ಬೆಳೆಸಲಿಕ್ಕೆ ಕಾರಣವಾಗಿತ್ತು. ಬೈಬಲ್ಲಿನಲ್ಲಿ ಪುನರ್ಜನ್ಮದ ವಾರ್ತೆ ಲ್ಲ !

ಆದರೆ ವಿಜ್ಞಾನದ ಶೋಧನೆಗಳು ನಮ್ಮ ಧರ್ಮದ ಮೂಲತತ್ವ ಸಮರ್ಥಿಸಿವೆಯೇ ಹೊರತು ನಾಶಮಾಡಿದ್ದಿಲ್ಲ (ಪುರಾಣಗಳು ಅಲ್ಪ ಯುವರಿಗೂ ಧರ್ಮತಿಳಿಸಲಿಕ್ಕಾಗಿ ಇದ್ದು ಅವಲ್ಲಿ ಕೆಲವು ಗಹನ ವಿಷಯ ಹಾಗೆಯೇ ಅಲ್ಲಿ ತಿಳಿಸದೆ ಕಥಾರೂಪದಲ್ಲಿ ಹೇಳಿದ್ದುಂಟು. ಆದರೆ ವೂ ಬುದ್ಧಿವಂತರಿಗಾಗಿ ಬೇರೆ ಕಡೆಯಲ್ಲಿವೆ).

ನನ್ನ ಸಂಶಯಕ್ಕೆ ಕ್ರಮೇಣ ವಿವರಣೆಸಿಕ್ಕಿತು, ಜೀವಾತ್ಮರಲ್ಲಿ ಬಹ
ಮಟ್ಟಗಳಿವೆ. ಇತರಧರ್ಮಗಳು ಪ್ರಾಥಮಿಕಶಾಲೆಯಂತೆ ಮಾತ್ರ. ಅಷ
ಎಲ್ಲರಿಗೂ ಒಂದೇ ಮಗ್ಗಿಪುಸ್ತಕ ಇರುವಂತೆ, ಇತರ ಧರ್ಮಗಳಲ್ಲಿ ಎಲ್ಲರಿಗ
ಒಂದೇಧರ್ಮದ ಪುಸ್ತಕ ; ಒಂದೇತರದಶಿಕ್ಷೆ ಒಂದೇಜನ್ಮ ಎಂಬ ಕ್ರಮಮಾ
ಇವೆ. ಒಂದು ಜನ್ಮದಲ್ಲಿ ಬಹಳ ಧಾರ್ಮಿಕಸಾಧನೆ ಅಸಾಧ್ಯ. ಆದ್ದರಿಂ
ಧಾರ್ಮಿಕಮಟ್ಟ ಮತ್ತೂ ಏರಲಿಕ್ಕೆ ಸನಾತನಧರ್ಮ ಬೇಕು. ಅದರ ಮೇ
ಮೇಲಿನವರ್ಣಗಳು ಮೆಟ್ಟಲುಗಳಂತೆ. ಭಾಗವತದಲ್ಲಿ (೩, ೨೯, ೩೧) ಹೇಳಿ
ಪ್ರಾಣಿಜನ್ಮಗಳಿಗಿಂತ ಮಾನವಜನ್ಮ ಮೇಲ್ತರದ್ದು. ಮಾನವರಲ್ಲಿ ಸನಾತ
ಧರ್ಮದ ನಾಲ್ಕು ವರ್ಣದವರು ಇತರರಿಗಿಂತ ಮೇಲ್ತರದವರು ಎಂದು.

ತತೋ ವರ್ಣಾಶ್ಚ ಚತ್ವಾರಸ್ತೇಷಾಂ ಬ್ರಾಹ್ಮಣ ಉತ್ತಮಃ ।

ವೈಶ್ಯಜನ್ಮವು ಜೀವಾತ್ಮ ಹೈಸ್ಕೂಲು ಸೇರಿದಂತೆ. ಅಲ್ಲಿನ ತರತರ
ಧಾರ್ಮಿಕ ಪಾಠಗಳನ್ನು ಕಲಿತು, ಜೂನಿಯರ್ ಕಾಲೇಜಿಗೆ ಹೋಗಬಹುದು
ಅದು ಕ್ಷತ್ರಿಯಜನ್ಮ. ಮೇಲೆ ಸೀನಿಯರ್ ಕಾಲೇಜು ಇದೆ. ಅದು ಜೀವಾತ
ನಿಗೆ ಬ್ರಾಹ್ಮಣ ಜನ್ಮದಂತೆ. ಹೀಗೆ ಧರ್ಮದ ಭಾಗ ಹೆಚ್ಚು ಹೆಚ್ಚು ಕಲಿಯುತ
ನಮ್ಮ ಧಾರ್ಮಿಕಮಟ್ಟ ಬಹಳ ಏರಿಸುತ್ತ ಹೋಗಲಿಕ್ಕಿರುವ ಮೆಟ್ಟಲುಗಳವ
ತುತ್ತುದಿಯಲ್ಲಿರುವ ಎಂ.ಎ. ವಿದ್ಯಾರ್ಥಿ, ನಿತ್ಯವೂ ಪ್ರಾಥಮಿಕಶಾಲೆಯ
ವಿದ್ಯಾರ್ಥಿಯ ಸಾವಿರಾರುಪಾಲುಹೆಚ್ಚು ಘನವಾದ, ಆಳವಾದ, ಹೆಚ್ಚಿನದಾ
ವಿಷಯ ಕಲಿಯುವ ಸಮರ್ಥನಾಗಿದ್ದಾನೆ. ಇದೆಲ್ಲ ಜಾತಿಕ್ರಮದಿಂದ ಮಾತ
ಸಾಧ್ಯ. ನಮ್ಮ ಈ ಕ್ರಮ ಕಲಿಯುಗದಲ್ಲಿ ಬಹಳಕೆಟ್ಟಿದೆ. ಬ್ರಾಹ್ಮಣರೆಂಬು
ರಲ್ಲಿ ತಮ್ಮ ಭಾಗದ ಶಾಸ್ತ್ರ ಕಲಿಯದವರೂ ಆಚರಿಸದವರೂ ಬಹಳ ಇದ್ದಾರೆ
ಕೇವಲ ೭೦–೮೦ವರ್ಷಗಳ ಹಿಂದಿನವರೆಗೂ ಜಾತಿಮುಖಂಡರು, ಮಠಾಧಿಪ
ಗಳು ಅಂಥ ಅಯೋಗ್ಯರನ್ನು ಜಾತಿಯಿಂದ ಹೊರಗೆಹಾಕುತ್ತಿದ್ದರು. ಬ್ರಿಟಿಷ
ಕೋರ್ಟುಗಳ ಭಯದಿಂದ ಆ ಕ್ರಮ ನಿಂತಿತು. ಆದರೆ ಪುರಾಣಗಳು ಹೇಳುವ
ಕಾಲದಲ್ಲಿ ಮತ್ತು ಅನಂತರವೂ ಧರ್ಮದಲ್ಲಿ ಶ್ರದ್ಧೆ ಬಹಳ ಇದ್ದವರಿಗೂ ಬಹ
ಮಟ್ಟಿನ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜೀವಾತ್ಮರ ಮಟ್ಟಬಹಳ ಮೇಲಿತ್ತು
ತಮ್ಮತಮ್ಮ ಧರ್ಮ ಆಚರಿಸದವರಿಗೆ ದೇವರ ಶಿಕ್ಷೆಯೂ ಬಹಳಕಠಿಣವಿತ್ತು
ಅವರಿಗೆ ಪ್ರೇತತ್ವ ಬಹಳ ಕಠಿಣತರದ್ದು.

ಮಕ್ಕಳಿಗೆ ನಾವು ಶಿಕ್ಷೆಕೊಡುವುದಿಲ್ಲ. ಧರ್ಮಕಲಿಸುವುದೂ ಬಹಳಸ್ವಲ್ಪ
ಮಾತ್ರ. ಅಂತೆಯೇ ಒಂದೇಜನ್ಮ ಹೇಳುವ ಇತರ ಧರ್ಮಗಳ ಜೀವಾತ್ಮರು

ಕ್ಕಳಂತೆ ಮಾತ್ರ. ಅವರಲ್ಲಿ ಮೃತರಾದವರು ಸ್ವಲ್ಪ ಅಥವಾ ಹೆಚ್ಚು ಕಾಲ ಳ ಕಷ್ಟವಿಲ್ಲದ ಪ್ರೇತರಾಗಿದ್ದು, ಆಮೇಲೆ ಪುನಃ ಜನ್ಮ ಪಡೆಯುತ್ತವೆ. ಡನೇ ಚಾರ್ಲ್ಸನ ಸೂಳೆ ೩೦೦ವರ್ಷಗಳಾದರೂ ಪ್ರೇತಳಾಗಿ ಅಲೆಯುತ್ತಿ ಳೆ; ಆದರೆ ಬಹಳ ಕಷ್ಟದಿಂದಲ್ಲ ಎಂದು ಅವಳು ತೋರಿಕೊಂಡವರು ದ್ದುಂಟು. ನಮ್ಮ ಶಾಸ್ತ್ರದಲ್ಲಿಯೂ ಶೂದ್ರರಿಗೆ ಕಠಿಣ ವ್ರತೋಪವಾಸ ನ್ನೂ, ಎಲ್ಲ ಸಂಸ್ಕಾರಗಳನ್ನೂ, ಮುಂತಾಗಿ ವಿಧಿಸಿಲ್ಲ (ಮನು ೪.೮೦) ವ್ರ ಸ್ತ್ರೀಯರಿಗೆ ಪುನರ್ವಿವಾಹ ನಿಷೇಧವಲ್ಲ. ಅಂತಿಮಕ್ರಿಯೆ ಸುಲಭ ನ್ದು. ಶ್ರಾದ್ಧ ಉಪವಾಸ ಜಪ ಹೋಮ ಇಲ್ಲ. ಶೂದ್ರವರ್ಗವು ಳು ದೊಡ್ಡವರನ್ನು ಕಂಡು ಕಲಿತಂತೆ, ಮೇಲುಜಾತಿಯವರ ಸೇವೆಮಾಡಿ ಕಲಿಯಲಿ ಎಂಬುದು ಶಾಸ್ತ್ರದಹೇಳಿಕೆ. ಇತರ ಧರ್ಮದವರಂತೆಯೇ ರೂ (ಅವರಲ್ಲಿ ತೀರಾಕೆಟ್ಟದ್ದು ಮಾಡದವರು) ಎಲ್ಲರೂ ಪ್ರೇತಗಳಾಗಿ ಕಾಲ ಇಲ್ಲೇ ಹತ್ತಿರ ಇರುತ್ತವೆಯೇ ಹೊರತು ನರಕಕ್ಕೆ, ಸ್ವರ್ಗಕ್ಕೆ ಪಿತೃ ೋಕಕ್ಕೆ ಹೋಗುವುದಿಲ್ಲ. ಅವಕ್ಕೆ ಪ್ರೇತತ್ವ ಬಹಳ ಕಷ್ಟವೇನಲ್ಲ. ಆದರೆ ಟ್ಟದ ವರ್ಗಗಳಾದ ವೈಶ್ಯ, ಕ್ಷತ್ರಿಯ, ಬ್ರಾಹ್ಮಣರಿಗೆ ಶಿಕ್ಷೆ ಹೆಚ್ಚುತ್ತಾ ತ್ತದೆ. ಹಾಗೆ ಜನರ ಜಾತಿಹೊಂದಿ ಶಿಕ್ಷೆಹೆಚ್ಚಿಸುವುದು ನಮ್ಮಧರ್ಮದ ಷತೆ, ಮತ್ತು ತೀರಾಸರಿಯಾದ ಕ್ರಮ.

ಭಾಗವತದಲ್ಲಿ ಏನು ಹೇಳಿದೆ ಎಂದರೆ (೫, ೧೯, ೧೯) :

ಅಸ್ಮಿನ್ನೇವ ವರ್ಷೇ ಪುರುಷೈರ್ಲಬ್ಧಜನ್ಮಭಿಃ ಶುಕ್ಲಲೋಹಿತ ಕೃಷ್ಣ ೇನ ಸ್ವಾರಭ್ಧೇನ ಕರ್ಮಣಾ ದಿವ್ಯಮಾನುಷನಾರಕಗತಯೋ ಬಹ್ವ್ಯಯು ನ ಆನುಪೂರ್ವೇಣ ಸರ್ವಾಹ್ಯೇವ ಸರ್ವೇಷಾಂ ವಿಧೀಯಂತೇ ಯಥಾ ವಿಧಾನಮಪವರ್ಗಶ್ಚಾಪಿ ಭವತಿ ॥

ಎಂದರೆ ಈ ಭಾರತವರ್ಷದಲ್ಲಿ, ಜನಿಸಿದವರು ಮಾತ್ರವೇ ದೇವತೆಗಳು, ನವರು, ನರಕವಾಸಿಗಳು ಆಗುವುದು. ಅದು ಅವರು ತಮ್ಮ ಸತ್ವ, ರಜೋ ವಾ ತಮೋ ಗುಣಹೊಂದಿ ಮಾಡಿದ ಪುಣ್ಯಪಾಪಗಳಂತೆ ಆಗುತ್ತದೆ; ಮಟ್ಟಗಳೂ, ಮೋಕ್ಷ (ಸಂಪೂರ್ಣ ದೇವತ್ವ ಹೊಂದುವುದು ಕೂಡ) ವರ್ಣಧರ್ಮಗಳ ಪಾಲನೆಯಿಂದ ಪಡೆಯುವುದು ಸಾಧ್ಯ. ಮತ್ತೊಂದು ನಲ್ಲಿ ಹೇಳಿದಂತೆ ಹೀಗೆ ದೇವಲೋಕ ಪಿತೃಲೋಕಗಳಿಗೆ ಹೋಗಲು ತಕ್ಕ ಮೇಲ್ತರದ ದೇಹವು, ಅವರವರು ಮಾನವರಾಗಿದ್ದಾಗ ಮಾಡಿದ್ದ ಕಾರಗಳ ಮತ್ತು ಹೋಮಗಳ ಧೂಮದ ಕಣಗಳಿಂದುಂಟಾಗುತ್ತದೆ.

(ಭಾಗವತ ೭, ೧೫, ೫೦-೫೨) ಎಲ್ಲರಿಗೂ ಮರಣವಾದೊಡನೆ ಪ್ರೇತದೇಹ
ಬರುತ್ತದೆ. ಆದರೆ ದ್ವಿಜರ ಅಂತಿಮಕ್ರಿಯೆಯೊಡನೆ ಅದು ಪರಲೋಕದ
ವಾಸಕ್ಕೆ ತಕ್ಕುದಾಗಿ ಬದಲಾಗುತ್ತದೆ. ಆದರೆ ಉತ್ತಮ ಸಂಸ್ಕಾರಗಳು
ನಡೆಯದ ಶೂದ್ರ ಮತ್ತು ಇತರ ಧರ್ಮದವರಿಗೆ ದಿವ್ಯ ಶರೀರಬಾರದು.
ಪ್ರೇತಜನ್ಮದ ಸೂಕ್ಷ್ಮದೇಹ ಮಾತ್ರಸಾಧ್ಯ.

ದ್ವಿಜರಿಗೆ ಸತ್ತೊಡನೆ ಬಂದ ಪ್ರೇತತ್ವ ಮುಗಿಯದೆ ಮುಂದುವರಿದರೆ
ಅದು ಶಿಕ್ಷೆಯಾಗಿ ಅದರಮೂಲಕ ಆ ಪ್ರೇತಗಳಿಗೆ ಆಹಾರದಅಭಾವವೂ ಶುದ್ಧ
ನೀರಿನ ಅಭಾವದ ಪೀಡೆಗಳೂವಿಧಿಸಲ್ಪಡುತ್ತವೆ. ತೀರಾ ಹೊಲಸನ್ನು ತಿನ್ನದೆ
ಉಪಾಯವಿಲ್ಲ ; ಆದರೆ ಅದು ಮೇಲ್ಮಟ್ಟದವರಿಗೆ ಬಹಳಕಷ್ಟ. ಆ ಪ್ರೇತ
ಜನ್ಮ ವ್ಯರ್ಥ, ಆಗ ಏನೂ ಧಾರ್ಮಿಕಸಾಧನೆ ಸಾಧ್ಯವಿಲ್ಲ, ಕಠಿಣಶಿಕ್ಷೆಯ
ರೂಪದ್ದು ಎಂಬ ಭಾವನೆಯೂ ಇರುವುದರಿಂದ ಅವು ಬಿಡುಗಡೆಯಾದರೆ
ಸಾಕೆಂಬ ದುಗುಡದಲ್ಲಿರುತ್ತವೆ. ಇದು ಇತರ ಧರ್ಮದ ಪ್ರೇತಗಳಕಷ್ಟವಲ್ಲ
ಮಕ್ಕಳು ಎಂಥಹೊಸಲನ್ನೂ ತಿನ್ನುತ್ತವೆ, ಇತರರ ಎಂಜಲು, ಮೂತ್ರದ
ಮೇಲೆಬಿದ್ದದ್ದು, ಕೊಳೆತದ್ದು, ಎಂಬ ನಿಷೇಧ ಮಕ್ಕಳು ಅರಿಯವು. ಹಾಗೆ
ತಿನ್ನುವಾಗ ಅವಕ್ಕೆ ಕಷ್ಟವಿಲ್ಲ ; ಅಂತೆಯೇ ಈ ಕಷ್ಟ ಮೇಲ್ಜಾತೀ ಪ್ರೇತಗಳಿಗೆ
ಮಾತ್ರ.

ದ್ವಿಜರಿಗೆಮಾತ್ರ ತಮ್ಮ ಪ್ರೇತಜನ್ಮ ಬಹಳಕಷ್ಟ ಎಂದು ತೋರುವುದಕ್ಕೆ
ಒಂದು ಉಪಮೆಕೊಡಬಹುದು. ತಂದೆತಾಯಿ ಮತ್ತು ಚಿಕ್ಕಮಕ್ಕಳು ದೂರ
ಪ್ರಯಾಣಕ್ಕೆ ಹೋಗಿ ರೈಲ್ವೆನಿಲ್ದಾಣದಲ್ಲಿ ಕಾದಿರುವಾಗ ಬಂಡಿಬರುವುದು
ಬಹಳವಿಳಂಬವಾದರೆ, ಹಿರಿಯರಿಗೆ ಅದರಿಂದಾಗಿ ಮುಂದೆ ಒದಗುವ ಇತರ
ತೊಂದರೆಗಳ ಕಲ್ಪನೆ ಬಂದು ಅವರು ತುಂಬಾಬೇಸರ, ಅಸಮಾಧಾನ, ಪಡು
ತ್ತಾರೆ. ಆದರೆ ಚಿಕ್ಕಮಕ್ಕಳು, ಆಡುತ್ತಿರುತ್ತವೆ ; ಆಯಾಸವಾದಾಗ ಸುಖ
ವಾಗಿ ನಿದ್ರೆ ಮಾಡುತ್ತವೆ ; ಸಮಯ ಹಾಳಾಗುತ್ತದಲ್ಲ ಎಂಬ ಯೋಚನೆಯೇ
ಅವನ್ನು ಪೀಡಿಸುವುದಿಲ್ಲ. ಈ ಮಕ್ಕಳು, ಸುಲಭ ಧರ್ಮಗಳ ಜೀವಾತ್ಮರಂತೆ
ಈ ಎಲ್ಲ ದೃಷ್ಟಿಗಳಿಂದ ಕಂಡಾಗ ನಮ್ಮ ಸನಾತನಧರ್ಮದ ಹೇಳಿಕೆಗೂ
ಪಾಶ್ಚಾತ್ಯ ಪ್ರೇತಸಂಪರ್ಕದವರ ಅನುಭವಕ್ಕೂ ಇರುವ ವ್ಯತ್ಯಾಸಗಳಿಗೆ ಅರ್ಥ
ಬರುತ್ತದೆ. ದ್ವಿಜರಪ್ರೇತಗಳು ಪ್ರೇತತ್ವದಿಂದ ಬಿಡುಗಡೆಗೆಚಡಪಡಿಸುವುದು
ಕೆಲವು ದೃಷ್ಟಾಂತಗಳಕತೆಗಳನ್ನು ಮುಂದೆ ಕೊಡುತ್ತೇನೆ. ಪ್ರೇತಗಳಿಗೆ ಹಿಂಸೆ
ಪಡೆಯಲಿಕ್ಕೆ ನರಕವೇಬೇಕೆಂದಿಲ್ಲ. ಒಬ್ಬ ಸ್ವಪ್ನದಲ್ಲಿ ಭಯಾನಕ ದೃಶ್ಯಕಂಡು

ದರಿ ವೈನಡುಗುವಂತಾಗುತ್ತದೆ. ಒಬ್ಬ ಹುಚ್ಚ ತನ್ನೆದುರಿನಲ್ಲಿ ತನ್ನ ತ್ರು ನಿಂತಿದ್ದಾನೆಂದುಭಾವಿಸಿ ಕೋಪದಿಂದ ಬೈಯ್ಯುತ್ತಾನೆ, ಕೂಗುತ್ತಾನೆ, ಪಳ ದುಗುಡ ಹೊಂದುತ್ತಾನೆ; ಅವನ ಕಷ್ಟ ಪ್ರತ್ಯಕ್ಷ ಅನುಭವಿಸಿದವರ ಷ್ಟಕ್ಕೇನೂ ಕಡಿಮೆಯಲ್ಲ. ಕೆಲವುವಂಟ್ಟಿನ ಯಾತನೆ ರೋಗದಿಂದ ಬರುತ್ತದೆ ದುವಿಪರೀತವಾದರೆ ಮೂರ್ಛೆ ಹೊಂದುತ್ತಾನೆ, ಏಕೆಂದರೆ ಸ್ಥೂಲದೇಹಕ್ಕೆ ಪರೀತಯಾತನೆ ತಾಳುವಶಕ್ತಿ ಅಸಾಧ್ಯ. ನರಕದಯಾತನಾದೇಹದಲ್ಲಿ ಮಾತ್ರ ದುಸಾಧ್ಯ). ರೋಗಗಳು ಮುಗಿಯದೆ ಬಹಳ ಮುಂದುವರಿದರೆಕೆಲವರು ತ್ಮಹತ್ಯೆ ಮಾಡಿಕೊಳ್ಳುವುದುಂಟು. ಮಕ್ಕಳಿಗೆ ಬಹಳಕೆಟ್ಟತಪ್ಪಿಗೂ ದೊಡ್ಡ ರಿಗೆಕೊಟ್ಟಂತೆ ಜೈಲುಶಿಕ್ಷೆ, ಮರಣಶಿಕ್ಷೆ ಕೊಡುವುದೆಂಬುದಿಲ್ಲವಷ್ಟೆ. ಅಂತೆಯೇ ಮಟ್ಟದ ಮಾನವ ಜೀವಾತ್ಮರಿಗೆ ನರಕಶಿಕ್ಷೆಯಿಲ್ಲ. ಅವರಿಗೆಮನೋಕಲ್ಪನೆ ಎಲ್ಲಿಯೇ ವಿಪರೀತ ಹಿಂಸೆಯಾದ ಭಾವನೆಉಂಟುಮಾಡಿ ಶಿಕ್ಷಿಸುವುದುಸಾಧ್ಯ. ವರೆ ಈ ದೇಶದಜನರಿಂದ ಅವರ ಶಾಸ್ತ್ರದಲ್ಲಿಮಾತ್ರ ಬಹಳ ವಿವರಗಳೊಡನೆ ಣುವ ನರಕಯಾತನೆಗಳ ವಿಚಾರ ಪಾಶ್ಚಾತ್ಯರ ಪ್ರೇತಗಳು ತಿಳಕೊಂಡಾಗ ತ್ಮ ಶಿಕ್ಷೆಯ ಕಾಲದ ಕಷ್ಟಗಳೂ ನರಕಯಾತನೆಗಳೇ ಇರಬೇಕೆಂದು ಭಾವಿಸು ದೂ ಸಾಧ್ಯ.

ನಮ್ಮಲ್ಲಿ ಕೆಲವುಪ್ರೇತಗಳು ತಮ್ಮ ಹಿಂದಿನದೇಹದ ಮೂಲಕ ಅನುಭವಿ ತ್ತಿದ್ದ ಬಯಕೆಗಳಿಗೆಚಡಪಡಿಸುತ್ತ, ಅವನ್ನು ಪಡೆಯಲಿಕ್ಕೆ ತಮ್ಮ ಕುಟುಂಬ ನ್ನೇ ಯಾರನ್ನಾದರೂ ಪ್ರವೇಶಿಸಿ ಬಾಧೆಕೊಡುವುದುಂಟು. ಹೀಗೆ ಕೆಲವು ೇತಗಳು ತಮ್ಮ ಈ ಉಪಾಯದಿಂದ ಬಯಕೆಗಳ ಪೂರೈಕೆ ಆದುದು ಕಂಡು, ಮಾನ್ಯಮಂತ್ರವಾದಿಯ ಬೆದರಿಕೆಗೆ ಹೆದರದೆ, ತಾವುಪ್ರೇತ ಎಂದೇ ತಿಳಿಸದೆ, ತ್ತರಕೊಡದೆ, ಇರುವಾಗ ಖ್ಯಾತಕ್ಷೇತ್ರಗಳಿಗೆ ಹೋಗಿ ಅಲ್ಲಿ ಕ್ಷೇತ್ರದಮಹಿಮೆ ಂದ ಬಾಯಿಬಿಡುವಂತಾಗುವುದುಸಾಧ್ಯ. ದತ್ತಾತ್ರೇಯನಅವತಾರವೆಂದು ್ಯತರಾದ ನರಸಿಂಹಸ್ವಾಮಿಯವರು ಅವರ ಲೀಲೆನಡೆಸಿದ್ದ ನರಸವಾಡಿ ತ್ತು ಗಾಣಿಗಾಪುರ (ಗುರುಚರಿತ್ರೆ ನೋಡುವುದು) ಈ ತರದವು. ಕರ್ನಾಟಕ ಲ್ಲಿ ಗೋಕರ್ಣವು ಬಹಳ ಪುರಾತನವಾದ ಅತಿಖ್ಯಾತಕ್ಷೇತ್ರ. ಅಲ್ಲಿನಪಿತೃಸ್ಥಾಳಿ ಬ ಎರಡುಶಿವದೇವಸ್ಥಾನಗಳಲ್ಲಿ ಪ್ರೇತಬಾಧೆ ಇರುವವರನ್ನು ಕ್ಷೇತ್ರಪುರೋ ತರು ಅಕ್ಷತೆಕಾಳುಹಾಕಿ ಪ್ರಶ್ನಿಸಿದಾಗ ಅವು ತಮ್ಮವಿಚಾರ ತಿಳಿಸುವುದುಂಟು. ೇತವು ತಾನುಬಿಟ್ಟುಹೋಗಬೇಕಾದರೆ ಮುಂದೆ ತನ್ನಸುಖಕ್ಕಾಗಿ ಏನೆಲ್ಲಮಾಡ ಕೆಂದೂ ತಿಳಿಸುತ್ತದೆ. ಇವೇನೂ ಗಯಾಶ್ರಾದ್ಧದಂತೆ ಬಹಳಕಷ್ಟದವು, ಖರ್ಚಿ

ನವು, ಅಲ್ಲ ; ಆಹಾರ, ಬಟ್ಟೆ, ವರ್ಷಂಪ್ರತಿ ಅರ್ಪಿಸುವುದು, ಇತ್ಯಾದಿಮಾತ್ರ
ಕೆಲವು ಬ್ರಾಹ್ಮಣ ಪ್ರೇತಗಳು ಕೂಡ ತಮ್ಮ ಮೋಕ್ಷಕ್ಕೆ ದಾರಿತಿಳಿಯ
ಕೇವಲ ಈ ತರದ ಅಲ್ಪಕೇಳಿಕೆ ಮಾಡುವುದುಂಟು. ನಾನು ಕೇಳಿದ ಒಂದ
ಬ್ರಾಹ್ಮಣ ವಿಧವೆ ಗಂಡನ ಸ್ವಂತ ಸಂಪಾದನೆಯು ದೊಡ್ಡ ಆಸ್ತಿಯಿದ್ದವಳ
ಮಕ್ಕಳಿಲ್ಲದವಳು, ದಾಯಾದಿಗಳಿಂದ ದೂರವಾಗಿದ್ದಳು. ಬೇರೆ ಒಂದ
ಕುಟುಂಬದವರು ಅವಳಿಗೆ ಬೇಕಾದಸಹಾಯ ಮಾಡಿ ಒಗ್ಗಿಕೊಂಡಿದ್ದು ಅವಳ
ಮೃತಳಾದಾಗ ಅವಳ ಇಚ್ಛೆಯಂತೆ ಅವಳ ಆಸ್ತಿಪಡೆದರು. ಕುಟುಂಬದವರ
ಅವಳ ಅಂತಿಮಕ್ರಿಯೆ ನಡೆಸಲಿಲ್ಲ. ಆಸ್ತಿಸಿಕ್ಕಿದವರೂ ಕೃತಜ್ಞತೆ ಸಾಲದಾ
ಬೇಕಾದುದನ್ನುಮಾಡಲಿಲ್ಲ. ಬಹಳವರ್ಷಗಳಿಂದ ಆ ಹೆಂಗಸಿನಪ್ರೇತಕ್ಕೆ ಕೇವ
ವರ್ಷಕ್ಕೊಮ್ಮೆ ಅನ್ನ ಸೀರೆಕೊಡುತ್ತ ಬಂದಿದ್ದಾರೆ. ಅವಳ ಹಿಂದಿನಬಾಳ
ಧರ್ಮಕ್ಕೆ ವಿರುದ್ಧವಲ್ಲವಾದ್ದರಿಂದ ಹಸಿವುತೃಷೆಗಳ ವಿಪರೀತಬಾಧೆ ಪ್ರಾಯಶ
ಇಲ್ಲ. ಆದರೆ ಮುಂದಿನಗತಿಯೂ ಇಲ್ಲ. **ಜೀವವಿದ್ದಾಗ ಧಾರಾಳವಾ
ದಾನಧರ್ಮ ಮಾಡದೆ ತನ್ನನ್ನು ಹೊಗಳಿದವರಿಗೆ ಆಸ್ತಿಯನ್ನು ಬಿಟ
ತನ್ನ ಗತಿ ಹಾಳುಮಾಡಿಕೊಂಡಿರುವವಳು ಅವಳು.**

ಪ್ರೇತಪೀಡೆಯ ಲಕ್ಷಣಗಳು

ಇವನ್ನು ತಿಳಿದಿರುವುದುತ್ತಮ. ಡಾಕ್ಟರಿಗೆ ಈ ವಿಚಾರದಲ್ಲಿ ಸ್ವಲ್ಪವ
ನಂಬಿಕೆಯಿಲ್ಲ; ರೋಗಿಯನ್ನುಗುಣಪಡಿಸಲಾರದಿದ್ದಾಗ ಮಂತ್ರವಾದ ಸೂಚಿಸ
ವುದಿಲ್ಲ. ಪ್ರೇತಬಾಧೆಯ ಕೆಲವು ಚಿಹ್ನೆಗಳು ಯಾವವೆಂದರೆ, ಆಗಾಗ ಸ್ಮೃ
ತಪ್ಪಬಹುದು, ಎಚ್ಚರವಿದ್ದಾಗ ಏನೇನೋ ತೋರಬಹುದು, ಮನಸ್ಸ
ಸಂಶಯಗಳುಂಟಾಗುತ್ತಿರುವುದು, ಪ್ರೇತ ಸ್ವಪ್ನದಲ್ಲಿ ತೋರುವುದು, ಏನ
ಕಾರಣವಿಲ್ಲದೆಯೂ ಭಯ, ಹುಚ್ಚುಹಿಡಿಯುವುದು, ಕಾಯಿಲೆಯಿದ್ದು ಅದ
ಕಾರಣವೇ ವೈದ್ಯರಿಗೆ ತಿಳಿಯದಿರುವುದು, ಆಲಸ್ಯ, ಮಂದಬುದ್ಧಿ, ಮನೋ
ವೇದನೆ, ದೇಹದಲ್ಲಿ ಪೇಡೆ, ನಾಡಿಬಡಿತ ಒಮ್ಮೆಹೆಚ್ಚು ಒಮ್ಮೆಕಡಿಮೆ ಪುನ
ಹೆಚ್ಚು ಆಗುತ್ತಿರುವುದು, ಔಷಧಕೊಟ್ಟಾಗ ಕಾಯಿಲೆ ಕಡಿಮೆಯಾದರೆ ಮತ
ಪುನಃ ಹೆಚ್ಚಾಗುವುದು, ಮಕ್ಕಳು ಹುಟ್ಟಿದಂತೆ ನಾಶವಾಗಿ ವಂಶದಹಾನ
ಹೆಂಗಸರಿಗೆ ರಕ್ತಸ್ರಾವ, ಗರ್ಭದಲ್ಲಿನೋವು, ಸಂಕಟ, ಗರ್ಭನಾಶ ಹೀಗೆ ಕೆಲ
ಬಾಧೆಗಳಾಗುವುದುಂಟು. ಇವಕ್ಕೆ ಪರಿಹಾರವಾಗಿ ಧನುಷ್ಕೋಡಿಯ ಸ್ನಾ
(ರಾಮೇಶ್ವರದ ಬಳಿ), ಗಯಾದಲ್ಲಿ ಪಿಂಡಪ್ರದಾನ, ಸಂಹಿತಾಯಾಗ ಮಾಡಿಸ

ನು, ವೇದಪಾರಾಯಣ, ಮಹಾಮಂತ್ರಗಳ ಜಪ, ಭಾಗವತ (ಸಂಸ್ಕೃತ
ೂಲ) ಸಪ್ತಾಹ, ಪರಿಣಾಮಕಾರಿಗಳೆಂದು ಶಾಸ್ತ್ರದಲ್ಲಿದೆ. ಅನುಭವ
ದಲೂ ಸಮರ್ಥಕ್ರಮಗಳಾಗಿ ಕಂಡುಬಂದಿವೆ.

೧. ಪ್ರೇತಗಳು ಗಯಾಶ್ರಾದ್ಧದಿಂದ ಪ್ರೇತತ್ವದಿಂದ ಬಿಡುಗಡೆ ಬಯಸಿದ್ದು

ಕಾಲದ ಕೆಲವು ಕತೆಗಳು

ದ್ವಿಜರಿಗೆ ದೀರ್ಘಕಾಲದ ಪ್ರೇತತ್ವವು ಬಹಳಕಷ್ಟವಾಗಿ ಕಾಣುತ್ತದೆ.
ಸಹನೀಯವೆಂದುತೋರಿ, ಅವರು ಸ್ವಲ್ಪ ಸಮರ್ಥರಾದರೆ ಆ ಬಯಕೆಯು
ವು ಪ್ರೇತಗಳಿಗೆ ಸಾಮಾನ್ಯವಾಗಿರುವ ಅಂಧತ್ವ ಭದಿರತ್ವ ಮೂಕತ್ವ ಗೆದ್ದು
ವು ಅನೇಕವೇಳೆ ಜನರಿಗೆ ತೋರಿಕೊಳ್ಳುತ್ತವೆ. ಅಥವಾ ಯಾರನ್ನಾದರೂ
ಡಿದು ಬಾಧೆಕೊಡುತ್ತವೆ. ಇದರ ದೃಷ್ಟಾಂತಕ್ಕೆ ಕೆಲವು ಕತೆಗಳನ್ನು ಕೊಡ
ಬಂದು.

ಗಯಾಶ್ರಾದ್ಧ ಕುರುಡುನಂಬಿಕೆ ಅಲ್ಲ

ಶ್ರೀ ವಿಜಯ ಕೃಷ್ಣಗೋಸ್ವಾಮಿ ಎಂಬವರು ಕಲ್ಕತ್ತಾದ ಬ್ರಹ್ಮೊ
ಮಾಜದಲ್ಲಿದ್ದವರು ಅದರಿಂದ ತೃಪ್ತರಾಗದೆ ಅದನ್ನು ಬಿಟ್ಟು ಗಯಾ
ತ್ರದಲ್ಲಿ ತೀವ್ರವಾದ ಆಧ್ಯಾತ್ಮಿಕ ಸಾಧನೆಮಾಡುತ್ತಿದ್ದರು. ಕಲ್ಕತ್ತಾದ
ಹ್ಮೊಸಮಾಜದ ಅವರ ಹಿಂದಿನ ಪರಿಚಿತನೊಬ್ಬ ಗಯಾಕ್ಕೆ ಏಕೋ
ದಾಗ ಅವರೊಡನೆ ಮಾತನಾಡುತ್ತ, ತನ್ನ ತಂದೆ ಸ್ವಪ್ನದಲ್ಲಿ ತೋರಿ
ಂಡು ಗಯಾದಲ್ಲಿ ತನಗೆ ಪಿಂಡ ಹಾಕಲು ಪುನಃ ಪುನಃ ಕೇಳುತ್ತಿದ್ದಾನೆ
ರೆ ಬ್ರಹ್ಮೋದೇವರು ಅದೆಲ್ಲ ಕುರುಡುನಂಬಿಕೆ ಎಂದಿರುವುದರಿಂದ ತಾನು
ದನ್ನು ಮಾಡಲಾರೆ, ಎಂದ. ಗೋಸ್ವಾಮಿಯವರು ಆ ಪ್ರೇತದ ವಿಚಾರ
ಕರುಣೆ ತಾಳಿ, "ನೀನು ಹಣಕೊಡು, ನಾನು ಪಿಂಡಕ್ಕೆ ವ್ಯವಸ್ಥೆ ಮಾಡಿಸು
ನೆ" ಎಂದರು. ಅವ ಒಪ್ಪಿದ. ಗೋಸ್ವಾಮಿಯವರು ಪುರೋಹಿತ
ದ ಆ ಕೆಲಸ ಮಾಡಿಸುವಾಗ ಅವ ನೋಡಲಿಕ್ಕೆ ಬಂದ. ಅವನಿಗೆ ಫಕ್ಕನೆ
ನ ತಂದೆ ಕ್ಷೇತ್ರ ಪುರೋಹಿತರ ಕೈಗಳಿಂದ ಪಿಂಡವನ್ನು ಅತಿ ಭಕ್ತಿಯಿಂದ
ಕರಿಸುವುದು ಪ್ರತ್ಯಕ್ಷ ತೋರಿತು. ಶಾಸ್ತ್ರವು ಅರ್ಥವಿಲ್ಲದ್ದಲ್ಲ ಎಂಬುದು
ಅವನಿಗೆ ಸರೀ ಅರ್ಥವಾಯಿತು (ಟ್ರುತ್ ೨೬-೮-೧೯೬೦).

೨. ಡಾಕ್ಟರರ ತಂದೆ ಮುಕ್ತರಾದದ್ದು

ಒಬ್ಬ ಡಾಕ್ಟರರು ತಮ್ಮ ಮೃತ ತಂದೆಯ ಫೋಟೋವನ್ನು ತಮ ಚಿಕಿತ್ಸಾಲಯದ ಮಂದಿರದಲ್ಲಿ ತೂಗುಹಾಕಿದ್ದರು. ಒಂದುದಿನ ಅಲ್ಲಿಗೆ ಚಿಕಿತ ಗೆಂದು ಬಂದ ರೋಗಿಯೊಬ್ಬ ಆ ಫೋಟೋವನ್ನು ಕಂಡು ಗುರುತಿಸಿದ "ಇವರು ಪ್ರೇತರೂಪದಲ್ಲಿ ನನ್ನಲ್ಲಿ ಆಗಾಗ ತೋರಿಕೊಳ್ಳುತ್ತಾರೆ, ಇವರ ಯಾರು ?" ಎಂದು ಡಾಕ್ಟರರನ್ನು ಕೇಳಿದ. ಡಾಕ್ಟರರು ಅವ ಎಲ್ಲಿ ವಾಸಿಸ ವುದು ಎಂದು ವಿಚಾರಿಸಿ ತಿಳಕೊಂಡಾಗ "ಕೆಲವು ವರ್ಷಗಳ ಹಿಂದೆ ನಾವು ಮನೆಯಲ್ಲಿ ವಾಸಿಸುತ್ತಿದ್ದೆವು ; ತನ್ನತಂದೆ ಅಲ್ಲಿ ಮೃತರಾದುದು" ಎಂದರು ಈ ಕತೆಯನ್ನು ಕೇಳಿದ ಡಾಕ್ಟರರ ಬಂಧುಗಳು ಮತ್ತು ಮಿತ್ರರು ಅವರನ ಒತ್ತಾಯಿಸಿ ಗಯಾಕ್ಕೆಹೋಗಿ ತಂದೆಗೆ ಅಲ್ಲಿ ಶ್ರಾದ್ಧಮಾಡುವಂತೆ ಮಾಡಿದರು ಆಮೇಲೆ ರೋಗಿಯ ಮನೆಯಲ್ಲಿ ಆ ಪ್ರೇತತೋರುವುದು ನಿಂತಿತು. (ಟ್ರಿತ ೨೪-೧೧-೧೯೬೭). ಕೆಲವರು ತಂದೆತಾಯಿಗಳ ಮೇಲೆ ತಮಗಿರುವ ಪ್ರೀತಿ ಗೌರವ ತೋರಿಸಲಿಕ್ಕೆ ಅವರ ಫೋಟೋ ಇಟ್ಟುಕೊಳ್ಳುತ್ತಾರೆ. ಆದರೆ ತಂದೆತಾಯಿ ನಂಬುತ್ತಿದ್ದ, ಅವರಿಗೆ ಪ್ರೇತತ್ವ ತಪ್ಪಿಸುವ, ಆಹಾರದ ಸು ಕೊಡುವ, ಅಂತಿಮಕ್ರಿಯೆ, ಶ್ರಾದ್ಧಮಾಡುವುದಿಲ್ಲ ! ಇದು ಪ್ರೀತಿಯ ಎಂ ಅರ್ಥವಿಲ್ಲದ ರೂಪ !

೩. ಪ್ರೇತತ್ವದ ನಿವಾರಣೆಯ ಕೆಲವು ಇತರ ಕತೆಗಳು : ಗೀತಾ, ಗಂಗಾಸ್ನಾನ, ಗಾಯತ್ರೀ, ಗಯಾಶ್ರಾದ್ಧ, ಗೋಸೇವೆಗಳಿಂ ಪ್ರೇತತ್ವದಿಂದ ಮುಕ್ತಿ

ಕಲ್ಯಾಣದ ಪರಲೋಕ ಮತ್ತು ಪುನರ್ಜನ್ಮಾಂಕದಲ್ಲಿ ಶ್ರೀ ವೆಂಕ ಲಾಲ್‌ಜೀಔಜ ಎಂಬವರು, ಸುಮಾರು ೮೦ ವರ್ಷಗಳಹಿಂದೆ ಪ್ರಸಿದ್ಧರಾಗಿರ ಸ್ವಾಮಿ ಪುರುಷೋತ್ತಮಾಚಾರ್ಯ ಮಹಾರಾಜರವರು ಅವರ ಜೀವನಕಾ ದಲ್ಲಿ ಈ ಭಾಗದಲ್ಲಿ ನಡೆಸಿದ್ದ ಘಟನೆಗಳ ವಿವರಗಳನ್ನು ಅವರ ಶಿಷ್ಯರಿಂ ಸಂಗ್ರಹಿಸಿ ತಿಳಿಸಿರುವರು.

ಗೀತಾ : ಸ್ವಾಮೀಜಿಯವರಿದ್ದ ಪಟ್ಟಣದ ಹೊರಭಾಗದಲ್ಲಿ ಒಂ ಕಡೆಯಲ್ಲಿ ವಾಸಿಸುತ್ತಿದ್ದ ಭಕ್ತರು ಅಲ್ಲಿ ರಾತ್ರಿ ಬೇರೆಬೇರೆ ರೂಪಗಳು ತೋ ಕೊಳ್ಳುವುದು, ಪಶುಪಕ್ಷಿಗಳು ಕಿರುಚುವುದು, ಕಲ್ಲುಗಳು ಹತ್ತಿರಹತ್ತಿ ಬೀಳುತ್ತಾ ಬಂದುದು, ನಡೆದು ವಠಾರದ ಜನರು ಭೂತಪ್ರೇತಗಳ ಭಯದಿಂ

ರಾತ್ರಿ ಹೊರಗೆಚಲಿಸಲಾರದಾದುದು ತಿಳಿಸಿದರು. ಸ್ವಾಮೀಜಿಯವರು ಒಂದು ರಾತ್ರಿ ಆ ವಠಾರದಲ್ಲಿಯೇ ಉಳಕೊಂಡು ಈ ಘಟನೆಗಳು ನಿಜವೆಂದು ತಿಳಕೊಂಡರು. ಅನಂತರ ಊರ ೧೮ ಪಂಡಿತರನ್ನು ಕೂಡಿಸಿ ೧೮ ದಿನ ಅಲ್ಲಿ ಭಗವದ್ಗೀತಾ ಪಠನ ಬೆಳಗ್ಗೆ ಮತ್ತು ರಾತ್ರಿ ಸುಮಾರು ೪–೪ ಗಂಟೆ ನಡೆಸಿದರು. ಕಡೆಯದಿನ ಪೂರ್ಣಾಹುತಿಗೆ ಗೀತೆಯ ೧೧ನೇ ಅಧ್ಯಾಯದ ಶ್ಲೋಕಗಳು ೩೫ರಿಂದ ೪೬ರವರೆಗಿನವುಗಳಿಂದ ಹವನ ಮಾಡಿಸಿದರು. ಬ್ರಾಹ್ಮಣ ಭೋಜನ ಮಾಡಿಸಿದರು. ಮತ್ತು ಗೀತೆಯ ೧೧ನೇ ಅಧ್ಯಾಯದ ೩೬ನೇ ಶ್ಲೋಕವನ್ನು ಕಲ್ಲುಗಳಲ್ಲಿ ಕೆತ್ತಿಸಿ ಅಲ್ಲಲ್ಲಿ ಕಟ್ಟಡಗಳಿಗೆ ಸೇರಿಸಿದರು. ಅನಂತರ ಅಲ್ಲಿ ಯಾವತರದ ಪ್ರೇತಬಾಧೆಯೂ ಉಂಟಾಗಲಿಲ್ಲ (ಇದು ಪ್ರೇತಗಳ ಉಪದ್ರವಲ್ಲ. ಭೂತದ ಉಪದ್ರವೇ ಇರಬೇಕು).

ಗಂಗಾಸ್ನಾನ : ಒಬ್ಬರು ಸೇಠರು ಧರ್ಮಪಾರಾಯಣರು, ಸಾತ್ವಿಕ ಸ್ವಭಾವದವರು, ಗೋವು, ಬ್ರಾಹ್ಮಣ, ಸಾಧು, ಮಹಾತ್ಮರ ಭಕ್ತರೂ, ದಯಾಳೂ ಆಗಿದ್ದರು. ಅವರು ಸ್ವಾಮೀಜಿಯವರ ಅನನ್ಯಭಕ್ತರಾಗಿದ್ದರು. ಅವರು ಮರಣಹೊಂದಿದಾಗ ಸ್ವಾಮೀಜಿಯವರು ಬದರಿಯಾತ್ರೆಯಲ್ಲಿದ್ದರು. ಅವರು ಹಿಂದೆ ಬಂದೊಡನೆ ಸೇಠರ ಹಿರೇಮಗ ಬಂದು, ತಂದೆ ಮೃತರಾದದ್ದು ತಿಳಿಸಿ ಅವರು ಈಗ ಪ್ರೇತರೂಪದಲ್ಲಿ ಆಗಾಗ ತೋರಿಸಿಕೊಳ್ಳುತ್ತಿದ್ದಾರೆ, ನನ್ನಮೈಮೇಲೆ ಆವೇಶ ಬಂದಂತೆಯೂ ಆಗುವುದುಂಟು ಎಂದ. ಸ್ವಾಮೀಜಿಯವರು, ಅಂಥ ಸಾತ್ವಿಕನಿಗೆ ಈ ಗತಿಯೇ! ಎಂದರು. ಅಂದು ರಾತ್ರಿ ಸ್ವಾಮೀಜಿಗೆ ಹತ್ತಿರ ಕಾಲುಸಪ್ಪಳ ಆದಂತೆ ಕೇಳಿಎಚ್ಚರಗೊಂಡಾಗ ಕಾಲಬುಡದಲ್ಲಿ ಆ ಸೇಠರ ಪ್ರೇತ ತೋರಿತು. ಮತ್ತು ಅತ್ಯಂತ ದೀನಸ್ವರದಿಂದ ತನ್ನ ವಿಚಾರ ಹೇಳಿತು. ಒಬ್ಬ ಮಹಾತ್ಮರು ಒಂದು ತೀರ್ಥದ ಬಳಿಯಲ್ಲಿ ಧರ್ಮಶಾಲೆ ಕಟ್ಟಲಿಕ್ಕಾಗಿ ಸ್ವಲ್ಪ ಹಣ ಸಂಗ್ರಹಮಾಡಿದ್ದನ್ನು ಆ ಶೇಠರ ಹತ್ತಿರ ಇಡಲು ಕೊಟ್ಟಿದ್ದರು. ಸ್ವಲ್ಪಕಾಲದ ಅನಂತರ ಅವರು ಹರಿದ್ವಾರದ ಕುಂಭಮೇಳಕ್ಕೆ ಹೋದವರು ಅಲ್ಲೇ ಮೃತರಾದರು. ಆ ಹಣವನ್ನು ತಾನು ಸ್ವಂತವಾಗಿ ಮಾಡಿಕೊಂಡುದರಿಂದ ಈಗ ಪ್ರೇತತ್ವ ಬಂತು ಎಂದು ಪ್ರೇತ ಹೇಳಿತು.

ಮರುದಿನ ಸ್ವಾಮೀಜಿಯವರು ಆ ಸೇಠರ ಹಿರೇಮಗನನ್ನು ಕರೆಸಿ ನೀನು ಆ ಮಹಾತ್ಮ ಇಟ್ಟ ಹಣ, ಅದಕ್ಕೆ ಈವರೆಗಿನ ಬಡ್ಡಿ ಮತ್ತು ಸ್ವಲ್ಪ ಸ್ವಂತ ಹಣಸೇರಿಸಿ ಹರಿದ್ವಾರಕ್ಕೆ ಹೋಗಿ ತಂದೆಯ ಹೆಸರಲ್ಲಿ ಸಾಧುಗಳಿಗೆ, ಮಹಾತ್ಮರಿಗೆ ಅನ್ನದಾನ ವಸ್ತ್ರದಾನಗಳ ಸೇವೆ ಮಾಡಬೇಕು. ಹಣವನ್ನೆಲ್ಲ

ಸಾಧುಗಳ ಸೇವೆಯಲ್ಲಿ ಖರ್ಚು ಮಾಡಿದಾಗ ತಂದೆಗೆ ಖಂಡಿತ ಸದ್ಗತಿ ಆಗು ತ್ತದೆ" ಎಂದು ಬೋಧಿಸಿದರು. ಮಗ ಹಾಗೆಯೇ ಮಾಡಿದಾಗ ಭಗವತೀ ಭಾಗೀರಥಿಯು ಸೇತರಿಗೆ ಪ್ರೇತತ್ವದಿಂದ ಮುಕ್ತಿಕೊಟ್ಟಳು.

ಗಾಯತ್ರೀ : ಒಬ್ಬ ಮನುಷ್ಯನ ಶತ್ರುವೊಬ್ಬ ಅವನ ಮೇಲೆ ಮಾಟ ಮಾಡಿ ಅವನ ಬುದ್ಧಿ ಕೆಡಿಸಿದ. ಅವ ಬುದ್ಧಿ ಇಲ್ಲದವನಂತಾದ. ಅವನ ಬಂಧು ಗಳು ಅವನಿಗೆ ಮದ್ದು, ಮಂತ್ರವಾದ, ಸಾಧು ಸನ್ಯಾಸಿಗಳಿಂದ ಚಿಕಿತ್ಸೆ ಮುಂತಾದ ಹಲವು ಪ್ರಯೋಗಗಳನ್ನು ಮಾಡಿಸಿದರು ; ಪ್ರಯೋಜನವಾಗ ಲಿಲ್ಲ. ಸ್ಥಿತಿ ಕೆಡುತ್ತಲೇಬಂದು ರೋಗಿಯು ಸತ್ತಾನೆಂಬ ಭಯ ಉಂಟಾ ಯಿತು. ಆ ಸ್ಥಿತಿಯಲ್ಲಿ ಅವನನ್ನು ಸ್ವಾಮೀಜಿಯವರಲ್ಲಿಗೆ ತಂದರು. ಅವರು "ಗಾಯತ್ರೀ ಮಂತ್ರ ಈ ಲೋಕದಲ್ಲಿ ಸಿದ್ಧಿಪ್ರದ, ಪರಲೋಕದಲ್ಲಿ ಮೋಕ್ಷಪ್ರದ, ಆದ್ದರಿಂದ ಉಪನಯನವಾದ ದ್ವಿಜನೊಬ್ಬನು ನಿತ್ಯವೂ ಶುದ್ಧ ಮಾಡಿಕೊಂಡು ಕುಳಿತು ನೀರನ್ನು ಗಾಯತ್ರೀ ಮಂತ್ರದಿಂದ ಅಭಿಮಂತ್ರಿಸಿ ಕುಡಿಸಲಿ ; ಮಂತ್ರ್ತ ಮೈಮೇಲೆ ಪ್ರೋಕ್ಷಣೆಮಾಡಲಿ; ಜಪಕ್ಕೆ ಕುಳಿತಲ್ಲಿ ರೋಗಿ ರಾತ್ರಿ ಮಲಗಲಿ, ಗುಣ ಹೊಂದುತ್ತಾನೆ" ಎಂದರು. ರೋಗಿಯ ದೊಡ್ಡ ಅಣ್ಣನೇ ಸ್ವಾಮೀಜಿಯವರ ಈ ನಿರ್ದೇಶದಂತೆ ಗಾಯತ್ರೀ ಅನುಷ್ಠಾನ ಮಾಡಿದ. ಆದರ ಪ್ರಭಾವದಿಂದಾಗಿ ರೋಗಿ ಸಂಪೂರ್ಣ ಗುಣಹೊಂದಿ ಹೇಳಿದ, ತಾನು ಪ್ರಥಮ ಸಾರಿಗೆ ಗಾಯತ್ರೀ ಮಂತ್ರದ ನೀರು ಕುಡಿದಾಗಲೇ, ಮಂತ್ರಜಲದ ಪ್ರೋಕ್ಷಣೆ ಆದಾಗಲೇ, ನನ್ನ ದೇಹಹೊಕ್ಕಿದ್ದ ದುಷ್ಟಹೊರಟು ಹೋದ. ಆಮೇಲೆ ದೇಹ ಮನಸ್ಸು ಶುದ್ಧವಾಗುತ್ತ ಬಂತು ಎಂದ. ಆಮೇಲೆ ಅವನೂ ಚೆನ್ನಾಗಿ ಗಾಯತ್ರೀ ಜಪಮಾಡುತ್ತ ಬಂದ.

ಗಯಾಶ್ರಾದ್ಧ : ಒಬ್ಬಳುಹೆಂಗಸು ಯೌವನದಲ್ಲಿರುವಾಗಲೇ ಒಂದು ಮಗುವನ್ನುಹೆತ್ತು ಮೃತಳಾದಳು. ಅವಳ ಪತಿ, ತಂದೆತಾಯಿಯರ ಒತ್ತಾಯ ದಿಂದ ಪುನಃ ವಿವಾಹವಾದ. ಅವನ ಎರಡನೆಯ ಪತಿಯಮೇಲೆ ಪ್ರಥಮ ಪತ್ನಿಯು ಆವೇಶ ಬರಲಾರಂಭಿಸಿದಳು. ಕಾಯಿಲೆಗೆ ಬೇರೆ ಚಿಕಿತ್ಸೆಗಳು ಪ್ರಯೋಜನವಾಗದ್ದರಿಂದ ಪೂಜ್ಯ ಸ್ವಾಮೀಜಿಯವರ ಸಲಹೆಕೇಳಿದ್ದಾಯಿತು. ಅವರು ತಾನು ನೋಡಿ ಹೇಳುತ್ತೇನೆ ಎಂದರು. ಅವಳಿಗೆ ಆವೇಶ ಬಂದಾಗ ಅವಳನ್ನು ಅವರಮುಂದೆ ಕರಕೊಂಡುಬಂದರು. ಅವರನ್ನು ದೂರದಿಂದ ಕಂಡೊಡನೆ ಅವಳು ಅಡ್ಡಬಿದ್ದಳು. ಅವರು ಒಂದು ವಿಷ್ಣು ಸಹಸ್ರನಾಮದ ಶ್ಲೋಕ ಹೇಳಿ, ಮುಂಚಿನ ಹೆಂಡತಿಯ ಹೆಸರುಹೇಳಿ ನೀನು ಅವಳೋ ಎಂದು

ಳಿದರು. ಅವಳು ಹೌದೆಂದಳು. "ನೀನು ಉತ್ತಮವಾಗಿ ತೋರುತ್ತಿ, ಏಕೆ
ಗೆ ಮಾಡುವೆ" ಎಂದು ಕೇಳಿದ್ದಕ್ಕೆ "ನನ್ನ ದೋಷ ತೆಗೆಯಿರಿ ; ಮುಕ್ತಿಗೆ
ರಿತೋರಿಸಿ, ನಿಮ್ಮ ವಿಷ್ಣುಸಹಸ್ರನಾಮದ ಶ್ಲೋಕ ಕೇಳಿ ಮನಸ್ಸಿಗೆ ಬಹಳ
ಂತತೆ ಬಂದಿದೆ" ಎಂದಳು. ಅವಳ ಪತಿಯುಹತ್ತಿರ, ವಿಷ್ಣುಪಾದವಿರುವ
ರೂಕ್ಷೇತ್ರದಲ್ಲಿ ಪಿಂಡಹಾಕಿಸಲು ಸ್ವಾಮೀಜಿಯುವರು ಹೇಳಿದರು. ಹಾಗೆ
ಾಡಿದಾಗ ತಾನು ಪ್ರೇತತ್ವದಿಂದ ಮುಕ್ತನಾದೆ ಎಂಬ ಸೂಚನೆ ಪತಿಗೆ ಸ್ವಪ್ನ
ಲ್ಲಿ ಅವಳಿಂದ ಬಂತು!

ಗೋಸೇವೆ : ಪೂರ್ವಬಂಗಾಳದ ಒಂದುದೊಡ್ಡ ಜಾಗ ಮತ್ತು ಗೋಣಿ
ಟ್ಟಿ ಕಾರ್ಖಾನೆ ಬಹಳ ಸುಲಭದರಕ್ಕೆ ಮಾರಾಟಕ್ಕಿತ್ತು. ಕಾರಣ, ಅದನ್ನು
ದೆ ಇಟ್ಟುಕೊಂಡವರೆಲ್ಲ ತಪ್ಪದೆ ನಷ್ಟ ಹೊಂದಿದ್ದರು, ತೊಡಕುಗಳಲ್ಲಿ
ಬೀಳುತ್ತಿದ್ದರು. ಆದ್ದರಿಂದ ಅದನ್ನು ತಕ್ಕೊಳ್ಳಲು ಯಾರೂ ಮುಂದೆ
ುತ್ತಿರಲಿಲ್ಲ. ಅದರ ಅತ್ಯಂತ ಆಕರ್ಷಣೀಯವಾದ ಬೆಲೆ ಕಂಡು ಒಬ್ಬರು
ಂಡುಕೊಂಡರು. ಆದರೆ ಅವರಿಗೂ ಅನಂತರ ಆರ್ಥಿಕ ಮತ್ತು ಮಾನಸಿಕ
ೊಡಕುಗಳು ಬಾಧಿಸಲಾರಂಭಿಸಿದವು. ಪುಣ್ಯವಶಾತ್ ಶ್ರೀಸ್ವಾಮೀಜಿಯುವರು
ೀ ಜಗನ್ನಾಥ ಜಾತ್ರೆಗೆ ಹೋದವರು ಕಲ್ಕತ್ತಾಕ್ಕೆ ಬಂದದ್ದು ಕೇಳಿ ಅವ
ುಡನೆ ಮಿಲ್ಲಿನ ಮಾಲೀಕರು ತಮ್ಮ ಸಮಸ್ಯೆ ಹೇಳಿಕೊಂಡರು. ಅವರನ್ನು
ಕಾರ್ಖಾನೆಗೂ ಕರಕೊಂಡುಹೋದರು. ನದೀ ದಡದಲ್ಲಿರುವ ಆ ವಿಶಾಲ
ದ ಜಾಗಕಂಡು ಸ್ವಾಮೀಜಿ ಸಂತೋಷಪಟ್ಟರು. ಅದರ ಒಂದುಭಾಗದಲ್ಲಿ
ದು ಗೋಶಾಲೆ ಕಟ್ಟಬೇಕು, ಯಥಾಶಕ್ತಿ ಗೋಸೇವೆ ಮಾಡಬೇಕು, ಒಂದು
ಗೋಪಾಲಮಂದಿರ ಕಟ್ಟಬೇಕು ಎಂದು ಬೋಧಿಸಿದರು. ಹಾಗೆ ಮಾಡಿ
ಗ ಕಾರ್ಖಾನೆ ಚೆನ್ನಾಗಿ ಲಾಭ ತಂದಿತು. ಅದನ್ನು ವೃದ್ಧಿಮಾಡಲಿಕ್ಕೂ
ನ್ಯವಾಯಿತು.

೧,೦೦೦ ವರ್ಷ ಪ್ರೇತನಾಗಿದ್ದ ಮುಸಲ್ಮಾನನ ಉದ್ಧಾರ

ಈ ಕತೆಯೂ ಕಲ್ಯಾಣದ ಪುನರ್ಜನ್ಮಾಂಕದಲ್ಲಿ ಶ್ರೀ ರಾಮಚರಣ
ಪಜೀ ಎಂಬವರಿಂದ ಪ್ರಕಟಿಸಲ್ಪಟ್ಟಿತ್ತು. ಒಂದುಪಿಶಾಚವು ಮನಮೋಹನ
ನೆಂಬವನನ್ನು ಹಿಡಿದುಬಾಧಿಸುತ್ತಿತ್ತು. ಆದರೆ ಮನಮೋಹನಸಿಂಹನನ್ನು
ಈಶ್ವರಸಿಂಪಜೀ ಮಹಾರಾಜರೆಂಬವರು ಕೃಪೆಮಾಡಿ ೧೯೩೮ ಆಗಸ್ಟ್
ಪ್ರೇತಬಾಧೆಯಿಂದ ಬಿಡಿಸಿದರಲ್ಲದೆ, ಆ ಪ್ರೇತಕ್ಕೂ ಪ್ರೇತತ್ವ ನಾಶವಾಡಿ

ದರು. ಪಿಶಾಚವು ಮನಮೋಹನಸಿಂಹನನ್ನು ಹಿಡಿದಿದ್ದಾಗ ತನ್ನ ಕತೆ ಹೇಳಿತ್ತು. ಅದರ ಆಧಾರದಮೇಲೆ ಕಲ್ಯಾಣದಲ್ಲಿ ಕತೆ ಬಂದದ್ದು. ಅದು ಹಾಗೆ ತನ್ನ ಕತೆ ಹೇಳುವಾಗ ಕುರಾನಿನ ಹೇಳಿಕೆಗಳನ್ನು ಉದಹರಿಸುತ್ತಿತ್ತು. ಆದರೆ ಯಾರ ಬಾಯಿಂದ ಹೇಳುತ್ತಿತ್ತೋ ಆ ಮನಮೋಹನಸಿಂಹನಿಗೆ ಕುರಾನಿನ ಪರಿಚಯ ವಿರಲಿಲ್ಲ.

ಪ್ರೇತ ಹೇಳಿದ ಕತೆ—"ನನ್ನ ಹೆಸರು ಸುಲೇಮಾನ್. ನಾನು ಇರಾನಿನ ಮುಸಲ್ಮಾನರವ. ಬಾದಶಾನಾದಿರ್ಶಾನು ಈ ದೇಶ ಕೊಳ್ಳೆಹೊಡೆಯಲು ಬಂದಾಗ ಅವರ ಪರಿವಾರದಲ್ಲಿ ಬಂದೆ. ಅನಂತರ ಶಹರಾನಪುರದಲ್ಲಿ ನೆಲಸಿ ಒಬ್ಬಳನ್ನು ಮದುವೆಯಾದೆ, ಎರಡುಗಂಡು, ಎರಡುಹೆಣ್ಣು ಮಕ್ಕಳಿದ್ದರು. ನನ್ನ ಮನೆಯ ಹತ್ತಿರದಲ್ಲೇ ಒಬ್ಬ ಹಿಂದೂ ಮಂತ್ರವಾದಿಯಿದ್ದ. ಅವನೇ ಈಗ ಮೋಹನಸಿಂಹನಾದವ. ಅವ ಮಂತ್ರ ಮಾಟಗಳನ್ನಲ್ಲದೆ ವಂಚನೆಕೂಡ ಮಾಡುತ್ತಿದ್ದ. ಅವ ನನ್ನ ಮಗಳ ಸಂಬಂಧ ಬೆಳೆಸಿದ್ದುದು ತಿಳಿದು ಇಬ್ಬರಿಗೂ ಗದರಿಸಿದೆ, ಬುದ್ಧಿ ಹೇಳಿದೆ, ಸರ್ಕಾರಕ್ಕೂ ದೂರುಕೊಟ್ಟೆ, ಪ್ರಯೋಜನವಾಗ ಲಿಲ್ಲ. ನನ್ನ ಮರಣಕಾಲ ಬಂತು. ಆದರೆ ಹಿಂದೂ ಮಂತ್ರವಾದಿಗೆ ಪ್ರತೀಕಾರ ಮಾಡಲೇಬೇಕು ಎಂಬ ಛಲಹೋಗಲಿಲ್ಲ. ಮರಣಕಾಲದಲ್ಲಿ ಯಮದೂತರು ಬಂದು ನನ್ನನ್ನು ತುಂಬಾ ಪೀಡಿಸುತ್ತ ಕೊಂಡುಹೋದರು. ಸುಮಾರು ಒಂದು ವರ್ಷದ ಅನಂತರ ನನ್ನನ್ನು ಯಮಧರ್ಮರಾಯನ ಮುಂದೆ ನಿಲ್ಲಿಸಿದರು. ಚಿತ್ರಗುಪ್ತರು ನನ್ನ ಪಾಪ ಓದಿ ಹೇಳಿದರು. ಯಮಧರ್ಮರಾಯರು "ನಿನಗೆ ಕುಂಭೀಪಾಕ ನರಕದಲ್ಲಿ ಶಿಕ್ಷೆ, ಅನಂತರ ೧,೦೦೦ ವರ್ಷ ಪ್ರೇತಜನ್ಮ, ಅದರ ಅಂತ್ಯದಲ್ಲಿ ಮಂತ್ರವಾದಿಯ ಬಗ್ಗೆ ನಿನ್ನ ಪ್ರತೀಕಾರ ತೀರಿಸಿಕೋ. ಆದರೆ ಅವನ ಮೂಲಕವೇ ಮಹಾಪುರುಷರ ದರ್ಶನವಾಗಿ ಪ್ರೇತತ್ವದಿಂದ ಬಿಡುಗಡೆ ಯಾಗುತ್ತದೆ" ಎಂದರು.

ನರಕದಲ್ಲಿ ಕಸ, ಮಲ, ರಕ್ತ, ರಸಿಕೆ, ಬೆಂಕಿ ಮುಂತಾದವುಗಳಿಂದ ಬಹಳ ಕಷ್ಟ ಪಡಬೇಕಾಯಿತು. ಆಮೇಲೆ ಮೊಗಲ್‌ಖೇಡವೆಂಬಲ್ಲಿ ಒಂದು ಗೋರಿಯ ಬಳಿಯಲ್ಲಿ ಪ್ರೇತವಾಗಿ ಬಾಳಿದೆ. ಗೋರಿಗೆ ಬರುವವರು ನನಗೆ ಕಾಣುತ್ತಿದ್ದರು; ನಾನು ಅವರಿಗೆ ತೋರುತ್ತಿರಲಿಲ್ಲ. ನನ್ನೊಡನೆ ಐದು ಬೇರೆ ಪ್ರೇತಗಳಿದ್ದವು. ಅವಲ್ಲಿ ನಾಲ್ಕಕ್ಕೆ ನನಗಿಂತ ಎಷ್ಟೋ ಅಧಿಕ ಕಾಲದ ಪ್ರೇತಜನ್ಮಗಳ ಶಿಕ್ಷೆ ಗಳಿದ್ದುವು. ೧,೦೦೦ ವರ್ಷ ಮುಗಿಯುವಾಗ ಒಬ್ಬ ಬಂದು ಗೋರಿಯ ಬಳಿ ಮೂತ್ರ ಮಾಡಿದ. ಸಿಟ್ಟಿಂದ ಅವನನ್ನು ನೋಡಿದೆ. ಅವನೇ ಆ ಮುಂದಿನ

ನೋ ಮಂತ್ರವಾದಿ ಎಂದು ಗುರುತು ಸಿಕ್ಕಿತು. ಪ್ರತೀಕಾರದ ನಿರ್ಧಾರ ಗೆ ಬಂದು ಅವನನ್ನು ಹಿಡಿದು ಪ್ರವೇಶಿಸಿದೆ. ೭ವರ್ಷ ಹಾಗೆ ಇದ್ದೆ. ರೆ ವಿಪರೀತ ಉಪದ್ರ ಕೊಡಲಿಲ್ಲ. ಏಕೆಂದರೆ ಅವನ ಮೂಲಕ ಮಹಾತ್ಮ ಪರಿಹಾರ ಎಂಬುದು ನೆನಪಲ್ಲಿತ್ತು.

ಪ್ರೇತಜನ್ಮ ಬಹಳಕಷ್ಟ. ಆಹಾರಕ್ಕೆ ಮೂಳೆನೆಕ್ಕುವುದು, ಕೊಳಕು ನ್ನುವುದು, ರಕ್ತ ಕುಡಿಯುವುದು ಮಾಡುತ್ತಿದ್ದೆ. ಬಾಯಾರಿಕೆಯಾಗಿ ಕೂಗು , ಆದರೆ ಯಾರಿಗೂ ಕೇಳುತ್ತಿರಲಿಲ್ಲ. ಪ್ರೇತಗಳು ಭಜನೆ ಮುಂತಾದ ನ್ನು ಮಾಡುವಲ್ಲಿ ಹೋಗಲಾರವು; ಮೈ ಸುಡುತ್ತದೆ. ನನಗೆ ಪ್ರೇತಜನ್ಮ ಕ್ಕೆ ಕಾರಣ ನಾನೂ ಮಂತ್ರವಾದ ಮಾಡುತ್ತಿದ್ದವ; ಪ್ರೇತ ಓಡಿಸು ೂ ಮಾಡುತ್ತಿದ್ದೆ; ಇತರರನ್ನು ವಂಚಿಸುತ್ತಿದ್ದೆ; ಪರಸ್ತ್ರೀಯರನ್ನು ಹರಣ ಮಾಡುತ್ತಿದ್ದೆ. ಮೋಹನಸಿಂಹನಿಗೆ ಮಾಡಿದ ಚಿಕಿತ್ಸೆಯಿಂದಾಗಿ ೂ ನಂತರ ಉಪದೇಶ ಲಭಿಸಿ ಪ್ರೇತತ್ವದಿಂದ ಮುಕ್ತನಾಗಬೇಕಾಗಿದೆ" ು ತಿಳಿಸಿತ್ತು.

ವಿವರಣೆ : ಈ ಕತೆಯಲ್ಲಿ ಮುಸಲ್ಮಾನನ ಪ್ರೇತವು ಹಿಂದೂ ಭಾವನೆ ನುಸಾರವಾಗಿಯೇ ನರಕಕ್ಕೆಹೋದದ್ದು, ಯಮಧರ್ಮರಾಜನಿಂದ ಶಿಕ್ಷೆ ಂದಿದ್ದು, ಕುಂಭೀಪಾಕ ನರಕದಶಿಕ್ಷೆ ಮುಂತಾದವನ್ನು ಹೇಳಿದೆ. ಒಬ್ಬ ಾತ್ಮನಿಗೆ ಇನ್ನೊಬ್ಬನು ಹಿಡಿದಾಗ ಅವನ ಮನಸ್ಸಲ್ಲಿದ್ದುದನ್ನು ತಿಳಿಯು ಸಾಧ್ಯವಾಗುತ್ತದೆ. ಈ ಮುಸಲ್ಮಾನನ ಪ್ರೇತಕ್ಕೆ ಮನಮೋಹನ ನ ಧಾರ್ಮಿಕನಂಬಿಕೆಗಳು ಹೀಗೆ ತಿಳಿಯುವಂತಾಯಿತು. ಕ್ರಿಶ್ಚನ್ ಮತ್ತು ಸಲ್ಮಾನರ ಶಾಸ್ತ್ರಗಳಲ್ಲಿ ಅವರ ನರಕದವಿವರಣೆ ಬಹಳ ಸ್ವಲ್ಪಮಾತ್ರ. ರಿಂದ ಈ ಮುಸಲ್ಮಾನನಿಗೆ ಈ ದೇಶದ ದೀರ್ಘಕಾಲದ ಜೀವನದಿಂದ ಮನಮೋಹನಸಿಂಗನ ಮನಸ್ಸಿನ ಸಂಪರ್ಕದಿಂದ ನಮ್ಮ ಶಾಸ್ತ್ರದಲ್ಲಿ ವ ನರಕದ ವಿಚಾರವು ತಿಳಿದು ಕೇವಲ ತನ್ನ ಅನುಭವದವೇ ಎಂಬಭಾವನೆ ರಬೇಕು; ಅಥವಾ ನಿಜವಾಗಿಯೂ ನರಕಕ್ಕೆ ಹೋಗಿದ್ದನೋ ಹೇಳು ಲ್ಲ. ಎಲ್ಲತರದ ಅತಿಕೆಟ್ಟ ಜೀವಾತ್ಮರಿಗೆ ನರಕರೂಪದ ಶಿಕ್ಷೆಯಿರಬಹುದು.

ಶ್ರೀರಾಮಕೃಷ್ಣ ಪರಮಹಂಸರ ಅಕ್ಕನಿಗೆ ಪ್ರೇತಬಾಧೆ

ಶ್ರೀ ರಾಮಕೃಷ್ಣ ಪರಮಹಂಸರ ಅಕ್ಕ ಕಾತ್ಯಾಯಿನೀದೇವಿಗೆ ಪಿಶಾಚದ ಬಂತು. ಅವಳ ತಂದೆ ಕ್ಷುಧಿರಾಮರು ಮಗಳನ್ನು ನೋಡಲು ಬಂದರು.

ಅದು ಪಿಶಾಚದ ಬಾಧೆಎಂಬುದು ಅವರಿಗೆ ಖಚಿತವಾಯಿತು. ಅವರು ಅತ್ಯಂತ
ಹೆಚ್ಚಿನವಂಟ್ಟದಲ್ಲಿ ಅನುಷ್ಠಾನ ನಡೆಸಿಕೊಂಡು ಬಂದ ಬ್ರಾಹ್ಮಣರು. ಪಿಶಾ
ದೊಡನೆ ಮಗಳ ದೇಹಬಿಟ್ಟುತೊಲಗಲು ಆಜ್ಞಾಪಿಸಿದರು. ಅದು ಹೆದರಿ
ಒಪ್ಪಿಕೊಂಡು ಗಯಾಕ್ಷೇತ್ರದಲ್ಲಿ ತನಗೆ ಪಿಂಡದಾನಮಾಡಲು ಬೇಡಿಕೊಂಡಿತು.
ಅವರು ಅದಕ್ಕೆಒಪ್ಪಿ "ಹಾಗೆಮಾಡಿದಾಗ ನೀನು ಅದರಿಂದ ಉದ್ಧಾರಹೊಂದಿದಿ
ಎಂಬುದನ್ನು ಹೇಗೆತಿಳಿಸುವಿ" ಎಂದು ಕೇಳಿದರು. ಆಗ ಅದು "ಎದುರಿರುವ
ಮರದ ದೊಡ್ಡಗೆಲ್ಲನ್ನು ಉರುಳಿಸುವೆನು" ಎಂದಿತು. ಅವರು ಗಯಾಕ್ಕೆಹೋಗಿ
ಸ್ವಲ್ಪದಿನಗಳ ಅನಂತರ ಆ ದೊಡ್ಡ ಗೆಲ್ಲು ಛಕ್ಕನೆ ಮುರಿದುಬಿತ್ತು. ಅವರು
ಪಿಂಡಹಾಕಿದ್ದು ಫಲಕಾರಿಯಾಗಿತ್ತು (ಶ್ರೀರಾಮಕೃಷ್ಣ ಲೀಲಾ ಪ್ರಸಂಗ).

೬. ಅರ್ಚಕ ಪ್ರೇತನಾದ

ಹಗಲಲ್ಲೇ ಅರ್ಚಕನ ಪ್ರೇತತೋರಿಕೊಂಡು ಪ್ರೇತತ್ವದಿಂದ ಬಿಡುಗಡೆ
ಮಾಡಿಸಲು ಬೇಡಿಕೊಂಡ ಒಂದುಸಮಾಚಾರವನ್ನು ಶ್ರೀಶಾರದಾ ಮಣಿ
ವರು (ಶ್ರೀರಾಮಕೃಷ್ಣ ಪರಮಹಂಸರ ಪತ್ನಿ) ಒಮ್ಮೆ ಹೇಳಿದ್ದರು (ವೇದಾಂ
ಕೇಸರಿ ೧೯೫೪). ವೃಂದಾವನದ ಶ್ರೀಗೋವಿಂದ ದೇವಸ್ಥಾನದ ಅರ್ಚಕನೊಬ್ಬ
ದೇವರಿಗೆ ಅರ್ಪಿಸುತ್ತಿದ್ದ ಭೋಗದ (ನೈವೇದ್ಯದ) ಒಂದು ಅಂಶವನ್ನು ತನ್ನ
ಸೂಳೆಗೆ ಕೊಡುತ್ತಬಂದ. ಈ ಪಾಪದಿಂದಾಗಿ ಅವ ಮೃತನಾದಮೇಲೆ ಪ್ರೇ
ನಾದ. ಆ ಬಾಳಿನ ಹಿಂಸೆ ಸಹಿಸಲಸಾಧ್ಯವಾಗಿ ಬಿಡುಗಡೆಗೆ ತನ್ನ ಪರಿಚಿತರನ್ನು
ಬೇಡಲೇಬೇಕೆಂದು ಹಗಲಲ್ಲೇ ಒಮ್ಮೆ ತನ್ನ ಮುಂಚಿನ ರೂಪದಲ್ಲಿತೋರಿ
ಕೊಂಡು ದೇವರಿಗೆ ತನ್ನಪಾಪದಪರಿಹಾರಕ್ಕಾಗಿ ಪಿಶಾಚತ್ವದಿಂದಬಿಡುಗಡೆಗಾಗಿ
ವಿಶೇಷಸೇವೆ ಮಾಡಿಸಬೇಕಾಗಿ ಇತರ ಅರ್ಚಕನೊಡನೆ ಬೇಡಿಕೊಂಡ.

೭. ಗಯಾಶ್ರಾದ್ಧದಿಂದ ಪುತ್ರಸಂತಾನ

ಕಲ್ಯಾಣ ಮಾಸಪತ್ರಿಕೆಯ ಪರಲೋಕ ಮತ್ತು ಪುನರ್ಜನ್ಮ ವಿಶೇಷಾಂ
ದಲ್ಲಿ ಶ್ರೀ ವೆಂಕಟಲಾಲಾಜೀ ಓಝಾ ಎಂಬವರು ಗಯಾಶ್ರಾದ್ಧದಿಂದ ಒಬ್ಬರಿ
ಅವರಹಿರಿಯರೊಬ್ಬರು ಸಂತುಷ್ಟಿಗೊಂಡು, ಅಷ್ಟರವರೆಗೆಮಕ್ಕಳು ಹುಟ್ಟಿದೊ
ಸಾಯುತ್ತಿದ್ದುದು ನಿಲ್ಲುವಂತೆ ಆಗಿ, ಪುತ್ರಸಂತಾನವುಂಟಾದಕತೆ ತಿಳಿಸಿದ್ದಾರೆ

ಲೇಖಕರ ಪರಿಚಿತರೊಬ್ಬರು ಪಿತೃಶ್ರಾದ್ಧ ಮಾಡುತ್ತಿದ್ದರಾದರೂ ಅ
ರಲ್ಲಿ ಶ್ರದ್ಧೆಯಿದ್ದವರಾಗಿರಲಿಲ್ಲ; ಹೆಸರಿಗೆಮಾತ್ರ ಆದನ್ನು ನಡೆಸುತ್ತಿದ್ದರು

ರಿಗೆ ಮಕ್ಕಳಿರಲಿಲ್ಲ. ಮಕ್ಕಳು ಹುಟ್ಟಿದಂತೆ ಸಾಯುತ್ತಿದ್ದವು. ಮಕ್ಕಳ ಗ್ಯಇಲ್ಲವೆಂದು ಜೋತಿಷ್ಯರೂಹೇಳಿದ್ದರು. ಆದರೆ ಅವರ ಭಾಗ್ಯದಿಂದ ರು ಶಾಸ್ತ್ರಚೆನ್ನಾಗಿಬಲ್ಲವರು ಅವರಿಗೆ ಗಯಾಕ್ಕೆ ಹೋಗಿ ಪಿತೃಗಳಿಗೆ ಪಿಂಡ ಕಿದರೆ ಪುತ್ರಸಂತಾನಆಗುತ್ತದೆ ಎಂದು ಪ್ರೇರಿಸಿದರು. ಪಂಡಿತರುಹೇಳಿದ ದಂತೆ ಅವರು ಒಂದುದಿನ ಗಯಾಕ್ಕೆಹೊರಟವರು ಸ್ಮಶಾನಕ್ಕೆಹೋಗಿ ಗಳಿಗೆ ಗಯಾಕ್ಕೆ ಪಿಂಡಸ್ವೀಕರಿಸಲು ಆಮಂತ್ರಿಸಿ ಅಲ್ಲಿಂದನೇರವಾಗಿ ರೈಲ್ವೆ ಷನ್ನಿಗೆ ಹೋಗಿ ಪ್ರಯಾಗಕ್ಕೆತಲ್ಪಿ ಅಲ್ಲಿ ತ್ರಿವೇಣಿಯಲ್ಲಿ ಸ್ನಾನ, ಅನಂತರ ಯಲ್ಲಿ ಗಂಗಾಸ್ನಾನ, ಆಮೇಲೆ ಪುನ್‌ಪುನ್‌ಎಂಬಲ್ಲಿ ಪಿಂಡಪ್ರದಾನ ಮಾಡಿ ಯಾಕ್ಕೆಹೋದರು. ಗಯಾದಲ್ಲಿ ಅವರಿಗೆ ಕರ್ಮಖಾಂಡ ಚೆನ್ನಾಗಿಬಲ್ಲಪುರೋ ರುಸಿಕ್ಕಿದರು. ಆ ಪುರೋಹಿತರು ಕಲ್ಯಾಣದತೀರ್ಥಾಂಕ (ವಿಶೇಷಾಂಕ)ದಲ್ಲಿ ದ ವಿಧಿಗಳಿಂದಲೇ ಎಲ್ಲ ಕ್ಷೇತ್ರಪಿಂಡ ಕಾರ್ಯಗಳನ್ನು ಮಾಡಿಸಿದರು. ಡುವರ್ಷಗಳ ಮೇಲೆ ಮತ್ತೊಬ್ಬ ಮಗಜನಿಸಿದ ; ಮತ್ತೆರಡು ವರ್ಷಗಳ ಲೆ ಮತ್ತೊಬ್ಬಮಗ ಜನಿಸಿದ. ಆ ಮನೆಯಲ್ಲಿ ಅನಂತರ ಶ್ರಾದ್ಧ ರ್ಯವು ಶ್ರದ್ಧೆಯಿಂದ ನಡೆಸಲ್ಪಡುತ್ತಿದೆ ಎಂದು ಲೇಖಕರು ತಿಳಿಸಿದ್ದಾರೆ.

. ಹೆಚ್ಚಿನ ಪ್ರೇತಗಳು ತಮ್ಮ ತಮ್ಮ ಮನೋಲೋಕದಲ್ಲಿ ಮಾತ್ರ ಬಾಳುತ್ತಿವೆಯೇ?

ಪಾಶ್ಚಾತ್ಯ ಸಾಮಾನ್ಯಪ್ರೇತಗಳ ಹೇಳಿಕೆಯಂತೆ ಮರಣ ಕಷ್ಟವಲ್ಲ. ಕೆಲ ಅದು ಮೊಬ್ಬುಸ್ಥಿತಿಬಂದು ಎಚ್ಚತ್ತಂತೆ ಮಾತ್ರ. ಯಮದೂತರು, ಮಲೋಕದ ಭಯ, ಇಲ್ಲ. ಹೊಸ ಪ್ರೇತಗಳನ್ನು ಪರಲೋಕದಲ್ಲಿರುವ ಗಳು, ಸ್ನೇಹಿತರು, ಸ್ವಾಗತಿಸುತ್ತಾರೆ. ಪ್ರೇತಲೋಕ ಈ ಲೋಕಕ್ಕಿಂತ ಳ ಬೇರೆತರದ್ದಲ್ಲ. ಆದರೆ ಹೆಚ್ಚುಸುಂದರವಾದುದು. ಚಂದದ ಮನೆ ಗಳು, ಮರಗಳು, ಗುಡ್ಡಗಳು, ಮೈದಾನ, ಹೂವಿನಗಿಡಗಳು ಎಲ್ಲ ಇವೆ. ಹಗಲುರಾತ್ರಿ ಎಂಬುದಿಲ್ಲ ಆದರೆ ಬೆಳಕಿನ ಬೇಧವಿದೆ. ನಿದ್ರೆಬೇಡ ಆದರೆ ್ರಂತಿಬೇಕು. ಆಹಾರಬೇಡ ಅಥವಾ ಅತಿಸ್ವಲ್ಪ ಮಾತ್ರಸಾಕು. ಅವಕ್ಕೆಲ್ಲ ಕೊಬ್ಬ ಗುರುಇದ್ದಾನೆ. ಅಲ್ಲಿನ ದಿನಚರಿಯಂತೆ ದೇವರಪೂಜೆ ಪ್ರಾರ್ಥನೆ ತ್ತು ಪಾಠಕಲಿಯಬೇಕು. ಆಮೇಲೆ ಅಲೆದಾಡುವುದು ಅಥವಾ ತಮ್ಮ ಅಭಿ ಯ ಕೆಲಸಮಾಡಬಹುದು, ಹಾಡಬಹುದು, ಸುಮ್ಮನೆಇರಬಹುದು. ಅನೇ ತಮ್ಮಲೋಕದ ಪ್ರೀತಿಯಬಂಧುಗಳನ್ನು ಆಗಾಗ ಬಂದುನೋಡುತ್ತಾರೆ.

ಗಾಯನದಲ್ಲಿ ತುಂಬಾ ಅಭಿರುಚಿ ಇರುವವರು ಗಾಯನದಲ್ಲಿ ಕಳೆಯು
ತ್ತಾರೆ. ಪ್ರಖ್ಯಾತ ಗಾಯಕರ ಕಛೇರಿನಡೆಯುತ್ತದೆ ಎಂದು ಅಂಥದರ
ಅಭಿರುಚಿಇದ್ದವರ ಹೇಳಿಕೆ. ಪ್ರಖ್ಯಾತ ಭೌತಿಕಶಾಸ್ತ್ರದ ಜ್ಞಾನಿಗಳಾದ ಸರ
ಒಲಿವರ್ ಲಾಜರು ತಾನು ಪ್ರೇತಲೋಕದಲ್ಲಿಯೂ ಭೌತಿಕಪ್ರಯೋಗ ಶಾ
ಯಲ್ಲಿ ಕೆಲಸಮಾಡುತ್ತಿದ್ದೇನೆ. ಹೊಸ ವಿದ್ಯುತ್ ಸಲಕರಣೆ ತಯಾರಿಸುತ್ತಿ
ದ್ದೇನೆ; ಅದರಿಂದ ಪ್ರೇತಲೋಕದವರು ಬೇಗ ಭೂಲೋಕದವರೊಡ
ಸಂಭಾಷಣೆ ನಡೆಸುವುದು ಸಾಧ್ಯವಾಗುವುದು ಎಂದಿದ್ದರು. ದೇಶಬಂಧು
ಚಿತ್ತರಂಜನದಾಸರ ಪ್ರೇತವು ಮೊಂಗ್ಹೀರ್ (ಬಂಗಾಳದಲ್ಲಿ) ಪ್ರೇತಸಂಪರ್ಕ
ಕೂಟದಲ್ಲಿ, ತಾನು "ಭೂಲೋಕದ ರಾಜಕೀಯ ಮುಖಂಡರ ಮನಸ್ಸಿ
ಸುಧಾರಣೆಗೆ ಯೋಜನೆ ತಯಾರಿಸಿದ್ದೇನೆ" ಎಂದಿತ್ತಂತೆ.

ಆದರೆ ಇಂಥ ಪ್ರೇತಸಂಪರ್ಕ ಕಾಲದಲ್ಲಿ ಸ್ವಾಮಿ ಅಭೇದಾನಂದರು
ನೀವು ಪಾಠಕಲಿಯುವುದರ ವಿವರ ಹೇಳಿರಿ, ಗುರು ಬೋಧಿಸುವುದು ಏನನ
ತಿಳಿಸಿರಿ ಎಂದಾಗ ಏನೂ ಉತ್ತರಬರಲಿಲ್ಲವಂತೆ. ಎಂದರೆ ಅವು ಹೇಳಿದ್ದು
ಬಾಲ್ಯದಲ್ಲಿ ಬೈಬಲ್ ಪಾಠಕಲಿತಸ್ಮರಣೆಯಿಂದ ಪ್ರೇರಿತವಾದ ಉತ್ತರವಾತ್ರ
ಆ ಕಲ್ಪನೆಹೊರತು ನಿಜವಾಗಿನಡೆದದ್ದಲ್ಲ. ಒಲಿವರ್‌ಲಾಜರ ಹೊಸಶೋಧ
ಇನ್ನೂ ಏನೂ ಬಂದದ್ದಿಲ್ಲವಷ್ಟೆ! ಲೋಕದ ಎಲ್ಲ ರಾಜಕೀಯ ಮುಖಂಡ
ಸುಧಾರಣೆ ಇರಲಿ, ಚಿತ್ತರಂಜನ್‌ದಾಸರಿಗೆ ಇಲ್ಲಿದ್ದಾಗ ಕೇವಲ ಇಲ್ಲಿನ ತವ
ಪಕ್ಷದ ಮುಖಂಡರ ಸುಧಾರಣೆ ಸಾಧ್ಯವಾಗಿತ್ತೆ? ಆದ್ದರಿಂದ ಇವು ಪ್ರೇ
ಗಳದ್ದು ಕೇವಲ ತಮ್ಮ ಈ ತರದ ಕಲ್ಪನೆಯಲ್ಲಿಯೇ ಮುಳುಗಿದವರ ಉತ್ತ
ಹೊರತು ನಿಜತ್ವವಿರಲಾರದು.

೧೮೯೯ರಲ್ಲಿ ಸ್ವಾಮಿ ಅಭೇದಾನಂದರು ಪ್ರೇತಪಾತ್ರಿಗಳ ವಾರ್ಷಿಕ ಸ
ಯಲ್ಲಿ ಅವರ ಅತಿಥಿಯಾಗಿ ಪುನರ್ಜನ್ಮದ ವಿಷಯ ಭಾಷಣ ಮಾಡಿದರು
ಸುಮಾರು ೭,೦೦೦ಜನ ಭಾಷಣಕೇಳಲು ಬಂದಿದ್ದರು. ಕೇಳಿದ ಬಹುಮಟ್ಟಿ
ಪಾತ್ರಿಗಳು ತಮ್ಮ ಪ್ರೇತಾನ್ವೇಷಣ ಗುರುಗಳೂ ಪುನರ್ಜನ್ಮವಿದೆ ಎಂದ
ಹೇಳಿದ್ದಾರೆ ಎಂದರಂತೆ. ಹೀಗೆ ಬೇರೆಕಡೆಗಳಲ್ಲಿಯೂ ಅನೇಕ ಪಾತ್ರಿಗ
ಹೇಳಿದ್ದರಂತೆ. ಆದರೆ ಕೆಲವರು, ತಮ್ಮಗುರುಗಳು ಹಾಗೆ ಹೇಳಲಿಲ್ಲ
ಅದು ನಿಜವಾಗಿದ್ದರೆ ಅವರು ಹೇಳುತ್ತಿರಲಿಲ್ಲವೇ ಎಂದು ವಾದಿಸಿದ್ದುಂಟಂತ
ಕ್ರಿಶ್ಚನ್ ಮತ್ತು ಮುಸಲ್ಮಾನ ಶಾಸ್ತ್ರಗಳಲ್ಲಿ ಒಂದೇ ಜನ್ಮಹೇಳಿದೆ. ಆ ಜ
ಆರಂಭಿಸುವಾಗ ದೇವರು ಜೀವಾತ್ಮನನ್ನು ಉಂಟುಮಾಡಿ ದೇಹಕ್ಕೆ ಸೇರಿ

ತ್ತಾನೆ; ಆದರೆ ಅದು ಅನಂತರ ಶಾಶ್ವತವಾಗಿ ಬಾಳುತ್ತದೆಎನ್ನುತ್ತೇವೆ. ಇದು ಹೇಗೆ ಸಾಧ್ಯ? ಆತ್ಮ ಈಗ ಉಂಟಾದವನಾದರೆ ಮುಂದೆ ನಾಶಹೊಂದಲೇ ಬೇಕಲ್ಲವೇ? ಒಂದುಕೋಲಿನ ಬುಡ ನಮ್ಮಕೈಯಲ್ಲಿದ್ದರೆ ಅದರ ತುದಿ ಎಲ್ಲಾದರೂ ಇರಲೇಬೇಕಲ್ಲವೇ? ಎಂದು ಸ್ವಾಮೀಜಿಯವರು ವಾದಿಸಿದಾಗ ಅದಕ್ಕೆ ಉತ್ತರ ಬರುತ್ತಿರಲಿಲ್ಲವಂತೆ. ಬಹುಮಟ್ಟಿಗೆ ಪಾತ್ರಿಗಳು ತಾವು ಚಿಕ್ಕಂದಿನಲ್ಲಿ ಕಲಿತ ಶಾಸ್ತ್ರದವಿಚಾರವನ್ನೇ ಹೇಳುತ್ತಾರೆ, ಸ್ವತಃಅನುಭವದ್ದಲ್ಲ ಎಂದಿದ್ದಾರೆ. ಕೆಲವು ಪ್ರೇತಗಳು ಪುನರ್ಜನ್ಮವುಂಟೆಂದು ತಮಗೆ ಮರಣದನಂತರ ತಿಳಿಯಿತು ಎಂದಿವೆ.

ಕೆಲವು ಪ್ರೇತಕೂಟಗಳಲ್ಲಿ ಸ್ವಾಮೀಜಿಯವರು ಕುಳಿತಿರುವುದು ಕಂಡು ಆವಾಹಿತಪ್ರೇತಗಳು—"ಇಲ್ಲಿ ಸಂಪೂರ್ಣ ಜ್ಞಾನವಿದ್ದವರಿದ್ದಾರೆ. ಅವರೆದುರಲ್ಲಿ ನಾವೇನು ಹೇಳಲಿಕ್ಕಿದೆ?" ಎಂದು ಸುಮ್ಮನಾದುದುಂಟಂತೆ. ಇನ್ನು ಕೆಲವಲ್ಲಿ ಅವರ ಯೋಚನೆಯನ್ನು ಅವರ ಮನಸ್ಸಿಂದ ತಿಳಿಕೊಂಡು ಅದನ್ನು ಹೇಳಿದ್ದು ಉಂಟಂತೆ. ತಾವು ಸ್ವರ್ಗಲೋಕಕಂಡ ಪ್ರೇತಗಳು ಎನ್ನುವವು ಹೇಳುವುದು ಬಾಲಕರಾಗಿದ್ದಾಗ ಸ್ವರ್ಗದವಿಚಾರ ಕಲಿತವಿಚಾರಗಳನ್ನೆ ಹೊರತು, ಪ್ರತ್ಯಕ್ಷ ಅನುಭವದ್ದಲ್ಲ. ಬೈಬಲ್ಲಲ್ಲಿ ನರಕದಕತ್ತಲೆ, ಬೆಂಕಿಯ ಉರಿಜ್ವಾಲೆ, ಮುಂತಾದ ಹಿಂಸಾತ್ಮಕ ವಿವರಣೆಗಳು ಬರುತ್ತವೆ. ಆದರೆ ಅವನ್ನು ಹೇಳಿದವರಿಲ್ಲವಂತೆ (ಅಥವಾ ಅತಿ ಕೆಟ್ಟವರಿಗೆ ನರಕದಶಿಕ್ಷೆ ಇದೆಯೆಂದೂ, ಅಲ್ಲಿರುವ ಕೈದಿಗಳನ್ನು ಪ್ರೇತಾನ್ವೇಷಕರು ಕರೆಯಲಾರರು ಎಂದೂಊಹಿಸಲು ಆಸ್ಪದವಿದೆ). ಸ್ವಾಮಿ ಅಭೇದಾನಂದರ ತೀರ್ಮಾನದಂತೆ ಬಹುಮಟ್ಟಿನ ಪ್ರೇತಗಳು ತಮ್ಮ ಹಿಂದಿನ ಜ್ಞಾನದಿಂದುಂಟಾದ, ಪೂರ್ವ ಜನ್ಮದಿಂದುಂಟಾದ, ಕಲ್ಪನಾರಾಜ್ಯದಲ್ಲಿ, ಸ್ವಪ್ನ ಪ್ರಪಂಚದಲ್ಲಿ, ಬಾಳುತ್ತವೆ ಎಂಬುದಾಗಿದೆ.

ಬೈಬಲ್ಲು ಮತ್ತು ಕುರಾನಿನಲ್ಲಿ ಸ್ವರ್ಗದ ವಿವರಣೆ ಇದೆ. ಅಲ್ಲಿಗೆ ಮೃತರಾದ ಜೀವಾತ್ಮರು ಹೋಗುವುದು ಇನ್ನೂಮುಂದೆ ಬರಲಿಕ್ಕಿರುವ ವಿಚಾರಣಾ ದಿನದಂದು (Day Judgement). ಅಲ್ಲಿಯವರೆಗೆ ಗೋರಿಯಲ್ಲಿಯೇ ತಟಸ್ಥ ವಾಸವಂತೆ. ಆದರೆ ಅದನ್ನು ಪ್ರೇತಗಳು ಅಲ್ಲಗಳೆದಿವೆ. ಪಾತ್ರಿಯಿದ್ದಲಿಗೆ ಬಂದವು ಅಲ್ಲಗಳೆಯಲೇಬೇಕಾಗುತ್ತದಷ್ಟೆ!

ಸಾಮಾನ್ಯವಾಗಿ ಜೀವಾತ್ಮನು ದೇಹಧಾರಿಯಾಗಿರುವಾಗ ಹೊಂದಿದ್ದಬುದ್ಧಿ **ಚುರುಕುತನದ ಹೆಚ್ಚಿನಅಂಶ ಪ್ರೇತಕ್ಕೆ ಇರುವುದಿಲ್ಲ,** ಅದು ಬಹಳ **ಮಂಕಾಗಿರುತ್ತದೆ.** ಇದಕ್ಕೆ ಒಂದು ದೊಡ್ಡ ದೃಷ್ಟಾಂತ,

ಭೂಲೋಕದಲ್ಲಿಯೇ ಅವರಕಾಲದಲ್ಲಿ ಅತಿ ಸಮರ್ಥರೂ ಅತಿಖ್ಯಾತರೂ ಆ
ಲೆನಿನ್ ಮತ್ತು ಸ್ಟೆಲಿನ್ ತಮ್ಮ ಗೋರಿಯಲ್ಲಿ ತಟಸ್ಥವಾಗಿದ್ದು, ಸ್ಟೆಲಿನ್ನ
ದೇಹದ ಸಾಮೀಪ್ಯಕ್ಕಾಗಿ ಲೆನಿನ್ ಬಹಳಕಾಲ, ಆಮೇಲೆ ಸ್ಟೆಲಿನ್ ತನ್ನ
ದೇಹ ಕೆಂಪುಚೌಕದ ಭವ್ಯವಾದ ಗೋರಿಯಿಂದ ತೆಗೆದು ತೀರಾ ಸಾಮಾನ
ಗೋರಿಗೆ ಹಾಕಿದ್ದಕ್ಕೆ ಚಡಪಡಿಸುತ್ತ ಇದ್ದವೇ ಹೊರತು ಮುಂಚಿನ ಯಾ
ಮಹತ್ವದ ಶಕ್ತಿ ತೋರಿಸಿದ್ದಿಲ್ಲ.

ಡಾಕ್ಟರನ ತಂದೆ ಸತ್ತವರು ಒಬ್ಬರು ಪ್ರೇತವಾಗಿ ಆ ಪರಿಸ್ಥಿತಿಗೆ ಚ
ಪಡಿಸುತ್ತ, ತಾನು ತನ್ನ ಮಗನಿಗೆ ತೋರಿಕೊಂಡರೆ ಪ್ರೇತತ್ವದ ನಿವಾರಣೆ
ಅವ ಏನಾದರೂ ಮಾಡ್ಯಾನೆಂಬ ಆಸೆಯಿಂದ ಆ ಮನೆಯಲ್ಲಿ ಪುನಃ ಪುನ
ತೋರಿಕೊಳ್ಳುತ್ತಲೇ ಇತ್ತು. ಆದರೆ ಮಗ ಬೇರೆ ಮನೆಮಾಡಿಯಾಗಿತ್ತು
ಇನ್ನು ಅವನ ಹೊಸಮನೆಯಲ್ಲಿ ತೋರಿಕೊಂಡರೆ ಮಾತ್ರ ಪ್ರಯೋಜ
ವಾದೀತು, ಹಳೆಮನೆಗೆ ಬಂದ ಬೇರೆಯವರಿಗೆ ತೋರಿಕೊಂಡಲ್ಲ, ಎಂಬಷ್ಟು
ಕೂಡ ಯೋಚನೆ ಅದಕ್ಕೆಬಾರದಾಯಿತು! ಕೇವಲ ಆಕಸ್ಮಾತ್ತಾಗಿ ಈ ವಿಚಾ
ಮಗನಿಗೆ ತಿಳಿದು ಅವ ಗಯಾ ಪಿಂಡ ಹಾಕಿ ಪ್ರೇತತ್ವದ ನಿವಾರಣೆ ಮಾಡಿದ

ಬೆಂಗಳೂರಲ್ಲಿ ನನ್ನ ಮಗಳಿದ್ದ ಬಾಡಿಗೆ ಮನೆಯ ಬದಿಯ ಪಿತ್ತಲಲ್ಲಿದ್ದ
ಆದರ ಮಾಲೀಕ ಅದನ್ನು ಮಾರಾಟಮಾಡಿ ನನ್ನಮಗಳಮನೆಯ ಹಿಂದಿನತನ
ಮತ್ತೊಂದುಜಾಗದಲ್ಲಿ ಮನೆಮಾಡಿದ. ಮುಂಚಿನ ಅವನ ಮನೆಯಲ್ಲಿದ್ದಾ
ಅಲ್ಲಿ ಕುಟುಂಬದ ಒಂದು ಪ್ರೇತಕ್ಕೆ ಅವ ವರ್ಷಕ್ಕೊಮ್ಮೆ ಅನ್ನಬಟ್ಟೆಇಡು
ಕ್ರಮವಿತ್ತು, ಬೇರೆಮನೆಮಾಡಿದಾಗ ಅದನ್ನು ಮಾಡಲಿಲ್ಲ. ಪ್ರೇತ ಹತ್ತಿರವೆ
ಇದ್ದ ಅವನ ಹೊಸ ಮನೆಯಲ್ಲಿ ತೋರಿಕೊಳ್ಳುವ ಬಗ್ಗೆ ಮುಂಚಿನ ಜಾ
ದಲ್ಲಿದ್ದ ಹಿಂದುಗಳಲ್ಲದವರಿಗೆ ಮಾತ್ರ ತೋರಿಕೊಂಡಿತು!

ಜಿ.ಡಿ. ಎಬ್ರಹೇಮ್ ಎಂಬ ಪ್ರೇತ ಶೋಧಕರೊಬ್ಬರು ಒಮ್ಮೆ "ತನ
"ಇಂಗ್ಲೆಂಡಿನ ಎರಡನೆಚಾರ್ಲ್ಸ್‌ರಾಜನ ಸೂಳೆ ತೋರಿಕೊಂಡಳು ; ತನ್ನೊಡ
ಮಾತಾಡಿದಳು. ಬಹಳ ವೈಯ್ಯಾರತೋರಿಸುತ್ತಿದ್ದಳು. ಜೀವನದ ಸು
ವೆಂದರೆ ಕೇವಲ ರತಿಸುಖ ಎಂಬುದು ಅವಳ ಭಾವನೆಯಾಗಿತ್ತು. ತನ್ನೊಡ
ಚಾರ್ಲ್ಸ್‌ರನ್ನು ಎಲ್ಲಾದರೂ ನೋಡಿದ್ದೀರಾ ಎಂದು ಕೇಳಿದಳು. ಅವರು ಸತ್ತ
ಸುಮಾರು ೩೦೦ ವರ್ಷಗಳಾದವು ಅವರನ್ನು ಹುಡುಕುವುದು ವ್ಯರ್ಥ ಎಂದ
ನಾನು ವಿವರಿಸಲು ಯತ್ನಿಸಿದ್ದು ಅವಳ ಪಾಲಿಗೆ ಅರ್ಥವೇ ಆಗದ್ದಾಯಿತು
ಎಂದು ಅವರು ತಿಳಿಸಿದ್ದಾರೆ. ಎಷ್ಟೆಲ್ಲ ಪ್ರೇತಗಳು ಹೀಗೆ ತಮ್ಮ ಬದಲಾ

ಪರಿಸ್ಥಿತಿ ಅರಿಯಲಾರದೆ ಕಾಲದ ಕಲ್ಪನೆಯಿಲ್ಲದೆ ತಮ್ಮದೇ ಏನೋ ಒಂದೇ ಒಂದು ಭಾವನೆಯಲ್ಲಿ ಮೊಬ್ಬು ಪರಿಸ್ಥಿತಿಯಲ್ಲಿರುತ್ತ ಅರ್ಥವಿಲ್ಲದ ಬಾಳು ನಡೆಸುತ್ತಿವೆಯೋ ಏನೋ ಎಂದು ಎಬ್ರುಹೇಮರು ತಮ್ಮ ಕನಿಕರ ಸೂಚಿಸಿದ್ದರು.

೨೩. ಪ್ರೇತ ಸಂಪರ್ಕದ ಮೂಲಕ ಬರುವ ಪ್ರೇತಲೋಕದ ಜ್ಞಾನ ಅಪೂರ್ಣ

ನಮಗೆಲ್ಲರಿಗೂ ಮರಣ ಖಂಡಿತ. ಆಮೇಲೆ ಪ್ರೇತ ಪಿತೃಲೋಕಕ್ಕೆ ಗಮನ. ಆಗ ಅಲ್ಲಿ ಬಾಳಬೇಕಾದ ಜೀವನದಕ್ರಮಗಳೇನು ಎಂಬುದನ್ನು ಜನರು ತಿಳಿಯಲುಅಗತ್ಯ ಬಯಸಬೇಕಾದುದೇ. ಪಾಶ್ಚಾತ್ಯರ ಪ್ರೇತ ಸಂಪರ್ಕ ಕ್ರಮದಿಂದ ಆ ವಿಚಾರವು ಧಾರಾಳವಾಗಿ ಸಂಗ್ರಹವಾಗಬಹುದು ಎಂಬ ನಿರೀಕ್ಷೆ ನನಗೆ ಬಹಳವಿತ್ತು. ಆದರೆ ಈ ಹೊಸ ದಾರಿಯಿಂದ ಹೆಚ್ಚಿನ ಜ್ಞಾನ ವೇನೂ ಸಾಧ್ಯವಲ್ಲ ಎಂಬುದು ವಿವೇಚಿಸಿದರೆ ತಿಳಿದೀತು.

ಜನರು ಪ್ರೇತಸಂಪರ್ಕ ಬಯಸುವುದು ಮುಖ್ಯವಾಗಿ ಮೃತರಾದ ಪರಿಚಿತರದ್ದು. ಪ್ರೇತಲೋಕವೆಂದರೆ ಎಷ್ಟೆಲ್ಲ ವಿಸ್ತಾರವಾದುದೋ ಏನೋ. ಅದರ ಎಲ್ಲೋ ಒಂದು ಚಿಕ್ಕಭಾಗದಲ್ಲಿರುವಪ್ರೇತ ಆ ಇಡೀ ಲೋಕದಜ್ಞಾನ ಏನುಕೊಟ್ಟೀತು ?- ನಮ್ಮಲ್ಲಿ ಬಾಳುವವರಲ್ಲಿಯೇ ಸಮುದ್ರಕಾಣದವರು, ಹಿಮಾಲಯ ಕಾಣದವರು, ಗೋಧಿ ಗಿಡ ಕಾಣದವರು, ಅಡಿಕೆಮರ ಕಾಣದ ವರು ಎಷ್ಟೆಲ್ಲ ಇಲ್ಲ! ಪ್ರೇತಗಳಿಗೆ ಆ ಲೋಕದ ಏಳು ವಿಭಾಗಗಳಲ್ಲಿ ಕೆಳಭಾಗ ದಲ್ಲಿರುವವರಿಗೆ ಮೇಲಿನ ಭಾಗಗಳಿಗೆ ಪ್ರವೇಶವಿಲ್ಲ, ಮೇಲಿನವರಿಗೆ ಕೆಳಗೆ ಬರಲು ಮಾತ್ರ ಸಾಧ್ಯ, ಎನ್ನುವುದುಂಟು.

ಜನರು ಒಂದೊಂದು ತರದವರು ಮುಖ್ಯವಾಗಿ ಕಾಣುವುದು ಅವರವರ ಒಲವಿನ ವಿಭಾಗವನ್ನು. ಹೋಟೆಲ್ ಮಾಲೀಕ ಬೊಂಬಾಯಿಗೆ ಹೋದರೆ ಮುಖ್ಯವಾಗಿ ಆ ಭಾಗ ಪರಿಶೀಲಿಸಿಯಾನು. ಆದರೆ ಅಲ್ಲಿನ ವೈದ್ಯಕೀಯಭಾಗ ಚಿತ್ರಕಲೆಭಾಗ ಕಾರ್ಖಾನೆಗಳಭಾಗ ಕಾಣುವ ಉತ್ಸಾಹ, ಅಥವಾ ಅರ್ಥಮಾಡಿ ಕೊಳ್ಳುವ ಶಕ್ತಿ ಅವನಿಗೆಲ್ಲಿದೆ ? ಆನೆಯ ಜ್ಞಾನಪಡೆಯಲು ಹೋದ ಕುರುಡ ರಲ್ಲಿ ಒಬ್ಬ ಅದರ ಮೈಮುಟ್ಟಿ ಅದು ಗೋಡೆಯ ಹಾಗಿದೆ ಎಂದನಂತೆ; ಮತ್ತೊಬ್ಬ ಕಾಲುಮುಟ್ಟಿ ಅದು ಕಂಬದಂತಿದೆ ಎಂದನಂತೆ. ಕಿವಿಮುಟ್ಟಿದವ ಅದು ಮೊರದಂತಿದೆ ಎಂದನಂತೆ.

ಇದು ನಮ್ಮ ಪರಿಚಿತ ಪ್ರೇತಗಳ ಮೂಲಕ ಬರುವ ಜ್ಞಾನದ ಮಿತಿಯಾದ
ಅಲ್ಲಿ ಬಹಳಬಲ್ಲ ಪ್ರೇತಗಳೂ ಇರಬಹುದಲ್ಲ! ಅವರನ್ನು ಕೇಳಬಹುದಲ್ಲ
ಎಂದರೆ, ನಮಗೆ ಟೆಲಿಫೋನು ಉಂಟು, ಮಂತ್ರಿಗಳಿಗೂ ಉಂಟು ಎಂಬುದರಿಂ
ಅವರೊಡನೆ ಮಾತಾಡುತ್ತಿರಲಿಕ್ಕೆ ಅವರು ಬಿಡುತ್ತಾರೆಯೇ ?

ನಮ್ಮ ಸಾಮಾನ್ಯಭಾವನೆ ಪ್ರೇತಗಳು ಕಾಣಿಸಿಕೊಳ್ಳಬಲ್ಲವು, ಮಾಯ
ವಾಗಬಲ್ಲವು, ಬಾಗಿಲುಹಾಕಿಕೊಂಡ ಕೋಣೆಯೊಳಗೆ ಬರಲಾಪವು, ವಾಹ
ವಿಲ್ಲದೆ ಎಲ್ಲೆಲ್ಲೋ ಹೋಗಿ ತೋರಿಸಿಕೊಳ್ಳುತ್ತವೆ, ದೂರ ನಡೆಯುವವಿಚಾ
ಇಲ್ಲಿಂದಲೇ ತಿಳಿದುಹೇಳಿದ್ದುಂಟು, ಸ್ವಪ್ನದಲ್ಲಿ ಕಾಣಿಸಿಕೊಳ್ಳಲಾಪವು, ಎಂಬು
ರಿಂದ ಅವಕ್ಕೆ ಹೆಚ್ಚಿನಶಕ್ತಿ ಉಂಟೆಂದು ಭಾವಿಸುತ್ತೇವೆ. ಆದರೆ ಸಾಮಾ
ಮಾನವನಾಗಿದ್ದವ ಸತ್ತು, ಆಮೇಲೆ ಸಾಮಾನ್ಯಮಾನವನಾಗಿಯೇ ಪುನರ್ಜನ
ಹೊಂದುವ ಅತ್ಯಧಿಕ ಜೀವಾತ್ಮರಿಗೆ ನಡುವೆ ಸ್ವಲ್ಪಕಾಲ ಪ್ರೇತವಾಗಿರುವಾ
ಅತ್ಯದ್ಭುತಜ್ಞಾನ ಎಲ್ಲಿಂದ ಬರಬೇಕು ? ಅವಕ್ಕೆ ನಮ್ಮಲ್ಲಿಲ್ಲದ ಸ್ವಲ್ಪಶಕ್ತಿ ಅ
ಗಳ ಸೂಕ್ಷ್ಮಶರೀರದಿಂದಾಗಿದೆ ಸರಿ; ಆದರೆ ಅದು ಕೆಲವುಪ್ರೇತಗಳಲ್ಲಿ ಮಾತ್ರ
ಕೆಲವುಜನರು ಆಶಿಸುವಂತೆ ಅವಕ್ಕೆ ಕುದುರೆಜೂಜಲ್ಲಿ ಯಾವ ಕುದುರೆ ಪ್ರಥ
ಸ್ಥಾನಪಡೆಯುತ್ತದೆ, ಯಾವ ನಂಬರದ ಲಾಟರಿಟಿಕೇಟು ಬಹುಮಾನಪಡೆಯ
ತ್ತದೆ ಎಂದೆಲ್ಲ ಭವಿಷ್ಯಹೇಳುವ ಶಕ್ತಿಯಿದ್ದರೆ ಪಾತ್ರಿಗಳು ಅತಿಬುದ್ಧಿವಂ
ಪ್ರೇತವನ್ನು ಆವಾಹಿಸಿ ಅದರಿಂದ ಬೇಕಾದುದನ್ನು ತಿಳಿಯುತ್ತ ಅಪಾ
ಐಶ್ವರ್ಯ ಸಂಗ್ರಹಿಸುತ್ತಿರಲಿಲ್ಲವೇ ?

ಇನ್ನು ಅವುಗಳಿಂದ ನಾವು ದೇವರವಿಚಾರ ಧಾರ್ಮಿಕವಿಚಾರ ತಿಳಕೊಳ
ಬಹುದು ಎಂಬ ಆಸೆಯೂ ವ್ಯರ್ಥ. ನಮ್ಮಲ್ಲಿಯೇ ಎಷ್ಟೋ ಠಕ್ಕು ಗುರು
ಗಳಿದ್ದಾರೆ. ಅತಿ ಯೋಗ್ಯರು ಯಾರು ಎಂದು ಪರೀಕ್ಷೆ ಮಾಡುವುದು ಸುಲ
ವಲ್ಲ. ಪ್ರೇತಲೋಕದಲ್ಲಿಯೂ ವಂಚಕಪ್ರೇತಗಳಿದ್ದಾವೆ.

ಮನುಷ್ಯರಲ್ಲಿದ್ದಂತೆಯೇ ಪ್ರೇತಗಳಲ್ಲಿಯೂ ಬಹಳ ಶ್ರೇಷ್ಠರು
ಸಾಮಾನ್ಯರು, ಅತಿಕೆಟ್ಟವರು ಎಂಬ ಮೂರುವರ್ಗಗಳಿವೆ. ಬಹಳದುಷ್ಟವನ
ಯಾರೂ ಕರೆದುಮಾತಾಡಿಸಲು ಆಶಿಸರು. ಆದರೆ ಅವು ಕೆಲವುವೇಳೆ ತಾವ
ಬಂದು ಅಕ್ಷರ ಚಕ್ರದಮೇಲೆ (Planchet) ಕುಳಿತುಬಿಡುತ್ತವಂತೆ. ಅದ
ಮೂಲಕ ಸುಳ್ಳುವಾರ್ತೆಕೊಡುತ್ತವಂತೆ. ವಂಚನೆನಡೆಸುತ್ತವಂತೆ. ಅವು ಅ
ಕುಳಿತವರಿಗೆ ಹಾನಿಮಾಡಿದ್ದೂ ಉಂಟು. ಅಂಥವು ಬಾರದಂತೆಮಾಡಲಿಕ್ಕೆ ಶ
ಬೇಕು. ಪರಲೋಕದಬೇಕಾದ ಜೀವಾತ್ಮನನ್ನು ಕರಕೊಂಡುಬಂದು ಕೊಡು

ಪ್ರೇತಆವಾಹಕನು ಪಾತ್ರಿಗೆ ಕೆಟ್ಟಪ್ರೇತಗಳತಂಟೆಯಿಂದ ರಕ್ಷಣೆಕೊಡಬೇಕಾಗುತ್ತದೆ. ಅವ ಮೇಲುಲೋಕದವನಿದ್ದು ಕೆಟ್ಟಪ್ರೇತ ಕೆಳಲೋಕದ್ದಾದರೆ ಇದು ಸಾಧ್ಯವಂತೆ. ಹಾಗಿರದೆ ತೊಂದರೆಕೊಡುವ ಪ್ರೇತ ಆವಾಹಕನಿಂದ ಮೇಲುಲೋಕದ್ದಾದರೆ ಅವ ಅದನ್ನು ಓಡಿಸಲಾರ. ಶ್ರೀಮೋಹನಜೀ ವಾರ್ಷ್ಣೇಯ ಎಂಬವರು ಈ ಭಾಗದಲ್ಲಿ ತುಂಬಾಮಾಹಿತ್ಯಇರುವವರು ತಿಳಿಸಿದಂತೆ ಅವರ ಪರಿಚಿತಬ್ರಾಹ್ಮಣರೊಬ್ಬರ ಮನೆಯಲ್ಲಿ ಪ್ರೇತಸಂಪರ್ಕಕೂಟ ನಡೆಸಿದಾಗ ಸುಮಾರು ೪೦ ಬೇರೆಪ್ರೇತಗಳು ಬಂದುಕೊಂಡು ಆಮೇಲೆ ಆ ಮನೆಯನ್ನು ಬಿಡದೆ ಕ್ರಮೇಣ ಅದನ್ನು ಹಾಳುಮಾಡಿದವಂತೆ. ಇದಕ್ಕೆಕಾರಣ ಆವಾಹಕನು ಬೇಕಾದ ಸಮರ್ಥತೆಇಲ್ಲದವನಾಗಿದ್ದುದು (ಕಲ್ಯಾಣದ ಪುನರ್ಜನ್ಮ ವಿಶೇಷಾಂಕದಲ್ಲಿ ಪುಟ ೪೫೪ರಲ್ಲಿ ಈ ವಿಚಾರ ಹೇಳಿದ್ದಾರೆ). ಪ್ರೇತಗಳಲ್ಲಿ ಅತಿಕೆಟ್ಟದ್ದು ಮಾಡಿ ನರಕಯಾತನೆಅನುಭವಿಸುತ್ತಿರುವವಾದರೆ ಅವನ್ನು ನಮ್ಮಕೆಲಸಕ್ಕಾಗಿ ಯಮ ಬೇಕಾದಂತೆ ಬಿಟ್ಟುಕೊಟ್ಟಾನೆಯೇ? ಜೈಲಲ್ಲಿರುವವರನ್ನು ಸರ್ಕಾರ ಹಾಗೆ ಬಿಡಂತ್ತದೆಯೇ? ಅಂತೂ ಈ ವರ್ಗದವರನ್ನು ಪ್ರೇತಆವಾಹಕ ಕರೆತರಲೂ ಒಪ್ಪನಾದ್ದರಿಂದ ಪ್ರೇತಸಂಪರ್ಕದಿಂದ ಯಮಲೋಕದ ನರಕದ ಯಾತನೆಗಳ ವಿವರಗಳು ತಿಳಿಯುವುದಿಲ್ಲ.

ಇನ್ನೊಂದು ವರ್ಗ ಅತ್ಯುತ್ತಮರ ಅಥವಾ ಮಹಾತ್ಮರದ್ದು. ಸ್ವಾಮಿ ಅಭೇದಾನಂದರು ಅವರ ಪುಸ್ತಕದಲ್ಲಿ ತಿಳಿಸಿದಂತೆ, ಅವರು ಒಬ್ಬ ಸಮರ್ಥ ಪ್ರೇತಸಂಪರ್ಕ ಪಾತ್ರಿಯೊಡನೆ ಶ್ರೀರಾಮಕೃಷ್ಣ ಪರಮಹಂಸರ ಮತ್ತೊಬ್ಬರು ಪ್ರಥಮ ಶಿಷ್ಯರು ಸ್ವಾಮಿ ಯೋಗಾನಂದರನ್ನು ಅನ್ವೇಷಣೆಮಾಡಲು ಕೇಳಿಕೊಂಡಾಗ ಪಾತ್ರಿಗೆ ಪ್ರೇತಾನ್ವೇಷಕನು ಅಂಥ ಪ್ರೇತ ಹುಡುಕಿದಾಗ ಸಿಗಲಿಲ್ಲ, ಅವ ಇಲ್ಲ, ಎಂದುತಿಳಿಸಿತು. ಆದರೆ ಸ್ವಾಮಿಯೋಗಾನಂದರೇ ಆಮೇಲೆ ಅಲ್ಲಿ ಇಟ್ಟಿದ್ದ ಸ್ಲೇಟಲ್ಲಿ ಬಂಗಾಳಿಭಾಷೆಯಲ್ಲಿ ಮತ್ತು ಸಂಸ್ಕೃತದಲ್ಲಿ ಬರೆದುಹೋದರು. ಇದರಅರ್ಥ ಸಾಮಾನ್ಯಮಟ್ಟದ ಅನ್ವೇಷಕರಿಗೆ ಮಹಾಪುರುಷರಿರುವ ವಿಭಾಗಕ್ಕೆ ಪ್ರವೇಶವಿಲ್ಲ ಎಂದಾಗಿರಬೇಕಲ್ಲವೇ? ಸಾಮಾನ್ಯತರದ ಪ್ರೇತಗಳ್ಯಾವುವೂ ದೇವರನ್ನು ಪರಲೋಕದಲ್ಲಿ ಕಂಡದ್ದು ಹೇಳಿದ್ದಿಲ್ಲ. ಕಂಡವರೂ ಬರಲು ಬಯಸದಿರಬಹುದು.

ಇದಕ್ಕಿಂತ ಹೆಚ್ಚಿನವಿಷಯಯಾವುದೆಂದರೆ ಪ್ರೇತಗಳಾದಾಗಜೀವಾತ್ಮನು ಅತಿಮಿತಬುದ್ಧಿಯವನಾಗುವುದೇ ಕ್ರಮ. ಹಿಂದೆ ಹೇಳಿದ ಫೋಕ್ಸ್ ಕುಟುಂಬದವರಿದ್ದ ಮನೆಯಬಾಗಿಲುತಟ್ಟುತ್ತಿದ್ದ ಪಿಶಾಚ ತನ್ನನ್ನು ಆ ಮನೆಯವ ಕೊಲೆ

ಮಾಡಿದ ಅನ್ಯಾಯವನ್ನು ಲೋಕಕ್ಕೆ ತಿಳಿಸಬೇಕು ಎಂಬ ಛಲದಿಂದ ಹಾ
ಮಾಡುತ್ತಬಂತು. ಕೊಲೆಮಾಡಿದವ ಮನೆಬಿಟ್ಟುಹೋದ. ಆಮೇಲೆ ಸತ್ತನೊ
ಇದ್ದಾನೋ ಎಂಬುದೂ ಅದಕ್ಕೆ ತಿಳಿಯದು. ಬಾಡಿಗೆಮನೆಗೆ ಬೇರೆಬೇರೆ
ವರು ಬಂದರು. ಪಿಶಾಚ ಬಾಗಿಲುತಟ್ಟುತ್ತಲೇಇತ್ತು. ಕೇವಲ ಹಾಗೆಮಾಡ
ವುದರಿಂದ ಕೊಲೆಯಾದ ವಿಚಾರ ತಿಳಿಯುವುದು, ಕೊಲೆಗೆಬೇಕಾದ ದಾಖ
ಗಳು ಸಿಕ್ಕುವುದು, ಪೊಲೀಸರು ಕೊಲೆಮಾಡಿದವನ್ನು ಹಿಡಿಯುವುದು, ಅವನಿ
ಶಿಕ್ಷೆಯಾಗುವುದು, ಯಾವುದಕ್ಕೂ ಸಂದರ್ಭವೇ ಇಲ್ಲ! ಕೇವಲವಾಗಿ ತನ
ಮತ್ತೇನನ್ನೂ ಮಾಡಲಿಕ್ಕೂ ತಿಳಿಯದಲ್ಲ ಎಂಬ ಛಲದಿಂದ ಮಾತ್ರವಲ್ಲ
ಸ್ವಲ್ಪವೂ ಬೇರೆಆಲೋಚನೆ ಮಾಡಲಾರದೆ ಬಹಳವರ್ಷ ಈತರದ ಶ್ರಮ
ಪಿಶಾಚ ವಹಿಸಿತಲ್ಲ! ಪ್ರಾಯಶಃ ಅದರಿಂದಾಗಿ ಪುನಃ ಜನ್ಮಕ್ಕೆ ಬರುವುದನ
ಮುಂದೆಹಾಕಿವ್ಯರ್ಥಮಾಡಿಕೊಂಡಿತಲ್ಲ! ಅನಿರೀಕ್ಷಿತವಾಗಿ ಕೇಟ್‌ಫೋಕ್ಸಳಬುದ್ಧಿ
ವಂತಿಕೆಯಿಂದ ಆ ಪಿಶಾಚದ ಇರಾದೆ ತಿಳಿಯಿತು ; ಹೆಣವಿದ್ದಜಾಗವೂ ತಿ
ಯಿತು. ಆದರೆ ಪಿಶಾಚಕ್ಕೆ ಅಷ್ಟುಮಾತ್ರ ಆದದ್ದರಿಂದ ಏನುಪ್ರಯೋಜ
ವಾಯಿತು ? ತನ್ನ ಶ್ರಮವ್ಯರ್ಥವಾದೀತು ಎಂಬುದು ತೋರಲೇಇಲ್ಲವಲ್ಲ

ನಮಗೆ ಮತ್ತೊಂದುದೇಶದ ಜ್ಞಾನಬೇಕಾದರೆ ಅಲ್ಲಿಗೆಹೋದವರ
ಹೇಳುವ, ಕಂಡ ಅಲ್ಲಿನ ಸ್ವಲ್ಪ ವಿಚಾರಕ್ಕಿಂತ ಆ ದೇಶದ ಹೆಚ್ಚಿನ ವಿಚಾ
ಗಳಿರುವ ಗ್ರಂಥಗಳು ಹೆಚ್ಚುಪ್ರಯೋಜನಕಾರಿ. ಕೆಲವು ಪ್ರೇತಗಳು ಬೇಕಾ
ಪಾತ್ರಿ ಆರಿಸಿ ಅವರಮೂಲಕ ಬೇರೆಬೇರೆತರದ ಗ್ರಂಥಗಳನ್ನು ಬರೆಸಿದ್ದುಂಟು
ಬೊಂಬಾಯಿಯಲ್ಲಿ ದಿವಾನ್‌ಬಹದೂರ್ ಹೀರಾಲಾಲ್ ಖಾಜೀ I.E.S. ಎಂ
ವಿದ್ಯಾಇಲಾಖೆಯ ದೊಡ್ಡಹುದ್ದೆಯವರು ಪ್ರೇತಸಂಪರ್ಕ ಶೋಧನೆಗೆ ಶುರ
ಮಾಡಿದಾಗ ಜಗದ್ವಿಖ್ಯಾತ ಕೋನಾನ್‌ಡ್ಕೊಯಲರ್ ಪ್ರೇತವೇ ಅವರಿಗೆ ಪ್ರೇ
ಅನ್ವೇಷಕರಾಗಿ ಮುಂದೆಬಂದರು. ತನ್ನಮೂಲಕ ಹಲವು ಪ್ರೇತಾನ್ವೇಷಕ
ಆಗಿದ್ದ ಡ್ಕೊಯಲರಿಗೆ ಅಲ್ಲಿಗೆಬಂದ ಅನೇಕ ಹಿಂದುಗಳ ಮನಸ್ಸನ್ನೋದು
ಸಂದರ್ಭಸಿಕ್ಕಿ ನಮ್ಮಶಾಸ್ತ್ರದ ನರಕ ಸ್ವರ್ಗಗಳ ವಿವರಣೆಯಿಂದ ಆಕರ್ಷಿತರಾ
ಅವೆಲ್ಲ ತಮ್ಮದೇ ಅನುಭವ ಎಂದು ಮಾಡಿಕೊಂಡಿರಬೇಕು. ಆದರೆ ಹಾ
ಬಂದವರಜ್ಞಾನ ತೀರಾಕುರುಡಾಗಿದ್ದು ಅಲ್ಲಿಇಲ್ಲಿ ಕೇಳಿಬಂದದ್ದಲ್ಲದೆ ನಿಜವಾ
ಶಾಸ್ತ್ರ ಭಾಗ ಓದಿ ಅಲ್ಲದಿದ್ದು ಬಹಳ ತಪ್ಪುಗಳಿಂದ ಕೂಡಿದ್ದಾಗಿದ್ದಿರಬೇಕು
ಇಂಥ ತಪ್ಪುಜ್ಞಾನದಿಂದ ಪ್ರೇರಿತರಾದ ಅವರು ತಮ್ಮ ಕಲ್ಪನಾರಾಜ್ಯದ
ವಿಶೇಷತರದ್ದಾಗಿ ತೋರಿದ ಆ ಹೊಸ ತಳಹದಿಯ ಮೇಲೆ ಪರಲೋಕ

ರಾಳಜ್ಞಾನ ತನಗೆ ಇದೆ ಎಂಬ ಭಾವನೆ ಹೊಂದಿದರು. ಆದ್ದರಿಂದ ಖಾಜೀ
ುವರು ಮಗನನ್ನು ಅಕ್ಷರ ಚಕ್ರಕ್ಕೆ ಹಿಡಿಸಿ, ಪರಲೋಕದ ವಿಜ್ಞಾನದ ಇಡೀ
ಂದು ಪುಸ್ತಕವನ್ನೇ ಬರೆಸಿದರು. ಹೀಗೆಉಂಟಾದ "The Great Mystery
f Life beyond Death" (ಮರಣದ ಆಚೆಯ ಬಾಳಿನ ದೊಡ್ಡ ಗುಟ್ಟು)
ಂಬ ಪುಸ್ತಕದಲ್ಲಿ ಯಮ, ವಿಷ್ಣು, ಕಲಿ, ಮೋಕ್ಷ, ಸಪ್ತಲೋಕಗಳು ಎಲ್ಲ
ರುವುದು ಕಂಡು ನಮ್ಮ ಶಾಸ್ತ್ರದ ಹೇಳಿಕೆಯನ್ನು ಇದು ಸಮರ್ಥಿಸೀತು
ಂದು ಭಾವಿಸಿದರೆ ಮಾತ್ರ ತೀರಾ ತಪ್ಪಾದೀತು.

ಅದರಲ್ಲಿ ಬರುವ ಕೆಲವು ಅಸಂಬದ್ಧಗಳನ್ನು ಮಾದರಿಯಾಗಿ ಕೊಡು
ೇನೆ. ಪ್ರೇತಲೋಕದ ಪಾತಾಳದಲ್ಲಿ elementals ಎಂಬ ಪಿಶಾಚಗಳಿವೆ.
ವನ್ನು ಯಮ ತನ್ನ ದೂತರಾಗಿ ಉಪಯೋಗಿಸುತ್ತಾನೆ. ಅವು ಅತಿ
ಮರ್ಥದವು ಅತಿ ಚುರುಕಾದ, ಕಠಿಣ ಹೃದಯದ ದರ್ಪದ್ವೇಷ ಸಾಧಿಸು-
ವು. ಅವನ್ನು ಉಂಟುಮಾಡಿದ್ದು ದೇವರ ತಪ್ಪಲ್ಲವೆ? (ಪುಟ ೬೧).

ಎರಡನೆಯದಾದ ಭೂಲೋಕದಲ್ಲಿ ಸ್ವಲ್ಪ ಮಾತ್ರ ಬುದ್ಧಿ ಇರುವ ಪ್ರೇತ
ಳಿವೆ. ಅವಕ್ಕೆ ತಮ್ಮ ಏಳಿಗೆಯ ಯೋಚನೆಯೇ ಇಲ್ಲ. ಈ ಲೋಕಕ್ಕೆ ಲಕ್ಷ್ಮಿ
ೇವಿ ಅಧಿಪತಿ. ಆದರೆ ಅವಳಿಗೆ ಶಿಸ್ತು ಹೊರಿಸಲು ಅಧಿಕಾರವಿಲ್ಲ. ಈ ಪ್ರೇತ
ಳ ಏಳಿಗೆಗಾಗಿ ಏನಾದರೂ ಕಾರ್ಯಕ್ರಮ ಅಗತ್ಯವೆಂದು ನಾನು ಹೇಳಿದ್ದನ್ನು
ುಮ ಒಪ್ಪಿದ. ಆದರೆ ಮಾಡಿದ್ದೇನೂ ಇಲ್ಲ! (ಪುಟ ೬೯)

ಮೂರನೆಯದಾದ ತಪೋಲೋಕಕ್ಕೆ ಸರಸ್ವತಿ ಆಡಳಿತ. ಅಲ್ಲಿ ಮಧ್ಯಮ
ರ್ಗದ ಪ್ರೇತಗಳಿದ್ದಾವೆ. ಅತ್ಯಧಿಕ ಅಂಶ ತೀರಾ ಸಾಮಾನ್ಯ ಮಟ್ಟದವ
ದ್ದುದು ಕಾಣುವ ದೇವಿಗೆ ನಾಚಿಕೆಯಾಗುವುದಿಲ್ಲವೇ (ಪುಟ ೭೨).

ನಾಲ್ಕನೆಯದಾದ ಚಂದ್ರಲೋಕಕ್ಕೆ ಕಲಿ ಅಧಿಪತಿಯಾಗಿದ್ದ. ಅವನನ್ನು
೦,೦೦೦ ವರ್ಷಗಳ ಹಿಂದೆ ತೆಗೆದುಹಾಕಿ, ಯಮನೆ ಅಪರೂಪಕ್ಕೆ ವಿಚಾರ
ಮಾಡುತ್ತಾನೆ.

ತಾನಿರುವುದು ತುಂಬಾ ಬುದ್ಧಿ ಚುರುಕಾದವರೂ ಪರೋಪಕಾರಿಗಳೂ
ರುವ ಐದನೆಯದಾದ ಸೂರ್ಯಲೋಕದಲ್ಲಿ. ಅದಕ್ಕೆ ವಿಷ್ಣು ಅಧಿಪತಿ.
ಾನಿನ್ನು ಅವರನ್ನು ಕಂಡದ್ದಿಲ್ಲ! (ಪುಟ ೮೬, ೧೬೦)

ಆರನೆ ಸ್ವರ್ಗಕ್ಕೆ ಪವಮಾನ ದೇವರು (ಎಂದರೆ ಪವಮಾನ ವಿಷ್ಣುವಿ
ಂತಲೂ ಮೇಲೆ!) ಅಲ್ಲಿನವರಿಗೆ ದೇವರೊಡನೆ ಐಕ್ಯವಾಗುವ ಮುಕ್ತಿ
ಾಧ್ಯ. ಹಿಂದೂಗಳು ಹೇಳುವಂತೆ ಮುಕ್ತಿ ಪಡೆಯಲಿಕ್ಕೆ ೮೪ ಲಕ್ಷ ಜನ್ಮಗಳು

ಬೇಕೆಂಬುದು ಸರಿಯಲ್ಲ. ೮೪,೦೦೦ ಜನ್ಮಗಳು ಸಾಕು! (ಪುಟ ೧೦೬
ಇದು ಇನ್ನೂ ಮುಕ್ತಿ ಪಡೆಯದವನ ತೀರ್ಮಾನ)

ಏಳನೆ ದೇವಲೋಕಕ್ಕೆ ಯಮ ಅಧಿಪತಿ. ಅವ ಸೃಷ್ಟಿಕರ್ತ, ದೇವರಿಗೆ ಸರಿಸಮಾನ (ಪುಟ ೩೩). ಯಮಲೋಕಕ್ಕೆ ಜೀವಾತ್ಮರನ್ನು ಚೇತನ ರಹಿತ ವಸ್ತುಗಳಂತೆ ಭಯಂಕರ ಕ್ರೂರತೆಯಿಂದ ಕೇವಲ ೧೦ ದಿನಗಳಲ್ಲಿ ಎಳಕೊಂಡು ಬರುವುದು ಸರಿಯಲ್ಲ, ನಿಧಾನಕ್ಕೆ ಕರಕೊಂಡು ಬರಬೇಕೆಂದು ಯಮನಹತ್ತಿರ ಹೇಳಿದೆ; ಅವ ಕೇಳಲಿಲ್ಲ (ಪುಟ ೨೧–೨೩). ಯಮನ ಕೋರ್ಟಿನಲ್ಲಿ ದಿನಕ್ಕೆ ಕೇವಲ ೨೦ ಜೀವಿಗಳ ವಿಚಾರಣೆ ಮಾತ್ರ ಆಗುತ್ತದೆ; ಅವರಿಗೆ ಪುನರ್ಜನ್ಮಕ್ಕೆ ಪರ್ಮಿಟ್ಟು ಸಿಕ್ಕುತ್ತದೆ. ಬರುವವರು ಎಷ್ಟೋ ಹೆಚ್ಚು! ಹೆಚ್ಚು ಜಡ್ಜರನ್ನು ನೇಮಿಸಬೇಕೆಂದು ಯಮನಿಗೆ ಸೂಚಿಸಿದೆ. ಅವ ಕೇಳಲಿಲ್ಲ! ಯಮನದೂತರು ಮರಣಹೊಂದಿದವನ ಪರಿಚಿತರದೇಹಹೊಕ್ಕು ಮತ್ತು ಇತರರೊಡನೆ ಮಾತಾಡಿ ಅವನ ಪಾಪಪುಣ್ಯಕರ್ಮಗಳ ಜ್ಞಾನಸಂಗ್ರಹಮಾಡುತ್ತಾರೆ. ಯಮನಿಗೆ ತಿಳಿಸುತ್ತಾರೆ (ಹಾಗಾದರೆ ಯಾರೂ ಕಾಣದಾಗ ಮಾಡಿದಪಾಪಗಳಿಗೆ ಶಿಕ್ಷೆಇಲ್ಲವೇ?)

ಹೊಸಜೀವಾತ್ಮರನ್ನು ದೇವರು ಉಂಟುಮಾಡುತ್ತಲೇಇದ್ದಾನೆ! (ಪುಟ ೧೦೦) ಯಮನು ಒಳ್ಳೆಯಕಾರ್ಯಗಳು ಮತ್ತು ಕೆಟ್ಟಕಾರ್ಯಗಳು ಒಂದನ್ನೊಂದು ರದ್ದುಮಾಡಿ ಉಳಿದವುಗಳಮೇಲಿಂದ ತೀರ್ಮಾನಿಸುವುದಿಲ್ಲ. ಇದು ತಪ್ಪು. ಪ್ರೇತಗಳೆಲ್ಲ ಒಟ್ಟುಕೂಡಿ ಮುಷ್ಕರಹೂಡಿ ಈ ಸರಿಯಾದ ಕ್ರಮ ಜಾರಿಗೆಬರುವಂತೆ ಮಾಡಬೇಕೆಂದು ನಾನು ತಿಳಿಸಿದ್ದೇನೆ! (ಪುಟ ೧೦೨)

ಮೇಲಿನ ಈಮಾದರಿಗಳಿಂದ ತೋರುವುದೇನೆಂದರೆ ಸಾಯುವ ಮುಂಚೆ ಬಹಳಮೇಧಾವಿಯಾಗಿದ್ದವ, ಆದರೆ ಆ ಕಾಲದ ಈ ದೇಶಆಳುತ್ತಿದ್ದ ಬ್ರಿಟಿಷರಂತೆ ತಮ್ಮಷ್ಟುಬುದ್ಧಿವಂತರಿಲ್ಲ ಎಂದು ಭಾವಿಸುತ್ತಿದ್ದವ, ಪ್ರೇತವಾಗಿ ಕೇವಲ ತನ್ನ ಮನೋರಾಜ್ಯದಲ್ಲಿ ಇಲ್ಲಿನ ಇತರರಿಂದ ಪಡೆದ ಅಲ್ಪಜ್ಞಾನದ ಮೇಲೆ ಏನೇನೋ ಎಲ್ಲ ಕಲ್ಪಿಸಿಕೊಂಡು ಅದು ಕೇವಲ ನಿಜತ್ವ ಎಂದೇ ತೀರ್ಮಾನಿಸಿ ಪ್ರೇತಸಂಪರ್ಕದ ಮೂಲಕ ತಿಳಿಸಿದ್ದು ಕಂಡರೆ, ಈ ಭಾಗದ ಎಲ್ಲ ಪ್ರೇತಗಳ ಜ್ಞಾನ ೧೦೦ರಲ್ಲಿ ೯೦ ಅಂಶ ಅಸತ್ಯ ಮಿಶ್ರ ಎಂಬ ಭಯಬಾರದಿರದು.

ಒಂದು ಹೊಸಕ್ರಮದ ಗ್ರಂಥ

ಪಾಶ್ಚಾತ್ಯ ಪ್ರೇತಸಂಪರ್ಕ ಕ್ರಮದಿಂದ ಪ್ರೇತವು ಪಾತ್ರಿಯ ಮೂಲಕ ಗ್ರಂಥಬರೆಸಿದ್ದು ಅನೇಕ ನಡೆದಿವೆ. ಆದರೆ ನಮ್ಮಲ್ಲಿ ಕೂಡ ಅಂಜನಹಾಕಿಸಿ

ೀರುವ ಪರಲೋಕ ವ್ಯಕ್ತಿಯ ಮೂಲಕ ೧೯೫೩ರಲ್ಲಿ ಬರೆಸಿಕೊಂಡ ಆತ್ಮ
ವು ಸಂಸ್ಕೃತಶೈಲಿಯ ಒಂದು ಬೃಹದ್‌ಗ್ರಂಥದ ವಿಮರ್ಶೆ ಹಿಂದೂಪತ್ರಿಕೆ
ಲ್ಲಿ ನವಂಬರ್ ೪, ೧೯೮೦ರಲ್ಲಿ ಬಂದಿತ್ತು. ಗ್ರಂಥದ ಹೆಸರು ಶ್ರೀಲೋಕ
ನ್ಯಂ. ಗ್ರಂಥ ದೊರಕುವಸ್ಥಳ ಭಕ್ತಿವಿಳಾಸ, ಮೇಲ್ಕೋಟೆ, ಮಂಡ್ಯ ಜಿಲ್ಲೆ.
ಯ-ರೂ. ೩೦. ಲಕ್ಷ್ಮೀದಾಸರೆಂಬ ಶ್ರೀ ಮಹಾಲಕ್ಷ್ಮಿಯ ಪರಿಚಾರಕರು
ಂಗ್ಗಮ್ಮ ಎಂಬವಳ ಮೂಲಕಗ್ರಂಥ ಉಚ್ಚರಿಸಂತ್ತ ಹೋದುದು. ಆಗ
ಲವು ಆಳ್ವಾರರುಗಳೂ ತೋರಿಕೊಳ್ಳುತ್ತಿದ್ದರಂತೆ.

೪. ಯಾರು ಪ್ರೇತಜನ್ಮ ಪಡೆಯುತ್ತಾರೆ ?

ವಿಶ್ವದ ಅತ್ಯಂತಮಹತ್ವದ, ಗಹನವಾದವಿಷಯಗಳ ಜ್ಞಾನಕ್ಕೆ ನಮ್ಮ
ದ್ದದಾರಿ ತುಂಬಾದೈವಭಕ್ತಿ, ಉತ್ತಮಶೀಲ, ನಮ್ರತೆ, ಪರಿಶುದ್ಧ ಮನಸ್ಸು
ುತ್ತು ತಪಸ್ಸು. ಆಗ ಸರಿಯಾದ ಜ್ಞಾನವನ್ನು ದೇವರು ದಯೆ ಪಾಲಿಸು
್ತನೆ. ಪಾಶ್ಚಾತ್ಯರಕ್ರಮ ಕೇವಲ ಬುದ್ಧಿಚುರುಕುತನ ಮತ್ತು ಶ್ರಮ. ಆ
ಾರಿಯಿಂದ ಕಂಡುಕೊಂಡ ಅಣುಶಕ್ತಿ ಜ್ಞಾನದ ಪರಿಣಾಮ, ಅಮೇರಿಕದಲ್ಲಿ
,೦೦,೦೦೦ ಮತ್ತು ರಷ್ಯಾದಲ್ಲಿ ೫೦,೦೦೦ ಅಣುಬಾಂಬುಗಳಸಂಗ್ರಹ! ಅವಲ್ಲಿ
೦೦ ಆ ಎರಡೂ ದೇಶಗಳ ನಾಶಕ್ಕೆ ಸಾಕು. ಆದರೆ ಈ ಪೈಪೋಟಿಯಿಂದ
ಂತೆಗೆಯಲಾರದ ಬಿಕ್ಕಟ್ಟಿನಲ್ಲಿ ಪ್ರಕೃತಿದೇವಿಯು ಆ ದೇಶಗಳನ್ನು ಸಿಕ್ಕಿಸಿ
ಾಡುತ್ತಿದ್ದಾಳೆ! ಅವಳನ್ನು ವಿಚಾರಿ ಸಂಗ್ರಹಿಸಿದ ವಿಜ್ಞಾನದಿಂದ ಮಾನುಷ್ಯ.
ೂಮಿ, ಸಮುದ್ರ, ಆಕಾಶವನ್ನೆಲ್ಲ ಕಶ್ಮಲದಿಂದತುಂಬುತ್ತಿದ್ದಾನೆ. ಐಶ್ವರ್ಯ
ಪರೀತ ಬೆಳೆಯುತ್ತಿದೆ. ಆದರೆ ಎಲ್ಲಿ ಕಂಡರೂ ವಿಪರೀತಅತೃಪ್ತಿ ತಾಂಡವ
ಾಡುತ್ತಿದೆ! ಹಣದುಬ್ಬರದಿಂದ ಜನರಿಗೆವಿಪರೀತಕಷ್ಟ! ಜ್ಞಾನಕ್ಕೆ ಪಾಶ್ಚಾತ್ಯರ
ಾರಿ ದೋಷಯುಕ್ತ.

ಪ್ರೇತಜ್ಞಾನಕ್ಕೆ ಮುಖ್ಯಕಾರಣರಾದ ಪಾತ್ರಿಗಳವಿಚಾರ ನೋಡಿರಿ.
ವರಿಗೆ ಅದು ಅತ್ಯಂತಹಾನಿಕರ ಹೇಗೆಎಂದು ಸ್ವಾಮಿಅಭೇದಾನಂದರು ವಿವರಿ
ದ್ದಾರೆ. ಆದರಲ್ಲಿ ಪಾತ್ರಿಯು ಮನಸ್ಸನ್ನು ಖಾಲಿಮಾಡಿ (ಏನಾದರೂ ಬೇರೆ
ಲೋಚನೆಬಾರದಂತೆ ಸುತ್ತಲೂ ಕತ್ತಲೆಕೂಡ ಮಾಡಿ) ಪ್ರೇತದವಶಕ್ಕೆ ಬಿಡು
ದು ಮನಸ್ಸಿನ ಶಕ್ತಿ ಕೆಡಿಸುತ್ತದೆ ; ಮರವೆ ಹೆಚ್ಚಿಸುತ್ತದೆ ; ಏಕಾಗ್ರತೆಯ
ಕ್ತಿ ಕುಂದಿಸುತ್ತದೆ ; ವಿವೇಚನಾಶಕ್ತಿ ಹಾಳಾಗುತ್ತದೆ ; ಸುಲಭದಲ್ಲಿ ಸಿಟ್ಟು
ರುವಂತಾಗುತ್ತದೆ. ನೈತಿಕಭಾವನೆಕೆಡಿಸುತ್ತದೆ. ಹೀಗೆ ಅವರಲ್ಲಿ ೧೦೦ರಲ್ಲಿ

ಲಿಪಿ ಜನರಿಗೆ ನರಗಳ ದುರ್ಬಲತೆ ಬೆಳೆಯುತ್ತದೆ ಎಂದು ಶೋಧನೆಯಿಂ
ತಿಳಿದುಬಂದಿದೆ. ಪ್ರೇತಗಳಿಗೆ ಭೋಗದ ಆಸೆಇರುತ್ತದೆ ; ಆದರೆ ಅದಕ್ಕಾ
ದೇಹದ ಅನುಕೂಲತೆ ಇಲ್ಲ. ಅವು ಪಾತ್ರಿಯ ದೇಹದಲ್ಲಿ ಕಾಮದ ಬಯ
ಪ್ರೇರಿಸಿ ತಮ್ಮ ಬಯಕೆ ಪೂರೈಸಿಕೊಳ್ಳುವುದು ಅವರ ನೈತಿಕಮಟ್ಟ ಕೆಡಿಸಲಿ
ಕಾರಣವಂತೆ. ಪ್ರೇತಗಳು ಒಂದು ಸ್ಥಿತಿಯಲ್ಲಿ ಇರಬೇಕೆಂದು ದೇವರ ಇಚ್
ಯಾಗಿರುವಾಗ ಅವನ್ನು ಆಗಾಗ ಪ್ರೇತ ಸಂಪರ್ಕಕ್ಕೆ ಕರೆಯುವುದೂ ದೇವರ
ಮೆಚ್ಚದಕೆಲಸ. ಹಣಕ್ಕಾಗಿ ಪಾತ್ರಿ ಪ್ರೇತಗಳಿಗೆ ತನ್ನದೇಹ ಕೊಡುವುದ
ಸೂಳೆ ಕಾಮುಕರಿಗೆ ದೇಹಕೊಡುವುದೂ ಒಂದೇ ತರದ ಅಸಹ್ಯಕಾರ್ಯ.

ಆದರೆ ನಮ್ಮಲ್ಲಿನ ಭೂತದಪಾತ್ರಿಗಳ ಕ್ರಮವೇಬೇರೆ. ಅಲ್ಲಿ ಮನಸ
ಖಾಲಿಮಾಡಬೇಕಿಲ್ಲ. ತಾನುಗೌರವಿಸುವ ನಿರ್ದಿಷ್ಟಭೂತಕ್ಕೆಮಾತ್ರ, ಸಮಾಜ
ಹಿತಕ್ಕಾಗಿ ಪಾತ್ರಿ ಆವೇಶಪಡೆಯುತ್ತಾನೆ. ಭೂತದ ಬಗ್ಗೆ ಗೌರವ ಕೃತಜ್ಞ
ಇದೆ. ಅದೊಂದು ಕೇವಲ ಸಮಾಜದಹಿತದ ಕೃತ್ಯ. ಪಾತ್ರಿಯ ಶಕ್ತಿಕುಂದ
ವುದೂ ಇಲ್ಲ. ಮನಸ್ಸುಕೆಡುವುದೂ ಇಲ್ಲ ಎಂಬುದು ಅನುಭವ.

ಪಾಶ್ಚಾತ್ಯತರದ ಪ್ರೇತಸಂಪರ್ಕಗಳ ಮೂಲಕ ಸಾಮಾನ್ಯಮಟ್ಟದವಾ
ಪ್ರೇತಗಳು ಕರೆದಾಗ ಬರುವುದೇ ಕ್ರಮವಾದ್ದರಿಂದ ಸತ್ತವರು ಎಲ್ಲ ಪ್ರೇ
ವಾಗುತ್ತಾರೆ ಎಂದು ನಮ್ಮಶಾಸ್ತ್ರ ತಿಳಿಸುವುದು ನಿಜವೆಂದಾಯಿತು. ಅ
ತಮ್ಮ ಹಿಂದಿನ ಅನುಭವದಂತೆ ಬಂಧುಗಳ ವಿಚಾರ ಹೇಳುವುದೂ ನಿಜವಿ
ತ್ತದೆ. ಕೇಟ್ ಫ್ಲೋಕ್ಸಳು ಕಂಡುಕೊಂಡಂತೆ, ಹಿಂದಿನ ದೇಹವನ್ನು ಹುಗಿ
ಸ್ಥಳ ತಿಳಿಸಿದಾಗ ಅಲ್ಲಿ ಮನುಷ್ಯನ ಅಸ್ಥಿಕೂದಲು ಸಿಕ್ಕಿತು. ಟೈಟೇನಿಕ
ಸ್ಟೀಮರ್ ಮುಳುಗಿದ್ದು ಹೇಗೆ ಎಂದು ಮೃತನಾದ ಅದರ ಕ್ಯಾಪ್ಟನ್ ತಿ
ಸಿದ್ದು ನಿಜವೆಂದು ಅನಂತರತಿಳಿದುಬಂತು. ಹೀಗೆ ಅವುಗಳ ಅನೇಕ ಲೌಕಿ
ಅನುಭವಗಳ ಜ್ಞಾನ ನಿಜವೆಂದಾಗಿದೆ. ಆದರೆ ಪ್ರೇತಲೋಕ, ನರಕ, ಸ್ವರ
ಮುಂತಾದ ಧಾರ್ಮಿಕ ವಿಭಾಗದಲ್ಲಿ ಅವುಹಿಂದೆ ಕಲಿತಿದ್ದಜ್ಞಾನ, ಇತರ
ಮನಸ್ಸಿನ ಶೋಧನೆಯಿಂದ ಪಡೆದ ಜ್ಞಾನಗಳ ತಳಹದಿಯಮೇಲೆ ತಮ
ಮನೋಲೋಕದಲ್ಲಿ ಉಂಟುಮಾಡಿಕೊಂಡವನ್ನ ನಿಜತ್ವವೆಂದೇ ಭಾವಿಸಿ ಹೇಳ
ತ್ತವೆಯೇ ಹೊರತು ನಿಜತ್ವವನ್ನಲ್ಲ ಎಂಬುದರಿಂದ, ನಮ್ಮ ಮರಣದಆಚೆಯ
ಸರಿಯಾದ ಜ್ಞಾನಕ್ಕೆ ಈ ವಿದ್ಯೆ ನಿಷ್ಪ್ರಯೋಜಕ. ಅಂತೆಯೇ ಕೇವಲ ಒಂದ
ಜನ್ಮ ಮಾತ್ರ ; ಆಮೇಲೆ ಜೀವಾತ್ಮ ದೇಹದೊಡನೆ ಅದನ್ನು ಹುಗಿದಲ್ಲ
ನಾಟಿಕೊಂಡಿರುತ್ತದೆ. ಪುನರ್ಜನ್ಮವಿಲ್ಲ ಎಂಬ ಕೆಲವುಧರ್ಮಗಳ ಹೇಳಿಕೆಯ

ರಾಳವಾದ ಪುನರ್ಜನ್ಮಗಳ ವಾರ್ತೆಗಳಿಂದಾಗಿ ಸರಿಯಲ್ಲವೆಂದೇ ತೀರ್ಮಾನಿಸ ಕಾಗುತ್ತದೆ.

ನಾತನಧರ್ಮದ ತಪಸ್ಸಿಂದ ದೇವರಿಂದ ಬಂದ ಜ್ಞಾನವು ನಿಜಕ್ಕೂ ದ್ವಿತೀಯ ಮಟ್ಟದ್ದು

ಸನಾತನಧರ್ಮದ ಜ್ಞಾನವು ಅತ್ಯಂತ ಆಳವಾದುದು ಎಂಬುದಕ್ಕೆ ಹಳ ಆಧಾರಗಳಿವೆ; ಸ್ವಲ್ಪವನ್ನು ನೋಡಿರಿ. ವಿಜ್ಞಾನಿಯು ಬಹಳ ೋಧನೆ ಮಾಡಿ ಈ ವಿಶ್ವದಲ್ಲಿ ಅನಂತ ಸೂರ್ಯಮಂಡಲಗಳಿವೆ ಎಂದ. ನ್ಮಶಾಸ್ತ್ರವು ಪ್ರತಿ ಸೂರ್ಯಮಂಡಲವನ್ನು ಒಂದು ಬ್ರಹ್ಮಾಂಡ ಎನ್ನುತ್ತಾ, ೇವರನ್ನು ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ ಎಂದು ಸಾರಿದೆ. ಇಡೀ ಶ್ವವೆಲ್ಲ ಕೇವಲ ಅಣುಗಳಮೂಲಕ ರಚಿತವಾಯಿತು. ಅಣುವೆಲ್ಲ ಅಣುಶಕ್ತಿ ಂದಾಯಿತು ಎಂದು ವಿಜ್ಞಾನಿ ಹೇಳಿದರೆ. ನಮ್ಮಶಾಸ್ತ್ರವು ಪರಬ್ರಹ್ಮನಿಂದ ಷ್ಟಿಕಾರ್ಯಕ್ಕಾಗಿ ಶಕ್ತಿದೇವಿ ಉದ್ಭವಿಸಿದಳು, ಅವಳು ವಿಶ್ವದ ಎಲ್ಲ ವಸ್ತು ನ್ನೂ ಕೇವಲ ಶಕ್ತಿಯಿಂದ ನಿರ್ಮಿಸಿದಳು ಎಂದಿದೆ. ಈ ವಿಶ್ವಕ್ಕೆ ಕೇವಲ ,೦೦೦ ವರ್ಷ ಆಯಿತು ಎಂಬುದು 'ಬೈಬಲ್ಲಿನ ಸೂಚನೆಯಾದರೆ, ಅದು ಂಟಾಗಿ ಕೆಲವು ಸಾವಿರ ಮಿಲಿಯ ವರ್ಷಗಳಾದವು ಎಂಬುದು ವಿಜ್ಞಾನದ ೋಧನೆಯಾಗಿದೆ. ನಮ್ಮಶಾಸ್ತ್ರದಂತೆ ನಾವು ನಿತ್ಯ ಸಂಕಲ್ಪದಲ್ಲಿ ಹೇಳುವಂತೆ ೦೦೦ ಮಿಲಿಯ ವರ್ಷಗಳಾಯಿತೆಂಬುದೂ ಇದಕ್ಕೆ ಹೊಂದಿಕೆಯಾಗಿದೆ. ಂಥ ದೃಷ್ಟಾಂತಗಳು ಬೇರೆ ಅನೇಕವೂ ಇದ್ದು ಅವು ನಮ್ಮಶಾಸ್ತ್ರವು ಪೂರ್ಣ ಾಗಿ ದಿವ್ಯಜ್ಞಾನದಿಂದಲೆ ನಿರ್ಮಿತವಾಯಿತು ಎಂಬುದನ್ನು ರುಜುಪಡಿಸು ವೆ. ಆದ್ದರಿಂದ ಪ್ರೇತಗಳವಿಚಾರ, ನರಕದವಿಚಾರ, ಪುನರ್ಜನ್ಮದವಿಚಾರ ನ್ಮಶಾಸ್ತ್ರದ ಆಧಾರವೇ ಹೆಚ್ಚು ಸಹಾಯಕ. ಆದ್ದರಿಂದ ಮುಂದೆ ಅದನ್ನೇ ುಖ್ಯವಾಗಿ ಉದಹರಿಸುತ್ತೇನೆ.

ಸನಾತನಧರ್ಮದಲ್ಲಿ ಜನಿಸಿದವರಲ್ಲಿ ಯಾರೆಲ್ಲ ಪ್ರೇತರಾಗಿ ಉಳಿಯು ್ತಾರೆ, ಯಾರು ಆಗುವುದಿಲ್ಲ ಎಂಬುದಕ್ಕೆ ಮಹಾಭಾರತದಲ್ಲಿ, ಪದ್ಮಪುರಾಣ ಲ್ಲಿ ಮುಂತಾಗಿ ವಿವರಣೆಗಳಿವೆ. ಇಲ್ಲಿ ಅದರ ಕೆಲವು ಸಂಗ್ರಹ ಕೊಟ್ಟಿರುವೆ. **ಮಹಾಭಾರತದಲ್ಲಿ** ಶಾಂತಿಪರ್ವದಲ್ಲಿ ಯುಧಿಷ್ಠಿರನು ಈ ಪ್ರಶ್ನೆ ಕೇಳಿದಾಗ ೀಷ್ಮರು ಅದನ್ನು ವಿವರಿಸಿದ್ದರು. ಬ್ರಾಹ್ಮಣಜನ್ಮ ಹೊಂದಿದ್ದರೂ ೂದ್ರಾನ್ನ ತಿನ್ನುವವರು, ಮದ್ಯ ಕುಡಿಯುವವರು. ಪರಸ್ತ್ರೀ ಸಂಭೋಗ

ಮಾಡುವವರು. ಮಾಂಸ ತಿನ್ನುವವರು ಪ್ರೇತರಾಗುತ್ತಾರೆ. ದೇವರಹ
ಗುರುಗಳಹಣ ಮತ್ತು ಬ್ರಾಹ್ಮಣರ ಹಣ ಅಪಹರಿಸುವವರು, ಹಣಕ್ಕಾ
ಮಗಳ ಮದುವೆ ಮಾಡುವವರು, ಪ್ರೇತರಾಗುತ್ತಾರೆ.

ತಪ್ಪು ಮಾಡದ ತಾಯಿ, ತಂದೆ, ಹೆಂಡತಿ, ತಂಗಿ ಅಥವಾ ಮಗಳನ್
ಬಿಡುವವರು, ಪೂಜೆಗೆ ಯೋಗ್ಯರಲ್ಲದವರನ್ನು ಪೂಜಿಸುವವರು, ಶೂದ್ರ
ಸೇವೆಮಾಡುವವರು, ಬ್ರಾಹ್ಮಣರಹತ್ಯೆಮಾಡುವವರು, ಗೋವಿನಹತ್ಯೆಮಾ
ವವರು (ಗೋಮಾಂಸ ತಿನ್ನುವವರಿಗೂ ಗೋಹತ್ಯೆಯ ಪಾಪ ಬರುತ್ತದೆ
ಒಡೆಯನಹತ್ಯೆ, ಗುರುಪತ್ನಿ ಸಂಭೋಗ (ಪತ್ನಿಯಲ್ಲದೆ ಸಮೀಪದ ಬಂಧುಗ
ಸಂಭೋಗವೂ ಈ ಪಾಪದವರ್ಗದಲ್ಲಿ ಸೇರಿದೆ), ಸುವರ್ಣ ಕಳವುಮಾಡು
ವರು, ಪ್ರೇತರಾಗುತ್ತಾರೆ.

ಪದ್ಮಪುರಾಣದಲ್ಲಿ ಸೃಷ್ಟಿಖಂಡದ ೫೮ನೇ ಅಧ್ಯಾಯದಲ್ಲಿ (೮೬-೧೦೦
ಪ್ರೇತರಾಗಲಿಕ್ಕೆ ಕೊಟ್ಟಕಾರಣಗಳು :—ತಂದೆತಾಯಿಗಳನ್ನು ನಿಂದಿಸುವವರು
ದೇವರನ್ನು ನಿಂದಿಸುವವರು, ದೇವರನ್ನು ಶಾಸ್ತ್ರವನ್ನು ಅಲ್ಲಗಳೆಯು
ನಾಸ್ತಿಕರು, ತಮ್ಮವರ್ಣ ಮತ್ತು ಆಶ್ರಮಧರ್ಮಗಳಲ್ಲಿ ನಿರತರಾಗದೆ ವೃಥ
ಜೀವಿಸುವವರು, ಕುತ್ತಿಗೆಗೆ ಹಗ್ಗ ಹಾಕಿಕೊಂಡು ಅಥವಾ ನೀರಿಗೆಹಾರಿ, ಶ
ಗಳಿಂದ ಅಥವಾ ವಿಷತಿಂದು, ಪ್ರಾಣಕಳಕೊಂಡವರು, ಅಂತ್ಯಜರು (ಶೂ
ವರ್ಣಕ್ಕೂ ಕೆಳಗಿನವರು), ಪತಿತರು (ತಮ್ಮ ವರ್ಣಧರ್ಮಕ್ಕೆ ವಿರುದ್ಧವಾ
ಜೀವಿಸಿ ಧರ್ಮಕೆಡಿಸಿಕೊಂಡವರು), ಪಾಪರೋಗವುಳ್ಳವರು (ಕೆಲವು ಅತಿಕೆ
ಕೃತ್ಯಗಳನ್ನುಮಾಡಿದವರಿಗೆ ಅನಂತರ ಜನ್ಮದಲ್ಲಿ ಯಾವಪಾಪಕ್ಕೆ ಯಾವರೋ
ಬರುತ್ತದೆಎಂದು ಶಾಸ್ತ್ರದಲ್ಲಿದೆ. ಅದಕ್ಕೆಕೇವಲ ಚಿಕಿತ್ಸೆಯನ್ನಲ್ಲ, ಪ್ರಾಯಶ್ಚಿ
ವನ್ನೂ ಮಾಡಿಕೊಳ್ಳಬೇಕು ; ಹಾಗೆಮಾಡದೆ ಸತ್ತವರು), ಪ್ರೇತರಾಗುತ್ತಾ

ವಿವಾಹವಾಗದವರು (ಉಪನಯನವಾದವರು ಕೇವಲ ಆತ್ಮಶ್ರೇಯ
ಗಾಗಿ ಬ್ರಹ್ಮಚಾರಿಗಳಾಗಿ ಬಾಳಬಹುದು. ಆದರೆ ಆ ಧ್ಯೇಯವಿಲ್ಲದವರಿ
ವಿವಾಹ ಸಂಸ್ಕಾರವಾಗಿ ತನ್ಮೂಲಕ ಗೃಹಸ್ಥಜೀವನ, ಪುತ್ರ ಸಂತಾನ, ಅತಿ
ಸತ್ಕಾರ, ವೈಶ್ವದೇವ ಮುಂತಾದವು ಅಗತ್ಯ) ಬ್ರಹ್ಮಚಾರಿಯಾಗಿದ್ದಾಗ
ಸತ್ತರೆ ಅರ್ಕಗಿಡದೊಡನೆ ವಿವಾಹಮಾಡಿ ಅಂತಿಮಕ್ರಿಯೆ ಮಾಡುವುದುಂಟು
ಸ್ತ್ರೀಯರಿಗೆ ವಿವಾಹವು ಅತಿಮುಖ್ಯ ಸಂಸ್ಕಾರ. (ಅವರೂ ವಿವಾಹವಾಗ
ಸತ್ತಾಗ ಪ್ರೇತತ್ವ ತಪ್ಪಿಸಲಿಕ್ಕೆ ಬ್ರಾಹ್ಮಣನಿಗೆ ಹಣಕೊಟ್ಟು) ಸ್ತ್ರೀಯ
ದೊಡನೆ ವಿವಾಹಮಾಡಿ, ಅಂತಿಮಕ್ರಿಯೆ ಮಾಡುವ ಕ್ರಮವೂ ಇತ್ತು

ಸಾಹಸ ಕರ್ಮಮಾಡುವವರು ತಮ್ಮ ಶಕ್ತಿಮೀರಿ ಸಾಹಸ ತೋರಿಸಲಿಕ್ಕೆ ರ್ವತಾರೋಹಣ ಮುಂತಾದ್ದು ಮಾಡಿ ಆದರಲ್ಲೇ ಸತ್ತವರು), ರಾಜ್ಯ ದ್ರೋಹಿಗಳು, ಪಿತೃದ್ರೋಹಿಗಳು, ಧ್ಯಾನಮಾಡದವರು, ಅಧ್ಯಯನಮಾಡ ದವರು (ಮೇಲ್ಜಾತಿಯವರು ದಿನಾಲೂ ಶಾಸ್ತ್ರಾಧ್ಯಯನ ಮಾಡಬೇಕು– ಸ್ವಾಧ್ಯಾಯ ಪ್ರವಚನಾಭ್ಯಾಮ್ ನಪ್ರಮದಿತವ್ಯಮ್ ಎಂಬ ವಿಧಿ ಇದೆ. ನ್ಮೂಲಕ ಅವರು ಶಾಸ್ತ್ರತಿಳಕೊಂಡರೆ ಮಾತ್ರವೇ ಅದಕ್ಕೆ ವಿರುದ್ಧವಾಗಿ ಜೀವಿಸರು. ಶಾಸ್ತ್ರ ಏನೆಂದೇತಿಳಿಯದವರ ಬಾಳು ಖಂಡಿತ ಅಧರ್ಮದಬಾಳು ಗದಿರದು) ವ್ರತ, ದೇವತಾರ್ಚನೆ ಇಲ್ಲದವರು (ದ್ವಿಜರಿಗೆ ನಿತ್ಯ ದೇವರಪೂಜೆ ಧಿಸಲ್ಪಟ್ಟಿದೆ. ವ್ರತಗಳಲ್ಲಿ ಶ್ರೀಕೃಷ್ಣಜನ್ಮಾಷ್ಟಮಿ, ರಾಮನವಮಿ, ನರಸಿಂಹ ಯಂತಿ, ಶರನ್ನವರಾತ್ರಿ ದೇವಿಪೂಜೆ, ಶಿವರಾತ್ರಿ ಪೂಜೆನಿತ್ಯ ; ಎಂದರೆ ಆಚರಿ ಲೇಬೇಕಾದವು. ಆಚರಿಸದಿದ್ದರೆಪಾಪ, ಆಚರಿಸಿದರೆಪುಣ್ಯ, ಬರುತ್ತದೆ. ಕಾದಶೀ ವ್ರತವೂ ಅಗತ್ಯವೇ), ಮಂತ್ರತಿಳಿಯದವರು (ದ್ವಿಜರಿಗೆ ಅವರವರ ಂಧ್ಯೋಪಾಸನೆ ಮಂತ್ರಗಳು ಮುಂತಾದವು ವಿಧಿಸಲ್ಪಟ್ಟಿವೆ), ಪಾಪತರದ ಗಮನ, ಮ್ಲೇಂಚದೇಶದಲ್ಲಿ ಮರಣ, ಮ್ಲೇಂಚಭಾಷೆ, ಕ್ರಮ, (ನಾಗರಿಕತೆ) ನುಸರಿಸುವವರು ಪ್ರೇತರಾಗುತ್ತಾರೆ. ಹೆಂಗಸರ ಹಣದಿಂದಜೀವಿಸುವವರು ಪ್ರೇತರಾಗುತ್ತಾರೆ.

ಸ್ತ್ರೀಯರನ್ನುರಕ್ಷಿಸದವರು, ಸದ್ಗುಣಿಯಾದವನೂ ಹಸಿವಿನಿಂದ ಬಳಲಿ ದವನೂ ಆದ ವಿಪ್ರನನ್ನು ಉಪಚರಿಸದವರು, ಮ್ಲೇಂಚರಿಗೂ ಕಟುಕರಿಗೂ ನವನ್ನುಮಾರುವವರು (ದನವನ್ನು ಕೊಲ್ಲಲಿಕ್ಕೆ ಕೇಳುತ್ತಾರೆ ಎಂಬ ಸಂಶಯ ಂದಾಗಲೂ ಮುಸಲ್ಮಾನರಿಗೂ, ಅವರ ಹಿಂದೂ ದಲಾಲಿಗಳಿಗೂ, ಹಿಂದೂ ಳು ಗೋಮಾತೆಯನ್ನು ಮಾರುವುದು, ಆದರ ಮಾಂಸಬಡಿಸುವ ಹೋಟೆಲು ಳಲ್ಲಿ ತಿನ್ನುವುದು, ಹಿಂದೂಗಳಲ್ಲಿ ಸಾಮಾನ್ಯಕ್ರಮವಾಗಿದ್ದು ಇದು ನಮ್ಮ ರ್ಮದಅವನತಿಗೆ ಒಂದು ಅತಿದೊಡ್ಡ ಕಾರಣವಿರಬೇಕು), ಅಶೌಚದಮಧ್ಯ ಲ್ಲಿ ಹುಟ್ಟಿದವರು (ಸೂತಕದಲ್ಲಿ), ಜಾತಕರ್ಮ ಮುಂತಾದ ಸಂಸ್ಕಾರಗಳಿಲ್ಲದ ರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಅವರ ಶ್ರೇಷ್ಠತೆಹೆಚ್ಚಿಸಿ ಧಾರ್ಮಿಕ ಧನೆಗೆ ಶಕ್ತಿಬೆಳೆಸಲಿಕ್ಕೆ ಜಾತಕರ್ಮ, ನಾಮಕರ್ಣ, ಉಪನಯನ, ಮದುವೆ ಮುಂತಾದ ಅನೇಕ ಸಂಸ್ಕಾರಗಳಿವೆ; ಇವನ್ನು ಲೋಪಮಾಡುವುದು, ಅಥವಾ ವಲ ಹೆಸರಿಗೆಮಾತ್ರ ಎಂಬಂತೆ ನಡೆಸುವುದು ತಪ್ಪು) ಪ್ರೇತಜನ್ಮ ಹೊಂದು ತ್ತಾರೆ. ಸ್ನಾನ, ಸಂಧ್ಯಾವಂದನೆ, ವೇದಾಧ್ಯಯನ, ಯಜ್ಞಗಳು ಇವನ್ನು

ಯಾವಾಗಲೂ ಮಾಡದಿರುವವರು (ಶಾಸ್ತ್ರದಲ್ಲಿ ಇವು ಕ್ಷತ್ರಿಯರಿಗೂ ವೈಶ
ರಿಗೂ ಕೂಡ ವಿಧಿಸಲ್ಪಟ್ಟಿವೆ), ಎಂಜಲಿಲೆಗಳನ್ನು ಪೂಜ್ಯತರದ ತೀರ್ಥಗಳ
ಹಾಕುವವರು (ತೀರ್ಥದ ನೀರನ್ನು ಇತರತರದ ಅಶುದ್ಧ ಕಾರ್ಯಗಳಿಂ
ಕೆಡಿಸುವುದು ಶಿಸ್ತು ತಪ್ಪಿದ ಹಿಂದುಗಳಲ್ಲಿ ಸಾಮಾನ್ಯವಾಗಿ ಬಿಟ್ಟಿದೆ)
ಪಾಯಿಖಾನೆಗಳಲ್ಲಿ ನೀರು ಕಂತುವ ತರದವನ್ನು ದೇವಸ್ಥಾನದ ತೀರ್ಥಗ
ತೀರಾಹತ್ತಿರ ಕಟ್ಟುವುದು ತೀರಾಪಾಪ ತಾರದಿರದು. ದಾನ ಗೌರವ ಪೂ
ಗಳಿಂದ ಬ್ರಾಹ್ಮಣರನ್ನು ಸತ್ಕರಿಸದವರು (ಸನಾತನ ಧರ್ಮಕ್ಕೆ ಇನ್ನೊಂದ
ಹೆಸರು ವೇದಧರ್ಮವೆಂದು. ಆದರ ವೇದಶಾಸ್ತ್ರಗಳನ್ನು ಕಾಪಾಡಿಕೊಂಡ
ಬಂದವರು ಬ್ರಾಹ್ಮಣರು. ಆ ವರ್ಗ ನಾಶವಾದರೆ ಸನಾತನಧರ್ಮ ನಾ
ವಾಗದಿರದು. ಆದ್ದರಿಂದ ಶಾಸ್ತ್ರವು ಹಲವು ಬೋಧನೆಗಳಿಂದ ಬ್ರಾಹ್ಮಣರ
ಸಮಾಜದ ಸಹಾಯ ಪಡೆಯಲಿಕ್ಕೆ ಅರ್ಹರು ಎಂದಿದೆ. ದಾನ ಬಡವರಿ
ಕೊಡುವ ಧರ್ಮ ಅಥವಾ ಭಿಕ್ಷೆಯಂತಲ್ಲ. ದಾನಕೊಡುವವನ ಪಾಪವು ದಾ
ಪಡೆದ ಬ್ರಾಹ್ಮಣನಿಗೆ ಬರುತ್ತದೆ. ಆದರೆ ಅದನ್ನು ವೇದಪಠನದಿಂ
ಗಾಯತ್ರೀಜಪದಿಂದ ಅವ ಜೀರ್ಣಿಸಿಕೊಳ್ಳಬಲ್ಲ. ಈ ವ್ಯವಸ್ಥೆ ಸಮಾಜ
ಅನುಕೂಲ), ಗಂಡನನ್ನು ಬಿಟ್ಟು ಅನ್ಯಪುರುಷನೊಡನೆ ಬಾಳುವ ಸ್ತ್ರೀಯರ
ಗಂಡನನ್ನುಬಿಟ್ಟು ತಾವು ಮಾತ್ರ ಮೃಷ್ಟಾನ್ನ ಭುಂಜಿಸುವವರು, ಬ್ರಾಹ್ಮ
ಸ್ವತ್ತನ್ನು ಅಪಹರಿಸುವವರು, ನಿಷಿದ್ಧವಾದ ಪದಾರ್ಥ ತಿನ್ನುವವರು (ಮಾಂ
ಮದ್ಯ ನಿಷಿದ್ಧವಿರುವವರು ಅವನ್ನು ಭುಂಜಿಸುವುದು, ಎಂಜಲ ನಿಷೇ
ಹೇಳಿರುವವರು ಅದನ್ನು ನಿರ್ಲಕ್ಷಿಸುವುದು, ಇತ್ಯಾದಿ), ಅತಿಥಿಗಳನ
ಅಪಮಾನ ಮಾಡುವವರು, ಬಲತ್ಕಾರದಿಂದ ಇತರರಪದಾರ್ಥ ತೆಗೆದುಕೊಳ
ವವರು (ಬಿಕ್ಕಟ್ಟಲ್ಲಿ ಬಿದ್ದವನಿಂದ ಲಂಚ, ಕಾಳಸಂತೆ ಕ್ರಯ ಪಡೆಯುವುದ
ಈ ವರ್ಗವೇ) ಪ್ರೇತರಾಗುತ್ತಾರೆ.

ಮೃತನಿಗೆ ಅಂತಿಮಕ್ರಿಯೆಗಳನ್ನು ಶಾಸ್ತ್ರೋಕ್ತವಾಗಿ ಕ್ರಮದಂತೆ ಮಾ
ಬೇಕು. ಇಲ್ಲವಾದರೆ ಅನಂತರ ಎಷ್ಟು ಶ್ರಾದ್ಧಗಳನ್ನು ಮಾಡಿದರೂ ಪ್ರೇತ
ನಿವಾರಣೆಯಾಗದು (ಸೃಷ್ಟಿಖಂಡ ಅ ೪೭, ೨೬೨). ತಂದೆ, ತಾಯಿ, ಸ್ತ್ರಿ
ಬಾಲಕ, ಬ್ರಾಹ್ಮಣ ಮುಂತಾದವರಿಂದ ಮೋಸಮಾಡಿ ಅವರ ಧನ ಅಪಹ
ದವರು, ನಿತ್ಯವೂ ಪರರ ದೋಷಗಳನ್ನೇ ನೋಡುವವರು, ಶಾಸ್ತ್ರಹೀಯಾ
ಸುವವರು, ವಿಶೇಷವಾಗಿ ದೇವರ ಸ್ವತ್ತನ್ನು ಅಪಹರಿಸುವವರು ಪಿಶಾ
ರಾಗುತ್ತಾರೆ (ಅವಂತ್ಯ ಖಂಡ ೨ ಅ ೬೮).

ಭವಿಷ್ಯಪುರಾಣದಲ್ಲಿ (ಉತ್ತರಪರ್ವ, ಅ. ೮೨) ಸೀರಭದ್ರನೆಂಬ ,ಶ್ಯನ ಪ್ರೇತವು ಮರುಭೂಮಿಯಲ್ಲಿ ಅಲೆದು ಕಂಗಾಲಾಗಿದ್ದಾಗ ಅಲ್ಲಿಗೆ ಕಸ್ಮಾತ್ತಾಗಿ ಬಂದಿದ್ದ ಶ್ರೇಷ್ಠ ಬ್ರಾಹ್ಮಣನಿಗೆ ತೋರಿಕೊಂಡು ಅವನಪ್ರಶ್ನೆಗೆ ೀಳುತ್ತದೆ—ನಾನು ಪರಲೋಕದ ಆಲೋಚನೆಯೇ ಇಲ್ಲದೆ ಧನ ಲೋಭದಿಂದ ಪ, ಪೂಜೆ, ಶ್ರಾದ್ಧ ಎಲ್ಲಬಿಟ್ಟೆ. ದಾನಮಾಡಲಿಲ್ಲ. ಅನ್ಯಾಯದಿಂದ ಹಣ ಂಪಾದಿಸಿದೆ, ಆ ಧನವನ್ನು ಈಗ ಮಕ್ಕಳು ಭೋಗಿಸುತ್ತಿದ್ದಾರೆ. ಆದರೆ ಾನು ಮಾತ್ರ ಒಕ್ಕಂಟಿಯಾಗಿ ಆ ಪಾಪಗಳಿಗೆಲ್ಲ ಶಿಕ್ಷೆ ಅನುಭವಿಸುತ್ತಿದ್ದೇನೆ ಂದಿತು. ಇದು ಆ ವೈಶ್ಯನಕತೆ ಮಾತ್ರಅಲ್ಲ, ಈ ಕಾಲದ ಅತ್ಯಧಿಕಬ್ರಾಹ್ಮಣ ,ೈಶ್ಯಕ್ಷತ್ರಿಯರ ಜೀವನಕ್ರಮವಾಗಿದ್ದು ಆ ಪ್ರೇತಗತಿ ಇವರಿಗೂ ಕಾದಿದೆ.

,ೇತಗಳ ಆಹಾರ

ಪ್ರೇತಗಳು ಎಷ್ಟುಬಾಯಾರಿಕೆಯಾದರೂ ಕೆರೆನದಿಗಳನೀರನ್ನು ಮುಟ್ಟ ಾಡದು. ಯತ್ನಿಸಿದರೆ ಏಟುಬೀಳುತ್ತದೆ. ಶುದ್ಧಾಚಾರವಿರುವ ಮನೆಗಳಲ್ಲಿ ,ೇತಗಳಿಗೆ ತಿನ್ನಲು ಪ್ರವೇಶವಿಲ್ಲ. ದೇವರಿಗೆ ಅನ್ನವನ್ನು ನೈವೇದ್ಯ ಮಾಡಿ ಾಗ ದೇವರು ಅದನ್ನು ಗ್ರಹಣ ಭಕ್ಷಣ (ಮೂಸಿ ಸ್ವೀಕರಿಸುವುದು) ಮಾಡು ್ತಾನೆ. ಆಗ ಆ ಅನ್ನವು ಅವನ ಪ್ರಸಾದವಾಗಿ, ಭುಂಜಿಸಿದವರಿಗೆ ಸಾತ್ವಿಕತೆ ರುತ್ತದೆ. ಆದರೆ ನಿಯಮವಿಲ್ಲದ ಮನೆಗಳಲ್ಲಿನ ಅನ್ನವು ಪ್ರೇತಗಳುಮೂಸಿ ವನ್ನು ತಮ್ಮ ಪ್ರಸಾದವಾಗಿ ಮಾಡಿದವು ನಮಗೆ ಅಹಿತಕರ. ಮುಂಚೆ ಲ್ಲೆಲ್ಲೂ ಮನೆಗಳನ್ನು ಸಗಣಿಸಾರಿಸಿ ಶುದ್ಧಮಾಡುವುದು, ಅನ್ನ ವೈಶ್ವದೇವರ ೂಲಕ ದೇವತೆಗಳಿಗೆ ಅರ್ಪಿಸುವುದು ಅತಿಥಿಸತ್ಕಾರಮಾಡಿ ಉಳಿದ ಶ್ರೇಷ್ಠ ಾದ್ದನ್ನು ಭುಂಜಿಸುವುದು, ಶ್ರಾದ್ಧದಅನ್ನ (ರಜಸ್ವಲೆ ಮುಂತಾದ ಅಶುದ್ಧರು ೋಡದಿದ್ದುದು ಮಾತೃಪಿತೃಗಳು ಸ್ವೀಕರಿಸುವರು), ಮನೆಯಲ್ಲಿ ವೇದಮಂತ್ರ ಳು ಕೇಳಿಸುತ್ತಿರುವುದು, ಕ್ರಮವಾಗಿತ್ತು. ಪ್ರೇತಗಳಿಗೆ ಅಲ್ಲಿ ಪ್ರವೇಶವಿಲ್ಲ ದ್ದು, ಅವು ಹೊರಗಿನಹೊಲಸು, ಮೂಳೆ, ಕಫ, ಮುಂತಾದುವನ್ನು ಮಾತ್ರ ,ಹಣ ಮಾಡಬೇಕಿತ್ತು. ಆದರೆ ಈಗ ಆಚಾರಹೀನಮನೆಗಳೇ ಅತ್ಯಧಿಕವಾಗಿ ದ್ದು, ಪ್ರೇತಗಳು ಒಳಗಿನ ಅನ್ನ ಮೂಸಿ ಅಶುದ್ಧ ಮಾಡಿ ತಿನ್ನುವುದರಿಂದ ೋಷವುಂಟುಮಾಡುತ್ತಿವೆ. ಪಾಶ್ಚಾತ್ಯಪ್ರೇತಗಳು ತಮಗೆಆಹಾರದಅಭಾವದ ಷ್ಟವಿದೆ ಎಂದು ಹೇಳುವುದುಂಪಾಡಿಕೆಯಲ್ಲ, ಇದಕ್ಕೆಕಾರಣ, ಅವರಲ್ಲಿ ಶುದ್ಧಾ ಾರ ಕ್ರಮವಿಲ್ಲದಿದ್ದು ಪ್ರೇತಗಳು ಮನೆಹೊಕ್ಕು ಅಲ್ಲಿನಆಹಾರವನ್ನು ಗ್ರಹಣ

ಭಕ್ಷಣಮಾಡುತ್ತವೆಂಬುದಾಗಿರಬೇಕು. ನಮ್ಮಲ್ಲಿ ದ್ವಿಜರಪ್ರೇತಗಳಿರುವುದೂ ಅವಕ್ಕೆ ಅಸಹ್ಯದ ಹೊರಗಿನ ಹೊಲಸು ಆಹಾರ ಬಹಳ ಕಷ್ಟತೋರುವುದು ಅವುಗಳು ತಮಗೆ ಹಸಿವಿನ ಅಪಾರ ಪೀಡೆಇದೆ ಎಂದು ಹೇಳಲಿಕ್ಕೆ ಕಾರಣ ವಾಯಿತು. ಶ್ರೀತುಳಸೀದಾಸರು ಶೌಚಕ್ಕೆಹೋದಾಗ ಉಳಿದನೀರನ್ನು ಒಂದು ಮರದಬುಡಕ್ಕೆ ಚೆಲ್ಲುತ್ತಿದ್ದರು. ಆ ನೀರನ್ನು ಮರದಲ್ಲಿವಾಸಿಸುತ್ತಿದ್ದ ಪ್ರೇ ಒಂದು ಕುಡಿಯುತ್ತಿದ್ದು ಆ ಬಗ್ಗೆ ಅವರಲ್ಲಿ ಕೃತಜ್ಞತಾಭಾವನೆಹೊಂದಿತು ರಾಮಾಯಣ ಓದುವಲ್ಲಿ ಮಾರುತಿಯು ವೇಷಬದಲಾಯಿಸಿಕೊಂಡು ನಿತ್ಯವ ಕೇಳಲಿಕ್ಕೆ ಬರುವಗುಟ್ಟನ್ನು ಅದುತಿಳಿದಿದ್ದು ಅದನ್ನು ಶ್ರೀ ತುಲಸೀದಾಸರಿ ಹೇಳಿಕೊಟ್ಟಿತು ; ತನ್ಮೂಲಕ ಅವರು ಹನುಮಂತನದರ್ಶನಪಡೆಯುವಂತ ಯಿತು ಎಂದು ಅವರಚರಿತ್ರೆಯಲ್ಲಿದೆ. ಎಂದರೆ ಪ್ರೇತಗಳಿಗೆ ಅಶುದ್ಧ ನೀರ ಮಾತ್ರ (ಮತ್ತು ಅವನ್ನುದ್ದೇಶಿಸಿ ಕೊಟ್ಟ ತರ್ಪಣದ ನೀರು) ಲಭಿಸುತ್ತ ಎಂಬುದಕ್ಕೆ ಇದೂ ಒಂದು ನಿದರ್ಶನವಾಗಿದೆ.

೨೫. ಭೂತಗಳು

ಭೂತಗಳವಿಚಾರ ನನ್ನಸಂಗ್ರಹ, ಜ್ಞಾನ, ಬಹಳಕಡಿಮೆ ; ಸಂಶಯಗಳ ಅಧಿಕ. ಹಿಂದೂಧರ್ಮ ಎಂದರೆ ಸನಾತನಧರ್ಮ ಎಂಬ ದೃಷ್ಟಿಯಿಂದ ಬರೆ ಈ ಪುಸ್ತಕದಲ್ಲಿ ಸನಾತನ ಧರ್ಮದ ದೃಷ್ಟಿ ಮತ್ತು ದೇವರುಗಳೇ ಮುಖ್ಯ ನಮ್ಮಶಾಸ್ತ್ರದಲ್ಲಿ ಅನೇಕಕಡೆಗಳಲ್ಲಿ ಭೂತ, ಪ್ರೇತ, ಪಿಶಾಚಗಳನ್ನು ಅ ಮೂರೂ ಒಂದೆಯೋ ಎಂಬಂತೆ ಹೇಳಿದೆ. ಈ ಪುಸ್ತಕದ ವಿಚಾರಕ್ಕಾಗಿ ಮಾನವರು ಎಲ್ಲ ಸತ್ತಮೇಲೆ ಪ್ರೇತ ಆಗುತ್ತಾರೆ : ಅವರಲ್ಲಿ ಸೌಮ್ಯರಾ ಉಳಿಯುವವರನ್ನು ಪ್ರೇತವೆಂದೂ, ಇತರರಿಗೆ ತೋರಿಕೊಂಡು, ತನ್ಮೂಲ ಬೇಕೆಂದೇ ಅಲ್ಲದಿದ್ದರೂ ಭಯಹುಟ್ಟಿಸಿ ಅಥವಾ ಪ್ರತ್ಯಕ್ಷವಾಗಿ ತೊಂದ ಯನ್ನೇ ಕೊಡುವ ಪ್ರೇತಗಳನ್ನು ಪಿಶಾಚಗಳೆಂದೂ ವಿಶೇಷ ಶಕ್ತಿವಂತರಾಗಿದು ತಮ್ಮ ಆರಾಧಕರಲ್ಲಿ ಭಕ್ತಿಭಯ ಹುಟ್ಟಿಸಿ, ಅವರಿಂದ ಸೇವೆಪಡೆಯುತ್ತ, ಆದ ಅವರಿಗೆ ಹಲವು ರೀತಿಗಳಲ್ಲಿ ಸಹಾಯವನ್ನೂ ಕೊಡುವ ವರ್ಗವನ್ನು ಭೂ ಗಳೆಂದೂ ವಿಂಗಡಿಸಿದ್ದೇನೆ.

೧. ಬಂಜಾರರ ಭೂತಗಳು

ಪ್ರಥಮವಾಗಿ, ಭೂತಗಳೆಲ್ಲ ಹಿಂದೆ ಮಾನವ ಜನ್ಮದಲ್ಲಿದ್ದು ದೇ

ಜಿಸಿದವರೋ ನೋಡುವ. ಬಂಜಾರರೆಂಬ ಉತ್ತರ ಹಿಂದೂಸ್ಥಾನದಿಂದ ಂದಿದ್ದು ಮೈಸೂರುಪ್ರಾಂತ್ಯದಲ್ಲಿ ವಾಸಿಸುವ ವರ್ಗವು ಮಿಟ್ಟಿಭುಕ್ಯ ಎಂಬ ೂತದಆರಾಧಕರು. ಅವರಿಗೆ ದರೋಡೆನಡೆಸುವ ಅಭ್ಯಾಸವಿತ್ತು. ಆ ಹೆಸರಿನ ಂಜಾರ ಮುಖಂಡನೊಬ್ಬನಿದ್ದ. ಅವಒಮ್ಮೆ ಒಂದು ಅತಿದೊಡ್ಡ ಸಾಹಸದ ರೋಡೆನಡೆಸಿದ. ಸರ್ಕಾರದ ಖಜಾನೆಯು ಬಹಳ ಹಣಅಪಹರಿಸಿದ. ಕೆಲವು ಲದ ಮೇಲೆ ತನ್ನ ಮರಣ ಸಮೀಪಿಸಿದ್ದುದು ತಿಳಿದು ಬಂಜಾರಜನರನ್ನೆಲ್ಲ ಡಿಸಿ ತನ್ನಹಣವನ್ನು ಅವರಿಗೆಹಂಚಿ, ತನ್ನನ್ನು ಮರಣದನಂತರ ಬಂಜಾರರ ಧಾನ ಭೂತವಾಗಿ ಪೂಜಿಸಬೇಕು, ತಾನು ತಮ್ಮವರಿಗೆ ಬೇಕಾದಸಹಾಯ ಡುವೆ, ಎಂದು ತಿಳಿಸಿದ. ಅವ ಸತ್ತ ಕೆಲವುಕಾಲದ ಮೇಲೆ ಪುನಃ ತೋರಿ ಂಡು ಆ ಜಾತಿಯ ಒಂದು ಹುಡುಗಿಯನ್ನಾರಿಸಿ ವಿವಾಹವಾಗಿ ಇಬ್ಬರೂ ಣ್ಲಾದರು. ಅವರಜನರು ಆ ಇಬ್ಬರಿಗೂ ಗುಡಿಕಟ್ಟಿಸಿ ಪೂಜಿಸಲಾರಂಭಿ ರು. ಮಿಟ್ಟಿಭುಕ್ಯನು ಬಂಜಾರರಸಮಾಜಕ್ಕೆ ಬರಲಿರುವ ಆಪತ್ತುಗಳನ್ನು ಜಾರಿಯ ಮೂಲಕ ತಿಳಿಸುತ್ತಾನೆ.

ಭೂತಭುಕ್ಯ ಅವನ ಸಮಾಜದವರಿಗೆ ದರೋಡೆ ಕೆಲಸದಲ್ಲಿ ಅದ್ಭುತ ಸಾಯಕೊಡುತ್ತಿದ್ದ. ಆ ಕಾಲದ ಬ್ರಿಟಿಷ್‌ಸರ್ಕಾರಕ್ಕೆ ಇದರಿಂದ ಬಹಳ ಷ್ಟಕ್ಕೆಬಂತು. ಕಟ್ಟಕಡೆಗೆ ಸರ್ಕಾರವು ಒಬ್ಬ ಪ್ರಬಲಮಂತ್ರವಾದಿಯ ಮೂಲಕ ಟ್ಟಿಭುಕ್ಯನ ವಿಗ್ರಹಮಾಡಿಸಿ ಅದರಲ್ಲಿ ಆ ಭೂತವನ್ನು ಆವಾಹಿಸಿ ಅದನ್ನು ಬ್ಬಿಣದ ಸರಪಳಿಗಳಿಂದ ಬಂಧಿಸಿಶಕ್ತಿ ಕುಂದಿಸಿತು. ಆಮೇಲೆ ದರೋಡೆಗಳಲ್ಲಿ ಭೂತದ ಅಮಾನುಷ ಸಹಾಯವು ಬಹಳಕಡಿಮೆಯಾಯಿತು. ಸರ್ಕಾರದ ಮ ಫಲಿಸಿತು. ಆದರೆ ಇತರ ವಿಷಯಗಳಲ್ಲಿ ಭೂತ ಈಗಲೂ ಸಹಾಯ ಡುತ್ತಿದೆ.

ಬಂಜಾರರು ಸೇವಾಯಭಾಯ ಎಂಬ ಭೂತವನ್ನೂ ಪೂಜಿಸುತ್ತಾರೆ. ವಾಯನೆಂಬವ ಬಂಜಾರರ ಒಬ್ಬ ಬಹಳ ಚಂದವಿದ್ದ ಯುವಕನಾಗಿದ್ದ. ವ ಒಂದು "ಮಾರಮ್ಮ"ನ ಗುಡಿಯಲ್ಲಿ ಪೂಜಕನಾಗಿದ್ದ. ಆ ದೇವಿಯು ನವ ಸ್ತ್ರೀರೂಪದಲ್ಲಿ ಅವನಿಗೆ ತೋರಿಕೊಂಡು ತನ್ನನ್ನು ವಿವಾಹವಾಗಲು ತ್ತಾಯಿಸಿದಳು. ಅವ ಒಪ್ಪದಿದಾಗ ಬೆದರಿಸಿದಳು. ಅವನಿಗೆ ನಿಶ್ಚೈಸಿದ ಡುಗಿಯನ್ನು ಕೊಂದಳು. ಕಟ್ಟಕಡೆಗೆ ಅವಳಬಾಧೆಗೆ ಸೋತು ಅವ ವಳನ್ನು ಮದುವೆಯಾದ. ಕೆಲವುಕಾಲ ಇಬ್ಬರೂ ಜೊತೆಯಾಗಿ ಬಾಳಿದರು. ವಳು ಅವನಿಗೆ ಬೇಕಾದ ಐಶ್ವರ್ಯ ತಂದಳು. ಆದರೆ ಒಮ್ಮೆ ಅವ ಅವಳ

ಮಾತು ಮೀರಿದ್ದರಿಂದ ಆವನನ್ನು ಕೊಂದಳು. ಆಮೇಲೆ ಅವನೂ ಭೂ
ವಾಗಿ ಮಾರಮ್ಮನಂತೆ ಪೂಜಿಸಲ್ಪಡುತ್ತಿದ್ದಾನೆ. ಅವನಿಂದ ಅನೇಕ ಪವಾ
ಗಳು ನಡೆಸಲ್ಪಡುತ್ತವೆ.

ಮಿಟ್ಟಿಭುಕ್ಕ್ಯನು ಮಾನವನಾಗಿ ಬಾಳಿದ್ದರೂ ತಾನು ಭೂತ ಆಗಿ ತ
ಸಮಾಜಕ್ಕೆ ಸಹಾಯ ನೀಡುವ ಭವಿಷ್ಯ ತಿಳಕೊಂಡವ ; ಸತ್ತು ಮತ್ತೆ ತೋ
ಕೊಂಡು ವಿವಾಹವಾಗಿ ಪತ್ನಿಯನ್ನೂ ಕಲ್ಲುಮಾಡಿದವ. ಸೇವಾಯನಾದರೂ
ಮಾರಮ್ಮನನ್ನು ಮದುವೆಯಾಗಿ ಇಬ್ಬರೂ ದೇಹ ಬಿಟ್ಟಮೇಲೆ ಅವಳಿ
ಅಮಾನುಷ ಭೂತಶಕ್ತಿ ಪಡೆದವ. ಆದ್ದರಿಂದ ಇವರು ಕೇವಲ ಮಾನವರ
ಈ ಎರಡು ಭೂತಗಳ, ಅವರ ಆರಾಧಕರ, ವಿಷಯವನ್ನು Myso
Castes and Tribes Vol. II Compiled by the University
Mysore ನಿಂದ ಸಂಗ್ರಹಿಸಿದ್ದು. ಬೇರೆಭಾಗಗಳು ನನಗೆ ನೋಡಲುಸಿಕ್ಕಲಿ

೨. ದಕ್ಷಿಣಕನ್ನಡ ಜಿಲ್ಲೆಯ ಭೂತಗಳು

ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿರುವ ಕೊರಗರ
ಅತಿ ಕೆಳಗಿನ ಧಾರ್ಮಿಕವರ್ಗದವರು ಇತ್ತೀಚಿನವರೆಗೂ ಸತ್ತದನ, ಹಿಂದೂಗ
ಸಮಾರಾಧನೆಗಳ ಎಂಜಲುಅನ್ನ, ಮುಂತಾದವನ್ನು ತಿನ್ನುತ್ತಿದ್ದರು. ಅ
ಒಂದು ಮುಖ್ಯವೃತ್ತಿ ಬುಟ್ಟಿಗಳನ್ನು ನೆಯ್ಯುವುದು. ಅವರಿಗೆ ಇತರ
ಹಿಂದೂವರ್ಗಗಳ ಸಂಪರ್ಕ ಬಹಳ ಕಡಿಮೆ. ಕೊರಗರು ತಮ್ಮವರಲ್ಲಿ ಹಿ
ಬಾಳಿದ್ದ ಸಮರ್ಥನಾಗಿದ್ದ ಕೊರಗತಾನಿ ಎಂಬ ಭೂತ ಆದವನನ್ನು ಕಾಯ
ಕಷ್ಟಗಳಲ್ಲಿ ಅವಲಕ್ಕಿ ಅರಳು ಮಾಂಸ ಅರ್ಪಿಸಿ ಪ್ರಾರ್ಥಿಸುತ್ತಾರೆ.

ದಕ್ಷಿಣ ಕನ್ನಡದ ಹೊಲೆಯರು ತಮ್ಮಲ್ಲಿ ಹಿಂದೆ ಖ್ಯಾತನಾಗಿ
ಅನಂತರ ಭೂತ ಆದ ಕೋಟಿದ ಬಬ್ಬುವನ್ನು ನಂಬುತ್ತಾರೆ. ಜಿಲ್ಲೆಯ
ಮುಖ್ಯವಾಗಿ ಬಂಟರು, ಬಿಲ್ಲವರು, ಸನಾತನಧರ್ಮದ ದೇವರುಗಳಾ
ಶ್ರೀರಾಮ, ಕೃಷ್ಣ, ಶಿವ, ದೇವಿ, ಗಣಪತಿಯರನ್ನು ನಂಬುತ್ತಾರಾದರ
ಅದೇಮಟ್ಟದಲ್ಲಿ ಅಥವಾ ಮತ್ತೂ ಹೆಚ್ಚಾಗಿ ಭೂತಗಳ ಆರಾಧಕರಾಗಿದ್ದಾ

ಈ ಜಿಲ್ಲೆಯಲ್ಲಿಯೇ ಅಲ್ಲಲ್ಲಿ ಮುಂಚೆ ಬಾಳಿದ್ದ ವಿಶೇಷ ಪ್ರತಾಪಶ
ತೋರಿಸಿದ್ದ ಕೆಲವು ವ್ಯಕ್ತಿಗಳು ಆಮೇಲೆ ಭೂತರಾಗಿಆರಾಧಿಸಲ್ಪಡುತ್ತಿದ್ದಾ
ಕೋಟಿ ಬೈದ್ಯ, ಚೆನ್ನಯ್ಯ ಬೈದ್ಯ ಎಂಬ ಸಹೋದರರು ತಮ್ಮ ಎದು
ದರ್ಪತೋರಿದವನ್ನೆಲ್ಲ ಬಡಿದು ಹಾಕುತ್ತಿದ್ದರು. ಅನೇಕ ಸಾಹಸ ಕಾ

ಗಳನ್ನು ಮಾಡಿದ್ದರು. ಒಂದು ಕಾಡುಹಂದಿಯ ಬೇಟೆಯಿಂದಾಗಿ ಉಂಟಾದ ವಿವಾದದ ಯುದ್ಧದಲ್ಲಿ ಕೋಟಿಯು ಏಳುದಿನ ಆಹಾರತಕ್ಕೊಳ್ಳದೆ ಶತ್ರು ಸಂಹಾರ ಮಾಡಿ ಯುದ್ಧ ಮುಗಿಸಿ ಆಯಾಸದಿಂದ ಮೃತನಾದ. ಅವನ ತಮ್ಮ ಚೆನ್ನಯ್ಯ ಅಣ್ಣನನ್ನು ಬಿಟ್ಟಿರಲಾರದೆ ತಲೆ ಬಡಿದುಕೊಂಡು ಸತ್ತ. ಅನಂತರ ಅವರು ಶುದ್ಧ ಮಾಡಿಕೊಂಡು ಪೂಜ್ಯ ನಾಗಬ್ರಹ್ಮರ ಬಂಟರಾಗಿ ಭೂತರಾಗಿ ಆರಾಧಿಸಲ್ಪಡುತ್ತಿದ್ದಾರೆ. ಕಾಂತಾಬಾರೆ ಬುದಾಬಾರೆ ಎಂಬ ಬಿಲ್ಲವರು ತಮ್ಮ ಅರಸನ ರಾಜ್ಯದ ಭದ್ರತೆಗಾಗಿ ಒಂದೇ ರಾತ್ರಿಯಲ್ಲಿ ಅದರ ಸುತ್ತ ಗೋಡೆ ಹಾಕಿದ್ದರು. ನೀರಿನ ಅಭಾವದಿಂದ ಅರಸನ ೫೦ಮುಡಿ ಗದ್ದೆಗಳು ಹಾಳಾಗು ತ್ತಿದ್ದಾಗ ಒಂದೇ ರಾತ್ರಿಯಲ್ಲಿ ದೂರದ ಹೊಳೆಯಿಂದ ತೋಡುಕಡಿದು ನೀರು ಹರಿಸಿದರು. ಮರಣದ ನಂತರ ಭೂತರಾಗಿ ಲೆಕ್ಕೇಸರಿಯ ಬಳಿಯಲ್ಲಿ ಸೇರಿ ಕೊಂಡಿದ್ದಾರೆ.

ಕೆಲವು ಭೂತಗಳು ಗಂಡು (ಕೋಟಿ, ಚೆನ್ನಯ್ಯ, ಅಣ್ಣಪ್ಪ, ಕಲ್ಕುಡೆ); ಇನ್ನು ಕೆಲವು ಹೆಣ್ಣು ಉಳ್ಳಾಳ್ಥಿ, ಕಲ್ಲುರ್ಟಿ, ದೇಯಿ). ಕೆಲವು ಪ್ರಾಣಿ ಭೂತಗಳೂ ಇವೆ (ಪಂಜುರ್ಲಿ). ಭೂತಗಳ ಚರಿತ್ರೆ ಬಣ್ಣಿಸುವ ಕಾವ್ಯಗಳನ್ನು ಈ ಭೂತಗಳ ಉತ್ಸವ ಕಾಲದಲ್ಲಿ ಹಾಡುತ್ತಾರೆ. ಅವಕ್ಕೆ ಪಾಡ್ದನ ಎಂದು ಹೆಸರು. ಅವಲ್ಲಿ ಪಳ್ಳಿ ಎಂದರೆ ಮಸೀದಿ, ಮಕ್ಕ ಎಂದರೆ ಅರೇಬಿಯಾದ ಮಕ್ಕಾ ಪಟ್ಟಣ, ಪೆರಂಗಿಬಾಳ್ ಎಂದರೆ ಪೋರ್ಚುಗೀಸರು, ಸುಲ್ತಾನ ಮುಂತಾದ ಶಬ್ದಗಳು ಬರುವುದರಿಂದ ಅವುಗಳ ರಚನೆ ಬಹಳ ಹಿಂದಿನ ಕಾಲದ್ದಲ್ಲ ಎಂಬ ಮಾತು ಇದೆ.

ಈ ಭೂತಗಳು ಬಹುಮಟ್ಟಿಗೆ ಮಾನವರಂತೆ ಬಾಳಿದವುಗಳಾದರೂ ಅವಲ್ಲಿ ಕೆಲವರ ಜೀವನ ವಿಶೇಷ ಮಟ್ಟದ್ದೂ ಉಂಟು ಎಂದು ಪಾಡ್ದನಗಳು ತಿಳಿಸುತ್ತವೆ. ದೇಯಿಎಂಬವಳು ಎರಡು ಹಕ್ಕಿಗಳ ಮೊಟ್ಟೆಯಿಂದ ಜನಿಸಿದ್ದು. ಇವಳ ಅವಳಿ ಜವಳಿ ಮಕ್ಕಳೇ ಕೋಟಿ, ಚೆನ್ನಯ್ಯ. ಕಾಂತಾಬಾರೆ ಬುದಾಬಾರೆ ಯವರ ತಾಯಿ ಋತುಮತಿಯಾದ ಮೇಲೆ ಉಳೂರು ಅರಮನೆ ಬಾವೀನೀರು ಕುಡಿದು ಗರ್ಭವತಿಯಾದಳು. ಕೋಟದ ಬಬ್ಬುವಿನ ತಾಯಿ ಬಾಲೆಮಲ್ಲಿಗೆ ದೇವರ ನೈವೇದ್ಯ ಉಂಡು ಗರ್ಭಧರಿಸಿದಳು. ಸಿರಿ ಅಕ್ಕ ಎಂಬವಳು ದೇವರ ಪ್ರಸಾದವಾದ ಸಿಂಗಾರಹೂವೇ ಮಗುವಾದವಳು ಎಂದು ಮುಂತಾಗಿಕತೆ ಇದೆ.

ಈ ಭೂತಗಳು ತಾವು ಆರಿಸಿದ ಪಾತ್ರಿಗಳ ಮೈಮೇಲೆ ಆವೇಶಬಂದಾಗ ಕೈಯ ಕತ್ತಿಯಿಂದ ಮೈಗೆ ಹೊಡಕೊಳ್ಳುತ್ತಾರೆ. ಕೆಂಪಾದ ಬೆಂಕಿಕೆಂಡದ

ಅತಿ ದೊಡ್ಡ ರಾಶಿಯಮೇಲೆ ಕುಣಿದಾಡುತ್ತಾರೆ. ಅವುಗಳ ಮೇಲೆ ತಾವು ನಡೆಯುತ್ತಿರುವುದು ಮಾತ್ರ ಅಲ್ಲ, ಪ್ರೇಕ್ಷಕರನ್ನೂ ಕೈ ಹಿಡಿದು ಕೊಂಡು ಹೋದಾಗ ಅವರಿಗೂ ಏನೂ ಅಪಾಯವಾದದ್ದಿಲ್ಲ. ಈ ರೀತಿಗಳಲ್ಲಿ ಅವು ತಾವು ಅಮಾನುಷ ಶಕ್ತಿಯುಳ್ಳವರು ಎಂಬ ಭರವಸೆಯನ್ನು ಪ್ರೇಕ್ಷಕರಲ್ಲಿ ಹುಟ್ಟಿಸುತ್ತವೆ. ಅಮೇಲೆ ನೆರೆದ ಭಕ್ತರ ಕಷ್ಟಗಳ ಪರಿಹಾರದ ಭರವಸೆ ಕೂಡಲೆ ಕೊಡುತ್ತಾರೆ. ಉತ್ತಮ ದೇವಸ್ಥಾನಗಳ ದೇವರನ್ನು ನಂಬುವವರು ಬಹಳ. ಆದರೆ ಅವರಿಗೆ ಅಲ್ಲಿ ಮೇಲೆ ಹೇಳಿದತರದ ಪ್ರತ್ಯಕ್ಷ ಶಕ್ತಿಪ್ರದರ್ಶನ, ಕೂಡಲೆ ಕಷ್ಟ ಪರಿಹಾರದ ಭರವಸೆ, ಸಿಕ್ಕುವುದಿಲ್ಲ. ಶ್ರದ್ಧೆಯಿಂದ ಮಾತ್ರ ಹೋಗಬೇಕಾಗುತ್ತದೆ. ಆದ್ದರಿಂದ ದೈವೀಭಾವನೆ ಇನ್ನೂ ಬೆಳೆಸದ ವರ್ಗದ ಹಿಂದೂಗಳಿಗೆ ಈ ಭೂತಗಳ ದರ್ಶನ, ಅವರನ್ನು ಕ್ರಿಶ್ಚನ್ ಧರ್ಮದವರು ಉಪಾಯ ಮಾಡಿ, ಮುಸಲ್ಮಾನ ಧರ್ಮದವರು ಹೆದರಿಸಿ, ಮತಾಂತರ ಮಾಡುವ ಕಾಲ ಉಂಟಾದಾಗಲೂ, ಹಿಂದೂಧರ್ಮ ಬಿಡದಂತೆ ಮಾಡಲು ಬಹಳ ಸಹಾಯವಾಗಿರಬೇಕು.

ಈ ಭೂತಗಳನ್ನು ನಂಬುತ್ತ ಬಂದ ಜನಾಂಗದವರ ಭರವಸೆ ಏನೆಂದರೆ ಅವು ಕಾಲಕಾಲಕ್ಕೆ ಮಳೆ ಬೆಳೆ ಲಭಿಸುವಂತೆ ಮಾಡುತ್ತವೆ, ಸಿಡುಬು (small pox) ಮುಂತಾದ ಸಾಂಕ್ರಾಮಿಕ ರೋಗಗಳನ್ನು ನಿವಾರಿಸುತ್ತವೆ. ದನಕರುಗಳನ್ನು ಕಾಡುಮೃಗಗಳಿಂದ ರಕ್ಷಿಸುತ್ತವೆ, ಕಳ್ಳರನ್ನು ಹೆದರಿಸಿ ರಕ್ಷಣೆ ಕೊಡುತ್ತವೆ, ತಮ್ಮ ಕಷ್ಟಗಳನ್ನೆಲ್ಲ ಪರಿಹರಿಸಲಾಪವು ಎಂದು ಈ ತರದಅನುಭವ ಬಾಳಿ ಬಂದದ್ದರಿಂದಲೇ ಅವಲ್ಲಿ ಶ್ರದ್ಧೆ ಬಂದಿರಬೇಕು.

ಭೂತಗಳ ಅತಿದೊಡ್ಡ ಜಾತ್ರೆಗೆ ಕೋಲ ಎಂದು ಹೆಸರು. ಅಂದು ಹರಕೆ ಹೇಳಿಕೊಂಡವರು ಹಣ್ಣು, ಕಡಬು, ವಡೆ ಮುಂತಾದವನ್ನು ಅರ್ಪಿಸುತ್ತಾರೆ; ಕೋಳಿ ಕಡಿಯುತ್ತಾರೆ. ಪಾತ್ರಿಯಮೇಲೆ ಭೂತದ ಆವೇಶ ಬಂದಾಗ ಅದು ಊರವರ ಸುಖಸಂಕಷ್ಟಗಳನ್ನು ಗುರಿಕಾರನಿಂದ ವಿಚಾರಿಸಿ ತಿಳಕೊಂಡು, ವಿಮರ್ಶಿಸಿ, ಮುಂದೆ ನಡಕೊಳ್ಳಬೇಕಾದ ಕ್ರಮಗಳನ್ನುಹೇಳುತ್ತದೆ. ಕುಟುಂಬದವರೊಳಗಿನ ಕಲಹ, ಯಜಮಾನ ಒಕ್ಕಲುಗಳ ಜಗಳ, ತೀರ್ಮಾನಿಸುತ್ತದೆ. ಇತರರಿಗೆ ಉಪದ್ರ ಕೊಡುವವರಿಗೆ ತಿದ್ದಿಕೊಳ್ಳಲು ಅವಧಿಕೊಟ್ಟು, ಇಲ್ಲವಾದರೆ ಅವರಿಗೆ ಹಿಂಸೆ ಕೊಡುವ ಭಯ ಹಿಡಿಸಿ, ದಾರಿಗೆ ತರುತ್ತದೆ. ಈ ತರದ ಅತಿ ಶೀಘ್ರ ತರದ, ಅಲ್ಪಖರ್ಚಿನ ಸಮರ್ಥತೆ ತೋರುವ, ಸುಲಭ ತೀರ್ಮಾನಗಳು ಭೂತ ನಂಬುವ ಪ್ರತಿವರ್ಗದವರಲ್ಲಿನ ಶಾಂತಜೀವನಕ್ಕೆ ಬಹಳ

ಉಪಯುಕ್ತವಾದುದು. ಕೋರ್ಟುಕ್ರಮ ಇದಕ್ಕೆ ತೀರಾ ವಿರುದ್ಧತರದ್ದು. ಎಷ್ಟುವರ್ಷಗಳಾದರೂ ಮುಗಿಯದ ಕೋರ್ಟುಕ್ರಮಗಳಲ್ಲಿ ಅಷ್ಟು ಕಾಲವೆಲ್ಲ ವೈರವೂ ಮುಗಿಯುವಂತಿಲ್ಲ ; ಒಂದು ಕೋರ್ಟಿನ ನ್ಯಾಯ ಮೇಲಿನದು ತಪ್ಪದು ; ಕಾನೂನುಗಳ ಬಲೆಯಲ್ಲಿ ನ್ಯಾಯ ಸಿಕ್ಕಿಬಿದ್ದಿರುತ್ತದೆ. ನಾವು ಇನ್ನೂ ಬ್ರಿಟಿಷರ ಮಾನಸಿಕ ಗುಲಾಮರೇ (ಕೆಲವು ಆಧಾರಗಳು ; ಪ್ರಾಚೀನ ತುಳುನಾಡ್ ಎಸ್.ಎನ್. ಕಿಲ್ಲೆ ; ಎಸ್.ಎ. ಶೀನಪ್ಪ ಹೆಗ್ಡೆ ; ತೆಂಕನಾಡು ರಂಗನಾಥ ಪುಂಜ ; ತುಳುನಾಡು, ಗೋವಿಂದ ಪೈ).

.. ಭೂತಕ್ಕೆ ಶಕ್ತಿಯಿದೆ ನಿಜ

ಕುಂದಾಪುರದಲ್ಲಿ ಒಬ್ಬರು ಕ್ರಿಶ್ಚನರು, ಚಿತ್ರಕಲೆಗೆ ಉಪಾಧ್ಯಾಯರಾಗಿದ್ದವರು, ಹೊಸದೊಂದು ಹಿತ್ತಲುಕೊಂಡುಕೊಂಡು ಅವರಲ್ಲಿದ್ದ ಒಂದು ಭೂತದ ಕಲ್ಲನ್ನು ಕಿತ್ತು ಬಿಸಾಡಿದರು. ಅಂದಿನಿಂದ ಅವರ ಮನೆಗೆ ಆಗಾಗ ಕಲ್ಲುಗಳು–ಹಗಲಲ್ಲೇ–ಬೀಳಲಾರಂಭಿಸಿದವು; ಮಲ ಬಂದುಬೀಳುತ್ತಿತ್ತು. ಗಾಜಿನ ಪಾತ್ರೆಗಳು ಫಕ್ಕನೆ ಒಡೆಯುತ್ತಿದ್ದವು, ಪುಸ್ತಕಗಳು ದೂರ ಎಸೆಯಲ್ಪಡುತ್ತಿದ್ದವು ; ಅವರುಪೇಟೆಗೆ ಬಂದು ತಮ್ಮಲ್ಲಿ ಹೀಗೆಲ್ಲಆಗುತ್ತಿದೆ ಎಂದು ವರ್ಣಿಸುವಾಗಲೂ ಅಲ್ಲಿ ಕಲ್ಲುಬೀಳುತ್ತಿತ್ತು. ಇದೆಲ್ಲ ಅನಂತರ ಹೇಗೆಶಾಂತವಾಯಿತೋ ನಾನು ನಂತರ ವಿಚಾರಿಸಲಿಲ್ಲ.

. ಭೂತಸ್ಥಾನ ಬೇಕೆಂದೇ ಅಶುದ್ಧಮಾಡಿದವರ ಅನುಭವ

ಇದು ಒಬ್ಬರು ಶೂದ್ರರು, ವಯೋವೃದ್ಧರು ತಮ್ಮಸ್ವಂತ ಕೆಟ್ಟ ಅನುಭವ ಹೇಳಿದ್ದು. ಅವರು ಚಿಕ್ಕವರಿದ್ದಾಗ ಭೂತಪ್ರೇತಗಳನ್ನು ಏನೂ ನಂಬುತ್ತಿರಲಿಲ್ಲ. ಭೂತಗಳ ಬಗ್ಗೆ ತನ್ನಧಿಕ್ಕಾರ ತೋರಿಸಲಿಕ್ಕೆ ಒಮ್ಮೆ ಅವರು ಹತ್ತಿರದ ಒಂದು ಭೂತಸ್ಥಾನದಲ್ಲಿನ ಕಲ್ಲಮೇಲೆಯೇ ಮಲವಿಸರ್ಜಿಸಿದರು. ಮರುದಿನದಿಂದ ತನ್ನ ಪರಿಚಿತರಿಗೆ–“ನೋಡಿರಿ ನನಗೆ ಏನೂ ಆಗಲಿಲ್ಲ!” ಎನ್ನುತ್ತಿದ್ದರು. ಆದರೆ ಆ ರಾತ್ರಿ ಅವರು ಮಲಗಿದ್ದಾಗ ಒಂದು ಕರಾಳ ರೂಪ, ಎರಡು ಕೈಗಳಲ್ಲಿ ಬೆಂಕಿಯಕೊಳ್ಳಿಗಳನ್ನು ಹಿಡಕೊಂಡದ್ದು ತೋರಿಕೊಂಡು ಮಲಗಿದ್ದ ಕೋಣೆಯ ಬಾಗಿಲುತುಳಿಯಿತು. ಅವರು ವಿಪರೀತ ಹೆದರಿಹೋದರು. ಆ ಕ್ಷಣದಿಂದ ಅವರಿಗೆ ಎರಡು ಕಾಲುಗಳೂ ಶಕ್ತಿಯಿಲ್ಲದಾಗಿ ನಿರುಪಯೋಗವಾದವು. ಅನಂತರ ಅವರಿಗೆ ಭೂತ ನಂಬದೆ ಉಪಾಯ

ವಿಲ್ಲದಾಯಿತು. ಮನೆಯವರು ಎಲ್ಲ ವಿಚಾರತಿಳಕೊಂಡು ಭೂತಕ್ಕೆ ಬೇಕಾದ ಆರಾಧನೆನಡೆಸಿ ಹುಡುಗನಿಂದ ಕ್ಷಮೆ ಕೇಳಿಸಿ, ತಾವೂ ಕ್ಷಮೆಕೇಳಿಕೊಂಡ ಮೇಲೆ ಕಾಲುಗಳು ಸರಿಯಾದವು. ಆಮೇಲೆ ಅವರು "ಯಾರು ಏನೂ ಹೇಳಲಿ : ನಾನು ಭೂತ ನಂಬುವವ" ಎನ್ನುತ್ತಿದ್ದಾರೆ.

೫. ಭೂತ ಆರಾಧಕ ಮೋಕದಾಸ

ಕಲ್ಕತ್ತಾದ ಟ್ರುತ್ ಪತ್ರಿಕೆಯಲ್ಲಿ (೨೭–೧೧–೧೯೫೫) ಒಂದು ಭೂತದ ಕತೆ ಬಂದಿತ್ತು. ಬ್ರಿಟಿಷರಕಾಲದಲ್ಲಿ ಕೊಲೆಮಾಡಿದ್ದಕ್ಕೆ ಶಿಕ್ಷೆಯಾಗಿ ಮರಣ ದಂಡನೆಕೊಡದವರನ್ನು ಅಂಡಮಾನ್‌ದ್ವೀಪಕ್ಕೆ ಕಳುಹಿಸುತ್ತಿದ್ದರು. ಅಸ್ಸಾಮ್ ಪ್ರದೇಶದ ಮೋಕದಾಸ್ ಎಂಬವ ಒಂದು ದರೋಡೆ ಮಾಡಿದಾಗ ಇಬ್ಬರನ್ನು ಕೊಂದುದಕ್ಕೆ ೧೯೪೦ರಲ್ಲಿ ಅಂಡಮಾನಕ್ಕೆ ಕಳುಹಿಸಲ್ಪಟ್ಟ. ಕಳೆದ ಘೋರ ಯುದ್ಧದಕಾಲದಲ್ಲಿ ಶತುಪ್ರಕ್ಷದ ಜಪಾನರು ಅಲ್ಲಿಗೆಬಂದು ಕೈದಿಗಳನ್ನೆಲ್ಲ ಬಿಡು ಗಡೆಮಾಡಿ ಅವರ ರಿಕಾರ್ಡುಗಳನ್ನೆಲ್ಲ ಸುಟ್ಟುಹಾಕಿದರು. ಮೋಕದಾಸ ಆಮೇಲೆ ತನಗೆ ಅನುಕೂಲವಾದರೀತಿಯಲ್ಲಿ ಜೀವಿಸಿದ ಒಂದು ಹುಡುಗಿಯನ್ನು ವಿವಾಹ ವಾದ. ಪ್ರಾಯಶಃ ಅವನಿಗೆ ಮುಂಚೆಯೇ ತಿಳಿದಿದ್ದ ಭೂತದಆವಾಹನೆಯನ್ನು ಆ ಊರಲ್ಲಿ ನಡೆಸುತ್ತಿದ್ದ. ಐಶ್ವರ್ಯ ಸಂಪಾದಿಸಿದ.

ಒಮ್ಮೆ ಅವನ ಪೂರ್ವಪರಿಚಿತ ಸೆನ್ ಗುಪ್ತನೆಂಬವ, ಸರ್ಕಾರದ ನೌಕಾ ವಿಭಾಗದಲ್ಲಿದ್ದವ ಅಂಡಮಾನಕ್ಕೆಬಂದಾಗ ಅಲ್ಲಿ ಅವನನ್ನುಗುರುತಿಸಿದ. ಅವನ ಭೂತಅವಾಹನೆಶಕ್ತಿಯ ವಿಚಾರತಿಳಿದು ತನ್ನ ಕೆಲವುಸಮಸ್ಯೆಗಳಿಗೆ ಆ ಭೂತದ ಸಹಾಯ ಸಿಗುವಂತೆ ಮಾಡಲು ಅವನ ಸಹಾಯ ಕೇಳಿದ. ಮೋಕದಾಸ ಒಪ್ಪಿ ಆವಾಹನೆಗೆ ಮನೆಗೆಕರೆದ. ಒಂದುಕೋಣೆಯಲ್ಲಿ ನಡುವೆ ಒಂದು ಪರದೆಹಾಕಿ ಒಂದು ಬದಿಯಲ್ಲಿ ಮಣೆಗೆ ವಸ್ತ್ರಹಾಸಿ ಸಿಹಿತಿಂಡಿ ಬೆಳ್ಳಿ ನಾಣ್ಯಇಟ್ಟು, ಮತ್ತೊಂದು ಭಾಗದಲ್ಲಿ ಮೋಕದಾಸ್ ಸೆನ್‌ಗುಪ್ತ ಕುಳಿತರು. ಮೋಕದಾಸ್ ಏನೇನೋ ಮಂತ್ರ ಹೇಳಿದ. ಭೂತ ಬಂದಿತ್ತು ಎಂಬುದರ ಸೂಚನೆಯಾಗಿ ಅವರ ಹತ್ತಿರ ಕೆಲವು ಕಲ್ಲುಗಳುಬಿದ್ದವು. ಭೂತವು ಸೆನ್‌ಗುಪ್ತನ ಪ್ರಶ್ನೆಗಳಿಗೆ ಉತ್ತರಹೇಳಿ, ಅವನ ಮುಂದಿನಕಾರ್ಯಗಳು ಹೇಗೆ ತನ್ನಸಹಾಯದಿಂದ ಸುಗಮವಾಗುವವು ಎಂದು ತಿಳಿಸಿ ಮಾಯಕವಾಯಿತು. ಅನಂತರ ನೋಡಿ ದಾಗ ಬಟ್ಟೆಯ ಮೇಲೆ ಚಿಕ್ಕ ಮಾನವಪಾದಗಳು ಊರಿದಂಥ ಚಿಹ್ನೆಗಳಿದ್ದವು. ಹಾಲು ಮಿಠಾಯಿ ಕಡಿಮೆಯಾಗಿದ್ದವು. ಬೆಳ್ಳಿನಾಣ್ಯ ಇರಲಿಲ್ಲ. ಸ್ವಲ್ಪಕಾಲ

ಹೋದಂತೆ ಸೆನ್‌ಗುಪ್ತನ ಕಾರ್ಯಗಳೆಲ್ಲ ಭೂತ ಹೇಳಿದಂತೆಯೇ ಅನುಕೂಲ
ವಾಯಿತು. ಆದ್ದರಿಂದ ಸೆನ್‌ಗುಪ್ತನು ತನ್ನ ಅನುಭವವನ್ನು ಪತ್ರಿಕೆಗೆ ತಿಳಿಸಿದ.

೨೬. ಭೂತಾರಾಧನೆಯ ಕ್ರಮದ ವಿಮರ್ಶೆ

ಭೂತಭುಕ್ಕ್ಯ ಅವನ ಶಿಷ್ಯರಿಗೆ ಸಹಾಯಕೊಡುತ್ತಾನೆ, ಆದರೆ ಇತರರ ಜರೋಡೆ, ಕಳವು ಮಾಡಲಿಕ್ಕೆ ; ಅವ ಅವರವರೊಳಗೆ ಕೆಲವು ಮಟ್ಟಿಗೆ ಪರಸ್ಪರ ನ್ಯಾಯದ ವರ್ತನೆ ವಿಧಿಸಬಹುದು, ಆದರೆ ಆದರ ಹೊರಗಿನವರ ಬಗ್ಗೆ ಅಲ್ಲ. ಮೇಕದಾಸ ಕೊಲೆ ಮಾಡಿ ರುಜುವಾತಾಗಿ ಶಿಕ್ಷೆ ಪಡೆದವ. ಆದರೆ ಅವನ ಆರಾಧನೆಯು ಭೂತಕ್ಕೆ ಅಸಹ್ಯವಾಗುವಬಗ್ಗೆ ಪ್ರಿಯವಾಯಿತು. ಅನೇಕ ಭೂತಗಳು ತೀರಾ ಅಲ್ಪತರದವರ ಪೂಜೆ ಪಡೆಯುತ್ತವೆಯಂತೆ. ಜೀವಿಸಿಕೊಂಡಿದ್ದಾಗ ನೈತಿಕತೆಗಲ್ಲ, ಧಾರ್ಮಿಕ ಜೀವನಕ್ಕಲ್ಲ, ಕೇವಲಶಕ್ತಿಗೆ ಹೆಸರುಪಡೆದವರ ಪ್ರೇತಗಳಿಗೆ ಉಪಾಸಕರು ಆಹಾರಕೊಟ್ಟು, ಅವರಸಹಾಯ ನೀಡಿದಾಗ ಅವು ಭೂತಗಳಾಗುವುದು ಸಾಧ್ಯವಿರಬೇಕು. ದಕ್ಷಿಣಕನ್ನಡದ ಒಂದುಭೂತ ಅರಬ್ಬಿದೇಶದಿಂದ ಬಂದ ಮುಸಲ್ಮಾನನಾಗಿದ್ದ. ನೂರುವರ್ಷ ಹಿಂದೆ ಇಬ್ಬರು ಉತ್ತರಹಿಂದೂಸ್ಥಾನದ ಬ್ರಿಟಿಷ್‌ಅಧಿಕಾರಗಳು, ಸತ್ತಮೇಲೆ ಜನರಿಂದ ಸೋಡ, ವಿಸ್ಕಿ, ಸಿಗರೇಟು ಮಾಂಸಗಳ ಆರಾಧನೆ ಪಡೆದು ಭೂತ ವಾಗಿದ್ದರೆಂದು ದಾಖಲೆಇದೆ. ಅವರಲ್ಲಿ ಒಬ್ಬ ತೀರಾಕಠೋರತರದ ಆಫೀಸರ ನಾಗಿದ್ದನಂತೆ. ಭೂತಾರಾಧಕರಲ್ಲಿ ಶಕ್ತಿ ದರ್ಪಹೆಚ್ಚು ಇದ್ದವರು ತಾವೂ ಭೂತ ವಾಗಿ ಆಹಾರ ಪೂಜೆಪಡೆಯಬೇಕೆಂದು ಆಶಿಸುವವರಿರುವುದು ಆಶ್ಚರ್ಯವಲ್ಲ. ಅಂಥವರು ಭೂತದ ಪೀಳಿಗೆ ಮುಂದುವರಿಸುತ್ತಾರೆ.

ನಮ್ಮದೇಶದಲ್ಲಿ ಭೂತಗಳಾಗಿ ಆರಾಧಿಸಲ್ಪಡುವವುಗಳ ಸಂಖ್ಯೆಎಷ್ಟೋ ಸಾವಿರವಿರಬಹುದು. ಅವರವರಿಗೆ ಅವರ ಭೂತವಿದ್ದರಾಯಿತು. ಆ ಭೂತ ಗಳ ಮಟ್ಟಗಳಲ್ಲಿ, ಅವು ಮಾನವರಾಗಿದ್ದಾಗಬಾಳಿದ ಕ್ರಮಗಳಲ್ಲಿ, ನಂಬಿಕೆ ಗಳಲ್ಲಿ ಸಮಾನತೆ ಏನೂಇಲ್ಲ. ಆದ್ದರಿಂದ ಈ ಒಂದೇ ತರದವರಲ್ಲದವರ ಭೂತಾರಾಧನೆ ಜನಸಾಮಾನ್ಯರಲ್ಲಿ ಯಾವ ಒಗ್ಗಟ್ಟನ್ನೂತರಲಾರದು. ಇಡೀ ಜಗತ್ತಿನಸೃಷ್ಟಿಕರ್ತ ದೇವರಕಲ್ಪನೆಯೊಡನೆ ಬರುವವಿಶಾಲತೆ ಅವಲ್ಲಿ ಅಸಾಧ್ಯ. ವಿಶಾಲವಾದ ನೀತಿಯಕಲ್ಪನೆಗಳೂ ಮಟ್ಟಗಳೂ ಇಲ್ಲ. ಪ್ರತಿಭೂತದ ಶಿಷ್ಯ ವರ್ಗಕ್ಕೆ ಆ ಭೂತ ಅವುಗಳೊಳಗೆ ಅನ್ಯಾಯವಾಗದಂತೆ ಕೆಲವು ಕಟ್ಟುಗಳನ್ನು ಹೇರಿಸುತ್ತದೆ. ಅದು ಕೇವಲ ಭೂತದ ನೈತಿಕಮಟ್ಟ ಹೊಂದಿದೆ. ಆದರೆ

ಇತರರ ಪರೋಪಜೆ, ಕೊಲೆ, ವಂಚನೆ, ಹಿಂಸೆಮುಂತಾದವಕ್ಕೆ ಅದರ ಆಕ್ಷೇಪವೇ ಇಲ್ಲ. ಒಪ್ಪಿಗೆಯೇ ಇದೆ ಎಂದರೆ ಕೇವಲ ತಾತ್ಕಾಲಿಕಸುಖವೆಂಬ ಗುರಿಪೊರತು ಸರ್ವಸಾಮಾನ್ಯ ನೈತಿಕತೆಯ ವಿಚಾರವೇ ಇಲ್ಲ ; ಪಾಪದ ಭಯವಿಲ್ಲ ; ನರಕದ ಭೀತಿಯಿಲ್ಲ. ಭೂತವಾದವ ಮರಣದನಂತರವೂ ಬಾಳಿಕೊಂಡಿದ್ದಾನೆಯಾದ್ದರಿಂದ ನಮ್ಮದೇಶದಲ್ಲಿ ಮರಣದಆಚೆಯೂ ಬಾಳುವಭಾಗವಿದೆ ಎಂಬ ಭಾವನೆ ಬರಬಹುದು. ಆದರೆ ಅದರ ಸ್ಪಷ್ಟಕಲ್ಪನೆ ಭೂತಾರಾಧಕರಲಿಲ್ಲ. ಭೂತಾರಾಧನೆ ಒಂದು ಧರ್ಮವೇ ಅಲ್ಲ. ಪಶುಮಟ್ಟದಲ್ಲಿ ಕೇವಲ ಸ್ವಭಾವ ಅನುಸರಿಸಿದ ಜೀವಾತ್ಮರಿಗೆ, ಮಾನವಜನ್ಮ ಆಗತಾನೇಬಂದಾಗ ಕೆಲವುಜನ್ಮಗಳವರೆಗೆ ತಮಗಿಂತ ಹೆಚ್ಚುಶಕ್ತಿಯ ಭೂತದಆಜ್ಞೆಯಂತೆ ದೇಪಸ್ವಲ್ಪ ಹತೋಟಿಯಲ್ಲಿಡುವ ಪ್ರಥಮಯತ್ನ ಅಲ್ಲಿ ನಡೆಯುತ್ತದೆಯಷ್ಟೆ!

ಕ್ರಿಶ್ಚನ್ ಮತ್ತು ಮುಸಲ್ಮಾನ ದೇಶಗಳಲ್ಲಿ ಪಿಶಾಚಗಳು ತೋರಿಕೊಳ್ಳುವುದುಂಟಾದರೂ ಅವನ್ನು ಆರಾಧಿಸಿ ಅವಕ್ಕೆ ಭೂತದ ಶಕ್ತಿಬರುವಂತೆ ಮಾಡುವುದಿಲ್ಲ ; ತಮ್ಮದು ಏಕಮಾತ್ರ ದೇವರು, ಧರ್ಮವಿಧಿಸುವ ಧಾರ್ಮಿಕಕಟ್ಟುಗಳಿಗೆ ವಿರುದ್ಧವಾಗಿ ಭೂತಗಳ ಬೆಂಬಲ ಪಡೆಯಕೂಡದು : ಗುಟ್ಟಲ್ಲಿ ಹೀಗೆ ಅಪರೂಪಕ್ಕೆ ಮಾಡಿದ ಮಾಯಗಾತಿಯರನ್ನು (witches) ಜೀವವಿದ್ದಂತೆ ಸುಟ್ಟುಬಿಡುತ್ತಿದ್ದರು. ಆದ್ದರಿಂದಲೇ ಪಾಶ್ಚಾತ್ಯರು ಬೆಳೆಸಿದಪ್ರೇತಸಂಪರ್ಕ ಕ್ರಮದಲ್ಲಿ ಭೂತವೆಂಬ ವರ್ಗಕಾಣಿಸಿಕೊಂಡದ್ದಿಲ್ಲ.

ಪಾಡ್ದನಗಳಲ್ಲಿ ಧರ್ಮದ ಸೂಕ್ಷ್ಮವಿಚಾರಗಳೇ ಇಲ್ಲ. ಭೂತಾರಾಧಕರಿಗೆ ನಮ್ಮಶಾಸ್ತ್ರ, ರಾಮಾಯಣ, ಭಾರತ, ಭಗವದ್ಗೀತೆ ಬೋಧಿಸುವಂತೆ ಆತ್ಮೋತ್ತಮ ನೈತಿಕಮಟ್ಟ ಬೆಳೆಸಲುಬೇಕಾದ ಆಧಾರಗಳು ಇಲ್ಲ. ಯಾವ ಧಾರ್ಮಿಕಮೇಲ್ಮಟ್ಟದವರಾದ ಸಂತರೂ ಮಹಾತ್ಮರೂ ತಾವು ಸಮರ್ಥಭೂತ ಆಗಬೇಕೆಂದು ಆಶಿಸಿದವರೇ ಅಲ್ಲ. ಹಳೇ ಭೂತಗಳು ಹೋಗಿ ಹೊಸದವು ಬರುತ್ತವೆ ಎಂಬುದರ ಅರ್ಥ ಅವಕ್ಕೂ ಕೇವಲ ಅಧಿಕಾರ, ಸಮರ್ಥತೆಗಳ ಜೀವನ, ಕಟ್ಟಕಡೆಗೆ ಬರಡಾಗಿ ತೋರಿ ದೇವರನ್ನುಹೊಂದುವ ದಾರಿ ಹಿಡಿಯಬೇಕಾಯಿತು. ಎಂಬುದಿರಬೇಕು. ಮಾನವಜನ್ಮದ ಸಾರ್ಥಕತೆ. ಆ ದಾರಿಯಲ್ಲಿ ಮಾತ್ರ ಇದೆ. ನಮ್ಮಲ್ಲಿ ಭೂತಾರಾಧಕರಾದ ಆದರೆ ನಾಗರಿಕ ವರ್ಗದವರೂ—ಅವು ನಮಗೆ ಬೇಕಾದಸಹಾಯ ಕೊಡುತ್ತವೆ, ಮತ್ತೇನು ಬೇಕು? ಎನ್ನುವುದು ಆಶ್ಚರ್ಯಕರ! ಆತ್ಮವಿದೆ, ಅದೇ ಅತ್ಯಂತ ಮಹತ್ವದು ; ಅದರ ಹಿರಿಮೆ ಸಾಧಿಸಬೇಕೆಂಬ ಕಲ್ಪನೆಯೇ ಅವರಲಿಲ್ಲ. ಭೂತಾರಾಧನೆ ಕೇವಲ

ಕುರುಡುದಾರಿ. ಭೂಲೋಕದಲ್ಲಿ ಧರ್ಮಗಳೆಂದು ನಾವು ಕರೆಯುವವು ಯಾವ ನನ್ನೆಂದರೆ, ಜನರಲ್ಲಿ ದೇಹ ಮಾತ್ರವಲ್ಲ ಮರಣದಆಚೆಯೂ ಶಾಶ್ವತವಾಗಿ ಬಾಳುವ ಆತ್ಮನಿದ್ದಾನೆ; ಇಡೀ ವಿಶ್ವವನ್ನು ದೇವರು ನಿರ್ಮಿಸಿದವ, ಅವ ಪಾಲಿಸುತ್ತಾನೆ, ಅವನನ್ನು ನಂಬಬೇಕು, ಕೃತಜ್ಞತೆಯಿಂದ ಸ್ಮರಿಸಬೇಕು. ಮ್ಮಬಾಳನ್ನು ಸಾರ್ಥಕಮಾಡಿಕೊಳ್ಳಲಿಕ್ಕೆ ಅವನು ತನ್ನ ದೂತರಮೂಲಕ ಮಗೆಕೊಟ್ಟ ಶಾಸ್ತ್ರದಕಟ್ಟುಗಳನ್ನು ಪಾಲಿಸಬೇಕು. ಅದರಂತೆ ಬಾಳಿದರೆ ದೇವರುಮೆಚ್ಚಿ ಉದ್ಧಾರ ಮಾಡುತ್ತಾನೆ; ಇಲ್ಲವಾದರೆ ನರಕಕ್ಕೆ ಹಾಕಿ ಶಿಕ್ಷೆ ಕೊಡುತ್ತಾನೆ ಮುಂತಾಗಿ ಹೇಳುವವು ಮಾತ್ರ ಧರ್ಮಗಳೆಂದು ಕರೆಯಲ್ಪಡು ತ್ತವೆ. ಸನಾತನಧರ್ಮ, ಬುದ್ಧಧರ್ಮ, ಜೈನಧರ್ಮ, ಸಿಖ್ಖಧರ್ಮ ಕ್ರಿಶ್ಚನ್‌ಧರ್ಮ, ಮುಸಲ್ಮಾನ ಧರ್ಮ, ಯಹೋವಧರ್ಮ ಮುಂತಾದವು ಧರ್ಮಗಳು. ಕಳಬೇಡ, ಕೊಲೆಮಾಡಬೇಡ, ವಂಚಿಸಬೇಡ, ಸುಳ್ಳುಹೇಳ ಬೇಡ, ದಯೆ, ಕ್ಷಮೆ, ಕರುಣೆ ಅಭ್ಯಸಿಸಬೇಕು, ವ್ಯಭಿಚಾರಸಲ್ಲದು, ಮುಂತಾದ ನೈತಿಕತೆಯ ಕಟ್ಟುಗಳು ಹೆಚ್ಚುಕಡಿಮೆ ಈ ಎಲ್ಲ ಧರ್ಮಗಳಲ್ಲಿ ಇವೆ.

ಆದರೆ ಧರ್ಮಗಳಲ್ಲಿ ಮೂರುಪಟ್ಟದವು ಇವೆ. ಪ್ರಥಮ ಪಟ್ಟದ ವಲ್ಲಿ ಜೀವಾತ್ಮನಿಗೆ ಕೇವಲ ಒಂದು ಜನ್ಮ, ಅದರಲ್ಲಿ ಶಾಸ್ತ್ರದಂತೆ ಉತ್ತಮ ರಾಗಿ ಬಾಳದಿದ್ದರೆ ಅನಂತರ ಆತ್ಮನಿಗೆ ಅನಂತಕಾಲ ನರಕವಾಸವೇ ಗತಿ ಎನ್ನು ತ್ತವೆ. ಆದ್ದರಿಂದ-ಈ ಒಂದುಜನ್ಮ ಎಷ್ಟಕ್ಕೂ ಹಾಳುಮಾಡಕೂಡದು ಎಂಬ ಪ್ರೇರಣೆ ತರುತ್ತವೆ. ಶಾಸ್ತ್ರದಂತೆ ಉತ್ತಮರಾಗಿ ಬಾಳುವುದು ಬಹಳ ಕಷ್ಟ. ಆದರೆ ಅದಕ್ಕೆ ಉಪಾಯವಾಗಿ, ತಮ್ಮ ಧರ್ಮದವರ ಬಗ್ಗೆ ಮಾತ್ರ ದುಷ್ಟ ವರ್ತನೆ ಮಾಡದಿರಿ. ಅವರು ನಿಮ್ಮದೇವರ ಮಕ್ಕಳಾದ್ದರಿಂದ ದಯೆ, ಕರುಣೆ ನ್ಯಾಯಪರತೆ ತೋರಿಸಿರಿ. ಆದರೆ ನಿಮ್ಮಲ್ಲಿ ತಡೆಗಟ್ಟಲಾರದ ದುಷ್ಟ ಒಲವು ಗಳನ್ನು ಈ ಧರ್ಮದವರಲ್ಲದವರು, ಆದ್ದರಿಂದ ಪಾಪಿಗಳು. ಆದವರ ಮೇಲೆ ತೋರಿಸಿದರೆ ಆಕ್ಷೇಪವಿಲ್ಲ, ಏಕೆಂದರೆ ನಿಮ್ಮಧರ್ಮ ಮಾತ್ರ ನಿಜವಾದದು ; ಈ ದೇವರು ಮಾತ್ರ ನಿಜವಾದ ದೇವರು. ಉಳಿದವೆಲ್ಲ ಠಕ್ಕುಧರ್ಮಗಳು, ಠಕ್ಕು ದೇವರು ; ಈ ದೇವರು ಮೆಚ್ಚದವು. ನಿಮ್ಮ ನಿಜದೇವರನ್ನು ನಂಬಿ ಅವರ ತಪ್ಪುಗಳನ್ನು ಆ ದೇವರೊಡನೆ ಬೇಡಿಕೊಂಡಾಗ ಮನ್ನಿಸುತ್ತಾನೆ, ಎನ್ನುತ್ತವೆ. ಅವಲ್ಲಿ ಒಂದು ಜನ್ಮ ಮಾತ್ರ ಹೇಳಿದ್ದರಿಂದ ಜೀವಾತ್ಮರ ಬಹಳ ವಿಶಾಲವಾದ ತರಬೇತಿ ಹೇಳಲಿಲ್ಲ. ಗುರಿ ಸ್ವರ್ಗಸುಖಮಾತ್ರ. ಮುಸಲ್ಮಾನ ಧರ್ಮ ಮದ್ಯದ ಅಭ್ಯಾಸ ಖಂಡಿಸಿದೆ. ಆದರೆ ಕಾಮದ ಭಾಗದಲ್ಲಿ ಹಲವು

ಪತ್ನಿಯರ ಭೋಗಕ್ಕೆ ನಿಷೇಧ ಹಾಕಲಿಲ್ಲ, ಕ್ರಿಶ್ಚನ್‌ಧರ್ಮ ಮದ್ಯದ ಸೇವನ
ಒಪ್ಪಿದೆ. ಆದರೆ ಒಂದು ಪತ್ನಿ ಮಾತ್ರ ಎಂಬ ಕಾಮದ ಕಟ್ಟನ್ನು ವಿಧಿಸಿದೆ
ಹೀಗೆ ಜೀವಾತ್ಮರಿಗೆ ಅವರ ಒಲವಿಗೆತಕ್ಕ ಧರ್ಮದಲ್ಲಿ ದೇವರು ಜನ್ಮಕೊಡ
ತ್ತಾನೆ.

ಇವಕ್ಕಿಂತ ಮೇಲಿನದಾದ ಎರಡನೆಮಟ್ಟದ ಧರ್ಮಗಳಲ್ಲಿ ಜೀವಾತ್ಮನಿ
ಒಂದುಜನ್ಮವಲ್ಲ, ಸಾವಿರಾರುಜನ್ಮಗಳ ಧಾರ್ಮಿಕತರಬೇತಿಯ ಅವಶ್ಯಕತ
ಹೇಳಿದೆ. ಪ್ರತಿಕರ್ಮಕ್ಕೂ ಆದರಫಲ ಇದ್ದೇ ಇದೆ ; ತಪ್ಪಿಸಿಕೊಳ್ಳುವಂತಿಲ್ಲ
ಕೆಟ್ಟ ಎಂದರೆ ಶಾಸ್ತ್ರಕ್ಕೆ ವಿರುದ್ಧದ ಕರ್ಮಕ್ಕೆ ಕೆಟ್ಟಫಲ, ಶಿಕ್ಷೆ ; ಶಾಸ್ತ್ರದ ಅನ
ಸರಣೆಯದಾದ ಉತ್ತಮ ಕರ್ಮಕ್ಕೆ ಉತ್ತಮ ಫಲ, ಸುಖ, ಸ್ವರ್ಗ, ಮುಂ
ಮತ್ತೂ ಉತ್ತಮಜನ್ಮ ಇದ್ದೇ ಇವೆ, ತಮ್ಮ ಧರ್ಮದವರಿಗೆ ಮಾತ್ರವಲ್ಲ
ಇತರರಿಗೂ ಅನ್ಯಾಯ ಮಾಡುವುದು ತಪ್ಪು. ಮಾತ್ರವಲ್ಲ ಪ್ರಾಣಿಗಳಿಗ
ಕೂಡ ಜೀವಾತ್ಮನಿದ್ದಾನೆ. ಪ್ರಾಣಿಹಿಂಸೆಯೂ ಪಾಪ ತರುತ್ತದೆ ಎನ್ನುತ್ತವೆ
ಜೈನರಲ್ಲಿ ಪ್ರಾಣಿಗಳ ಅಹಿಂಸೆ ಬಹಳ ಬಿಗುವಾಗಿದೆ.

ಮೂರನೆಯ ಮತ್ತು ತುತ್ತುದಿಯ ಮಟ್ಟದ್ದಾದ ಅತ್ಯಂತ ಪೂರ್ಣ
ರೂಪದ್ದಾದ ಸನಾತನಧರ್ಮವು, ಜೀವಾತ್ಮನು ಪರಮಾತ್ಮನಿಂದ ಬಂದವ
ಅವನ ಅಂಶ ; ಹಿಂದಿನ ಪ್ರಾಣಿಜನ್ಮಗಳಲ್ಲಿ ಮತ್ತು ಕೇವಲ ಪಶುಮಟ್ಟ
ಭೋಗದ ಮಾನವ ಜನ್ಮಗಳಲ್ಲಿ, ಆತ್ಮನು ದೇಹದ ಬಂಧನಗಳಲ್ಲಿ ಸಿಲುಕುತ್ತ
ಬಂದ. ಆದರೆ ಚಿಕ್ಕ ಬಾಲಕನು ಶಾಲೆ, ಕಾಲೇಜುಗಳ ಮಟ್ಟ ಏರುತ್ತಿರುವ
ತರಗತಿಗಳ ಪಾಠಗಳನ್ನು ಅಭ್ಯಸಿಸುತ್ತ ಕಟ್ಟಕಡೆಗೆ ಎಂ. ಎ. ತರಗತಿಯಲ್ಲ
ಉತ್ತೀರ್ಣನಾಗುವಂತೆ ವರ್ಣ ಮತ್ತು ಜಾತಿಗಳ ಧಾರ್ಮಿಕ ಮಟ್ಟಗಳಿರು
ಜನ್ಮಗಳ ಧಾರ್ಮಿಕ ಅಭ್ಯಾಸಗಳಿಂದ ಜೀವಾತ್ಮನ ದೇಹದ ಬಂಧನಗಳು ಸ
ಲಾಗುತ್ತ ಹೋಗಿ ಆತ್ಮನು ಸಂಪೂರ್ಣ ಬಿಡುಗಡೆ ಹೊಂದಿ ತನ್ಮೂಲಕವಾ
ಪರಮಾತ್ಮನನ್ನೇ ಪುನಃ ಸೇರುತ್ತಾನೆ, ಭೂಲೋಕದ ಹಲವು ಇತರಧರ್ಮ
ಗಳನ್ನೂ ಆ ದೇವರೆ, ಜೀವಾತ್ಮರ ಬೇರೆಬೇರೆ ತರದ ಧಾರ್ಮಿಕ ಶಕ್ತಿ
ಹೊಂದಿಕೆಯಾಗಲಿಕ್ಕೆ ತಕ್ಕುದಾಗಿ, ಉಂಟುಮಾಡಿದವ. ಅವೆಲ್ಲವೂ ಆಯಾಯ
ಮಟ್ಟಕ್ಕೆ ಸರಿಯೇ. ಜೀವಾತ್ಮನು ಪರಮಾತ್ಮನ ದೇಹದವಿಭಾಗವೇ ಆಗಿದ್ದು
ಯಾವಆತ್ಮನಿಗೆ ಅನ್ಯಾಯಮಾಡಿದರೂ, ಅದು ಪರಮಾತ್ಮನ ದೇಹದಭಾಗವೆ
ಆಗಿದ್ದು ಕೈಯು ದೇಹದ ಭಾಗವೇ ಆದ ಕಾಲಿಗೆ ಏಟುಕೊಟ್ಟಂತೆ, ತೀರ
ತಪ್ಪು. ಧರ್ಮದ ಅಭ್ಯಾಸದಿಂದ ಕ್ರಮೇಣವಾಗಿ ಎಲ್ಲರಲ್ಲಿ, ಪ್ರಾಣಿಗಳ

ಾಡ, ಸರ್ವತ್ರ ದೇವರನ್ನೇ ಕಾಣುವ ಮಟ್ಟವಮುಟ್ಟಿ ಸಂಪೂರ್ಣ ಅದ್ವೇಷಿ
ಾಗಿ ಪರಮಾತ್ಮನಲ್ಲಿ ಐಕ್ಯನಾಗುತ್ತಾನೆ. ಈ ತರದ ಪೂರ್ಣತರಬೇತಿಗೆ
ಾತನಧರ್ಮವು ಅದ್ವಿತೀಯ ಹಿರಿಮೆಯುಳ್ಳ ವೇದಮಂತ್ರಗಳನ್ನು ಉಪ
ತ್ತುಗಳ ಜ್ಞಾನವನ್ನು ದೇವಸ್ಥಾನಗಳೆಂಬ ರಚನೆಗಳನ್ನು, ಸಂಸ್ಕಾರಗಳನ್ನು,
ೀಷ ನೈತಿಕತೆ, ಅಹಿಂಸೆ, ಸಾತ್ವಿಕತೆ ಬೆಳೆಸುವ ಶೌಚ, ಮುಂತಾದವನ್ನು,
ರ್ಿಸಿದೆ. ಈ ಎಲ್ಲ ವಿವರಣೆ ಕೊಟ್ಟಿದ್ದೇಕೆಂದರೆ ಸನಾತನಧರ್ಮ ಮತ್ತು
ತಾರಾಧನೆಗಳಲ್ಲಿ ಹೀಗೆಲ್ಲ ಅಜಗಜಾಂತರ ವ್ಯತ್ಯಾಸವಿದೆ; ಅವು ಸರೀ
ರುದ್ಧತೆಯಿರುವವು ಎಂಬುದನ್ನು ತೋರಿಸಲಿಕ್ಕೆ. ಸನಾತನ ಧರ್ಮದ
ವಸ್ಥಾನಗಳು ಪ್ರಾರ್ಥನಾ ಮಂದಿರಗಳಲ್ಲೇ ಅತ್ಯಂತ ಶಕ್ತಿವಂತವಾದ ರಚನೆ
ು. ಅವಲ್ಲಿ ನಮ್ಮಧರ್ಮವು ದೇವರರೂಪದ ವಿಗ್ರಹಗಳನ್ನು ಶಾಸ್ತ್ರೋಕ್ತ
ಗಿ ನಿರ್ಮಿಸಿ, ಆಗಮಶಾಸ್ತ್ರದ ಉಪಯೋಗದಿಂದ ಅತ್ಯಂತ ಧಾರಾಳವಾಗಿ
ವೀಕಳೆ ತುಂಬಿಸಬಲ್ಲುದು. ದೇವಸ್ಥಾನದ ವಾತಾವರಣವನ್ನು ಕೇವಲ
ತ್ವಿಕ ಮಾಡಿ, ಪ್ರಾರ್ಥನೆಗೆ ಬಂದವರು ದೇವರ ಮೂರ್ತಿಯ ಮುಂದೆ
ತು ಪ್ರಾರ್ಥಿಸುವಾಗ, ಅಲ್ಲಿರುವುದು ದೇವರೇ ಎಂಬಷ್ಟು ಪವಿತ್ರಭಾವನೆ
ುವುದು ಸಾಧ್ಯಮಾಡಿದೆ; ಹೊರತು ಇಗರ್ಜಿಯಲ್ಲಿ ಮುಂತಾಗಿ ಮೇಲೆ
ಲ್ಲೋ ದೇವರಿದ್ದಾನೆಂಬ ಕಲ್ಪನೆಯಿಂದ ಕಷ್ಟದಲ್ಲಿ ಪ್ರಾರ್ಥನೆ ಮಾಡುವ
ಗತ್ಯವಿಲ್ಲ. ದೇವಸ್ಥಾನಗಳಲ್ಲಿ ಸರಿಯಾದ ಈ ಶಕ್ತಿ ಉಳಿಯಲಿಕ್ಕೆ, ಜನರು
ಯೋಜನಹೊಂದಲಿಕ್ಕೆ, ಆಗಮಶಾಸ್ತ್ರದ ಎಲ್ಲ ನಿಯಮಗಳನ್ನು, ಸಾತ್ವಿಕತೆ
ಸದಿರುವ ಕ್ರಮಗಳನ್ನು, ಅಲ್ಲಿ ಆಚರಿಸಲೇಬೇಕು. ಅದು ವಿಜ್ಞಾನಿ ತನ್ನ
ಯೋಗಗಳಲ್ಲಿ ಚಾಚೂತಪ್ಪದೆ ಭೌತವಿಜ್ಞಾನದ ಕ್ರಮಗಳನ್ನುಅನುಸರಿಸು
ತೆ, ಇಲ್ಲವಾದರೆ ಫಲಬಾರದು.

ಆದರೆ ದೇವರನ್ನು ದೂರಹಾಕಿದ ನಮ್ಮ ಸೆಕ್ಯುಲರ್‌ಸರ್ಕಾರವು, ಯಾವ
ರ್ಮಶಾಸ್ತ್ರ ಬಲ್ಲವರನ್ನೂ ಕೇಳದೆ, ತಾನೂ ದೇವಸ್ಥಾನಗಳ ತಳಹದಿ ತಿಳ
ಳ್ಳದೆ, ಭೂತರಾಧಕರಿಗೂ ದೇವಸ್ಥಾನಗಳಲ್ಲಿ ಸನಾತನಿಗಳಂತೆಯೇ ಹಕ್ಕು
ದೆ ಎಂದುಮಾಡಿದೆ. ಕೇವಲ ಲೌಕಿಕಭಾವನೆಯ ಸರ್ಕಾರಿಮುಖಂಡರು
ವರ್ಣನಿಸಿದೊಡನೆ ಯಾರೂ ತಮ್ಮ ಧಾರ್ಮಿಕಮಟ್ಟ ಏರಿಸಿಕೊಳ್ಳಲಾರರು
ದಕ್ಕೆ ಬದಲಾಗಿ ಹಲವುರೀತಿಗಳಲ್ಲಿ ಪಾಪಕಟ್ಟಿಕೊಳ್ಳುತ್ತಿರುವ ರಾಜಕೀಯ
ುಖಂಡರೇ ಬಹುಮಟ್ಟಿಗೆ ತಮ್ಮ ಧಾರ್ಮಿಕ ಮತ್ತು ನೈತಿಕಮಟ್ಟ ಕಳ
ಳ್ಳುತ್ತಬಂದದ್ದು ಮಾತ್ರ ಧಾರಾಳವಾಗಿ ಕಾಣಬಹುದು!) ಸನಾತನಧರ್ಮವು

ತನ್ನ ವರ್ಣಧರ್ಮದವರಿಗೇ ದೇವಸ್ಥಾನದಉಪಯೋಗಕ್ಕೆ ಅನೇಕಕಟ್ಟುಗಳನ
ಮಾಡಿದೆ. ದೈವಾಪರಾಧ ಅಲ್ಲಿ ನಡೆಯಕೂಡದು ಎಂದು ಎಚ್ಚರಿಸಿದ
(ದೇವಸ್ಥಾನಗಳ ಸದುಪಯೋಗ ನೋಡಿರಿ) ಆದರೆ ಕೇವಲ ಭೂತಾರಾಧಕರಿ
ಸರ್ಕಾರ ಯಾವ ಶರ್ತವೂಹಾಕಲಿಲ್ಲ! ಭೂತ ದೇವರಲ್ಲ. ಅದ್ದರಿಂದ ಅದನ
ಮಾತ್ರ ನಂಬುವವರುನಾಸ್ತಿಕರು. ಅಂಥವರಿಂದ ದೇವಸ್ಥಾನಕ್ಕೆ ಬಹಳಹಾ
ಇದೆ. ಅವರಲ್ಲಿ ತಾಮಸಿಕತೆ ತುಂಬಾಇದ್ದು, ದೇವಸ್ಥಾನದ ಸಾತ್ವಿಕತೆ ಕೆಡ
ರದು. ಅವರನ್ನು ಅರ್ಚಕರಾಗಿ ಹಾಕುವ ಯತ್ನಕೂಡ ನಡೆದಿದೆ! **ನಾಸ್ತಿ**
ಡಿ.ಎಂ.ಕೆ.ಯವರು, ಕಮ್ಯೂನಿಸ್ಟ್ ಸರ್ಕಾರದವರು, ದೇವಸ್ಥಾ
ಗಳನ್ನು ಬಹಳ ಕ್ಷೀಣಿಸಲಿಕ್ಕೂ ಕೇಂದ್ರಸರ್ಕಾರ ಆಸ್ಪದಕೊಟ್ಟಿದ
ಸರ್ಕಾರವು ಕ್ರಿಶ್ಚನ್‌ಧರ್ಮಕ್ಕೆ, ಮುಸಲ್ಮಾನಧರ್ಮಕ್ಕೆ ವಿರುದ್ಧವಾ
ಅವರ ಇಗರ್ಜಿಗಳಲ್ಲಿ, ಮಸೀದಿಗಳಲ್ಲಿ ಏನನ್ನೂ ಮಾಡಲುಹೇಳಿದ್ದಿಲ್ಲ
ತೀರಾಅಜಗಜಾಂತರ ವ್ಯತ್ಯಾಸವಿರುವ ಭೂತಾರಾಧಕರಿಗೆ ದೇವಸ್ಥಾನದಲ್ಲಿಹಕ
ಕಡ್ಡಾಯಮಾಡಿದ ಸರ್ಕಾರಕ್ಕೆ, ಕ್ರಿಶ್ಚನರೇ ಆದ ಪ್ರೊಟೆಸ್ಟೆಂಟರಿಗೆ ಕೆಥೊಲಿಕ
ಇಗರ್ಜಿಗಳಲ್ಲಿ, ಶೀಯಾ ಮುಸಲ್ಮಾನರಿಗೆ ಸುನ್ನಿ ಮಸೀದಿಗಳಲ್ಲಿ ಸಮಾನಹಕ
ಕೊಡುವ ಎದಗಾರಿಕೆ ಎಷ್ಟಕ್ಕೂಬಾರದು. ಹೀಗೆ ಹಿಂದೂಗಳು ತಮ್ಮದ
ದೇಶದ ಮೂರನೇಮಟ್ಟದಪ್ರಜೆಗಳಾಗಿದ್ದಾರೆ. ಆದರೆ ಕ್ರಿಶ್ಚನರಿಗೆ ಮುಸಲ್ಮಾ
ರಿಗೆ ಪೂರ್ಣಹಕ್ಕು ; ಪ್ರಥಮವರ್ಗದ ಪ್ರಜಾಹಕ್ಕು! ನಮ್ಮದು ಪ್ರಜಾರಾ
ವಂತೆ. ಆದರೆ ದೇವಸ್ಥಾನಗಳನ್ನು ನಿರ್ಮಿಸಿದವರೆಲ್ಲ ಸನಾತನಿಗಳು ಮಾತ್ರ
ಅವುಗಳನ್ನು ನಡೆಸಿಕೊಂಡುಹೋಗಲು ೯೯.೯ ಶತಾಂಶ ಹಣ ಅರ್ಪಿಸುವವರು
ಅವರೇ. ಆ ದೃಷ್ಟಿಯಿಂದಲೂ ದೇವಸ್ಥಾನಗಳು ಅವರೆಲ್ಲರೂಬೇಕೆನ್ನು
ಆಗಮಶಾಸ್ತ್ರದ ರೀತಿಯಲ್ಲಿ ಮಾತ್ರ ನಡಕೊಂಡುಹೋಗಬೇಕು. ಆದರೆ ಅ
ನ್ಯಾಯವೂ ಸರ್ಕಾರಕ್ಕಿಲ್ಲ.

ದೇವಸ್ಥಾನಗಳಲ್ಲಿ ಹಿಂದೂಗಳೆಂಬವರಿಗೆಲ್ಲ ಪ್ರವೇಶಕೊಡಬೇಕೆಂಬುದ
ಸರ್ಕಾರದತೀರ್ಮಾನ. ಸನಾತನಧರ್ಮಮಾತ್ರ ವರ್ಣಧರ್ಮ ಹೇಳಿದೆ. ಶೂ
ವರ್ಣಕ್ಕೂ ಕೆಳಗಿರುವವವರು ಹಿಂದೂಗಳು ಸರಿಹೊಲೆಯರು ಹಿಂದೂಧಮ
ದವರಲ್ಲ, ಕೇವಲ ಭೂತಾರಾಧಕರು. ಶೂದ್ರರಲ್ಲೂ ಪ್ರತ್ಯಕ್ಷ ಶಕ್ತಿ ಪ್ರಕಟ
ಮಾಡುವ ಭೂತಗಳು ಒಂದುಪಾಲು ಆರಾಧಿಸುವವರಿದ್ದಾರೆ ಸರಿ. ಆದ
ಅವರಿಗೆ ದೇವಸ್ಥಾನಗಳ ಪ್ರವೇಶ ಮುಂಚೆಯೂ ಇತ್ತು. ಅವರನ್ನು ಆಪ
ಮುಕ್ತೇಸರರಾಗಿ ನೇಮಿಸುವುದು ಹೊಲೆಯರನ್ನು ಅರ್ಚಕರಾಗಿ ಮಾಡು

ಯತ್ನ, ತೀರಾಅನ್ಯಾಯ. ಕಾಂಗ್ರೆಸ್‌ಪಕ್ಷವೇ ಅರ್ಚಕವರ್‍ಯನಿಸ್ಟರು ಆದವ ರನ್ನು ಎಷ್ಟಕ್ಕೂ ತಮ್ಮ ಮುಖ್ಯ ಅಧಿಕಾರಗಳಿಗೆ ಸೇರಿಸಿಕೊಂಡೀತೇ ? ಆ ನ್ಯಾಯವಾದರೂಬೇಡವೇ ? ಅವರು ದೇವಸ್ಥಾನದ ಅಧಿಕಾರಿಗಳಾಗಿ ಸರ್ಕಾರ ದಿಂದ ನೇಮಕಹೊಂದಿ ಬಂದು, ದೇವಸ್ಥಾನಗಳ ಆಗಮ ಕ್ರಮಗಳನ್ನು ಬದ ಲಾಯಿಸಿ ತೀರಾಕೆಡಿಸದಿರರು. ಅರ್ಚಕರಾದರೆ ಅಲ್ಲಿ ಮುಂದೆ ಮಾಂಸ ಮದ್ಯ ಕೂಡ ಅರ್ಪಿಸಿ ದೈವೀಕಳೆ ನಾಶಮಾಡದಿರರು. ಸನಾತನಿಗಳಿಗೆ ತಮಗಾಗುವ ಅನ್ಯಾಯಗಳ ಬಗ್ಗೆ ಇನ್ನಾದರೂ ಯಾವಾಗ ಎಚ್ಚರ ಬಂದೀತೋ !

ಹಿಂದೂ ಎಂಬುದು ಶಾಸ್ತ್ರದ ಶಬ್ದವಲ್ಲ. ಅದು ಶಾಸ್ತ್ರಕ್ಕೆ ಅನ್ವೈಸಿದರೆ ಅನರ್ಥವಾಗುತ್ತದೆ. ಸಿಂಧೂನದಿಯ ಪೂರ್ವಭಾಗದಲ್ಲಿರುವವರನ್ನು ಅದರ ಪಶ್ಚಿಮದಲ್ಲಿರುವವರು ಹಿಂದುಗಳು ಎಂದು ಕರೆದರು. ಅವರೆಲ್ಲರದ್ದೂ ಹಿಂದೂಧರ್ಮ ಎಂದು ಹೆಸರಿಸಿದರು. ಅಷ್ಟಕ್ಕೇ ವಿರುದ್ಧ ತರದವಾದ ಸನಾತನ ಧರ್ಮ, ಭೂತಾರಾಧನೆ ಒಂದಾಗುವುದಿಲ್ಲ. ಆ ಮೇಲೆ ಮೂಲ ಸನಾತನ ಧರ್ಮದಿಂದ ಬುದ್ಧಧರ್ಮ, ಜೈನಧರ್ಮ ಮುಂತಾದವು ಶಾಖೆಗಳಾಗಿ ಬೇರೆ ಯಾದವು. ಅವುಮಾತ್ರ ತಾವುಬುದ್ಧ, ಜೈನಧರ್ಮಗಳೆಂದು ಕರಕೊಂಡವೇ ಹೊರತು, ಹಿಂದೂಧರ್ಮ ಎಂದಲ್ಲ. ಆ ಮೇಲೂ ಹಿಂದೆ ಉಳಿದ ಸನಾತನ ಧರ್ಮ, ಆದಿವಾಸಿ ಮುಂತಾದವರ ಭೂತಾರಾಧನೆ ಎರಡೂ ಒಂದೇಧರ್ಮದ ಭಾಗ ; ಎಂಬ ಭಾವನೆ ಬಂದು ಅವಕ್ಕೆಲ್ಲ ಹಿಂದೂ "ದೇವಸ್ಥಾನಗಳಲ್ಲಿ ಸ್ಥಾನ ಕೊಡಲೇಬೇಕು" ಎಂದು ಗಾಂಧಿಯವರು ತೀರ್ಮಾನಿಸಿದರು. ಅವುಗಳ ತೀರಾ ವಿರುದ್ಧಭಾಗದ ವಿಚಾರವೇ ಅವರಿಗೆ ಬೇಡವಾಯಿತು. ಸನಾತನಿಗಳು ಹಿಂದೂಗಳೆಂದು ತಮ್ಮನ್ನು ಕರಕೊಂಡದ್ದುದರ ಘೋರದೋಷವಿದು ; ಇನ್ನಾದರೂ ಅವರು ಎಚ್ಚರಗೊಳ್ಳಬೇಕು. ತಾವು ಸನಾತನಿಗಳು ಎಂದು ಮಾತ್ರ ಉರುಹಾಕುತ್ತಿರಬೇಕು.

ದೇವರು ಜನರಿಗೆ ಅವರವರ ಧಾರ್ಮಿಕ ಶಕ್ತಿಗೆ ತಕ್ಕಜನ್ಮ ಕೊಡುತ್ತಾನೆ ಹೊರತು ರಾಜಕೀಯಮುಖಂಡರು ಹೇಳಿದೊಡನೆ ಭೂತಾರಾಧಕರು ಸನಾತನ ಧರ್ಮದ ಅಭಿಮಾನಿಗಳಾಗರು. ಅವರು ದೇವಸ್ಥಾನಗಳನ್ನು ತುಂಬುವುದು ಕಾಣುವುದಿಲ್ಲ. ಕೆಡಸಲಿಕ್ಕೆಮಾತ್ರ ಬಂದಾರು! ದೇವಸ್ಥಾನಕ್ಕೆ ಅವರಿಂದಬರುವ ಗಣಿಕೆ 0.೧% ಕೂಡ ಆಗದು. ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ (೯, ೨೫) :

ಭೂತಾನಿ ಯಾಂತಿಭೂತೇಜ್ಯಾ ಯಾಂತಿ ಮದ್ಯಾಜಿನೋಽಪಿಮಾಮ್ ॥

ಎಂದರೆ ಭೂತಗಳನ್ನು ಪೂಜಿಸುವವರು ಭೂತಗಳನ್ನೆ ಸೇರುವರು ನನ್ನನ್ನು ಪೂಜಿಸುವವರು ನನ್ನನ್ನೆ ಸೇರುತ್ತಾರೆ. ಜಪಕ್ಕೆ, ದೇವರ ಪೂಜೆ ಕುಳಿತ ದ್ವಿಜ ಆರಂಭದಲ್ಲೇ ಹೇಳುತ್ತಾನೆ.

ಅಪಸರ್ಪಂತುಭೂತಾ ಯೇಭೂತಾ ಯೇಭೂಪಿಸಂಸ್ಥಿತಾ।
ಯೇಭೂತಾ ವಿಘ್ನಕರ್ತಾರ ಸ್ತೇನಶ್ಯಂತು ಶಿವಾಜ್ಞಯಾ॥

ಇಲ್ಲಿದ್ದ ಭೂತಗಳು ಹೊರಟುಹೋಗಲಿ. ತೊಂದರೆಕೊಡಲು ಬಂದ ಶಿವನ ಆಜ್ಞೆಯಂತೆ ನಾಶಹೊಂದಲಿ।

ಭೂತಪ್ರೇತ ಪಿಶಾಚ್ಯಾದ್ಯ ನಾಚರಾ ಸರ್ವೇತೇ ಭೂಮಿಭಾರಕ।

ಭೂತವನ್ನು ಸೇರುವುದೆಂದರೆ ಮರಣದನಂತರ ಭೂತದಅಡಿಯಾಳ ಇರುವುದು. ಅದು ಬಹಳ ಕಷ್ಟದ ಬಾಳು.

ಕೇವಲ ಭೂತಾರಾಧಕರಿಗೆ ಮುಂಚೆ ದೇವಸ್ಥಾನಗಳಿಗೆ ಬರಬೇಕೆಂ ಅವಶ್ಯಕತೆಯೇ ಇರಲಿಲ್ಲ. ಆದರೆ ಸರ್ಕಾರವು ಕೊಟ್ಟಹಕ್ಕಿಂದ, ಕಾಲಕೆಡು ಬರುವುದರಿಂದ, ಅವರು ತಾವೂಹಿಂದೂಗಳು ಎಂದುಕೊಂಡು ಪ್ರವೇಶಮಾ ಅಲ್ಲಿ ವಾತಾವರಣ ಕೆಡಿಸುವ ಆಸ್ಪದವಿರಕೂಡದು. ಆ ತರದಹಕ್ಕುಹೋ ಬೇಕು ಸನಾತನಿಗಳೂ ತಾವು ಸರಿಯಾದ ಅರ್ಥವೇ ಇಲ್ಲದ ಹಿಂದೂಧರ್ಮ ವರೆಂದು ತಮ್ಮನ್ನು ಕರೆಕೊಳ್ಳುತ್ತ ಈ ಹಾನಿತಂದುಕೊಳ್ಳಕೂಡದು. ಸನಾತ ಹಿಂದೂಗಳೆಂದೇ ಹೆಸರಿಸಿಕೊಳ್ಳುತ್ತಾ ದೇವಸ್ಥಾನಗಳು ಸನಾತನೀದೇವಸ್ಥಾ ಗಳು, ಹಿಂದೂದೇವಸ್ಥಾನಗಳಲ್ಲ, ಎಂದು ಹಕ್ಕು ಸ್ಥಾಪಿಸಿಕೊಳ್ಳಬೇಕು

ಬಹಳ ಮುಂಚಿನಕಾಲದಲ್ಲಿ, ಆದಿವಾಸಿಗಳು ಮುಂತಾದ ಕೇವ ಭೂತಾರಾಧಕರಲ್ಲಿ ಕ್ರಮೇಣ ಮೇಲ್ತರದ ಜನ್ಮಕ್ಕೆ ಯೋಗ್ಯತೆ ಹೊಂದಿದವ ಇಲ್ಲಿ ಸನಾತನಧರ್ಮದ ಬುಡದ ಮೆಟ್ಟಲಲ್ಲಿ ಜನ್ಮ ಪಡೆಯುವರು, ಎಂ ಭಾವನೆ ಸ್ವಾಭಾವಿಕವಾಗಿ ಇತ್ತು. ಆದ್ದರಿಂದಲೇ ಅರ್ಧಪಾಲು ಇನ ಭೂತಾರಾಧಕರಾದ ಶೂದ್ರರಿಗೆ ದೇವಸ್ಥಾನಗಳಲ್ಲಿ ಪ್ರವೇಶದ ಆಸ್ಪದವಿತ್ತು ಆದರೆ ಈಗ ಅಲ್ಪಸ್ವಲ್ಪ ಧಾರ್ಮಿಕ ಒಲವು ಬೆಳೆಸಿದ ತೀರಾ ಕೆಳವರ್ಗ ಹಿಂದೂಗಳನ್ನು ಕ್ರಿಶ್ಚನರನ್ನಾಗಿ ಮಾಡುವ ಯತ್ನ ಬಹಳ ನಡೆಯುತ್ತಿ ೧೯೫೧ ರಿಂದ ೧೯೭೧ರೊಳಗೆ ಆರು ಮಿಲಿಯಜನರು ಹಾಗೆ ಮತಾಂತ ಹೊಂದಿದರು. ಸ್ವರಾಜ್ಯ ಬಂದನಂತರ ಬಡವರಸಂಖ್ಯೆ ಹೆಚ್ಚುತ್ತಿದೆ. ಆ ರಿಂದ ಮತಾಂತರಕ್ಕೆ ಪಾಶ್ಚಾತ್ಯದೇಶಗಳ ಧಾರಾಳಹಣ ಮಾತ್ರವಲ್ಲ, ಅರಬ್ಬಿ ದೇಶಗಳ ಅಪರಿಮಿತ ಐಶ್ವರ್ಯದ ಒಂದುಭಾಗವೂ ಇನ್ನುಇಲ್ಲಿ ಬಾರದಿರ

ತನ್ಮೂಲಕ ಪರಧರ್ಮದವರ ಸಂಖ್ಯೆ ಹೆಚ್ಚುತ್ತ, ಸನಾತನಿಗಳಕಷ್ಟ ಮತ್ತಷ್ಟು ಹೆಚ್ಚದಿರದು. ಆದರೆ ದೇವಸ್ಥಾನಗಳಿಗೆ ಯಾವಕಟ್ಟೂಇಲ್ಲದೆ ಭೂತಾರಾಧಕರಾದವರಿಂದ ಪ್ರವೇಶಒಪ್ಪಿದರೆ ದೇವಸ್ಥಾನಗಳೂ ಸಂಪೂರ್ಣ ವ್ಯರ್ಥವಾಗಿರವು, ಇದಕ್ಕೆ ಒಂದು ಪರಿಹಾರ ಕಾಣಬೇಕು. ಪ್ರಾಯಶಃ ಅವಲ್ಲಿ ಹೊರಸುತ್ತಲ್ಲಿ, ಬಹುಮಟ್ಟಿನ ಭೂತಾರಾಧಕರಿಗಾಗಿ, ಮೂಲ ದೇವರ ಉತ್ಸವಮೂರ್ತಿರೂಪದ ಬಹಳ ಆಕರ್ಷಣೀಯವಾದ ಅಮೃತಶಿಲೆಯ ಸುಂದರ, ಮೂರ್ತಿಯನ್ನು ಒಂದು ಗುಡಿಯಲ್ಲಿ ಸ್ಥಾಪಿಸಿ ಅಲ್ಲಿ ಈ ವರ್ಗದವರಿಗೆ ಹತ್ತಿರ ಬಂದು ಫಲಸಮರ್ಪಣೆ, ಸೇವೆ, ಭಜನೆ, ನಡೆಸುವುದು ಪ್ರಾರ್ಥನೆ ನಡೆಸುವುದು, ದೀಪಾರಾಧನೆ ನೋಡುವುದು, ಮುಂತಾದ ಸೌಕರ್ಯಕೊಡಬಹುದೋ ಏನೋ. ಸನಾತನಧರ್ಮದವರ ಧಾರ್ಮಿಕಸಂಸ್ಥೆಗಳು ಆ ಧರ್ಮದ ಈ ಕಾಲದ ಅಪರಿಮಿತತೊಡಕುಗಳ ಪರಿಹಾರಕ್ಕೆ ಯಾವ ರೀತಿಯಲ್ಲಿಯೂ ದಾರಿ ತೋರಿಸುವ ಮುಂದಾಳುತನ ತೋರದಿರುವುದು ಬಹಳ ಶೋಚನೀಯ! ಇದನ್ನು ಭಗವಂತ ನಿಲ್ಲಿಸುವಂತೆ ಪ್ರಾರ್ಥಿಸುವ.

೩. ನರಕಸ್ವರ್ಗ ; ಪಾಪಪುಣ್ಯ

೨೭. ಅವರು ಯಮಲೋಕಕ್ಕೆ ಹೋಗಿಬಂದರು

ನಮ್ಮಶಾಸ್ತ್ರವಿರುವುದು ಮುಖ್ಯವಾಗಿ ಸನಾತನಧರ್ಮ ಅನುಸರಿಸುವವರ ಪ್ರಯೋಜನಕ್ಕಾಗಿ ; ಎಚ್ಚರಿಕೆಗಾಗಿ. ಅದರಲ್ಲಿ ಎಲ್ಲರಿಗೂ ಪುನರ್ಜನ್ಮ ಹೇಳಿದೆ. ಆದರೆ ಮರಣವಾದೊಡನೆ ಅಲ್ಲ. ಯಮಲೋಕದಲ್ಲಿ ಪಾಪಿಗಳಿಗೆ ಶಿಕ್ಷೆಯಾಗಿ, ಅಥವಾ ಪುಣ್ಯಾತ್ಮರಿಗೆ ಪಿತೃಲೋಕದಲ್ಲಿ ಅಥವಾ ದೇವಲೋಕದಲ್ಲಿ ಸುಖಭೋಗವಾಗಿ ಅನಂತರಮಾತ್ರ. ಹಿಂದೂಗಳಲ್ಲಿ ಕೂಡಾ ಈ ಹಿಂದೆ ಹೇಳಿದ್ದ ಪುನರ್ಜನ್ಮದ ಕತೆಗಳ ತರದವು ತೀರಾ ತೀರಾ ಅಪೂರ್ವತರದವು. ಎಲ್ಲೋ ಮಿಲ್ಲಿಯಕ್ಕೊಂದಾದ ಆಕ್ಷೇಪಗಳು ; ಸಾಮಾನ್ಯ ಕ್ರಮವಲ್ಲ. ಅವಲ್ಲಿ ಕೆಲವರು ಇನ್ನೂ ಬಾಳಬೇಕೆಂಬ ಆಸೆ ಬಲವಾಗಿರುವಾಗಲೇ ಅಕಸ್ಮಾತ್ತಾಗಿ ಮೃತರಾಗಿ, ತಮ್ಮ ಆ ಜನ್ಮದ ಪ್ರಾರಬ್ಧಕರ್ಮ ಮುಗಿಸದಿದ್ದು, ಪುನಃ ಬಹುಬೇಗ ಜನ್ಮಪಡೆದು ಮತ್ತೆ ಮರಣಹೊಂದಿದಾಗ ಮಾತ್ರ ಪ್ರಾಯಶಃ ಅವರು ಪಾಪಪುಣ್ಯಗಳ ವಿಚಾರಣೆಗೆ ನರಕಕ್ಕೆಒಯ್ಯಲ್ಪಡುತ್ತಾರೆ. ಅವರ ಪುನರ್ಜನ್ಮದ

ಕತೆಗಳು ಈ ಕಾಲದ ಪತ್ರಿಕೆಗಳ ಮೂಲಕ ಪ್ರಚಾರಹೊಂದಲಿ, ಪಾಪಹೆಚ್ಚು
ಈ ಕಾಲದಲ್ಲಿ ಜನರಿಗೆ ಪುನರ್ಜನ್ಮವಿದೆ ಎಂಬುದು ಹೆಚ್ಚು ಲಕ್ಷ್ಯಕ್ಕೆ ಬರಲಿ
ಈ ತನ್ಮೂಲಕ ಕೇವಲ ಈ ಜನ್ಮ ಮಾತ್ರವಲ್ಲ, ಅದರಲ್ಲಿ ಉಂಡುತಿಂದ
ಭೋಗಿಸಿದ್ದೇಬಂತು ಎಂಬ ನಾಸ್ತಿಕವಾದ ಸರಿಯಲ್ಲ, ಎಂಬ ಪಾಠ ಕಲಿಯ
ವಂತಾಗಲಿ, ಎಂದು ದೇವರೇ ಕೆಲವರಿಗೆ ಈ ಪುನರ್ಜನ್ಮಕೊಟ್ಟನೋ ಏನೋ
ಎಂದು ತೋರುತ್ತದೆ. ಅಂತೂ ಅವು ಸಾಮಾನ್ಯರ ಪಾಲಿನ ಕ್ರಮವಲ್ಲ.

ಶಾಸ್ತ್ರದ ಹೇಳಿಕೆಯಂತೆ, ಮನುಷ್ಯನಿಗೆ ಮುಂಚೆಯೇ ದೇವರಿಂ
ನಿರ್ಧರಿಸಲ್ಪಟ್ಟ ಆಯುಷ್ಯಮುಗಿದಾಗ, ಯಮಭಟರು ಅವನಜೀವಾತ್ಮನನ್ನು
ಯಮಲೋಕಕ್ಕೆ ಒಯ್ಯಲುಬರುತ್ತಾರೆ. ಜೀವನದಲ್ಲಿ ಪಾಪದಭಾಗವೇ ಅಧಿ
ವಾಗಿರುವವನಿಗೆ ಮರಣ ಕಷ್ಟ. ಉಸಿರುಬಿಗಿಯಾಗುತ್ತದೆ. ಗಂಟಲುಕಟ್ಟು
ತ್ತದೆ. ಜೀವಾತ್ಮನು ದೇಹದಿಂದ ತನ್ನಶಕ್ತಿ ಹಿಂತೆಗೆಯುವುದರಿಂದ ಸ್ವರಕ್ಷೀ
ವಾಗುತ್ತದೆ. ದೃಷ್ಟಿಮಂದವಾಗುತ್ತದೆ. ಇಬ್ಬರು ಕರಾಳ ರೂಪದ ಯಮ
ದೂತರು ಅವನ ಹತ್ತಿರ ಬರುತ್ತಾರೆ. ಅವರ ಕೈಯಲ್ಲಿ ಪಾಶ ಮತ್ತು ದಂ
ಗಳಿರುತ್ತವೆ. ಅವರು ಬಹಳ ಕ್ರೂರಿಗಳಾಗಿ ತೋರುವುದರಿಂದ ಮರ
ಹೊಂದುವವ ಬಹಳ ಭೀತಿಹೊಂದುತ್ತಾನೆ. ಅವರು ಅವನ ಜೀವಾತ್ಮನನ
ದೇಹದಿಂದ ಸೆಳೆದು ಬಂಧಿಸಿ ಗಂಟೆಯೊಳಗೆ ಅತ್ಯಂತ ವೇಗವಾಗಿ ಯಮಪುರಿ
ಕೊಂಡುಹೋಗುತ್ತಾರೆ. ಅಲ್ಲಿ ಆ ಜೀವಾತ್ಮನನ್ನು ಚಿತ್ರಗುಪ್ತ ಅಥವ
ಯಮ ಪ್ರತ್ಯಕ್ಷಕಂಡು ತಾವು ಕರಕೊಂಡುಬರಲು ಹೇಳಿದ ಜೀವಾತ್ಮ ಅವನ
ನಿಜವೋ ಎಂದು ಮೊಕಬಿಲೆ ಮಾಡುತ್ತಾರೆ. ನಿಜವೆಂದಾದರೂ ಅವನನ
ಯಮದೂತರು ಹಿಂದೆಕೊಂಡುಹೋಗಿ ಬಿಡುತ್ತಾರೆ. ಆದರೆ ಆ ಜೀವಾತ
ನನ್ನು ಪುನಃ ಮೃತದೇಹ ಸೇರಲುಬಿಡುವುದಿಲ್ಲ. ಅವನು ಅಲ್ಲಿ ಮರ
ಸಂಸ್ಕಾರಗಳಿಂದ ಪ್ರಯೋಜನಪಡೆಯಬೇಕಾಗಿದೆ. ಅವನ ಕ್ರಮವಾದ ಯಮ
ಲೋಕದ ಯಾತ್ರೆ ಮುಂದೆನಡೆಯಲಿಕ್ಕಿದೆ. ಅದಕ್ಕೆ ಒಂದುವರ್ಷವೇಬೇಕಾಗ
ತ್ತದೆ. ಅನಂತರ ನರಕದಲ್ಲಿ ಶಿಕ್ಷೆವಿಧಿಸಲ್ಪಡುತ್ತದೆ. ಶಿಕ್ಷೆಯ ಅನಂತ
ಮಾತ್ರವೇ ಪುನರ್ಜನ್ಮ ಉಂಟಾಗುತ್ತದೆ.

ಆದರೆ ಬಹಳ ಅಪರೂಪಕ್ಕೆ ಯಮನಭಟರು ಜೀವಾತ್ಮನನ್ನು ಆರಿ
ಸೆಳೆಯುವಾಗ ತಪ್ಪುಮಾಡಿದ್ದುಂಟು. ಯಮನಸರ್ಕಾರದಲ್ಲಿ ಇದುಸಾಧ್ಯವೇ
ಎಂದರೆ ಯಮಕೂಡ, ಈ ಅತಿಕ್ರೂರ ಕಾರ್ಯಕ್ಕೆ, ಕೆಲವುಜೀವಾತ್ಮರಿಗೆ ವಿಶೇ
ಶಕ್ತಿ ಕೊಟ್ಟು, ಉಪಯೋಗಿಸಬೇಕಾಗುತ್ತದೆ. ಅವರು ಪರಿಪೂರ್ಣರ

ಮನೆದುರು ಕೊಂಡು ಹೋದ ಜೀವಾತ್ಮ ಬೇಕಾದವನಲ್ಲ, ತಪ್ಪಾಗಿ ರಲ್ಪಟ್ಟವ ಎಂಬುದು ಅಲ್ಲಿತಕ್ಷಣ ಅಲ್ಲಿನ ದಿವ್ಯಜ್ಞಾನಿಗಳಿಗೆ, ತಿಳಿದು, ಕೂಡಲೆ ಂದೆಹೋಗು ಎಂದು ಆ ಜೀವಾತ್ಮನನ್ನು ಬೇಕಾದ ಶಕ್ತಿಕೊಟ್ಟು ಕಳುಹಿಸು ರೆ. ಆಗ ಸತ್ತುಬಿದ್ದವ ಪುನಃ ಕಣ್ಣು ತೆರೆಯುತ್ತಾನೆ, ಮತ್ತೂ ಕೆಲವುಕಾಲ ಳುತ್ತಾನೆ ; ಮತ್ತು ತನ್ನಆಶ್ಚರ್ಯಕರವಾದ ಅನುಭವ ಇತರರಿಗೆತಿಳಿಸುವು ಂಟು. ಅಂಥ ಕೆಲವು ಕತೆಗಳನ್ನು ನೋಡಿರಿ.

ಹನ್ಸ್‌ರಾಜ್ ಭೇಡಾಡಕ್ಕರ ಕತೆ

ಅವರೊಬ್ಬರು ಪಂಜಾಬಿನ ಕೊರ್ನೆಲ್ ಎಂಬಲ್ಲಿ ಸಮಾಜ ಸೇವಕರಾಗಿ ರು. ೧೯೩೬ ಮಾರ್ಚಿಯಲ್ಲಿ ಅವರಿಗೆ ಕಠಿಣ ಕಾಯಿಲೆಯಾಗಿ ಆಸ್ಪತ್ರೆ ರಿದರು. ಏನೂ ಗುಣಹೊಂದದೆ ಆಸ್ಪತ್ರೆಯವರು ಬದುಕಲಾರ ಎಂದು ನೆಗೆ ಕಳುಹಿಸಿದರು. ಏಪ್ರಿಲ್ ೨೦ರ ರಾತ್ರಿ ದೇಹ ಅಚಲವಾಯಿತು. ತ್ತಿರವೇಇದ್ದ ಡಾಕ್ಟರರು ಬಂದು ಸತ್ತಾಗಿದೆ ಎಂದರು. ಹನ್ಸ್‌ರಾಜರ ಳಿಕೆಯಂತೆ, ಇಬ್ಬರು ಧಾಂಡಿಗರು ಅವರ ಕೈಗಳನ್ನು ಕಟ್ಟಿತೀರಾ ಅಪರಿಚಿತ ಾರ್ಗದ ಮೇಲೆ ಅತಿ ವೇಗವಾಗಿ ಕೊಂಡುಹೋದರು. ಮಾರ್ಗವು ತುಂಬಾ ಳ್ಳುಕಲ್ಲುಗಳಿಂದ ತುಂಬಿತ್ತು. ಬಿಸಿಲುಜೋರಿತ್ತು. ಆದರೆ ಅಪರಿಚಿತರು ವರಿಗೆ ಕುಡಿಯುಲಿಕ್ಕೆ ನೀರು, ಮಜ್ಜಿಗೆ ಕೊಟ್ಟರು, ಬಿಸಿಲಿಗೆ ಕೊಡೆಹಿಡಿದರು. ಮೇಲೆ ಅವರನ್ನು ಒಂದುಅತಿಭವ್ಯವಾದ, ಭೂಲೋಕದಲ್ಲೇ ಆತರದ್ದಿರದ, ಂದಿರಕ್ಕೆ ಸೇರಿಸಿದರು. ಅದರ ನಡುವಲ್ಲಿ ಸಿಂಹಾಸನದ ಮೇಲೆ ಯಮ ಜರಿರಬೇಕು, ಕುಳಿತಿದ್ದರು. ಅವರ ಆಭರಣಗಳು ಬಹಳ ಹೊಳೆಯು ದ್ದವು. ಮೈಕಟ್ಟು ಬಲವಾಗಿತ್ತು, ಮೀಸೆಗಳಿದ್ದವು, ಅವರ ಮುಂದೆ ಲ್ಲಿಸಿದವರಿಗೆ ಯಮರಾಯರು ಯಾವ ನರಕಕ್ಕೆ ಹಾಕಬೇಕೆಂದು ಹೇಳು ದ್ದರು. ಭೇಡಾಡಕ್ಕರ ಸರ್ತಿಬಂದಾಗ ಬ್ರಹ್ಮರು ಬಂದು ಅವರು ಪರೋಪ ರಿ, ಶಿಕ್ಷಿಸಕೂಡದು, ಎಂದು ವಿನಂತಿಸಿದರು. ಅಷ್ಟರಲ್ಲಿ ಒಬ್ಬರು ದೊಡ್ಡ ಸ್ತಕ ಹಿಡಿದುಕೊಂಡು ಬಂದು ಅವರು ಚಿತ್ರಗುಪ್ತರಾಗಿರಬೇಕು, "ಇಂದು ನ್ಸ್‌ರಾಜ ಭೇಡಾಡಕ್ಕನ ಸರ್ತಿ ಅಲ್ಲ ; ತಪ್ಪಾಗಿ ಅವನನ್ನು ತಂದರು ; ಅವನ ದೆಮನೆ ಪ್ರೇಮ್ ಇವತ್ತು ಸಾಯಬೇಕಾದವ"ಎಂದರು. ಯಮ ಕೂಡಲೇ ವನನ್ನು ಆ ಬಾವಿಗೆ ಹಾಕಿರಿ ಎಂದು ಬಾವಿ ತೋರಿಸಿದರು. ಅದಕ್ಕೆ ಹಾಕಿ ಾಗ ಒಂದುದಿನ ಬೆನ್ನು ಕೊಟ್ಟದ್ದರಿಂದ ಪೆಟ್ಟಾಗಲಿಲ್ಲ. ಅವರು ತನ್ನ ಮನೆ

ಯಲ್ಲಿ ಎಚ್ಚೆತ್ತರು. ಇದು ಹನ್ಸ್‌ರಾಜರೇ ಹೇಳಿದ ಅನುಭವ. ಅಷ್ಟರ ಅವರ ಬಂಧುಗಳು ಶವದಹನಕ್ಕೆ ತಯಾರುಮಾಡುತ್ತಿದ್ದರು. ಛೇದಾಡಕ್ಕರ ನಡುಗಿತು, ಚೈತನ್ಯಬಂತು, ಎದ್ದು ಕುಳಿತರು ; ನಡೆದರು. ಅಷ್ಟರಲ್ಲಿ ಮರ ವಾಗಿ ನಾಲ್ಕುಗಂಟೆ ಆಗಿತ್ತು. ತಮ್ಮ ಕತೆಹೇಳಿದರು. ಅವರ ಕೈಗಳಮೇ ಬಂಧನದ ಚಿಹ್ನೆಗಳಿದ್ದುದು ಹತ್ತಿರ ಇದ್ದವರು ಕಂಡರು (ಅದು ಸ್ವಲ್ಪದಿನಗ ವರೆಗೂ ಇತ್ತಂತೆ). ಹೀಗೆ ಆಗುತ್ತಿರುವಾಗಲೇ ಅವರ ನೆರೆಮನೆಯ ಪ್ರೇಮ ಚಿತ್ರಗುಪ್ತ ಮರಣಹೊಂದಿದ್ದುದು ತಿಳಿಯಿತು. ಅವನು ಮುಂಚಿನ ರಾತ್ರಿ ವರೆಗೂ ಆರೋಗ್ಯವಂತನಾಗಿದ್ದ (ಟ್ರುತ್ ೭-೧೦-೧೯೬೬. ಲೇಖನ ಬರೆ ದವರು ಕೆ. ಎ. ಸುಬ್ಬರಾವ್).

೨. ಒಬ್ಬಳು ದುರ್ಗಾ ಎಂಬವಳ ಬಗ್ಗೆ ಮತ್ತೊಬ್ಬಳು ದುರ್ಗಾ

ಇದು Sunday Indian Nationನಲ್ಲಿ ೨೯-೬-೧೯೫೮ರ ಸಂಚಿ ಯಲ್ಲಿ ಬಂದಕತೆ. ಮಧ್ಯಪ್ರದೇಶದ ಕಾಳು ಎಂಬವನಪತ್ನಿ ದುರ್ಗಾಎಂಬವ ೨೭-೬-೧೯೫೮ರಲ್ಲಿ ಸತ್ತಳೆಂದು ಸ್ಮಶಾನಕ್ಕೆ ಕೊಂಡುಹೋದರು. ದಾರಿಯ ಎಚ್ಚೆತ್ತಳು. "ನನಗೆ ದೀರ್ಘನಿದ್ರೆಬಂದಂತಾಯಿತು, ಸ್ವಪ್ನದಲ್ಲಿತೋರಿದಂ ಯಮದೇವರನ್ನು ಕಂಡೆ. ಆದರೆ ಬೇಕಾದುದು ಈ ಹೆಂಗಸಲ್ಲ; ಎಂದರು ಆದ್ದರಿಂದ ನನ್ನನ್ನು ಇಲ್ಲಿ ಪುನಃ ಬಿಡಲುಹೇಳಿದರು. ಹಿಂದೆಬಂದೆ" ಎಂದಳ ಅವಳು ಸ್ಮಶಾನದಿಂದ ಹಿಂದೆಬರುವಾಗಲೇ ಅವಳ ಹೆಸರಿನ ಇನ್ನೊಬ್ಬ ದುರ್ಗಾಳ ಹೆಣವನ್ನು ಅಲ್ಲಿಗೆ ಹೊತ್ತುಕೊಂಡುಹೋಗುತ್ತಿದ್ದರಂತೆ.

೩. ಬಳ್ಳಾರಿಯ ಮುಸಲ್ಮಾನ ಹೆಂಗಸು ಯಮಲೋಕಕ್ಕೆ ಹೋಗಿ ಬಂದಳು

ಹುಸೇನ ಬೀ ಎಂಬ ೫೨ ವಯಸ್ಸಿನ ಮುಸಲ್ಮಾನ ಹೆಂಗಸು ಫಕ್ಕ ಕಾಯಿಲೆಬಿದ್ದಳು. ಎರಡುದಿನಗಳ ನಂತರ ಬೆಳಗಿನಜಾವ ೫-೩೦ಕ್ಕೆ ಮೃತ ದಳು. ಅವಳಅಳಿಯ ಮರಣದ ವಾರ್ತೆಕೇಳಿದೊಡನೆ ಅವಳಿದ್ದ ಕೌಲಬಜಾ ಎಂಬಲ್ಲಿಗೆ ಧಾವಿಸಿ ಅವಳ ಅಂತ್ಯವಿಧಿಗೆ ಎಲ್ಲ ವ್ಯವಸ್ಥೆಮಾಡಿದ. ಅದ ೧೧ಗಂಟೆಗೆ ಹೆಣದಕೈಬೆರಳು ಅಲ್ಲಾಡುವುದುಕಂಡಿತು. ಅನಂತರ ೧೦ಮಿನಿ ಗಳಲ್ಲಿ ಎಲ್ಲರಿಗೂ ಆಶ್ಚರ್ಯವಾಗುವಂತೆ ಮುದುಕಿ ಧೀರ್ಘನಿದ್ರೆಯಿಂದ ಎ ತ್ತಂತೆ ಎದ್ದುಕುಳಿತಳು. "ಇಬ್ಬರು ಅಪರಿಚಿತರು ನನ್ನನ್ನು ವಿಚಿತ್ರತರ

ಬಹಳ ಮನೋಹರವಾದ ಪ್ರದೇಶಕ್ಕೆ ಕರೆದುಕೊಂಡುಹೋಗಿ ಅಲ್ಲಿ ಕೆಲವರ ಮುಂದೆ ನಿಲ್ಲಿಸಿದರು. ನನ್ನ ಹೆಸರು ಕೇಳಿಕೊಂಡಬಳಿಕ 'ನಿನ್ನ ಕಾಲವಿನ್ನೂ ಬರಲಿಲ್ಲ. ಬಂದಲ್ಲಿಗೇ ಹೋಗು, ತಪ್ಪಾಗಿ ನಿನ್ನನ್ನು ಕರಕೊಂಡುಬಂದಿದ್ದಾರೆ. ಎಂದರು' ಹಿಂದೆ ಬಂದೆ ಎಂದಳು". ಅವಳಪತಿ ಮೃತನಾಗಿ ಒಂದುತಿಂಗಳು ಆಗಿತ್ತಷ್ಟೆ. ಅವನನ್ನು ಕಂಡೆಯೋ ಎಂದು ಕೇಳಿದ್ದಕ್ಕೆ ಇಲ್ಲ ಎಂದಳು (ಸಂಯುಕ್ತ ಕರ್ಣಾಟಕದಲ್ಲಿ ಈ ವಾರ್ತೆ ಬಂದಿತ್ತು).

೪. ಇವಳ ಮರಣ ಈಗ ಅಲ್ಲ ಮಗಳಂದಿರ ಮರಣದ ಅನಂತರ

ಶ್ರೀರಾಮ ಚರಣದಾಸಜೀ ಎಂಬವರು ಕಲ್ಯಾಣದ ಪರಲೋಕ ಮತ್ತು ಪುನರ್ಜನ್ಮದ ವಿಶೇಷಾಂಕದಲ್ಲಿ ಯಮದೂತರು ತಪ್ಪಾಗಿ ಜೀವಾತ್ಮರನ್ನು ಕೊಂಡುಹೋದ ಏಳುಕತೆಗಳ ಸಂಗ್ರಹ ಮಾಡಿಕೊಟ್ಟಿದ್ದಾರೆ : ಆರು ಹಿಂದೂ ಗಳದ್ದು, ಒಂದು ಮುಸಲ್ಮಾನಳದ್ದು ಸ್ವಲ್ಪವಿಶೇಷತೆ ಇರುವ ಮುಸಲ್ಮಾನಕತೆ ಮಾತ್ರ ಉದಹರಿಸುತ್ತೇನೆ. ನವಂಬರ್ ೧೯೫೭ರಲ್ಲಿ ಕಾನಪುರದ ಸರ್ವವೈದಿಕ ಶಾಖೆಗಳ ಸಮ್ಮೇಳನದಲ್ಲಿ ಕಾಶಿಯ ವಿದ್ವಾಂಸರೂ, ಗೋಯನಕಾದ ಸಂಸ್ಕೃತ ಮಹಾವಿದ್ಯಾಲಯದ ಅಧ್ಯಾಪಕರೂ ಆದ ಪಂಡಿತ ಶ್ರೀಲಾಲಬಿಹಾರೀಮಿಶ್ರರು ಪರಲೋಕದವಿಚಾರ ಮಾತಾಡುತ್ತ ತಮಗೆ ಖಾತ್ರಿತಿಳಿದಿದ್ದ ಈ ಕತೆಯನ್ನು ಸಭೆಗೆ ತಿಳಿಸಿದರಂತೆ.

ಕಾಶಿಯ ಸಕಲಡೀಯ ಸ್ಟೇಷನ್ನಿನ ಮೂರುಹರದಾರಿ ಉತ್ತರಕ್ಕೆ ಪ್ರಭುಪುರ ಎಂಬಲ್ಲಿ ಬಳೆಮಾರುವ ಮುಸಲ್ಮಾನನೊಬ್ಬನಪತ್ನಿ ನೆರಮನೆಯಲ್ಲಿ ರೋಗದಿಂದ ಮಲಗಿದ್ದ ತನ್ನ ಪರಿಚಿತಳೊಬ್ಬಳು ಹಿಂದೂವನ್ನು ನೋಡಲು ಹೋದವಳು ಹಿಂದೆಬಂದೊಡನೆ ಥಕ್ಕನೆಮೃತಳಾದಳು. ಮುಸಲ್ಮಾನರ ಕ್ರಮ ದಂತೆ ಹೆಣಹೂಳಲು ದೂರ ಒಂದೆಡೆಯಲ್ಲಿ ಹೊಂಡಮಾಡಲಾಯಿತು. ಹೆಣ ವನ್ನು ಅದಕ್ಕೆಇಳಿಸುವಾಗ ಅವಳಿಗೆ ಜೀವಬಂತು. ಕೈಅಲ್ಲಾಡಿಸಿ ಮುಖದ ಬಟ್ಟೆಸವರಿದಳು. ಅವಳ ತಲೆಯಮೇಲೆ ಆಗತಾನೇ ಬರೆಹಾಕಿದ ತ್ರಿಶೂಲದ ಚಿಹ್ನೆಇತ್ತು. ಅವಳು ತನ್ನ ವಿಚಾರಹೇಳುತ್ತ, "ನಾನು ಸರೀ ಇದ್ದೆ : ಆದರೆ ಇಬ್ಬರು ಕಪ್ಪಾದಘೋರರೂಪದವರು ನನ್ನನ್ನು ದೂರಕೊಂಡೊಯ್ದರು. ಅಲ್ಲಿ ಒಂದು ದೊಡ್ಡಸಭೆಯಲ್ಲಿ ಬಹಳ ತೇಜಸ್ವಿಯಾದವರೊಬ್ಬರು ಕುಳಿತಿದ್ದರು. ಅವರೆದುರಲ್ಲಿ ನನ್ನನ್ನು ನಿಲ್ಲಿಸಿದಾಗ ಅವರು ಸಿಟ್ಟಿಂದ ಇವಳನ್ನೇಕೆ ತಂದದ್ದು ? ಇವಳು ಇನ್ನೂ ೧೪ವರ್ಷಬಾಳಲಿಕ್ಕಿದೆ. ಇವಳ ಪಾಪಬಹಳವುಂಟು. ಎರಡು

ಹೆಣ್ಣುಮಕ್ಕಳ ಮರಣಕಂಡು ಅನಂತರ ಸಾಯುವಳು. ಇವಳಿಗೆ ರಿಯಾಯತಿ ಯಾಗಿ ತ್ರಿಶೂಲದ ಗುರುತುಹಾಕಿರಿ, ಕೂಡಲೆ ಹಿಂದೆಕೊಂಡು ಹೋಗಿರಿ" ಎಂದರು. ಅವಳಿಗೆ ಪ್ರಜ್ಞೆಬಂದ ಕಾಲದಲ್ಲಿಯೇ ನೆರೆಮನೆಯ ರೋಗಿ ಮರಣಹೊಂದಿದಳು. ಮುಸಲ್ಮಾನಹೆಂಗಸಿನ ಪ್ರಾರಬ್ಧಕರ್ಮದಂತೆ ಎರಡು ಮಗಳಂದಿರು ಮೃತರಾದಮೇಲೆ, ೧೪ವರ್ಷಗಳು ಕಳೆದಮೇಲೆ, ಅವಳು ಮೃತ ಳಾದಳು. ಅಷ್ಟರವರೆಗೂ ತ್ರಿಶೂಲದ ಚಿಹ್ನೆಇತ್ತು. ಚಿಹ್ನೆಯ ಅರ್ಥ ಕ ಯಲ್ಲಿಲ್ಲ. ಹಿಂದೂ ಹೆಂಗಸಿನ ಬಗ್ಗೆ ತಪ್ಪಾಗಿ ಅವಳನ್ನು ತಂದುದಕ್ಕೆ ರಿಯಾಯತಿಯಾಗಿ ಅದಾಗಿದ್ದಿರಬೇಕು).

೫. ಜೀವಾತ್ಮ ಯಮಲೋಕದಿಂದ ಹಿಂದೆ ಬಂದಾಗ ದೇಹಸುಟ್ಟಾಗಿತ್ತು

ಸ್ಕಾಂದಪುರಾಣದ ನಾಗರಖಂಡದಲ್ಲಿ ೨೬ನೇ ಅಧ್ಯಾಯದಲ್ಲಿರುವ ಒಂದು ಕತೆಯಂತೆ ಯಮದೂತರು ಮಥುರಾ ಪಟ್ಟಣದ ಗೋಕರ್ಣನೆಂಬ ಬ್ರಾಹ್ಮ ನನ್ನು ಆಯಸ್ಸುಮುಗಿಯುವ ಮುಂಚೆ ತಪ್ಪಾಗಿ ಯಮಲೋಕಕ್ಕೆ ಕೊಂಡ ಹೋದರು. ಅಲ್ಲಿ ಯಮನು ತಪ್ಪಾದುದುತಿಳಿದು ಅವನೊಡನೆ ಬೇಗಹಿಂ ಹೋಗಲು ಹೇಳುತ್ತಾನೆ. ಆದರೆ ಬ್ರಾಹ್ಮಣ ಬಹಳ ನಿಷ್ಠಾವಂತನಾಗಿದ್ದ ಈ ಸಂದರ್ಭಬಿಡಬಾರದೆಂದು ಯಮನೊಡನೆ ನರಕಗಳ ವರ್ಣನೆ, ಯಾರು ನರಕಕ್ಕೆ ಬೀಳಬೇಕಾಗಿಲ್ಲ ಎಂಬವಿಚಾರ ಕೇಳಿತಿಳಕೊಳ್ಳುತ್ತಾನೆ. ಯಮ ಆ ಎರಡೆರಡು ಸಾರಿ "ಇವನ ಬಂಧುಗಳು ಇವನ ಶರೀರವನ್ನು ಸುಡುವಮುಂ ಹಿಂದಕ್ಕೆಕೊಂಡುಹೋಗಿಬಿಡಿರಿ" ಎಂದುಎಚ್ಚರಿಸುತ್ತಾನೆ (ಶ್ಲೋಕ ೧೦, ೬೨) ಎಂದರೆ ಹೀಗೆ ಯಮದೂತರಿಂದ ತಪ್ಪಾಗುವುದು ಮುಂಚಿಂದ ನಡೆದದ್ದುಂಟು ಎಂದು ಶಂಕಿಸಲಿಕ್ಕೆ ಆಸ್ಪದ ಬರುತ್ತದೆ. ಹಾಗೆ ನಿಜಕ್ಕೂ ಹೆಣಸುಟ್ಟಾಗಿದ್ದ ಕತೆಯೂ ಪತ್ರಿಕೆಯಲ್ಲಿ (ವಿಕಟವಿನೋದಿನಿ ಜುಲೈ ೧೯೫೭ರಲ್ಲಿ) ಬಂದಿತ್ತು ಬರೆದವರು ಎನ್.ಕೆ. ಸಂಗನಾಮಠ ಧಾರವಾಡ.

ಶ್ರೀ "ಬ" ಎಂಬವರ ತಾಯಿ ಸುಮಾರು ೫೫ ವರ್ಷದವಳು ೧೯೪೪ರಲ್ಲಿ ಕಾಲವಾದಳು. ದೇಹವನ್ನು ಕ್ರಮದಂತೆ ದಹಿಸಿದರು. ಅಂದುರಾತ್ರಿ ತಾಯಿ ಕನಸ್ಸಲ್ಲಿ ಮಗನೊಡನೆ ನಾನಂಬೆಳಿಗ್ಗೆ ಈ ಲೋಕಬಿಟ್ಟು ಮೇಲೆಹೋದೆ. ಅಲ್ಲಿ ನೀನು ಕೂಡಲೇಹಿಂದೆಹೋಗು; ನಿನಗೆ ೧೨ವರ್ಷ ಮರ್ತ್ಯಲೋಕದಲ್ಲಿಆಯುಷ್ಯ ವಿದೆ" ಎಂದು ಹಿಂದೆಕಳುಹಿಸಿದರು. ಇಲ್ಲಿ ಬಂದು ನೋಡುವಾಗ ದೇಹವಿ

ಲಿಲ್ಲ ; ಅದರ ಸಂಸ್ಕಾರವಾಗಿದೆ ಎಂದು ತಿಳಿದುಘಾಬರಿಯಾಗಿರುವೆ. ನಾನಿನ್ನು ಅದೃಶ್ಯಳಾಗಿ ೧೨ವರ್ಷ ಈ ಮನೆಯಲ್ಲಿರುವೆ ; ಹೆದರಬೇಕಿಲ್ಲ. ನಿಮ್ಮೆಲ್ಲರ ಕಲ್ಯಾಣವನ್ನ ಸಾಧಿಸುತ್ತೇನೆ" ಎಂದು ತಿಳಿಸಿದಳು.

ಆಮೇಲೆ 'ಬ'ರವರಿಗೆ ಅವಳ ಮಾತುಕೇಳಿಸುತ್ತಿತ್ತು. ಕನಸಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಳು. ಅವರ ಪತ್ನಿಯ ದೇಹ ಸೇರಿ ಕೆಲವುಸಾರಿ ಮಗನ ಮೇಲಿನ ವಾತ್ಸಲ್ಯದಿಂದ ಮಾತಾಡುತ್ತಿದ್ದಳು. ಮನೆಗೆಬಂದ ಬೇಕಾದವರಿಗೆ ಪ್ರೀತಿಯ ಮಾತಿಂದ ಉಣ್ಣಲು ಒತ್ತಾಯಿಸುತ್ತಿದ್ದಳು. ಊರಿನ ಅಪ್ತರ ಸುದ್ದಿ ಕನಸಲ್ಲಿ ಹೇಳುತ್ತಿದ್ದಳು. ಅವು ನಿಜವೆಂದು ಮತ್ತೆ ಅನುಭವವಾಗುತ್ತಿತ್ತು.

ಒಮ್ಮೆ 'ಬ'ರವರು ೫-೬ ಮೈಲು ದೂರದ ಕಚೇರಿಗೆ ವೇಳೆಗೆಸರಿಯಾಗಿ ಹೋಗಬೇಕಿದ್ದಾಗ ಬಸ್ಸು ಸ್ವಲ್ಪ ಮಾತ್ರವಾಗಿ ತಪ್ಪಿಹೋಯಿತು. 'ಬ' ರವರು ತಾಯಿಯ ಸಹಾಯಕೇಳುತ್ತ ನಡೆಯಲಾರಂಭಿಸಿದರು. ಬಸ್ಸು ಒಂದು ಫರ್ಲಾಂಗು ಹೋಗುವುದರೊಳಗೆ ಒಂದು ಹೆಂಗಸಿನ ಧ್ವನಿಯು ಅಧಿಕಾರವಾಣಿಯಿಂದ ಬಸ್ಸನ್ನು 'ಬ'ರವರಿಗಾಗಿ ನಿಲ್ಲಿಸಬೇಕೆಂದು ಆಜ್ಞೆಕೊಟ್ಟದ್ದು ಕಂಡಕ್ಟರನಿಗೆ ಕೇಳಿತು. ಬಸ್ಸೂ ನಿಂತು, ಮುಂದೆ ಹೋಗುವ ಸ್ಥಿತಿಯಲ್ಲಿರಲಿಲ್ಲ. 'ಬ'ರವರು ಅದನ್ನು ಹತ್ತಿದ ಮೇಲೆ ಮಾತ್ರ ಹೊರಡುವುದು ಸಾಧ್ಯವಾಯಿತು. ೧೨ವರ್ಷ ಕಳೆದ ಅನಂತರ ಪ್ರಿಯ ತಾಯಿಯಧ್ವನಿ, ಸಹಾಯ, ನಿಂತಿತಂತೆ.

ಮುಂದಿನ ಅಧ್ಯಾಯಗಳಲ್ಲಿ ಯಮನ ಲೋಕದದಾರಿ ಅವರವರ ಪಾಪದಂತೆ ಅತ್ಯಂತ ಭಯಂಕರ ಕಷ್ಟತರದ್ದಾಗುತ್ತದೆ, ಎಂಬುದು ತಿಳಿಯುವುದು. ಇಲ್ಲಿ ಹೆನ್ಸ್‌ರಾಜರಿಗೆ ದಾರಿಯಲ್ಲಿ ಮುಳ್ಳುಕಲ್ಲು ಇದ್ದದ್ದು ತಿಳಿಯಿತು. ಅವರು ದ್ವಿಜರಾಗಿರಬೇಕು. ಎರಡನೆ ಕತೆಯಲ್ಲಿ ಯಾತ್ರೆ ಕೇವಲ ಸ್ವಪ್ನದಂತಾಗಿತ್ತು ಎಂದಿದೆ. ಕೆಳಜಾತಿಯವರಿಗೆ ದಾರಿ ಕಷ್ಟವಾಗಲಿಲ್ಲ. ಪ್ರೇತ ಸಂಪರ್ಕದಲ್ಲಿ ಬಂದು ಮಾತಾಡಿದಪ್ರೇತಗಳು ಕಷ್ಟದ ಅನುಭವ ಹೇಳುವುದೇಇಲ್ಲ. ಅಥವಾ ದೇವತೆಗಳು (angels) ಕರೆಯಲಿಕ್ಕೆ ಬಂದರು ಎನ್ನುತ್ತವೆ. ಎಂದರೆಧಾರ್ಮಿಕ ಮಟ್ಟದಲ್ಲಿ ಮಕ್ಕಳಂತಿರುವ ಕೆಳಜಾತಿಯವರಿಗೆ, ಮೃತನಾಗಬೇಕಾದವನನ್ನೆ ತಂದಿದ್ದಾರೆ, ತಪ್ಪಾಗಿ ಅಲ್ಲ ಎಂಬ ಪರೀಕ್ಷೆಗಾಗಿ ನಡೆಯುವ ಈ ಯಾತ್ರೆ ಏನೋ ಸುಲಭವಾದ ಸ್ವಪ್ನ ಪ್ರಪಂಚದತರದ ಅನುಭವದಂತೆ ಮುಗಿಯುತ್ತದೆಂದು ತೋರುತ್ತದೆ.

೩೮. ಯಮಲೋಕಕ್ಕೆ ಪ್ರಯಾಣ

ಪ್ರಯಾಣಕ್ಕಾಗಿ ದೇಹ

ನಮ್ಮ ದೇಹಕ್ಕೆ ಪಾರ್ಥಿವ ದೇಹವೆಂದು ಹೆಸರು. ಏಕೆಂದರೆ ಅದರಲ್ಲಿ ಮುಖ್ಯ ಭಾಗವಾಗಿ ಪೃಥ್ವೀತತ್ವ ಅದಲ್ಲದೆ ಜಲತತ್ವ, ವಾಯು, ಅಗ್ನಿ, ಆಕಾಶ ತತ್ವಗಳು (ಪಂಚಭೂತಗಳು) ಇವೆ. ಮರಣದಲ್ಲಿ ಈ ಸ್ಥೂಲ ದೇಹವನ್ನು ಜೀವಾತ್ಮ ತ್ಯಜಿಸುತ್ತಾನೆ. ಪೃಥ್ವೀ ಮತ್ತು ಜಲಗಳ ಭಾಗ ಕಳಕೊಂಡ ಜೀವಾತ್ಮ ಹಗುರವಾಗುತ್ತಾನೆ. ಆತ್ಮನು ಜೀವಾತ್ಮನಾದಂದಿನಿಂದ, ಮೋಕ್ಷ ಹೊಂದಿ ಕೇವಲ ತಾನೆ ತಾನಾಗುವವರೆಗಿನ ಕಾಲದವರೆಗೆಲ್ಲ ಲಿಂಗಶರೀರವೆಂಬ ಪ್ರಥಮ ಮತ್ತು ಶಾಶ್ವತ ಹೊದಿಕೆ ಇರುವವ. ಲಿಂಗಶರೀರಕ್ಕೆ ಭೋಗದ ಸಂಸ್ಕಾರವಿದೆ. ಆದರೆ ಭೋಗಿಸಲಿಕ್ಕೆ ಉಪಕರಣವಿಲ್ಲ. ಅದಕ್ಕಾಗಿ ಚಲನ ಮಾಡುವ ಶಕ್ತಿಯಿಲ್ಲ.

ಪಾರ್ಥಿವದೇಹ ಬಿದ್ದುಹೋದೊಡನೆ ತಾತ್ಕಾಲಿಕ ಉಪಯೋಗಕ್ಕಾಗಿ ಲಿಂಗಶರೀರಕ್ಕೆ ಹೊದಿಕೆಯಾಗಿ ಅತಿವಾಹಿಕ ಶರೀರ ಲಭಿಸುತ್ತದೆ. ಆಗ ಅದು ಪ್ರೇತ. ಜೀವಾತ್ಮನ ಪ್ರಥಮ ಯಮಲೋಕದ ಪ್ರಯಾಣ ಇದರಲ್ಲಿನಡೆಯು ತ್ತದೆ. ಹಿಂದೆ ಬಂದ ಮೇಲೆ ಮರಣದ ಹತ್ತು ದಿನಗಳಲ್ಲಿ ನಿತ್ಯ ಕೊಡುವ ಆಹಾರ ಮತ್ತು ತರ್ಪಣಗಳ ಅತಿಸೂಕ್ಷ್ಮ ಭಾಗಗಳಿಂದ ಯಮಲೋಕಕ್ಕೆ ಹೋಗುವಶಕ್ತಿ ಮತ್ತು ದಾರಿಯ ಕಷ್ಟಸುಖ ಅನುಭವಿಸುವ ಶಕ್ತಿಗಳಿರುವ ಹೊಸ ಸೂಕ್ಷ್ಮ ಶರೀರ ಒಂದು ಉಂಟಾಗುತ್ತದೆ. ಆಗ ಹೇಳುವಮಂತ್ರ—

> ಆಕಾಶಸ್ಥೋ ನಿರಾಲಂಬೋ ವಾಯು ಭೂತೋ ನಿರಾಶ್ರಯಃ ।
> ಇದಂ ಜಲಮಿದಂ ಕ್ಷೀರಂ ಸ್ನಾತ್ವಾ ಪೀತ್ವಾ ಸುಖೀಭವ ॥

ಈ ಹತ್ತುದಿನ ಪ್ರಾಣಬಿಟ್ಟ ಸ್ಥಾನದಲ್ಲಿ ನೀರನ್ನೂ ಹಾಲನ್ನೂ ಇಡ ವುದೂ ದೀಪ ಉರಿಸುವುದೂ ಕ್ರಮ. ಪ್ರಥಮ ದಿನದ ತಿಲಾಂಜಲಿಯಿಂದ ತಲೆಯೂ, ಎರಡನೆ ದಿನದ್ದರಿಂದ ಕಿವಿ ಕಣ್ಣು ಮೂಗು, ಮೂರನೆ ದಿನದ್ದ ರಿಂದ ಕಂಠಭುಜ ಎದೆಯೂ ಮುಂತಾಗಿ ಗರ್ಭದಲ್ಲಿ ಶಿಶುವಿನ ದೇಹ ಉಂಟಾ ದಂತೆ ಪೂರ್ಣ ಹೊಸದೇಹ ಉಂಟಾಗುತ್ತದೆ. ಇದಕ್ಕೆ ಆಮೇಲೆ ಸಪಿಂಡೀ ಕರಣದ ಮುಂಚೆ ಒಮ್ಮೆಗೇ ಹಾಕುವ ೧೬ ಮಾಸಿಕ ಪಿಂಡಗಳ ಸತ್ವ ಅನುತ್ತ ಯಮಲೋಕದ ದಾರಿಯಲ್ಲಿ ಅಲ್ಲಲ್ಲಿ ಲಭಿಸುವ ೧೬ ಮಾಸಿಕಪಿಂಡಗಳ ಸತ್ವ ಸೇರಬೇಕಾಗಿವೆ. ಇವನ್ನು ಮಾಡದಿದ್ದರೆ ಅಥವಾ ಕ್ರಮವಾಗಿ ಮಾಡದಿದ್ದ

ಭೋಗದೇಹ ಎಂಬುದು ಸರಿಯಾಗಿಉಂಟಾಗದಿದ್ದು, ಮೃತನ ಪ್ರೇತದೇಹವೇ ಉಳಿದು ಅವ ಪ್ರೇತವಾಗಿಯೇ ಬಾಳುತ್ತಾನೆ. ಬಹಳ ಅತೃಪ್ತನಾಗುತ್ತಾನೆ.

ಈ ಭೋಗ ದೇಹದಿಂದ ೩೬೦ ದಿನಗಳಲ್ಲಿ ಯಮಲೋಕ ತಲಪಿ, ಅಲ್ಲಿ ಅವ ಮಾಡಿದ ಪಾಪ ಅಧಿಕವಾಗಿದ್ದು ನರಕಯಾತನೆ ಅನುಭವಿಸಬೇಕಾದರೆ ಇದಕ್ಕಾಗಿ ಅದನ್ನು ಕಡಿದರೆ, ಬಡಿದರೆ, ಬೇಯಿಸಿದರೆ, ಚುಚ್ಚಿದರೆ ನಾಶ ವಾಗದ ಆದರೆ ನೋವು ಮಾತ್ರ ಗೊತ್ತಾಗುವ ಯಾತನಾಶರೀರವಾಗಿ ಅದು ಮಾರ್ಪಡುತ್ತದೆ. ಆದರೆ ತುಂಬ ಪುಣ್ಯಮಾಡಿದ್ದು ಪಿತೃಲೋಕಕ್ಕೋ, ದೇವಲೋಕಕ್ಕೋ ಹೋಗಬೇಕೆಂದಾದರೆ ಜೀವಾತ್ಮನ ಈ ಭೋಗ ದೇಹವು ಆಯಾಯ ಲೋಕದ ವಾಸಕ್ಕೆ ತಕ್ಕುದಾದ ದಿವ್ಯದೇಹವಾಗಿ ಬದಲಾಗುತ್ತದೆ ; ಅಲ್ಲಿ ಹೋಗಿ ಇರುತ್ತಾನೆ.

ಏಳುಬಾರಿ ಭೂಮಿಯನ್ನು ಪ್ರದಕ್ಷಿಣೆ ಮಾಡಿದರೆ ಎಷ್ಟು ಫಲವು ದೊರಕುತ್ತದೋ ಅಷ್ಟು ಫಲವನ್ನು ತಂದೆತಾಯಿಗಳ ಅಂತ್ಯಕರ್ಮಗಳನ್ನು ಚೆನ್ನಾಗಿ ಮಾಡಿದ ಪುತ್ರನು ಪಡೆಯುತ್ತಾನೆ (ಗರುಡಪುರಾಣ ಸಾರೋ. ೧೧, ೨೩).

ಪುಣ್ಯವಂತರಿಗೆ ಸುಖದ ಮರಣ; ಪಾಪಿಷ್ಠರಿಗೆ ಕಷ್ಟದ್ದು

ಸತ್ಯವಂತರು, ದೇವ ಬ್ರಾಹ್ಮಣ ಪೂಜಾನಿರತರು, ಅನುಸೂಯಾ ಪರರು, ಶುದ್ಧರು, ದಾನಿಗಳು, ನಾಚಿಕೆಯುಳ್ಳವರು, ಧರ್ಮ ಬಿಡದವರು, ಆಡಿದಮಾತನ್ನು ನಡೆಸುವವರು, ಅನಾಯಾಸವಾಗಿಸಾಯುವರು, ಬಾಯಾರಿ ದವರಿಗೆ ನೀರನ್ನು, ಹಸಿದವರಿಗೆ ಅನ್ನವನ್ನು ಕೊಟ್ಟವರು, ಸಕಾಲದಲ್ಲಿ ಸುಖ ದಿಂದ ಸಾಯುವರು ; ಧನವನ್ನಿತ್ತವರು, ಶೀತದ ಬಾಧೆ ಜಯಿಸುವರು. ಗಂಧವನ್ನಿತ್ತವರು ತಾಪವನ್ನು ಜಯಿಸುವರು. ಮತ್ತೊಬ್ಬರ ವೇದನೆಯನ್ನು ತಮ್ಮದೆಂದು ಭಾವಿಸಿ ಪರಿತಪಿಸುವವರು, ಪ್ರಾಣಹೋಗುವ ಕಾಲದಲ್ಲಿ ವ್ಯಥೆಯನ್ನುಜಯಿಸುವರು. ಜ್ಞಾನದಾನ ಮಾಡಿದವರು ಮೋಹವನ್ನು ಗೆದ್ದ ವರು, ದೀಪದಾನಮಾಡಿದವರು ಕತ್ತಲೆಯನ್ನು ಜಯಿಸುವರು.

ಸುಳ್ಳು ಸಾಕ್ಷಿಹೇಳಿದವರು, ಸುಳ್ಳನ್ನೇ ಹೇಳುವ ಸ್ವಭಾವದವರು, ಗುರು ವಾಗಿದ್ದೂ ಸರಿಯಾಗಿ ಶಿಕ್ಷಣ ಕೊಡದಿರುವವರು, ವೇದನಿಂದಕರು, ಎಲ್ಲರೂ ಅಜ್ಞಾನದಿಂದ ಸಾಯುವರು. ಅವರನ್ನುಕರೆದೊಯ್ಯಲು ಭಯಂಕರ ಆಕಾರ ವುಳ್ಳವರೂ ದುರ್ವಾಸನೆಯುಳ್ಳವರೂ ಕೂಟ ಮುದ್ಗರವೆಂಬ ಆಯುಧವನ್ನು

ಧರಿಸಿದವರೂ ಆದ ಅತಿಕಠಿಣ ಹೃದಯದ ಯಮಭಟರು ಬರುವರು. ಅವರನ್ನು ಕಂಡೇ ನಡುಕುಂಟಾಗುವುದು (ಬ್ರಹ್ಮಪುರಾಣ ಅ. ೨೧೪).

ಯಮಲೋಕಕ್ಕೆ ಕಷ್ಟದ ದಾರಿ

ಮರಣದ ೧೨ನೇ ದಿನದ ಸಪಿಂಡೀಕರಣಕ್ರಿಯೆಯಾದ ಅನಂತರ ಯಮ ದೂತರು ಜೀವಾತ್ಮನನ್ನು ದಿನಕ್ಕೆ ೨೪೭ಯೋಜನಗಳಂತೆ (ಯೋಜನ=೮ಯಾ ೯ಮೈಲು) ಸೆಳೆದುಕೊಂಡು ಹೋಗುವರು ೩೬೦ದಿನಗಳಲ್ಲಿ ಇಲ್ಲಿಂದ ೮೬,೦೦೦ ಯೋಜನ ದೂರವಿರುವ ಯಮಪುರಿ ತಲಪುವರು ಚಂದ್ರನು ನಮ್ಮ ಭೂಮಿ ಯಿಂದ ೨೪,೦೦೦ ಮೈಲು ದೂರವಿದ್ದಾನೆ. ಯಮಪುರಿ ಅದರ ಸುಮಾರು ಮೂರುಪಾಲು ದೂರವಿದೆ ಮತ್ತು ಚಂದ್ರನ ದಿಕ್ಕಲ್ಲಲ್ಲ, ದಕ್ಷಿಣದಲ್ಲಿದೆ. ಯಮ ಲೋಕದದಾರಿ ಪುಣ್ಯಾತ್ಮರಿಗೆ ಕಠಿಣವಾಗುವುದಿಲ್ಲ, ಪಾಪಿಷ್ಠರಿಗೆ ಬಹಳ ಕಠಿಣ ವಾಗುತ್ತದೆ. ಪಾಪಿಷ್ಠರ ವಿಚಾರ ಮುಂದೆ ನೋಡುವ.

ಯಮಲೋಕದಮಾರ್ಗದಲ್ಲಿ ಬಹಳಕಡೆ ಹನ್ನೆರಡು ಸೂರ್ಯರಬಿಸಿಲಿನ ತಾಪವಿದೆ. ಕೆಲವೆಡೆ ಬೆಂಕಿಸುಡುತ್ತದೆ. ನೆಲಕಾದಮರಳು ಅಥವಾ ಕಾದ ತಾಮ್ರದಂತಿದೆ ; ಅಥವಾ ಕೆಂಡವೇಆಗಿದೆ. ಆದರೆ ಎಲ್ಲಿಯೂ ವಿಶ್ರಾಂತಿಗೆ ಮರದನೆರಳು, ಕೆರೆಬಾವಿ ಕೊಳಗಳಿಲ್ಲ. ಮಂಟಪ ಅರವಟ್ಟಿಗೆಗಳಿಲ್ಲ. ಕೆಲವೆಡೆ ಗಳಲ್ಲಿ ಅತ್ಯಂತ ಶೀತಲವಾಯುವೂ ಇದೆ. ಕೆಲವೆಡೆ ಅತಿ ಕೆಟ್ಟವಾಸನೆ ಇದೆ. ನೆಲದಲ್ಲಿ ಮುಳ್ಳು ತುಂಬಿರುತ್ತದೆ. ಒಂದುಕಡೆ ೨,೦೦೦ ಯೋಜನ ದೂರದ ವರೆಗೂ ಕತ್ತಿಯಂತೆ ಹರಿತವಾದ ಕತ್ತಿಯ ಅಲಗುಗಳು ನೆಡಲ್ಪಟ್ಟಿವೆ. ಕಲ್ಲು ಗಳ, ಕೆಂಡಗಳ, ಮಳೆ ಸುರಿಯುವುದುಂಟು. ರಕ್ತದ ಮಳೆ ; ಶಸ್ತ್ರಗಳ ಮಳೆ ಕಾದನೀರಿನ ಮಳೆ, ಗಾಯಕ್ಕೆ ಉರಿ ಉಂಟುಮಾಡುವ ಕ್ಷಾರದ ನೀರಿನಮಳೆ ಉಂಟು, ಕೆಲವೆಡೆ ದಾರಿಯಲ್ಲಿ ಕೀವು ರಕ್ತ ಮಲಗಳ ಕುಂಡಗಳಿವೆ.

ಯಮಲೋಕದ ದಾರಿಯು ಕಷ್ಟವಲ್ಲದೆ ಯಮದೂತರ ಪೀಡೆಯು ಅದನ್ನು ಮತ್ತಷ್ಟು ಭಯಂಕರ ಮಾಡುತ್ತದೆ. ಅವರು ಜೀವಾತ್ಮನನ್ನು ಪಾಶದಿಂದ ಬಂಧಿಸಿ, ಅಂಕುಶದಿಂದ ಎಳೆಯುತ್ತ ಬೆನ್ನನ್ನು ಶಸ್ತ್ರದಿಂದ ಚುಚ್ಚುತ್ತ ಎಳೆದೊಯ್ಯುತ್ತಾರೆ. ಬೇಗ ಹೋಗು ಎಂದು ಸುತ್ತಿಗೆಯಿಂದ, ಮುದ್ಗರದಿಂದ ಬಡಿಯುತ್ತಾರೆ. ಹಾಳು ದಾರಿಯಲ್ಲಿ ಪಾಪಿಗಳು ಮುಗ್ಗರಿಸಿ ಬಿದ್ದಾಗ ಯಮದೂತರು ಮುಳ್ಳು, ಅಲಗು, ಕೆಂಡಗಳ ಮೇಲೆಯೇ ಅವ ರನ್ನು ಎಳೆದುಕೊಂಡು ಹೋಗುತ್ತಾರೆ. ಪ್ರಾಣಿಹತ್ಯೆ ಮಾಡುವವರಿಗೆ

ಯಮದೂತರ ಮೊನಚಾದ ಆಯುಧಗಳಿಂದ ಚರ್ಮ ಮಾಂಸ ತುಂಡಾಗುವುದಲ್ಲದೆ ದಾರಿಯಲ್ಲಿ ಪಾಪಿಗಳನ್ನು ನಾಯಿ, ತೋಳ, ಹದ್ದು ಮುಂತಾದವು ಮಾಂಸ ಹರಿಯುತ್ತವೆ. ಸರ್ಪಗಳು ಕಚ್ಚುತ್ತವೆ, ಕ್ರೂರ ಕೀಟಗಳಿವೆ. ಪಾಪಿಗಳು ಬಾಯಾರಿಕೆಯಿಂದ ಕಂಗಾಲಾಗುತ್ತಾರೆ. ಕೆಲವು ಕಡೆ ಉತ್ತಮತಿಂಡಿ, ಪಾಯಸ, ನೀರು, ತೋರಿದಾಗ ಜೀವಾತ್ಮನು ಕೈಜೋಡಿಸಿ ಗದ್ಗದಸ್ವರದಿಂದ ಬೇಡಿದರೂ ಅವು ಪಾಪಿಷ್ಠರಾದ ನಿಮಗಲ್ಲ ಎಂದು ಯಮದೂತರು ಗದರಿಸುತ್ತಾರೆ. ಯಮನ ಪಟ್ಟಣಕ್ಕೂ ಸ್ವಲ್ಪ ಈಚೆ ವೈತರಣೀನದಿ ಬರುತ್ತದೆ. ಅದನ್ನು ಕಂಡೊಡನೆ ಪಾಪಿಗಳು ಚೈತನ್ಯ ಶೂನ್ಯರಾಗುತ್ತಾರೆ. ಅದರ ದಡಗಳು ಮೂಳೆಗಳ ರಾಶಿ, ನದಿನೀರು ಮಾಂಸ, ರಕ್ತಕೀವು, ಚೇಳು, ಸರ್ಪ, ಕಡಲಹಂದಿಗಳು, ಮೊಸಳೆ, ಜಿಗಣೆ, ಮೀನುಗಳಿಂದ ತುಂಬಿದೆ ; ಬಹಳ ಆಳವಿದೆ. ಸೂಜಿಯಂತೆ ಮುಖವುಳ್ಳ ದೊಡ್ಡ ಹುಳುಗಳಿಂದ, ವಜ್ರದಂತೆ ಕಠಿಣವಾದ ಕೊಕ್ಕುಳ್ಳ ಹದ್ದುಗಳಿಂದ, ಕಾಗೆಗಳಿಂದ ಪರಿವೃತವಾಗಿದೆ. ಈ ನದಿಯನ್ನು ದಾಟಲು ಯತ್ನಿಸಿದವರು ಮುಳುಗಿ ಮುಳುಗಿ ಏಳುತ್ತ ನದಿಯ ಕೀವು ರಕ್ತ ಕುಡಿಯುತ್ತಿರುತ್ತಾರೆ ; ಮೊಸಳೆ ಹದ್ದುಗಳಿಂದ ಭಯಂಕರ ಬಾಧೆ ಹೊಂದುತ್ತಾರೆ. ಕಾಸಿದ ಕೊಪ್ಪರಿಗೆಯಲ್ಲಿ ನೀರು ಕುದಿದಂತೆ ಇರುವ ನೀರಿನ ಸೆಳೆತಕ್ಕೆ ಸಿಕ್ಕಿ ತಳಕ್ಕೆ ಹೋಗಿ ಏಳುತ್ತಾರೆ. ಈ ನದಿಯಲ್ಲಿ ಸಿಕ್ಕಿ ಬಿದ್ದು ರೋಧಿಸುವವರ ಸಹಾಯಕ್ಕೆ ಯಾರೂ ಬರುವವರಿಲ್ಲ. ಪಾಪಿಷ್ಠರು ಅದರಲ್ಲಿ ಕಂತಿ ಎದ್ದು ತುಂಬಾ ಪೇಚಾಡಿದ ಅನಂತರ ಯಮದೂತರು ಗಾಳ ಹಾಕಿ ಅವರನ್ನು ಎಳೆದು ಆಚೆ ತೆಗೆಯುತ್ತಾರೆ (ಬ್ರಹ್ಮ ; ಗರುಡ-ಸಾರ).

ಯಮದೂತರು ಪಾಪಿಗಳಿಗೆ ಅವರ ಕಷ್ಟಕ್ಕೆ ಕಾರಣ ಹೇಳುತ್ತಾರೆ. ಆಗ ಜೀವಾತ್ಮರು ತಮ್ಮ ಪಾಪಕಾರ್ಯಗಳನ್ನು ಸ್ಮರಿಸುತ್ತ ದುಗುಡ ಹೊಂದುತ್ತಾರೆ. ಬಹಳ ಅಪರೂಪಕ್ಕಾಗಿ ಲಭಿಸಿದ ಮಾನವಜನ್ಮ ಪಡೆದೂ ದಾನ ಮಾಡದ್ದಕ್ಕೆ, ಹೋಮಮಾಡದ್ದಕ್ಕೆ, ದೇವರ ಪೂಜೆ, ವಿಧಿಪೂರ್ವಕ ತೀರ್ಥಯಾತ್ರೆ ಮಾಡದ್ದಕ್ಕೆ, ಬಹಳ ವ್ಯಸನ ಪಡುತ್ತಾರೆ. "ವೇದಬಲ್ಲವರನ್ನು ಪೂಜಿಸಲಿಲ್ಲ. ಪರೋಪಕಾರ ಮಾಡಲಿಲ್ಲ. ಗೋವು ಬ್ರಾಹ್ಮಣರ ಹಿತಕ್ಕಾಗಿ ಏನೂ ಮಾಡಲಿಲ್ಲ, ವೇದಶಾಸ್ತ್ರ ನಂಬಲಿಲ್ಲ, ಪುರಾಣ ಕೇಳಲಿಲ್ಲ, ಪತಿಯ ಹಿತವಚನ ಆಲಿಸಲಿಲ್ಲ, ಪಾತಿವ್ರತ್ಯ ಕಾಪಾಡಿಕೊಳ್ಳಲಿಲ್ಲ, ದೀರ್ಘಕಾಲದ ವ್ರತನಿಯಮಗಳಲ್ಲಿ ದೇಹ ಸವೆಯಲಿಲ್ಲ. ನನ್ನ ಮಾನವಜನ್ಮ ವ್ಯರ್ಥಮಾಡಿಬಿಟ್ಟೆನಲ್ಲ!" ಎಂದು ಕೂಗುತ್ತ ದಾರಿ ಸಾಗಿಸುತ್ತಾರೆ (ಗರುಡ-ಸಾರ).

ದಾರಿಯಲ್ಲಿ ಪಟ್ಟಣ ಅಥವಾ ಊರುಗಳ ನಿಲ್ದಾಣಗಳು ಜೀವಾತ್ಮರ
ವಿಶ್ರಾಂತಿಗೆ, ಶ್ರಮನಿವಾರಣೆಗೆ, ಸಿಕ್ಕುತ್ತವೆ (ಸೌಮ್ಯ, ಸೌರಿಪುರ, ನಗೇಂದ್ರ
ಭವನ ಮುಂತಾದವು). ಜೀವಾತ್ಮರು ಈ ಸ್ಥಳಗಳನ್ನು ತಲುಪುವಕಾಲಗಳಿಗೂ
ಮೃತನಿಗಾಗಿ ಆ ವರ್ಷ ಕೊಡಲ್ಪಡುವ ೧೬ ಮಾಸಿಕಗಳ ಕಾಲಗಳಿಗೂ
ಹೊಂದಿಕೆಯಿದ್ದು, ಅವರಿಗೆ ಅಲ್ಲಿ ಅವು ದೊರಕುತ್ತವೆ. ವಾರ್ಷಿಕ ಶ್ರಾದ್ಧದ
ಕಡೇ ಪಿಂಡದ ನಿಲ್ದಾಣವಾದ ಶೀತಾಢ್ಯ ಎಂಬಲ್ಲಿ ಹಿಮಾಲಯದ ಚಳಿಗಿಂತ
ನೂರುಪಾಲು ಶೀತವಾಗಿರುವ ಚಳಿಯಿದೆ. ಆಮೇಲೆ ಯಮಲೋಕ ಬರು
ತ್ತದೆ (ಗರುಡ–ಸಾರ).

ಯಮಾಲಯಕ್ಕೆ ಸುಖದ ದಾರಿ

ಯಮಲೋಕದ ದಾರಿ ಪಾಪಿಷ್ಠರಿಗೆ ಅತ್ಯಂತ ಕಷ್ಟತರದ್ದು ಎಂದು
ಕಂಡೆವು. ಆದರೆ ಬ್ರಹ್ಮಪುರಾಣ ಹೇಳುವಂತೆ (ಅ ೧೪, ೧೬) ಈ ಮಾರ್ಗ
ದಲ್ಲಿ ಪ್ರತಿಯೊಬ್ಬರೂ (ಗಂಡಸು, ಹೆಂಗಸು, ಯುವಕ, ಯುವತಿ) ಹೋಗಲೇ
ಬೇಕು. ಪುಣ್ಯವಂತರು ಈ ಮಾರ್ಗದಲ್ಲಿ ಸುಖವನ್ನು ಅನುಭವಿಸುತ್ತಾರೆ
ಪಾಪಿಗಳು ದುಃಖವನ್ನು, ಎಂದಿರುವುದರಿಂದ ಈ ಕಷ್ಟತಪ್ಪಿಸಿಕೊಳ್ಳಲಿಕ್ಕಿರುವ
ಪುಣ್ಯದಕ್ರಮಗಳ ವಿಚಾರತಿಳಿದಿರುವುದು ವಿವೇಕವಾಗುತ್ತದೆ, ನಾರದಪುರಾಣ
(ಪೂರ್ವಭಾಗ ಅ ೩೧)ದಲ್ಲಿ ಇದಕ್ಕೆ ಕೆಲವುಕ್ರಮಗಳು ಹೇಳಲ್ಪಟ್ಟಿವೆ.

ಧರ್ಮಿಷ್ಠರೂ ದಾನಶೀಲರೂ ಅತ್ಯಂತಸುಖದಿಂದ ಈ ದಾರಿಯ
ಹೋಗುತ್ತಾರೆ. ಅನ್ನದಾನ ಮಾಡಿದವರು ರುಚಿಯಾದ ಅನ್ನವನ್ನು, ನೀರ
ಹಾಲುದಾನಮಾಡಿದವರು ಹಾಲನ್ನು ಮೊಸರುದಾನಮಾಡಿದವರು ಅದನ್ನು
ತುಪ್ಪ ಜೇನು ದಾನಮಾಡಿದವರು ಸುಧೆಯನ್ನು ಪಡೆಯುತ್ತಾರೆ. ದೀಪದಾ
ಮಾಡಿದವರ ಸುತ್ತಲೂ ಬೆಳಕುಪ್ರಕಾಶಿಸುತ್ತದೆ. ವಸ್ತ್ರದಾನ ಮಾಡಿದವರ
ಅಲಂಕೃತರಾಗಿ ಹೋಗುತ್ತಾರೆ. ಗೋವಿನ ದಾನದಿಂದ ದಾನಿಗೆ ಸರ್ವತ
ಭೋಗಲಭಿಸುತ್ತದೆ. ಕುದುರೆ, ಆನೆರಥ ದಾನಮಾಡಿದವರು ವಿಮಾನಗಳ
ಸುಖವಾಗಿ ಯಮನ ಮಂದಿರ ತಲ್ಪುತ್ತಾರೆ. ತಂದೆತಾಯಿಯವರ ಸೇ
ಮಾಡಿದ ಪೂಜ್ಯಪುರುಷರು ದೇವತೆಗಳಿಂದ ಪೂಜಿತರಾಗಿ ಪ್ರಸನ್ನ ಮನಸ್ಸಿಂ
ಮುಂವರಿಯುತ್ತಾರೆ. ಯತಿಗಳ, ವ್ರತಿಗಳ, ಶ್ರೇಷ್ಠಪುರುಷರ ಸೇವೆ ಮಾ
ದವರು ಬಹಳ ಸುಖದಿಂದ ದಾರಿಸಾಗುತ್ತಾರೆ. ಚರಾಚರ ಪ್ರಾಣಿಗಳ ಬ
ಎಲ್ಲ ಸಂಪೂರ್ಣ ದಯಾಪರರಾದವರು ದೇವತೆಗಳಿಂದ ಪೂಜಿತರಾಗಿ ಹೋಗ

ತ್ತಾರೆ. ಪುರಾಣವಾಚನಮಾಡುತ್ತಿದ್ದವರನ್ನು ದಾರಿಯಲ್ಲಿ ಮುನಿಗಳೇ ಹೊಗಳು ತ್ತಾರೆ. ಯಮನ ಪಟ್ಟಣವಮುಟ್ಟಿದಾಗ ಯಮ ಅವರಿಗೆ ಶಂಖಚಕ್ರಗದೆಖಡ್ಗ ಗಳಿರುವ ನಾಲ್ಕು ಕೈಗಳಿಂದ ತೋರಿಕೊಂಡು ಅವರ ಪೂಜೆಮಾಡುತ್ತಾನೆ.

ಬ್ರಹ್ಮಪುರಾಣದಲ್ಲಿ (ಅ ೨೧೬) ಇನ್ನೂ ಹೆಚ್ಚು ವಿವರಗಳಿವೆ. ಅಹಿಂಸಾ ವ್ರತದಲ್ಲಿರುವವರು, ಧರ್ಮಕಾರ್ಯಮಾಡುತ್ತಿರುವವರು, ಶುದ್ಧಹೃದಯರು, ವಾಪೀ ಕೂಪ, ತಟಾಕು, ಸರಸ್ಸು, ಪುಷ್ಕರಿಣಿ ಕಟ್ಟಿಸಿದವರು, ಅಲಂಕೃತವಾದ ದೇವಾಲಯ ಕಟ್ಟಿಸಿದವರು, ಜನರ ಪ್ರಯೋಜನಕ್ಕಾಗಿ ಫಲಪುಷ್ಪಭರಿತವಾದ ಮರಗಳನ್ನು ನೆಟ್ಟವರು, ರಮಣೀಯವಾದ ಉದ್ಯಾನಗಳನ್ನು ನಿರ್ಮಿಸಿದ ವರು, ಗೋವನ್ನು "ಪಾಪಹರಾ" ಎಂದು ನಮಸ್ಕರಿಸುತ್ತಿರುವವರು, ಯಾರು ತಮ್ಮ ಊಟಕ್ಕೆ ಮೊದಲು ಕುಳಿತುಕೊಳ್ಳದೆ ಎಲ್ಲರಿಗೂ ಊಟ ಆದ ಅನಂತರ ಕುಳಿತುಕೊಳ್ಳುತ್ತಾರೋ ಅವರು, ಸುಖದಿಂದ ಯಮಲೋಕಕ್ಕೆ ಹೋಗು ತ್ತಾರೆ. ಯಾರು ಆಡಂಬರವನ್ನು ತೊರೆದು ಒಂದೇಹೊತ್ತು ಅಥವಾ ಮಿತವೂ ಡಿಮೆ ಊಟಮಾಡುತ್ತಾರೆಯೋ, ನಾರಾಯಣನನ್ನೇ ಸ್ಮರಿಸುತ್ತ ಅಗ್ನಿ ಅಥವಾ ನೀರನ್ನು ಪ್ರವೇಶಿಸಿಪ್ರಾಣಬಿಡುತ್ತಾರೆಯೋ, ದೃಢವಾದ ನಿಷ್ಠೆ ಯಿಂದ ಮರಣವಾಗುವವರೆಗೆ (ಪಾಂಡವರು ಮಾಡಿದಂತೆ) ಮಹಾಪ್ರಸ್ಥಾನ ಹೊರಡುವರೋ, ಅವರು ಸುಖವಾಗಿ ಯಮಲೋಕ ಸೇರುವರು. (ಈ ರದ ಮರಣಗಳು ದುರ್ಮರಣವಲ್ಲ. ದೃಢತೆಯಿಂದ ದೇವರಲ್ಲೇ ಮನಸ್ಸಿಟ್ಟ ಸಂಗಳು). ಯಾರು ಸ್ತ್ರೀಯರ ಅಪಹರಣ, ಹಸುಗಳಅಪಹರಣದಲ್ಲಿ ಬಿಡಿ ಲುಹೋಗಿ ಪ್ರಾಣಕಳಕೊಳ್ಳುತ್ತಾರೆಯೋ ಅವರು ಸುಖ ಪ್ರಯಾಣಮಾಡು ರು (ಅಂತೆಯೇ ಶೂರರಾಗಿ ಯುದ್ಧದಲ್ಲಿ ಮರಣ ಹೊಂದಿದವರೂ). ಯಾರು ವಿಷ್ಣುವನ್ನಾಗಲಿ, ಬ್ರಹ್ಮನನ್ನಾಗಲಿ, ಶಿವನನ್ನಾಗಲಿ, ಸೂರ್ಯನ ನ್ನಾಗಲಿ ಏಕೈಕ ಭಾವನೆಯಿಂದ ಪೂಜಿಸುವರೋ ಅವರ ಮಾರ್ಗ ಸುಗಮ ವಾಗುತ್ತದೆ. ಯಾರು ಅನೇಕ ದಕ್ಷಿಣೆಗಳಿರುವ ಯಜ್ಞ ಮಾಡಿಸುತ್ತಾರೋ, ಬ್ರಾಹ್ಮಣಭೋಜನ ಮಾಡಿಸುತ್ತಾರೋ, ಭೂದಾನ, ಕನ್ಯಾದಾನ ಅತಿಥಿ ಸತ್ಕಾರ, ಮನೆಮಠಗಳ ದಾನ ಮುಂತಾದವನ್ನು ಮಾಡುತ್ತಾರೆಯೋ ಅವರು ಸುಖವಾಗಿ ಯಮಲೋಕ ತಲ್ಪುತ್ತಾರೆ. ಅನೇಕರು ವಿಮಾನದಲ್ಲೇ ಅಲ್ಲಿಗೆ ಹೋಗುತ್ತಾರೆ.

ಭಕ್ಷ್ಯಗಳಲ್ಲಿಯೂ ಭೋಜ್ಯಗಳಲ್ಲಿಯೂ ಮಾಂಸವೇ ಅತ್ಯಂತ ರುಚಿಕರ. ದರೆ ಹಿಂದೆ ಬ್ರಹ್ಮನೇ ಹೇಳಿದಂತೆ "ಸಕಲ ತೀರ್ಥಗಳ ಯಾತ್ರೆ ಮಾಡಿದರೆ

ಏನುಫಲವುಂಟೋ ಸಕಲತರದ ಯಾಗಗಳನ್ನುಮಾಡಿದರೆ ಏನುಫಲ ದೊರಕು ತ್ತದೋ ಅವೆಲ್ಲಸೇರಿ ಮಾಂಸವನ್ನು ತಿನ್ನದಿರುವುದರಿಂದ ಉಂಟಾಗುವ ಫಲಕ್ಕೆ ಸಮನಾಗದು". ಯಾರು ಮಾಂಸ ತಿನ್ನುವುದಿಲ್ಲವೋ ಅವರ ಯಮಲೋಕದ ಯಾತ್ರೆ ಸುಖವಾಗುತ್ತದೆ.

೨೯. ಯಮಪುರಿ ; ನರಕಗಳು

ಯಮಪುರಿಯ ವರ್ಣನೆ

ಯಮಪುರಿಯು ಲಕ್ಷಯೋಜನವಿಶಾಲವಾದದ್ದು. ಅದಕ್ಕೆ ೪ ಹೆಬ್ಬಾಗಿಲ ಗಳಿವೆ. ಮೂರು ಉತ್ತಮರ ಪ್ರವೇಶಕ್ಕೆ. ವಜ್ರವೈಢೂರ್ಯಗಳಿಂದ ಅಲಂಕೃ ವಾಗಿದ್ದು ಅಲ್ಲಿ ವಾದ್ಯ, ಶಂಖ, ಚಾಮರ, ಘಂಟೆಗಳಿವೆ. ಪೂರ್ವದ್ವಾರದ ದೇವತೆಗಳು, ಋಷಿಗಳು, ಗಂಧರ್ವರು, ಯಕ್ಷರು, ವಿದ್ಯಾಧರರು, ಪನ್ನಗರ ಮಾತ್ರ ಪ್ರವೇಶಿಸುವರು. ಉತ್ತರದ್ವಾರದ ಮೂಲಕ ಧರ್ಮಜ್ಞರೂ ಸತ್ಯವ್ರತರೂ, ಬಿಸಿಲುಗಾಲದಲ್ಲಿ ಶೀತಲನೀರನ್ನು, ಚಳಿಗಾಲದಲ್ಲಿ ಬೆಚ್ಚಗಿರ ವಂತೆ ಅನುಕೂಲತೆಗಳನ್ನು ದಾನಮಾಡಿದವರೂ, ದಣಿದ ಪ್ರಯಾಣಿಕರಿ ಉಪಚರಿಸಿದವರೂ (ಮುಂಚಿನ ಕಾಲದಲ್ಲಿ ಯಾತ್ರಿಕರಿಗೆ ಹೋಟೆಲು, ವಾಹ ಗಳು ಇರಲಿಲ್ಲ), ಪ್ರಿಯವಾದಿಗಳೂ, ದಾನಶೀಲರೂ, ಮಾತೃಪಿತೃಸೇವಕರೂ ಬ್ರಾಹ್ಮಣ ಶುಶ್ರೂಷರೂ, ಅತಿಥಿಸತ್ಕಾರ ಪ್ರಿಯರೂ ಪ್ರವೇಶಮಾಡುವರು ಪಶ್ಚಿಮ ಹೆಬ್ಬಾಗಿಲಿಂದ ಶಿವನಲ್ಲಿ ಭಕ್ತಿ ನೆಲೆಸಿರುವವರು, ಸಕಲ ತೀರ್ಥಗಳ ಸ್ನಾನಮಾಡಿದವರು, ಪಂಚಾಗ್ನಿ ನಡುವೆ ತಪಸ್ಸು ಮಾಡಿದವರು, ಮಹ ಪ್ರಸ್ಥಾನಕ್ಕೆ ಹೊರಟು ಮೃತರಾದವರು, ಅಹಿಂಸಾವ್ರತ ಅನುಸರಿಸಿದವರು ತಮ್ಮ ಪ್ರಭುವಿಗಾಗಿಯೂ, ಸ್ನೇಹಿತನಿಗಾಗಿಯೂ, ಪ್ರಜೆಗಳಿಗಾಗಿಯೂ ಗೋವನ್ನು ಕಳ್ಳರಿಂದ ಬಿಡಸಲಿಕ್ಕಾಗಿಯೂ ಹೋರಾಡಿ ಮಡಿದ ಶೂರರು ಮಹಾತಪಸ್ವಿಗಳೂ ಪ್ರವೇಶಿಸುವರು.

ಪಾಪಿಷ್ಠರು ಘೋರ ಕಷ್ಟ ಹೊಂದುತ್ತ ಬಂದ ಅತಿ ಕಠಿಣ ದಾರಿಯ ಯಮಪುರಿಯ ದಕ್ಷಿಣದ್ವಾರದವರೆಗೂ ಮುಂದುವರಿಯುತ್ತದೆ. ಆ ಬಾಗಿ ಮೂಲಕ ನಾನಾತರದ ಅಪಕಾರ ಮಾಡಿದವರು ಪ್ರವೇಶಿಸುತ್ತಾರೆ. ಬ್ರಾಹ್ಮ ರನ್ನು, ಗೋವನ್ನು, ಶಿಶುವನ್ನು, ವೃದ್ಧರನ್ನು, ರೋಗಿಗಳನ್ನು, ಮೊ

ಹೊಕ್ಕವರನ್ನು, ನಂಬಿದವರನ್ನು, ಸ್ತ್ರೀಯನ್ನು, ಸ್ನೇಹಿತನನ್ನು, ಆಯುಧವಿಲ್ಲ ದವನನ್ನು ಕೊಲ್ಲುತ್ತಾರೋ ಅವರು ; ಅಗಮ್ಯಾಗಮನ, ಪರದ್ರವ್ಯ ಅಪಹರಣ, ತನ್ನಲ್ಲಿ ಒತ್ತೆಯಿಟ್ಟ ವಸ್ತುವಿನ ಅಪಹರಣ, ವಿಷಹಾಕುವುದು, ಮನೆಗೆ ಬೆಂಕಿ ಹಿಡಿಸುವುದು, ಮತ್ತೊಬ್ಬರ ಭೂಮಿಯ ಅಪಹರಣ, ಆಪತ್ ಸಮಯಕ್ಕೆ ಕಾದಿದ್ದು ಕ್ರೂರತನದಿಂದ ವರ್ತಿಸುವುದು ಮಾಡುತ್ತಾರೋ ಅವರು; ಯಾರು ತಾವಿರುವ ಊರಿಗಾಗಲಿ, ಪಟ್ಟಣಕ್ಕಾಗಲಿ, ರಾಷ್ಟ್ರಕ್ಕಾಗಲಿ ಅತಿಶಯ ವಾದ ಸಂಕಟವನ್ನು ತಂದೊಡ್ಡುವರೋ, ಸುಳ್ಳು ಸಾಕ್ಷಿ ಹೇಳುವರೋ, ಕನ್ಯಾ ವಿಕ್ರಯ ಮಾಡುವರೋ ಅಂಥವರು ; ತಿನ್ನಬಾರದ ವಸ್ತುಗಳನ್ನು ತಿನ್ನುವವರು, ಮಗಳೊಡನೆ, ಸೊಸೆಯೊಡನೆ ಬೆರೆಯುವವರು, ತಾಯಿತಂದೆಗಳನ್ನು ತುಚ್ಛೀ ಕರಿಸುವವರು ಮತ್ತು ನಿಂದಿಸುವವರು ; ಮುಖ್ಯವಾಗಿ ಮಹಾಪಾತಕಿಗಳ ವರ್ಗದವರೆಲ್ಲ ಈ ದಕ್ಷಿಣ ದ್ವಾರದಿಂದಲೇ ಒಳಗೆ ನೂಕಲ್ಪಡುವರು.

ಇಂಥ ಪಾಪಿಷ್ಠರಿಗೆ ಯಮನು ಅತ್ಯಂತ ಘೋರಾಕಾರನಾಗಿ ತೋರು ವನು. ಕೋರೆದಾಡೆ, ಗಂಟಿಕ್ಕಿದ ಹುಬ್ಬು ವಕ್ರನೋಟ, ನಡುಗುವ ತುಟಿ, ಕಪ್ಪುದೇಹ, ಜ್ವಲಿಸುವ ಕಣ್ಣು, ೩೨ಕೈಗಳಲ್ಲಿ ಆಯುಧಗಳು, ಕೆಂಪುಬಟ್ಟೆ, ಮೇಘದಂತೆ ಧ್ವನಿ, ಮಹಿಷವಾಹನ ಎಲ್ಲ ವಿಪರೀತ ಭಯಹುಟ್ಟಿಸುವವು. ಮೂರುಲೋಕವನ್ನೇ ನುಂಗುವನಂತೆ ಕಾಣುವನು. ಅವನ ಪರಿವಾರವಾಗಿ ಅಸಂಖ್ಯಾತ ರೌದ್ರಾಕಾರದ ಯಮದೂತರೂ, ಆಯುಧಗಳೂ ಇರುವವು. ಅವನ್ನು ಪಾಪಿಗಳು ಕಂಡು ನಡುಗುತ್ತಾರೆ (ಬ್ರಹ್ಮಪುರಾಣ ಅ ೨೧೫).

ಯಮಧರ್ಮರಾಜನು ಯಾರು ನಾಸ್ತಿಕರು, ಯಾರು ಮಹಾಪಾಪ ಕಾರ್ಯ ಮಾಡುವವರು ಎಂಬುದನ್ನೆಲ್ಲ ತಿಳಿದಿರುತ್ತಾನೆ. ಬ್ರಹ್ಮನ ಮಕ್ಕಳಾದ ಶ್ರವಣರೆಂಬವರು, ಅವರ ಪತ್ನಿಯರು, ಮೂರು ಲೋಕ ಸಂಚರಿಸುತ್ತಿರು ವರು. ಅವರಿಗೆ ದೂರದಿಂದಲೇ ನೋಡಿ, ಕೇಳಿ, ಎಲ್ಲರ ಪಾಪ ತಿಳಿದು ಕೊಳ್ಳುವ ಶಕ್ತಿಯಿದೆ. ಮನುಷ್ಯರು ಗುಪ್ತವಾಗಿ ಆಡಿದುದು ಮಾಡಿದುದು ಎಲ್ಲ ಅವರು ತಿಳಕೊಂಡಿರುತ್ತಾರೆ. ಯಮನ ಮುಖ್ಯ ಅಧಿಕಾರಿಯಾದ ಚಿತ್ರಗುಪ್ತನಿಗೂ ಅವು ತಿಳಿಯುತ್ತವೆ. ಆದರೂ ಅವ ಶ್ರವಣರನ್ನು ಕೇಳುತ್ತಾನೆ. ಸೂರ್ಯ, ಚಂದ್ರ, ಅಗ್ನಿ, ವಾಯು, ಆಕಾಶ, ಭೂಮಿ, ನೀರು, ಹೃದಯ, ಹಗಲು, ರಾತ್ರಿ, ಸಂಧ್ಯೆಗಳು ಮತ್ತು ಧರ್ಮ ಇವೂ ನಮ್ಮ ಪಾಪ ಪುಣ್ಯ ಎಲ್ಲ ನೋಡುತ್ತಾರೆ. ಅದರೂ ಚಿತ್ರಗುಪ್ತನು ಶ್ರವಣರಿಂದ, ಯಮನು ಚಿತ್ರಗುಪ್ತನಿಂದ, ತನ್ನೆದುರಿಗೆ ನಿಲ್ಲಿಸಲ್ಪಟ್ಟ ಪಾಪಿಗಳ ಪಾಪ-ಪುಣ್ಯಗಳನ್ನು

ನಿಶ್ಚಯಮಾಡಿಕೊಳ್ಳುತ್ತಾನೆ. ಅವರಿಗೆ ಯಥೋಚಿತವಾದ ನರಕ ಶಿಕ್ಷೆವಿಧಿಸು ತ್ತಾನೆ (ಗರುಡ ಸಾ. ಅ ೩).

ಯಮಲೋಕದಲ್ಲಿ ೮೪ಲಕ್ಷ ನರಕಗಳಿರುವವು. ಅವಲ್ಲಿ ೨೧ ಅತಿಮುಖ್ ವಾದವು. ಕೆಲವು ಸಹಸ್ರ ಹತ್ತು ಸಹಸ್ರ ಯೋಜನ ವಿಸ್ತೀರ್ಣದವು. ಯಮ ಧರ್ಮರಾಜನು ಪಾಪಿಗಳಿಗೆಕೊಡುವಶಿಕ್ಷೆಗಳು ವಸಿಷ್ಠಾದಿಮಹರ್ಷಿಗಳು ಯಾವ ಪಾಪಕ್ಕೆ ಯಾವ ಶಿಕ್ಷೆ ಎಂದು ವಿಧಿಸಿರುವರೋ ಅವುಗಳೇ ಆಗಿವೆ. ಯಮ ದೂತರು, ಯಮನಿಂದ ವಿಧಿಸಲ್ಪಟ್ಟ ಶಿಕ್ಷೆಯಂತೆ ಪಾಪಿಗಳನ್ನುದಂಡಿಸುವರು ಶಿಕ್ಷೆಗಳು ಅತ್ಯಂತ ಕ್ರೂರತರದವಾಗಿರುತ್ತವೆ. ಎಲ್ಲ ಮಹಾಪುರಾಣಗಳಲ್ಲಿಯು ನರಕದ ವರ್ಣನೆಇದೆ. ವಿವರಣೆಗಳಲ್ಲಿ, ನರಕಗಳ ಹೆಸರುಗಳಲ್ಲಿ, ಸ್ವಲ್ಪವ್ಯತ್ಯಾ ಗಳಿವೆ. ನಮ್ಮ ಒಂದು ಅತಿಮುಖ್ಯ ಶಾಸ್ತ್ರಗ್ರಂಥವಾದ ಭಗವಾನ್ ಮನುವಿ ಸ್ಮೃತಿಯಲ್ಲಿಯೂ ೨೧ ನರಕಗಳಹೆಸರು ಬರುತ್ತದೆ. ಆದ್ದರಿಂದ ನರಕದಶಿಕ್ಷೆ ಲಕ್ಷ್ಯಕೊಡದಿರುವುದು ಸರಿಯಲ್ಲ. ಶಿಕ್ಷೆಗಳ ಸಾರಾಂಶ ಸ್ವಲ್ಪಕೊಡುತ್ತೇನೆ.

ಪಾಪಿಗಳಿಗೆ ಶಿಕ್ಷೆ

ಕೆಲವು ಪಾಪಿಗಳನ್ನು ಬೆಂಕಿಯಮೇಲೆ ತಲೆಕೆಳಗಾಗಿ ತೂಗಾಡಿಸಿ ಸುಡ ತ್ತಾರೆ. ಬಾಯಾರಿಕೆಯಿಂದ ಕಂಗೆಟ್ಟು ನೀರುಬೇಡಿದಾಗ ಸುತ್ತಿಗೆ, ಈಟಿ ಗದೆ, ಭರ್ಚಿಗಳಿಂದ ಹಿಂಸಿಸುತ್ತಾರೆ. "ನೀವು ಸುಲಭವಾಗಿಲಭಿಸುವ ನೀರನ್ ಕೂಡ ದಾನಮಾಡಲಿಲ್ಲ ; ಅರ್ಧತುತ್ತು ಅನ್ನ ಕಾಗೆಗೆಹಾಕಲಿಲ್ಲ, ಅತಿಥಿಗಳಿ ಅನ್ನಹಾಕಲಿಲ್ಲ, ಪಿತೃಗಳಿಗೆ ತರ್ಪಣದ ನೀರುಕೊಡಲಿಲ್ಲ, ಧರ್ಮಹೀನಜೀವನ ಫಲ ಅನುಭವಿಸಿರಿ" ಎನ್ನುತ್ತಾರೆ. ಬಾಯಿಗೆ ಧೂಳು ತುಂಬುತ್ತಾರೆ. ಕೆ ವರನ್ನು ಕೆಂಡದ ಮೇಲೆಮಲಗಿಸಿ ಮೇಲೆ ಉರಿಯುವಕೊಳ್ಳಿ ಹೇರುತ್ತಾರ ಕೆಲವರನ್ನು ಯಂತ್ರದಲ್ಲಿಹಾಕಿ ಕಬ್ಬನ್ನು ಹಿಂಡಿದಂತೆ ಹಿಂಡುತ್ತಾರೆ. ಕೊಡ ಯಿಂದಸಿಗಿಯುತ್ತಾರೆ. ಗರಗಸದಿಂದ ಸೀಳುತ್ತಾರೆ. ಕೆಲವರನ್ನು ಚೂಪಾ ಬಾಯಿಯುಳ್ಳಹುಳುಗಳು, ಜಿಗಣೆಗಳು ತುಂಬಿರುವ ಕುಂಡಗಳಲ್ಲಿ ಹಾಕುತ್ತಾರ ಕಾದಎಣ್ಣೆಯ ಕೊಪ್ಪರಿಗೆಗಳಲ್ಲಿ ಅದ್ದುತ್ತಾರೆ.

ಮುಖ್ಯ ನರಕ ಶಿಕ್ಷೆಗಳು : ಇಪ್ಪತ್ತೊಂದು ಮುಖ್ಯ ನರಕಗಳ ಮೊದಲನೆಯದಾದ **ರೌರವ** ನರಕದಲ್ಲಿ ಇತರರ ಮನೆಯ ಊಟದಲ್ಲಿ ನಿ ತರೂ, ಕ್ಷುದ್ರರೂ, ಪರರದ್ರವ್ಯ ಅಪಹರಿಸುವವರೂ ಆದವರನ್ನು ಕಾದಎ ಯಲ್ಲಿ ಬೇಯಿಸುತ್ತಾರೆ. ಎರಡನೆಯದಾದ **ಮಹಾರೌರವ**ದಲ್ಲಿ ಕೃತಘ್ನರು

ಗುರುತಲ್ಪಗಾಮಿಗಳೂ ಆದವರನ್ನು ಅಗ್ನಿಯಿಂದಸುಡುವರು ; ಹರಿತವಾದ ಶಸ್ತ್ರಾಸ್ತ್ರಗಳಿಂದ ತುಂಡಂತುಂಡಾಗಿ ಕತ್ತರಿಸುವರು. ಮೂರನೆಯ **ಅಂಧತ ಮಸ್ಸೆಂಬ** ನರಕದಲ್ಲಿ ದುಷ್ಟದೃಷ್ಟಿಯಿಂದ ಪರರಪತ್ನಿಯರನ್ನು ನೋಡಿದವರ ಕಣ್ಣನ್ನು ಉಕ್ಕಿನ ಕೊಕ್ಕುಳ್ಳ ಪಕ್ಷಿಗಳು ಕುಕ್ಕುತ್ತಿರುವವು. ನಾಲ್ಕನೆಯದಾದ **ಪ್ರತಪ್ತ**ವೆಂಬನರಕದಲ್ಲಿ ಗುರು, ದೇವತೆ, ತಪಸ್ವಿಗಳನ್ನು ನಿಂದಿಸಿದವರ ನಾಲಗೆ ಸೀಳುವರು. ಐದನೆಯದಾದ **ವಿದಾರಕ**ವೆಂಬ ನರಕದಲ್ಲಿ ಮಿತ್ರರಿಗೆದ್ರೋಹ ಮಾಡಿದವರನ್ನು ಗರಗಸದಿಂದ ಸಿಗಿಯುವರು. **ನಿಕುಂಭ**ವೆಂಬ ಆರನೆಯ ನರಕದಲ್ಲಿ ತಮಗೆ ಕೇಡುಮಾಡದ ಪ್ರಾಣಿಗಳ ಪ್ರಾಣತೆಗೆದವರನ್ನು ಕಾದಿರುವ ಮರಳಮೇಲೆ ಸುಡುವರು.

ಬಿಭೀತ್ಸವೆಂಬ ಏಳನೆಯನರಕವು ಅಮೇಧ್ಯ ಮೂತ್ರಗಳಿಂದತುಂಬಿದ್ದು, ರಾಜನಿಗೆ ಚಾಡಿಹೇಳಿದ ದುರಾತ್ಮನಬಾಯಿಗೆ ಅವನ್ನುತುಂಬಿಸುವರು. **ಕುತ್ಸಿತ** ವೆಂಬ ಎಂಟನೆಯ ನರಕದಲ್ಲಿ ಗುರುವಿಗೆ, ದೇವರಿಗೆ, ಅತಿಥಿಗೆ, ಭೃತ್ಯರಿಗೆ ಭೋಜನನೀಡದೆ ಉಂಡವರನ್ನುಹಾಕುವರು. **ದುರ್ಗನು**ವೆಂಬ ಒಂಭತ್ತನೆಯ ನರಕವು ಹರಿತವಾದ ಮುಳ್ಳುಗಳು, ಹಾವು, ಚೇಳುಗಳಿಂದ ತುಂಬಿದೆ. ಒಟ್ಟು ಹೋಗುವಾಗ ತಾವು ಮಾತ್ರ ಉಂಡವರೂ, ಇತರರಿಗೆ ವ್ಯಥೆಪಡಿಸಿದವರೂ ಅದಕ್ಕೆ ಹಾಕಲ್ಪಡುತ್ತಾರೆ. ಹತ್ತನೆಯದಾದ **ದುಸ್ಸಹ**ವೆಂಬನರಕದಲ್ಲಿ ಕಾದ ಕಬ್ಬಿಣದ ಕಂಬಗಳಿವೆ. ಪರರ ಪತ್ನಿಯರಲ್ಲಿ ಆಸಕ್ತರಾದವರನ್ನು ಅವಕ್ಕೆ ತಲಂಗಿಸಿಸುವರು. ಹನ್ನೊಂದನೆಯ **ಆಕರ್ಷ**ವೆಂಬ ನರಕದಲ್ಲಿ ಕಾದ ಇಕ್ಕಳ ಗಳಿಂದ ಹೆಂಗಸು, ಬ್ರಾಹ್ಮಣ, ಗುರು, ದೇವತೆಗಳ ದ್ರವ್ಯ ಅಪಹರಿಸಿದವರನ್ನು ಸೆಳೆಯುವರು. ಹನ್ನೆರಡನೆಯ **ಸಂದಂಶ**ವೆಂಬ ನರಕದಲ್ಲಿ ಅಭಕ್ಷ್ಯವನ್ನು ಭಕ್ಷಿ ಸುವ ನೀಚರನ್ನು ಕಬ್ಬಿಣದ ಕೊಕ್ಕಿರುವ ಹದ್ದುಗಳು ಭಕ್ಷಿಸುತ್ತಿರುವವು. **ನಿಯುಂತ್ರಕ**ವೆಂಬ ಹದಿಮೂರನೆಯನರಕದಲ್ಲಿ ಸುತ್ತಲೂ ಕ್ರಿಮಿಗಳು, ಬಂಧನ ಗಳು ಇದ್ದು, ನ್ಯಾಸವಾಗಿಟ್ಟ ದ್ರವ್ಯಗಳನ್ನು ಅಪಹರಿಸಿದವರನ್ನು ಬಂಧನ ಗಳಿಂದ ಕಟ್ಟಿ ಕ್ರಿಮಿ, ಚೇಳು ಕೀಟಗಳಿಂದ ಕಚ್ಚಿಸುವರು.

ಹದಿನಾಲ್ಕನೆಯ **ಅಧೋಮುಖ**ವೆಂಬ ಅತಿಭಯಂಕರವಾದ ನರಕದಲ್ಲಿ ಬ್ರಹ್ಮಹತ್ಯೆ ಮಾಡಿದವರನ್ನು ಮರದ ಕೊಂಬೆಗಳಿಗೆ ಅಧೋಮುಖವಾಗಿ ಕಟ್ಟಿ ಕೆಳಗೆ ಅಗ್ನಿಹಾಕಿ ಸುಡುವವರು. **ಭೀಷ್ಣ**ವೆಂಬ ಹದಿನೈದನೆಯ ನರಕದಲ್ಲಿ ಸೇನು, ತಿಗಣೆ, ನೊಣಗಳು ತುಂಬಿವೆ. ಸುಳ್ಳುಸಾಕ್ಷಿ ಹೇಳಿದವರಿಗೂ ಇತರ ನಿಂದ್ಯ ಕಾರ್ಯಮಾಡಿದವರಿಗೂ ಅವು ಪೀಡಿಸುವವು. ಹದಿನಾರನೆಯ

ಕ್ಷುದ್ರದವೆಂಬ ನರಕದಲ್ಲಿ ಬ್ರಾಹ್ಮಣರು ತಮ್ಮ ಮಾಂಸ ಬೆಳೆಸಲಿಕ್ಕೆ ಮಾಂಸ
ತಿಂದವರು ಹಸಿವಾಗಿ ತಮ್ಮ ಮಾಂಸ ತಾವೇ ತಿನ್ನುವಂತೆ ಮಾಡುವರು
ಹದಿನೇಳನೆಯ ನರಕ **ಆದಿಕ್ಷಾರ**ದಲ್ಲಿ ವ್ರತ ಕೆಡಿಸಿದವರನ್ನು ಪಾಷಂಡಿಗಳನ್ನು
ಹರಿತವಾದಆಯುಧದಿಂದ ಕತ್ತರಿಸಿ ಅದಕ್ಕೆ ಉಪ್ಪುತುಂಬುವರು. **ನಿಧಾಗ**
ವೆಂಬ ನರಕದಲ್ಲಿ ಉರಿಯುತ್ತಿರುವ ಕೆಂಡಗಳಿದ್ದು ಶಾಸ್ತ್ರ, ಕಾವ್ಯ, ಬ್ರಾಹ್ಮ
ಕನ್ಯೆ ಇವರನ್ನು ಕೆಡಿಸಿದವರನ್ನು ಕೆಂಡಗಳ ನಡುವೆ ನಿಲ್ಲಿಸುವರು. ಹತ್ತೊಂಭತ್ತ
ನೆಯ ನರಕವಾದ **ಕೂಟಶ್ಮಾಲ್ಮಲಿ**ಯಲ್ಲಿ ಹರಿತವಾದ ಮುಳ್ಳು ತುಂಬಿದೆ
ನಾಸ್ತಿಕರೂ ಮರ್ಯಾದೆಕ್ರಮ ಉಲ್ಲಂಘಿಸುವವರೂ ಬ್ರಾಹ್ಮಣ ಘಾತುಕರು
ಆದವರನ್ನು ಮೇಲಕ್ಕೆ ಹತ್ತಿಸಿ ಕೆಳಕ್ಕೆ ಉರುಳಿಸುವರು. **ಅಸಿಪತ್ರವನ**ವೆಂ
ಇಪ್ಪತ್ತನೆಯ ನರಕದಲ್ಲಿ ಅತಿ ಚೂಪಾದಎಲೆಗಳ ಕಾಡುಗಳಿದ್ದು ಪರರ ಛಿದ್ರ
ಗಳನ್ನು ಈಕ್ಷಿಸುವವರನ್ನು, ಶಾಸ್ತ್ರವನ್ನು ವಿಕ್ರಯಿಸುವವರನ್ನು, ಹಾಕುತ್ತಾರೆ
ವೈತರಣೀನದಿಯೆಂಬ ಇಪ್ಪತ್ತೊಂದನೆಯನರಕ ಅಧರ್ಮವನ್ನು, ಪಾಪವನ್ನು
ಮಾಡುವವರಿಗೆ ದಾಟಲಾಗದೆ, ಪಾಪಿಗಳು ಅದರಲ್ಲಿ ಮುಳುಗುತ್ತಿರುವರು
ಮರಣಕಾಲದಲ್ಲಿ ಗೋವನ್ನು ದಾನಮಾಡುವವರು ಆ ಗೋವಿನ ಬಾಲ ಹಿ
ಕೊಂಡು ಸುಖವಾಗಿ ಈ ನದಿಯನ್ನು ದಾಟುವರು.

ಇತರ ನರಕಗಳ ಸಂಖ್ಯೆಗೆಮಿಂತಿಯಿಲ್ಲ. ಅವಲ್ಲಿ ದೇವಸ್ವ ಬ್ರಾಹ್ಮಣಸ್ವ
ಗಳನ್ನು ಅಪಹರಿಸಿ ಭುಂಜಿಸುವವನ ಹೊಟ್ಟೆಯನ್ನುಸೀಳಿ ಅಮೇಧ್ಯದ ಹುಳ
ಗಳನ್ನು ತುಂಬಿಸುವರು. ದೇವತೆಗಳಿಗಾಗಲೀ, ಬ್ರಾಹ್ಮಣರಿಗಾಗಲಿ, ಅತಿಥಿಗ
ಗಾಗಲಿ ಎಂದೂ ಅಡುಗೆಯನ್ನುಮಾಡದೆ ಸ್ವಾರ್ಥಕ್ಕಾಗಿ ಮಾತ್ರವೇ ಅನ್ನ
ಬೇಯಿಸಿ ಹೊಟ್ಟೆತುಂಬಿಸಿಕೊಳ್ಳುವ ಪಾಪಿಯನ್ನು ಕುಂಭೀಪಾಕ ನರಕದಲ್ಲಿ
ಬೇಯಿಸುವರು, ಮಕ್ಕಳನ್ನು ಕೊಲ್ಲುವವರನ್ನೂ. ನಂಬಿಸಿ ಇತರರನ್ನುಕೊಲ್ಲು
ವವನನ್ನೂ ಕೃತಘ್ನನಾದ ಪಾಪಿಯನ್ನೂ **ಮಹಾರೌರವ** ನರಕದಲ್ಲಿ ಹಾಕು
ವರು. ಬ್ರಹ್ಮಘಾತಕನನ್ನು ಅಂಧತಾಮಿಸ್ರದಲ್ಲಿಯೂ, ಮದ್ಯಪಾನಿಯನ್ನು
ಪೂಯಶೋಣಿತದಲ್ಲಿಯೂ, ಸ್ವರ್ಣಚೋರನನ್ನು ಕಾಲಸೂತ್ರದಲ್ಲಿಯೂ
ಹಾಕುವರು. ಈ ಮಹಾಪಾತಕಿಗಳನ್ನೆಲ್ಲ ಕುದಿಯುವ ಎಣ್ಣೆಯ ಬಾಣಲೆಯಲ್ಲಿ
ಅನೇಕಬಾರಿ ಅದ್ದಿತೆಗೆಯುವರು. ಆಮೇಲೆ ಕಬ್ಬಿಣದಕೊಕ್ಕುಳ್ಳ ಕಾಗೆಗಳಿಂ
ಕುಕ್ಕಿಸಿ (ನೂರಾರು ಸಾವಿರ ವರ್ಷಕಾಲ) ನರಕದಲ್ಲಿ ಶಿಕ್ಷಿಸುವರು. ಅಂಥವ
ಸ್ನೇಹ ಮಾಡಿದವರನ್ನು ೬೦ ವರ್ಷಕಾಲ ಅಸಿಪತ್ರವನದಲ್ಲಿ ಹಾಕುವರು
ಸ್ತ್ರೀಹತ್ಯೆ, ಗೋಹತ್ಯೆ, ಮಿತ್ರವಧೆ ಮಾಡಿದವರನ್ನು ಕೂಟಶ್ಮಾಲ್ಮ

ವೃಕ್ಷಕ್ಕೆ ತಲೆಕೆಳಗಾಗಿನೇತುಹಾಕುವರು. ಸ್ನೇಹಿತನ ಹೆಂಡತಿಯನ್ನು ಅಲಂಗಿಸಿ ದವನ ತೋಳುಗಳನ್ನು ಕಿತ್ತುಹಾಕಿ ಚರ್ಮ ಸುಲಿಯುವರು. ಪರಕ್ಷೇತ್ರ ಪರ ಗೃಹಗಳಿಗೆ ಬೆಂಕಿಕೊಟ್ಟವರನ್ನು ಮಹಾಘೋರವಾದ ಜ್ವಾಲಾಕಿಲ ನರಕದಲ್ಲಿ ಹಾಕುವರು. ವಿಷಕೊಟ್ಟವನನ್ನು ಕಾಲಕೂಪನರಕಕ್ಕೆಸೆಯುವರು. ಇತರರ ಮಾನವನ್ನು ಭಗ್ನಮಾಡಿದವನ ಕತ್ತುಮುರಿಯುತ್ತಾರೆ. ಭ್ರೂಣಹತ್ಯೆಮಾಡಿ ದವರನ್ನು ಅನುಪಾಕ ನರಕಕ್ಕೆಹಾಕುತ್ತಾರೆ. ರಸವಿಕ್ರಯಮಾಡುವ ಬ್ರಾಹ್ಮಣ ನನ್ನು ಕಬ್ಬಿಣದ ಗಾಣಕ್ಕೆಹಾಕಿ ಹಿಂಡುವರು. ಪ್ರಜೆಗಳನ್ನುಪೀಡಿಸುವವರನ್ನು ಅಂಧಕೂಪಕ್ಕೆ ಹಾಕುತ್ತಾರೆ. ಗೋವು ಎಳ್ಳು ಕುದುರೆ ಮಾರಾಟಮಾಡಿದ ದ್ವಿಜನನ್ನು, ಭಂಗಿಸೊಪ್ಪು, ಹೆಂಡ, ವಿಕ್ರಯಿಸಿದಬ್ರಾಹ್ಮಣನನ್ನು, ಒನಕೆಒರಳು ಮಾರಿದ ವೈಶ್ಯನನ್ನು, ಬ್ರಾಹ್ಮಣರನ್ನು ಅಪಮಾನ ಮಾಡಿದ ಶೂದ್ರರನ್ನು, ವೇದ ಕಲಿಯದ ಬ್ರಾಹ್ಮಣನನ್ನು, ಅಧೋಮುಖ ನರಕಕ್ಕೆ ಹಾಕುವರು. ಅರಗು, ಉಪ್ಪು, ಎಣ್ಣೆ, ಮಾಂಸ, ವಿಷ, ಆಯುಧ, ಸಕ್ಕರೆ, ತುಪ್ಪ ಮಾರುವ ಬ್ರಾಹ್ಮಣಾಧಮನನ್ನು ಕಾಲುಕಟ್ಟಿ ಚಾಟಿಯಲ್ಲಿಹೊಡೆದು ಕುದಿಯುವ ಕೆಸರಲ್ಲಿ ಹಾಕುತ್ತಾರೆ. ಗಂಡಸರನ್ನು ಹುಡುಕಿಕೊಂಡು ಹೋಗುವ, ಕುಲಕ್ಕೆ ಕಲ್ಮಶ ತರುವ, ಪಾಪಿಷ್ಠೆಯನ್ನು ಕಾದ ಕಬ್ಬಿಣದ ಪ್ರತಿಮೆಯನ್ನು ಬಿಗಿದುಅಪ್ಪುವಂತೆ ಮಾಡುತ್ತಾರೆ. ತಾನಾಗಿಯೇ ನಿಯಮವನ್ನು ಕೈಕೊಂಡು ಜಿತೇಂದ್ರಿಯನಾಗದೆ ವ್ರತಬಿಟ್ಟ ಪಾಪಿಯನ್ನು ಸೊಳ್ಳೆಗಳು ದುಂಬಿಗಳು ತುಂಬಿರುವ ಭ್ರಮರದಂಶಕ ನರಕಕ್ಕೆಹಾಕುತ್ತಾರೆ. ಪಾಪಿಗಳ ತಲೆಯನ್ನು ಕಬ್ಬಿಣದ ಒನಕೆಯಿಂದ ಕುಟ್ಟು ವರು. ಕಾಲುಹಿಡಿದು ಬಂಡೆಯ ಮೇಲೆ ಅಪ್ಪಳಿಸುವರು. ಕಾಲುಗಳನ್ನು ಬಾಯಿಗೆತುರುಕಿಸುವರು. ಕಣ್ಣುಕೀಳುವರು. ದೋಷವಿಲ್ಲದವನಲ್ಲಿ ದೋಷ ಆರೋಪಮಾಡಿದವನ ಮುಖವನ್ನು ಕೀವು ರಕ್ತದಲ್ಲಿಮುಳುಗಿಸುವರು. ಕೈಎತ್ತಿ ದಾನಮಾಡದವನ ಕೈಗಳನ್ನು ಕಾಸಿದ ಎಣ್ಣೆಯಲ್ಲಿ ಬೇಯಿಸುವರು. ಸುಳ್ಳು ಅಪವಾದತರುವ ಪಾಪಿಯಕಾಲುಗಳಲ್ಲಿ ಕಾದಕಬ್ಬಿಣದ ಮೊಳೆ ಬಡಿಯುವರು. ಇನ್ನೊಬ್ಬ ಸತ್ಪಾತ್ರನಿಗೆ ದಾನಮಾಡುವಾಗ ತಡೆದವನ ನಾಲಗೆ ಸೀಳುವರು (ಸ್ಕಾಂದ, ಕಾಶಿಖಂಡ ಅ೮), ಧಿಕ್ಕಾರದಿಂದ ಗುರುವನ್ನು ನೋಡಿದವನ ಕಣ್ಣನ್ನು ಅನುರಕ್ತ ನೇತ್ರಗಳಿಂದ ಪರಸ್ತ್ರೀ ವೀಕ್ಷಣ ಮಾಡಿದವನನ್ನು, ಕಾದು ಕೆಂಪಾದ ಸೂಜಿಗಳಿಂದ ಕಣ್ಣನ್ನು ಚುಚ್ಚುವರು (ಭವಿಷ್ಯ ಉ–೬೬).

ದೇವದ್ರವ್ಯನಾಶ, ಗುರುದ್ರೋಹ, ಇತ್ಯಾದಿ ಮಹಾಪಾಪ ಮಾಡಿದ ವರಿಗೆ ಅತಿ ಹೆಚ್ಚು ಕಾಲ ಸರ್ವನರಕಗಳಲ್ಲಿ ಶಿಕ್ಷೆಯಿದೆ. ಇತರ ಮಹಾಪಾತಕಿ

ಗಳು ಇದರ ಅರ್ಧಪಾಲು ಕಾಲ ಹಿಂಸೆ ಅನುಭವಿಸಬೇಕಾಗುತ್ತದೆ. ಉಪ
ಪಾತಕಿಗಳು ಕಾಲುಪಾಲು, ಸಾಮಾನ್ಯ ಪಾತಕಿಗಳು ಎಂಟನೆ ಒಂದುಪಾಲು
ನರಕದ ಕಷ್ಟ ಅನುಭವಿಸಬೇಕಾಗುತ್ತದೆ. ಅವರೆಲ್ಲ ಆಮೇಲೆ ಭೂಲೋಕದಲ್ಲಿ
ಹುಲ್ಲು, ಗಿಡ, ಮರ ಮುಂತಾದ ಜನ್ಮ, ಆಮೇಲೆ ಕೀಟ, ಪಕ್ಷಿಮೃಗ
ಗೋಜನ್ಮ, ಆಮೇಲೆ ದುರ್ಲಭವಾದ ಮಾನವ ಜನ್ಮ ಪಡೆಯುವರು
(ಭವಿಷ್ಯ, ಉತ್ತರ-೬೬).

ಯಮಲೋಕಕ್ಕೆ ಯಾರು ಹೋಗುತ್ತಾರೆ, ಯಾರು ಅಲ್ಲಿ ಶಿಕ್ಷೆ
ಹೊಂದುತ್ತಾರೆ ಎಂಬ ಸಂದರ್ಭದಲ್ಲಿ ಪಾಪಕರ್ಮಗಳ ಬಹಳ ತರದವನ್ನು
ಪುರಾಣಗಳು ಹೇಳುತ್ತವೆ. ಅವಲ್ಲಿ ಕೆಲವನ್ನು ಹಿಂದೆ ಹೇಳಿದ್ದಾಯಿತು
ಮತ್ತೂ ಕೆಲವನ್ನು ಇಲ್ಲಿ ಸೇರಿಸುತ್ತೇನೆ. ಗುಪ್ತವಾಗಿ ಪಾಪಕಾರ್ಯ
ಮಾಡುವವರು, ಗುರುಗಳ ಧಿಕ್ಕಾರ, ಅಪಮಾನಮಾಡುವವರು, ಗರ್ಭ
ಪಾತ ಮಾಡುವವರು, ಇತರರ ಉತ್ತಮಗುಣ ಗ್ರಹಿಸದೆ ದೋಷ ಮಾತ್ರ
ಗ್ರಹಿಸುವವರು, ನೀಚರ ಸಂಗಮಾಡುವವರು, ಕೆಟ್ಟಮನಸ್ಸು ಕೆಟ್ಟ ಮಾತು
ಕಠಿಣಹೃದಯವುಳ್ಳವರು, ಶಾಸ್ತ್ರದ ವಿಚಾರವೇ ಬೇಡ ಎನ್ನುವವರು, ಪರರ
ಜೀವನದದಾರಿ ಅಪಹರಿಸುವವರು, ಮದ್ಯತಯಾರಿಸುವವರು, ಶಾಸ್ತ್ರಾಧ್ಯಯನ
ಮಾಡದವರು, ಪುರಾಣವಾಚನಕ್ಕೆ ಯಜ್ಞಕ್ಕೆ ಅಡ್ಡಬರುವವರು, ದಾನ
ಕೊಡುವುದನ್ನು ತಡೆಯುವವರು, ಅಪರಾಧವಿಲ್ಲದೆ ಜನರನ್ನು ಶಿಕ್ಷಿಸುವವರು,
ಲೇಖನಿಯಿಂದ ಬಾಳುವವರು, ಕೃತಘ್ನರು, ಶಿವಪಾರ್ವತಿ ವಿಷ್ಣು ಸೂರ್ಯ
ಗಣೇಶರನ್ನು (ಪಂಚಾಯತನ ಪೂಜೆಯನ್ನು) ನಿತ್ಯಪೂಜೆಮಾಡದವರು, ದಾನ
ಕೊಟ್ಟಿದ್ದನ್ನು ಕಿತ್ತುಕೊಳ್ಳುವವರು, ದೇವರನ್ನು ಸತ್ಕರ್ಮವನ್ನು ನಿಂದಿಸು
ವವರು. ಶಸ್ತ್ರಗಳನ್ನು ತಯಾರಿಸುವವರು ನರಕದಲ್ಲಿ ಶಿಕ್ಷೆ ಹೊಂದುತ್ತಾರೆ.

ನರಕದ ದಾರಿಯಲ್ಲಿ ಯಮದೂತರೂ, ಶಿಕ್ಷೆಕೊಡುವಾಗ ಯಮಧರ್ಮ
ರಾಜನ ಶಿಕ್ಷೆ ಅನುಭವಿಸುವಾಗ ನರಕದದೂತರೂ, ಪಾಪಿಗಳಿಗೆ "ನೀವು ಸುಖ
ದಲ್ಲಿ ಪಾಪಮಾಡಿದಿರಿ, ಈಗ ಅತಿಕಷ್ಟವಾದ ಆದರಫಲ ಅನುಭವಿಸಿರಿ"
ಎಂದು ಎಚ್ಚರ ಕೊಡುತ್ತಿರುತ್ತಾರೆ. ನರಕದ ಅತಿದೀರ್ಘಕಾಲದ ಶಿಕ್ಷೆ ಅವರ
ಸೂಕ್ಷ್ಮ ಮನಸ್ಸಿಗೆ ಪುನಃ ಪುನಃ ನಾಟಿ, ಅವರ ಒಲವನ್ನು ಧರ್ಮದಕಡೆಗೆ
ತಿರುಗಿಸುತ್ತದೆ.

ಹಿಂದೆ ೨೬ನೇ ಅಧ್ಯಾಯದಲ್ಲಿ ದ್ವಿಜರಲ್ಲಿ ಯಾರು ಪ್ರೇತಜನ್ಮ ಪಡೆಯು
ತ್ತಾರೆ ಎಂಬುದಕ್ಕೆ ಪಾಪಗಳ ಪಟ್ಟಿ ಕೊಡಲ್ಪಟ್ಟಿದೆ. ಆ ಪಾಪಗಳಿಂದ

ದ್ವಿಜರು ನರಕಕ್ಕೆ ಹೋಗಿ ನರಕಯಾತನೆಗಳನ್ನು ಪಡೆಯಲೂಬಹುದು. ನಮ್ಮಲ್ಲಿ ಪಾಪಕಾರ್ಯಗಳು ಕಡಿಮೆಯಾಗಲಿಕ್ಕೆ ನಮ್ಮ ಜೀವನದ ವೃತ್ತಿ ನಮ್ಮ ವರ್ಣಧರ್ಮಕ್ಕೆ ಬಹಳ ವಿರುದ್ಧವಿರಕೂಡದು (ದಾನ ಮಾಡಬೇಕು, ಪುಟ ೭೪ ನೋಡಬಹುದು).

ನರಕದ ಶಿಕ್ಷೆ ಸುಳ್ಳೇ?

ಈ ಕಾಲದಲ್ಲಿ ದೇವರ ಭಯ, ಪಾಪಕಾರ್ಯಗಳಿಗೆ ದೇವರು ನರಕದ ಶಿಕ್ಷೆ ಕೊಡುವನು ಎಂಬ ಪಾಪದ ಭಯ, ಎರಡೂ ಸನಾತನಿ ಹಿಂದೂಗಳಲ್ಲಿ (ಮುಖ್ಯವಾಗಿ ಯುವಕರಲ್ಲಿ) ಬಹಳಕಡಿಮೆಯಾಗುತ್ತಿದೆ. **ಕೊಲೆಸಾತಗಳು, ಅನ್ಯಾಯಗಳು ಬಹಳ ಹೆಚ್ಚುತ್ತಿವೆ.** ನಾವು ನರಕ ಎಲ್ಲ ನಂಬುವುದಿಲ್ಲ, ಅವನ್ನು ಕಂಡವರೇನೂ ಇಲ್ಲ, ಅವೆಲ್ಲ ಸುಮ್ಮನೆ, ನಮ್ಮ ಅಂತರಾಳದ ಪ್ರೇರಣೆಯಂತೆ ನಾವು ಬಾಳುತ್ತಿದ್ದೇವೆ ; ಅದು ಸಾಕು ಎಂಬುದು ಹೊಸ ಜನಾಂಗದ "ನಾಗರಿಕರ" ನಿರ್ಧಾರ. ಮನುಷ್ಯ ಬುದ್ಧಿವಂತ ಜೀವಿಯಷ್ಟೆ! ಆದ್ದರಿಂದ ಸ್ವಲ್ಪ ವಿವೇಚಿಸುವ.

ಬೇರೆ ಬೇರೆ ದೇಶಗಳನ್ನುಆಳುವ ಪ್ರತಿ ಸರ್ಕಾರವೂ ದೇಶದಲ್ಲಿ ಅಕ್ರಮ ಬೆಳೆದು ಸರ್ಕಾರ ನಾಶವಾಗದಿರಲಿಕ್ಕಾಗಿ ತನ್ನದೇ ಆದ ಕಾನೂನುಗಳನ್ನು ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆಕೊಡುತ್ತದೆ. ಸಮರ್ಥತೆಯಿಂದ ಶಿಕ್ಷೆವಿಧಿಸಂತ್ತ ಬಂದಷ್ಟಕ್ಕೂ ಆ ಸರ್ಕಾರ ಹೆಚ್ಚುಕಾಲಬಾಳುವ ಸಂಭವ ಹೆಚ್ಚು. ಪ್ರಜೆಗಳಿಗೆ ಪ್ರತಿಯೊಬ್ಬನಿಗೂ ಸರ್ಕಾರದ ಶಿಕ್ಷೆಗಳ ಕಠಿಣತೆ ಸರಿತೋರದಿರಬಹುದಾದರೂ, ಯಾರೇ ಆಗಲಿ ತಾನು ತನ್ನ ಮನಸ್ಸಿಗೆ ಸರಿ ಎಂದು ತೋರಿದಂತೆ ಮಾತ್ರ ಬಾಳುತ್ತೇನೆ, ಕಾನೂನುಗಳು ತನಗೆ ಬೇಡ, ಎಂದು ವರ್ತಿಸಲು ಬಿಟ್ಟರೆ, ಆ ಸರ್ಕಾರವೇ ಇಲ್ಲವಾದೀತು.

ಆದರೆ ದೇವರು ವಿಶ್ವವನ್ನು ಆಳಲಿಕ್ಕೆ ಶಾಸ್ತ್ರಗಳಮೂಲಕ ತನ್ನದೇ ಆದ ಕಾನೂನುಗಳನ್ನೂ ಸಮರ್ಥತರದ ಶಿಕ್ಷೆಯ ಕ್ರಮಗಳನ್ನೂ ಮಾಡುವುದು ಸುಳ್ಳು, ಪ್ರತಿಯೊಬ್ಬನೂ ಅವನ ಇಷ್ಟದಂತೆ, ತೀರ್ಮಾನದಂತೆ, ವರ್ತಿಸ ಬಹುದು, ಬಾಳಬಹುದು ಎಂಬ ಅವ್ಯವಸ್ಥೆಯಿದ್ದಿದ್ದರೆ ದೇವರ ರಾಜ್ಯವು ಸಾವಿರಾರು ಮಿಲಿಯವರ್ಷ ಬಾಳಿಕೊಂಡು ಬರುತ್ತಿತ್ತೆ? ಅಲ್ಲ. ಶಿಕ್ಷೆ ಇರ ಬೇಕಾದುದು ನ್ಯಾಯವೇ ಎಂದಾದರೆ, ಶಿಕ್ಷೆ ನರಕಯಾತನೆ, ಕೆಟ್ಟ ಪುನರ್ಜನ್ಮ ಗಳು, ಅನಿರೀಕ್ಷಿತ ದುಃಖ, ಅಲ್ಲದೆ ಮತ್ತ್ಯಾವವಾಗಬೇಕು?

೩೦. ಪಾಪಗಳ ವರ್ಗಗಳು ; ಪಾಪಿ ಜನ್ಮಗಳು ; ಪ್ರಾಯಶ್ಚಿತ್ತಗಳು

ಪುಣ್ಯ ಎಂದರೆ ದೇವರು ಮೆಚ್ಚುವ, ಶಾಸ್ತ್ರವು ಇದನ್ನು ಮಾಡು
ಪುಣ್ಯ ಬರುತ್ತದೆ, ಶ್ರೇಯಸ್ಸಾಗುತ್ತದೆ, ಎನ್ನುವ ನಮ್ಮನ್ನು ಮೋಕ್ಷದದಾ
ಯಲ್ಲಿ ಮುಂದರಿಯಲು ಸಹಾಯಮಾಡುವ ಕರ್ಮಗಳು. ಪಾಪ ಎಂದ
ದೇವರು ಮೆಚ್ಚದಿದ್ದು ಶಿಕ್ಷಿಸುವ, ನಮ್ಮನ್ನು ದೇವರಿಂದ, ಮೋಕ್ಷದಿಂದ
ಹಿಂದೆಳೆಯುವ, ಶಾಸ್ತ್ರವು ಮಾಡಬೇಡಎನ್ನುವ ಕರ್ಮಗಳು. ಜೀವಾತ್ಮನ
ಪುಣ್ಯ ಅಥವಾ ಶುಭಕರ್ಮಗಳನ್ನೇ ಅತ್ಯಧಿಕವಾಗಿ ಮಾಡಿದರೆ ದೇವತ್
ಹೊಂದುವನು. ಪಾಪಪುಣ್ಯ ಸಾಧಾರಣ ಸಮಪ್ರಮಾಣದಲ್ಲಿ ಮಾಡಿದ
ಮನುಷ್ಯತ್ವಹೊಂದುವನು. ಅಶುಭ ಅಥವಾ ಪಾಪಕರ್ಮಗಳೇ ಅತಿಹೆಚ್ಚಿದ್ದ
ಅಲ್ಪತರದಜನ್ಮಪಡೆಯುವನು. ನರಕಯಾತನೆ ದೀರ್ಘಕಾಲಅನುಭವಿಸುವನು

ಪಾಪಗಳಲ್ಲಿ ವರ್ಗಗಳು

ಪಾಪಗಳಲ್ಲಿ ಮಹಾಪಾತಕ, ಉಪಪಾತಕ, ಸಾಮಾನ್ಯ ಪಾತಕಗಳೆ
ಮೂರು ವಿಭಾಗಗಳಿವೆ. ಮಹಾಪಾತಕಗಳ್ಯಾವವೆಂದರೆ ಬ್ರಹ್ಮಹತ್ಯಾ, ಕಳ
ಕುಡಿಯುವುದು, ಬ್ರಾಹ್ಮಣರ ಚಿನ್ನ ಕಳುವುದು, ಗುರುಗಳ ಪತ್ನೀಸಂಗ ಎಂ
ನಾಲ್ಕು. ಈ ನಾಲ್ಕುವರ್ಗದವರ ಸಂಪರ್ಕ (ಒಂದು ವರ್ಷ) ಮಾಡುವವನ
ಮಹಾ ಪಾತಕಿಯಾಗುತ್ತಾನೆ (ಮನು ೧೧, ೫೪).

ಬ್ರಹ್ಮಹತ್ಯಾ : ಕ್ರೋಧ, ದ್ವೇಷ, ಭಯ, ಅಥವಾ ಲೋಭದಿಂದ
ಅಥವಾ ಸ್ತ್ರೀಸಂಬಂಧವಾಗಿ ಬ್ರಾಹ್ಮಣನನ್ನು ಕೊಲ್ಲುವವ ; ಬ್ರಾಹ್ಮಣೇತರನ
ತಾನು ಬ್ರಾಹ್ಮಣನೆಂದು ಸುಳ್ಳುಹೇಳುವುದು ಇನ್ನೊಬ್ಬನ ಮರಣಕ್ಕೆ ಕಾರಣ
ವಾದ ಪರದೋಷವನ್ನು ರಾಜನಿಗೆ ಚಾಡಿಹೇಳುವುದು ಗುರುಗಳಲ್ಲಿ ಸುಳ್ಳಾಡ
ವುದು (ಮನು ೧೧ ೫೫), ಗುರುವನ್ನು ವಿರೋಧಿಸುವುದು ಲೋಕಕ್ಕೆ ಉದ್ವೇ
ಗೊಳಿಸುವುದು, ಬ್ರಾಹ್ಮಣರು ಬಹುಕಾಲ ಉಪಭೋಗಿಸಿದ ಭೂಮಿ, ಹೊ
ಬ್ರಾಹ್ಮಣರ ಹಣ ಅಪಹರಿಸುವುದು (ಭವಿಷ್ಯ ಉ. ೭ ೫) ಇವು ಕೆಲವು ಬ್ರಹ
ಹತ್ಯಾ ಪಾಪಗಳು.

ಸುರಾಪಾನ ಕಲಿತು ವೇದ ಮರೆಯುವುದು, ವೇದವಿರುದ್ಧ ಶಾಸ
ಕಲಿತು, ವೇದ (ಶಾಸ್ತ್ರ) ನಿಂದಿಸುವುದು. ಸುಳ್ಳುಸಾಕ್ಷಿ ಹೇಳುವುದು

ಬ್ರಾಹ್ಮಣೇತರನಾದ ಗೆಳೆಯನನ್ನು ಕೊಲ್ಲುವುದು, ತಿನ್ನಬಾರದ ನಿಷಿದ್ಧ ಪದಾರ್ಥ ತಿನ್ನುವುದು (ಮನು ೧೧ ೫೭), ಮಾತಾಪಿತೃ ಪರಿತ್ಯಾಗ, ಯಜ್ಞ ಕರ್ಮ ಪರಿತ್ಯಾಗ, ಪುರ ಮತ್ತು ಗ್ರಾಮಗಳಿಗೆ ಬೆಂಕಿ ಹಿಡಿಸುವುದು (ಭವಿಷ್ಯ ೮ ಅ ೫). ಇವು ಸುರಾಪಾನದಪಾಪಕ್ಕೆ ಸಮಾನ.

ಸ್ವರ್ಣಸ್ತೇಯ : ನಿಕ್ಷೇಪ ನಿಧಿ ಅಥವಾ ಅಡವಿಟ್ಟನಿಧಿ ಅಪಹರಣೆ, ಮನುಷ್ಯ, ಕುದುರೆ, ಬೆಳ್ಳಿ, ಭೂಮಿ, ವಜ್ರ, ರತ್ನಗಳ ಅಪಹರಣೆ (ಮನು ೧೧, ೫೭), ಸ್ತ್ರೀ, ಗೋವು, ಭೂಮಿ, ವಸ್ತ್ರ ಇವುಗಳನ್ನು ದಾನಮಾಡಿ ಪುನಃ ಅಪಹರಿಸುವುದು (ಭವಿಷ್ಯ ಅ ೫), ಚಿನ್ನದ ಅಪಹರಣೆಗೆ ಸಮಾನ.

ಗುರುದಾರಾಗಮನ : ಒಡಹುಟ್ಟಿದ ಅಕ್ಕತಂಗಿ, ಚಂಡಾಲಕನ್ಯೆ, ಗೆಳೆಯರಪತ್ನಿ, ಸೊಸೆಯರು ಇವರಲ್ಲಿ ಸಂಭೋಗ (ಮನು ೧೧ ೫೮), ವಿವಾಹ ಯೋಗ್ಯಳಾದ ಕನ್ಯೆಯನ್ನು ವಿವಾಹಮಾಡದಿರುವುದು, ಅವಿವಾಹಿತ ಕನ್ಯಾ ಗಮನ, ಅಸವರ್ಣ ಸ್ತ್ರೀಗಮನ (ಭವಿಷ್ಯ ಅ ೫), ಇವು ಗುರುದಾರಾಗಮನಕ್ಕೆ ಸಮಾನ. ಮಹಾಪಾತಕಗಳ ಪಾಪವು ಏಳುಜನ್ಮಗಳವರೆಗೂ ಮುಂದುವರಿಯು ವುದುಂಟು. ತಾರಕನಕತೆಯಲ್ಲಿ ಅವ ತಾಯಿಯನ್ನು ಅಪಮರ್ಯಾದೆ ಮಾಡಿ ದ್ದಕ್ಕೆ ಏಳುಜನ್ಮದ ಕಷ್ಟ, ಅವನ ತಾಯಿ ಪತಿಯನ್ನು ತುಳಿದದ್ದಕ್ಕೆ ಏಳುಜನ್ಮ ಗಳ ವಿಧವತ್ವ ಶಿಕ್ಷೆ, ಪಡಿದಿದ್ದಳಷ್ಟೆ! ಸಂದರ್ಭಾನುಸಾರ ಬೇರೆ ದೋಷಗಳೂ ಮಹಾಪಾತಕಗಳ ಮಟ್ಟದವಾಗುತ್ತವೆಂದು ತೋರುತ್ತದೆ.

ಉಪಪಾತಕಗಳು : ಗೋವಧೆ, ಜಾತಿಯಿಂದಲೂ ಕರ್ಮದಿಂದಲೂ ದುಷ್ಟರಾದವರಿಗೆ ಯಜ್ಞಮಾಡಿಸುವುದು ಪರಸ್ತ್ರೀಗಮನ, ತನ್ನನ್ನು ಮಾರಿ ಕೊಳ್ಳುವುದು, ತಾಯಿತಂದೆ ಗುರುಗಳ ಸೇವೆಮಾಡದಿರುವುದು, ಬ್ರಹ್ಮಯಜ್ಞ, ಔಪಾಸನೆ ವೈಶ್ವದೇವಬಿಡುವುದು, ಪುತ್ರನನ್ನು ಬಿಡುವುದು (ಉಪನಯನ ಮಾಡದಿರುವುದು) ಅಣ್ಣನಿಗಿಂತ ಮುಂಚೆ ವಿವಾಹವಾದವ, (ಅಣ್ಣ ವಿವಾಹದ ಯೋಚನೆ ಬಿಟ್ಟಾಗ ಅಡ್ಡಿಯಿಲ್ಲ) ಬ್ರಹ್ಮಚಾರಿಯು ಸ್ತ್ರೀ ಸಂಭೋಗ ಮಾಡುವುದು, ಶಾಸ್ತ್ರೋಕ್ತವಿಹಿತ ಕಾಲ ಮೀರಿ ಉಪನಯನವಿಲ್ಲ ದಿರುವುದು (ಬ್ರಾಹ್ಮಣನಿಗೆ ೧೬ ವರ್ಷ, ಕ್ಷತ್ರಿಯನಿಗೆ ೨೨, ವೈಶ್ಯನಿಗೆ ೨೪ ವರ್ಷ) ನಿಷಿದ್ಧ ವಸ್ತುವಿಕ್ರಯ, (ಬ್ರಾಹ್ಮಣನು ಎಳ್ಳು, ರಸಪದಾರ್ಥ, ಹಾಲು, ಉಪ್ಪು ಇವನ್ನು ಅದಲು ಬದಲು ಮಾಡಿಕೊಳ್ಳಬಹುದು, ಮಾರಾಟವಲ್ಲ), ಸಂಬಳಕ್ಕಾಗಿ ವೇದಶಾಸ್ತ್ರ ಕಲಿಸುವುದು, ನೀರಿಗೆ ಅಡ್ಡ ಬರುವ ಅಣೆಕಟ್ಟು ಕಟ್ಟಿಸು ವುದು, ಸಸ್ಯಗಳನ್ನು ಕತ್ತರಿಸುವುದು, ಪತ್ನಿಯ ವ್ಯಭಿಚಾರದಿಂದ ಜೀವಿಸು

ವುದು, ಮಹಾಯಂತ್ರಗಳ ಸ್ಥಾಪನೆ, ಹಸಿಮರಗಳನ್ನು ಕಡಿಯುವುದು, ದೇವ ಪಿತೃ ಮೊದಲಾದವರ ಉದ್ದೇಶವಿಲ್ಲದೆ ಕೇವಲ ತಮಗಾಗಿಯೇ ಅಡುಗೆಮಾಡಿ ಕೊಳ್ಳುತ್ತಿರುವುದು, ನೀರುಳ್ಳಿ ಮುಂತಾದ ನಿಷಿದ್ಧ ವಸ್ತು ತಿನ್ನುವುದು, ದೇವ ಋಷಿ ಪಿತೃಋಣ ಪರಿಹರಿಸಿಕೊಳ್ಳದಿರುವುದು, ಕಳವು (ಚಿನ್ನವಲ್ಲದ ಇತರವು), ಸ್ಮೃತಿಗಳಿಗೆ ವಿರುದ್ಧವಾದ ಶಾಸ್ತ್ರ ಕಲಿಯುವುದು, ನೃತ್ಯ ಗೀತ ವಾದ್ಯ ಮುಂತಾದ ಗಾಯಕ ವೃತ್ತಿ, ಮದ್ಯಕುಡಿದಿರುವ ಸ್ತ್ರೀ ಸಂಭೋಗ, ಸ್ತ್ರೀ, ಶೂದ್ರ. ವೈಶ್ಯ ಕ್ಷತ್ರಿಯ ವಧೆ, ಪರಲೋಕ ದೇವರು ಇಲ್ಲವೆಂಬ ನಾಸ್ತಿಕತೆ ಇವು ಉಪಪಾತಕಗಳು (ಮನು ೧೧, ೫೯-೬೬). ಅತಿಕೋಪ, ಅತಿಗರ್ವ ಡಾಂಭಿಕತ್ವ, ಕೃತಘ್ನತೆ ಅತಿಯಾದ ವಿಷಯಾಸಕ್ತಿ, ಧರ್ಮಕೃತ್ಯಗಳಿಗೆ ಭಂಗ ತರುವುದು, ಸ್ತ್ರೀರಕ್ಷಣ ತ್ಯಾಗ, ಸಾಲತೀರಿಸದಿರುವುದು, ಹೆಚ್ಚು ಹಣದ ಬಡ್ಡಿ ಯಿಂದ ಜೀವಿಸುವುದು, ನಿಂದಿತನಿಂದ ದ್ರವ್ಯಪರಿಗ್ರಹ, ಮಾರಣ, ವಿಷ ತಯಾ ರಿಸುವುದು. ವ್ರತ ಪರಿತ್ಯಾಗ, ಪರ್ವಕಾಲದಲ್ಲಿಯೂ ಯೋನಿವ್ಯತಿರಿಕ್ತಪ್ರದೇಶ ದಲ್ಲಿಯೂ ಪಶುಯೋನಿಯಲ್ಲಿಯೂ ರಜಸ್ವಲಾಯೋನಿಯಲ್ಲಿಯೂ ಮೈಥುನ ಮಾಡುವುದು. ತಟಾಕ ಸೇತುವೆ ಬೇಧಿಸುವುದು. ಪಂಕ್ತಿಬೇಧ ಇವೂ ಉಪ ಪಾತಕಗಳು (ಭವಿಷ್ಯ ಅ ೫), ಪಿತೃದೇವಪೂಜೆ. ವರ್ಣಕರ್ಮ ತ್ಯಜಿಸುವುದು, ಪತಿ ಹೆಂಗಸಿನ ವಿಧೇಯತೆಯಲ್ಲಿರುವುದು ಉಪಪಾತಕ (ಸ್ಕಾಂದ ಕೌ ಅ ೪೧).

ಉಪಪಾತಗಳಲ್ಲಿ ಮಹಾಯಂತ್ರ ನಿರ್ಮಾಣವು ಸರ್ವನಾಶಕ ಎಂದು ವಿಷ್ಣುಪುರಾಣದಲ್ಲಿದೆ. ಉತ್ತರಹಿಂದೂಸ್ಥಾನದ ಮನುಸ್ಮೃತಿಯಲ್ಲಿ ಶ್ಲೋಕ ೬೩ರಲ್ಲಿ "ಮಹಾಯಂತ್ರ ಪ್ರವರ್ತನಾಮ್" ಎಂದಿದೆ. ವಿಜ್ಞಾನದ ವಿಪರೀತ ಬೆಳವಣಿಗೆಯಿಂದ ಸರ್ವನಾಶ ಎಂಬ ಬೇರೆ ಸೂಚನೆಗಳೂ ಶಾಸ್ತ್ರದಲ್ಲಿವೆ. ಸಾಮಾನ್ಯಪಾತಕಗಳಲ್ಲಿ ಧನುಸ್ಸು. ಶಸ್ತ್ರ ಮತ್ತು ಶಲ್ಯಗಳನ್ನು ಮಾಡುವವ, ಮಾರುವವ, ಕೆಲಸದವರಲ್ಲಿ ದಯೆಯಿಲ್ಲದವ. ಹಸಿವೆಯಿಂದ ಭಾರ್ಯೆ, ಪುತ್ರ, ಮಿತ್ರ, ರೋಗಿ. ಭೃತ್ಯ, ಅತಿಥಿ, ಬಂಧುಗಳನ್ನು ಪೀಡಿಸುವವ, ಯಾವಾಗಲೂ ಅಶಕ್ತರನ್ನು ಪೋಷಿಸದೆ ಅವರಿಂದ ಕಾರ್ಯಮಾಡಿಸುವವ. ಹೊರಲಾರದ ಹೊರೆಹೊರಿಸುವವ. ಗಾಯಗೊಂಡಪ್ರಾಣಿಗಳ ಮೇಲೆ ಹೊರೆಹೊರಿಸುವವ. ಕೈಕಾಲು ಪೆಟ್ಟಾದ ಅಥವಾ ರೋಗಾರ್ತ ಪಶುವನ್ನು ಪಾಲಿಸದವ ಅನಾಥ ವಿಕಲಾಂಗ, ಬಾಲ ವೃದ್ಧ, ಕೃಶ, ಆತುರ ಇವರ ವಿಷಯ ದಯೆತೋರಿಸದ ಮೂಢ, ಶಾಸ್ತ್ರೋಕ್ತ ಕಂದಾಯದ ಪರಿಮಿತಿಮೀರಿ ಕಂದಾಯ ವಸೂಲು ಮಾಡುವ ರಾಜ, ದಂಡನೆಯಲ್ಲಿಅತ್ಯಾಸಕ್ತನಾದ ರಾಜ, ಲಂಚತಿನ್ನುವ ಅಧಿಕಾರಿ

ಗಳು, ಕಳ್ಳರು ತುಂಬಿರುವ ರಾಜ್ಯದ ರಾಜ, ನರಕಗಾಮಿಗಳು (ಭವಿಷ್ಯ, ಉತ್ತರ, ಅ–೫).

ಕೆಲವು ಪಾಪಕರ್ಮಗಳಿಗೆ ಮುಂದೆ ಕೆಟ್ಟ ಜನ್ಮಗಳು

ಸುಳ್ಳನ್ನು ಹೇಳುವವನು ಗದ್ಗದ ಭಾಷಿಯಾಗುವನು, ಗೋವಿಗಾಗಿ ಸುಳ್ಳು ಹೇಳುವವನು ಮೂಕನಾಗುವನು. ಗುರುತಲ್ಪಗಾಮಿಯು ಕೆಟ್ಟ ಚರ್ಮರೋಗದವನಾಗುವನು. ಸ್ವೇಚ್ಛೆಯಿಂದ ಸ್ತ್ರೀಸಂಭೋಗ ಮಾಡುವವನು ನೀಚಯೋನಿಯಲ್ಲಿ ಜನಿಸುವನು. ದಾನ ಮಾಡದವನು ದರಿದ್ರನಾಗುವನು (ದರಿದ್ರೋಽದತ್ತ ದಾನತಃ). ಕರೆಸಿಕೊಳ್ಳದೆ ಊಟಕ್ಕೆ ಹೋಗುತ್ತಿರುವವನು ನಾಯಿಯಾಗುವನು. ಊಟ ಕೊಡುವವರ ಯೋಗ್ಯತೆ ನೋಡದೆ ಭೋಜನ ಮಾಡುವವನು ನಿರ್ಜನಾರಣ್ಯದಲ್ಲಿ ಕೋತಿಯಾಗುವನು. ಸಲ್ಲದ ವಿದ್ಯೆ ಕಲಿಸುವವನು ಎತ್ತಾಗಿ ಜನಿಸುವನು. ಮಾತ್ಸರ್ಯದಿಂದ ಕುದಿಯುವವನು ಜಾತಿಯಿಲ್ಲದವನಾಗುವನು. ಪುಸ್ತಕ ಕದಿಯುವವನು ಕುರುಡನಾಗುವನು (ಮುಂಚೆ ಹಸ್ತಪ್ರತಿ ಶಾಸ್ತ್ರಗ್ರಂಥಗಳು ಬಹಳ ಅಪೂರ್ವ, ಅಮೂಲ್ಯ). ಫಲಗಳನ್ನು ಅಪಹರಿಸುತ್ತ ಬರುವವನ ಸಂತತಿ ನಾಶವಾಗುವುದು. ವಿಷವನ್ನಿಕ್ಕಿದವನು ಸರ್ಪವಾಗುವನು. ಜಲವನ್ನು ಕದ್ದವನು ವಾತರೋಗಿಯಾಗುವನು, ರಜಸ್ವಲೆಕೂಡಿದವನು ಸರ್ಪವಾಗುವನು. ಮಾಡಬಾರದ್ದು ಮಾಡುವವನಿಗೆ ನೇತ್ರದೋಷಬರುವುದು. ಅಯೋನಿಗಾಮಿಯು ತೋಳನಾಗುವನು. ವ್ಯಾಪಾರದಲ್ಲಿ ವಂಚನೆಮಾಡುವವನು ಗೂಬೆಯಾಗುವನು. ಸಹೋದರಿಯನ್ನು ಕೂಡಿದವನು ಷಂಡನಾಗುವನು. ಕುಪಂಡಿತನು ಮಾರ್ಜಾಲನಾಗುವನು. ಬೇಧವನ್ನು ಬೋಧಿಸುವ ಪೌರಾಣಿಕನು ನಾಯಿಯಾಗುವನು (ಸ್ಕಾಂದ ಅವಂತ್ಯ ೩ ; ರೇವಾ–೧೫೫). ಕೆಲವು ಶಿಕ್ಷೆಗಳು ಅಲ್ಪಜನ್ಮಗಳನ್ನು ದಾಟಿ ಮಾನವಜನ್ಮಕ್ಕೆ ಬಂದಾಗ ಬರುವವು.

ತಪ್ಪಿಲ್ಲದ ಪತ್ನಿಯನ್ನು ತ್ಯಜಿಸಿದವ ತಾಮಿಸ್ರನರಕದಲ್ಲಿ ೧೦೦ ವರ್ಷ ಇದ್ದು ಚರ್ಮರೋಗ, ದೌರ್ಭಾಗ್ಯವಂತನಾದ ಮಾನವಜನ್ಮ ಪಡೆಯುವನು. ಅಳತೆಯಲ್ಲಿಯೂ ತೂಕದಲ್ಲಿಯೂ ಮೋಸಮಾಡುವ ವರ್ತಕ, ಸುಳ್ಳುಸಾಕ್ಷಿ ಹೇಳುವವ, ಇಬ್ಬರೂ ಅಂಧತಾಮಿಸ್ರನರಕದಲ್ಲಿ ಲಕ್ಷ ವರ್ಷವಿದ್ದು ಶತ್ರುಗಳ ಮನೆಯಲ್ಲಿ ಕುರುಡರಾಗಿ ಹುಟ್ಟುವರು. ಪಿತೃಗಳಿಗೂ ದೇವತೆಗಳಿಗೂ (ವೈಶ್ವದೇವದ ಮೂಲಕ) ಮತ್ತು ಬ್ರಾಹ್ಮಣರಿಗೂ ಅನ್ನ ನೀಡದೆ ಕೇವಲ ತನ್ನ

ಪೋಷಣೆ ಮಾಡಿಕೊಳ್ಳುತ್ತಾನೋ ಅವ ಕ್ರಿಮಿಭಕ್ಷ ನರಕ ಅನುಭವಿಸಿ, ರೋಗಿ ಯಾಗಿ ಮಾನವನಾಗಿ ಹುಟ್ಟಿ ಪರದ್ರವ್ಯ ಆಶಿಸುವನು. ತಮ್ಮ ವರ್ಣಧರ್ಮ ದಿಂದ ಭ್ರಷ್ಟರಾದವರು ಅಮೇಧ್ಯಪೂರಿತ ನರಕದಲ್ಲಿ ೧೦,೦೦೦ ವರ್ಷ ಬಿದ್ದಿದ್ದು, ನಾನಾ ವ್ಯಾಧಿಗಳಿರುವ ಮಾನವರಾಗುವರು. ಲೋಭದಿಂದ ಮೋಹದಿಂದ ಅಗ್ನಿಯನ್ನೂ ವಿಷವನ್ನೂ ಪ್ರಯೋಗಿಸುವ ದುರಾತ್ಮರು ವಿಷ ಭರಿತ ನರಕದಲ್ಲಿ ೧೦೦೦ ವರ್ಷ ಮುಳುಗುತ್ತ ದೀನಮನುಷ್ಯರಾಗಿ ಜನಿಸುವರು. (ಸ್ಕಾಂದ ೫, ಅವಂತ್ಯ ೩, ರೇವಾ ೧೫೫) ಪತಿಯು ಅಲ್ಪನೆಂದು ತಿರಸ್ಕಾರ ಮಾಡುವ ಪತ್ನಿ ಹಾವಾಗುತ್ತಾಳೆ. ಗುರುದ್ರೋಹಿ, ಕೃತಘ್ನ, ನಾಸ್ತಿಕರು, ಶರಣಾಗತರನ್ನು ತ್ಯಾಗಮಾಡಿದವರು ಎಲ್ಲ ಕ್ರಿಮಿಗಳಾಗಿ, ಸರ್ಪಗಳಾಗಿ, ಕೆಟ್ಟ ಮೃಗಗಳಾಗಿ, ಅನಂತರ ದುರ್ಜನ ಮಾನವರಾಗುವರು. ಸೂರ್ಯ ಚಂದ್ರರ ಗ್ರಹಣ ಕಾಲದಲ್ಲಿ ಭೋಜನಮಾಡಿದವರು ಆನೆಯ ಜನ್ಮಪಡೆಯುತ್ತಾರೆ.

ಈ ಕಾಲದಲ್ಲಿ ಸರ್ಕಾರವು ಸನಾತನಧರ್ಮದವರಿಗೆ ಅವರವರ ಜಾತಿ ಧರ್ಮಬಿಡಲು ಬೋಧಿಸುತ್ತಬಂದಿದೆ. ಯುವಕರು ಅನೇಕರು ಹಾಗೆ ಮಾಡು ತ್ತಿದ್ದಾರೆ. ಆದರೆ ಶಾಸ್ತ್ರದಲ್ಲಿ ಅಂಥವರಿಗೆ ಅನೇಕರೀತಿಯ ಬಾಧೆಗಳು, ಕುಂಭೀ ಪಾಕದ ನರಕಯಾತನೆ, ಮುಂತಾದವು ಹೇಳಲ್ಪಟ್ಟಿವೆ (ಮನು ೧೨ ೭೬) ಶಾಸ್ತ್ರವಿಧಿಸುವುದು ಮಾಡಿದರೆ ಪುಣ್ಯ; ಅದಕ್ಕೆ ವಿರುದ್ಧ ನಡೆದರೆ ಪಾಪ ಖಂಡಿತ (ಭಾಗವತ ೧೧, ೨೧, ೨೨). ವರ್ಣಧರ್ಮ ಖಂಡಿಸುವ ರಾಜ ತನ್ನ ಪುಣ್ಯವನ್ನೆಲ್ಲ (ಇದ್ದರೆ) ಕಳಕೊಂಡು ವಿಪರೀತ ಪಾಪಕಟ್ಟಿಕೊಳ್ಳುತ್ತಾನೆ ಎನ್ನು ತ್ತದೆ ಶಾಸ್ತ್ರ. ಮರಣದಆಚೆ ನರಕಶಿಕ್ಷೆಯಾಗುವಾಗ ಸರ್ಕಾರ ರಕ್ಷಿಸದು!

ಪಾಪದ ಪರಿಹಾರಕ್ಕೆ ಪ್ರಾಯಶ್ಚಿತ್ತಗಳು

ತಾನು ಮಾಡಿದ ದೊಡ್ಡಪಾಪಕ್ಕೆ ಮುಂದೆ ವಿಪರೀತ ನರಕಯಾತನೆ, ಅಲ್ಪಜನ್ಮಗಳು ಬರುತ್ತವಲ್ಲ ಎಂಬ ಜ್ಞಾನ ಬಂದು ಬಹಳಕಳವಳಗೊಂಡವ, ಅದಕ್ಕಿಂತ ಈ ಜನ್ಮದಲ್ಲಿಯೇ ಎಷ್ಟೋ ಕಡಿಮೆ ಕಷ್ಟದ್ದಾದ ಶಾಸ್ತ್ರ ವಿಧಿಸುವ ಪ್ರಾಯಶ್ಚಿತ್ತವನ್ನು (ಶಾಸ್ತ್ರಬಲ್ಲ ಉತ್ತಮ ಪಂಡಿತರಿಗೆ ತನ್ನ ತಪ್ಪುತಿಳಿಸಿ, ಕಷ್ಟ ತಿಳಿಸಿ, ಅವರು ವಿಧಿಸಿದ್ದನ್ನು) ಮಾಡಿಕೊಂಡು ಮುಂದಿನ ಬಹಳಕಷ್ಟ ತಪ್ಪಿಸಿಕೊಳ್ಳಲಾಪ. ಕೆಲವುಪ್ರಾಯಶ್ಚಿತ್ತಗಳಿಂದ ಮರಣವೇ ಉಂಟಾಗುತ್ತದೆ ಶ್ರೀ ಆದಿಶಂಕರರು ಕುಮಾರಿಲರಿಂದ ತಮ್ಮಧರ್ಮ ಪ್ರಚಾರ ಕಾರ್ಯಕ್ಕೆ ಬಹಳ ಪ್ರಯೋಜನ ಪಡೆಯಲಿಕ್ಕೆಂದು ಅವರನ್ನು ಕಾಣಲು ಹೋದಾಗ ಅವರು

ಸುತ್ತಲೂ ಬೆಂಕಿಹಾಕಿಕೊಂಡು, ಗುರುನಿಂದೆಯ ಪಾಪದಪರಿಹಾರಕ್ಕೆ ಮರಣದ ವರೆಗೆ ದೇಹ ಸುಟ್ಟುಕೊಳ್ಳುವ ಪ್ರಾಯಶ್ಚಿತ್ತದಲ್ಲಿದ್ದರು. ಅದನ್ನು ಬಿಟ್ಟು ಬರಲು ಒಪ್ಪಲಿಲ್ಲ. ಬ್ರಾಹ್ಮಣನು ಬೇಕೆಂದೇ ಮದ್ಯಕುಡಿದರೆ ಕುದಿಯುವ ತುಪ್ಪಕುಡಿದು ಸಾಯಬೇಕೆಂಬುದೇ ಪ್ರಾಯಶ್ಚಿತ್ತ (ಮನು ೧೧, ೮೦). ಕೆಲವಲ್ಲಿ ೧೨ ವರ್ಷ ಕಾಲದ ಕಷ್ಟದ ಜೀವನ ಹೇಳಿದೆ. ಮನುಧರ್ಮ ಶಾಸ್ತ್ರದಲ್ಲಿ ಹಲವುತರದ ಪ್ರಾಯಶ್ಚಿತ್ತಗಳು ವಿವರಿಸಲ್ಪಟ್ಟಿವೆ. ಅತಿ ಕಠಿಣದವನ್ನು ಈ ಕಾಲದ ಜನರು ಮಾಡುವುದು ತೀರಾ ಅಸಂಭವ.

ಕೆಲವಲ್ಲಿ ಮುಖ್ಯವಾಗಿ ಉಪವಾಸ ವಿಧಿಸಿದೆ. ಚಾಂದ್ರಾಯಣ ಕೃಚ್ಛ್ರದಲ್ಲಿ ಹುಣ್ಣಿಮೆ ದಿನ ೧೫ ಕವಳ (ಕೋಳಿ ಮೊಟ್ಟೆ ಗಾತ್ರದಷ್ಟು ಅನ್ನ) ಮರುದಿನದಿಂದ ದಿನಕ್ಕೆ ಒಂದೊಂದರಂತೆ ಕಡಿಮೆಕವಳ ಅನ್ನ, ಅಮಾವಾಸ್ಯೆದಿನ ಪೂರ್ಣಉಪವಾಸ, ಅನಂತರ ದಿನಕ್ಕೆ ಒಂದೊಂದು ಕವಳದಂತೆ ಜಾಸ್ತಿಅನ್ನ, ಹುಣ್ಣಿಮೆಂದಿನ ಪೂರ್ಣಕವಳ, ಉಣ್ಣಬೇಕು. ಪ್ರಾಜಾಪತ್ಯ ಕೃಚ್ಛ್ರದಲ್ಲಿ ಮೊದಲನೆ ಮೂರುದಿನ ಹಗಲುಭೋಜನ, ಆಮೇಲೆ ಮೂರುದಿನ ಯಾಚಿಸದೆ ಬಂದುದರಲ್ಲಿ ತೃಪ್ತಿ, ಅನಂತರದ ಮೂರುದಿನಉಪವಾಸ ವಿಧಿಸಲ್ಪಟ್ಟಿದೆ. ಸಂತಾಪನ ಕೃಚ್ಛ್ರದಲ್ಲಿ ಗೋಮೂತ್ರ, ಗೋಮಯ ಹಾಲು, ಮೊಸರು, ತುಪ್ಪ, ದರ್ಭೆ ನೀರು (ಪಂಚಗವ್ಯ) ಮಾತ್ರ ಕುಡಿದು ಒಂದುದಿನ, ಮರುದಿನ ಉಪವಾಸಮಾಡಬೇಕು. ಹನ್ನೆರಡುದಿನದ ಸಂಪೂರ್ಣ ಉಪವಾಸವು ಎಲ್ಲ ಪಾಪ ಪರಿಹರಿಸುತ್ತದೆ (ಮನು ಅ ೧೧). ಆದರೆ ದಿನಕ್ಕೆ ೫-೬ ಸಾರಿ ಕಾಫಿ, ಟೀ ಕುಡಿಯುವ ಈ ಕಾಲದವರು ಇವನ್ನು ಮಾಡುವರೇ ?

ಶಾಸ್ತ್ರದಲ್ಲಿ ಮತ್ತೂ ಕೆಲವು ಕ್ರಮಗಳಿವೆ, ಕೆಲವನ್ನು ಮಾದರಿಯಾಗಿ ಇಲ್ಲಿ ಕೊಡುತ್ತೇನೆ. ವಿಧಿವತ್ತಾಗಿ ಸ್ನಾನಮಾಡು, ನಿತ್ಯವೂ ಏಕಾಗ್ರತೆಯಿಂದ ಪುರಾಣ ಕೇಳು ; ಅದೂ ಆಗದಿದ್ದರೆ ಆಶೆಗಳನ್ನು ಬಿಟ್ಟು ಮಹೇಶ್ವರನನ್ನು ಪೂಜಿಸು ; ಅಥವಾ ವಿಷ್ಣುವಲ್ಲಿ ಭಕ್ತಿಮಾಡು ಅಥವಾ ಸನ್ಯಾಸಹೊಂದು ; ಅಥವಾ ನಿತ್ಯವೂ ಶ್ರದ್ಧೆಯಿಂದ ರುದ್ರ ಜಪಿಸು ; ಅಥವಾ ಮಾಘಮಾಸದಲ್ಲಿ ಪ್ರಾಥಃಸ್ನಾನವನ್ನಾದರೂ ಮಾಡು ಮತ್ತು ಭಕ್ತಿಯಿಂದ ಧರ್ಮವನ್ನಾಚರಿಸು. ಆಗ ನರಕಶಿಕ್ಷೆಬಾರದು (ಪದ್ಮಪುರಾಣ, ಪಾತಾಳ, ಅ ೧೧೦, ೪-೨೬, ೩೮).

ಬ್ರಾಹ್ಮಣನು ಚಂಡಾಲನ ಅನ್ನ ಉಂಡರೆ ೧೦ ದಿನರಾತ್ರಿ ಬಾರ್ಲಿ ಗೋಮೂತ್ರ ಪ್ರಾಶನಗಳಲ್ಲಿರಬೇಕು. ಶೂದ್ರ ಸ್ತ್ರೀಸಂಗಮಾಡಿದವ ೩ವರ್ಷ ಬೇಡಿ ಜೀವಿಸಬೇಕು. ಗೋವಿನಮಾಂಸ, ಚಂಡಾಲನ ಅನ್ನ, ಹೊಲಸು ತಿಂದರೆ

ಚಾಂದ್ರಾಯಣ ಮಾಡಬೇಕು. ಸೂತಕದ ಬ್ರಾಹ್ಮಣನ ಅನ್ನ ಉಂಡರೆ ಪ್ರಾಣಾಯಾಮದಿಂದ ಪಾಪಪರಿಹಾರ. ನಿತ್ಯದ ಸ್ನಾನಬಿಟ್ಟರೆ ಮೂರುಪ್ರಜಾಪತ್ಯ ಕೃಚ್ಛ್ರಮಾಡಬೇಕು ಮತ್ತು ಒಂದು ಗೋವನ್ನು ದಾನಮಾಡಬೇಕು. ೧,೦೦,೦೦೦ ಗಾಯತ್ರೀ ಜಪದಿಂದ ಹಲವು ತರದ ತಪ್ಪುಗಳ ಪಾಪವು ನಾಶವಾಗುತ್ತದೆ (ಪರಾಶರ ಸ್ಮೃತಿ ಅ ೪ ಮತ್ತು ೧). ಸ್ತ್ರೀಯರು ಮಕ್ಕಳು ಮುದುಕರು ಶುದ್ಧ ಬ್ರಾಹ್ಮಣರ ಪ್ರಾಯಶ್ಚಿತ್ತಕ್ಕಿಂತ ಇತರರಿಗೆ ಕಡಿಮೆ ಪ್ರಾಯಶ್ಚಿತ್ತ. ಪುನಃ ಪುನಃ ಅದೇತಪ್ಪಿಗೆ ಪ್ರಾಯಶ್ಚಿತ್ತ ಅಧಿಕ.

ನಿತ್ಯ ಗೋಗ್ರಾಸಕೊಡುವವ ಸಾವಿರಾರು ವರ್ಷ ಸ್ವರ್ಗದಲ್ಲಿರುವನು. ಬ್ರಾಹ್ಮಣ ತಿಳಿಯದೆ ಸುರೆಕುಡಿದರೆ ಪುನರುಪನಯನವಾಗಬೇಕು. ಏಕರಾತ್ರಿ ಉಪವಾಸ ಮತ್ತು ಪಂಚಗವ್ಯಪ್ರಾಶನವು ಅತ್ಯಂತ ಪಾಪನಿವಾರಕ. ಗಂಜಲವು ಗಂಗಾಜಲಕ್ಕೆ ಸಮಾನ. ನಿತ್ಯ ಸಗಣಿಯಿಂದ ಮನೆಸಾರಿಸಬೇಕು. ೨೧ ದಿನ ಕೇವಲ ಗೋವಿನಹಾಲಲ್ಲಿದ್ದರೆ ಕೃಚ್ಛ್ರಾತಿಕೃಚ್ಛ್ರವಾಗುತ್ತದೆ. ಸರ್ವ ಅಶುಭನಾಶಕ ಕೃಚ್ಛ್ರಗಳು ದ್ವಿಜರಿಗೆ ವಿಧಿಸಲ್ಪಟ್ಟವು. ಅವುಗಳ ಆರಂಭದಲ್ಲಿ ಕ್ಷೌರಮಾಡಿಸಿಕೊಳ್ಳಬೇಕು. ಕೃಚ್ಛ್ರ ಕಾಲದಲ್ಲಿ ಸ್ತ್ರೀಯರೊಡನೆ, ಪತಿತರೊಡನೆ ಅಶುದ್ಧರೊಡನೆ ಮಾತಾಡಬಾರದು; ತ್ರಿಕಾಲಸ್ನಾನ ಪೂಜೆ, ಹೋಮ, ಜಪ ಮಾಡಬೇಕು. ವೀರಾಸನದಲ್ಲಿ ಕುಳಿತಿರಬೇಕು. ನಿದ್ರೆ ನೆಲದಮೇಲೆ ಮಾತ್ರ (ವಿಷ್ಣುಧರ್ಮೋತ್ತರ, ದ್ವಿತೀಯ ಅ ೪೨ ಮತ್ತು ೧೨೧). ಮಾಂಸ ನಿಷೇಧ. ಬ್ರಹ್ಮಚರ್ಯ ಅಗತ್ಯ.

ಪುತ್ರ : ಮನುಷ್ಯನು ದೇವತೆಗಳಿಂದ ವಿಶ್ವದ ಪ್ರಯೋಜನ, ಮಳೆಯಿಂದ ಆಹಾರ ಮುಂತಾದ್ದು ಪಡೆದು ಅವರಿಗೆ ಋಣಿಯಾಗುವುದರಿಂದ ಆ ಋಣದ ಪರಿಹಾರಕ್ಕೆ ಅವರ ಪೂಜೆ, ಹೋಮಮಾಡಿ ಋಣತೀರಿಸಬೇಕು. ಋಷಿಗಳುವೇದವನ್ನು ಕಂಡು ನಮಗೆ ಕೊಟ್ಟರು. ನಮ್ಮ ಶಾಸ್ತ್ರವನ್ನು ಅವರು ತಿಳಿಸಿದರು. ಅವರ ಆ ಋಣಕ್ಕೆ ಶಾಸ್ತ್ರಕಲಿಯುವುದು ಪರಿಹಾರ. ನಮ್ಮ ಪಿತೃಗಳಿಂದ ಪಡೆದ ದೇಹದ ಋಣದಪರಿಹಾರಕ್ಕೆ ನಾವೂ ಗೃಹಸ್ಥರಾಗಿ ಪುತ್ರಸಂತಾನಪಡೆಯಬೇಕು. ಈ ಋಣತ್ರಯಪರಿಹಾರವಾಗದ ಮುನ್ನ ಸಾಮಾನ್ಯರು ಸನ್ಯಾಸಕ್ಕೆ ಹೋಗಕೂಡದು (ಮನು ೬, ೩೬). ಎಂದರೆ ವಿವಾಹವಾಗದೆ ಶಾಸ್ತ್ರಕಲಿತು ಅನುಸರಿಸದೆ ಇರಕೂಡದು.

ಪುತ್ರನಿಲ್ಲದವನು ಪಿತೃಋಣದಿಂದ ಗ್ರಸ್ತನಾಗುವುದರಿಂದ ಅವನಿಗೆಸ್ವರ್ಗವೆಂಬ ಉತ್ತಮ ಗತಿಯಿಲ್ಲ. ಅಪುತ್ರಸ್ಯ ಗತಿರ್ನಾಸ್ತಿ (ಸ್ಕಾಂದ ನಾಗರ ಅ ೯೬)

ವನು ದೇವ ಪಿತೃಗಳಿಗೆ ದ್ವೇಷಿಯಾಗುವನು. ಇಂದ್ರನು ಹೇಳಿದ ಈ ಮಾತು ೕಳಿ ದಶರಥ ಪುತ್ರಕಾಮೇಷ್ಠಿ ಯಜ್ಞಮಾಡಿ ಪುತ್ರಸಂತಾನಪಡೆದ (ಸ್ಕಾಂದ ಾಗರ ಅ ೯೭). ಆದ್ದರಿಂದ ವಿವಾಹವಾಗಿ ಬಹಳಕಾಲ ಪುತ್ರನುಂಟಾಗದಪ ತ್ನಿಯ ಅನುಮತಿ ಕೇಳಿ ಪುನಃ ವಿವಾಹವಾಗುವಕ್ರಮವನ್ನು ಶಾಸ್ತ್ರವು ಒಪ್ಪು ್ತದೆ. ಆದರೆ ಈಗ ಅದಕ್ಕೆ ಸೆಕ್ಯುಲರ್ ಸರಕಾರ ವಿರುದ್ಧ ಕಾನೂನು ಮಾಡಿದೆ! ಈ ಕಾನೂನು ಮಾಡಲಿಕ್ಕೆ ಕೇವಲಭೋಗಕ್ಕಾಗಿ ಎಷ್ಟುಬೇಕಾದರೂ ವಿವಾಹ ಾಗುವ ಮುಸಲ್ಮಾನರೂ ನಮ್ಮಶಾಸ್ತ್ರಕ್ಕೆ ವಿರುದ್ಧವಾಗಿ ವೋಟುಕೊಟ್ಟಿದ್ದರು! **ಎಂದರೆ ನಮ್ಮ ಅತಿದಿವ್ಯವಾದ ಶಾಸ್ತ್ರವನ್ನು ತಿದ್ದುವ ಹಕ್ಕನ್ನು ಸೆಕ್ಯುಲರ್ ಸರ್ಕಾರ ಮುಸಲ್ಮಾನರಿಗೂಕೊಟ್ಟಿದೆ! ಆದರೆ ಅವರಧರ್ಮ ಮುಟ್ಟುವ ಹಕ್ಕು ನಮಗಿಲ್ಲ! ಇದು ನಮ್ಮ ಸರಿಸಮಾನತೆ ರಾಜ್ಯ!**

೩೧. ಉತ್ತಮ ಲೋಕಗಳಿಗೆ ದಾರಿ; ದೇವಲೋಕ, ಪಿತೃಲೋಕ

ಪುಣ್ಯವನ್ನೇ ಅತಿಧಾರಾಳವಾಗಿ ಮಾಡಿದವರು ಯಮಲೋಕದ ದಾರಿ ಯಲ್ಲಿ ಅತಿಸುಖವಾಗಿ ಮುಂದುವರಿಯುತ್ತ ಯಮನಪಟ್ಟಣ ಸೇರುತ್ತಾರೆ. ಪಾಪಿಷ್ಠರಿಗೆ ಅದು ಭಯಂಕರತರದ್ದಾಗಿತೋರಿದರೂ ಪುಣ್ಯಾತ್ಮರಿಗೆ ಹಾಗಲ್ಲ, ಬಹಳ ವೈಭವಯುಕ್ತವಾದದ್ದಾಗಿ ತೋರುತ್ತದೆ. ಯಮನ ಸಭೆಯುಮಂದಿರ ವನ್ನು ವಿಶ್ವಕರ್ಮನು ರಚಿಸಿದನು. ಅದರ ಪೂರ್ವ ಉತ್ತರ ಪಶ್ಚಿಮದ್ವಾರ ಗಳಲ್ಲಿ ಪ್ರವೇಶಿಸಿದ ಪುಣ್ಯವಂತರಿಗೆ ಅದರೊಳಗೆ ಕಠಿಣತಪಸ್ಸು ಮಾಡಿದ ಸನ್ಯಾಸಿಗಳು, ಸುವ್ರತರು, ಸತ್ಯವಂತರು, ಶಾಂತರು, ಸಿದ್ಧರು, ಪವಿತ್ರ ಕಾರ್ಯಮಾಡಿದವರು ತೇಜೋಮಯ ರೂಪದಲ್ಲಿ ರತ್ನಪೀಠಗಳಲ್ಲಿ ನಿರ್ಮಲ ವಸ್ತ್ರಧರಿಸಿ, ಅಲಂಕೃತರಾಗಿ ಕುಳಿತಿರುವುದು ತೋರುವುದು. ಯಮಧರ್ಮ ರಾಜನು ಸರ್ವಾಲಂಕಾರದಿಂದಕೂಡಿದ್ದು, ಕಿರೀಟಿಯಾಗಿ, ಚಿತ್ರಗುಪ್ತ, ಅಪ್ಸರೆ ಯರಿಂದ ಸೇವಿಸಲ್ಪಡುತ್ತಕುಳಿತಿರುತ್ತಾನೆ. ಗಂಧರ್ವರ ಸಂಗೀತವಾದ್ಯ, ನೃತ್ಯ ನಡೆಯುತ್ತಿರುತ್ತದೆ. ಪಿತೃದೇವತೆಗಳೂ ಅಲ್ಲಿದ್ದಾರೆ, ವಸಿಷ್ಠ, ದಕ್ಷ, ಕೃತು, ಅಗಸ್ತ್ಯ, ನಾರದ ಮುಂತಾದವರೂ ಅಲ್ಲಿದ್ದಾರೆ. ಧರ್ಮಶಾಸ್ತ್ರಗಳ ವ್ಯಾಖ್ಯಾನ ಯಥಾರ್ಥವಾಗಿ ಮಾಡುವವರು ಅಲ್ಲಿದ್ದಾರೆ. ಅಂಬರೀಷ, ಶಿಬಿ, ನಳ ಮುಂತಾದ ಚಕ್ರವರ್ತಿಗಳಿದ್ದಾರೆ. **ಸಭಾಸದರೆಲ್ಲ ಶಾಸ್ತ್ರ ತಿಳಿದವರು.**

ಪುಣ್ಯಾತ್ಮರು ಬರುವುದನ್ನು ನೋಡಿ ಯಮಧರ್ಮರಾಯನು ಅವರನ್ನು ಮತ್ತೆ ಮತ್ತೆ ಸ್ವಾಗತಮಾಡಿ ಉಪಚರಿಸಿ, ಸಿಂಹಾಸನ, ಅರ್ಘ್ಯ, ಕೊಟ್ಟು ಉಪಚರಿಸಿ ಪೂಜಿಸಿ "ನೀವು ದೇವತ್ವ ಸಾಧಿಸಿದ್ದೀರಿ" ಎಂದು ಹೊಗಳುತ್ತಾನೆ ದಿವ್ಯ ದೇಹದಿಂದ ಸ್ವರ್ಗ, ಬ್ರಹ್ಮಲೋಕ ಮುಂತಾದುವಕ್ಕೆ ಕಳುಹಿಸಲ್ಪಡ ತ್ತಾರೆ (ಗರುಡ ಸಾ. ೧೪). ವೈಕುಂಠ, ಕೈಲಾಸ, ಸ್ವರ್ಗ ಮುಂತಾದ ಉತ್ತಮ ಲೋಕಗಳಲ್ಲಿ ವೈಢೂರ್ಯಚಿನ್ನ ಮುತ್ತುನವರತ್ನಗಳಿಂದ ಅಲಂಕೃತವಾದ ಭವ ಗೃಹಗಳಿವೆ; ಅರಮನೆಗಳಿವೆ. ಅವಕ್ಕೆ ಚಿನ್ನದಬಾಗಿಲುಗಳು, ಶಿಖರಗಳು, ಕಲ ಗಳು, ಗೋಪುರಗಳು ಇವೆ. ಅಲ್ಲಿ ತಂಪಾದ ಹವೆ. ಶೋಕವಿಲ್ಲ, ಮುಪ್ಪಿಲ್ಲ ನೃತ್ಯ ಸಂಗೀತ, ವಿಮಾನಗಳು, ಇಚ್ಛಿಸಿದ್ದನ್ನು ಕೊಡುವ ಕಲ್ಪತರು ಕಾಮಧೇನು ಮುಂತಾದವು ಇವೆ. ರಸ್ತೆಗಳು ಸುವರ್ಣದಂತಿವೆ. ಗೋ ಗಳನ್ನು ಚಿತ್ರಗಳು ಅಲಂಕರಿಸುತ್ತವೆ. ವನಗಳಲ್ಲಿ ನೂರಾರು ಕೊಳಗಳ ನಿರ್ಮಲ ನೀರಿಂದ ತುಂಬಿವೆ. ತಾವರೆಗಳಿಂದ ಅಲಂಕೃತವಾಗಿವೆ. ವಿವಿ ತರದ ಪಕ್ಷಿಗಳ ಮನೋಹರಧ್ವನಿ ಕೇಳುತ್ತದೆ. ರತ್ನಗಳಿಂದ ಅಲಂಕೃತರಾ ಸುಂದರ ಯುವತಿಯರು ವಿಹರಿಸುತ್ತಾರೆ.

ಸ್ವರ್ಗಪಡೆಯಲಿಕ್ಕೆ ಪುಣ್ಯತರುವ ಕಾರ್ಯಗಳು

ಇಷ್ಟಪೂರ್ತಗಳನ್ನು ನಿತ್ಯವೂ ನಡೆಸುವವರು ಸ್ವರ್ಗ ಸೇರುತ್ತಾರೆ ಇಷ್ಟ ಎಂದರೆ ಅಗ್ನಿಹೋತ್ರ, ತಪಸ್ಸು, ಸತ್ಯತೆ, ವೇದಾಭ್ಯಾಸ, ಅತಿಥಿ ಸತ್ಕಾರ, ವೈಶ್ವದೇವ ಮಾಡುವುದು (ಅಗ್ನಿಹೋತ್ರ ಮುಂತಾದುವುಗಳಿಂ ದೇವತೆಗಳು ತೃಪ್ತಿಹೊಂದಿ ಇಡೀಲೋಕಕ್ಕೆ ಧಾರಾಳವಾಗಿ ಮಳೆಕೊಡುತ್ತಾರೆ ಆದ್ದರಿಂದ ಅದು ಲೋಕಕ್ಕೆ ಬಹಳಹಿತ ಮಾಡುವ ಕರ್ಮ). ಪೂರ್ತ ಎಂದ ಪರೋಪಕಾರಕ್ಕಾಗಿ ಕೆರೆ, ಬಾವಿ. ತಟಾಕ, ದೇವಸ್ಥಾನಗಳ ನಿರ್ಮಾಣ ಸಾಲುಮರಗಳನ್ನು ಬೆಳೆಸುವುದು (ಮಕ್ಕಳಿಲ್ಲದವನು ಫಲಕೊಡುವಮರಗಳನ್ನು ಮಕ್ಕಳೆಂದು ಬೆಳೆಸಬೇಕು. ಆ ಮಕ್ಕಳಿಂದ ಒಳ್ಳೆಯದು ಮಾತ್ರ ನಡೆಯ ತ್ತದೆ). ಅನ್ನದಾನ ಮುಂತಾದವು ಸ್ವರ್ಗಲಭಿಸಲಿಕ್ಕೆ ಸಾಧನಗಳ (ದೇವಾಲಯ ನಿರ್ಮಾಣದಿಂದ ಅದರ ಇಟ್ಟಿಗೆಗಳು ಉಳಿದಷ್ಟು ಕಾಲ ಸ್ವರ್ಗ ಲೋಕ ಲಭಿಸುತ್ತದೆ).

ಕನ್ಯಾದಾನಕ್ಕೆ ಸಹಾಯ ಮಾಡುವುದು, ಗೋವುಗಳ ದಾನ, ಗೋಸೇವ ನಿರತೆ ಪರೋಪಕಾರದಲ್ಲಿ ಆಸಕ್ತಿ. ಮನೆ ಮುಂತಾದವುಗಳ ದಾನ. ಅನಾಥರಿ

ಸಹಾಯ, ಗೋವು ಗುರು ಬ್ರಾಹ್ಮಣರಲ್ಲಿ ಆಸಕ್ತಿ, ಶಾಸ್ತ್ರಾಧ್ಯಯನದಲ್ಲಿ ತತ್ಪರತೆ, ಪ್ರಾಣಿದಯೆ, ಗ್ರಹಗಳ ಪೂಜೆಯಲ್ಲಿ ಆಸಕ್ತಿ, ಎಲ್ಲ ದೇವತೆಗಳ ಪೂಜೆ, ದೇವರಲ್ಲಿ ಭಕ್ತಿ, ಇರುವವರು ಸ್ವರ್ಗ ಸೇರುತ್ತಾರೆ (ವಿಷ್ಣು ಧರ್ಮೋತ್ತರ ದ್ವಿತೀಯ ಅ ೧೧೪).

ರಾಜಧರ್ಮಕ್ಕೆ ಸರಿಯಾಗಿ ರಾಜ್ಯಭಾರ ಮಾಡುವವರು, ಮದ್ಯ ಮಾಂಸ, ತ್ಯಜಿಸಿದವರು, ಇಂದ್ರಿಯ ನಿಗ್ರಹ ಸಾಧಿಸಿದವರು, ಗುರುಸೇವಾ ತತ್ಪರರು, ಸಿಕ್ಕಿಬಿದ್ದ ಹಸುವನ್ನು ಬಿಡಿಸಲು ಹೋದಾಗ ಮೃತರಾದವರು, ತೀರ್ಥಯಾತ್ರೆ ಮಾಡುತ್ತ ದೇಹಬಿಟ್ಟವರು ಸ್ವರ್ಗಹೊಂದುತ್ತಾರೆ (ವಿಷ್ಣು ಧರ್ಮೋತ್ತರ, ದ್ವಿತೀಯ ಅ ೧೧೪).

ಬ್ರಹ್ಮಧ್ಯಾನಾಸಕ್ತರು, ವ್ರತೋಪವಾಸ ನಿರತರು, ಸದಾ ಧ್ಯಾನಾ ಸಕ್ತರು, ಅಹಿಂಸಾನಿರತರು, ಧರ್ಮವನ್ನು ಬೋಧಿಸುವವರು, ಯಾವಾಗಲೂ ಜಪ ನಿರತರು, ಶರಣಾಗತ ರಕ್ಷಕರು ಉತ್ತಮಲೋಕಹೊಂದುವರು (ಸ್ಕಾಂದ, ನಾಗರ ಅ ೨೬).

ಜಿತೇಂದ್ರಿಯರಾಗಿ ತಮ್ಮ ವರ್ಣಧರ್ಮ ಪಾಲಿಸುವವರು, ಶೂರರಾಗಿ ಯುದ್ಧದಲ್ಲಿ ಮಡಿದವರು, ಯಾರಿಗೆ ಇನ್ನೊಬ್ಬರು ಭಯಪಡಬೇಕಾಗಿಲ್ಲವೋ, ಇತರರಿಗೆ ಭಯಪಡುವುದಿಲ್ಲವೋ ಅವರು, ಕ್ರೋಧ ಜೈಸಿದವರು, ಇತರರಲ್ಲಿ ಆತ್ಮಸಾಮ್ಯ ಹೊಂದಿದವರು, ಭೋಜನವನ್ನು ಕೇವಲ ದೇಹಧಾರಣಕ್ಕಾಗಿ ಮಾತ್ರ ಮಾಡುವವರು, ಗಾಯತ್ರೀಜಪದಲ್ಲಿ ನಿರತರು, ಎರಡು ಊಟ ಮಾತ್ರ, ನಡುವೆ ಏನನ್ನೂ ತಿನ್ನದವರು, ಹಗಲು ನಿದ್ರೆಮಾಡದವರು, ಮಧು ಮದ್ಯಮಾಂಸ ವರ್ಜಿಸಿದವರು ನರಕ ಕಾಣರು. ಉತ್ತಮಲೋಕ ಹೊಂದುವರು (ವಿಷ್ಣುಧರ್ಮೋತ್ತರ ದ್ವಿತೀಯ ಅ ೧೨೧).

ತಪೋನಿಷ್ಠರು, ಚಾತುರ್ಮಾಸ ಮುಂತಾದ ವ್ರತಕೈಕೊಂಡವರು, ಪತಿವ್ರತೆಯರೂ ಬ್ರಹ್ಮಚಾರಿಣಿಯರೂ ಆದ ಸ್ತ್ರೀಯರು, ಪರಸ್ತ್ರೀಯರ ವಿಷಯದಲ್ಲಿ ಷಂಡರಾಗಿ ವರ್ತಿಸುವವರು, ತಂದೆತಾಯಿಗಳಲ್ಲಿ ಭಕ್ತಿಯಿಂದ ನಡಕೊಂಡವರು, ಜಪಯಜ್ಞ ವೇದಾಧ್ಯಯನ ಬ್ರಾಹ್ಮಣಪೂಜೆ ತೀರ್ಥಕ್ಷೇತ್ರ ಯಾತ್ರೆ, ತಪಸ್ಸು ಪರೋಪಕಾರ ಮುಂತಾದ ಸತ್ಕರ್ಮಗಳನ್ನು ಫಲಾಭಿಲಾಷೆ ಯಿಲ್ಲದೆ ಮಾಡುವವರು, ದಾನಪಡೆಯುವ ಯೋಗ್ಯತೆ ಇದ್ದರೂ ಯಾರಿಂದಲೂ ಯಾವ ದಾನವನ್ನೂ ಪಡೆಯದವರು, ತುಂಬಿದ ಗೃಹ ದಾನ ಮಾಡಿದವರು, ವೇದಪಾಠಶಾಲೆ ಕಟ್ಟಿಸಿದವರು, ವೇದಾಧ್ಯಯನ ಮಾಡಿಸಿದ

ವರು, ಪುರಾಣ ಮತ್ತು ಧರ್ಮಶಾಸ್ತ್ರ ದಾನಮಾಡಿದವರು, ಆರೋಗ್ಯಶಾಲೆ ನಿರ್ಮಿಸಿ ಅದನ್ನು ನಡೆಸುವವರು, ಬ್ರಹ್ಮಲೋಕ ಸೇರುವರು (ಸ್ಕಾಂದ ಕಾಶಿಖಂಡ ಅ ೧). ಸಂಧ್ಯಾವಂದನೆಮಾಡಿ ನಿತ್ಯಧಾರಾಳವಾಗಿ ಗಾಯತ್ರೀಜಪ ಮಾಡುವವ ಸಮಸ್ತ ಪಾಪಮುಕ್ತನಾಗಿ ಬ್ರಹ್ಮಲೋಕ ಸೇರುತ್ತಾನೆ.

ಸ್ತ್ರೀಯರಲ್ಲಿ ತುಂಬಾ ಉಪವಾಸವ್ರತ ಮಾಡುತ್ತಿದ್ದವರು, ನಿರಂತರ ಬ್ರಹ್ಮಚರ್ಯೆಯಲ್ಲಿದ್ದವರು, ದೈವಯೋಗದಿಂದ ಎಂದೋ ಒಮ್ಮೆ ಸದಾಚಾರ ದಿಂದ ಜಾರಿದವರು, ಆಮೇಲೆ ಬ್ರಹ್ಮಚರ್ಯ ಪಾಲಿಸಿದವರು **ಅಪ್ಸರಲೋಕ** ಹೊಂದಿ ಎಂದಿಗೂಕುಂದದ ರೂಪಲಾವಣ್ಯದಿಂದ ಕೂಡಿ ಅಲ್ಲಿರುವರು. ಅಗ್ನಿ ಇಟ್ಟವರು ಅಗ್ನಿ ಸಮಾನ ತೇಜಸ್ಸಿನಿಂದ ಅಗ್ನಿಲೋಕ ಸೇರುವರು. **ನೈರುತ್ಯ ಲೋಕ**ದಲ್ಲಿ ಜನ್ಮತಃ ರಾಕ್ಷಸರಾದರೂ ಶುದ್ಧ ಆಹಾರ ಮಾತ್ರ ಭುಂಜಿಸುತ್ತ ಬ್ರಾಹ್ಮಣರೊಡನೆ ನಮ್ರತೆಯಿಂದವರ್ತಿಸುತ್ತ, ಪರಸ್ತ್ರೀ, ಪರದ್ರವ್ಯ ಅಪಹರಿಸ ದವರು ಇರುತ್ತಾರೆ. **ವರುಣಲೋಕ**ದಲ್ಲಿ ನೀರಿಲ್ಲದೆಡೆಯಲ್ಲಿ ನೀರುದಾನ ಮಾಡಿದವರು, ದಾರಿಯಬದಿ ಮರ ಬೆಳೆಸಿದವರು, ದಾರಿಗರಿಗೆ ಕಬ್ಬಿನಹಾಲು ಬೆಲ್ಲ, ಸಕ್ಕರೆ ಕೊಡುವವರು, ದಾರಿ ಸರಿಮಾಡುವವರು, ಯಾರ ಭಯ ವಿಲ್ಲದೆಯೂ ವಾಸಿಸುವವರು, ಇರುತ್ತಾರೆ. **ಸೂರ್ಯಲೋಕ** ಹೊಂದಲು ಸಂಕ್ರಾಂತಿ ದಿನಗಳಲ್ಲಿ ಮಹಾದಾನಮಾಡುವ ವ್ರತಿಗಳಾಗಬೇಕು ; ಸಂಕ್ರಮಣ ಕಾಲದಲ್ಲಿ ಸೂರ್ಯನನ್ನು ಆರಾಧಿಸುವವರು, ದರಿದ್ರರೂ ದುಃಖಿಗಳೂ ರೋಗಿಗಳೂ ಆಗುವುದಿಲ್ಲ ; ಬಡವರಾಗುವುದಿಲ್ಲ. ಸಂಕ್ರಮಣದದಿನ ತೀರ್ಥ ಸ್ನಾನಮಾಡಿ ಕಪಿಲೆಗೋವಿನ ತುಪ್ಪದಲ್ಲಿ ನೆನೆಸಿದ ಎಳ್ಳನ್ನು ಹೋಮಮಾಡಿದ ವರು ಸೂರ್ಯಲೋಕ ಹೊಂದುತ್ತಾರೆ (ಸ್ಕಾಂದ, ಕಾಶಿ ಅ ೧೦, ೧೧).

ಪುಣ್ಯಸಂಗ್ರಹ ಮುಗಿದು ಉತ್ತಮಲೋಕಗಳಿಂದ ಹಿಂದೆಬರಬೇಕಾದಾಗ ಈ ಜೀವಾತ್ಮರಿಗೆ ಉತ್ತಮವಂಶದ ದ್ವಿಜ ಜನ್ಮಲಭಿಸುತ್ತದೆ. (ಛಾಂದೋಗ್ಯ ೫, ೧೦, ೭). ಜೀವಾತ್ಮನಿಗೆ ಮಾನವ ಜನ್ಮಲಭಿಸುವುದೇ ಬಹಳ ಅಪೂರ್ವ ವಾಗಿದೆ. ಅದರಲ್ಲಿಯೂ ಭೂಲೋಕದಲ್ಲಿ ಏಕಮಾತ್ರ ಪುಣ್ಯಭೂಮಿಯಾದ ಭಾರತದಲ್ಲಿ, ಸನಾತನಧರ್ಮದಲ್ಲಿ, ಜನ್ಮ ಬಹಳ ಅಪೂರ್ವ ; ಪುಣ್ಯದಾಯಕ ಅದು. ಸುಸಂದರ್ಭವನ್ನು ಈ ಕಾಲದ ಹೊಸ ವ್ಯಾಮೋಹಗಳ ಬಲೆಗೆಸಿಕ್ಕಿ ಪಾಶ್ಚಾತ್ಯರಧಾರ್ಮಿಕ ತಳಹದಿಯೇ ಇಲ್ಲದ ನಾಗರಿಕತೆಯಬೆರಗಿಗೆ ಬಲಿಯಾಗಿ ಎಷ್ಟಕ್ಕೂ ಹಾಳುಮಾಡಿಕೊಳ್ಳಕೂಡದು. ಜನ್ಮವನ್ನು ಶಾಸ್ತ್ರ ಕಲಿತು ಮುಖ್ಯವಾಗಿ ದೇವರೆಡೆಗೆ ಮುಂದುವರಿಯಲು ಉಪಯೋಗಿಸಿಕೊಳ್ಳಬೇಕು

ಪಿತೃಲೋಕ

ಪಿತೃಲೋಕದಲ್ಲಿ ಪಿತೃದೇವತೆಗಳು ಮತ್ತು ಮನುಷ್ಯರು ಮರಣಾನಂತರ ಪ್ರೇತತ್ವ ಹೋಗಿ ಪಿತೃತ್ವ ಹೊಂದಿದವರು, ಇರುವರು. ಪಿತೃದೇವಗಣವು ದೇವತೆಗಳನ್ನು ಸ್ತುತಿಸಿಸೇವಿಸುತ್ತಿರುವುದು. ಪಿತೃಗಳು ಪಿತೃದೇವಗಣವನ್ನು ಅನುಸರಿಸಿಕೊಂಡವರು. ಪಿತೃದೇವತೆಗಳೂ ಪಿತೃಗಳೂ ಶ್ರಾದ್ಧಕರ್ಮದಲ್ಲಿ ಪ್ರಿಯರು. ಪಿತೃದೇವತೆಗಳು ಪ್ರೀತರಾದರೆ ಪಿತೃಗಳೂ ಪ್ರೀತರಾಗುತ್ತಾರೆ. ಪಿತೃಗಳಲ್ಲಿ ಪಿತೃ, ಪಿತಾಮಹ, ಪ್ರಪಿತಾಮಹ ಎಂಬ ಒಂದಕ್ಕಿಂತ ಒಂದು ಹಿಂದಿನ ತಲೆಯ ವರ್ಗಗಳಿವೆ. ವರ್ಣಾಶ್ರಮ ಕರ್ಮಗಳನ್ನು ನಿಯಮದಿಂದ ಕಡೆಯವರೆಗೂ ಪಾಲಿಸುವವರು ಪಿತೃಗಳಾಗುತ್ತಾರೆ. ಸತ್ಕರ್ಮಮಾಡಿ ಪಿತೃಗಳಾಗಲಿಕ್ಕೆ ತಪಸ್ಸು (ಎಂದರೆ ತನ್ನ ವರ್ಣಧರ್ಮದ ಆದಷ್ಟು ಹೆಚ್ಚಿನಪಾಲನೆ) ಬ್ರಹ್ಮಚರ್ಯ (ಎಂದರೆ ಋತುಕಾಲದಲ್ಲಿ ಮಾತ್ರ ಪತ್ನೀ ಗಮನ) ಯಜ್ಞ (ಎಂದರೆ ಪಂಚಮಹಾಯಜ್ಞಗಳಾಗಿ ನಿತ್ಯವೂ ದೇವಯಜ್ಞ ಅಥವಾ ದೇವರ ಪೂಜೆ, ಋಷಿಯಜ್ಞ ಅಥವಾ ಶಾಸ್ತ್ರಾಧ್ಯಯನ ಪಿತೃಯಜ್ಞ ಅಥವಾಪಿತೃತರ್ಪಣ ಮನುಷ್ಯಯಜ್ಞ ಅಥವಾ ಅತಿಥಿಸತ್ಕಾರ ಮತ್ತು ಭೂತಯಜ್ಞ ಅಥವಾ ಕಾಗೆಗೆ ಅನ್ನ ಇತ್ಯಾದಿ ; ಮತ್ತು ಔಪಾಸನೆ ಮತ್ತು ವೈಶ್ವದೇವ), ಪ್ರಜೆ (ಎಂದರೆ ಪುತ್ರಸಂತಾನ ಪಡೆದು ಸಂತಾನ ಮುಂದುವರಿಯುವಂತೆಮಾಡುವುದು) ಶ್ರಾದ್ಧ, ವಿದ್ಯೆ, (ಶಾಸ್ತ್ರಾಧ್ಯಯನ) ದಾನ (ನಿತ್ಯವೂ ಸ್ವಲ್ಪವಾದರೂ ದಾನಮಾಡಬೇಕು. ವಿಶೇಷ ದಾನಗಳೂ ಇವೆ). ಎಂಬ ಏಳು ಸಾಧನಗಳಿವೆ. ಶರೀರ ಬೀಳುವ ವರೆಗೂ ನಿಯಮವಂತರಾಗಿದ್ದು ಕಡೆಗೆ ಸೂಕ್ಷ್ಮ ಪರಿಣಾಮಗಳಿಂದ ಅವರು ಪಿತೃಗಣಸೇರುವರು. ಪಿತೃಲೋಕದಲ್ಲಿ ಪಿತೃಗಳಿಗೆ ವಿಧಿಸಿದಸೌಖ್ಯ ಅನುಭವಿಸುವರು. ಬಂಧುಗಳು ಕೊಡುವ ತರ್ಪಣ ಹೊಂದುವರು. ಶ್ರಾದ್ಧದ ಹವಿಸ್ಸನ್ನು ಭುಂಜಿಸುವರು. ಚಂದ್ರಲೋಕವೇ ಪಿತೃಲೋಕ. ಪಿತೃಗಳು ಅಮಾವಾಸ್ಯೆಯ ದಿನವರಡು ಲವಕಾಲ ಚಂದ್ರಸುಸುರಿಸುವ ಸುಧಾಮೃತವನ್ನು ಪಾನ ಮಾಡುವರು (ಬ್ರಹ್ಮಾಂಡಪುರಾಣ ಅ ೨೮).

ಘೋರಪಾಪ ಮಾಡದವರಲ್ಲಿ ನರಕಕ್ಕೆಹೋಗದ ಅಥವಾ ಹೋಗಿ ಪಿತೃಲೋಕ ತಲಪುವ ದ್ವಿಜರು ಹೆಚ್ಚು. ನರಕದ ದಾರಿಯಲ್ಲಿ ಅವರಿಗೆ ಸುಖದುಃಖ ಎರಡೂ ಇದೆ. ಶ್ರಾದ್ಧದಲ್ಲಿ ಪಿಂಡವನ್ನು ತಂದೆಗೆ, ಅಜ್ಜನಿಗೆ, ಪಿಜ್ಜನಿಗೆ ಹಾಕುವುದು ಕ್ರಮ. ನಡುವಿನ ಪಿಂಡವನ್ನು ಪತ್ನಿ ಭುಂಜಿಸಿದರೆ ಅಜ್ಜನೇ ಪುತ್ರನಾಗಿ ಬರಬಹುದು, ಯಾರ್ಯಾರೋ ಬರುವುದಕ್ಕಿಂತ ಇದು ಉತ್ತಮ ಎಂಬುದು

ಭಾವನೆ. ಮೂರು ಪಿಂಡ ಮಾತ್ರ ಹಾಕುವುದರಿಂದ, ಅಷ್ಟರಲ್ಲಿ ಎಲ್ಲಾದರೂ ಪಿಚ್ಚ ಜನಿಸಿರಬಹುದು ಎಂಬ ಭಾವನೆಯೂ ಇರಬೇಕು.

೩೨. ಮರಣಕಾಲದ ಧರ್ಮ

ಮನುಷ್ಯನು ಮರಣಕಾಲದಲ್ಲಾದರೂ ಆದಷ್ಟು ಪಾಪ ಕಳಕೊಳ್ಳಲು ಯತ್ನಿಸಬೇಕು. ಇದಕ್ಕೆ ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೇಳಿದ ಕ್ರಮ ಭವಿಷ್ಯ ಪುರಾಣದಲ್ಲಿ (ಉತ್ತಮ ಪರ್ವಣಿ ಅ ೧೨೬ರಲ್ಲಿ) ಇದೆ. ಪ್ರಾಜ್ಞನಾದವನು ಮರಣಕಾಲ ಅರಿತುಕೊಂಡು, ಜಲಮಲ ಕರ್ಮಗಳನ್ನು ತೀರಿಸಿಕೊಂಡು ಸ್ನಾನ ಮಾಡಿ ದೇವರನ್ನು ಭಕ್ತಿಯಿಂದಪೂಜಿಸಿ, ಬ್ರಾಹ್ಮಣರಿಗೂ ದೀನರಿಗೂ ಅನಾಥರಿಗೂ ವಿಕಲಾಂಗರಿಗೂ ನಾನಾವಿಧದ ದಾನಗಳನ್ನು ಮಾಡಬೇಕು. ಬಂಧುಗಳು, ಆಸ್ತಿ, ನನ್ನವರು, ನನ್ನದು, ಎಂಬ ಭಾವನೆತ್ಯಜಿಸಿ, ಎಲ್ಲಭೋಗತ್ಯಜಿಸಿ, ಸ್ನೇಹಿತರು, ದ್ರೋಹಿಗಳು ಎಂಬ ದ್ವಂದ್ವಬಿಟ್ಟು, ನಿರಶನ ವ್ರತ ಹಿಡಿದು, ದರ್ಭೆಯ ಮೇಲೆ ಉತ್ತರಾಭಿಮುಖನಾಗಿ ಮಲಗಿ ದೇವರಭಾವನೆ ಮನಸ್ಸಲ್ಲಿ ಸ್ಥಿರಮಾಡಿಕೊಂಡು, ಸದಾ ಧ್ಯಾನಮಾಡುತ್ತ ಪ್ರಾಣಹೋಗುವವರೆಗೂ ಹಾಗೆ ಇರಬೇಕು.

ಸಾಮಾನ್ಯರ ವಿಚಾರದಲ್ಲಿ, ಮರಣಕಾಲದ ಈ ತರದ ದೇವರ ಚಿಂತನೆ, ದಾನಕಾರ್ಯ, ಅತ್ಯಂತ ಫಲಕಾರಿಯಾದ್ದರಿಂದ, ಅಲ್ಪವಿಚಾರಗಳಲ್ಲಿ ಮನಸ್ಸು ಹೋದರೆ ಮುಂದಿನ ಜನ್ಮವೇ ಹಾಳಾಗುತ್ತದಾದ್ದರಿಂದ, ಬಂಧುಗಳು ಸರ್ವ ಪ್ರಯತ್ನಮಾಡಿ ಮರಣಶಯ್ಯೆ ಹಿಡಿದವನಿಗೆ ಉತ್ತಮಗತಿ ಉಂಟಾಗಲಿಕ್ಕೆ ಸಹಾಯಮಾಡಬೇಕು. ಆದ್ದರಿಂದ ಆಗ ಅವನಾಗಲಿ, ಬಂಧುಗಳಾಗಲಿ ತಮ್ಮ ಕಷ್ಟ ಹೇಳುವುದು, ಅಳುವುದು. ಅವನಲ್ಲಿ ಪರಿಹಾರ ನಿರೀಕ್ಷಿಸುವುದು, ಮನಸ್ಸಿನ ದುಗುಡಹೆಚ್ಚಿಸುವುದು ಏನೂ ಸರಿಯಲ್ಲ. ಹುಟ್ಟುವಾಗ ಒಬ್ಬನೇ ಬಂದವ, ಮೃತನಾಗಿ ಒಬ್ಬನೇ ಹೋಗುವವನಿಗೆ, ದೂರಇರುವ ಆ ಮಗನನ್ನು ನೋಡಬೇಕು, ಈ ಮಗಳನ್ನುನೋಡಬೇಕು, ಎಂಬಭಾವನೆ ಆ ಕಾಲಕ್ಕೆ ಏನೂ ಅನುಕೂಲವಲ್ಲ. ಮನಸ್ಸು ದೇವರಲ್ಲೇ ಇರಲಿಕ್ಕೆ ಹತ್ತಿರದಲ್ಲಿ ಬಂಧುಗಳು ದೇವರನಾಮ ಜಪ, ಭಜನೆ, ಉತ್ತಮರಿಗಾಗಿ ಭಗವದ್ಗೀತೆ ಉಪನಿಷತ್ತುಗಳ ಪಾರಾಯಣ, ಮುಂತಾದವನ್ನು ನಡೆಸಬೇಕು.

ಗರುಡಪುರಾಣ ಸಾರೋದ್ಧಾರ ಅ ೮-೯ ಮರಣಕಾಲದಲ್ಲಿ ಮಾಡ ಬೇಕಾದ ಕಾರ್ಯಗಳ ಸೂಚನೆಗಳನ್ನು ಮುಂದೆ ಸಂಗ್ರಹಿಸಿಕೊಟ್ಟಿರುವೆ.

ಮರಣಕಾಲದ ದಾನಗಳಿಗೆ ಗ್ರಹಣಕಾಲದ ದಾನಗಳಂತೆ, ಅತಿಹೆಚ್ಚಿನ ಮಹತ್ವ ಇದೆ. ಸಾಮಾನ್ಯಕಾಲದ ದಾನಗಳ ಸಾವಿರಾರುಪಾಲು ಹೆಚ್ಚುಫಲವಿದೆ. ಎಳ್ಳು, ಲೋಹ, ಚಿನ್ನ, ಹತ್ತಿಯ ಸಾಮಾನು, ಉಪ್ಪು, ಸಪ್ತಧಾನ್ಯಗಳು, ಭೂಮಿ, ಗೋವು ಇವುಗಳ ದಾನಗಳನ್ನು ಅವಶ್ಯವಾಗಿ ಮಾಡಬೇಕು. (೮, ೨೨-೩೩) ಭೂಮಿದಾನ ಮುಖ್ಯವಾಗಿ ರಾಜರಿಗೆ ಹೇಳಿಸಿದ್ದು. ಕರುಸಹಿತ ಗೋವನ್ನು ಕೊಡಲು ಕೂಡಲೆ ಅನುಕೂಲವಿಲ್ಲದಿದ್ದರೆ ಬರೇಗೋವನ್ನಾದರೂ ದಾನಕೊಡಬಹುದು (ಧರ್ಮಸಿಂಧು). ತಂದೆತಾಯಿಗಳ ಸಲುವಾಗಿ ದಾನ ಕೊಡಿಸಿದರೆ ಗಯಾಶ್ರಾದ್ಧ, ಅಶ್ವಮೇಧಯಜ್ಞ, ಮಾಡಿದ ಫಲಕ್ಕಿಂತ ಹೆಚ್ಚಿನ ಪುಣ್ಯಲಭಿಸುತ್ತದೆ (ಧರ್ಮಸಿಂಧು). ಈ ಎಂಟು ಮಹಾದಾನಗಳು ಮಹಾ ಪಾಪಗಳನ್ನುನಾಶಮಾಡುತ್ತವೆ (೮,೩೪). ಸಪ್ತಧಾನ್ಯಗಳೆಂದರೆ ಭತ್ತ, ಜವೆ ಗೋಧಿ, ಗೋಧಿ, ಹೆಸರುಕಾಳು, ಉದ್ದು, ಅರಶಿನ, ಕಡಲೆ (೮, ೪೮). (ಸಪ್ತಧಾನ್ಯಗಳಿಗೆ ಬೇರೆಪಟ್ಟಿಯೂ ಇದೆ–ಉದ್ದು, ಪಚ್ಚೆಸ್ರು, ಹುರುಳಿ, ತೊಗರಿ, ಕಡಲೆ, ಶಾಮಕ್ಕಿ, ಅವರೆ ಮತ್ತು ಆಸನ, ಪಾದುಕೆ, ಛತ್ರ, ಊಟದಸಾಮಗ್ರಿ, ಅಕ್ಕಿ, ಅನ್ನಬೇಯಿಸುವ ಪಾತ್ರೆ, ವಸ್ತ್ರ (ಉಂಗುರ, ಕಮಂಡಲು, ಹಾಸಿಗೆ ಮುಂತಾದುವುಗಳ ದಾನವೂ) ಸೂಚಿಸಲ್ಪಟ್ಟಿವೆ. ಸುವರ್ಣ ದಾನದಿಂದ ಯಮಲೋಕಕ್ಕೆ ಹೋಗದೆ ಸ್ವರ್ಗಲೋಕಕ್ಕೆ ಹೋಗುತ್ತಾನೆ (೮, ೪೩). ಭೂದಾನಮಾಡಿದವ ಇಂದ್ರಲೋಕ ಸೇರುತ್ತಾನೆ (೮,೫೧) ಗೋದಾನವು ಮೂರು ವಿಧವಾದ ಪಾಪಗಳನ್ನು ಪರಿಹರಿಸುತ್ತದೆ. ಬಾಲ್ಯ ಕೌಮಾರ್ಯ, ಯೌವನ, ವೃದ್ಧಾಪ್ಯದ ಮತ್ತು ಇತರ ಜನ್ಮಗಳಪಾಪಶೇಷ, ರಾತ್ರಿ ಹಗಲುಗಳಲ್ಲಿ ಮಾಡಿದ ಪಾಪ, ಕಾಯವಾಚಾಮನಸಾ ಮಾಡಿದಪಾಪ, ನಾಶವಾಗುತ್ತವೆ (೮, ೫೭–೫೯). ಗೋದಾನವನ್ನು ವೇದ ಚೆನ್ನಾಗಿ ಬಲ್ಲ ಪುರೋಹಿತರಿಗೆ ಮಾತ್ರವೇಕೊಡಬೇಕು. ಅದರಿಂದ ಅವ ಪಾಪಗಳಿಂದಮುಕ್ತ ನಾಗುತ್ತಾನೆ. ಆದರೆ ಅಪಾತ್ರನಿಗೆ ಈ ದಾನ ಮಾಡಿದರೆ ದಾನಪಡೆದವನ ವಂಶವೇಹಾಳಾಗುತ್ತದೆ (೮, ೬೭). ಅಂಥ ಅಪಾತ್ರನಿಗೆ ಗೋದಾನಮಾಡ ಬಾರದು (೮, ೬೭). ಸತ್ಪಾತ್ರನಿಗೆ ಕೊಟ್ಟದಾನ ಲಕ್ಷದಷ್ಟಾಗುತ್ತದೆ, ಅವನಿಗೆ ದೋಷವೂ ಬರುವುದಿಲ್ಲ (೮, ೬೪). ಗೋದಾನ ಮಾಡಿದವನನ್ನು ಗೋವು ವೈತರಣಿಯನ್ನು ಸುಲಭವಾಗಿ ದಾಟಿಸುತ್ತದೆ (೮, ೬೯, ೮೬).

ಈ ಭೂಮಿಯಲ್ಲಿ ಮನುಷ್ಯನು ಯಾವ ಯಾವ ದಾನ ಮಾಡಿರುತ್ತಾನೋ ಅವುಗಳು ಯಮಲೋಕದ ಮಾರ್ಗದಲ್ಲಿ ಮುಂದೆ ದೊರಕುತ್ತವೆ

(೮, ೯೪). ಮನುಷ್ಯಜೀವಿಸಿರುವಾಗ ಇರುವಬಾಂಧವ್ಯ ಮತ್ತೆ ಇರುವುದಿಲ್ಲ ಬಾಂಧವರು ಸ್ಮಶಾನದಲ್ಲಿ ದೇಹಬಿಟ್ಟು ಹಿಂದೆ ಬರುತ್ತಾರೆ. ಕೇವಲ ಅ ಮಾಡಿದ ಧರ್ಮಾಧರ್ಮಮಾತ್ರ ಅವನನ್ನು ಅನುಸರಿಸುತ್ತದೆ. ಬಂಧುಗಳನ್ನು ನಂಬದೆ ಮನುಷ್ಯತಾನೇ, ಆರೋಗ್ಯದಲ್ಲಿರುವಾಗಲೇ, ಧಾರಾಳವಾಗಿ ವಿಪ್ರರಿ ದಾನಮಾಡಬೇಕು. ತಾನೇಮಾಡಿದ ಗೋದಾನವು ಅನಂತರ ಮಾಡಿ ಗೋದಾನಕ್ಕಿಂತ ಸಾವಿರಾರುಪಾಲು ಮೇಲು (೮, ೬೨). ಭೂಮಿಯಲ್ಲಿ ಪಿತೃವಿನ ಮರಣಕಾಲದಲ್ಲಿ ಅವನಿಂದ ದಾನಕೊಡಿಸುವ ಧರ್ಮಾತ್ಮ ಪುತ್ರನ ದೇವತೆಗಳಿಂದಲೂ ಪೂಜಿಸಲ್ಪಡುತ್ತಾನೆ. ಅವ ತಂದೆಯಿಂದ ಕೊಡಿಸಿದ ದಾನ ನೂರುಪಾಲು, ತಾಯಿಯಿಂದ ಕೊಡಿಸಿದರೆ ಸಾವಿರಪಾಲು, ಸೋದ ಯಿಂದ ಕೊಡಿಸಿದರೆ ಹತ್ತುಸಾವಿರಪಾಲು, ಸೋದರನಿಂದ ಅಕ್ಷಯಪಾಲು ಆಗುತ್ತದೆ (೮, ೧೧೫).

ರೋಗಿಯು ಮಂಚದಮೇಲೆ ಸಾಯಕೂಡದು. ಪಿಶಾಚಗಳು ಪ್ರೇ ಗಳು ಮಂಚವನ್ನು ಪ್ರವೇಶಿಸುವರು. ಬ್ರಹ್ಮ, ವಿಷ್ಣು, ರುದ್ರರು ನೆಲದ ಸಗಣಿಸಾರಿಸಿ ಮಾಡಿದ ಮಂಡಲದಲ್ಲಿ ನೆಲಸುತ್ತಾರೆ (೯–೧೯, ೧೭) ಆದ್ದರಿಂದ ತುಳಸಿಯ ಗಿಡದ ಬಳಿ ಚೆನ್ನಾಗಿ ಕಲೆಗಳಿರದಂತೆ ನೆಲವನ್ನು ಸಗ ಯಿಂದ ಸಾರಿಸಿ ಮೇಲೆ ಎಳ್ಳುದರ್ಭೆ ಹರಡಿ ಕಾಲು ದಕ್ಷಿಣಮಾಡಿ ಮಲಗಿ ಬೇಕು (೯, ೧೭, ೧೮, ೩, ೪, ೯). ಹತ್ತಿರ ಸಾಲಿಗ್ರಾಮವನ್ನು ಪೀಠ ಮೇಲೆ ಇಡಬೇಕು (೯, ೪). ಬಾಯಿಯಲ್ಲಿ ತುಳಸೀದಳ, ಚೂರುಚಿನ್ನ ಇಟ್ಟು ಸಾಲಿಗ್ರಾಮದ ತೀರ್ಥ, ಗಂಗಾಜಲ ಕುಡಿಸಬೇಕು (೯, ೯, ೨೧, ೨೨, ೨೩) ಗಂಗಾಜಲದ ಪ್ರಾಶನ, ಒಂದುಸಾವಿರ ಕಠಿಣ ವ್ರತಗಳ ಫಲಕ್ಕೆ ಸರಿಸಮಾ (೯, ೨೪, ೨೫). ಗಂಗಾಜಲ ಇಲ್ಲದಿದ್ದರೆ ಗಂಗಾ–ಗಂಗಾ ಎಂದಾದರು ಹೇಳಲಿ (೯, ೨೯, ೩೦) ; ಸ್ಮರಿಸಿ ನಮಸ್ಕರಿಸಲಿ, ಖಾಲಿಹೊಟ್ಟೆಯಲ್ಲಿ ತೀರ್ಥ ಕುಡಿಯಬೇಕು). ಪ್ರಾಣಹೊರಟುಹೋಗುವ ಸಮಯದಲ್ಲಿ ಉಪವಾಸಮಾ ಬೇಕು (೯, ೩೩). ವೈರಾಗ್ಯವಿದ್ದವರು ಮರಣಕಾಲದಲ್ಲಾದರೂ ಆತು ಸನ್ಯಾಸಪಡೆದರೆ ಬಹಳ ಉತ್ತಮ (೯, ೩೩).

ಆಸ್ಪತ್ರೆಯಮರಣ ಎಷ್ಟಕ್ಕೂ ಧಾರ್ಮಿಕರೀತಿಯದಲ್ಲ ; ಹಿತಕರವಲ್ಲ (ಸಾಯುವವವನನ್ನು ಸಗಣಿಸಾರಿಸಿದ ನೆಲದಮೇಲೆ ಮಲಗಿಸುವಂತಿಲ್ಲ. ಮ ಯವರೆಲ್ಲ ಅಲ್ಲಿರಲಾರದೆ ಸರ್ತಿಪ್ರಕಾರ ಒಬ್ಬೊಬ್ಬರು ಬಂದು ಇರುವವರ ಬೇಕಾದ ದೇವರಸ್ಮರಣೆ ಮಾಡಿಸದಿರಬಹುದು). ತುಳಸಿಕಟ್ಟೆ, ಸಾಲಿಗ್ರಾಮ

ಚಿನ್ಹೆ. ತುಳಸೀದಳ, ಗಂಗೆಯುತೀರ್ಥ ಏಲ್ಲ ಅಲ್ಲಿರಲಾರವು. ಅವ ಉಪವಾಸ ಮಾಡದಿರಬಹುದು. ಹೊಟ್ಟೆಗೆ ಕಡೆಯವರೆಗೂ ಪಾಶ್ಚಾತ್ಯಕ್ರಮದ ಪ್ರಾಣಿ ಜನ್ಯ ಮುಂತಾದ ಅಶುದ್ಧವಾದ ಮದ್ದು ಹೋಗುತ್ತಿರುವುದು ತೀರಾತಪ್ಪು. ಒಂದು ಕೊಡ ಗಂಗಾಜಲಕ್ಕೆ ಒಂದುಹನಿ ಮದ್ಯಸೇರಿಸಿದರೂ ಸಾಕು, ಗಂಗಾ ಜಲ ಕೆಡುತ್ತದೆ. ಪಾಶ್ಚಾತ್ಯ ವೈದ್ಯಕೀಯಕ್ರಮದಲ್ಲಿ ಯಾವ ಶಾಸ್ತ್ರೀಯ ಧಾರ್ಮಿಕ ತಳಹದಿಯೂ ಇಲ್ಲ. ಶಾಸ್ತ್ರಕ್ಕೆ ವಿರುದ್ಧವಾದ ಕ್ರಮಗಳೇಬಹಳ. ಬೋಧೆ ಇಲ್ಲದಾಗ, ಮೂತ್ರನಿಂತಾಗ, ಆಹಾರ ತಕ್ಕೊಳ್ಳದಾಗ, ಲಿಂಗಕ್ಕೆನಳಿಗೆ ಸಿಕ್ಕಿಸಿ ಮೂತ್ರಹೋಗಲಿಕ್ಕೆ, ರಕ್ತನಾಳ ಕತ್ತರಿಸಿ ನಳಿಗೆಯ ಮೂಲಕ ಆಹಾರ ಸೇರಿಸಲಿಕ್ಕೆ, ಎಲ್ಲಮಾಡಿ, ಮರಣಕಾಲ ಎರಡುದಿನ ಮುಂದರಿಸಿ ಆಗಬೇಕಾದ್ದ ದ್ದೇನು? ಮರಣದ ಒಂದುಗಂಟೆಯ ಹಿಂದಿನವರೆಗೂ ಒಂದು ಸ್ವಲ್ಪ ಆಸೆ ಯಿದೆ ಎಂದುಹೇಳುತ್ತ ಸಾಯುವವನನ್ನು ಬಿಟ್ಟುಕೊಡದೆ ನರ್ಸಿಂಗ್ ಹೋಂ ನಲ್ಲಿಟ್ಟುಕೊಳ್ಳುವುದೇಕ್ರಮ. ಇದು ಶಾಸ್ತ್ರಕ್ಕೆತೀರಾವಿರುದ್ಧ. ಕೆಳಜಾತಿಯ ವರು ಹೆಣ ಮುಟ್ಟಕೂಡದು. ಸಾಯುವವ ಸ್ವಾಭಾವಿಕವಾಗಿ, ಆದರೆ 2ದಿನ ಮುಂಚೆಯೇ ಮನೆಸೇರಲಿ. ಆದಷ್ಟುಶಾಸ್ತ್ರ ಅನುಸಾರದರೀತಿಯಲ್ಲಿ ಬೇಕಾದ ದಾನಮಾಡಲಿ (ಪ್ರಜ್ಞೆಯಲ್ಲಿದ್ದಾಗ ಅವನ ಕೈಗೆ ಮುಟ್ಟಿಸಿ ದಾನಮಾಡುವ ಕ್ರಮವಿದೆ). ಮನೆಯ ಒಗ್ಗುವ ವಾತಾವರಣದಲ್ಲೂ ಅಶುದ್ಧಮದ್ದು ನಿಲ್ಲಿಸಿ. ತೀರ್ಥಕುಡಿದು, ದೇವರನಾಮ ಪಠನ ಗೀತೆಯ ಪಾರಾಯಣ ಇರುವಲ್ಲಿ ನೆಲದ ಮೇಲೆ ಸಾಯುವುದು ಮಾತ್ರವೇ ಉತ್ತಮವಾದೀತು. ಮದರಾಸಿನಲ್ಲಿ ನನ್ನ ಪರಿಚಿತರು ಎಂ.ಡಿ. ಆದವರು, ತನಗೆ ಖಾಯಿಲೆ ಹೆಚ್ಚಾದಾಗ ಎಷ್ಟಕ್ಕೂ ಆಸ್ಪತ್ರೆಗೆ ಸೇರಿಸಬೇಡಿರಿ ಎಂದು ಮನೆಯಲ್ಲಿಹೇಳಿರುವೆ, ಎಂದು ನನ್ನ ಹತ್ತಿರ ಹೇಳಿದ್ದುಂಟು!

ಮರಣದ ಅನಂತರ ಹೆಣಕ್ಕೆ ಸ್ನಾನಮಾಡಿಸಿ ಹೊಸಬಟ್ಟೆ ಮುಚ್ಚುವುದು ಕ್ರಮ. ಶವದ ದಹನಕಾರ್ಯವನ್ನು ಶಾಸ್ತ್ರೀಯ ರೀತಿಯಲ್ಲಿ ಮಾಡಿದರೆ ಮಾತ್ರ ಸ್ವರ್ಗಲೋಕಪ್ರಾಪ್ತವಾಗುತ್ತದೆ ಎಂದು ಅಶ್ವಲಾಯನ ಗೃಹ್ಯಸೂತ್ರ ದಲ್ಲಿದೆ. ಆದರೆ ಈ ಕಾಲದಲ್ಲಿ ಬಹುಮಟ್ಟಿನ ಕ್ರಮ ಶಾಸ್ತ್ರಭಾಗದ ಕೆಲಸಕ್ಕೆ ಅವರು ಹಾಗೆ ಸುಲಭಮಾಡಿದ್ದಾರೆ, ಇವರು ಹೀಗೆ ಸುಲಭಮಾಡಿದ್ದಾರೆ, ನಮಗೂ ಅದು ಸಾಕು, ಎಂಬುದೇ ಕ್ರಮವಾಗಿದೆ! ಕೋರ್ಟು ವ್ಯವಹರಣೆ ಗಾದರೆ ಮಗನರೋಗಕ್ಕೆ ಚಿಕಿತ್ಸೆಗಾದರೆ. ಉತ್ತಮ ನ್ಯಾಯವಾದಿ ಯಾರು? ವೈದ್ಯರು ಯಾರು? ಎಂದು ಅರಿಸುವುದೇ ಕ್ರಮ. ಮೃತನ ಹಿತಬಯಸು

ಪವರು ಆದಷ್ಟು ಉತ್ತಮ ಪುರೋಹಿತರನ್ನೇ ಆರಿಸುವುದುತ್ತಮ. ಅಂತಿಮ ಕ್ರಿಯೆಯ ಭಾಗವಾಗಿ ಆದಷ್ಟು ದಾನಗಳನ್ನು ಉತ್ತಮ ಪುರೋಹಿತರುಗಳಿಗೆ ಕೊಡುವುದುತ್ತಮ.

ದುರ್ಮರಣದಿಂದ ಮೃತರಾದವರಿಗೆ (ಆತ್ಮಹತ್ಯದಿಂದ, ಕಾರಿನಡಿ ಬಿದ್ದು, ನೀರಲ್ಲಿ ಬಿದ್ದು ಮುಂತಾಗಿ ಸತ್ತವರಿಗೆ) ಪ್ರಾಯಶ್ಚಿತ್ತ, ದಾನಗಳು, ನಾರಾಯಣಬಲಿ ಮುಂಚೆ ಆಗಬೇಕು. ಸರ್ಪಕಚ್ಚಿ ಸತ್ತವರಿಗೆ ಚಿನ್ನದನಾಗನ ದಾನ ವಿಧಿಸಿದೆ. ಬ್ರಹ್ಮಚಾರಿಮರಣದಲ್ಲಿ ಹೆಣಕ್ಕೆ ಅರ್ಕದಗಿಡದೊಡನೆ ವಿವಾಹ ಹೇಳಿದೆ. ರಜಸ್ವಲೆಯ ಮರಣ, ಹೆತ್ತವಳ ಸೂತಕದ ಮರಣಗಳಲ್ಲೂ ವಿಶೇಷ ಕ್ರಮಗಳಿವೆ. ಕುಷ್ಟರೋಗಿಯನ್ನು ಹುಗಿಯುವುದು. ಪ್ರಾಯಶ್ಚಿತ್ತಕ್ಕೂ ಬಹಿಷ್ಕೃತವಾದ ಪತಿತನ ಮರಣದಲ್ಲಿ (ತಂದೆ ತಾಯಿ ಆದರೆ) 'ಪತಿತೋದಕ' ವಿಧಿ, ಆಮೇಲೆ ನಾರಾಯಣಬಲಿ, ಆಮೇಲೆಕ್ರಮವಾಗಿ ಅಂತ್ಯಕ್ರಮ, ವಿಧಿಸಿದೆ. ತಂದೆತಾಯಿ ಅಲ್ಲದಿದ್ದರೆ ನಾರಾಯಣಬಲಿ ಇಲ್ಲ ; ಸಪಿಂಡೀಕರಣವಿಲ್ಲ ; ಅಂತ್ಯ ಕರ್ಮವಿದೆ (ಧರ್ಮಸಿಂಧು). ಮುಟ್ಟಕೂಡದವರ ಇಲೆಕ್ಟ್ರಿಕ್ ದಹನಬೇಡ.

೩೩. ಪಿತೃಶ್ರಾದ್ಧ

ಕೇವಲ ೫೦ವರ್ಷಗಳ ಹಿಂದಿನವರೆಗೂ ಸಾಧಾರಣ ಎಲ್ಲ ಬ್ರಾಹ್ಮಣರೂ ಇತರರೂ ಪಿತೃಶ್ರಾದ್ಧವು ನಡೆಸಲೇಬೇಕಾದುದು ಎಂಬ ಭಾವನೆಯುವರಾಗಿದ್ದರು. ಸೆಕ್ಯುಲರ್‌ಭಾವನೆ ಬೆಳೆದಂತೆ, ಶಾಸ್ತ್ರಜ್ಞಾನವು ಅನಗತ್ಯವಾಗಿಬಂದಂತೆ, ಈ ಅತ್ಯುಪಯುಕ್ತ ಕರ್ಮದಲೋಪವು ಹೆಚ್ಚುತ್ತಿದೆ. ಅನೇಕರಲ್ಲಿ, ಮೃತ ಪಿತೃಗಳು ಎಲ್ಲಿದ್ದಾರೆಯೋ ಏನೋ ; ಇಲ್ಲಿ ಪುರೋಹಿತರ ಹೇಳಿಕೆಯಂತೆ ಪಿಂಡಹಾಕಿದರೆ ಅದು ಪಿತೃಗಳಿಗೆಸೇರುವುದು ಹೇಗೆ ಸಾಧ್ಯ? ಎಂಬ ಕುತರ್ಕವೂ ಕಳ್ಳಮನಸ್ಸಿನ ಬೆಂಬಲಕ್ಕೆಬಂದಿದೆ. ಆದರೆ ಪಾಶ್ಚಾತ್ಯರು ಕಂಡುಹಿಡಿದ ಸುಲಭ ಪ್ರೇತಸಂಪರ್ಕದ ಸಾಧ್ಯತೆ ಯಾರೂ ಅಲ್ಲಗಳೆಯುವುದಿಲ್ಲ. ಪಿತೃಗಳಿಗೆಪಿಂಡ ಅರ್ಪಿಸುವಾಗ ಹೆಸರು ಗೋತ್ರ, ವಸುರೂಪ (ಒಂದು ತಲೆಮಾರು ಹಿಂದಿನವರಾದ ತಂದೆಯವರ್ಗ) ಅಥವಾ ರುದ್ರರೂಪ (ಅದಕ್ಕೂ ಎರಡು ಹಿಂದಿನ ತಲೆ ಮಾರಾದ ಅಜ್ಜನವರ್ಗ) ಆದಿತ್ಯರೂಪ (ಮೂರುಹಿಂದಿನ ತಲೆಮಾರಿನ ಪಿಜ್ಜನ ವರ್ಗ) ಎಂದು ಮಾತ್ರ ಹೇಳಿದರೆ ಸಾಕು ; ಅವರಿಗೆ ಅವರಿರುವ ರೂಪದಲ್ಲಿ ಪ್ರಿಯವಾಗುವ ತರದಲ್ಲಿ ಆ ಪಿಂಡವುಲಭಿಸುತ್ತದೆ ಎನ್ನುತ್ತದೆ ಶಾಸ್ತ್ರ. ಅತ್ಯಂತ ಅಪಾರವಾದ ಪ್ರೇತಲೋಕದಲ್ಲಿರುವ ಪ್ರೇತದ ಹೆಸರು ಮಾತ್ರ ಹೇಳಿದರೆ

ಸಾಕು, ಪ್ರೇತಆವಾಹಕನು ಅದನ್ನು ಕರೆತರುತ್ತಾನೆಂದು ರುಜುವಾಗಿದೆಯಷ್ಟೆ! ಶ್ರಾದ್ಧದಲ್ಲಿಯೂ ಹಾಗೆಯೇ ಆಗುತ್ತದೆ.

ಪಿತೃಗಳು ನಮ್ಮಂತೆ ಅಸಮರ್ಥರು, ಕುಂದುಕೊರತೆಗಳಿರುವವರು, ಅವರ ಕಾಲಮುಗಿದು ಎಲ್ಲೋ ಹೋದರು, ಅವರ ಸೇವೆಗಿಂತ ಅವರಿಗಿಂತ ಬಹಳಪ್ರಬಲನಾದದೇವರಿಗೆ ಏನಾದರೂ ಸೇವೆಮಾಡಿಸುವುದು ಉತ್ತಮ ಎಂಬ ಕುತರ್ಕವೂ ಇದೆ. ಆದರೆ ಅತ್ಯಂತ ಆಧಾರ ಗ್ರಂಥವಾದ ವೇದವೇ ಹೇಳಿದೆ—ದೇವಪಿತೃ ಕಾರ್ಯಾಭ್ಯಾಂ ನ ಪ್ರಮದಿತವ್ಯಂ ದೇವರ ಮತ್ತು ಪಿತೃಗಳಕಾರ್ಯ ತಪ್ಪಿಸಬೇಡ; ಮಾತೃದೇವೋಭವ; ಪಿತೃದೇವೋಭವ; ತಾಯಿ ನಿನಗೆ ದೇವರು ತಂದೆ ನಿನಗೆ ದೇವರು ಎಂದು. ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳಿದ್ದಾನೆ, ಯಾರೇಆಗಲಿ ಶಾಸ್ತ್ರವಿಧಿಗಳನ್ನು ಉಲ್ಲಂಘಿಸಿ ಕೇವಲತನ್ನ ಬುದ್ಧಿಗೆತೋರಿದಂತೆ ಮಾಡುತ್ತಾನೋ ಅವನು ಇಹದಲ್ಲಾಗಲಿ ಪರದಲ್ಲಾಗಲಿ ಸುಖ ಸದ್ಗತಿ ಪಡೆಯನು ಎಂದು. ಪಿಂಡವು ತಂದೆತಾಯಿಗಳಿಗೆ ಅತ್ಯಂತ ಪ್ರಿಯಕರ ; ಅವರು ನಿರೀಕ್ಷಿಸುವ ವಸ್ತು. ಅವರು ನಮಗಾಗಿ ಅಪಾರ ಶ್ರಮವಹಿಸಿ ಉಪಕಾರ ಮಾಡಿರುವಾಗ, ಅನೇಕರು ಮಕ್ಕಳಿಗೆ ಆಸ್ತಿಮನೆ, ಧನಕನಕಗಳನ್ನು ಬಿಟ್ಟು ಹೋಗಿರುವಾಗ, ಪ್ರತ್ಯುಪಕಾರವಾಗಿ ಅವರಿಗೆ ಕೇವಲ ಪಿಂಡದಾನ ಮಾಡದ ಮಗ ಎಂಥ ಕೃತಘ್ನ. ಈ ಕೃತಘ್ನತೆಯ ಪಾಪಕ್ಕೆ ಪರಿಹಾರವಿಲ್ಲ! ಮಾತ್ರವಲ್ಲ ಪಿಂಡಪ್ರದಾನದ ಮೂಲಕ ತೃಪ್ತರಾದ ನಮ್ಮ ಪ್ರಿಯ ಪಿತೃಗಳು ತಮ್ಮ ಆಶೀರ್ವಾದದ ಮೂಲಕ ಅನಂತರವೂ ನಮ್ಮ ಹಿತಕ್ಕೆ ಸಹಾಯಮಾಡುವರು, ಎನ್ನುತ್ತದೆ ಶಾಸ್ತ್ರ. ಏಕೆಂದರೆ ಅವರು ನಮ್ಮ ಬಂಧುಗಳೇ ಅಲ್ಲವೇ ?

ಮಾತ್ರವಲ್ಲ ನಮ್ಮ ಅತಿಮುಖ್ಯ ಸ್ಮೃತಿಗ್ರಂಥ ಹೇಳುತ್ತದೆ ;

ದೇವಕಾರ್ಯಾದ್ವಿಜಾತೀನಾಂ ಪಿತೃಕಾರ್ಯಂ ವಿಶಿಷ್ಯತೇ । (ಮನು ೩, ೨೦೩)

ಎಂದರೆ ದ್ವಿಜರಿಗೆ ದೇವಕಾರ್ಯಕ್ಕಿಂತ ಪಿತೃಕಾರ್ಯವು ಮುಖ್ಯ ಎಂದು. ಅದನ್ನು ಬಿಡಲೇಕೂಡದು.

ಈಗ ಇಲ್ಲಿ ಮುಖ್ಯವಾಗಿ ಪಾರ್ವಣ ಅಥವಾ ವಾರ್ಷಿಕ ಶ್ರಾದ್ಧದ ವಿಚಾರ ಹೇಳಲ್ಪಡುವುದು (ಇತರತರದವೂ ಇವೆ). ಶ್ರಾದ್ಧವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ನಾಲ್ಕುವರ್ಣದವರೂ ಅಗತ್ಯವಾಗಿ ಮಾಡಬೇಕು. ದ್ವಿಜರು ತಮ್ಮತಮ್ಮ ವರ್ಣಕ್ಕೆ ಉಚಿತವಾದ ಕ್ರಮದಂತೆ ಮಂತ್ರಪೂರ್ವಕವಾಗಿ ಅನ್ನಾದಿಗಳನ್ನು ಪಿತೃಗಳಿಗೆ ಶ್ರಾದ್ಧಮುಖೇನ ಅರ್ಪಿಸಬೇಕು ; ಸ್ತ್ರೀಯರೂ ಶೂದ್ರರೂ ಮಂತ್ರ ಉಚ್ಚರಿಸದೆ, ವಿಪ್ರರು ಹೇಳಿದಂತೆ ಶ್ರಾದ್ಧಮಾಡಬೇಕು

(ಬ್ರಹ್ಮ ಅ ೨೨೦,೪). ಪಿತೃಗಳಿಗೆ ಶ್ರದ್ಧೆಯಿಂದ ಬರೇನೀರನ್ನು ಅರ್ಪಿಸಿದರೂ ಅದು ಅಪಾರ ಸುಖ ಕೊಡುತ್ತದೆ. ಉತ್ತಮವಾದ ಪಾಯಸ ಅರ್ಪಿಸಿದರೆ ಮತ್ತೂ ಹೆಚ್ಚು ಫಲಬಾರದಿದ್ದೀತೇ ?

ಶಾಸ್ತ್ರವು ಶ್ರಾದ್ಧಕ್ಕೆ ವಿಶೇಷಮಹತ್ವ ಕೊಡುವುದರಿಂದಲೇ ದೇವತೆಗಳಿಗಿಂತಲೂ ಪಿತೃಗಳ ಸಮಾರಾಧನೆ ಮೊದಲು ನಡೆಯಬೇಕೆಂದು ವಿಧಿ ಇದೆ.

ದೇವತಾಭ್ಯಃ ಪಿತೃಣಾಂ ಹಿ ಪೂರ್ವಮಾ ಪ್ಯಾಯನಂ ಸ್ಮೃತಮ್

ಮನುಸ್ಮೃತಿಯಲ್ಲಿಯೂ (ಬ್ರಹ್ಮಾಂಡ ಉತ್ತರ ೧೦, ೧೧೫) ದೇವತೆಗಳ ಪ್ರೀತ್ಯರ್ಥವಾಗಿ ಮಾಡುವ ಕರ್ಮಕ್ಕಿಂತ ಪಿತೃಗಳ ಪ್ರೀತಿಕರವಾದ ಶ್ರಾದ್ಧವೇ ದ್ವಿಜಾತಿಯವರಿಗೆ ಶ್ರೇಷ್ಠ ಎಂದಿದೆ (೩, ೨೦೩). ದೇವತೆಗಳು ಕೂಡ ಪಿತೃಗಳನ್ನೆ ಮೊದಲು ಅರ್ಚಿಸುತ್ತಾರೆ (ಬ್ರ. ಉ. ಅ ೧೨, ೨), ಸಕಲಭೋಗಗಳನ್ನು ಅಪೇಕ್ಷಿಸುವವನೂ, ಪಾಪಗಳಿಂದ ಬಿಡುಗಡೆ ಹೊಂದಲು ಬಯಸುವವನೂ, ಪಿತೃಗಳನ್ನು ಹೀಗೆ (ಮುಂಚೆಯೇ) ಪೂಜಿಸಬೇಕು. ಶ್ರಾದ್ಧದಲ್ಲಿ ತೃಪ್ತಿಹೊಂದಿದ ಪಿತೃಗಳು ವಸುಗಳನ್ನೂ ರುದ್ರರನ್ನೂ ಆದಿತ್ಯರನ್ನೂ ನಕ್ಷತ್ರಗಳನ್ನೂ, ಗ್ರಹಗಳನ್ನೂ ಶ್ರಾದ್ಧಮಾಡಿದ ಮನುಷ್ಯನ ವಿಷಯದಲ್ಲಿ ಪ್ರೀತಿ ತೋರುವಂತೆ ಮಾಡುತ್ತಾರೆ (ಬ್ರಹ್ಮ. ಅ ೨೨೦, ೧೧೮).

ಕಾಮಾನಭೀಪ್ಸನ್ಸಕಲಾನ್ಪಾಪಾದಾತ್ಮ ವಿಮೋಚನಂ ।
ವಸೂನ್ರುದ್ರಾಂ ಸ್ತದಾದಿತ್ಯಾನ್ನಕ್ಷತ್ರಗ್ರಹತಾರಕಾಃ ॥

ಮತ್ತು ಆ ರೀತಿತೃಪ್ತರಾದಪಿತೃಗಳು ಆ ಯಜಮಾನನಿಗೆ ಆಯಸ್ಸನ್ನೂ ಪ್ರಜೆಗಳನ್ನೂ (ಮಕ್ಕಳು) ಧನವನ್ನೂ ವಿದ್ಯೆಯನ್ನೂ ಸ್ವರ್ಗ ಮೋಕ್ಷವನ್ನೂ ಸುಖವನ್ನೂ ಕರುಣಿಸುವರು.

ಪ್ರೀಣಯಂತಿ ಮನುಷ್ಯಾಣಾಂ ಪಿತರಃ ಶ್ರಾದ್ಧತರ್ಪಿತಾಃ ।
ಆಯುಃಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿಚ ॥ ೧೧೯ ॥

ಆದ್ದರಿಂದಲೇ ಮನೆಯಲ್ಲಿ ಉಪನಯನ ವಿವಾಹ ಮುಂತಾದ ಉತ್ತಮ ಸಂಸ್ಕಾರಗಳಾಗಬೇಕಾದಾಗ, ಆರಂಭದಲ್ಲೇ ವೃದ್ಧಿನಾಂದಿ ಶ್ರಾದ್ಧ ಮಾಡುವುದೇ ಕ್ರಮ. ಅದು ಪ್ರಪ್ರಥಮವಾಗಿ ಕುಟುಂಬದ ಹಿರಿಯರನ್ನು ಪ್ರಾರ್ಥನೆಗೆ ಕರೆಸಿಕೊಂಡಂತೆ.

ಮಾತ್ರವಲ್ಲ, ಶ್ರಾದ್ಧದಿಂದ ಸಂತುಷ್ಟರಾದಪಿತೃಗಳು ಮೋಕ್ಷ, ಯೋಗ ಐಶ್ವರ್ಯ, ಸೂಕ್ಷ್ಮದೇಹ, ವಿದೇಹ ಕೈವಲ್ಯ. ತೀವ್ರವೈರಾಗ್ಯ, ಸ್ಥಿರ ಪದವಿಗಳನ್ನೂ ಅನುಗ್ರಹಿಸುವರು (ಬ್ರಹ್ಮ. ಅ ೨೨೦ ೧೧೪).

ಮೋಕ್ಷಂ ಯೋಗಮಥೈಶ್ವರ್ಯಂ ಸೂಕ್ಷ್ಮದೇಹ ಮದೇಹಿತಾಮ್
ಕೃತ್ಸ್ನಂ ವೈರಾಗ್ಯಮಾನಂತ್ಯಂ ಪ್ರಯಚ್ಛಂತಿ ಪಿತಾಮಹಾಃ (೧೧, ೧೧೪)

ಇದು ಏಕೆಂದರೆ ನಿಜವಾದ ಶಾಶ್ವತ ಸುಖವು ಮೋಕ್ಷದಿಂದ ಮಾತ್ರ ಸಾಧ್ಯ. ಪಿತೃದೇವತೆಗಳು ಕೋಪವಿಲ್ಲದವರು, ಬಾಹ್ಯ ಮತ್ತು ಅಂತರಂಗದ ಅತ್ಯುತ್ತಮ ಶೌಚವಿರುವವರು, ಆಯುಧ ಅಸ್ತ್ರ ತ್ಯಜಿಸಿದವರು, ಬ್ರಹ್ಮಚಾರಿಗಳು, ದಯಾಪರರು (ಮನು ೩, ೧೯೨) ಯೋಗಾಭ್ಯಾಸದ ತಪೋಬಲವಿರುವವರು, ಸಾವಿರಾರು ಯುಗಗಳಲ್ಲಿ ಮಹಾ ಯೋಗಾಭ್ಯಾಸ ನಿರತರಾಗಿದ್ದು ಬ್ರಹ್ಮನನ್ನು ಹೊಂದಲಿಕ್ಕಿರುವವರು (ಬ್ರಹ್ಮಾಂಡ. ಅ ೯ ೬೨). ಅವರಿಗೆ, ನಮ್ಮ ಅತ್ಯಂತ ಹಿತಕರದ ದಾರಿಯನ್ನು ನಮಗೆ ಹಿಡಿಸುವ ಕಾಂಕ್ಷೆ ಮತ್ತು ಶಕ್ತಿ ಧಾರಾಳವಾಗಿ ಇದೆ. ಈ ಕಾಲದಲ್ಲಿ ಮೋಕ್ಷದ ಬಯಕೆ ಬಹುಮಟ್ಟಿಗೆ ಮಾಯಕವಾಗಲಿಕ್ಕೆ ಶ್ರಾದ್ಧಕರ್ಮವು ಬೇಕಾದ ಶ್ರದ್ಧೆಯಿಂದ ಆಚರಿಸಲ್ಪಡದಿರುವುದೇ ಕಾರಣವಿರಬಹುದು.

ಇನ್ನು ಶ್ರಾದ್ಧ ಮಾಡದಿದ್ದರೆ ಹಾನಿಅಪಾರವಾದುದು. ಯಾರು ಪ್ರತಿವರ್ಷದಲ್ಲಿ ಬರುವ ಮೃತದಿನದಲ್ಲಿ ಮಾತೃಶ್ರಾದ್ಧ ಪಿತೃಶ್ರಾದ್ಧ ಮಾಡುವುದಿಲ್ಲವೋ ಅಂಥವನು ಮಾಡುವ ದೇವತಾಪೂಜೆಯನ್ನು ಹರಿಯಾಗಲಿ, ಬ್ರಹ್ಮನಾಗಲಿ ಅಥವಾ ಬೇರೆ ದೇವತಾಗಣವಾಗಲಿ ಸ್ವೀಕರಿಸುವುದಿಲ್ಲ (ಅ ೧೮೩, ೨೧, ೨೨).

ಮೃತೇಽಹನಿ ಪುನರ್ಯಸ್ತು ನಕರ್ಯಾಚ್ಛ್ರಾದ್ಧಮಾದರಾತ್ ।
ಮಾತುಶ್ಚ ಖಗಶಾರ್ದೂಲ ವತ್ಸರಾಂತೇ ಮೃತೇಽಹನಿ ॥
ನಾಹಂತಸ್ಯ ಖಗಶ್ರೇಷ್ಠ ಪೂಜಾಂ ಗೃಹ್ಣಾಮಿನೋಹರಿಃ ।
ನ ಬ್ರಹ್ಮಾ ನ ಚ ವೈರುದ್ರೋ ನಾಚಾನ್ಯೇ ದೇವತಾಗಣಾ॥

ಮತ್ತು ಯಾವ ಮಾನವನು ಪಿತೃಗಳನ್ನು ಅರ್ಚಿಸದೆ ಯಾವುದೇ ಸತ್ಕರ್ಮಮಾಡುತ್ತಾನೋ ಆ ಸತ್ಕರ್ಮದ ಫಲವುನಷ್ಟವಾಗಿ ರಾಕ್ಷಸ ಅಥವಾ ದಾನವರು ಅಪಹರಿಸುವರು (ಬ್ರಹ್ಮಾಂಡ, ಉತ್ತರ, ಅ ೯, ೨೮). ಶ್ರಾದ್ಧವನ್ನು ಮಾಡದವನು ನರಕವನ್ನು ಸೇರುವನು (ಸ್ಕಾಂದ, ಪ್ರಭಾಸ, ಅ ೨೧೮, ೪೧) ಶ್ರಾದ್ಧದ ಆಚರಣೆಯುಳ್ಳವನು ಪಾಪಕಳೆಕೊಳ್ಳುತ್ತಾನೆ. (ಬ್ರಹ್ಮಾಂಡ, ಉತ್ತರ ಅ ೧೪, ೪). ಶುದ್ಧ ಮನಸ್ಸಿನಿಂದ ಚೆನ್ನಾಗಿ ಶ್ರಾದ್ಧ ಮಾಡುವವನು ಶುದ್ಧನಾಗುವನು (೧೩, ೧೩೪).

ಶತಪತ ಸಂಹಿತೆಯಂತೆ ಪಿತೃಶ್ರಾದ್ಧಮಾಡದವರು ಹಲವು ಚಾಂಡಲ ಜನ್ಮಹೊಂದುತ್ತಾರೆ. ಹೇಮಾದ್ರಿಯಲ್ಲಿ, ಯಾರಲ್ಲಿ ಶ್ರಾದ್ಧನಡೆಯುವುದಿಲ್ಲವೋ ಅಲ್ಲಿ ಸುಪುತ್ರರು ಜನಿಸರು, ಹುಟ್ಟಿದರೂ ಕುಟುಂಬದ ವಿರೋಧಿ

ಗಳಾಗುತ್ತಾರೆ, ಕುಲದ ವೃದ್ಧಿಯಾಗದು. ಪಿತೃಗಳಿಗೆ ತಿಲೋದಕ ಪಿಂಡ ಪ್ರದಾನವಾಗದಿದ್ದರೆ ಅವರು ನರಕದಲ್ಲಿ ಬೀಳುತ್ತಾರೆ, ಸದ್ಗತಿ ಸಿಗದೆಂದಿದೆ. ಪದ್ಮಪುರಾಣದಂತೆ ಶ್ರಾದ್ಧಕ್ಕಿಂತ ದೊಡ್ಡ ಯಜ್ಞವು ಮೂರುಲೋಕದಲ್ಲಿಲ್ಲ. ಇಲ್ಲಿ ಯಾವುದನ್ನು ಕೊಡುತ್ತಾನೋ ಅದನ್ನು ಅಕ್ಷಯವಾಗಿ ಪರದಲ್ಲಿ ಶ್ರಾದ್ಧ ಮಾಡಿದವ ಅನುಭವಿಸುತ್ತಾನೆ (ಸೃಷ್ಟಿ ಅ ೪೭, ೨೧೪).

ಶ್ರಾದ್ಧವು ಮನುಷ್ಯನಲ್ಲಿ ಅತ್ಯಂತ ಪಾಪತರುವ ಕೃತಘ್ನತೆ ಇದೆಯೋ ಎಂಬುದಕ್ಕೆ ದೇವರು ನಮಗೆ ನಡೆಸುವ ಪರೀಕ್ಷೆ (Test). ತಾನು ಹುಟ್ಟಿ ದಂದಿನಿಂದ ಮಾತಾಪಿತೃಗಳಿಂದ ಉಪಕಾರ ಪಡೆಯುತ್ತ ಬಂದವ. ಪ್ರಾಣಿ ಗಳಲ್ಲಿಲ್ಲ ಮನುಷ್ಯ ವಿವೇಚನಾಶಕ್ತಿ ಧರ್ಮದಭಾವನೆ ಇರಬೇಕಾದವ. ಅವನ ಪಿತೃಗಳು ಬಯಸುವಪಿಂಡ ಅವರಿಗೆ ಇಲ್ಲವಾದರೆ ಕೆಟ್ಟಪಿಶಾಚತ್ವ ಬರುತ್ತದೆ. ನರಕ ಹಸಿವಿನಬಾಧೆ ಉಂಟಾಗುತ್ತದೆ. ಆದ್ದರಿಂದ ಶ್ರಾದ್ಧಮಾಡುವುದಿಲ್ಲ ವಾದರೆ ಆ ಮಗ ತೀರಾ ಅಯೋಗ್ಯನೆಂದೇ ದೇವರು ನಿರ್ಧರಿಸದಿರನು. ಒಬ್ಬ ತುಂಬಾ ಸಾಲಮಾಡಿ ಭೋಗಿಸಿ ಅನಂತರ ದಿವಾಳಿ ಅರ್ಜಿ ಹಾಕಿದವನನ್ನು ಉತ್ತಮ ರಾಜ ಎಷ್ಟಕ್ಕೂ ಮಂತ್ರಿಯಾಗಿಆರಿಸಲಾರ. ಅಂತೆಯೇ ಪಿತೃಋಣ ಅರ್ಥಮಾಡಿಕೊಂಡು ಶ್ರಾದ್ಧಮಾಡಿದವನಲ್ಲಿ ವಿಶೇಷ ಶ್ರದ್ಧೆಕಂಡ ಪಿತೃದೇವತೆ ಗಳು, ಇವ ಇನ್ನೂಮೇಲೆ ಹೋಗಲು ಯೋಗ್ಯ ಎಂದು ಮೋಕ್ಷದ ಬಯಕೆ ಯನ್ನೂ ಕೊಡುವಂತೆ ದೇವರಿಂದ ಮಾಡಿಸುತ್ತಾರೆ.

ಆಯಾಯ ವರ್ಣದವರಿಗೆ, ಶೂದ್ರರಿಗೆ, ಅವರವರ ಹಿರಿಯರು ಸಾಮಾನ್ಯವಾಗಿ ಅನುಸರಿಸುತ್ತ ಬಂದಿದ್ದ ಶ್ರಾದ್ಧಕರ್ಮವು ಪಿತೃಗಳ ತೃಪ್ತಿಗೆ ಸಾಕಾಗುತ್ತದೆಂದು ತೋರುತ್ತದೆ. ಏಕೆಂದರೆ ಅವರಲ್ಲಿ ಪಿಶಾಚವಾಗಿ ಬಾಧೆ ಹೊಂದಿದವರು ಹಿಂದೆ ಬಹಳಇರಲಿಲ್ಲ. ಮತ್ತು ಸನಾತನ ಧರ್ಮದಲ್ಲಿ ಅವರವರ ಆಧ್ಯಾತ್ಮಮಟ್ಟಕ್ಕೆ (ಹುಟ್ಟಿಂದಬಂದ ಜಾತಿಗೆ) ತಕ್ಕ ಸಂಸ್ಕಾರಗಳು ಮಾತ್ರ ವಿಧಿಸಲ್ಪಟ್ಟಿವೆ. ಆದರೆ ಈಗಲೀಗ ಆ ಮಟ್ಟವು ಹಾಳುಗುತ್ತಿರುವುದ ರಿಂದ ಈಗಿನ ಜನಾಂಗದವರು ದೇವರಕ್ರೋಧಕ್ಕೆ, ಪಿತೃಗಳ ಕ್ರೋಧಕ್ಕೆ, ಗುರಿ ಯಾಗದಿರರು. ಅವರಿಗೆ ನರಕ ಹೇಗೋಖಂಡಿತ. ಶ್ರದ್ಧೆ ಇದ್ದವನು, ತೀರಾ ಬಡವರಾದರೆ ಯಾಚಿಸಿಯಾದರೂ, ಶ್ರಾದ್ಧಮಾಡಬೇಕು ಎನ್ನುತ್ತದೆ ಪದ್ಮ ಪುರಾಣ (ಸೃಷ್ಟಿ ಅ ೪೭, ೩೦೮).

ಪಿತೃಗಳಶಾಪದಿಂದ ಮಗನ ವೈಭವವೆಲ್ಲನಾಶವಾಗುತ್ತದೆ. ಧನ, ಪುತ್ರ ಯಶಸ್ಸುಗಳು ನಾಶವಾಗುತ್ತವೆ. ಪಿತೃಗಳು ತೃಪ್ತರಾದರೆ ಇವೆಲ್ಲವನ್ನು

ಕೊಡುತ್ತಾರೆ. ಆದ್ದರಿಂದ ಶ್ರಾದ್ಧಕರ್ಮ ಬಿಡಬಾರದು (ಪದ್ಮ ಸೃಷ್ಟಿ ಅ೪೭, ೯೨–೩೦). ಒಮ್ಮೆ ನನ್ನಲ್ಲಿಗೆ ಒಬ್ಬರುಬ್ರಾಹ್ಮಣರು ಒಂದುವಿಚಾರ ಕೇಳಲು ಬಂದರು. ಆಗತಾನೇ ಅವರ ಸೋದರ ಮಾವನ ಎರಡು ಗಂಡುಮಕ್ಕಳು, (ಯುವಕರು) ಒಬ್ಬರ ಅನಂತರ ಬಹುಬೇಗ ಮತ್ತೊಬ್ಬ ಮೃತನಾಗಿದ್ದರು. ಅವರಹೇಳಿಕೆಯಂತೆ ಅವರ ಮಾವನಿಗೆ ಶ್ರಾದ್ಧ ಕರ್ಮವನ್ನು ಮಕ್ಕಳು ಮಾಡದೆ ವಿಪರೀತ ಕಷ್ಟವಾಗಿ, ಅವ ಈ ಅಳಿಯನಿಗೆ ಸ್ವಪ್ನದಲ್ಲಿ–ನೀನು ಶ್ರಾದ್ಧ ಮಾಡಲು ನನ್ನ ಮಕ್ಕಳಿಗೆ ಹೇಳು, ನಾನು ಬಹಳ ಕಷ್ಟದಲ್ಲಿದ್ದೇನೆ. ಅವರು ಹಠಬಿಡದಿದ್ದರೆ, ಅವರನ್ನು ಕೊಂದುಬಿಡುತ್ತೇನೆಎಂದಿದ್ದರಂತೆ. ಆದರೆ ಭಾವನ ಬುದ್ಧಿವಾದವೂ ಮಕ್ಕಳಿಗೆ ಬೇಡವಾಯಿತು. ಪಿಶಾಚವಾಗಿದ್ದ ತಂದೆ ಮಕ್ಕಳನ್ನು ಕೊಂದು ಅವರೂ ಪಿಶಾಚವಾಗುವಂತಾಯಿತು. ಇನ್ನೊಬ್ಬರು ಜೋಯಿಸರು ಹೇಳಿದಕತೆ, ಅವರಲ್ಲಿಗೆ ಬಂದ ಒಬ್ಬರ ಪತ್ನಿಯ ಮೈಮೇಲೆ ಆವೇಶಬಂದಾಗ, ತಾನು ಯಾರೆಂದು ಹೇಳದೆ, ಕತ್ತಿಯಿಂದ ಗಂಡನನ್ನು ಕಡಿಯುತ್ತೇನೆ ಎಂದು ಗದರಿಸುತ್ತಿದ್ದಳಂತೆ. ಪ್ರಶ್ನೆಯಲ್ಲಿ ಪಿತೃಕಾರ್ಯನಡೆಸದ್ದರಿಂದ ಅವಳಮಾವನೇ ಹಾಗೆ ಮಾಡುತ್ತಿದ್ದಾನೆ ಎಂದುತಿಳಿಯಿತು. ನಮ್ಮಲ್ಲಿ ಅತ್ಯಧಿಕಜನರು ಬಹಳ ಸೌಮ್ಯರು. ಸರ್ಕಾರ ಏನೆಲ್ಲ ಅನ್ಯಾಯಮಾಡಿದರೂ ಲಂಚಕೋರತನ ಎಷ್ಟೇ ಬೆಳೆದರೂ, ಜನರುಅಬಲರಾದ್ದರಿಂದ ಸಹಿಸುತ್ತಾರೆ. ಅಂತೆಯೇ ಮಕ್ಕಳಿಂದ ಅನ್ಯಾಯ ಹೊಂದಿದಪಿತೃಗಳೂ, ಪ್ರೇತರಾಗಿಯೇ ಇದ್ದಾಗಲೂ ಏನನ್ನೂ ಮಾಡದೆ ಸುಮ್ಮನಿರುತ್ತಾರೇಂತ ತೋರುತ್ತದೆ. ಆದರೆ ಕೆಲವು ಪ್ರೇತಗಳು ತಮಗಾದಅನ್ಯಾಯ ಸುಮ್ಮನೆ ಸಹಿಸದೆ ಕೇಡುಮಾಡುತ್ತವೆಂದು ತೋರುತ್ತದೆ. ದೇವರು ಅದಕ್ಕೆ ಅಡ್ಡಬಾರನು.

ಗಯಾಶ್ರಾದ್ಧವು ಅತ್ಯಂತ ಶ್ರೇಷ್ಠತರದ್ದು. ಆದ್ದರಿಂದ ಅದನ್ನು ಪಿತೃಗಳು ಬಹಳವಾಗಿಆಶಿಸುತ್ತಾರೆ. “ನಮ್ಮ ಕುಲದಲ್ಲಿ ಗಯೆಗೆಹೋಗಿ ಆದರಪೂರ್ವಕವಾಗಿ ನಮಗೆ ಪಿಂಡವನ್ನುಕೊಡುವ ಸನ್ಮಾರ್ಗಶೀಲರು ಯಾರಾದರೂ ಹುಟ್ಟುವರೋ” ಎಂದು ಪಿತೃಗಳು ಆಶಿಸುತ್ತಾರೆ (ಗರುಡ ಸಾರ ೧೩, ೧೧೫). ಪ್ರಯಾಗ, ವಾರಣಾಸಿ, ಪ್ರಭಾಸ, ಪುಷ್ಕರ, ಧನುಷ್ಕೋಡಿ, ಗೋಕರ್ಣ ಮುಂತಾದವು ಪಿತೃಕಾರ್ಯಕ್ಕೆ ಬಹಳ ಫಲಕೊಡುವ ಕ್ಷೇತ್ರಗಳು (ಬ್ರಹ್ಮಾಂಡ ಉತ್ತರ ಅ ೧೩). ಅಂಥ ಪಿತೃಕಾರ್ಯಕ್ಕೆ ಪ್ರಶಸ್ತವಾದ ಸ್ಥಳಗಳಿಗೆಯಾತ್ರೆಗೆ ಹೊರಟಾಗ ಪಿತೃಗಳುತಮಗೆ ಅಲ್ಲಿ ಪಿಂಡಲಭಿಸೀತೆಂಬ ಆಸೆಯಿಂದ ಮುಂದಾಗಿ ಹೋಗಿ ಕಾಯುತ್ತಾರೆ ; ಆದ್ದರಿಂದ ಅಲ್ಲಿ ಅವರಿಗೆ ಪಿತೃಕಾರ್ಯನಡೆಸದೆ ಇರ

ಬಾರದು. ಅವರ ಆಶೆಗೆ ಭಂಗತರಬಾರದು. ಮೃತನ ಅಸ್ಥಿಯನ್ನು ಗಂಗಾ ನದಿಯಲ್ಲಿಹಾಕುವುದು ಪಿತೃಗಳಿಗೆ ಉತ್ತಮಲೋಕತರುತ್ತದೆ. ಕುಟುಂಬಕ್ಕೂ ಶ್ರೇಯಸ್ಕರ.

ಶ್ರಾದ್ಧಕ್ಕೆ ಕೆಲವು ಉತ್ತಮ ನಿಯಮಗಳು

ಶ್ರಾದ್ಧದಲ್ಲಿ ಉತ್ತಮ ಬ್ರಾಹ್ಮಣರನ್ನು ಮಾತ್ರ ಕರೆಯಬೇಕು. ದೇವ ಕಾರ್ಯಗಳಿಗೆ ಇದು ಅಷ್ಟು ಅಗತ್ಯವಲ್ಲ. ಆದರೆ ಪಿತೃಕಾರ್ಯಕ್ಕೆ ಬಹಳಅಗತ್ಯ. ವೇದ ಚೆನ್ನಾಗಿ ಬಲ್ಲವರೂ ಶೀಲವಂತರೂ ಸದಾಚಾರಿಗಳೂ ಸತ್ಯವಂತರೂ ಮುಂತಾದವರನ್ನು ಕರೆಯಬೇಕು. ತ್ಯಜಿಸಬೇಕಾದ ಬ್ರಾಹ್ಮಣರ ಉದ್ದದ ಪಟ್ಟಿಯನ್ನು ದಾನಮಾಡಬೇಕು ಅ. ೨೧ರಲ್ಲಿ ನೋಡಬಹುದು (ಪುರೋಹಿತ ರನ್ನು ಮಾತ್ರ ದೂರುವುದು ಸರಿಯಲ್ಲ ; ನಾವೂ ಬಹಳ ಕೆಟ್ಟಿರುವವರೇ !).

ಶ್ರಾದ್ಧದಲ್ಲಿ ಶುಚಿತ್ವಅತ್ಯಗತ್ಯ. ಶುದ್ಧಿಯೆಂದರೆ ದೇಹಶುದ್ಧಿ, ದ್ರವ್ಯದ ಶುದ್ಧತೆ. ಹೆಂಡತಿ ಶುದ್ಧಳಾಗಿರುವುದು, ಭೂಮಿಶುದ್ಧತೆ, ಮನಸ್ಸಿನ ಶುದ್ಧತೆ, ಮಂತ್ರಶುದ್ಧತೆ, ಬ್ರಾಹ್ಮಣ ಶುದ್ಧತೆ ಈ ಏಳೂ ಶುದ್ಧವಾಗಿರಬೇಕು (ಸ್ಕಾಂದ ಪ್ರಭಾಸ ಅ ೨೦೫). ದ್ರವ್ಯಶುದ್ಧತೆಯಲ್ಲಿ ಉಪಯೋಗಿಸುವ ಹಣದ ಶುದ್ಧ ತೆಯೂ ಸೇರಿದೆ. ಅನ್ಯಾಯದಹಣದಿಂದ ಶ್ರಾದ್ಧಮಾಡುವುದು ಪ್ರಯೋಜನ ಕಾರಿಯಲ್ಲ. ಮನೆಯನ್ನು ಗೋವಿನಸಗಣಿಯಿಂದ ಸಾರಿಸುವುದು, ಎಳ್ಳು ಮುಂತಾದವನ್ನು ಪರೀಕ್ಷಿಸಿ ತೊಳೆಯುವುದು, ಶ್ರಾದ್ಧದಪಿಂಡಕ್ಕೆ ಭೋಜನಕ್ಕೆ ಪರೀಕ್ಷಿಸಿದ ಅಕ್ಕಿ, ನಿಷೇಧವಲ್ಲದ ತರಕಾರಿ ಧಾನ್ಯ, ಸ್ನಾನ, ಮಡಿಬಟ್ಟೆ (ಪಾಕ ಮಾಡುವವರಿಗೂ), ಶುದ್ಧನೀರು ಮುಂತಾದವು ಅಗತ್ಯ. ಮಧ್ಯಾಹ್ನ ೧೫, ೧೬ ಗಳಿಗೆ (ಕುತಪಕಾಲದಲ್ಲಿ) ಆರಂಭಿಸಿ ಮತ್ತೆ ೧೭, ೧೮ ಗಳಿಗೆ (ರೌಹಿಣ) ಗಳಲ್ಲೂ ಮಾಡುವುದು. ತಂದೆತಾಯಿಗಳ ಮೃತದಿನ ಅರಿಯ ದವನು ಮಾಘ ಅಥವಾ ಮಾರ್ಗಶಿರಮಾಸದ ಅಮಾವಾಸ್ಯೆದಿನ ಶ್ರಾದ್ಧ ಮಾಡ ಬೇಕು (ಸ್ಕಾಂದ. ಪ್ರಭಾಸ ೨೦೭). ನಿತ್ಯದ ಜಪ ಶ್ರಾದ್ಧಕ್ಕೂ ಅತ್ಯಗತ್ಯ.

ಶ್ರಾದ್ಧದ ರಕ್ಷಣೆಗಾಗಿ ಶ್ರೀವಿಷ್ಣುವಿನ ದೇಹದಿಂದ ದರ್ಭೆ, ಕರಿಎಳ್ಳು ಹುಟ್ಟಿದವು. ಅವನ್ನು ಧಾರಾಳವಾಗಿ ಉಪಯೋಗಿಸಬೇಕು. ಶ್ರಾದ್ಧಕಾಲದಲ್ಲಿ ಮನಸ್ಸಿನ ಶುದ್ಧತೆ (ಎಂದರೆ ಸಿಟ್ಟುಮಾಡಕೂಡದು), ಅವಸರ ಮಾಡ ಕೂಡದು, ಶ್ರದ್ಧೆಯಿಂದಿರಬೇಕು. ಬೆಳ್ಳಿಯಪಾತ್ರ ನೋಡುವುದುತ್ತಮ. ಶ್ರಾದ್ಧವನ್ನು ನೀಚಜಾತಿಯವರು, ಬ್ರಾಹ್ಮಣರಾಗಿ ಜನಿಸಿದರೂ ಆಚಾರ

ಭ್ರಷ್ಟರಾದವರು, ಮುಟ್ಟಾದ ಸ್ತ್ರೀ, ನೋಡಬಾರದು. ಯಜಮಾನನು ಆರಂಭಿಸಿದ ಶ್ರಾದ್ಧಕರ್ಮದಲ್ಲಿಯೇ ಮನಸಿಟ್ಟವನಾಗಬೇಕು. ಅಬ್ರಾಹ್ಮಣ ಹಾಗೂ ವೇದಗಳನ್ನು ದ್ವೇಷಿಸುವವ ನೋಡಬಾರದು. ಕೋಳಿ, ನಾಯಿ, ಊರಹಂದಿ ಹತ್ತಿರ ಬರುವಂತಿರಬಾರದು. ಪಾಕದ ಒಂದುಭಾಗ ಎಷ್ಟಕ್ಕೂ ಬಿಚಿ ನೋಡಕೂಡದು. ಶ್ರಾದ್ಧದಲ್ಲಿ ವಾತಾವರಣದಲ್ಲಿ ಬಹಳ ಪರಿಶುದ್ಧತೆ ಇರಬೇಕಾದ್ದರಿಂದ ಅದು ಮಿತ್ರರಿಗೆ ಭೋಜನಮಾಡಿಸುವ ಸಂದರ್ಭವೇ ಅಲ್ಲ. ಹಾಗೆ ಮಾಡಿದರೆ ಶ್ರಾದ್ಧಕರ್ಮವು ವ್ಯರ್ಥ (ಮನು ೩-೧೦೮). ಆದರೆ ಸಂಬಂಧಿಕರು, ದೌಹಿತ್ರ, ಅಳಿಯ, ಸಹೋದರಿಯಮಗ, ಇವರು ಮೂರ್ಖರಾದರೂ ಅವರನ್ನು ತ್ಯಜಿಸಬಾರದು (ಸ್ಕಾಂದ ಪ್ರಭಾಸ. ಅ ೨೦೫, ೫೩, ೬೭). (ಇದು ಪ್ರಾಯಶಃ ಪಿಂಡ ಸ್ವೀಕರಿಸಲು ಬಂದ ಪಿತೃಗಳಿಗೆ ತಮ್ಮ ಪೀಳಿಗೆಯವರನ್ನು ಕಾಣುವ ಆಸೆ ಇರಬಹುದು ಎಂಬುದರಿಂದಿರಬೇಕು. ಆದ್ದರಿಂದ ಅವರ ಪ್ರೀತ್ಯರ್ಥವಾಗಿಯಾದರೂ ಇವರೂ ಆದಷ್ಟು ಸಭ್ಯರೂ ಶುದ್ಧರೂ ಆಗಿರುವುದು ಉತ್ತಮವಾದೀತು!)

ಶ್ರಾದ್ಧದಲ್ಲಿ ಬ್ರಹ್ಮನಿಂದ ಉಚ್ಚರಿಸಲ್ಪಟ್ಟ, ಅಮೃತತ್ವವನ್ನು ಉಂಟುಮಾಡುವ ಮಂತ್ರದೇವತೆಗಳು, ಪಿತೃ, ಸ್ವಾಹಾ, ಸ್ವಧಾ, ಎಂಬ ದೇವತೆಗಳಿಗೆ ಸದಾಕಾಲ ನಮಸ್ಕಾರವನ್ನು ಅರ್ಪಿಸುವೆನು ಎಂಬ ಅರ್ಥದ್ದು ಶ್ರಾದ್ಧದ ಆದಿ, ಮಧ್ಯ ಅಂತ್ಯದಲ್ಲಿ ಮೂರಾವೃತ್ತಿ ಜಪಿಸಲ್ಪಡಬೇಕು. ಪಿಂಡಪ್ರದಾನ ಮಾಡುವಾಗ ಮನಸ್ಸಲ್ಲಿ ಜಪಿಸಬೇಕು. ಈ ಮಂತ್ರದಬಲದಿಂದ ಪಿತೃಗಳು ಶೀಘ್ರವಾಗಿ ಬರುವರು ಮತ್ತು ರಾಕ್ಷಸರು ದೂರಾಗುವರು. ಪಿತೃಗಳ ಉದ್ಧಾರಕ್ಕೆ ಅದು ಕಾರಣವಾಗುವುದು (ಬ್ರಹ್ಮಾಂಡ ಉ. ಅ ೧೧).

> ದೇವತೇಭ್ಯ ಪಿತೃಭ್ಯಶ್ಚ ಮಹಾಯೋಗಿಭ್ಯ ಏವ ಚ ।
> ನಮಃ ಸ್ವಾಹಾಯೈ ಸ್ವಧಾಯೈ ನಿತ್ಯಮೇವ ಭವಭ್ಯುತ (ನಮೋನ್ನಮಃ) ॥

ಶ್ರಾದ್ಧಕ್ಕೆ ಅನ್ನ ತಣಿದಿರಕೂಡದು (ಮಾಡಿ ಒಂದು ಯಾಮ ಮಿಕ್ಕಿರಕೂಡದು). ಶ್ರಾದ್ಧದ ಅನಂತರ ಪಿಂಡವನ್ನು ಗೋವಿಗೆ, ಅಥವಾ ಕಾಗೆಗೆ ಅಗ್ನಿಗೆ, ನೀರಿಗೆ (ಮಧ್ಯಮಪಿಂಡ ಪತ್ನಿಗೆ ಕೊಡಬಹುದು) ಅಥವಾ ದಕ್ಷಿಣಾಭಿಮುಖವಾಗಿ ನಿಂತು ಆಕಾಶಕ್ಕೆ ಎಸೆಯುವುದು (ಸ್ಕಾಂದ). ಬ್ರಾಹ್ಮಣರನ್ನು ಕಳುಹಿಸಿ ಕೊಡುವಾಗ ನಮಸ್ಕರಿಸುತ್ತ, ಬಾಗಿಲವರೆಗೂ ಹಿಂಬಾಲಿಸಬೇಕು.

ಶ್ರಾದ್ಧ ಮಾಡುವವನು ಕ್ಷೌರ, ಅಭ್ಯಂಗ, ದಂತಧಾವನ, ಔಷಧ ಸೇವನೆ, ಮಾಡಕೂಡದು ; **ರಾತ್ರಿ ಸ್ತ್ರೀಸಂಗ ಅವನಿಗೂ ನಿಮಂತ್ರಿತ**

ಬ್ರಾಹ್ಮಣರಿಗೂ ನಿಷೇಧ. ಎರಡನೆ ಊಟ, ಶ್ರಾದ್ಧ ಮಾಡಿದವನಿಗೆ ಪರರಲ್ಲಿ ಶ್ರಾದ್ಧ ಊಟ ನಿಷೇಧ. ಶ್ರಾದ್ಧ ಮಾಡುವವ ಶ್ರಾದ್ಧಕಲ್ಪ ಶ್ರವಣ ಮಾಡ ಬೇಕೆಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ.

ತರ್ಪಣ : ಪಿತೃಪಕ್ಷ. ಮಹಾಭಾರತದಲ್ಲಿ ಪಿತೃಪಕ್ಷದ ವಿಚಾರವಿದೆ. ದಾನವೀರಕರ್ಣನು ಅಪಾರಮಟ್ಟದಲ್ಲಿ ದಾನಮಾಡಿದವನಾದರೂ ವೀರಸ್ವರ್ಗ ದಲ್ಲಿದ್ದಾಗ, ಹಿಂದೆ ಅನ್ನದಾನ ಮಾಡದ್ದರಿಂದ ಹಸಿವನ್ನು ತಣಿಸಲಿಕ್ಕೆ ಆಹಾರ ಹೊಂದುತ್ತಿರಲಿಲ್ಲ. ಚಿನ್ನ ರತ್ನ ಸಿಕ್ಕುತ್ತಿದ್ದವು. ಅವ ಯಮನನ್ನು ಕುರಿತು ಪ್ರಾರ್ಥನೆ ಮಾಡಿದ. ಯಮನು ಪ್ರತ್ಯಕ್ಷನಾಗಿ, ಅವನ ಕಷ್ಟದ ಪರಿಹಾರ ಕ್ಕೆಂದು ಮೃತ್ಯುಲೋಕದಲ್ಲಿ ಭಾದ್ರಪದ ಕೃಷ್ಣಪಕ್ಷದಲ್ಲಿ ೧೫ದಿನಇದ್ದು ಧಾರಾಳ ವಾಗಿ ಅನ್ನದಾನಮಾಡಲು ಹೇಳಿದ. ಅಂತೆಯೇ ಕರ್ಣ ಬ್ರಾಹ್ಮಣರಿಗೂ ಬಡವರಿಗೂ ಧಾರಾಳವಾಗಿ ದಾನಮಾಡಿದ ; ಪಿತೃತರ್ಪಣಕೊಟ್ಟ. ಕಡೇ ದಿನ ಪಿತೃಕಾರ್ಯಗಳನ್ನೆಲ್ಲ ನಡೆಸಿದ. ಅದರಿಂದಾಗಿ ಅವ ಹಿಂದೆಹೋದಾಗ ಪಿತೃಲೋಕದಲ್ಲಿ ಅವನಿಗೆ ಆಹಾರದ ಕೊರತೆ ಇಲ್ಲದಾಯಿತು.

ಯಮನ ಅನುಗ್ರಹದಿಂದಾಗಿ ಈ ಪಕ್ಷವು ಪಿತೃಕಾರ್ಯಕ್ಕೆ ಅತ್ಯಂತ ಮಹತ್ವನ್ನು ಹೊಂದಿದೆ. ಆಗ ಕೊಟ್ಟ ಪಿಂಡ, ತರ್ಪಣ ಎಲ್ಲ ಜೀವಾತ್ಮ ರಿಗೂ–ತಮ್ಮ ಕುಲದವರೇ ಆಗಲಿ-ಆಗದಿರಲಿ, ಸಲ್ಲುತ್ತವೆ. ಯಾರೆಲ್ಲ ಅನ್ನ ದಾನ ಮಾಡದೆ, ಧರ್ಮಸಾಧನೆ ನಡೆಸದೆ, ಪರಲೋಕದಲ್ಲಿ ಕಷ್ಟ ಪಡು ತ್ತಿದ್ದಾರೋ ಅವರಿಗೂ ಇದರಿಂದ ಪ್ರಯೋಜನ ಸಿಕ್ಕುವಂತಾಗುತ್ತದೆ. ಶ್ರಾದ್ಧದತಿಥಿ ತಿಳಿಯದೆ ಶ್ರಾದ್ಧ ನಡೆಸದವರೂ ಶ್ರದ್ಧೆಯಿಂದ ಪಿತೃಪಕ್ಷದ ಕ್ರಿಯೆಯಿಂದ ಬಹಳ ಪ್ರಯೋಜನಹೊಂದುತ್ತಾರೆ. ಈ ಅಮಾವಾಸ್ಯೆ ಸರ್ವ ಪಿತೃ ಅಮಾವಾಸ್ಯೆ. ಪಿತೃಕಾರ್ಯ ದಾನಗಳಿಗೆ ಅತ್ಯುತ್ತಮ. ಪಿತೃಗಳು ತಮ್ಮ ವಂಶದವರ ಮನೆಗೆ ಆಗ ತಪ್ಪದೆ ಬರುತ್ತಾರೆ. ಪಿತೃಪಕ್ಷದ ಪಿತೃದಿನದ ಕ್ರಿಯೆ, ಗಯಾಶ್ರಾದ್ಧ ಅನಂತ ಫಲಕೊಡುವಂತೆ, ಬಹಳ ಫಲ ಕೊಡುತ್ತದೆ. ಮಹಾಲಯದಲ್ಲಿ ದುರ್ಮರಣದಿಂದ ಸತ್ತವರಿಗೂ ಪಿಂಡ ಸಲ್ಲುತ್ತದೆ (All About Hinduism, Swami Shivananda) (ಪುಟ ೧೩೨).

ಪಿತೃತರ್ಪಣ : ಜಲತರ್ಪಣವೂ ಶ್ರಾದ್ಧಕ್ರಿಯೆಯ ಒಂದುರೂಪ. ನಿತ್ಯವೂ ಪಿತೃಗಳಿಗೆ ಜಲತರ್ಪಣ ಕೊಡವುದುತ್ತಮ. ಅದಲ್ಲದೆ ಅಮಾವಾಸ್ಯೆ, ಜನ್ಮನಕ್ಷತ್ರ, ಗ್ರಹಣಕಾಲ, ಮಕರ ಮತ್ತು ಕರ್ಕಾಟಕ ಸಂಕ್ರಾಂತಿ ದಿನಗಳಲ್ಲಿ ಪಿತೃಗಳಿಗೆಲ್ಲ (ಎಂದರೆ ತಂದೆ ಅಜ್ಜ ಪಿಜ್ಜ; ತಾಯಿ ಅಜ್ಜಿ ಪಿಜ್ಜಿ : ಅಂತೆಯೇ

ತಾಯಿಯ ಭಾಗದ ಆ ಹಿರಿಯರು, ಮೃತರಾದ ಇತರ ಸಮೀಪದ ಬಂಧು ಗಳು) ಇವರಿಗೆಲ್ಲ ಧರ್ಬೆ (ಅಭಾವದಲ್ಲಿ, ಗರಿಕೆಯೊಡನೆ) ಎಳ್ಳು ನೀರುಗಳಿಂದ ತರ್ಪಣಕೊಡಬೇಕು. ಇದರಿಂದ ಪಿತೃಗಳು ಬಹಳ ತಂಪ್ತಿ ಪಡುತ್ತಾರೆ.

ಗ್ರಹಣಕಾಲದಲ್ಲಿ ಪಿತೃತರ್ಪಣ ಕೊಡಲೇಬೇಕು. ಕೊಟ್ಟರೆ ಅಕ್ಷಯ ಫಲ. ಗ್ರಹಣಕಾಲದಲ್ಲಿ ಎಲ್ಲ ನೀರುಗಳೂ ಗಂಗಾಜಲಕ್ಕೆ ಸಮಾನ. ಎಲ್ಲ ಬ್ರಾಹ್ಮಣರೂ ವ್ಯಾಸರಿಗೆ ಸಮಾನ. ಆಗ ಮಾಡಿದ ಸ್ನಾನ, ದಾನ, ಪೂಜೆ, ತರ್ಪಣಗಳಿಗೆ ಬೇರೆಕಾಲದ ಲಕ್ಷಪಾಲು ಹೆಚ್ಚುಫಲ. ಆಗ ಶಕ್ತ್ಯಾನುಸಾರ ತರ್ಪಣಕೊಡದವ ಚಂಡಾಲ ಜನ್ಮ ಪಡೆಯುತ್ತಾನೆ.

ಗ್ರಹಣೇ ಚಂದ್ರ ಸೂರ್ಯಸ್ಯ ದತ್ವಾ ಪಿಂಡೋದಕಂ ನರಂ ।
ಅಕ್ಷಯಂ ಲಭತೇ ಸ್ವರ್ಗಂ ಪಿತೃಣಾಂ ಪುಷ್ಟಿವರ್ಧನಂ ॥

(ಪದ್ಮ, ಸೃಷ್ಟಿ. ಅ ೪೭, ೨೩೫ ಗ್ರಹಣಕಾಲಗಳಲ್ಲಿ ಸ್ನಾನ, ಜಪ, ಪೂಜೆ, ಉಪವಾಸ ಮಾಡದಿದ್ದರೆ, ಮಲಗಿದ್ದರೆ, ಬರುವ ಅಪಾರಪಾಪ, ಸದುಪ ಯೋಗಮಾಡಿದರೆ ಬರುವ ಬಹಳ ಪುಣ್ಯ, ಇವುಗಳಿಗೆ ದಾನಮಾಡಬೇಕು ಅಧ್ಯಾಯ ೮, ನೋಡುವುದು).

ತರ್ಪಣ ಕೊಡುತ್ತ ಬ್ರಾಹ್ಮಣರು ಹೇಳುವ ಒಂದು ಮಂತ್ರ

ನರಕೇಷು ಸಮಸ್ತೇಷು ಯಾತನಾಸು ಚ ಯೇಸ್ಥಿತಾಃ ।
ತೇಷಾಮಾಪ್ಯಾಯನಾಯೈತತ್ ದೀಯತೇ ಸಲಿಲಂ ಮಯಾ ॥
ಆಬ್ರಹ್ಮಸ್ತಂಬ ಪರ್ಯಂತಂ ದೇವ ಋಷಿ ಪಿತೃಮಾನವಾಃ
ತೃಪ್ಯಂತು ಪಿತರಃ ಸರ್ವೇ ಮಾತೃಮಾತಾ ಮಹಾದಯಃ ।
ಅತೀತಕುಲ ಕೋಟಿನಾಂ ಸಪ್ತದ್ವೀಪನಿವಾಸಿನಾಮ್ ।
ಆಬ್ರಹ್ಮ ಭುವನಾಲ್ಲೋಕಾದಿದಮಸ್ತು ತಿಲೋದಕಮ್ ॥

(ವಾಯು ಪುರಾಣ ೧೧೦, ೨೧-೨೪).

ಎಂದರೆ ನರಕದಲ್ಲಿದ್ದು ಯಾತನೆ ಅನುಭವಿಸುತ್ತಿರುವ ಸಮಸ್ತರಿಗೂ ತೃಪ್ತಿ ಯಾಗಲೆಂದು ನಾನು ತರ್ಪಣಬಿಡುತ್ತೇನೆ. ಬ್ರಹ್ಮನಿಂದ ಹಿಡಿದು ಎಲ್ಲ ದೇವ ಋಷಿ ಪಿತೃಮಾನವರಿಗೂ ಎಲ್ಲ ಪಿತೃಗಳಿಗೂ ನಾನು ತರ್ಪಣಅರ್ಪಿಸುತ್ತೇನೆ. ಕುಲಕೋಟಿಗಳಿಗಿಂತಲೂ ವಿಸ್ತಾರವಾಗಿರುವ, ಸಪ್ತದ್ವೀಪಗಳ ನಿವಾಸಗಳಿಗೆಲ್ಲ, ಬ್ರಹ್ಮಾಂಡದ ಸಮಸ್ತರಿಗೆಲ್ಲ, ತಿಲೋದಕಅರ್ಪಿಸುತ್ತೇನೆ ಎಂಬ ಭಾವನೆಯಿಂದ ತರ್ಪಣ ಬಿಡುವುದುಕ್ರಮ.

ಗಯಾಶ್ರಾದ್ಧದಲ್ಲಿ ಮತ್ತು ಅಲ್ಲಿ ತರ್ಪಣಕೊಡುವಾಗ ಬಹಳ ವಿಸ್ತರ ವಾಗಿ-ಪಿತೃ ಮಾತೃವಂಶಗಳಲ್ಲಿ ಮೃತರಾದವರಿಗೆಲ್ಲ, ಹಲ್ಲು ಹುಟ್ಟುವ

ಮುಂಚೆಯೇ ಸತ್ತವು, ಬೆಂಕಿ, ಮಿಂಚು, ಕಳ್ಳ, ಹುಲಿ, ಆತ್ಮಹತ್ಯೆಗಳಿಂದ ಮೃತರಾದವರು, ಪತಿತರು. ಕಳ್ಳರು. ತಮ್ಮನ್ನು ತಾವೇ ಮಾರಿಕೊಂಡವರು, ಪಾಪದ ರೋಗವಿರುವವರು, ಗೋಹತ್ಯೆಮಾಡಿದವರು. ನರಕಗಳ (ಹೆಸರು ಹೇಳಿ) ಬೇರೆಬೇರೆ ಕುಂಡಗಳಲ್ಲಿರುವವರು, ಮೃಗಪಕ್ಷಿ, ಮರ, ಬಳ್ಳಿಗಳ ಜಾತಿಯಲ್ಲಿ ಜನಿಸಿದವರು. ಬಾಂಧವರು, ಬಂಧುಗಳಿಲ್ಲದವರು, ಇತರ ಜನ್ಮಗಳಲ್ಲಿ ಬಂಧುಗಳಾಗಿದ್ದವರು, ಮಕ್ಕಳಿಲ್ಲದವರು, ಮುಂತಾದ ಅಪಾರ ವಿಸ್ತಾರದಿಂದ ಕಷ್ಟದಲ್ಲಿದ್ದ ಮೃತಜೀವಿಗಳಿಗೆಲ್ಲ ಅವಕ್ಕೆ ಅತ್ಯಗತ್ಯವಿರುವ, ತರ್ಪಣನೀರನ್ನು ಕೊಡುತ್ತಾರೆ!

ಹೀಗೆ ತರ್ಪಣದಿಂದ ಭೂಲೋಕದ ಜೀವಾತ್ಮರಿಗೆಲ್ಲ ಉಪಕಾರ ಮಾಡುವ ಅತಿಹೆಚ್ಚಿನ ಮನೋಭಾವನೆ, ನಿತ್ಯ ವೈಶ್ವದೇವ ಮಾಡಿ ನಮಗೆ ಮಳೆಕೊಡುವ ದೇವತೆಗಳಿಗೆ ಅನ್ನ ಅರ್ಪಿಸಿ ಅವರು ಲೋಕಕ್ಕೆ ಚೆನ್ನಾಗಿ ಮಳೆ ಕೊಡುವ ಉಪಕಾರಕ್ಕೆ ಪ್ರೇರಿಸುವುದು, ಪ್ರಾಣಿಗಳಲ್ಲೆಲ್ಲ ಜೀವಾತ್ಮರು ಇದ್ದಾರೆಂದು ಮಾಂಸವನ್ನು ಸಂಪೂರ್ಣ ತ್ಯಜಿಸಿದ್ದು, ಸನಾತನ ಧರ್ಮದತಳಹದಿಯಾದ ವೇದದಪರಿಪಾಲನೆ ಮಾಡಿದ್ದು, ನಿತ್ಯವೂ "ಲೋಕಾಃ ಸಮಸ್ತಾಃ ಸುಖಿನೋಭವಂತು" ಎಂದು ಪ್ರಾರ್ಥಿಸುವುದು, ಇವೆಲ್ಲ ಬ್ರಾಹ್ಮಣರಿಗೆ ಅವರು ಬಡವರಾದರೂ, ಲೋಕದಕ್ಷೇಮಕ್ಕೆ ಅತಿ ಹೆಚ್ಚಿನಮಟ್ಟದಲ್ಲಿ ಉಪಕಾರ ಮಾಡುವ ಶಕ್ತಿಕೊಟ್ಟಿತು. ಅಂಥ ವರ್ಗದವರು ಬಾಳಬೇಕು ಎಂದು ಶಾಸ್ತ್ರವು ಇತರರಿಗೆಎಚ್ಚರಿಸಿತು. ಬ್ರಹ್ಮ, ಇಂದ್ರ, ಮರುತ್ ಮೊದಲಾದ ಸಕಲದೇವತೆಗಳು, ಅತ್ರಿ, ಭೃಗು ಮೊದಲಾದ ಸಮಸ್ತಮಹರ್ಷಿಗಳು, ಯಕ್ಷ, ನಾಗ, ಕಿನ್ನರ, ರಾಕ್ಷಸ ಮುಂತಾದವರೂ ಶಾಸ್ತ್ರವಿಧಿಯಂತೆ ಸತ್ಕಾರಪೂರ್ವಕವಾಗಿ ಶ್ರಾದ್ಧವನ್ನು ಆಚರಿಸುತ್ತಾರೆ.

೩೪. ಸಸ್ಯಾಹಾರದ ಹಿರಿಮೆ

ನಮ್ಮಲ್ಲಿ ಸೆಕ್ಯುಲರ್‌ಕ್ರಮದ ಸರ್ಕಾರಬರುವವರೆಗೂ ಹಿಂದೂಜನರಲ್ಲಿ ದೇವರಭಯ, ಪಾಪದಭೀತಿ, ಬಹಳಇತ್ತು. ಶಾಸ್ತ್ರಹೇಳುವ ಪಾಪದಕಾರ್ಯಗಳಿಗೆ ನರಕದಶಿಕ್ಷೆ ಇದೆ ಎಂದು ನಂಬುವುದೇ ಸಾಮಾನ್ಯ ಕ್ರಮವಾಗಿತ್ತು. ಹಿಂದೂಧರ್ಮದಲ್ಲಿ ಶಿಕ್ಷೆಯಕಠಿಣತೆ ಪಾಪಮಾಡಿದವನ ಧರ್ಮದಮಟ್ಟವನ್ನು ಎಂದರೆ ಅವನ ಜಾತಿಯನ್ನು, ಹೊಂದಿಕೊಂಡಿದೆ. ಮೇಲ್ಜಾತಿಯವರ ಕಠಿಣ ನರಕದಶಿಕ್ಷೆಗೆ ಒಂದುಕಾರಣ ಪ್ರಾಣಿಹಿಂಸೆಯ ಮೂಲಕಬರುವ ಮಾಂಸಾಹಾರ.

ತಿದನ್ನು ಸಂಪೂರ್ಣತ್ಯಜಿಸಿದ ಜಾತಿಗಳನ್ನು ನಾವು ಈ ದೇಶದಲ್ಲಿಮಾತ್ರವೇ ನೋಡುತ್ತೇವೆ. ಇತರರಲ್ಲಿ ಕೂಡ, ಇಲ್ಲಿ ಮಾಂಸಾಹಾರವು ಭೂಲೋಕ ದಲ್ಲಿಯೇ ಅತ್ಯಂತ ಕಡಿಮೆಮಟ್ಟಕ್ಕೆ ಇಳಿಸಲ್ಪಟ್ಟಿತ್ತು. ಆದ್ದರಿಂದಲೇ ಜನರಲ್ಲಿ ಕ್ರೂರತೆಕಡಿಮೆಯಾಗಿ ಈ ದೇಶದಲ್ಲಿ ಕೊಲೆಪಾತಕಗಳು ಬಹಳ ಕಡಿಮೆಯಾಗಿ ದ್ದವು.

ಜನರ ಹಿಂದೂಧರ್ಮದ ಆಚರಣೆ ನಡೆಯುವುದು ಮುಖ್ಯವಾಗಿ ಜಾತಿ ಆಚಾರಗಳ ಅನುಸರಣೆಯಮೂಲಕ. ರಾಜಕೀಯ ಮುಖಂಡರ "ಜಾತಿನಾಶ ವಾಗಬೇಕು" ಎಂಬ ೪೦ ವರ್ಷಗಳ ನಿರಂತರ ಕರೆಯಿಂದಾಗಿ ಯುವಕರು ಜಾತಿ ಸದಾಚಾರಬಿಡುವುದು, ಜಾತಿಬೇಕೆನ್ನುವಶಾಸ್ತ್ರವನ್ನೇ ತಾತ್ಸರಿಸುವುದು, ಧಾರಾಳವಾಗಿ ನಡೆದು ಮಾಂಸಾಹಾರ, ಮದ್ಯದ ಸೇವನೆ, ಹೆಚ್ಚುತ್ತಬಂದಿದೆ. ಈಗಲೀಗ ಮಾತ್ರವೇ ಹಿಂದೂಗಳು ಗೋಮಾತೆಯ ಮಾಂಸವನ್ನುಕೂಡತಿನ್ನು ವುದೂ ಅಭ್ಯಸಿಸಿ ಅತ್ಯಂತ ಘೋರತರದಪಾಪ ಕಟ್ಟಿಕೊಳ್ಳುತ್ತಿದ್ದಾರೆ. ದೇಶ ದಲ್ಲೀಗ ಅತಿಕ್ರೂರ ಕಾರ್ಯಗಳೂ ಹೆಚ್ಚುತ್ತಲೇಬಂದಿವೆ. ಅನೇಕರಲ್ಲಿ ಮಾಂಸವು ಉತ್ತಮಆಹಾರ ಎಂಬ ತೀರಾತಪ್ಪುಭಾವನೆಯೂ ಇದೆ. ಆದ್ದ ರಿಂದ ಮಾಂಸಹಾರದ ಹಲವುತರದ ದೋಷಗಳನ್ನೂ ಸಸ್ಯಾಹಾರದ ನಿಜವಾದ ಹಿರಿಮೆಯನ್ನೂ ಅರಿತಿರುವುದು ಉತ್ತಮ.

ಸಸ್ಯಾಹಾರಿಗಳ ಶ್ರಮಸಹಿಸುವ ಶಕ್ತಿ ಮಾಂಸಹಾರಿಗಳ ಶಕ್ತಿಗಿಂತ ಎಷ್ಟೋ ಹೆಚ್ಚು. ಇದರ ಪರೀಕ್ಷೆಗಾಗಿ ನಡೆಸಿದ ಒಂದು ಪ್ರಯೋಗದಲ್ಲಿ ೪೮ ಮಾಂಸಹಾರಿಗಳು, ಅಷ್ಟೇ ಸಸ್ಯಾಹಾರಿಗಳು, ಎರಡು ಕೈಗಳನ್ನೂ ಮುಂದೆ ಹಿಡಿಕೊಂಡೇ ನಿಲ್ಲುವಂತೆ ಮಾಡಿದಾಗ, ಮಾಂಸಾಹಾರಿಗಳ ಅತಿ ಹೆಚ್ಚು ಅವಧಿ ೨೨ ನಿಮಿಷ, ಸಸ್ಯಾಹಾರಿಗಳದ್ದು ಇದರ ಎರಡುಪಾಲಿಗಿಂತ ಹೆಚ್ಚು ; ಅವರಲ್ಲಿ ಮೂರುಜನರು ಸರಾಸರಿ ೧೭೫ನಿಮಿಷ ಹಾಗೆ ಹಿಡಿದದ್ದು ಕಂಡಿತು. ಮತ್ತು ಅವರಿಂದ ಕಾಯಕಷ್ಟದ ಕೆಲಸಮಾಡಿಸಿದಾಗ ಸಸ್ಯಾಹಾರಿಗಳು ಮಾಂಸಾಹಾರಿ ಗಳ ಸುಮಾರು ಎರಡುಪಾಲು ಹೆಚ್ಚು ಉತ್ತಮರಿದ್ದರು. ಅವರಿಗೆ ಮಾಂಸಾ ಹಾರಿಗಳ ಕೇವಲ ಐದನೆ ಒಂದುಪಾಲು ವಿಶ್ರಾಂತಿಕಾಲ ಸಾಕಾಗುತ್ತಿತ್ತು.

ಸುಯೆಜ್‌ಕಾಲುವೆ ನಿರ್ಮಿಸುತ್ತಿದ್ದಾಗ ಅದರಲ್ಲಿ ಅರಬ್ಬಿಕೂಲಿಯವರೂ ಪಾಶ್ಚಾತ್ಯರೂ ಕೆಲಸಮಾಡುತ್ತಿದ್ದರು. ಅರಬರು ಮುಖ್ಯವಾಗಿ ಅಗ್ಗವಾದ ಗೋಧಿ ಮತ್ತು ಖರ್ಜೂರತಿನ್ನುತ್ತಿದ್ದರು. ಪಾಶ್ಚಾತ್ಯರ ಆಹಾರದ ಹೆಚ್ಚಿನ ಭಾಗ ದನದಮಾಂಸವಾಗಿತ್ತು. ಅರಬರ ಶ್ರಮವಹಿಸುವಶಕ್ತಿಯು ಬಹಳಸ್ಪಷ್ಟ

ವಾಗಿ ಹೆಚ್ಚಿಸದು ಎಂಬುದನ್ನು ಕಂಡ ಮುಖ್ಯ ಇಂಜಿನೀಯರ್ ಡಿ. ಲೆಸೆಪ್ಸನು ಮಾಂಸಾಹಾರ ಖಂಡಿತ ಉತ್ತಮವಲ್ಲ ಎಂದು ನಿರ್ಧರಿಸಿ ಸಂಪೂರ್ಣ ಸಸ್ಯಾಹಾರಿಯಾದ. ಸಸ್ಯಾಹಾರಿ ಬ್ರಾಹ್ಮಣರಿಗಿಂತ ಶೂದ್ರರಿಗೆ ದೇಹಬಲ ಹೆಚ್ಚು. ಏಕೆಂದರೆ ಕಾಯಕಷ್ಟ ಹೆಚ್ಚು ಮಾಡುತ್ತಾರೆ.

ಪ್ರಾಣಿಗಳಲ್ಲಿ ಅತ್ಯಂತ ಬಲಶಾಲಿಯಾದ ಆನೆ, ಕುದುರೆ, ಎತ್ತು, ಒಂಟೆ ಸಸ್ಯಾಹಾರಿಗಳು. ಅವುಗಳ ಸಹನಶಕ್ತಿ ಆಶ್ಚರ್ಯಕರ. ಕೇವಲ ಮಾಂಸಾಹಾರಿಯಾದ ಸಿಂಹವು ೧–೨ ಮೈಲು ಓಡುವುದರೊಳಗೆ ವಿಪರೀತದ ದಣಿದುಹೋಗುತ್ತದೆ. ಆದರೆ ಅದನ್ನು ಬೆನ್ನಟ್ಟಿಕೊಂಡುಬರುವ ಸವಾರನ ಕುದುರೆ ಅವನ ಭಾರವನ್ನೂ ಹೊತ್ತುಕೊಂಡು, ತನ್ನ ಜೀವ ಉಳಿಸಿಕೊಳ್ಳಲಿಕ್ಕೆ ಓಡುವ ಸಿಂಹವನ್ನೂ ಹಿಮ್ಮೆಟ್ಟಲಾಪ್ಪದು. ಅನಂತರ ಕೂಡ ಮತ್ತೂ ೧೦–೨೦ ಮೈಲು ಓಡಲಾಪ್ಪದು. ಎತ್ತು ಎಷ್ಟೆಲ್ಲ ಭಾರದ ಗಾಡಿ ಎಳೆಯುತ್ತದೆ? ಕೇವಲ ಮಾಂಸಾಹಾರಿ ಪ್ರಾಣಿಗಳಲ್ಲಿ ಯಾವುದಕ್ಕೂ ಈ ತರದ ಶಕ್ತಿಯಿಲ್ಲ.

೧೦೦ಎಕ್ರೆ ಜಾಗದಲ್ಲಿ ೨೪೦ ಜನರಿಗೆ ಬಾಳಲಿಕ್ಕೆ ಬೇಕಾದ ಗೋಧಿಬೆಳೆಸಬಹುದು. ೬೮೦ ಜನರಿಗೆಬೇಕಾದ ಬಟಾಟೆ ಆಹಾರಬೆಳೆಸಬಹುದು. ಆದರೆ ಪ್ರಾಣಿಗಳಿಗಾಗಿ ಹುಲ್ಲುಬೆಳೆಸಿ, ಆ ಪ್ರಾಣಿಗಳ ಮಾಂಸದಿಂದ ಕೇವಲ ೪೨ಜನ ಬದುಕಿಯಾರು. ಲೋಕದಲ್ಲೀಗ ಜನರಸಂಖ್ಯೆ ವಿಪರೀತಹೆಚ್ಚುತ್ತಿದೆ ಎಂಬ ಭಯವಿರುವಾಗ ಸಸ್ಯಾಹಾರ ಮಾತ್ರವೇ ಮಾನವನ ನ್ಯಾಯವಾದ ಆಹಾರ.

ಸಸ್ಯಾಹಾರವು ಮಾಂಸಕ್ಕಿಂತ ಎಷ್ಟೋಹೆಚ್ಚು ಆರೋಗ್ಯಕರ. ಮಾಂಸಾಹಾರದಲ್ಲಿ ಸಸಾರಜನಕ (Protein) ಇದೆ. ಅದು ದೇಹಕ್ಕೆ ಅಗತ್ಯ ಎಂದು ಮಾಂಸಪ್ರಿಯರಾದ ಪಾಶ್ಚಾತ್ಯರು ಸಾರಿದ್ದರು. ಆದರೆ ಇತ್ತಲಾಗಿನ ಶೋಧನೆಯಂತೆ ಸಸ್ಯಾಹಾರದ ಸಸಾರಜನಕಭಾಗವು ಏನೂ ಕಡಿಮೆ ಶಕ್ತಿಯದಲ್ಲ. ಗೋಧಿಯಲ್ಲಿ ಅದು ಧಾರಾಳವಾಗಿ ಮತ್ತು ಅವರೆ ಬಟಾಣಿಗಳಲ್ಲಿ ಮತ್ತೂ ಹೆಚ್ಚು ಇದೆ. ತರಕಾರಿಗಳಲ್ಲಿರುವ ಅದರಭಾಗ ಅತ್ಯಂತ ಶ್ರೇಷ್ಠತರದ್ದು. ಸಸ್ಯಾಹಾರದ ಸಸಾರಜನಕಭಾಗವು ಮೆದುಳಿಗೆ ಮಾಂಸದಕ್ಕಿಂತ ಉತ್ತಮ, ಜಾನ್ ಹೋಪ್ಕಿನ್ಸ್ ವಿಶ್ವವಿದ್ಯಾಲಯದ ಡಾ॥ ಮ್ಯೇಕ್ ಕಲ್ಲಮ್ಮರು ಹೇಳುತ್ತಾರೆ. "ಅತ್ಯುತ್ತಮ ಆಹಾರವೆಂದರೆ lactovegetarian diet", ಹಾಲು ಸಸ್ಯಾಹಾರ ಎಂದು.

ಮಾಂಸಾಹಾರವು ರಕ್ತದಒತ್ತಡ ಹೆಚ್ಚಿಸುತ್ತದೆ. ಹೃದಯದ ರೋಗ ಹೆಚ್ಚಿಸುತ್ತದೆ. ದೃಷ್ಟಿಮಂದವಾಗುತ್ತದೆ, ಮೂತ್ರಕೋಶದರೋಗ ಹೆಚ್ಚಿಸು

ತ್ತದೆ, ಮೂರ್ಛೆರೋಗ ಹೆಚ್ಚಿಸುತ್ತದೆ. ಹೊಟ್ಟೆಯ ಕ್ಯಾನ್ಸರ್‌ರೋಗಕ್ಕೆ ಮುಖ್ಯಕಾರಣವಾಗುತ್ತದೆ. ರಕ್ತದ ಆಮ್ಲತೆ ಹೆಚ್ಚುಮಾಡಿ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಸಸ್ಯಾಹಾರಕ್ಕಿಂತ ಅದರಲ್ಲಿ ಖನಿಜಭಾಗ ಕಡಿಮೆ.

ಪ್ರಾಣಿಗಳದೇಹದಲ್ಲಿ ಕೆಲವುತರದ ರೋಗದಹುಳುಗಳು (ಲಾಡಿಹುಳ, ಕೂದಲಹುಳ) ಅಥವಾ ಕ್ಷಯರೋಗದ, ಪಾರಾಟೈಫ್ಯಾಡಿನ, ಮುಂತಾದ ರೋಗಾಣುಗಳಿವೆ. ಇಂಥ ರೋಗ ಉಂಟುಮಾಡುವ ಸುಮಾರು ೮೦ತರದ ರೋಗಾಣುಗಳು ಜನರು ತಿನ್ನುವ ಮಾಂಸಗಳಲ್ಲಿವೆಯಂತೆ. ಮಾಂಸಬೇಯಿಸಿದಾಗ ಅವು ಪೂರ್ಣನಾಶವಾಗದಿರುವುದುಂಟು. ಆದ್ದರಿಂದ ರೋಗಬರುತ್ತದೆ. ವಿಪರೀತ ಬಿಸಿಯಲ್ಲಿ ಫಕ್ಕನೆ ಕಾಯಿಸಿದ ಮಾಂಸರುಚಿಕರವಾದರೂ ಹೊಟ್ಟೆಯ ಕ್ಯಾನ್ಸರಿಗೆ ಕಾರಣವಾಗಬಹುದಂತೆ. ಕ್ಯಾನ್ಸರ್ ಮತ್ತು ಮಧುಮೇಹದಚಿಕಿತ್ಸೆಗೆ ಮಾಂಸಾಹಾರ ಪ್ರತಿಕೂಲವಾಗುತ್ತದೆ. ಸಸ್ಯಾಹಾರದಲ್ಲಿ ಈ ದೋಷಗಳಿಲ್ಲ.

ಮಾಂಸ ಕೊಳೆಯುವುದು ಬೇಗ. ಏಕೆಂದರೆ ಅದರಲ್ಲಿ ಬೇರೆರೋಗಾಣುಗಳು ಬಹುಬೇಗ ಬೆಳೆಯಲಾಪವು. ಮಾಂಸಕೊಳೆತರೆ ವಿಪರೀತ ವಾಸನೆ; ಸಸ್ಯಾಹಾರಕೊಳೆತದಕ್ಕಿಂತ ಎಷ್ಟೋ ಹೆಚ್ಚು ವಾಸನೆ ಬರುತ್ತದೆ. ಮಾಂಸ ಜೀರ್ಣವಾಗದೆ ಹೊಟ್ಟೆಯಲ್ಲಿ ಉಳಿದರೆ, ಅಥವಾ ಅದರ ಬೇಡವಾದ ಅಂಶ ಕರುಳಲ್ಲಿ ಉಳಿದರೆ, ದೇಹಕ್ಕೆ ಕೆಡಕಾಗುವುದು ಹೆಚ್ಚು. ಮಲರೂಪವಾಗಿ ವಿಸರ್ಜನೆಯಾಗಲಿಕ್ಕೆ ಸಸ್ಯಾಹಾರದಂತೆ ಅದರಲ್ಲಿ ಕಸ ಧಾರಾಳವಾಗಿಲ್ಲದಿರುವುದು ಈ ದೋಷಕ್ಕೆ ಕಾರಣ. ಮನುಧರ್ಮಶಾಸ್ತ್ರದಲ್ಲಿ ಹೇಳಿದೆ (೫, ೫೦) : ಯಾರು ಶಾಸ್ತ್ರವಿಧಿಯನ್ನು ಬಿಟ್ಟು ಪಿಶಾಚದಂತೆ ಮಾಂಸ ತಿನ್ನುವುದಿಲ್ಲವೋ ಅವನು ಲೋಕದಲ್ಲಿ ಪ್ರಿಯನಾಗುತ್ತಾನೆ, ಮತ್ತು **ವ್ಯಾಧಿಗಳಿಂದ ಪೀಡಿಸಲ್ಪಡುವುದಿಲ್ಲ.** ಮಾಂಸಾಹಾರಿಗಳು ಸಸ್ಯಾಹಾರಿಗಳಿಗಿಂತ ಹೆಚ್ಚು ಕ್ರೂರರು. ಪ್ರಾಣಿಗಳಲ್ಲಿ ಇದು ಧಾರಾಳವಾಗಿ ವ್ಯಕ್ತವಾಗುತ್ತದೆ.

ಪಾಶ್ಚಾತ್ಯದೇಶಗಳಲ್ಲಿ ಅವರ ಐಶ್ವರ್ಯವು ವಿಜ್ಞಾನದಿಂದಾಗಿ ಹೆಚ್ಚುತ್ತ ಹೋದಂತೆ, ಮಾಂಸದಉಪಯೋಗವು ಹೆಚ್ಚುತ್ತಹೋಗಿದೆ. ಅವರ ರೋಗಗಳೂ, ಮದ್ದುನುಂಗುವ ಅಭ್ಯಾಸವೂ ಬಹಳಹೆಚ್ಚಿದೆ. ಅಮೇರಿಕದಲ್ಲಿ ನೂರರಲ್ಲಿ ೫೩ಜನರು ಹೃದಯರೋಗಕ್ಕೆತುತ್ತಾಗುತ್ತಾರೆ. ಇದಕ್ಕೆ ಅವರು ತುಂಬಾ ಮಾಂಸ, ಕೋಳಿಮೊಟ್ಟೆ, ತಿನ್ನುವುದು ಒಂದು ಕಾರಣ. ಈ ಶತಮಾನದ ಪ್ರಥಮ ಘೋರಯುದ್ಧದ ಕಾಲದಲ್ಲಿ ಡೆನ್ಮಾರ್ಕಿಗೆ ಹೊರಗಿಂದ ಮಾಂಸಬಾರದಿದ್ದು ಜನರು ಸಸ್ಯಾಹಾರಿಗಳಾಗಬೇಕಾಯಿತು. ಆದರೆ ಅದರಿಂದ ಹಾನಿ

ಯಾಗುವಬದಲಾಗಿ ಜನರಆರೋಗ್ಯ ಸುಧಾರಿಸಿದ್ದೇ ಕಂಡುಬಂತು. ಎರಡನೆ ಘೋರಯುದ್ಧದಕಾಲದಲ್ಲಿ ನಾರ್ವೆಯ ಜನರಿಗೆ ಬಹುಮಟ್ಟಿಗೆ ಮಾಂಸಾಹಾರ ಸಿಗಲಿಲ್ಲ. ಅದರ ಪರಿಣಾಮವಾಗಿ ಅವರಲ್ಲಿ ಹೃದಯರೋಗ ಕಡಿಮೆ ಯಾದದ್ದು ಕಂಡುಬಂತು. ಎಲೆಕ್ಸ್ ಹೈಗ್ ಎಂ. ಡಿ. ಹೇಳಿದ್ದರು "ಸಸ್ಯಾ ಹಾರವು ಅಪರಿಮಿತ ಮಟ್ಟದಲ್ಲಿ ಎಲ್ಲಾ ರೀತಿಗಳಲ್ಲಿಯೂ ಮಾಂಸಾಹಾರಕ್ಕಿಂತ ಶ್ರೇಷ್ಠ ಎಂದು ತನ್ನ ಶೋಧನೆಗಳು ರುಜುಪಡಿಸಿವೆ" ಎಂದು. ಪಾಶ್ಚಾತ್ಯರ ಕುರುಡುಅನುಕರಣೆ ನಮ್ಮ ಯುವಕರನ್ನು ಅಡ್ಡದಾರಿಗೆಎಳೆಯುತ್ತಿರುವುದು ತೀರಾ ವಿಷಾದಕರ.

ದೇವರು ಮಾನವನನ್ನು ಮಾಂಸಾಹಾರಿಯಾಗುವಂತೆ ನಿರ್ಮಿಸಲಿಲ್ಲ. ಮಾಂಸಾಹಾರಿಪ್ರಾಣಿಗಳಿಗೆ ಮಾಂಸ ಹರಿದುತಿನ್ನಲಿಕ್ಕೆ ಎದುರಿನ ಹಲ್ಲುಚೂಪಾ ಗಿರುತ್ತವೆ. ಮನುಷ್ಯನಿಗೆ ಹಾಗಿಲ್ಲ. ಹುಲಿ ಸಿಂಹಗಳಿಗೆ ಚೂಪಾದ ನಖಗಳಿವೆ. ಅವನಿಗಿಲ್ಲ. ಮಾಂಸ ಜೀರ್ಣಿಸಿಕೊಳ್ಳಲಿಕ್ಕೆ ಕಷ್ಟವಿಲ್ಲ ; ಕರುಳಿಂದ ಹೀರಲ್ಪಡ ಲಿಕ್ಕೆಕಷ್ಟವಿಲ್ಲ. ಆದ್ದರಿಂದ ಹುಲಿ ಸಿಂಹ ಮುಂತಾದವಕ್ಕೆ ಉದ್ದವಾದದೊಡ್ಡ ಹೊಟ್ಟೆ ಕರುಳುಅಗತ್ಯವಿಲ್ಲ. ಸಸ್ಯಾಹಾರದಲ್ಲಿ ಕಸ ಹೆಚ್ಚಿರುವುದರಿಂದ ಅದರ ಸಾರಹೀರಲಿಕ್ಕೆ ಬಹಳ ಉದ್ದವಾದಕರುಳು ಅಗತ್ಯ. ಹಾಗೆ ಎಲ್ಲ ಸಸ್ಯಾಹಾರಿ ಪ್ರಾಣಿಗಳಿಗೂ, ಮನುಷ್ಯನಿಗೂ ಇದೆ. ಮಾಂಸಹಾರಿಪ್ರಾಣಿಗಳು ನೀರನ್ನು ನಾಲಗೆಯಿಂದ ನೆಕ್ಕುತ್ತ ಕುಡಿಯುತ್ತವೆ. ಮಾನವನಿಗೆ ಆ ಅಭ್ಯಾಸವಿಲ್ಲ.

ಸಸ್ಯಾಹಾರತಿನ್ನುವವರು ತಮ್ಮ ತರಕಾರಿ, ಹಣ್ಣು ಮುಂತಾದುವನ್ನು ತಾವೇ ಕತ್ತರಿಸಿತಿನ್ನುತ್ತಾರೆ. ಮಾಂಸಾಹಾರಿ ಪ್ರಾಣಿಗಳೂ ತಮ್ಮ ಆಹಾರ ತಾವೇ ಕೊಂದುತಿನ್ನುತ್ತವೆ. ಆದರೆ ಮನುಷ್ಯಮಾತ್ರ ಮಾಂಸ ತಿನ್ನುವಾಗ ಪ್ರಾಣಿಯ ಕೊಲೆಯನ್ನು ಬೇರೆಯವರಿಂದಮಾಡಿಸಲು ಬಯಸುವುದೇ ಕ್ರಮ. ತಾನುಮಾಡುವುದಿಲ್ಲ ಮಾತ್ರವಲ್ಲ, ತನಗಾಗಿ ಪ್ರಾಣಿಗಳನ್ನು ಕೊಲ್ಲುವ ವರ್ಗ ವಾದಕಟುಕರು, ಕಸಾಯಿಗಳು, ಅತ್ಯಂತಕ್ರೂರರೂ ಕಠಿಣಹೃದಯರೂ ಎಂದು ಭಾವಿಸುತ್ತಾನೆ. ಇಂಗ್ಲೆಂಡಲ್ಲಿ ಅಂಥವರನ್ನು ಜೂರಿ (jury) ಆಗಿ ಕುಳಿತು ಕೊಳ್ಳಲು ಕರೆಯುತ್ತಿರಲಿಲ್ಲ. ಅಲ್ಲಿ ಕಠಿಣ ಹೃದಯದವರನ್ನು ಜನರು ಕಟುಕ ಎಂದು ಕರೆಯುವುದು ವಾಡಿಕೆ.

ಆದರೆ ಇನ್ನೊಬ್ಬರಿಗೆ ತಿನ್ನಲಿಕ್ಕಾಗಿ ಪ್ರಾಣಿಯನ್ನು ಕೊಂದಪಾಪ ಆ ಮಾಂಸತಿಂದವನಿಗೂ ಬರುತ್ತದೆ ಎಂದು ಮನುಸ್ಮೃತಿ ತಿಳಿಸುತ್ತದೆ (೫, ೫೧). ಕೆಲವು ಧರ್ಮಗಳಲ್ಲಿ, ಪ್ರಾಣಿಗಳು ಮನುಷ್ಯರಿಗೆ ತಿನ್ನಲಿಕ್ಕೇ ನಿರ್ಮಿತವಾದವು

ಎಂಬ ಮಾತು ಇದೆ. ಅಂಥ ಧರ್ಮಗಳಲ್ಲಿ ದೇವರು ಜನ್ಮ ಕೊಟ್ಟ ಕೆಳಮಟ್ಟದ ಜೀವಾತ್ಮರಿಗೆ ಮಾಂಸಾಹಾರದಿಂದ ಪಾಪಬಾರದು. ಆದರೆ ಅವರಕ್ರೂರತೆ ಬೆಳೆಯುತ್ತದೆ. ಪಾಶ್ಚಾತ್ಯರು ಭೂಲೋಕದ ಅನೇಕ ದೇಶಗಳ ಮೂಲನಿವಾಸಿಗಳನ್ನು ಕೊಲೆ ಮಾಡಿದರು, ಕೊಳ್ಳೆಹೊಡೆದರು, ಅವರ ದೇಶ ಅಪಹರಿಸಿದರು ; ಈಗ ಅವರೇ ಅತಿ ಭಯಂಕರ ಮಾರಕಶಸ್ತ್ರಗಳನ್ನು ಮಾಡಿ ಬಡದೇಶಗಳಿಗೆ ಮಾರಾಟ ಮಾಡಿ ಲಾಭ ಸೆಳೆಯುತ್ತಿದ್ದಾರೆ. ಬೌದ್ಧರೂ, ಇತರರು ಕೊಂದ ಪ್ರಾಣಿ ತಿನ್ನುತ್ತಾರೆ.

ಆದರೆ ಸನಾತನ ಧರ್ಮವು ಮಾತ್ರ ಆತ್ಮ ಎಲ್ಲರಲ್ಲಿಯೂ, ಪ್ರಾಣಿಗಳಲ್ಲಿಯೂ, ಇದ್ದಾನೆ ಎಂಬ ಅನುಭವದಮಟ್ಟಕ್ಕೆ ಜೀವಾತ್ಮರನ್ನು ಏರಿಸಲಿಕ್ಕೆ ಕ್ರಮವಾಗಿ ಮೇಲುಮೇಲಿನ ಜೀವಾತ್ಮರಲ್ಲಿ ಮಾಂಸಾಹಾರ ಕಡಿಮೆ ಮಾಡುತ್ತ ಬಂತು. ಅನೇಕತರದ ಪ್ರಾಣಿಗಳನ್ನು ಎಲ್ಲರಿಗೂ ನಿಷೇಧಿಸಿತು (ನಮ್ಮಲ್ಲಿ ಯಾರೂ ಅಮೇರಿಕದವರಂತೆ ಕಪ್ಪೆಕಾಲು ತಿನ್ನುವುದಿಲ್ಲ, ಚೀನಿಯರಂತೆ ಮಂಗನನ್ನು ಮೂರ್ಛೆಗೊಳಿಸಿ ರಕ್ತ ಕುಡಿಯುವುದಿಲ್ಲ!). ಉಳಿದ ಪ್ರಾಣಿಗಳನ್ನು ಶೂದ್ರರು ಕೊಲ್ಲಬಹುದು, ವೈಶ್ಯರು ಪ್ರಾಣಿಗಳನ್ನು ಕೊಲ್ಲಕೂಡದು, ಆದರೆ ಮಾಂಸಕೊಂಡುಕೊಂಡು ದೇವರಿಗೆ ಪಿತೃಗಳಿಗೆ ಅರ್ಪಿಸಿ ತಿನ್ನಬಹುದು. ಕ್ಷತ್ರಿಯರು ಪ್ರಜೆಗಳ ಬೆಳೆ ಹಾಳುಮಾಡುವ ಜಿಂಕೆ ಕಾಡುಹಂದಿ ಮುಂತಾದವನ್ನು ಬೇಟೆಯಾಡಿ ಮಾಂಸವನ್ನು ದೇವರಿಗೆ ಪಿತೃಗಳಿಗೆಅರ್ಪಿಸಿ ತಿನ್ನಬಹುದು ಎಂದಿದೆ ಶಾಸ್ತ್ರ.

ಯಾವನು ಪಿತೃದೇವತೆಗಳನ್ನು ಪೂಜಿಸದೆ ತನ್ನ ದೇಹದ ಮಾಂಸವನ್ನು ಬೇರೆ ಪ್ರಾಣಿಗಳ ಮಾಂಸದಿಂದ ಬೆಳೆಯಿಸುತ್ತಾನೋ ಅವನು ಅತ್ಯಂತ ಹೆಚ್ಚಿನ ಪಾಪಿಷ್ಠ (ಮನು ೫,೫೨). ಮಾಂಸ ಎಂಬ ಶಬ್ದದ ಅರ್ಥ "ನಾನು ಯಾವ ಪ್ರಾಣಿಯಮಾಂಸವನ್ನು ತಿನ್ನುತ್ತೇನೋ ಪರಲೋಕದಲ್ಲಿ ಆ ಪ್ರಾಣಿ ನನ್ನನ್ನು ತಿನ್ನಲಿಕ್ಕಿದೆ" (ಮನು ೫,೫೫) ಎಂಬ ಎಚ್ಚರಿಕೆ ಶಾಸ್ತ್ರಕೊಟ್ಟಿದೆ. ಎಂದರೆ ಕೇವಲ ಒಂದುಗಳಿಗೆಯ ನಾಲಗೆಯ ಸುಖಕ್ಕಾಗಿ, ನಮ್ಮಂತೆಯೇ ತುಂಬಾ ಜೀವದಆಸೆಯಿರುವ ಮರಣವೆಂದರೆ ಭಯಪಡುವ ಪ್ರಾಣಿಯ ಇಡೀ ಬಾಳನ್ನೇ ಮುಗಿಸಿಬಿಡುವ ಸ್ವಾರ್ಥತೆ, ನಿಷ್ಕರುಣೆಗಳು ಪ್ರತಿಫಲವಾಗಿ ಬಹಳಜನ್ಮ ತರುತ್ತವೆ ಎಂಬ ಬೆದರಿಕೆಕೂಡ ಶಾಸ್ತ್ರ ಕೊಟ್ಟಿತು. ಚಕ್ರವರ್ತಿ ಮುಚುಕುಂದನೊಡನೆ ಶ್ರೀಕೃಷ್ಣ "ಬೇಕಾದ ವರ ಕೇಳು" ಎಂದ. ಅವ ಕೇವಲವಾಗಿ ಶ್ರೀಕೃಷ್ಣನಭಕ್ತಿ ಮಾತ್ರ ಕೇಳಿದ. ಶ್ರೀಕೃಷ್ಣ ಇದಕ್ಕಾಗಿ ಬಹಳಮೆಚ್ಚಿ "ನೀನು

ಕ್ಷತ್ರಿಯನಾಗಿ ಬಹಳ ಮೃಗಗಳನ್ನು ಬೇಟೆಯಾಡಿ ಕೊಂದಿರುವೆ. ಆದ್ದರಿಂದ ನನ್ನನ್ನು ಹೊಂದಲಿಕ್ಕೆ ಬ್ರಾಹ್ಮಣ ಜನ್ಮಪಡೆದು ಎಲ್ಲ ಜೀವಿಗಳ ಮಿತ್ರನಾಗು. ಅನಂತರ ನನ್ನನ್ನು ಹೊಂದುವೆ" ಎಂದ.

ಮೇಲೆ ಹೇಳಿದಂತೆ ಮಾಂಸಾಹಾರವನ್ನು ಕಡಿಮೆಮಾಡುಂತ್ತ ಬರಲಿಕ್ಕೆ ಕ್ರಮಗಳನ್ನು ವಿಧಿಸಿದ್ದಲ್ಲದೆ ಸನಾತನಧರ್ಮ ಅಹಿಂಸೆಯನ್ನು ಬಹಳ ಹೊಗಳಿತು ; ಅತ್ಯಂತ ಕಷ್ಟತರದ್ದಾದ ಅಶ್ವಮೇಧಯಾಗಗಳು ನೂರನ್ನು ಮಾಡಿದ ಪುಣ್ಯವು ಮಾಂಸವನ್ನು ಸಂಪೂರ್ಣ ಬಿಟ್ಟು ಬಾಳುವವನ ಪುಣ್ಯಕ್ಕೆ ಸರಿಸಮಾನ ಎಂದೂ ಪ್ರೋತ್ಸಾಹಿಸಿದೆ (ಮನು ೫, ೫೩) ಸೆಕ್ಯುಲರ್‌ಸರ್ಕಾರದ ಎಲ್ಲ ಪುಣ್ಯ ಪಾಪದ ಕಟ್ಟುಗಳೂ ಜನರಲ್ಲಿ ಮಾಯುವಾಗುತ್ತ ಬರುತ್ತಿರುವುದು ಇಲ್ಲಿಯೂ ಎಲ್ಲಿಯೂ ತುಂಬಾ ಅಶಾಂತತೆ, ಭಯ, ಕೊಲೆಪಾತಕ, ಬೆಳೆಸದೆಬಿಟ್ಟಿತೇ ? ಅತ್ಯಂತ ಶ್ರೇಷ್ಠ ಧ್ಯೇಯಗಳ ಜ್ಞಾನವಿದ್ದು ಅವನ್ನು ಧಾರಾಳವಾಗಿ ಸಾಧಿಸಿದ ದೇಶ ಹೀಗಾಗಕೂಡದು ! ದೇವರಭಯ, ನರಕದ ಶಿಕ್ಷೆಯಭಯ, ಬೇಕೇ ಬೇಕು.

೩೫. ಮರಣದ ಆಚೆ ನಮಗಿರುವ ದಾರಿಗಳು

ಶಾಸ್ತ್ರದಲ್ಲಿ ಮನುಷ್ಯನಿಗೆ ಮರಣದನಂತರ ಬೇರೆಬೇರೆ ತರದ ಗತಿಗಳು ಹೇಳಲ್ಪಟ್ಟಿವೆ. ತಮ್ಮಜ್ಞಾನದ ಬಲದಿಂದ ತಾವು ದೇಹವಲ್ಲ, ಕೇವಲ ಆತ್ಮರು ಎಂಬ ಅನುಭವಹೊಂದಿದವರು, ಮಹಾಋಷಿಗಳು, ಪರಮಹಂಸರು, ಮರಣಕ್ಕೂ ಮುಂಚೆಯೇ ಜೀವನ್ಮುಕ್ತರಾಗುತ್ತಾರೆ. ಎಲ್ಲೆಲ್ಲೂ ಇರುವ ಪರಬ್ರಹ್ಮನಲ್ಲಿ ಅವರ ಆತ್ಮಬೆರೆಯುತ್ತದೆ. ಅದು ಸಾಯುಜ್ಯಮುಕ್ತಿ. ಅದೇ ನಿಜವಾದ ಮುಕ್ತಿ. ಏಕೆಂದರೆ ಅದರಿಂದ ಹಿಂದೆ ಬರುವುದೆಂಬುದಿಲ್ಲ (ಅವರೇ ಜೀವಿಗಳ ಉದ್ಧಾರಕ್ಕಾಗಿ ಹಾಗಾಗದೆ ಉಳಿಯುವುದೂ ಸಾಧ್ಯ) ಭಕ್ತಿಯನ್ನೇ ಪ್ರಧಾನವಾಗಿ ಮಾಡಿಕೊಂಡವರು, ಪರಾಭಕ್ತಿಯ ಮಟ್ಟದಲ್ಲಿದ್ದವರು ತಮ್ಮ ಇಷ್ಟದೇವರನ್ನು ಹೊಂದುತ್ತಾರೆ. ಭಕ್ತ ತುಕಾರಾಮರನ್ನು ವೈಕುಂಠಕ್ಕೆ ಕರಕೊಂಡುಹೋಗಲು ಶ್ರೀ ವಿಷ್ಣುವೇ ಗರುಡನಮೇಲೆ ಏರಿಬಂದಿದ್ದರು. ಆಗ ಶ್ರೀ ತುಕಾರಾಮರು ಅದನ್ನು ತಮ್ಮ ಭಕ್ತರಿಗೆ ತಿಳಿಸಿ ಅದೃಶ್ಯರಾದರು. ಮೂರುದಿನಗಳ ಮೇಲೆ ಅವರ ತಾಳ ಮೇಲಿಂದ ಕೆಳಗೆಬಿತ್ತು. ಭಕ್ತೆ ಮೀರಾ ದ್ವಾರಕೆಯ ಕೃಷ್ಣನಲ್ಲಿ, ಭಕ್ತನಂದನಾರ್ ಚಿದಂಬರದ ಶಿವನಲ್ಲಿ, ಹೀಗೆ ಐಕ್ಯರಾದರು.

ಮತ್ತೆ ಕೆಲವು ಪರಾಭಕ್ತಿಸಾಧಿಸಿದವರು ಅಥವಾ ವರ್ಣಧರ್ಮ ಚೆನ್ನಾಗಿ ಆಚರಿಸಿದವರು, ಗುರುಕೃಪೆ ಪಡೆದವರು ಮರಣದನಂತರ ಬೆಳಕಿನ (ಎಂದರೆ ಜ್ಞಾನದ) ದಾರಿಯಲ್ಲಿ ಸೂರ್ಯಲೋಕ ಬೇಧಿಸಿ ಬ್ರಹ್ಮಲೋಕಕ್ಕೆ ಹೋಗುತ್ತಾರೆ. ವೈಕುಂಠ, ಕೈಲಾಸ, ಗೋಲೋಕ ಮುಂತಾದವು ಅದರ ವಿಭಾಗಗಳೇ. ಅಲ್ಲಿಗೆ ತಕ್ಕುದಾದ ದೇಹಹೊಂದಿ ಅತ್ಯಂತ ದೀರ್ಘಕಾಲ ಅಲ್ಲಿರುವುದರಿಂದ ಅವರೂ ಮೋಕ್ಷ ಪಡೆದರು ಎನ್ನುತ್ತೇವೆ. ಆದರೆ ಬ್ರಹ್ಮಲೋಕಕ್ಕೆ ಹೋದವರೂ ಪುಣ್ಯ ಮುಗಿದು ಹಿಂದೆಬಂದುದು ಇಂದ್ರದ್ಯುಮ್ನನೆಂಬವನ ಕತೆಯಿಂದ ತಿಳಿಯುತ್ತದೆ. ದೇವರಿರುವ ಲೋಕದಲ್ಲೇ ಇರುವ ಸಾಲೋಕ್ಯ ಮುಕ್ತಿ ದೇವರ ಬಳಿಯಲ್ಲಿರುವ ಸಾಮೀಪ್ಯ ಮುಕ್ತಿ ದೇವರ ರೂಪವಿರುವ ಸಾರೂಪ್ಯಮುಕ್ತಿಯನ್ನೂ ಅನುಭವಿಸುವವರು, ಜಯವಿಜಯರಂತೆ ಅಹಂಕಾರ ಬಿಟ್ಟಿರದಿದ್ದು, ಭೂಲೋಕದಲ್ಲಿ ಪುನಃ ಜನ್ಮಪಡೆದರು. ಆದರೆ ಬ್ರಹ್ಮಲೋಕದಲ್ಲಿ ನಿರಾಕಾರಬ್ರಹ್ಮನ ಚಿಂತನೆ ಅಭ್ಯಸಿಸಿ, ಬ್ರಹ್ಮನ ಕಾಲದ ಅಂತ್ಯದಲ್ಲಿ ಬ್ರಹ್ಮನೊಡನೆ ಪರಬ್ರಹ್ಮನಲ್ಲಿ ಐಕ್ಯವಾಗುವುದೂ ಉಂಟು. ಅದೂ ಸಾಯುಜ್ಯ ಮುಕ್ತಿಯೇ. ಆದನ್ನು ಕ್ರಮಮುಕ್ತಿ ಎನ್ನುತ್ತಾರೆ.

ಮೋಕ್ಷಕ್ಕಿನ್ನೂ ತಯಾರಾಗದ ದ್ವಿಜವರ್ಗದವರು, ಅವರ ಅಂತಿಮ ಕ್ರಿಯೆ ಸರಿಯಾಗಿ ನಡೆಸಲ್ಪಟ್ಟಿದ್ದರೆ, ಯಮಲೋಕಕ್ಕೆ ಹೋಗಿ ಅವರು ಪಾಪವನ್ನೇ ಹೆಚ್ಚುಮಾಡಿದವರಾದರೆ ನರಕಯಾತನೆ, ಆಮೇಲೆ ಪ್ರಾಣಿಜನ್ಮ ಅಥವಾ ಕೆಟ್ಟ ಮಾನವಜನ್ಮ ಪಡೆಯುತ್ತಾರೆ. ಪುಣ್ಯ ಹೆಚ್ಚು ಮಾಡಿದವರು ಪಿತೃಲೋಕ, ಇಂದ್ರಲೋಕ, ವರುಣಲೋಕ, ಸೂರ್ಯಲೋಕ ಮುಂತಾದವನ್ನು ಹೊಂದಿ, ಕೆಲವುಕಾಲ ಸುಖಭೋಗಿಸಿ ನರಕಕ್ಕೆ ಅಥವಾ ಭೂಲೋಕಕ್ಕೆ ಬರುತ್ತಾರೆ. ಅವರದ್ದು ಕತ್ತಲೆಯದಾರಿ. ಅಂತಿಮಕ್ರಿಯೆ ಸರಿಯಾಗದ ದ್ವಿಜರು ಪ್ರೇತರಾಗಿಯೇ ಉಳಿಯುತ್ತಾರೆ.

ದ್ವಿಜರಲ್ಲದವರು ಪ್ರೇತರಾಗಿ ಕೆಲವು ಕಾಲ ಇದ್ದು ಅನಂತರ ಇಲ್ಲಿ ಜನ್ಮ ಪಡೆಯುತ್ತಾರೆ. ಕೆಟ್ಟ ಪಾಪಮಾಡದಿದ್ದರೆ ಪ್ರೇತತ್ವದಕಾಲ ಸುಲಭವೇ. ಇಲ್ಲೇ ಅಲೆದಾಡುತ್ತಾರೆ. ಆದರೆ ಕೊಲೆ, ಹಿಂಸೆ ಮೋಸ ಮುಂತಾದ ತಮ್ಮ ತಮ್ಮ ಧರ್ಮ ಖಂಡಿಸುವ ಕೆಟ್ಟಪಾಪ ಮಾಡಿದರೆ ಅವರಿಗೆ ಪ್ರೇತಜನ್ಮದಲ್ಲಿ ಮಾನಸಿಕರೂಪದಲ್ಲೇ ಅತಿಕಠಿಣ ಶಿಕ್ಷೆಉಂಟಾಗುತ್ತದೆ. ಅದು ನರಕದ ಶಿಕ್ಷೆಗಿಂತ ಸ್ವಲ್ಪಕಡಿಮೆ ಕಠಿಣವಷ್ಟೇ. ಮತ್ತು ಬಹಳ ದೀರ್ಘಕಾಲದ್ದಲ್ಲ. ಪುನಃ ಇಲ್ಲಿ ಜನ್ಮಲಭಿಸುತ್ತದೆ. ದ್ವಿಜರ ಪ್ರೇತವಾದರೆ ಅದಕ್ಕೆ ಹಸಿವುತೃಷೆಗಳಬಾಧೆ

ವಿಪರೀತ ಹೆಚ್ಚಿಸದಿರುತ್ತದೆ. ಇತರರ ಅನೇಕ ಪ್ರೇತಗಳು ಸುತ್ತಲಿನ ಅಶುದ್ಧ ಮನೆಗಳ ಆಹಾರವನ್ನು ಘ್ರಾಣಭಕ್ಷಣ ಮಾಡಿ ತೃಪ್ತಿಪಡೆಯುತ್ತವೆ.

ಉತ್ತಮಜೀವಾತ್ಮರು ನರಕಕ್ಕೆಹೋಗಬೇಕಾದ ಪಾಪಮಾಡದೆ, ಸ್ವರ್ಗಕ್ಕಾಗಿಯೂ ಅಲ್ಲ, ಮೋಕ್ಷಕ್ಕಾಗಿ ಸಾಧನೆಮಾಡುತ್ತಿದ್ದರೆ, ನರಕಕ್ಕೂಸ್ವರ್ಗಕ್ಕೂ ಹೋಗದೆ, ಉತ್ತಮಜನ್ಮಗಳನ್ನು ಇಲ್ಲಿ ಪಡೆಯುತ್ತ, ಕಟ್ಟಕಡೆಗೆ ತಮ್ಮ ಮೋಕ್ಷದ ಗುರಿಮುಟ್ಟುತ್ತಾರೆ.

ಬಹಳ ಪಾಪಮಾಡಿ ಕ್ರಿಮಿಕೀಟಗಳ ಜನ್ಮಹೊಂದಿದ ಜೀವಾತ್ಮರು ಕೇವಲವಾಗಿ "ಹುಟ್ಟುವುದು ಸಾಯುವುದು" ಎಂಬ ಅತ್ಯಂತ ವ್ಯರ್ಥ ಜೀವನದಲ್ಲಿ ಸುತ್ತಾಡುತ್ತಿರುತ್ತಾರೆ (ಛಾಂದೋಗ್ಯ ೫, ೧೦, ೮). ಅವರಿಗೆ ಪುನಃ ಮಾನವಜನ್ಮ ಬಹಳ ದೂರವಿದೆ.

ಹಿಂದಿನಜನ್ಮದ ಸ್ಮರಣೆ ಏಕಿಲ್ಲ ? : ರಾಜಯೋಗದಲ್ಲಿ ಮತ್ತು ಮನುಮನುಸ್ಮೃತಿಯಲ್ಲಿ (೪, ೧೪೮) ತಕ್ಕಸಾಧನೆಯ ಮೂಲಕ ಹಿಂದಿನಜನ್ಮಗಳ ಸ್ಮರಣೆ ಬರುವುದುಸಾಧ್ಯ ಎಂದಿದೆ. ಬುದ್ಧನಿಗೆ ಅವನ ನೂರಾರು ಹಿಂದಿನ ಜನ್ಮಗಳ ನೆನಪಿತ್ತು. ಒಬ್ಬಸೂಫಿ ಕವಿ ಹೇಳಿದ್ದ, ಮನೆಯಲ್ಲಿ ಮಲಗಿದವ ಕೂಡಲೇಕನಸ್ಸಲ್ಲಿ ತೀರಾಹೊಸ ಊರಲ್ಲಿದ್ದಂತೆ ಸ್ವಪ್ನಕಂಡು ಸಂಪೂರ್ಣ ನಂಬುವುದಿಲ್ಲವೇ ? ಮನೆಊರು ಸಂಪೂರ್ಣಮರೆತಿರುವುದಿಲ್ಲವೇ ಎಂದು. ಸ್ವಾಮಿ ಅಭೇದಾನಂದರು ಈ ಮರೆವೆಗೆ ಒಂದು ಉಪಮೆಕೊಟ್ಟಿದ್ದಾರೆ. ಹಗಲಲ್ಲಿ ಒಂದು ಕೋಣೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿ ಸಿನೆಮಾ ತೋರಿಸುವಾಗ. ಫಕ್ಕನೆ ಬಾಗಿಲುಗಳನ್ನು ತೆರೆದರೆ ಸಿನೆಮಾ ಚಿತ್ರಗಳು ಅಲ್ಲಿದ್ದರೂ ಅವು ಏನೂ ತೋರವು. ಅಂತೆಯೇ ಮಾನವನ ತತ್ಕಾಲದ ಮುಖ್ಯವಿಷಯಗಳನ್ನು ಹಳೆಯವನ್ನು ಈಗಕಡಿಮೆ ಮಹತ್ವದ್ದಾಗಿಮಾಡಿ ಮರೆಮಾಡುತ್ತವೆ. ನಮಗೆ ಮುಂದೆ ದೊಡ್ಡಕಷ್ಟವಲ್ಲದೆ, ಅದರಬಗ್ಗೆ ಈಗಲೇ ಉಂಟಾದ ದುಗುಡದಕಷ್ಟ ಒಂದು ಜಾಸ್ತಿಶಿಕ್ಷೆಯಾಗುತ್ತದೆ. **ಮುಂಚಿನ, ಜನ್ಮದಲ್ಲಿ ಬಹಳವಾಗಿ ಪ್ರೀತಿಸಿದ ಪತ್ನಿಯವಿಚಾರ ಈ ಜನ್ಮದಲ್ಲಿ ನೆನಪಾದರೆ ಈಗ ಇನ್ನೊಬ್ಬನ ಪತ್ನಿಯಾದ ಅವಳನ್ನು ಗುರುತಿಸಿದರೆ, ಉಭಯಸಂಕಟವೇ ಸರಿ.**

ಆದರೆ ಯಾವತಪ್ಪಿಗೆ ಯಾವ ಶಿಕ್ಷೆ ಎಂದು ತಿಳಿದರೆ ತಿದ್ದಿಕೊಳ್ಳಲು ಪ್ರಯೋಜನವಾಗದೇ ? ಎಂಬಪ್ರಶ್ನೆಯೂ ಇದೆ. ಕ್ರೈಸ್ತರು ಹೇಳಿದಂತೆ ಮುಖ್ಯವಾಗಿ ಬೇಕಾದುದು ಬಹಳ ಕಾಲದ ಯಮಲೋಕದ ಶಿಕ್ಷೆಯ ಮೂಲಕ ನಮ್ಮ ಒಲವುಗಳೇ ಉತ್ತಮವಾಗುವುದು ; ಎಂದರೆ ಶಿಕ್ಷೆಯಸಾರ ಮಾತ್ರ

ಬೇಕು. ಕೆಟ್ಟಚಲವು. ಇದ್ದವರು ತಿಳಿದೂ ತಿಳಿದೂ ದುರಭ್ಯಾಸಗಳಲ್ಲಿ ಮುಂದುರಿಯುವುದು ಎಷ್ಟೆಲ್ಲ ಬೇಕು? ನರಕದ ಶಿಕ್ಷೆಯು ದೀರ್ಘಕಾಲದಲ್ಲಿ ಯಮಭಟರು ಯಾವಪಾಪದ ಕರ್ಮಗಳಿಗಾಗಿ ಶಿಕ್ಷೆ ಎಂದು ಹೇಳುತ್ತಿರುವುದು ಮಾತ್ರವಲ್ಲ, ಅಸಾಧ್ಯತರದ ಯಾತನೆಯಿಂದ ಆ ಪಾಠ ಮನಸ್ಸಲ್ಲಿ ನಾಟುವಂತೆ ಮಾಡುತ್ತಾರೆ. ಸೌದಿ ಅರೇಬಿಯಾದಲ್ಲಿ ಕದ್ದವರ ಕೈ ಕತ್ತರಿಸುತ್ತಾರೆ. ಆದ್ದರಿಂದ ಅಲ್ಲಿಕಳವು ಬಹಳ ಕಡಿಮೆ ಇದೆ. ನಮ್ಮ ಶಾಸ್ತ್ರವೂ ಆ ಶಿಕ್ಷೆ ಹೇಳುತ್ತದೆ. ಆದರೆ ಕೇವಲ ಒಂದು ತಿಂಗಳ, ಆರು ತಿಂಗಳ ಜೈಲುಶಿಕ್ಷೆ ಪಡೆದ ಕಳ್ಳರ್ಯಾರೂ ತಮ್ಮ ಚಲವನು ಬದಲಾಯಿಸುವುದು ತೋರುವುದಿಲ್ಲ! ಕಳವು ದಾರಾಳವಾಗಿ ಹೆಚ್ಚುತ್ತಿದೆ. ಅಂಥ ಶಿಕ್ಷೆ ಏನು ಪ್ರಯೋಜನ?

ಧರ್ಮವು ಬಹಳ ಆಳವಾದುದು. ಅದನ್ನು ಸಾಮಾನ್ಯಜೀವಿಗೆ ಅರ್ಥಗರ್ಭಿತವಾಗಿ ವಿವರಿಸುವುದುಸುಲಭವಲ್ಲ. ಎಷ್ಟೆಲ್ಲ ಜನರಿಗೆ ಆತ್ಮಹತ್ಯೆ ಏಕೆ ಕೆಟ್ಟದ್ದು ಎಂದು ಅರ್ಥವಾಗಿದೆ? ಆದ್ದರಿಂದ ಇತರ ಧರ್ಮಗಳಲ್ಲಿ ಶಾಸ್ತ್ರದ ವಿಧಿಗಳಿಗೆ ಕಾರಣವನ್ನೇ ಕೊಟ್ಟಿಲ್ಲ. "ದೇವರ ಆಜ್ಞೆ ಹಾಗಿದೆ ಮಾಡು" ಎಂಬುದೇ ಕ್ರಮ. ವ್ಯವಹರಣೆ ಹೂಡಿದ ಹಳ್ಳಿಯ ರೈತನಿಗೆ ಹೈಕೋರ್ಟಿನ ತೀರ್ಪಲ್ಲಿ ಬರುವ ಕಾನೂನುಗಳ ಜಿಡುಕು ಏನೂ ಅರ್ಥವಾಗದು. ತಾನು ಗೆದ್ದೆ ಎಂಬುದು ತಿಳಿದರೆಸಾಕು. ಶಾಸ್ತ್ರವನ್ನು ನಂಬಿ ಅದರಜ್ಞಾನ ಧಾರಾಳವಾಗಿ ಬೆಳೆಸಿ, ಅದು ವಿರೋಧಿಸುವ ಹೊಸ ಚಾಳಿಗಳನ್ನು ಇನ್ನು ಎಷ್ಟಕ್ಕೂ ಬೆಳೆಸದೆ, ಹಳೆ ದುಷ್ಟ ಚಾಳಿಗಳನ್ನೆಲ್ಲ ಗೆಲ್ಲಬೇಕೆಂಬ ಹಠ ಬೆಳೆಸಬೇಕು. ಈಗ ಸಿಕ್ಕಿದ ಜನ್ಮದ ಅತ್ಯುತ್ತಮ ಉಪಯೋಗ ಮಾಡಬೇಕು. ಹಾಗೆ ಮಾಡಲಿಕ್ಕೆ ನಯಾಪೈಸೆಯ ಪ್ರಯೋಜನವೂಬಾರದ ಕ್ರಿಕೆಟ್ ಆಟದ ಎಲ್ಲೋ ಆಗುವುದರ ವಿವರಣೆ ಕೇಳುತ್ತ ಆಯುಷ್ಯ ಹಾಳು ಮಾಡಿಕೊಳ್ಳುವುದು, ಯಾರ್ಯಾರದ್ದೋ ಅಲ್ಪರ ಕಲ್ಪನಾಪ್ರಪಂಚದ ಕತೆಕಾದಂಬರಿ ಸಿನೆಮಾಗಳಲ್ಲಿ ಮನಸ್ಸನ್ನು ಅವರ ಅಲ್ಪಮಟ್ಟದ ಹೊಲಸಿಗಿಳಿಸುವುದು, ಜೀವನದಲ್ಲಿ ಧಾರ್ಮಿಕ ಧ್ಯೇಯವಿಲ್ಲದವರ ವ್ಯರ್ಥ ಹಾಳು ಸಹವಾಸಮಾಡುವುದು ಬಿಟ್ಟು, ಆದಷ್ಟು ಸಾಧನಾಜೀವನನಡೆಸಲು ನಿರ್ಧರಿಸುವ. ಜೀವನ ಎಷ್ಟಕ್ಕೂ ವ್ಯರ್ಥವಾಗಬಾರದು.

೩೬. ಕರ್ಮಫಲ

ಸಾಮಾನ್ಯವಾಗಿ ಮನುಷ್ಯತನ್ನಯತ್ನಗಳುಫಲಿಸುವುದನ್ನೇ ಕಾಣುತ್ತಾನೆ. ಬೇಸಾಯಗಾರ ಪ್ರತಿವರ್ಷ ತನ್ನಪ್ರಯತ್ನದಿಂದ ಬೆಳೆ ಬೆಳೆಸಿಯೇ ಜೀವಿಸು

ತ್ತಾನೆ. ಹುದ್ದೆಯಲ್ಲಿದ್ದವ ಸತ್ಯ ತನ್ನ ಕೆಲಸಕ್ಕೆ ಹೋಗುತ್ತಾನೆ. ವಿದ್ಯಾರ್ಥಿ ಚೆನ್ನಾಗಿ ಕಲಿಯುವವ, ತೇರ್ಗಡೆ ಹೊಂದುತ್ತ ಹೋಗುತ್ತಾನೆ. ಇಂಥ ಚಿಕ್ಕ ಪುಟ್ಟ ವಿಷಯಗಳಲ್ಲಿ ಅವ ಬಯಸುವುದೇ ನಡೆಯುತ್ತದಾದ್ದರಿಂದ ತಾನು ಯತ್ನಿಸಿದಂತೆ ಮಾಡಲಾಪೆ ಎಂಬ ಭರವಸೆಯಲ್ಲಿರುತ್ತಾನೆ. ಚಿಕ್ಕ ವಿಚಾರ ಗಳಲ್ಲಲ್ಲ, ಮಗಳ ಮದುವೆ ನಿರ್ಧರಿಸಿದವರು, ಮನೆಕಟ್ಟಲಿಕ್ಕೆ ಹೊರಟವರು ತಿರುಪತಿ ಯಾತ್ರೆ ಮಾಡಬೇಕೆಂದಿರುವವರೂ ಬಹುಮಟ್ಟಿನವರು ಬಯಸಿ ದಂತೆ ಮಾಡಲು ಶಕ್ತರಾಗುವುದೇ ಕಾಣುತ್ತೇವೆ.

ಆದರೆ ಕೆಲವುಸಾರಿ ಹಾಗಾಗುವುದಿಲ್ಲ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವ ಒಬ್ಬ ಬೇಗ ಹುದ್ದೆ ಪಡೆಯುತ್ತಾನೆ. ಅದರಲ್ಲಿ ಬೇಗ ಮುಂದೆ ಬರಲು ಸಾಧ್ಯವಿದ್ದು ಅಭಿವೃದ್ಧಿ ಹೊಂದುತ್ತಾನೆ. ಮತ್ತೊಬ್ಬ ಬಹಳಕಾಲ ಕೆಲಸ ಸಿಕ್ಕದೆ ಆಮೇಲೆ ಒಂದು ಚಿಕ್ಕಕೆಲಸದಲ್ಲೇ ಇರುತ್ತಾನೆ. ಮಂಗಳು ಬಹಳವಾಗಿ ವಿವಾಹ ಬಯಸಿದರೂ ಆದಾಗದೆ ಉಳಿಯುವವರು ಹೆಚ್ಚುತ್ತಿ ದ್ದಾರೆ. ಒಬ್ಬ ಅಂಗಡಿ ಅಥವಾ ಕಾರ್ಖಾನೆ ತೆರೆದಾಗ ಕಾಲವು ಅನುಕೂಲ ವಾಗಿದ್ದು ಬಹಳ ಲಾಭಬರುತ್ತದೆ ; ಯತ್ನ ಸಫಲವಾಗುತ್ತದೆ. ಮತ್ತೊಬ್ಬ ನಿಗೆ ತೊಡಕುಗಳೇಬಂದು ಕಷ್ಟನಷ್ಟಉಂಟಾಗುತ್ತವೆ. ಒಬ್ಬನಿಗೆ ನಾಲ್ಕುಗಂಡು ಮಕ್ಕಳಿದ್ದು ಒಬ್ಬಳು ಮಗಳು ಜನಿಸಲಿ ಎಂಬ ಆಸೆಯಿದ್ದರೂ ಐದನೆಯು ಮಗುವೂಗಂಡೇ. ಆದರೆ ಮತ್ತೊಬ್ಬನಿಗೆ ಐದುಮಗಳಂದಿರೇ. ಮಗು ದೊಬ್ಬರಿಗೆ ಎಷ್ಟುಬಯಸಿದರೂ ಮಕ್ಕಳೇಇಲ್ಲ. ಒಬ್ಬನಿಗೆ ತಂದೆಯಮೂಲಕ ಧಾರಾಳ ಹಣಸಿಕ್ಕುತ್ತದೆ. ಮತ್ತೊಬ್ಬ ಹುಟ್ಟು ಬಡವ. ಒಬ್ಬ ಸ್ಥಿತಿವಂತ ಅಜೀರ್ಣ ರೋಗದಿಂದ ಬೇಕಾದಂತೆ ತಿನ್ನಲಾರದೆ ಸಂಕಟ ಪಡುತ್ತಾನೆ. ಮತ್ತೊಬ್ಬ ಬಡವ ; ಅವನಿಗೆ ಬಯಸಿದ ಆಹಾರಕ್ಕೆಹಣವಿಲ್ಲ. ಎಲ್ಲ ಬಯಕೆ ಗಳೂ ಕೇವಲ ನಮ್ಮ ಶ್ರಮದಮಿತಿಯಲ್ಲಿದ್ದರೆ ಕೆಲವು ಜನರಾದರೂ ಶತ ಪ್ರಯತ್ನಮಾಡಿ ಮುದಿವಯಸ್ಸನ್ನು ತಪ್ಪಿಸಿಕೊಳ್ಳುತ್ತಿದ್ದರು. ಸಾಮಾನ್ಯ ರೂಪದವಳೂ ಚಂದ ಆಗುತ್ತಿದ್ದಳು. ಅಥವಾ ಹಾಗೆ ಒಂದು ಮಿತಿಯೊಳ ಗಾದರೂ ಯಾವ ಅನಿರೀಕ್ಷಿತ ತೊಡಕೂಬಾರದಂತೆ ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಯಾರಿಗೂ ತೊಡಕು ಕಷ್ಟತಪ್ಪಿದ್ದಿಲ್ಲ! ಅನೇಕವು ನಮ್ಮಶ್ರಮದ ಮಿತಿಯಲ್ಲಿಲ್ಲ.

ಮನುಷ್ಯನು ಸುಖಕ್ಕಾಗಿ ಯತ್ನಿಸುತ್ತಲೇ ಇರುತ್ತಾನೆ. ಆದ್ದರಿಂದ ಜೀವನದಲ್ಲಿ ದೊಡ್ಡ ಸುಖಉಂಟಾದರೆ, ಅದರಲ್ಲಿ ಅಲ್ಪಸ್ವಲ್ಪವಾದರೂ ತನ್ನ

ಪ್ರಯತ್ನ ಇರುವುದರಿಂದ, ಅದು ಎಲ್ಲ ತನ್ನಪ್ರಯತ್ನದ ಫಲವೆಂದೇ ಭಾವಿಸು ತ್ತಾನೆ. ಯಾರೂ ಕಷ್ಟಕ್ಕೆ ಯತ್ನಿಸುವುದಿಲ್ಲ. ಅದು ಬಂದಾಗ ಮಾತ್ರ, ದೇವರು ಯಾಕೆ ಈ ಕಷ್ಟಕೊಟ್ಟನೋ ತಿಳಿಯದು ಎನ್ನುತ್ತಾನೆ. ಆದರೆ ದೇವರು ಯಾರಿಗೂ ಸುಮ್ಮನೆ ಕಷ್ಟ ಸುಖಕೊಡುವುದಿಲ್ಲ. ವಿಶ್ವದ ಒಂದು ದೃಢವಾದ ನಿಯಮವೆಂದರೆ, ದನಕ್ಕೆ ದನವೇ ಕರು, ಸರ್ಪಕ್ಕೆ ಸರ್ಪವೇಮರಿ, ತೆಂಗಿನಕಾಯಿಯಿಂದ ತೆಂಗಿನಮರ, ಕಾಸರ್ಕನ ಬೀಜದಿಂದ ಕಾಸರ್ಕನ ಮರ ಮಾತ್ರವೇ ಜನಿಸುತ್ತವೆ ; ಅವಲ್ಲಿ ಅದಲುಬದಲು ಎಷ್ಟಕ್ಕೂ ಆಗುವುದಿಲ್ಲ. ಲೋಕದಲ್ಲಿ ಒಳ್ಳೆಯಕರ್ಮಗಳಿಗೆ ಒಳ್ಳೆಯಫಲ, ಸುಖ, ತಪ್ಪದೆಲಭಿಸುತ್ತವೆ ; ಕೆಟ್ಟಕಾರ್ಯ ಮಾಡಿದವರಿಗೆ ಕೆಟ್ಟ ಫಲ, ದುಃಖ, ನಷ್ಟ, ನೋವುಉಂಟಾಗು ತ್ತವೆ ಎಂಬುದು ವಿಶ್ವದ ನಿಯಮ. ಆದರೆ ತಕ್ಕಫಲವು ಕೂಡಲೆಸಿಕ್ಕುವುದಲ್ಲ, ನಿಧಾನವಾಗಿ, ಕೆಲವುವೇಳೆ ಈ ಜನ್ಮದಲ್ಲಿಕೂಡ ಅಲ್ಲ, ಮುಂದೊಂದುಜನ್ಮದಲ್ಲಿ ಲಭಿಸುತ್ತದೆ. ಆದ್ದರಿಂದ ಮಹಾಭಾರತದಲ್ಲಿ ಹೇಳಿದೆ. (ವನಪರ್ವ ಅ೨೦೯)–

ಯತ್ಕರೋತ್ಯಶುಭಂ ಕರ್ಮ ಶುಭಂ ವಾ ಯದಿ ಸತ್ತಮ ।
ಅವಶ್ಯಂ ತತ್ಸಮಾಪ್ನೋತಿ ಪುರುಷೋ ನಾತ್ರ ಸಂಶಯಃ ॥

ಪುಣ್ಯಶೀಲಾಹಿ ಭವಂತಿ ಪುಣ್ಯಾ ನರಾಧಮಾಃ ಪಾಪಕೃತೋಭವಂತಿ ।
ನರೋಽನುಯಾ ತಸ್ತ್ವಿಹ ಕರ್ಮಭಿಃ ಸ್ವೈಸ್ತತಃ ಸಮುತ್ಪದ್ಯತಿ ಬಾಧಿತಸ್ತೈಃ ॥

ಶುಭೈಃ ಪ್ರಯೋಗೈರ್ದೇವತ್ವಂ ಮಿಶ್ರೈರ್ಮಾನುಷೋ ಭವೇತ್ ।
ಮೋಹನೀಯೈರ್ವಿ ಯೋನಿತ್ವಮಧೋಗಾಮೀ ಚ ಕಿಲ್ಬಿಷೀ ॥

ಮನುಷ್ಯನು ಶುಭಕರ್ಮವನ್ನೇ ಮಾಡಲಿ, ಅಶುಭಕರ್ಮವನ್ನೇ ಮಾಡಲಿ, ಅವಕ್ಕೆ ತಕ್ಕುದಾದ ಶುಭಾಶುಭಫಲಗಳನ್ನು ಪಡೆದೇಪಡೆಯುತ್ತಾನೆ. ಇದರಲ್ಲಿ ಯಾವ ಸಂಶಯವೂಇಲ್ಲ. ಪುಣ್ಯಶೀಲರು ಸತ್ಫಲಗಳನ್ನೇ ಅನುಭವಿಸುತ್ತಾರೆ. ದುಷ್ಕರ್ಮಿಗಳು ನರಾಧಮರಾಗಿ ದುಷ್ಟವಾದಫಲಗಳನ್ನೇ ಅನುಭವಿಸುತ್ತಾರೆ. ಹಿಂದಿನಜನ್ಮದಲ್ಲಿನ ಶುಭಾಶುಭಫಲಗಳನ್ನು ಮನುಷ್ಯನು ಈ ಜನ್ಮದಲ್ಲಿ ಅನು ಭವಿಸುತ್ತಾನೆ. ಈ ಜನ್ಮದಲ್ಲಿ ಮಾಡಿದ ಸತ್ಕರ್ಮ ದುಷ್ಕರ್ಮಗಳಿಗೆ ಅನುಸಾರ ವಾಗಿ ಮುಂದಿನಜನ್ಮ ಹೊಂದುತ್ತಾನೆ. ಪ್ರಾಣಿಯು ಶುಭಕರ್ಮಗಳನ್ನೇ ಮಾಡಿ ದೇವತ್ವವನ್ನು ಪಡೆಯಬಹುದು ; ಶುಭಾಶುಭ ಕಾರ್ಯಗಳೆರಡನ್ನೂ ಸಮಸಮವಾಗಿ ಮಾಡಿದರೆ ಮನುಷ್ಯನಾಗಿ ಹುಟ್ಟಬಹುದು. ರಾಗ–ದ್ವೇಷ–ಮದ–ಮತ್ಸರಗಳಿಂದ ಕೂಡಿದವನಾಗಿದ್ದರೆ ಮೃಗಪಕ್ಷಿಗಳ ಜನ್ಮವನ್ನುಪಡೆದು ಅಧೋಗಾಮಿಯೂ ಮಹಾಪಾತಕಿಯೂ ಆಗಬಹುದು.

ಸನಾತನಧರ್ಮವು ಈ ಕರ್ಮಫಲದ ತತ್ವ ಮತ್ತು ಅದರ ಅವಶ್ಯಕ ಅಂಗವಾದ ಪುನರ್ಜನ್ಮಗಳೆರಾಲು, ಎರಡನ್ನೂ ಸಾರುತ್ತದೆ. ಅದರ ಶಾಖಾ ಧರ್ಮಗಳಾದ ಬುದ್ಧ, ಜೈನ, ಸಿಖ್ಖ, ಮುಂತಾದ ಇತರ ಹಿಂದೂಧರ್ಮಗಳೂ ಇವೆರಡನ್ನೂ ಒಪ್ಪುತ್ತವೆ. ಆದರೆ ಕ್ರಿಶ್ಚನ್ ಧರ್ಮ, ಮುಸಲ್ಮಾನ ಧರ್ಮ ಗಳು ಇವೆರಡನ್ನೂ ಒಪ್ಪುವುದಿಲ್ಲ. ಆದರೆ ಪುನರ್ಜನ್ಮ ಇದೆ ಎಂಬುದಕ್ಕೆ ಆ ಧರ್ಮಗಳಲ್ಲಿಯೇ ಇತ್ತಲಾಗಿ ಧಾರಾಳವಾದ ರುಜುವಾತು ಸಿಕ್ಕಿದೆಯಷ್ಟೆ! ಇನ್ನು ಕರ್ಮಫಲದವಿಚಾರ, ಅದನ್ನು ನಂಬದಿದ್ದರೆ ಜೀವನದ ಸಮಸ್ಯೆಗಳನ್ನು ಸರಿಯಾಗಿ ವಿವರಿಸಲು ಬರುವುದೇ ಇಲ್ಲ. ಆ ಧರ್ಮಗಳಂತೆ ಎಲ್ಲರಿಗೂ ಕೇವಲ ಒಂದು ಜನ್ಮ, ಆ ಜನ್ಮದ ಪಾಪ ಯಾ ಪುಣ್ಯಗಳಂತೆ ವಿಚಾರಣೆಯ ದಿನದ ಅನಂತರ ಶಾಶ್ವತ ನರಕ ಅಥವಾ ಸ್ವರ್ಗ ಮಾತ್ರ ಎಂಬ ಅವರಹೇಳಿಕೆ ದೇವರು ನಿಷ್ಪಕ್ಷಪಾತಿ, ನ್ಯಾಯ ಪರತೆಯುವ. ಕರುಣಾಮಯಿ ಎಂಬ ಅವನ ಗುಣಗಳಿಗೆ ಹೊಂದಿಕೆಯಾಗುವುದಿಲ್ಲ. ಅನೇಕಮಕ್ಕಳು ಕುರುಡರಾಗಿ, ಅಥವಾ ಮೂಢ ರಾಗಿ ಅಥವಾ ತೀರಾಬಡವರಲ್ಲಿ ಏಕೆ ಹುಟ್ಟಬೇಕು? ಅವರಿಗೆ ಏಕೆ ಈ ತರದ ಜೀವಂತ ನರಕ? ಬುದ್ಧಿಬರುವ ಮುಂಚೆ ಮರಣಹೊಂದಿದ ಬಾಲಕನಿಗೆ, ಕಳ್ಳ ರಲ್ಲಿ ಜನಿಸಿ ನ್ಯಾಯದಜೀವನದದಾರಿ ಕಲಿಯುವ ಆಸ್ಪದಸಿಕ್ಕುವ ಮುಂಚೆ ಮೃತ ನಾದವನಿಗೆ, ಶಾಶ್ವತನರಕ ಹೇಗೆ ನ್ಯಾಯ? ಮತ್ತು ಯಾವ ದೇಶದಲ್ಲೂ ಜೈಲಲ್ಲಿರುವ ತರತರದ ತಪ್ಪಿತಸ್ಥರಿಗೆಲ್ಲ ಒಂದೇಮಟ್ಟದಶಿಕ್ಷೆಯೇ ಅಲ್ಲ; ಅವರ ವರ ತಪ್ಪಿಗೆ ತಕ್ಕುದಾದ ಶಿಕ್ಷೆ ಮಾತ್ರ ಇದೆ. ಒಬ್ಬ ಜ್ಞಾನಸಾಲದೆ ಹೆಚ್ಚು ತಪ್ಪುಮಾಡಿ ನರಕದಲ್ಲಿ ಕೋಟಿವರ್ಷ ಬೆಂದವ, "ದೇವರೇ ಒಮ್ಮೆಗೆ ಕ್ಷಮಿಸು, ಮತ್ತೊಂದು ಸಂದರ್ಭ ಕೊಡು ಚೆನ್ನಾಗಿಬಾಳಲಿಕ್ಕೆ, ಉತ್ತಮ ಜೀವನ ನಡೆಸು ತ್ತೇನೆ ನೋಡು" ಎಂದರೆ ದೇವರಿಗೆ ಹಾಗೆ ಮಾಡಲು ಆಸ್ಪದವೇ ಇಲ್ಲವಂತೆ!

ಅಂತೂ ನಮ್ಮ ಧರ್ಮದಲ್ಲಿರುವ ಕರ್ಮಕ್ಕೆ ತಕ್ಕಫಲ, ತಕ್ಕಶಿಕ್ಷೆ, ಎಂಬ ತತ್ವವು ಮಾತ್ರ ಮಾನವ ಬುದ್ಧಿಯ ವಿವರಣೆಗೆ ಹೊಂದಿಕೊಳ್ಳುತ್ತದೆ. ಆದ್ದರಿಂದ ಅಂಥ ಧರ್ಮದಲ್ಲಿ ಜನಿಸಿದ್ದು ನಮ್ಮಭಾಗ್ಯ ನಮಗೆ ಧರ್ಮದ ಅನುಸರಣೆಗೆ ಇದೊಂದು ದೊಡ್ಡ ಪ್ರೋತ್ಸಾಹವಾಗಬೇಕು.

ಸಾಮಾನ್ಯವಾಗಿ ಜನರು ಕೇವಲ ಕೆಟ್ಟವರೂಅಲ್ಲ, ಕೇವಲ ಒಳ್ಳೆಯ ವರೂ ತನ್ನವರಿಗೆ ಒಳ್ಳೆಯವರೇ ಆಗಿದ್ದು ಅವರಿಗಾಗಿ ಕೆಟ್ಟ ಕೆಲಸ ಮಾಡು ತ್ತಿರುತ್ತಾರೆ. ಹೀಗೆ ಆಗಿ ಅನೇಕ ವಿರುದ್ಧತರದ ಕರ್ಮಫಲ ಕೂಡಿಸುವವರೇ ಅತ್ಯಧಿಕ. ಕೆಟ್ಟಕೆಲಸಕ್ಕೆ ದುಷ್ಟ ಪ್ರಾಣಿಯಾಗಿ ಜನ್ಮ ಪಡೆಯಬೇಕು, ಆದರೆ

ಒಳ್ಳೆಯ ಕರ್ಮಕ್ಕೆ ಮಾನವಜನ್ಮ ಪಡೆಯಬೇಕು ಎಂದಾಗುವಾಗ, ಋಣ ತೀರಿಸಲಿಕ್ಕೆ ಋಣ ಪಡೆಯಬೇಕಾದವರಿಗೆ ಬೇರೆಲ್ಲೋ ಜನ್ಮವಾಗಬೇಕಾದರೆ, ಮುಂದಿನ ಜನ್ಮದಲ್ಲೇ ಈ ಜನ್ಮದ ಕರ್ಮಫಲವನ್ನೆಲ್ಲ ಮುಗಿಸಲಿಕ್ಕಾಗುವುದಿಲ್ಲ. ಅದರ ಒಂದುಭಾಗ ಮತ್ತೂ ಮುಂದೆ ಹೋಗಬೇಕಾಗುತ್ತದೆ. ಹೀಗೆ ಹಲವು ಜನ್ಮಗಳ ಕರ್ಮಫಲದ ಭಾಗಗಳು ನಮ್ಮ ಪಾಲಿಗೆ ಜಮೆಯಾಗಿ ಉಳಿಯು ವುದೇ ಕ್ರಮ. ಅದು ಬೇಸಾಯಗಾರ ಹಿಂದೆ ಬೆಳೆಸಿ ದಾಸ್ತಾನುಮಾಡಿರುವ ಭತ್ತ, ಧಾನ್ಯ, ಮುಂತಾದವುಗಳ ಸಂಗ್ರಹದಂತೆ.

ಒಂದು ಜನ್ಮಮುಗಿದು, ಮತ್ತೊಂದನ್ನು ದೇವರು ಕೊಡುವಾಗ ಈ ಸಂಚಿತ ಕರ್ಮದ ಮುಖ್ಯಭಾಗದಲ್ಲಿ ಒಂದಂಶ ಆ ಮುಂದಿನಜನ್ಮದಲ್ಲಿ ಮುಗಿಸ ಲಿಕ್ಕೆ ಆರಿಸಿಟ್ಟು, ಹಾಗೆ ಮಾಡಲು ಬೇಕಾದ, ತಕ್ಕುದಾದ ಜನ್ಮಕೊಡುತ್ತಾನೆ. ಕರ್ಮದ ಈ ಭಾಗಕ್ಕೆ ಪ್ರಾರಬ್ಧಕರ್ಮ ಎಂದು ಹೆಸರು. ಇದರ ಫಲಗಳನ್ನು ಅವ ಆ ಜನ್ಮದಲ್ಲಿ ಅನುಭವಿಸಿಯೇಮುಗಿಸಬೇಕು. ಅದು ಉಂಡಅನ್ನದಂತೆ, ಕರಗಿಯೇ ಜೈಸಲ್ಪಡಬೇಕಾದುದು. ಅದನ್ನು ಬಿಟ್ಟಬಾಣಕ್ಕೆ ಹೋಲಿಸುವು ದುಂಟು. ಬಾಣವು ಒಮ್ಮೆ ಬಿಲ್ಲಿಂದ ಹೊರಟಾಗಿದೆ ಎಂದಾದಾಗ, ನಾನು ಸ್ವಲ್ಪ ಮೇಲಕ್ಕೆ ಗುರಿ ಇಡಬೇಕಿತ್ತು, ಎಂಬ ಚಿಂತೆ ವ್ಯರ್ಥ. ಅದರಗುರಿ ಬದಲಾಯಿಸಲಾರೆವು. ಇದು ಮಹಾತ್ಮರ ವಿಚಾರದಲ್ಲಿಯೂ ನಿಜ. ಆದರೆ ಅವರು ಕೇವಲ ಆತ್ಮತಾವು, ದೇಹವಲ್ಲ, ಎಂಬ ಮಟ್ಟಮುಟ್ಟಿದವರಾದರೆ, ಆ ದೇಹಕ್ಕೆ ಬಂದಕಷ್ಟ, ವ್ಯಾಧಿ, ಅವರಿಗೆ ಕಷ್ಟವಲ್ಲ (ಪ್ರಾರಬ್ಧಕರ್ಮದ್ದಾದರೂ ನಿಶ್ಚಿತಕಷ್ಟದ ಭಾಗವನ್ನು ಧಾರಾಳವಾದ ದೇವರಪ್ರಾರ್ಥನೆ, ನಾಮಜಪ ಗಳಿಂದ, ಗುರುವಿನಕೃಪೆಗೆ ಯತ್ನಿಸಿ ಅದನ್ನು ಪಡೆಯುವದರಿಂದ, ಬಹಳಕಡಿಮೆ ಮಾಡಲುಬರುತ್ತದೆ. ಮತ್ತು ಆ ಕಷ್ಟಅನುಭವಿಸುವ ಶಕ್ತಿಯೂಲಭಿಸಿ ಅದು ಸುಲಭವಾಗುತ್ತದೆ ಎಂದು ಮಹಾಪುರುಷರು ಹೇಳಿದ್ದುಂಟು. ಪ್ರಾಯಶಃ ಈ ತರದ ಯತ್ನಗಳ ಶ್ರಮವೇ, ಕರ್ಮತರುವ ಶ್ರಮದ ಒಂದು ಭಾಗವನ್ನು ರದ್ದು ಮಾಡುತ್ತದೆ).

ಮನುಷ್ಯನು ಕರ್ಮದಸರಪಳಿ ಬೆಳೆಸಲು ಬಯಸದೆ, ಮುಂಚೆ ಮಾಡಿ ದ್ದನ್ನು ಅನುಭವಿಸುವ, ಇನ್ನೂ ಇನ್ನೂ ಕರ್ಮವೂಬೇಡ ಕರ್ಮದಫಲವೂಬೇಡ ಎಂದು ಸುಮ್ಮನಿರುವ ನಿರ್ಧಾರಮಾಡಬಹುದು. ಆದರೆ ಜೀವಿ ನಡೆಯುವಾಗ, ಬೆಳೆಬೆಳೆಸುವಾಗ, ಅನ್ನಬೇಯಿಸುವಾಗ, ಅತಿಚಿಕ್ಕ ಪ್ರಾಣಿಗಳನಾಶ ಅನಿವಾರ್ಯ. ನಾವು ಬೆಳೆಸಿದ್ದ ಮನಸ್ಸಿನ ಒಲವೂ ನಮ್ಮಲ್ಲಿ ತುಂಬಿದೆ. ಅದು ಆ ತರದ

ಕಾರ್ಯಗಳಿಗೆ ಮನಸ್ಸನ್ನು ಸೆಳೆಯಂತ್ತಲೇ ಇರುತ್ತದೆ. ಒಂದು ಸರಳನ್ನು ಪ್ರಥಮಬಾರಿಗೆ ಬಗ್ಗಿಸುವುದು ಕಷ್ಟ. ಆದರೆ ಒಮ್ಮೆ ಅದು ಬಗ್ಗಿ ಡೊಂಕಾದರೆ, ಪುನಃಬಡಿದು ಸರಳವಾಗಿಮಾಡಿದರೂ, ಮುಂಚಿಗಿಂತ ಹೆಚ್ಚು ಸುಲಭವಾಗಿ ಆದರೆ ಮುಂಚೆ ಬಗ್ಗಿದಲ್ಲೇಬಗ್ಗಲಾಪುದು. ದುರಭ್ಯಾಸ ಪ್ರಥಮಬಾರಿಗೆ ಮಾಡುವಾಗ ಅಂತಃಕರಣ ವಿರೋಧಿಸುತ್ತದೆ. ಆದರೆ ಆಮೇಲೆ ಕ್ರಮೇಣ ಅದು ಬೊಡ್ಡಾಗುತ್ತದೆ. ನಮ್ಮ ಹಿಂದಿನ ೮೪ ಲಕ್ಷ ಪ್ರಾಣಿಜನ್ಮಗಳಲ್ಲಿ ನಾವು ಪ್ರಾಣಿಗಳಾಗಿ ಅತಿ ಹೆಚ್ಚಾಗಿ, ಮುಖ್ಯವಾಗಿ, ಕೆಲಸ ಮಾಡುವುದೇ ಸ್ವಭಾವವಾಗಿತ್ತು. ಆ ಅಭ್ಯಾಸವೂ ಈಗ ನಮಗೆ ಸುಮ್ಮನಿರಲುಬಿಡದು. ಜೀವಿಸುವವ ಆಹಾರ ಸಂಪಾದನೆಮಾಡಬೇಕು; ಮನಸ್ಸು ಸುಮ್ಮನಿರುವ ಸ್ವಭಾವದ್ದೇ ಅಲ್ಲ. ಹೀಗೆಲ್ಲ ಕರ್ಮದ ಅವಶ್ಯಕತೆ, ಸಾಲದ್ದಕ್ಕೆ ಮುಂಚಿನ ಒಲವುಗಳ ಪ್ರೇರಣೆ, ಬಲವಾಗಿದ್ದು ನಾವು ಏನಾದರೂ ಕರ್ಮಮಾಡುತ್ತಿರುತ್ತೇವೆ. ಇದರಿಂದಾಗಿ ಪ್ರಾರಬ್ಧಕರ್ಮ ಖರ್ಚಾಗುತ್ತಿರುವಾಗಲೇ ಹೊಸಕರ್ಮ ಸಂಗ್ರಹ (ಅದನ್ನು ಆಗಾಮಿಕರ್ಮ ಎನ್ನುತ್ತಾರೆ) ಬೆಳೆಯುತ್ತಿರುತ್ತದೆ. ಅದು ರೈತನು ಈಗ ಬೆಳೆಸುತ್ತಿರುವ ಬೆಳೆಯಂತೆ. ಅದರಲ್ಲಿ ಬಹಳ ಬಲವತ್ತರವಾದುದು ಈ ಜನ್ಮದಲ್ಲಿಯೇ ಫಲಕೊಡಲೂಬಹುದು.

ಅತ್ಯುತ್ಕಟೈಃ ಪುಣ್ಯ ಪಾಪೈರಿಹೈವ ಫಲಮಶ್ನುತೇ ।

ಸಾಮಾನ್ಯವಾಗಿ ಶಾಸ್ತ್ರದಲ್ಲಿ ಕರ್ಮವೆಂದರೆ ಅದು ಧಾರ್ಮಿಕ ಕರ್ತವ್ಯವಾಗಿ ಮಾಡಬೇಕಾದ ಕರ್ಮಗಳು ಎಂಬಅರ್ಥ ಬರುತ್ತದೆ. ಅವನ್ನು ಆಚರಿಸದೆ ಬಿಟ್ಟುಬಿಡುವುದು ಅಕರ್ಮ. ಶಾಸ್ತ್ರವುಮಾಡಕೂಡದು ಎಂದು ನಿಷೇಧಿಸುವ ಕರ್ಮಗಳು ವಿಕರ್ಮಗಳು. ಕರ್ಮಗಳನ್ನು ಮಾಡುವುದರಿಂದ ಉತ್ತಮ ಜನ್ಮಗಳನ್ನು ಪಡೆಯುತ್ತಹೋಗುವನು. ಅಕರ್ಮದಿಂದ ಘೋರತರದ ಜನ್ಮ ಪಡೆಯುವನು. ವಿಕರ್ಮದಿಂದ ಮೂಢಜನ್ಮಗಳು ಪ್ರಾಪ್ತವಾಗಿ ಮೇಲೇರಲು ದಾರಿಕಾಣದೆ ಬಹಳಕಾಲ ಕಷ್ಟಪಡಬೇಕಾಗುವುದು (ವಿಜ್ಞಾನದೀಪಿಕಾ).

ಒಂದುಪ್ರಾಂತ್ಯದ ಅನೇಕಾನೇಕ ಜನರ ಪಾಪಫಲಸೇರಿ ನೆರೆಹಾವಳಿ, ಬರಗಾಲ, ಭೂಕಂಪ, ಸಾಂಕ್ರಾಮಿಕರೋಗ ಮುಂತಾದ ಕಷ್ಟಗಳು ಅಲ್ಲಿ ಉಂಟಾಗುತ್ತವೆ. ಅಂತೆಯೇ ಸಾರ್ವಜನಿಕರ ಪರವಾಗಿಮಾಡುವ ಸಹಸ್ರಚಂಡಿ, ಅತಿರುದ್ರ ಮುಂತಾದವು ಪ್ರಾಂತ್ಯಕ್ಕೆ ನೆಮ್ಮದಿತರುತ್ತವೆ. ಸೆಕ್ಯುಲರ್ ಸರಕಾರಕ್ಕೆ ಈ ದಾರಿ ಇಲ್ಲದಿರುವುದು ಹಿಂದೂಗಳದುರದೃಷ್ಟ. ದುಷ್ಟಅಭ್ಯಾಸಗಳನ್ನು ಬಿಡುವುದು ಕಷ್ಟ; ಹಿಡಿಯುವುದು ಸುಲಭ. ಆದ್ದರಿಂದ ಅವುಗಳ

ಭ್ಯಾಸಮಾಡದಂತೆ ಬಹಳ ಎಚ್ಚರಿಕೆಬೇಕು. ನಮಗಿಂತ ಅಲ್ಪರ ಸಹವಾಸ ಹಳಹಾನಿಕರ. ಈಗಿನ ಯುವಕರಿಗೆ, ಹಿರಿಯರ, ಹಿತಚಿಂತಕರ, ಬಲ್ಲವರ, ದ್ಧಿ ವಾದಬೇಡ. ಸಂಪೂರ್ಣ ಮಿಶ್ರತರದ್ದಾದ ಸಂಗಾತಿ ವರ್ಗದವರ ಬಲೆ ಲ್ಲಿಬಿದ್ದು, ಬಟ್ಟೆಬರೆ, ಆಹಾರ ವಿನೋದ, ಪರಿಶುದ್ಧತೆ, ಮುಂತಾದುವು ಳಲ್ಲೆಲ್ಲ ಬಹುಮತದ ಒತ್ತಾಯದಂತೆ ಬಾಳಿಜೀವನ ಕೆಡಿಸಿಕೊಳ್ಳುತ್ತಾರೆ. ದು ತುಂಬಾ ಪಶ್ಚಾತ್ತಾಪಪಡಬೇಕಾದ ವಿಚಾರ.

ಪಾಶ್ಚಾತ್ಯರಲ್ಲೊಂದು ನಾಣ್ಣುಡಿಯಿದೆ. ಒಂದುಸಾರಿ ಮಾಡುತ್ತೇ ಂದು ಆರಂಭಿಸಿದಕರ್ಮ ಅನಂತರ ಒಂದು ಹೊಸಅಭ್ಯಾಸವೇ ಆಗುತ್ತದೆ ಕಾಫಿ, ಸಿಗರೇಟು, ಮದ್ಯ, ವ್ಯಭಿಚಾರ, ಕಳವು, ನಕಲು ತೆಗೆಯುವುದು ಎಲ್ಲ ಾಗೆಯೇ). ಇಂಥ ಅಭ್ಯಾಸವೇ ಕ್ರಮೇಣಸ್ವಭಾವವಾಗುತ್ತದೆ. ಸ್ವಭಾವವೇ ೀವನದಗುರಿ ನಿಶ್ಚೈಸುತ್ತದೆ. ಅದು ಹಾಳಾದರೆ ಜೀವನವೇಹಾಳುಗುತ್ತದೆ. ಟ್ಟಅಭ್ಯಾಸವು ನಮ್ಮನ್ನು ಕೆಟ್ಟ ಪಿಶಾಚ ಹಿಡಿದಂತೆ ಹಿಡಿದೀತು! ಜೀವನವೆಲ್ಲ ಾಡೀತು.

ಅಭ್ಯಾಸ ಮುರಿಯುವ ಕ್ರಮ : ನಮ್ಮನ್ನು ಬಾಧಿಸುವ ಒಂದು ಟ್ಟ ಅಭ್ಯಾಸದ ವಿಚಾರಒಮ್ಮೆಯಾದರೂ ನಮಗೆ ವ್ಯಸನವುಂಟಾದರೆ, ಆ ಾವನೆಯನ್ನು ಬಲಪಡಿಸಲು ಧಾರಾಳವಾದ ಯತ್ನನಡೆಸಲೇಬೇಕು. ಈ ನ್ಮದಲ್ಲಿ, ಬುದ್ಧಿಕಡಿಮೆಯಾಗಿ ಒಂದುದೊಡ್ಡ ಕೆಟ್ಟಕರ್ಮಮಾಡಿದರೆ ಆದನ್ನು ರ್ಕಾರದಲ್ಲಿ ಒಪ್ಪಿಕೊಂಡು ಶಿಕ್ಷೆಪಡೆದರೆ, ಅದರ ಕೆಟ್ಟಕರ್ಮಫಲ ಮುಗಿಯು ್ತದೆ. ಅಥವಾ ತಕ್ಕ ಪ್ರಾಯಶ್ಚಿತ್ತಮಾಡಿಕೊಂಡು ಪ್ರಾಯಶ್ಚಿತ್ತದ ಕಷ್ಟ ಟ್ಟು ಆದರಫಲ ನಾಶಮಾಡಿಕೊಳ್ಳಬಹುದು. ಹಾಗೆ ಎರಡನ್ನೂ ಮಾಡದಿ ್ದರೆ ಮುಂದೆ ದೇವರಿಂದ ಬರುವ ಶಿಕ್ಷೆಯು ಮೇಲೆ ಹೇಳಿದ ಕಷ್ಟಗಳ ಹಲವು ಾಲು ಅಧಿಕತರದ್ದಾಗದಿರದು. ಆದ್ದರಿಂದ ಮೇಲೆ ಹೇಳಿದ ಕ್ರಮಗಳೇ ುಲಭದಾರಿಗಳು.

ಕೆಲವು ಪಾಪಗಳನ್ನು ದಾನ, ಹೋಮ, ದೇವರಸೇವೆ, ಕ್ರಮರೀತಿಯ ೀರ್ಥಯಾತ್ರೆ, ವ್ರತ, ಜಪ ಮುಂತಾದವುಗಳಿಂದ ನಾಶಮಾಡಿಕೊಳ್ಳಬಹುದು ಸಂಚಿತ ಮತ್ತು ಆಗಮಿ). ದೃಷ್ಟಾಂತಕ್ಕೆ ನಿತ್ಯದ ಹಗಲಿನ ಗಾಯತ್ರೀಜಪದಿಂದ ಹಗಲಲ್ಲಿಮಾಡಿದ ಪಾಪ, ರಾತ್ರಿಜಪದಿಂದ ರಾತ್ರಿಮಾಡಿದ ಪಾಪನಶಿಸುತ್ತದೆ.

ಯದಹ್ನಾತ್ಕುರುತೇ ಪಾಪಂ ತದಹ್ನಾತ್ಪ್ರತಿ ಮುಚ್ಯತೇ ।
ಯದ್ರಾತ್ರಿಯಾತ್ಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿ ಮುಚ್ಯತೇ ।

ಉತ್ತಮದಾನಿಗೆ ದಾನಮಾಡಿದಾಗ ನಮ್ಮಪಾಪದ ಒಂದಂಶ ಅವರಿಗೆ ಹೋಗುತ್ತದೆ. ಅದನ್ನು ಅವರು ತಮ್ಮವೇದಪಠನ, ಜಪ ಉಪಾಸನೆಯಿಂದ ನಾಶಮಾಡಿಕೊಳ್ಳುತ್ತಾರೆ. ಮತ್ತು ಧಾರಾಳ ಗಾಯತ್ರೀಮಾಡಿ ಹಲವುಜನ್ಮಗಳ ಪಾಪ ಕಳಕೊಳ್ಳಬಹುದು. ಆದ್ದರಿಂದ ಅಂಥಶ್ರೇಷ್ಠ ವೇದಬಲ್ಲ ಪುರೋಹಿತ ರಿರುವುದು ಹಿಂದೂಸಮಾಜಕ್ಕೆ ಒಂದು ದೊಡ್ಡ ಸಹಾಯ. ಬಹುಮಟ್ಟಿನ ಕೆಟ್ಟಕರ್ಮಫಲಗಳನ್ನು ಹೀಗೆ ನಾಶಮಾಡಿಕೊಳ್ಳುವುದುತ್ತಮ. ಆದರೆ ಕೆಲವು, ಗುರುದ್ರೋಹ, ತಂದೆತಾಯಿಗಳ ಬಗ್ಗೆ ಅಗೌರವ, ಇತರ ಉಪಕಾರಮಾಡಿದ ವರ ಬಗ್ಗೆ ಕೃತಘ್ನನಾಗಿರುವುದು, ಕ್ಷೇತ್ರಗಳಲ್ಲಿ ಮಾಡಿದಪಾಪಗಳು ವಜ್ರ ಲೇಪದಂತೆ ನಮ್ಮನ್ನು ಹಿಡಿದಿರುತ್ತವೆ, ಅವುಗಳನಾಶಕ್ಕೆ ವಿಶೇಷಪುಣ್ಯಕಾರ್ಯ ಗಳು ಬೇಕು. ತಿಳಿಯದೆ ಮಾಡಿದಪಾಪಕ್ಕೆ ಧಾರಾಳವಾದ ಪಶ್ಚಾತ್ತಾಪವು ಬಹುಮಟ್ಟಿಗೆ ಸಹಾಯಕ. ಹೀಗೆಲ್ಲಮಾಡದಿದ್ದ ಕರ್ಮ ಅನುಭವಿಸಿಯೇ ಮುಗಿಯುತ್ತದೆ.

ನಾ ಭುಕ್ತಂ ಕ್ಷೀಯತೇ ಕರ್ಮ

ಪಾಪವನ್ನು ಪುಣ್ಯಗಳನ್ನುಮಾಡಿ ಕಡಿಮೆಮಾಡಬಹುದು. ಆದರೆ ಪುಣ್ಯವನ್ನು ಪುಣ್ಯಮಾಡಿ ಮುಗಿಸಲಾಗುವುದಿಲ್ಲವಷ್ಟೆ! ಅದರ ಫಲವಾಗಿಸ್ವರ್ಗ ಲಭಿಸುತ್ತದೆ. ಆದರೆ ಅದು ಕೇವಲ ಭೋಗಭೂಮಿಮಾತ್ರ. ಮುಂದೆ ಪುನಃ ಭೂಲೋಕದ ಜನ್ಮಗಳ ಕಷ್ಟ ಇದೆ. ದೇವರನ್ನೇ ಹೊಂದುವುದಕ್ಕೆ ಸ್ವರ್ಗವೂ ಒಂದು ಆತಂಕವೇ. ಆದ್ದರಿಂದ ನಾವುಮಾಡುವ ಕರ್ಮಗಳನ್ನೆಲ್ಲ ದೇವರೇ ನೀನು ಕೊಡುವಶಕ್ತಿಯಿಂದ ಅವನ್ನು ನಾನು ಮಾಡುತ್ತಿದ್ದೇನೆ ; ಫಲ ನಿನಗೆ ; ಅಥವಾ ಕರ್ಮಮಾಡಿ ಫಲವನ್ನು ಬ್ರಹ್ಮಾರ್ಪಣ ಎಂದು ಮನಃಪೂರ್ವಕವಾಗಿ ಭಾವಿಸಿ ಮತ್ತೆ ಫಲದ ಭಾವನೆ ಆಶಿಸದಿರುವುದು ದಾರಿ.

ನಮ್ಮಲ್ಲಿರುವ ಒಂದು ಅಭ್ಯಾಸ ಬಹಳ ದುಷ್ಟತರದ್ದು ಎಂದು ಒಮ್ಮೆ ಯಾದರೂ ಅರ್ಥಮಾಡಿಕೊಂಡವ ಆ ಭಾವನೆ ಬಲಪಡಿಸಬೇಕು. ಅದಕ್ಕಾಗಿ ಅದರ ದೋಷಗಳನ್ನು ಪುನಃಪುನಃ ಮನಸ್ಸಿಗೆ ತಂದುಕೊಳ್ಳಬೇಕು.. ಅದರ ಕೆಡುಕಿನ ವಿಚಾರ ಚೆನ್ನಾಗಿ ಓದಬೇಕು. ಸತ್ಸಂಗದಿಂದ ಆ ಚಾಳಿಇಲ್ಲದವರ ಸಹಾಯ, ಪ್ರೋತ್ಸಾಹ ಬೆಂಬಲ ಪಡೆಯಬೇಕಲ್ಲದೆ, ಅದಕ್ಕೆ ಗುಲಾಮರಾದ ಅಲ್ಪರ ಸಂಗದಿಂದ ಅವರ ಅಡ್ಡಮಾತುಗಳಿಗೆ, ಮತ್ಸಾಯಕ್ಕೆ, ಅಸ್ಪದ ಕೊಡ ಕೂಡದು. ಮುಖ್ಯವಾಗಿ ದುರಭ್ಯಾಸದ ಹಾನಿಗಳನ್ನು ಮನಸ್ಸಿನಲ್ಲಿಉರುಳಿ ಸುತ್ತಬಂದಷ್ಟೂ ಮುಂದೆ ಅದನ್ನು ಬಿಡಲಿಕ್ಕೆ ಬೇಕಾದಶಕ್ತಿ ಬೆಳೆಯುತ್ತಬರು

ತ್ತದೆ. "ಈ ಅಭ್ಯಾಸ ನನ್ನ ಜೀವನ ಕೆಡಿಸುತ್ತದೆ, ವ್ಯರ್ಥಮಾಡುತ್ತಿದೆ, ಬಿಡಲೇಬೇಕು, ಬಿಡಲೇಬೇಕು" ಎಂದು ಉರುಹಾಕಬೇಕು. ತನ್ನಶಕ್ತಿಗೆ ದೇವರ ಸಹಾಯದ ಬೆಂಬಲಪಡೆಯುವುದುತ್ತಮ. ಹತ್ತಿರದೇವಸ್ಥಾನವಿದ್ದರೆ ಅಲ್ಲಿಗೆ ತಪ್ಪದೆ, ಈ ಪ್ರಾರ್ಥನೆಗಾಗಿಯೇ, ನಿತ್ಯ ಹೋಗುತ್ತ, ದೇವರಸಹಾಯ ಬೇಡುತ್ತ ಚಿಂತಿಸುತ್ತ ಪ್ರದಕ್ಷಿಣೆ ತೆಗೆಯುತ್ತಿರುವುದು ಪ್ರಯೋಜನಕಾರಿ. ಆ ಬಗ್ಗೆ ಏಕಾಗ್ರತೆ ಬೆಳೆಸಿದಷ್ಟೂ ಶಕ್ತಿ ಹೆಚ್ಚುಬರುತ್ತದೆ. ಆಮೇಲೆ ಒಂದು ಉತ್ತಮಮುಹೂರ್ತಆರಿಸಿ ಆ ಚಟ ಬಿಟ್ಟೇಬಿಡಬೇಕು.

ನಮ್ಮಲ್ಲಿ ಅನೇಕ ದುರ್ಬಲತೆಗಳಿವೆ. ಎಲ್ಲವುಗಳನ್ನು ಜಯಿಸಲಿಕ್ಕೆ ಒಮ್ಮೆಯೇ ಆರಂಭಿಸುತ್ತ, "ದೇವರೇ, ನನ್ನನ್ನು ಉತ್ತಮನನ್ನಾಗಿ ಮಾಡು" ಎನ್ನುವ ಪ್ರಾರ್ಥನೆಯ ಬಗ್ಗೆ ತತ್ಕಾಲಕ್ಕೆ ಆರಿಸಿದ ಮುಖ್ಯ ದುರ್ಗುಣದ ಬಗ್ಗೆ ಮಾತ್ರ ಎಲ್ಲ ಲಕ್ಷ್ಯಹಾಕುತ್ತ, ಅದನ್ನು ಗೆಲ್ಲುವುದು ತತ್ಕಾಲದ ಗುರಿಯಾಗಲಿ.

ಒಟ್ಟಾರೆ ನಮ್ಮಜೀವನ ಉತ್ತಮಮಾಡಿಕೊಳ್ಳಲಿಕ್ಕೆ ನಮ್ಮ ನಮ್ಮ ಧರ್ಮದ ಅಭ್ಯಾಸವೇ ಪ್ರಥಮದಾರಿ. ನಮ್ಮಜನ್ಮ ನಾವೇ ನಿರ್ಧರಿಸಿ ಬಂದ ದಲ್ಲ. ದೇವರೇ ನಮ್ಮ ಹಿಂದಿನ ಧಾರ್ಮಿಕವಂಟ್ಟ ಕಂಡು, ಈ ಜನ್ಮದಲ್ಲಿ ಅದಕ್ಕಿಂತಉತ್ತಮಂದ ಮತ್ತು ತನ್ನಕಡೆಗೆ ಮುಂದುವರಿಸುವಶಕ್ತಿ ಬರಲಿಕ್ಕೆ ಜನ್ಮ ಕೊಡುತ್ತಾನೆ, ಅದು ಹತ್ತನೆ ಕ್ಲಾಸುಪರೀಕ್ಷೆ ಮುಗಿಸಿದವನಿಗೆ ಜೂನಿಯರ್ ಕಾಲೇಜಿನಲ್ಲಿ ಪ್ರವೇಶಸಿಕ್ಕಿದಂತೆ. ಆದ್ದರಿಂದ ನಮ್ಮನಮ್ಮ ವರ್ಣಧರ್ಮದ ಅಭ್ಯಾಸಕ್ಕೆ ನಮ್ಮಶಾಸ್ತ್ರದ ಪುಸ್ತಕಗಳನ್ನು ಕಲಿತು ಸಾಧ್ಯವಾದ ಅಭ್ಯಾಸ ಮಾಡುತ್ತ ಬಂದರೆ, ದೇವರೇ ನಾವುಮುಂಚೆ ನಮ್ಮಿಂದಅಸಾಧ್ಯ ಎಂದು ಎಣಿ ಸಿದ ಧಾರ್ಮಿಕ ಸಾಧನೆಗಳ ಆಚರಣೆಗಳನ್ನೂ ಸೇರಿಸಿಕೊಳ್ಳುವ ಶಕ್ತಿಕೊಡು ತ್ತಾನೆ. ಅವನನ್ನು ಕೇವಲ ನಮ್ಮವನೆಂಬ ಪ್ರಾರ್ಥನೆಯಲ್ಲಿ, ಧ್ಯಾನದಲ್ಲಿ, ಮನಸ್ಸಲ್ಲಿ ಅವನಿಗೆ ಅಡ್ಡಬಿದ್ದು ಮಾತಾಡಿಸುತ್ತಿರುವ ಅಭ್ಯಾಸದಲ್ಲಿ ಕಳೆಯ ಬೇಕು. ನಮ್ಮಶಾಸ್ತ್ರದಂತೆ ತಪಸ್ಸುಎಂದರೇ, ನಮ್ಮವರ್ಣಧರ್ಮದ ಆದಷ್ಟು ಹೆಚ್ಚು ಅಭ್ಯಾಸವನ್ನು ದೇಹಶ್ರಮ ಎಣಿಸದೆ ಮಾಡುತ್ತಿರುವುದು.

ಮನುಷ್ಯ ಎಷ್ಟಕ್ಕೂ ತಾನು ವಿಧಿಯಕೈಯಲ್ಲಿ ಸಿಕ್ಕಿಬಿದ್ದಿದ್ದೇನೆ ಎಂದು ಭಾವಿಸಕೂಡದು. ಈಗ ಅವನಿಗಿರುವ ಸಂಕಷ್ಟಗಳು, ಮನಸ್ಸಿನ ಕೆಟ್ಟಚಾಳಿಗಳು, ದುರ್ಬಲತೆ, ಎಲ್ಲಅವನೇ ಹಿಂದೆಮಾಡಿದ್ದ ಕೆಟ್ಟಕರ್ಮಗಳಫಲ ಮಾತ್ರ ; ಅವು ಒಳ್ಳೆಯದಾರಿ ಆಗಲೇ ಹಿಡಿಯದೆ ಕೆಟ್ಟದ್ದು ಆರಿಸಿದ್ದರಿಂದ ಬಂದವು. ಆದ್ದರಿಂದ ಈಗ ಅವ ಇನ್ನು ಒಳ್ಳೆಯದಾರಿಹಿಡಿಯಲು ನಿರ್ಧರಿಸಿ

ದರೆ ತತ್ಕಾಲದ ಕಷ್ಟವುಗಿದು ಮುಂದೆಶುಭಕಾಲ ಬರುವುದುಖಂಡಿತ. ಅವನ ಮನಸ್ಸಿನ ಕೆಟ್ಟಒಲವು ಅವನನ್ನು ಬಲವಾಗಿತಡೆಯುತ್ತದೆ; ವಿರೋಧಿಸುತ್ತದೆ. ಆದರೆ ಕೆಟ್ಟಜೀವನಬಿಟ್ಟು ಒಳ್ಳೆಯಜೀವನ ಆರಿಸುವವನಿಗೆ ನಮ್ಮತಂದೆಯಾದ ದೇವರದ್ದೆ ಬೆಂಬಲ ಲಭಿಸುವುದು ಸುಲಭವಷ್ಟೇ! ಅದು ಒಂದು ಅತ್ಯಂತ ಪ್ರಬಲಸಹಾಯ. ಅದರ ಬೆಂಬಲಪಡೆಯುತ್ತ ದುಷ್ಟಅಭ್ಯಾಸಗಳ, ಒಲವುಗಳ. ಶಕ್ತಿಹಿಮ್ಮೆಟ್ಟಲುಸಾಧ್ಯ. ಬಹಳಕಾಲ, ಏನೂ ಆಗಲಿಲ್ಲವಲ್ಲ ಎಂದು ತೋರುತ್ತಿದ್ದಾಗಲೂ, ಫಕ್ಕನೆ ಒಂದುದಿನ ದುರಾಭ್ಯಾಸ ಸುಲಭದಲ್ಲಿ ನಾಶಹೊಂದುವುದು ನಡೆಯುತ್ತದೆ ಎಂಬುದು ಖಂಡಿತ. ಅದ್ದರಿಂದ ಯತ್ನಮಾತ್ರ ಬಿಡಕೂಡದು.

ಕೆಲವರು ತಮ್ಮ ಈ ತರದ ಸಾಧನೆಯಲ್ಲಿ ಬೇಗಸಫಲರಾಗುತ್ತಾರೆ. ಏಕೆಂದರೆ ಅವರು ಹಿಂದಿನಜನ್ಮಗಳಲ್ಲಿ ದುರಭ್ಯಾಸದಲ್ಲಿ ಬಹಳ ಮುಳುಗಿರಲಿಲ್ಲ. ಕೆಲವರಿಗೆ ಬಹಳಶ್ರಮಬೇಕಾಗುತ್ತದೆ. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಯವರು ಇದಕ್ಕೆ ಒಂದು ಉಪಮೆ ಕೊಟ್ಟದ್ದುಂಟು. ಹಿಂದೆ ನಾವು ಒಂದು ಮೊಳೆಯನ್ನು ಜಂತಿಗೆ ಹೊಡೆದಿದ್ದೆವು. ಈಗ ಅದನ್ನು ಕೀಳಲಿಕ್ಕೆ ಯತ್ನಿಸುತ್ತೇವೆ. ಮುಂಚೆ ತನ್ನ ಮೊಳೆಗೆ ಸ್ವಲ್ಪಮಾತ್ರಬಡಿದಿದ್ದವ ಅದನ್ನು ಸುಲಭವಾಗಿ ಕೀಳಲಾಪ. ಮತ್ತೊಬ್ಬ ಬಹಳವಾಗಿ ಅದನ್ನು ಬಡಿದವ ಬಹಳವಾಗಿ ಯತ್ನಿಸಿಯೇ ಅದನ್ನು ಕೀಳಬೇಕಾಗುತ್ತದೆ. ನಿಮ್ಮ ಸಾಧನೆಗೆ ಜಯುವಾಗಲಿ!

೩೭. ಈ ಕಾಲದಲ್ಲಿ ಧರ್ಮದ ಅಭ್ಯಾಸ

ಧರ್ಮದ ಅಭ್ಯಾಸಕ್ಕೆ ಈ ಕಾಲದಷ್ಟು ಪ್ರತಿಕೂಲವಾದದ್ದು ಹಿಂದೆ ಎಂದೂ ಇರಲಿಲ್ಲ. ನಮ್ಮ ಧರ್ಮವನ್ನು ಬಹಳ ಹಿಂಸಿಸಿದ ಮುಸಲ್ಮಾನರ ಆಳ್ವಿಕೆಯುಕಾಲದಲ್ಲೂ, ದೇಶದಹಣ ಬಹಳ ಕೊಳ್ಳೆಹೊಡೆದ ಬ್ರಿಟಿಷರಕಾಲದಲ್ಲೂ ಹಿಂದೂಪ್ರಜೆಗಳು, ಈ ಪರಧರ್ಮದ ರಾಜರಿಗೆ ಅವರಿಗೆಅವರ ಧರ್ಮವಿದೆ, ನಾವು ನಮ್ಮದು ಬಿಡಕೂಡದು ಎಂದು ಅದನ್ನು ಚೆನ್ನಾಗಿ ಅಭ್ಯಸಿಸುತ್ತ ಬಂದರು. ಸ್ವರಾಜ್ಯಕ್ಕಾಗಿಹೋರಾಡಿದ ತಿಲಕರು, ಮಾಲವೀಯರು, ಗಾಂಧಿಜೀಯವರು ಈ ಸ್ವರಾಜ್ಯದಿಂದ ದೇಶದಲ್ಲಿ ಹಿಂದೂಧರ್ಮ ಪ್ರಜ್ವಲಿಸಲಿ ಎಂದು ಆಶಿಸುತ್ತಿದ್ದರು. ಆದರೆ ಸ್ವರಾಜ್ಯಬಂದನಂತರ, ಮುಖ್ಯವಾಗಿ ಕೇವಲನಾಸ್ತಿಕರಾದ ಪ್ರಧಾನಮಂತ್ರಿ ನೆಹರೂ ಅವರ ಪ್ರಭಾವದಿಂದ, ಹಿಂದೆ ಎಂದೆಂದೂ ಇದ್ದಿರದಸೆಕ್ಯುಲರ್‌ರಾಜ್ಯಕ್ರಮ ಆರಂಭವಾಯಿತು. ಅಂದಿನಿಂದ ಧರ್ಮದನಾಶ

ಅಧರ್ಮದಹಾವಳಿ, ನೈತಿಕತೆಯ ವಿಪರೀತಅವನತಿ, ನಡೆಯುತ್ತಲೇಬಂದಿದೆ. ದಿನನಿತ್ಯ ಎಂಬಂತೆ ಹೊಸಹೊಸತರದ ಘೋರಪಾಪ ಕ್ರಿಯೆಗಳ ವಾರ್ತೆ ಬರುತ್ತಲೇಇದೆ. ಯುವಕರು ತೀರಾ ಅಧರ್ಮದದಾರಿ ಹಿಡಿಯುತ್ತಿದ್ದಾರೆ. ದೇಶದಭವಿಷ್ಯಕ್ಕೆ ಈಗ ಬಹಳಭಯಪಡಬೇಕಾದ ಸ್ಥಿತಿಉಂಟಾಗುತ್ತಿದೆ. ನಮ್ಮ ಸೆಕ್ಯುಲರ್‌ರಾಜ್ಯವು ದೇವರನ್ನು ತೀರಾದೂರಇಟ್ಟಿದೆ. ಮೂರು ಯುದ್ಧಕಾಲಗಳ ಘೋರ ವಿಪತ್ತಿನಲ್ಲಿಯೂ ನಮ್ಮ ರಾಜಕೀಯ ಮುಖಂಡರು ದೇವರನ್ನು ಸಹಾಯಕ್ಕಾಗಿ ಪ್ರಾರ್ಥಿಸಲು ಧಿಕ್ಕರಿಸಿದ್ದರು! ಕೇವಲ ವಿಜ್ಞಾನದಆಯುಧಗಳ ಸಹಾಯಸಾಕೆಂದು ನಂಬಿದ್ದರು. ಈ ಮನೋಭಾವನೆ ಹಲವು ಇತರ ರೀತಿಗಳಲ್ಲಿಯೂಕೆಲಸಮಾಡುತ್ತ ದೇಶದಲ್ಲಿ ದೇವರಲ್ಲಿಶ್ರದ್ಧೆ, ಅವನಭೀತಿ, ಪಾಪದ ಭಯ ನಾಶವಾಡುತ್ತ ಬಂದಿದೆ.

ವಿಜ್ಞಾನವನ್ನು ಬೆಳೆಸಿದ್ದು ಮಾನವ ಬುದ್ಧಿಶಕ್ತಿ. ಪ್ರಕೃತಿಯಲ್ಲಿ ಅಡಗಿರುವ ಅತಿಸೂಕ್ಷ್ಮವಾದ ವಿದ್ಯುತ್ತು, ರಾಸಾಯನಿಕ ಶಕ್ತಿ, ಅಣುಶಕ್ತಿ ಮುಂತಾದ ಕೆಲವು ಶಕ್ತಿಗಳ ನಿಯಮಗಳನ್ನು ವಿಜ್ಞಾನಿಗಳು ದೀರ್ಘಕಾಲದ ಬಹಳ ಏಕಾಗ್ರತೆಯ ತಪಸ್ಸಿನಿಂದ ಕಂಡುಕೊಂಡಿದ್ದಾರೆ. ತಪಸ್ಸಿಗೆ ಯಾವುದೂ ಸಾಧ್ಯ ಎನ್ನುತ್ತದೆ ನಮ್ಮಶಾಸ್ತ್ರ. ಈ ಶಕ್ತಿಗಳು ಮುಖ್ಯವಾಗಿ ಲೋಕಪಾಲಕ ದೇವತೆಗಳ ಉಪಯೋಗಕ್ಕಾಗಿ ಇರುವವು. ವಿಜ್ಞಾನಿಯು ಅವುಗಳಮೂಲಕ ತನ್ನಬಲ ಬಹಳ ಹೆಚ್ಚಿಸಿಕೊಂಡದ್ದಲ್ಲದೆ, ಅವನ್ನು ಹೊಸ ರೀತಿಗಳಲ್ಲಿಯೂ ವಿನಿಯೋಗಿಸಿ ನೈಲೋನ್, ಕ್ಷ-ಕಿರಣ, ವಿಮಾನ, ಭಯಂಕರವಿಷ, ಲೋಕನಾಶಮಾಡುವಷ್ಟು ಶಕ್ತಿಯ ಅಣುಬಾಂಬು, ಎಲ್ಲ ಮಾಡಿಟ್ಟಿದ್ದಾನೆ. ಆ ಗರ್ವದಿಂದ ತಾನು ಪ್ರಕೃತಿ ಗೆದ್ದಿರುವೆ, ದೇವರ ಸಹಾಯ ಅನಗತ್ಯ ಎಂದು ವರ್ತಿಸುತ್ತಿದ್ದಾನೆ. ಕಮ್ಯೂನಿಸ್ಟ್‌ದೇಶಗಳು ವಿಜ್ಞಾನದ ಬೆಂಬಲದ ಗರ್ವದಿಂದ ಸಂಪೂರ್ಣ ನಾಸ್ತಿಕವಾಗಿವೆಯಾದರೆ ಮತ್ತೆಕೆಲವು, ದೇವರು ಎಲ್ಲೋ ಏನೋ, ನಮಗೂ ವಿಜ್ಞಾನದಬೆಂಬಲಸಾಕು ಎಂಬ ಸೆಕ್ಯುಲರ್ ಸರ್ಕಾರದವಾಗಿವೆ. ವಿಜ್ಞಾನದ ಅದ್ಭುತಶಕ್ತಿ, ಐಶ್ವರ್ಯ ಬೆಳೆಸುವಕ್ರಮ, ಎಲ್ಲರನ್ನೂ ಬೆರಗುಮಾಡುತ್ತಿದೆ. ಹಿಂದೆ ಹಿರಣ್ಯಕಶಿಪು, ರಾವಣರು ತಪಸ್ಸಿಂದ ದೇವತೆಗಳನ್ನು ಸೋಲಿಸುವ ಶಕ್ತಿಪಡೆದು, ದೇವರನ್ನು ಧಿಕ್ಕರಿಸಿ ನಾಶಹೊಂದಿದರು. ಸೆಕ್ಯುಲರ್ ಸರ್ಕಾರಗಳೂ ರಾವಣನ ದಾರಿ ಹಿಡಿದವೇ. ನಮ್ಮನ್ನು ನಿರ್ಮಿಸಿದ, ಪಾಲಿಸುವ, ದೇವರನ್ನು ಅಲ್ಲಗಳೆಯುವುದು ದುಷ್ಟ ರಾಕ್ಷಸರ ಕ್ರಮ ; ಕೇವಲ ಅಧರ್ಮಕ್ಕೆದಾರಿ.

ನಮ್ಮಲ್ಲಿಯೂ ಹಿಂದೆ ತಪೋಬಲದಿಂದ ಅದ್ಭುತ ಸಿದ್ಧಿಗಳನ್ನು ಹೊಂದಿದವರಿದ್ದರು: ದಿವ್ಯಾಸ್ತ್ರಗಳ ಶಕ್ತಿ ಪಡೆದವರಿದ್ದರು. ಆದರೆ ಆ ಶಕ್ತಿಗಳನ್ನು ಭೋಗಕ್ಕೆ, ಅಧರ್ಮಸಾಧನೆಗೆ, ದೇವರನ್ನು ಮೀರಲಿಕ್ಕೆ ಎಂದೂ ಉಪಯೋಗಿಸುತ್ತಿರಲಿಲ್ಲ. ಯಾವುದೇ ಅಮಾನುಷಶಕ್ತಿಕೊಡುವ ಸಲಕರಣೆಯಾಗಲಿ, ಬಿಲ್ಲು ಬಾಣ, ಖಡ್ಗ, ಉಳಿ, ಚೇಣು, ರಥ, ಹಣ, ಅಕ್ಷರ, ವಿದ್ಯೆ, ಶಾಸ್ತ್ರಗಳನ್ನು ನಾವು ದುರಪಯೋಗಿಸದಿರಲೆಂದು ವರ್ಷಕ್ಕೊಮ್ಮೆ ಆಯುಧಪೂಜೆ, ಸರಸ್ವತೀಪೂಜೆ, ಲಕ್ಷ್ಮೀಪೂಜೆ ಮಾಡುತ್ತಿದ್ದೆವು. ಬಾಲಕನ ಅಕ್ಷರಾಭ್ಯಾಸ ದೇವರ ಪ್ರಾರ್ಥನೆಯೊಡನೆ ಆರಂಭ. ವಿಜ್ಞಾನಕ್ಕೆ ದೇವರವಿಚಾರ, ಆತ್ಮದವಿಚಾರ, ಮಾನವನ ನೈತಿಕಉನ್ನತಿಗೆ ಬೇಕಾದದಯೆ, ಕರುಣೆ, ದಾನದಮಹತ್ವ, ಶೀಲದ ಅವಶ್ಯಕತೆ, ಒಂದೂತಿಳಿಯದು! ಅದು ಎಂಥ ಮೂರ್ಖನಿಗೂ ಬೆಂಬಲಕೊಟ್ಟದ್ದುಂಟು. ಅಂತೆಯೇ ಕೇವಲಬುದ್ಧಿಶಕ್ತಿಯೂ (ಧರ್ಮದಿಂದ ತಿದ್ದಲ್ಪಡದ್ದು) ಕೊಲೆಗಾರ, ದರೋಡೆಕಾರ, ಹಿಟ್ಲರನಂತೆ ಕ್ರೂರ, ಮುಂತಾದವರಿಗೆ ತನ್ನ ಬೆಂಬಲಕೊಟ್ಟದ್ದುಂಟು. ಧಾರ್ಮಿಕತರಬೇತಿ ಹೊಂದಿರದ ಈಗಿನ ಸಮಾಜಕ್ಕೆ ವಿಜ್ಞಾನದ ಅಪಾರಶಕ್ತಿಯು ಬೆಂಬಲ ಸಿಕ್ಕಿದೆ. ಆದರೆ ಅದು ಇನ್ನೂ ಬಾಲಕನಾಗಿಯೇ ಇರುವವನಿಗೆ ಖಡ್ಗ, ಪಿಸ್ತೂಲು, ಭಯಂಕರವಿಷ, ಸಿಡಿಮದ್ದು, ಒದಗಿಸಿಕೊಟ್ಟಂತೆ! ಅವನ ತಲೆಕೆಟ್ಟು ಅವ ಮಾಡಕೂಡದ ಭಯಂಕರ ಅನಾಹುತ ಉಂಟುಮಾಡದಿರನು. ಈ ಕಾಲದ ಮಾನವರು ವಿಜ್ಞಾನದ ಅದ್ಭುತಶಕ್ತಿ ಬೆಳೆಸಿದ್ದು ಕಂಡು ಈ ಕಾಲದ ರಾಜಕೀಯ ಮುಖಂಡರೂ ತಮ್ಮ ಬುದ್ಧಿಶಕ್ತಿಗೂ ಎಲ್ಲವೂಸಾಧ್ಯ, ಎಲ್ಲಸಮಸ್ಯೆಗಳ ಪರಿಹಾರಕ್ಕೂ ತಮ್ಮ ಆಲೋಚನೆ ಸಾಕು; ಧರ್ಮಶಾಸ್ತ್ರದ್ದು ದಿವ್ಯಜ್ಞಾನವೆಂದು ಗೌರವಿಸಬೇಕಿಲ್ಲ; ಎನ್ನುತ್ತಿದ್ದಾರೆ. ಆದರೆ ವಿಜ್ಞಾನಕ್ಕಾಗಲಿ, ಕೇವಲ ತಮ್ಮ ಬುದ್ಧಿಗಾಗಲಿ ಆತ್ಮನು ಅಗೋಚರನಾದ್ದರಿಂದ, ಅವೆರಡಕ್ಕೂ ಪ್ರತ್ಯಕ್ಷಮಾತ್ರ ಪ್ರಮಾಣವಾದ್ದರಿಂದ ಸೆಕ್ಯುಲರ್‌ರಾಜ್ಯಗಳಿಗೆ ಮಾನವ ಎಂದರೆ ದೇಹ (ಸ್ಥೂಲಸೂಕ್ಷ್ಮ) ಮಾತ್ರ. ಮಾನವರ ಹಿತಸಾಧನೆ ಎಂದರೆ ಸಂಪೂರ್ಣವಾಗಿ ದೇಹದಸುಖಸಾಧನೆಮಾತ್ರ; ಅದರ ಪೂಜೆಮಾತ್ರ ಎಂಬುದಾಗಿದೆ. ಇದರ ಪರಿಣಾಮ ನೋಡಿರಿ.

ದೇಹದಭೋಗಕ್ಕೆ ಪ್ರತಿಯೊಂದೂ ಹೊರಗಿಂದ ಬರಬೇಕು. ಅನ್ನ, ತಿಂಡಿ, ಬಟ್ಟೆ, ಹಣ, ಆಭರಣ, ಮನೆ, ಹೊಲ, ಕಾರು, ಸ್ತ್ರೀ, ಮದ್ಯ, ರೇಡಿಯೋ, ಅಧಿಕಾರ ಎಲ್ಲರಿಗೂ ಬೇಕೆಂಬ ಆಸೆ. ಆದರೆ ಭೂಲೋಕದಲ್ಲಿ

ಂದೂ ಎಲ್ಲರಿಗೂ ಬೇಕಾಗುವಷ್ಟು ಭೋಗವಸ್ತುಗಳಿದ್ದದ್ದಿಲ್ಲ. ಆದ್ದರಿಂದ ್ರಂತ ಹಿರಿಮೆಯಿಂದ ಗಳಿಸಲಿಕ್ಕಾಗದಿದ್ದರೆ, ಕಳವು, ವಂಚನೆ, ದರೋಡೆ, ಕಾಳ ಂತೆ, ಲಂಚ, ಹಿಂಸೆ, ಮುಂತಾದುವುಗಳ ಮೂಲಕಪಡೆಯುವ ಯೋಚನೆಬಾರ ರದು. ಪೊಲೀಸರು ಎಲ್ಲೆಲ್ಲೂ ಇರಲಾರರು. ಅವರೂ ದೇಹದ ಪೂಜೆ ುವರೇ ಆಗದಿರರು. ನೈತಿಕತೆ ಕುಸಿಯುತ್ತ ಹೋಗುವುದೇ ಕ್ರಮ. ದೇವರ ುಯು ಮಾತ್ರ ಸರ್ವತ್ರ, ಸರ್ವ ಕಾಲದಲ್ಲಿಯೂ, ಕೆಲಸ ಮಾಡಲಾಪುದು. ಮ್ಮಲ್ಲಿ ಮುಂಚೆ ಧಾರಾಳವಾಗಿ ಕೆಲಸಮಾಡುತ್ತಿತ್ತು. ಆದರೆ ಸೆಕ್ಯುಲರ್ ಾಜ್ಯದಲ್ಲಲ್ಲ.

ಸ್ವರಾಜ್ಯದ ಮುಂಚೆ ಧಾರ್ಮಿಕ ತ್ಯಾಗಿ ಮುಖಂಡರು ಬಹಳ ಇದ್ದಿದ್ದ ಾದರೆ ಈಗಿನ ದೇಹಪೂಜೆಯ ಸೆಕ್ಯುಲರ್ ಸರ್ಕಾರದವರು ಬಹುಮಟ್ಟಿಗೆ ಸ್ವಾರ್ಥಿಗಳು, ಧ್ಯೇಯುವಿಲ್ಲದವರು. ಅದರಿಂದಾಗಿ ಅನೇಕಾನೇಕ ಅಯೋಗ್ಯರೂ ಅಸಮರ್ಥರೂ ಮಂತ್ರಿಗಳಾಗಿ ತಮ್ಮ ವಿಭಾಗದಲ್ಲಿ ಕೋಟಿಕೋಟಿ ಪ್ರಜೆಗಳ ೀವನ ಕಷ್ಟಮಾಡುತ್ತಿದ್ದಾರೆ. ತಮ್ಮ ಲೆಕ್ಕಕ್ಕೆ ದಾಖಲಾಗುವ ಪರ್ವತ ಮಟ್ಟದ ಪಾಪದ ಕಲ್ಪನೆಯೇ ಇಲ್ಲದವರಾಗಿದ್ದಾರೆ. ಮುಂಚಿನ ಕಾಲದಲ್ಲಿ ನೂಲೋಕದಲ್ಲಿಯೇ ಉತ್ತಮರೆಂದುಖ್ಯಾತರಾಗಿದ್ದರು ನಮ್ಮವ್ಯಾಪಾರಸ್ಥರು. ಈಗಿನ ವಾತಾವರಣದಲ್ಲಿ ಸಂದರ್ಭ ಸಿಕ್ಕಿದಾಗಲೆಲ್ಲ ಜನರ ಹಣ ಕೊಳ್ಳೆಹೊಡೆ ಯುವ ವರ್ತಕರೇ ಅತ್ಯಧಿಕ. ಬ್ರಿಟಿಷರ ಕಾಲದಲ್ಲಿ ಸರ್ಕಾರದಲ್ಲಿ ಎಲ್ಲೋ ಪತ್ತರಲ್ಲೊಬ್ಬ ಲಂಚಕೋರನಿದ್ದಿದ್ದರೆ ಈಗ ಲಂಚ ಬುಡದಿಂದ ತುದಿಯ ವರೆಗೂ ಸ್ಥಾಪಿತವಾಗಿದೆ. ತನಗೆ, ಹೆಂಡತಿಗೆ, ಮಕ್ಕಳಿಗೆ ದೇಹದಭೋಗಕ್ಕೆ ಎಷ್ಟು ಹಣವಿದ್ದರೂ ಸಾಲದಲ್ಲ! ನಮ್ಮ ರಕ್ಷಣೆಗೆಂದಿದ್ದ ಪೊಲೀಸರ ಕೆಲವು ಈ ಕಾಲದ ವರ್ತನೆಗಳು ನಮ್ಮಲ್ಲಿ ಪ್ಯೈನಡುಕ ಹುಟ್ಟಿಸುತ್ತವೆ. ಇವರು ದಿವ್ಯ ಹಿಂದೂಧರ್ಮದಲ್ಲಿಜನಿಸಿದವರೆ? ಎಂದು ಆಶ್ಚರ್ಯವಾಗುತ್ತದೆ. ದೇಶದಚಿಕ್ಕ ಚಿಕ್ಕರಾಜ್ಯಗಳಲ್ಲಿ ಕೂಡಾ ಮಾನವನನ್ನುಪ್ರಾಣಿಮಟ್ಟಕ್ಕಿಳಿಸುವ ಮದ್ಯ ವರ್ಷಕ್ಕೆ ೫೦೦ ಕೋಟಿ ರೂಪಾಯಿ ಮಾರುತ್ತಿದೆ. ಬ್ರಾಹ್ಮಣರಲ್ಲೂ ಭಯಂಕರ ನರಕ ಕೊಡುವ ಮದ್ಯ, ಗೋವಿನ ಮಾಂಸಭಕ್ಷಣ ಆರಂಭವಾಗಿದೆ! ವರ್ಷಇಡೀ ಸಂಪಾದನೆ ಇಲ್ಲದ ಕೂಲಿಯವರದ್ದೂ ಸಂಪಾದನೆಯ ಅರ್ಧಪಾಲು ದೇಹಕ್ಕೆ ಶರಾಬಿನ ಪೂಜೆಗೆ ! ದೇಶದಲ್ಲಿ ಅರ್ಧಪಾಲು ಜನರಿಗೆ ಊಟಕ್ಕಿಲ್ಲದ ನಮ್ಮ ದೇಶದ ಆರ್ಥಿಕ ಸ್ಥಿತಿ ಬೆಳೆಸಲಿಕ್ಕೆ ಅತ್ಯಗತ್ಯವಾದ ಕೈಗಾರಿಕೆ ಕ್ಷೇತ್ರದಲ್ಲಿ ಕೇವಲ ತಮ್ಮ ಸ್ವಾರ್ಥದೃಷ್ಟಿಯಿಂದ ತೃಪ್ತಿ ಎಂದೂ ಕಾಣದವರ ಮುಷ್ಕರಗಳಿಗೆ

ಮಿತಿಯಿಲ್ಲ. ಮುಂಚೆ ಮಕ್ಕಳು ತಂದೆತಾಯಿಗಳಿಗೆ ವಿಧೇಯರಾಗಿ ಮನೆಯಲ್ಲಿ ಧಾರ್ಮಿಕಶಿಸ್ತು ಬೆಳೆಸುವುದು, ಶಾಲೆಯಲ್ಲಿ ಗುರುಗಳಿಗೆ ವಿಧೇಯರಾಗಿ ವಿದ್ಯೆ ಕಲಿಯುವುದು, ಇದ್ದದ್ದು ಹೋಗಿ, ಸೆಕ್ಯುಲರ್ ಸರ್ಕಾರದವರು ತಂದೆತಾಯಿಗಳ "ಗೊಡ್ಡುಆಚಾರ" ೪೦ ವರ್ಷಗಳಿಂದ ಖಂಡಿಸುತ್ತಬಂದುದರ ಪರಿಣಾಮವಾಗಿ, ಮಕ್ಕಳಲ್ಲಿ ವಿಧೇಯತೆಯೆಂಬ ದೇಹದ ಶಿಸ್ತೇ ನಾಶವಾಗುತ್ತಿದೆ. ಸಿನೆಮಾ, ಅಲ್ಪರ ಸಂಗ, ಹಾಳು ಓದು, ವಿಪರೀತ ಆಟಗಳ ಪರಿಣಾಮವಾಗಿ ಪರೀಕ್ಷೆಗಳಲ್ಲಿ ನಕಲು ತೆಗೆಯಲು ಬಿಡಬೇಕೆಂಬ ಹಠ ಬಹಳ ಹಬ್ಬಿದೆ. ಎಂದರೆ ಹೇಗಾದರೂ ಅನ್ಯಾಯ ಮಾಡಿ ತೇರ್ಗಡೆ ಹೊಂದಿ, ಅನಂತರ ಅಂತೆಯೇ ಸರ್ಕಾರೀಹುದ್ದೆ ಗಿಟ್ಟಿಸಿಕೊಂಡು, ಕೆಲಸಮಾಡುವ ಸಮರ್ಥತೆ ಇಲ್ಲದೆ, ದೇಶದ ಸಂಬಳನುಂಗುವ ಪಾಪದ ಭೀತಿರಹಿತವಾದ ಸ್ವಾರ್ಥೀದೃಷ್ಟಿ ಅವರದ್ದು. ಬ್ಯಾಂಕಿನಲ್ಲಿ ಹಣ ಇಟ್ಟವರ ಸಹಾಯದಿಂದ ಬಾಳುವ ಬ್ಯಾಂಕ್ ನೌಕರರು, ಬಾಡಿಗೆ ವಾಹನವನ್ನುಪಯೋಗಿಸಿ ತೆರುವವರ ಹಣದಿಂದ ಬಾಳುವ ವಾಹನದವರು, ವಿದ್ಯುತ್ತಿಗೆ ಹಣ ತೆರುವವರಿಂದ ನಡೆಯುವ ಆ ಇಲಾಖೆಯವರು, ಮುಂತಾದವರು ಮುಂಷ್ಕರ ಹೂಡುವಾಗ ತಮಗೆ ಏನೂ ಅನ್ಯಾಯ ಮಾಡದ ಈ ಪೋಷಕರಿಗೆ ಕೊಡುವ ಪೀಡೆ, ಕೇವಲ ಸ್ವಾರ್ಥದೃಷ್ಟಿಯ ಕೃತಘ್ನತರದ್ದು. ಅದು ಬಹಳ ಬೆಳೆದಿದೆ! ಕೃತಘ್ನತೆ ಬಹಳ ಅನ್ಯಾಯ ಎನ್ನುತ್ತದೆ ಶಾಸ್ತ್ರ. ಎಲ್ಲೆಲ್ಲ ಚಿಕ್ಕದೊಡ್ಡ, ಭಯಂಕರವಟ್ಟದ ಅನ್ಯಾಯ, ಇತರರ ಪೀಡೆ ನಡೆಯುತ್ತದೋ ಅದು ತಾನು ಕೇವಲ ದೇಹ ಎಂಬ ಭಾವನೆಯವರಿಂದ ನಡೆಯುವುದು ಕ್ರಮ. ಎಲ್ಲಿ ದಾನಧರ್ಮ, ಉದಾರತೆ, ಕ್ಷಮೆ, ಅಹಿಂಸೆ, ಪ್ರೀತಿ, ಪತಿವ್ರತಾ ಧರ್ಮ, ಕೃತಜ್ಞತೆ ಪರೋಪಕಾರ, ಅಭ್ಯಸಿಸಲ್ಪಡುತ್ತದೊ ಅದು ಬಹಳವಟ್ಟಿಗೆ ದೇವರನ್ನುನಂಬಿ ಅವನನ್ನುಮೆಚ್ಚಿಸಲಿಕ್ಕಾಗಿ ಧರ್ಮ ಅಭ್ಯಸಿಸುವುದರಿಂದ ನಡೆಯುತ್ತದೆ. ಕೆಲವು ನಾಸ್ತಿಕರೂ ಪರೋಪಕಾರ ಮಾಡುವುದು ಉಂಟು. ಆದರೆ ಮತ್ಯಾವುದೋರೀತಿಯಲ್ಲಿ ಭಯಂಕರಅನ್ಯಾಯ ಮಾಡಿಯೂ ನ್ಯಾಯವೆಂದೇ ತಿಳಿಯುವುದುಂಟು! ವಿಜ್ಞಾನದಸಾಹಸವೆಲ್ಲ ಕೇವಲ ದೇಹದ ಸುಖ ಹೆಚ್ಚಿಸಲಿಕ್ಕಾಗಿ ನಡೆಯುತ್ತಿದೆ. ಎಂದರೆ ಅದು ನಮ್ಮದೇಹದ ಮೋಹ ಮತ್ತೂಮತ್ತೂ ಬೆಳೆಸುತ್ತಬರುತ್ತದೆ; ಆದ್ದರಿಂದ ಹೊಸಹೊಸ ಅನ್ಯಾಯಕ್ಕೆ ಪ್ರೇರಣೆಕೊಡುತ್ತದೆ. ಆತ್ಮಹಿತದ ಗುರಿಯಿರುವ ಧರ್ಮದ ಅಭ್ಯಾಸಗಳು ಮಾತ್ರ ದೇಹದ ಹತೋಟಿ ಕಲಿಸುತ್ತವೆ. ಪರೋಪಕಾರ ಪ್ರೇರಿಸುತ್ತವೆ. ಪಾಪಕಾರ್ಯ ಮಾಡಿಸುವ ವಿಜ್ಞಾನವು ಮರಣದ ಆಚೆ ಸಹಾಯಕ್ಕೆಬಾರದು:

ಂತೆಯೇ ಸೆಕ್ಯುಲರ್ ಸರ್ಕಾರವೂಬಾರದು. ದೇವರ ಅತಿಭಯಂಕರ ತರದ
ಿತಿ ದೀರ್ಘಕಾಲದ ಶಿಕ್ಷೆಮಾತ್ರ ನಮ್ಮ ಪಾಲಿಗೆ ಉಳಿಯುತ್ತದೆ!

ಮಾತ್ರವಲ್ಲ; ವಿಜ್ಞಾನ, ಸೆಕ್ಯುಲರ್ ಸರ್ಕಾರಗಳು, ನಮಗೆಂದೂ ತೃಪ್ತಿ ರಲಾರವು. ಏಕೆಂದರೆ ದೇಹದ ಮೋಹದ ಬಂಧನದಲ್ಲಿ ಈಗ ಹುದುಗಿದ್ದ ೀವಾತ್ಮನು, ತನ್ನ ಪವಿತ್ರಆತ್ಮಭಾಗ ಮರೆತು, ತಾನು ಕೇವಲ ದೇಹವೆಂದೇ ಾವಿಸುತ್ತಿದ್ದಾನೆ. ಆತ್ಮಾನಂದದ ಬಯಕೆಯನ್ನು ತಪ್ಪಾಗಿ ದೇಹದಭೋಗದ ಯಕೆಯೆಂದು ಕಾಣುತ್ತಾನೆ. ಆದರೆ ಅದು ಮನೆಯಲ್ಲಿಟ್ಟು ಮರೆತ ವಜ್ರಕ್ಕೆ ೊರಅಂಗಣವನ್ನೆಲ್ಲ ಹುಡುಕುತ್ತಿದ್ದಂತೆ. ಅದರಿಂದ ಎಂದೂ ಸಮಾಧಾನ ಾರದು. ಜೀವನದಲ್ಲಿ ಆಶಿಸಿದ ಇದು ಸಿಕ್ಕಿತು ; ಇದಲ್ಲ ಮತ್ತೊಂದುಬೇಕು; ದೂಸಿಕ್ಕಿತು; ಮಗುದೊಂದು ಬೇಕು; ಎಂದು ಮಾತ್ರ ಆಗುತ್ತಹೋದೀತು. ಜ್ಞಾನ, ಸೆಕ್ಯುಲರ್‌ಸರ್ಕಾರ ಎರಡೂ ಜನರನ್ನುತೃಪ್ತಿಗೊಳಿಸಲಾರವು. ಆದರೆ ಷ್ಟರವರೆಗೆ ಅವರನ್ನುತಪ್ಪಾಗಿನಡೆಸಿ ಭ್ರಮಿಸಿಸಿ, ಇತರರಿಗೆಅನ್ಯಾಯಮಾಡಿಸಿ ಾಪಕೃತ್ಯಗಳಿಗೆ ಅಪಾರಶಿಕ್ಷೆ ತಂದಾವು. ನಿಜತ್ವಅರಿತ ಮಹಾತ್ಮರು, ಮಹಾ ುರುಷರು, ಪರಮಹಂಸರುಮಾತ್ರ ದೇಹದ ಭೋಗಗಳೆಂಬ ಬಯಕೆ ತ್ಯಜಿಸಿ ತ್ಮಾನಂದದಲ್ಲಿ ನಿರಂತರತೃಪ್ತಿ ಕಾಣುತ್ತಾರೆ. ಅವರಸಾಧನೆ ಸಾಮಾನ್ಯರಿಗೆ ಾಧ್ಯವಲ್ಲವಾದರೂ ಆ ದಾರಿ ಹಿಡಿದಷ್ಟೂ ತೃಪ್ತಿ ಹೆಚ್ಚುತ್ತದೆ ; ಅನ್ಯಾಯ ಾಪ, ಕಡಿಮೆಯಾಗುತ್ತದೆ; ಮುಂದುವರಿಯುತ್ತೇವೆ. ಜನ್ಮ ವ್ಯರ್ಥವಾಗದು. ದ್ದರಿಂದ ವಿಜ್ಞಾನವನ್ನು ಕೇವಲವಾಗಿ ಅತ್ಯಗತ್ಯ ಅವಶ್ಯಕತೆಗಳಿಗೆ ಮಾತ್ರ ುಪಯೋಗಿಸುವ (ಭೋಗಕ್ಕಲ್ಲ) ತೀರಾ ಅಂಧಕಾರದಲ್ಲಿರುವ ಸೆಕ್ಯುಲರ್ ರ್ಕಾರದ ಸ್ಥಾನದಲ್ಲಿ ಪುನಃ ಧಾರ್ಮಿಕಸರ್ಕಾರ ಸ್ಥಾಪಿಸಬೇಕು.

ಇದಕ್ಕೆ ನಮಗೆ ಸಾಧ್ಯವಿರುವ ಕ್ರಮವೆಂದರೆ ಸರ್ಕಾರ ಸರ್ವಧರ್ಮ ಭಾಗವೊಂದನ್ನು ಸೇರಿಸಿಕೊಳ್ಳಬೇಕು. ಆದರಲ್ಲಿ ಎಲ್ಲ ಧರ್ಮಗಳವರ ್ರತಿನಿಧಿಗಳು (ಅವರವರ ಸಂಖ್ಯೆಯ ದಾಮಾಶೆಯಂತೆ) ಇದ್ದು ಸರ್ಕಾರ ೂಡುವ ನೂರಾರುಕೋಟಿ ರೂಪಾಯಿಗಳನ್ನು ತಮ್ಮ ದಾಮಾಶೆಯಲ್ಲಿ ಹಂಚಿ ೊಂಡು ತಮ್ಮ ಧರ್ಮದ ವಿದ್ಯಾರ್ಥಿಗಳಿಗೆ ಚೆನ್ನಾಗಿ ಧರ್ಮ ಕಲಿಸುವ ಿಡ್ಯಾಯುದವ್ಯವಸ್ಥೆ ಮಾಡಬೇಕು. ಕೆಲವುವರ್ಷ ಹಾಗೆ ಮಾಡುತ್ತ ಬಂದರೆ ುಂದಿನ ಪ್ರಜಾಜನಾಂಗದಲ್ಲಿ ದೇವರಭೀತಿ, ಪಾಪದಭಯ ಪುನಃ ಉಂಟಾದ ಸ್ವಾರ್ಥಿ ರಾಜಕೀಯ ಮುಖಂಡರು, ಲಂಚಕ್ಕೆ ಹೆದರುವ ಮತ್ತು ಸಮರ್ಥ ಾರ್ಯದಕ್ಷತೆಯಿರುವ ಸರ್ಕಾರೀ ನೌಕರರು, ನಿರ್ವಂಚಕ ವ್ಯಾಪಾರಿಗಳು,

ದಕ್ಷತೆಯ ಕೆಲಸದಿಂದ ಸಂಬಳದ ಋಣ ಉಳಿಸಿಕೊಳ್ಳದ ಕಾರ್ಮಿಕರು, ಉಂಟಾಗಿ ದೇಶದ ನೈತಿಕ ಪುನರುದ್ಧಾರ ನಡೆದೀತು. (ನನ್ನ "ದೇಶದ ನೈತಿಕ ಉದ್ಧಾರಕ್ಕೆ ಏಕಮಾತ್ರದಾರಿ" ನೋಡಬಹುದು) ಅಷ್ಟರವರೆಗೆ ಧರ್ಮ ನಂಬು ವವರು ವಿಜ್ಞಾನದ ಮತ್ತು ಸೆಕ್ಯುಲರ್‌ಸರ್ಕಾರದ ಅಪಾಯಅರಿತು ವೈಯಕ್ತಿಕ ವಾಗಿ ಪಾಪಬಾರದ ರೀತಿಯಲ್ಲಿ ಆದಷ್ಟು ಬಾಳಬೇಕು.

ನಮ್ಮದು ಈಗ ಪ್ರಜಾರಾಜ್ಯ. ಎಂದರೆ ಪ್ರಜೆ ಅದು ಮಾಡಿದ್ದನ್ನೆಲ್ಲ ಒಪ್ಪಿಕೊಳ್ಳುವುದಲ್ಲ. ನಾಸ್ತಿಕ ಪ್ರಜೆಗಳು ನಾಸ್ತಿಕ ಸರ್ಕಾರ ಉಂಟುಮಾಡಿ ನಮ್ಮ ಧರ್ಮ ಕೆಡಿಸುತ್ತಿದ್ದರೆ, ಧರ್ಮ ಬೇಕಾದ ಪ್ರಜೆಗಳು ಒಟ್ಟುಕೂಡಿ ನಮ್ಮ ಧರ್ಮಬಾಳುವತರದ ಸರ್ಕಾರ ಕಟ್ಟಲು ಸರ್ವಪ್ರಯತ್ನ ಮಾಡಬೇಕು. ಈ ಭಾಗದಲ್ಲಿ ನಮ್ಮ ಮುಖ್ಯ ಧಾರ್ಮಿಕ ಸಂಸ್ಥೆಗಳ ತಟಸ್ಥಧೋರಣೆ ತೀರಾ ಆಶ್ಚರ್ಯ. ಸ್ವಾಮಿ ವಿದ್ಯಾರಣ್ಯರು, ಸಮರ್ಥ ರಾಮದಾಸರು ನಮಗೆ ದಾರಿ ತೋರಿಸಿದ್ದಾರೆ. ಧರ್ಮಕೆಡಿಸುವವರಿಗೆ ವೋಟು ಕೊಡುವುದೆಂದರೆ ಧರ್ಮಕ್ಕೆ ನಾವೇ ಚೂರಿ ಹಾಕಿದಂತೆ. ನಾವು ನಮ್ಮ ಧರ್ಮದ ರಕ್ಷಣೆಗೆ ಶ್ರಮಿಸಿದರೆ ಮಾತ್ರ ಅದು ನಮ್ಮನ್ನು ರಕ್ಷಿಸೀತು. **'ಧರ್ಮೋ ರಕ್ಷತಿ ರಕ್ಷಿತಃ'.**

ಮಕ್ಕಳಿಗೆ ಧರ್ಮಕಲಿಸಿ ಶಿಸ್ತಲ್ಲಿಟ್ಟುಕೊಳ್ಳುವ ಹೊಣೆ ತಂದೆಗಿದೆ (ಮನು ೧೧. ೩೫). ಅವಕ್ಕೆ ಧರ್ಮ ಕಲಿಸದೆ ಅದು ಬಾರದು. ಈ ಕಾಲದಲ್ಲಂತೂ, ಅಲ್ಪರ ಸಂಗ ದೋಷ, ಹಾಳು ಓದು, ಸಿನೆಮಾ, ಮುಂತಾದವುಗಳಿಂದ ಅತಿ ಧಾರಾಳವಾಗಿ ಅಧರ್ಮದ ವಿಚಾರ ಅವರನ್ನು ಸೇರುತ್ತಿರುವಾಗ, ಧರ್ಮ ಚೆನ್ನಾಗಿಕಲಿಸಿ ಅದರಲ್ಲಿ ಶ್ರದ್ಧೆಉಂಟುಮಾಡುವ ಅವಶ್ಯಕತೆಬಹಳ. ಸರ್ಕಾರವೇ ಈ ಕೆಲಸ ಆರಂಭಿಸುವವರೆಗೂ, ಅಲ್ಲಲ್ಲಿ ಮಠಾರದ ಸ್ವಧರ್ಮದ ಮಕ್ಕಳಿಗೆ ಧರ್ಮಕಲಿಸುವ ವ್ಯವಸ್ಥೆಮಾಡಬೇಕು. ನಿವೃತ್ತಉಪಾಧ್ಯಾಯರು, ವಿದ್ಯಾವಂತ ಗೃಹಿಣಿಯರು ಈ ಕೆಲಸ ಕೈಕೊಳ್ಳಬೇಕು. ಪಠ್ಯಪುಸ್ತಕಗಳನ್ನಿಟ್ಟು ಪಾಠಕಲಿಸಿ ಪರೀಕ್ಷೆನಡೆಸಿ, ಕಲಿತವರಿಗೆಲ್ಲ ಇನಾಮು ಹಂಚಿ ಪ್ರೋತ್ಸಾಹಿಸಬೇಕು.

ಈಗಿನ ಆಂಗ್ಲಕ್ರಮದ ವಿದ್ಯೆಕಲಿತವರ ವಾದದಂತೆ ಶಾಸ್ತ್ರವು ಬಹಳ ಹಳೆಯಕಾಲದ್ದು ; ಕಾರು, ಬಸ್ಸು, ಯಂತ್ರಗಳು, ಸಿನೆಮಾ, ಕಾದಂಬರಿ, ಹೋಟೆಲು, ಕಾಫಿ, ಪ್ರಯಾಣದ ಆವಶ್ಯಕತೆ, ಎಲ್ಲೆಲ್ಲೋ ಜೀವನಕ್ಕೆ ಹುದ್ದೆ ಮತ್ತು ವೈಜ್ಞಾನಿಕಕಾಲದ ಹೊಸಉದ್ಯೋಗಗಳಲ್ಲಿ ಬಾಳಬೇಕಾದಕಾಲದಲ್ಲಿ ಮುಂಚಿನಂತೆ ಜೀವಿಸುವುದು ಕೇವಲ ಅಸಾಧ್ಯ; ಶಾಸ್ತ್ರ ಅನ್ವೈಸದು, ದೇವರೇ ಆದನ್ನುಕಾಣನೇ ? ನಮ್ಮ ಅಂತಃಕರಣದಂತೆ (ಕಾರ್ಯರೂಪದಲ್ಲಿ ಸರ್ಕಾರದ

ಏನೂನುಗಳನ್ನು ತಪ್ಪಿಸಿಕೊಂಡು) ಮರ್ಯಾದೆಯಲ್ಲಿ ಬಾಳಿದರಾಯಿತು ; ಥವಾ ಶಾಸ್ತ್ರವನ್ನು ಕಾಲಕ್ಕೆತಕ್ಕಂತೆ ಬದಲಾಯಿಸಲಿ ಎಂಬುದುಅವರ ವಾದ ಾಗಿದೆ. ಬದಲಾದ ವಾತಾವರಣದಲ್ಲಿ ಬದಲಾದ ಜೀವನಕ್ರಮ ಕೆಲಮಟ್ಟಿಗೆ ೀಕಾಗುತ್ತದೆ ಸರಿ. ನಮ್ಮಶಾಸ್ತ್ರವೇ ಹೇಳುವ ಮನುಸ್ಮೃತಿ, ಯಾಜ್ಞವಲ್ಕ್ಯ ್ಮೃತಿ, ಶಂಖಲಿಖಿತಸ್ಮೃತಿ, ಪರಾಶರಸ್ಮೃತಿಗಳೂ ಕೃತ, ತ್ರೇತ, ದ್ವಾಪರ, ಲಿಯುಗಗಳಿಗಾಗಿ ಹೇಳಲ್ಪಟ್ಟವು ಎಂಬುದೂ ಕಾಲಕ್ಕೆತಕ್ಕ ಶಾಸ್ತ್ರಬೇಕೆಂಬು ದನ್ನು ಶಾಸ್ತ್ರವೇ ಸಮರ್ಥಿಸುತ್ತದೆ. ಇದು ನಿಜ. ಆದರೆ ಈ ಪ್ರತಿ ಆಧಾರ ಗ್ರಂಥಗಳೂ ಇಡೀ ಯುಗಕ್ಕೆಅನ್ವಯಿಸುವವು; ಮತ್ತು ಮನುಸ್ಮೃತಿಯ ದೊಡ್ಡ ಾಗ ಅನಂತರದವುಗಳಿಂದ ಬದಲಾಯಿಸಲ್ಪಡದಿದ್ದು, ಈಗಳಿಗೂ ಆಧಾರವೇ ಗಿ ನಿಂತಿದೆ ! ಎಂದರೆ ನಾಲ್ಕು ಯುಗಗಳಿಗೂ ಅನ್ವಯಿಸುತ್ತಿದೆ.

ಎಂದರೆ ಶಾಸ್ತ್ರದ ಬಹುಮಟ್ಟಿನಭಾಗ ತಿದ್ದುತ್ತ ಹೋಗಬೇಕಾದುದಲ್ಲ. ಏಕೆಂದರೆ ದೇವರು ಶಾಶ್ವತ ; ಆತ್ಮವೂಶಾಶ್ವತ. ಆತ್ಮ ದೇವರನ್ನು ಹೊಂದ ಬೇಕಾದ ಮುಖ್ಯಕ್ರಮವೂ ಶಾಶ್ವತತರದ್ದು. ಅದು ದಿವ್ಯಜ್ಞಾನದಿಂದ ಮಾತ್ರ ತಿಳಿಯಲ್ಪಟ್ಟದ್ದು. ಆಚರಣೆಯಭಾಗ ಬದಲಾಗಬೇಕಾದಲ್ಲಿ ಮಹಾತ್ಮರಿಂದ ಮಾತ್ರ ಬದಲಾಯಿಸಲ್ಪಟ್ಟಿದೆ ; ಹೊರತು ಅಲ್ಪಮಾನವರೇ ಆಗಾಗತಿದ್ದುತ್ತಿ ರುವತರದ್ದೇ ಅಲ್ಲ. ಮತ್ತು ಶಾಸ್ತ್ರ ತಿದ್ದುತ್ತಿರಬೇಕು ಎನ್ನುವವರ ಕೇಳಿಕೆ ಯಾದರೂ ಏನು ? ಹಳ್ಳಿಯಲ್ಲಿದ್ದ ತಂದೆ ಶಾಸ್ತ್ರದ ಅರ್ಧಭಾಗ ಕಲಿತು ಆಚರಿಸುತ್ತಬಂದ. ಪೇಟೆಸೇರಿದ ಮಗ ತಂದೆಯ ಕಾಲುಪಾಲು ಮಾತ್ರ ಆಚರಿಸುತ್ತಿದ್ದಾನೆ. ಬೊಂಬಾಯಿ ಪಟ್ಟಣದಲ್ಲಿರುವ ಮೊಮ್ಮಗ ಅವನ ತಂದೆಯ ಕಾಲುಪಾಲೂ ಆಚರಿಸುವುದಿಲ್ಲ. ಎಂದರೆ ಅವನ ಪಾಲಿಗಿರುವಶಾಸ್ತ್ರ

$\frac{೧}{೨} \times \frac{೧}{೪} \times \frac{೧}{೫} = \frac{೧}{೪೦}$ ಅಂಶಮಾತ್ರ. ಈ ಕ್ರಮದಲ್ಲಿ ಶಾಸ್ತ್ರ ಏನುಉಳಿದೀತು?

ಆದ್ದರಿಂದ ಶಾಸ್ತ್ರ ಹಾಗೆಯೇ ಉಳಿಯಲಿ. ಅದರ ಆಚರಣೆಗಾಗಿ ಅದನ್ನು ತನ್ನ ಗುರಿಯಾಗಿ, ತಾನು ಎಷ್ಟು ತಪ್ಪಿದ್ದೇನೆ ಎಂದು ಅರಿತು ಮರುಗಿ ಶತಪ್ರಯತ್ನ ಮಾಡುತ್ತಿರಲಿಕ್ಕಾಗಿ, ಪೂರ್ಣ ಕಲಿಯಲಿ ; ಉತ್ತೇಜನ ತರಲಿಕ್ಕೆ ಆಗಾಗ ಓದಲಿ ; ತನ್ನಲ್ಲಿನ ಕುಂದು ಕೊರತೆಕಂಡು ಸಾಧ್ಯ ವಾದುದನ್ನು ಸೇರಿಸುತ್ತ ಬರಲಿ ; ವ್ಯಸನಪಟ್ಟು ದೇವರಿಗೆ ಶರಣುಹೋಗು ತ್ತಿರಲಿ. ಇರುವ ಗುರಿಯನ್ನೇ ನಾಶಮಾಡಿಕೊಂಡರೆ ಅಧೋಗತಿ ಮಾತ್ರ ಗಳಿಸಬಹುದು.

ಅರ್ಜುನ ನರ ; ಇಂದ್ರನ ಪುತ್ರ ; ಶ್ರೀಕೃಷ್ಣನ ಮಿತ್ರ ; ಸುಸಂಸ್ಕೃತ. ಆದರೂ ಕ್ಷತ್ರಿಯಧರ್ಮದಿಂದ ತಪ್ಪಿಬೀಳುವನಿರ್ಧಾರಮಾಡಿದಾಗ ಶ್ರೀಕೃಷ್ಣನು ಭಗವದ್ಗೀತೆಯ ಬೋಧನೆಮಾಡಿ ಅವನ ಅಂತಃಕರಣದ ತಪ್ಪು ನಿರ್ಧಾರದ ಹುಳುಕು ತೋರಿಸಿದ ಮತ್ತು ಕಾಲವು ಇಡೀ ದ್ವಾಪರಯುಗದಲ್ಲಿ ಕೆಡುತ್ತಲೇ ಬಂದಿತ್ತಾದರೂ (ಮತ್ತು ಆರಂಭವಾಗುತ್ತಿದ್ದ ಮುಂದಿನ ಕಲಿಯುಗದ ಜನರಿಗಾಗಿಯೂ) ಹೇಳಿದ್ದೇನೆನ್ನೆಂದರೆ (೧೬, ೨೪) :

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ ॥

ಎಂದರೆ ಯಾವುದುಉತ್ತಮ. ಮಾಡಬೇಕಾದುದು, ಯಾವುದಂ ಅಧರ್ಮ, ಮಾಡಕೂಡದು ಎಂಬುದರ ನಿರ್ಧಾರಕ್ಕೆ ಶಾಸ್ತ್ರವುಮಾತ್ರ ಆಧಾರ ಎಂದಿದ್ದ. ಶ್ರೀಹರಿಯು ಗರುಡನಿಗೆ ಗರುಡಪುರಾಣದಲ್ಲಿ ಹೇಳುತ್ತಾನೆ (ಅ ೧೬) :

ಅತ್ರಜನ್ಮ ಸಹಸ್ರಾಣಾಂ ಸಹಸ್ರೈರಪಿ ಕೋಟಿಭಿಃ ।
ಕದಾಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್ ॥ ॥ ೧೪ ॥
ಸೋಪಾನಭೂತಂ ಮೋಕ್ಷಸ್ಯ ಮಾನುಷ್ಯಂ ಪ್ರಾಪ್ಯ ದುರ್ಲಭಮ್ ।
ಯಸ್ತಾರಯತಿ ನಾತ್ಮಾನಂ ತಸ್ಮಾತ್ಪಾಪತರೋऽತ್ರ ಕಃ ॥ ॥ ೧೫ ॥

ಎಂದರೆ ಸಾವಿರಾರು ಕೋಟ್ಯಂತರ ಬಾರಿ, ಸಾವಿರಾರು ಜೀವವರ್ಗಗಳಲ್ಲಿ ಜನ್ಮ ತಾಳಿ ಯಾವಾಗಲಾದರೂ ಪುಣ್ಯಸಂಚಯದಿಂದ ಮಾನವಜನ್ಮವು ಲಭಿಸುತ್ತದೆ. ಮೋಕ್ಷದ ಮೆಟ್ಟಲಾದ ದುರ್ಲಭವಾದ ಮನುಷ್ಯ ಜನ್ಮವನ್ನು ಪಡೆದೂ ಯಾರು ತನ್ನನ್ನು ಉದ್ಧರಿಸಿಕೊಳ್ಳುವುದಿಲ್ಲವೋ ಅವನಿಗಿಂತ ಹೆಚ್ಚು ಪಾಪಿಗಳು ಯಾರಿದ್ದಾರೆ ? ಎಂದಿದ್ದಾನೆ.

ಆದರೂ ಧರ್ಮದ ಬಾಹ್ಯಾಚರಣೆಗಳು ಕಷ್ಟವಾಗುತ್ತ ಬರುತ್ತಿವೆ, ಏಕೆಂದರೆ ವಿಜ್ಞಾನಕಾಲವು ತೀರಾಹೊಸತರದ್ದು, ಎಂಬುದೂ ನಿಜ, ಶಾಸ್ತ್ರವೇ ಒಂದು ಪರಿಹಾರ ಹೇಳಿದೆ. ಸರ್ಕಾರವು ಅದರ ಕಾನೂನುಗಳ ಬದಲಾವಣೆ ಮಾಡಬೇಕಾದಾಗ ಆ ಕಾನೂನಿನತಿರುಳುಬಲ್ಲ ತಜ್ಞರ ಕಮಿಟಿಮಾಡಿ ಅವರ ಶಿಫಾರಸ್ಸಿನಂತೆ ಮಾತ್ರ ತಿದ್ದುವಂತೆಯೇ, ಶಾಸ್ತ್ರದ ತಜ್ಞರ (ಪುರೋಹಿತರ) ಪರಿಷತ್ತುಮಾಡಿ ಕೆಲವು ರಿಯಾಯಿತಿಕ್ರಮಗಳನ್ನು ಅವರು ನಿರ್ದೇಶಿಸಿದವನ್ನು ಅನುಸರಿಸಲು ಶಾಸ್ತ್ರಹೇಳಿದೆ. ಆದರಿಂದ ನಮಗೆ ಸುಲಭಮಾಡಿದ ಅಥವಾ ಕೆಲವು ಭಾಗ ಲೋಪಮಾಡಿದ ಪಾಪಬಾರದು. ಆದರೆ ಚುಟುಕುಮಾಡಿದ್ದರಿಂದ ಫಲ ಕಡಿಮೆ. ಅಂತರಂಗದ ಸಾಧನೆಗೆ ಈಗಲೂ ತೊಡಕಿಲ್ಲದ್ದರಿಂದ ಅದನ್ನು ಹೆಚ್ಚಿಸಲೇಬೇಕು ಎಂದು **ಶೃಂಗೇರಿ ಜಗದ್ಗುರು ಶ್ರೀ ಶ್ರೀ**

ಂದ್ರಶೇಖರ ಭಾರತೀ ಸ್ವಾಮಿಯವರು ಅಪ್ಪಣೆ ಕೊಡಿಸಿದ್ದರು. ಅಂತೂ ಸ್ತ್ರಬಿಡುವಂತಿಲ್ಲ, ಕಲಿಯಲೇಬೇಕು. ಒಮ್ಮೆಯಲ್ಲ ಇಡೀ ಜೀವಮಾನವೆಲ್ಲಾ ಸ್ತ್ರಕಲಿಯುತ್ತಲೇ ಇರಬೇಕು. (ಅದರಿಂದ ಪ್ರೇರಣೆ, ಹೆಚ್ಚುಹೆಚ್ಚು ಆಳ ವಜ್ಞಾನ, ಹೊಂದುತ್ತಲೇ ಇರಬೇಕು. ಅದು ಬಟ್ಟೆಗೆ ಆಗಾಗ ಸಾಬೂನು ಕುತ್ತಿರುವಂತೆ!) ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್॥ . ಉ. ೧,೨,೧) ಆದರೆ ಇಲ್ಲಿ ಒಂದುಕಷ್ಟವಿದೆ. ನಮ್ಮ ಶಾಸ್ತ್ರವಿರುವುದು ಸ್ಕೃತದಲ್ಲಿ. ಕ್ರಿಶ್ಚನರು ಅವರ ಬೈಬಲ್ಲನ್ನು ಮತಾಂತರ ಹೊಂದಿದವರ ಯೋಜನಕ್ಕೆಂದು ಹಲವುಸಾವಿರ ಭಾಷೆಗಳಲ್ಲಿ ತರ್ಜುಮೆ ಮಾಡಿದ್ದಾರೆ. ದರೆ ನಮ್ಮ ಧಾರ್ಮಿಕ ಸಂಸ್ಥೆಗಳು ಯಾವುದನ್ನೂ ಭಾಷಾಂತರಿಸಿ ಅಗ್ಗಕ್ಕೆ ಸುವಂತೆ ಮಾಡಿದ್ದಿಲ್ಲ! ಈಗಲೀಗ ಮನುಸ್ಮೃತಿ, ಧರ್ಮಸಿಂಧು, ಗರುಡ ರಾಣ ಸಾರೋದ್ಧಾರ, ಕೆಲವು ಇತರಪುರಾಣಗಳು, ಮಹಾಭಾರತ, ಕನ್ನಡ ಲ್ಲಿ ಲಭಿಸುವುದು ಸಂತಸದವಿಚಾರ. ಅವುಗಳ ಉಪಯೋಗ ಜನರು ಅಗತ್ಯ ಗಿ ಪಡೆಯಬೇಕು. ನಮ್ಮಶಾಸ್ತ್ರಗಳು ನೂರಕ್ಕೆ ನೂರಂಶ ಬ್ರಾಹ್ಮಣರಿ ಗಿ ಬರೆಯಲ್ಪಟ್ಟವು. ಇತರರಿಗೆ ಅದರಲ್ಲಿ ಕೆಲವು ಅಂಶ ಮಾತ್ರ ಅನ್ವೈಸು ವೆ. ಅವರಿಗೆ ಮಾತ್ರ ಬೇಕಾದ ಪುಸ್ತಕಗಳೂ ಇಲ್ಲ! ಓದುಗರು ಹೆಚ್ಚು ರುವಾಗ, ತಮ್ಮದೇ ಜಾತಿ ಗುಂಪುಗಳು ಹೆಚ್ಚುತ್ತಿರುವಾಗ, ತಕ್ಕಪರಿಹಾರ ಟಾದದ್ದಿಲ್ಲ! ಅಂತೂ ಶಾಸ್ತ್ರ ಓದುತ್ತಿರಬೇಕು. ಆದಷ್ಟು ಸಾಧನಗಳನ್ನು ರಿಸುತ್ತ ಬರಬೇಕು. ನಿವೃತ್ತರಂತೂ ತಪ್ಪದೆ ಹೆಚ್ಚು ಸಾಧನೆಗೆ ಧರ್ಮ ಚಾರಕ್ಕೆ ಬೆಂಬಲಕೊಡಬೇಕು. ದೇಶದ ಧಾರ್ಮಿಕ ಸಮಸ್ಯೆಯ ಪರಿಹಾರದ ಓದಿ ತಿಳಕೊಂಡು ತಮ್ಮ ಬೆಂಬಲ ಧಾರಾಳವಾಗಿ ಕೊಡಬೇಕು. **ಇವೆಲ್ಲ ಪದಪರಿಹಾರಕ್ಕೆ ನರಕಯಾತನೆ ಕಡಿಮೆಯಾಗಲಿಕ್ಕೆ. ಉತ್ತಮ ರ್ಜನ್ಮಹೊಂದಲಿಕ್ಕೆ, ಭದ್ರವಾದದಾರಿಗಳಾಗದಿರವು; ಬಿಡಬಾರದು. ವಂತ ನಮಗೆಲ್ಲ ಸದ್ಬುದ್ಧಿಕೊಡಲಿ!**

ಒಂದು ಮಾತು

ದಿನಾಂಕ ೧-೩-೧೯೮೮ ರಂದು ಕಾಲಗರ್ಭದಲ್ಲಿ ಐಕ್ಯ ಹೊಂದಿದ ಅಪರೂಪದ ಅವಧೂತ ಪೂಜ್ಯ ಶ್ರೀ ಕೋಟ ವಾಸುದೇವ ಕಾರಂತರು ತಮ್ಮ ೮೮ವರ್ಷಗಳ ಸಾರ್ಥಕ ಜೀವನದಲ್ಲಿ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಸನಾತನಧರ್ಮದ ಮಹತ್ವವನ್ನು ಇಂದಿನ ಜನತೆಗೆ ತಿಳಿಯಪಡಿಸುವ ಕಠಿಣವಾದಕಾರ್ಯವನ್ನು ಅದ್ವಿತೀಯರಾಗಿ ನೆರವೇರಿಸಿದ್ದಾರೆ. ಯಾವುದೇ ಮಠಾಧಿಪತಿಗಳಿಗೂ ಕಡಿಮೆ ಇಲ್ಲದಂಥ ಧರ್ಮಾಭಿಮಾನ ಹೊಂದಿ, ಧರ್ಮ ಪ್ರಚಾರ ಮಾಡಿದ ಕಾರಂತರಂಥವರು ಇನ್ನೊಬ್ಬರಿಲ್ಲವೆಂಬ ಅಂಶವನ್ನು ಇತ್ತೀಚೆಗೆ ಬ್ರಹ್ಮೀಭೂತರಾದ ಶ್ರೀ ಶೃಂಗೇರಿ ಶಾರದಾಪೀಠಾಧೀಶ ಶ್ರೀಮದ್ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರೇ ತುಂಬಿದಸಭೆಯಲ್ಲಿ ಮುಕ್ತಮನಸ್ಸಿನಿಂದ ಸೂಚಿಸಿದ್ದಾರೆ.

ತಮ್ಮ ಕಾಲಾನಂತರವೂ ಈ ಧಾರ್ಮಿಕ ಸಾಹಿತ್ಯದ ಸಮಾರಾಧನೆಯು ಸಾಕಷ್ಟು ಸಮಯ ಮುಂದುವರೆಯಲೆಂಬ ಆಕಾಂಕ್ಷೆಯಿಂದಿದ್ದ ದಿವಂಗತ ಕಾರಂತರು ರೂಪಿಸಿದ "ಕೋಟ ವಾಸುದೇವಕಾರಂತ ಸಾಹಿತ್ಯಮಾಲೆ"ಗೆ ಅವರ ಹಿರಿಯ ಪುತ್ರ ಶ್ರೀ ಕೋಟ ವಾಸುದೇವ ಕೇಶವ ಕಾರಂತರೂ ಆರ್ಥಿಕ ನೆರವು ನೀಡಿ, ದಿವಂಗತ ಕಾರಂತರಿಗೆ ಪ್ರಿಯವಾಗಿದ್ದ "ಪುನರ್ಜನ್ಮ" ಎಂಬೀ ಸಾರ್ಥಕ ಸಾಹಿತ್ಯಕೃತಿಯು ಅನಂತ ಪ್ರಕಾಶನದ ಮೂಲಕ ಬೆಳಕು ಕಾಣಲು ಸಹಕರಿಸಿದ್ದಾರೆ. ಇದು ದಿವಂಗತ ಕಾರಂತರ ಆತ್ಮಕ್ಕೆ ಅತ್ಯಂತ ಆನಂದದ ಸಂಗತಿ.

ಸನಾತನ ಧರ್ಮಾಭಿಮಾನಿಗಳು ಈ ಕೃತಿಯ ವಾಚನದಿಂದ ತಮ್ಮ ಜೀವನವನ್ನು ಸಾರ್ಥಕ ಪಥದಲ್ಲಿ ನಡೆಸಲು ಸಹಾಯಕವಾಗಲಿ ಎಂದು ಸರ್ವಶಕ್ತನಲ್ಲಿ ನನ್ನ ಪ್ರಾರ್ಥನೆ.

ಇತಿ

ಸುಧಾರ್ಥಿ, ಹಾಸನ
ಗೌರವ ಕಾರ್ಯದರ್ಶಿ : ಕೋ.ವಾ.ಕಾರಂತ ಸಾಹಿತ್ಯ ಮಾಲೆ
೧೫, ಬೃಂದಾವನ (ಹಿಮ್ಮನೆ), ರಂಗರಾವ್ ರಸ್ತೆ
ಶಂಕರಪುರ, ಬೆಂಗಳೂರು-೪

ಓದುಗರೊಂದಿಗೆ

ಅನೇಕರೀತಿಯ ನವನವೀನ ಸುಖಭೋಗಗಳನ್ನನುಭವಿಸುವುದಷ್ಟೇ ಕ್ತಿಜೀವನದ ಸಾರ್ಥಕತೆಯಲ್ಲ. ಅನಾದಿಕಾಲದಿಂದ ಅಪೌರುಷೇಯವೆನಿರುವ ನಮ್ಮವೇದಶಾಸ್ತ್ರಗಳು ಸುಸ್ಪಷ್ಟವಾಗಿ ಸಾರುತ್ತಿರುವ ಜೀವನಕ್ರಮ ಒಂದೇ ಸಾರ್ಥಕವಾದುದು. ಇದಕ್ಕೆ ವಿರುದ್ಧವಾದುದು ತಾತ್ಕಾಲಿಕವಾಗಿಷ್ಟೇ ಆಕರ್ಷಣೀಯವೂ ಹಿತವೂ ಆಗಿದ್ದರೂ ನಿಷ್ಫಲವಾದ, ನಿರರ್ಥಕವಾದ ೀವನ ಕ್ರಮವಾಗುತ್ತದೆ. ಕೇವಲ ವೇಶಭೂಷಣಗಳಅಲಂಕಾರ, ವೈಭವೋೇತವಾದ ಮನೆ. ವಾಹನ ಮುಂತಾದುವುಗಳಿಂದಷ್ಟೇ ಜೀವದದಲ್ಲಿ ಸಾರ್ಥತೆ ಸಿಗಲಾರದು. ಸಂಯಮ ಪೂರ್ಣವಾದ ವಿವೇಕಪೂರ್ಣವಾದ, ಉದಾರವಾದ, ನ್ಯಾಯಬದ್ಧವಾದ, ಸಮಾಜಹಿತವಾದ ಜೀವನಕ್ರಮದಿಂದಲೇ ನಮ್ಮ ೀವನದಲ್ಲಿ ಸಾರ್ಥಕತೆ ಸಿದ್ಧಿಸುವುದು. ಇಂಥ ಜೀವನ ಪಥದಲ್ಲಿ ಸಾಗಲು ಯುಕ್ತವಾದ ಮಾರ್ಗದರ್ಶನ ಅತ್ಯಗತ್ಯ. ಉತ್ತಮಗುಣ ಮೌಲ್ಯಗಳನ್ನು ದ್ದೀಪಿಸಬಲ್ಲ ಸತ್ವಶಾಲೀ ಸಾಹಿತ್ಯಕೃತಿಗಳವಾಚನದಿಂದ ಇಂಥ ಅತ್ಯಗತ್ಯವಾದ ಮಾರ್ಗದರ್ಶನವು ಲಭಿಸುವುದು ನಿಸ್ಸಂಶಯ. **ಸಾರ್ಥಕ ಸಾಹಿತ್ಯ ೃತಿಗಳು ಆಕಸ್ಮಿಕವಾಗಿಯೇಆಗಲೀ ನಿಮ್ಮ ಕೈಗೆ ಸಿಕ್ಕಿದಾಗ ಯಾವ ಕಾರಣದಿಂದಲೂ ನಿರಾಸಕ್ತರಾಗಿ ಅದನ್ನು ಓದದೇ ಬಿಡಬೇಡಿ. ಶ್ರದ್ಧೆಯಿಂದ ಓದಿದಾಗ ನಿಮ್ಮ ಜೀವನದೃಷ್ಟಿ ವಿಶಾಲವಾಗಿ ಅಂತರಂಗದ ಕಲವಾರುಅನಿಸಿಕೆಗಳು ಉತ್ತಮಗೊಂಡು, ನಿಮ್ಮ ಪರಿಸರದಲ್ಲಿ ನಿಮ್ಮ ಜೀವನವು ಬಹಳ ಮಹತ್ವದ್ದೆನಿಸಲು ಸಹಕಾರಿಯಾಗುವುದು ಖಚಿತ. ವಂಗತ ಕೋಟ ವಾಸುದೇವ ಕಾರಂತರ ಕೃತಿಗಳೆಲ್ಲವೂ ಈ ಗುಂಪಿಗೆ ೇರಿದವುಗಳೇ ಆಗಿವೆ. ಇಂಥ ಸಾರ್ಥಕಸಾಹಿತ್ಯವನ್ನು ಓದಿದನಂತರ ನಿಮ್ಮ ಪರಿಚಯದ ಬಂಧುಮಿತ್ರರು ಇದನ್ನು ಓದಲು ಪ್ರೇರಿಸಿರಿ. ವರ ಜೀವನದಲ್ಲೂ ಮಹತ್ತರವಾದ ಆನಂದದ ಪ್ರವೇಶಕ್ಕೆ ಸೂಕ್ತ ಮಾರ್ಗವಾಗುತ್ತದೆ.** ಇದಕ್ಕಿಂತ ಉತ್ತಮವಾದ ಸಮಾಜಸೇವೆ, ಜೀವನ ದರ್ಶನ ಬೇರೊಂದಿಲ್ಲ. ನಮ್ಮ ಅಂತರಂಗದ ಕತ್ತಲನ್ನು ಹೊರಗೋಡಿಸಿದ ಾರ್ಥಕ ಸಾಹಿತ್ಯಕೃತಿಗಳನ್ನು ಸ್ವಾರ್ಥದಾಶೆಯಿಂದ ಮುಚ್ಚಿಡಬಾರದು. ೇರೆಯವರೂ ಅದರ ಸದುಪಯೋಗ ಪಡೆಯುವಂತೆ ಪ್ರಚಾರಮಾಡಬೇಕು. ದರಿಂದ ನಮಗೆ ಹೆಚ್ಚಿನ ನಷ್ಟವೇನಿಲ್ಲ. ಒಳ್ಳೆಯಕೃತಿಯೊಂದರ ಪ್ರತಿ

ಯೊಂದು ನಮ್ಮ ಕೈ ಬಿಡುವ ಆತಂಕವಿದ್ದರೂ ಚಿಂತಿಸಬಾರದು. ಇನ್ನೊಂದು ಪ್ರತಿಯನ್ನು ಕೊಂಡು ತಂದರೆ ನಮ್ಮ ಸರ್ವಸ್ವವೂ ಮುಳುಗಿ ಹೋಗುವುದಿಲ್ಲವಷ್ಟೆ! ಸಾರ್ಥಕಸಾಹಿತ್ಯವನ್ನು ಓದುವುದು, ಓದಿಸುವುದು, ಪ್ರಚಾರ ಮಾಡುವುದು ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಲಿ. ನಮ್ಮ ಜೀವನ ಯಶಸ್ಸಿನ ಪಥದಲ್ಲಿ ಸಾಗಲಿ.

ಅನಂತ ಪ್ರಕಾಶನದ ಆರನೇ ಕುಸುಮವಾಗಿ ಪ್ರಕಟವಾಗಬೇಕಿದ್ದ "ಪುನರ್ಜನ್ಮ"ದ ಬದಲಿಗೆ "ಮನೆಯಲ್ಲಿ ದೇವರು" ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಲಾಗಿತ್ತು. ಅದಕ್ಕೆ ಮುಖ್ಯ ಕಾರಣ ನಮ್ಮ ಆರ್ಥಿಕಶಕ್ತಿ ಸಾಕಷ್ಟು ಬಲಶಾಲಿಯಾಗಿಲ್ಲದಿರುವುದು ಎಂಬ ಅಂಶವನ್ನು ಓದುಗರಗಮನಕ್ಕೆ ತಂದು; ಪ್ರಾರಂಭದಲ್ಲಿ ನೂರು/ನೂರೈವತ್ತು ರೂ.ಗಳ ಕೊಡುಗೆಯೊಂದಿಗೆ ಅನಂತ ಪ್ರಕಾಶನದ ಆಜೀವ ಸದಸ್ಯತ್ವ ಪಡೆದಿರುವವರು ಇನ್ನೂರೈವತ್ತು ರೂ.ಗಳ ಪೂರ್ಣಕೊಡುಗೆಯನ್ನು ನೀಡುವ ಕೃಪೆಮಾಡಬೇಕೆಂದು ವಿನಂತಿಸಲಾಗಿತ್ತು. ಕೇವಲ ನಾಲ್ಕಾರು ಅಭಿಮಾನಿಗಳು ಮಾತ್ರ ಈಕೋರಿಕೆಯನ್ನು ಮನ್ನಿಸಿದರು. ಈಗ ದಿವಂಗತ ಕೋಟ ವಾಸುದೇವ ಕಾರಂತರ ಹಿರಿಯ ಪುತ್ರ ಶ್ರೀ ಕೋಟ ವಾಸುದೇವ ಕೇಶವ ಕಾರಂತರು ನೀಡಿದ ಆರ್ಥಿಕ ನೆರವಿನಿಂದಾಗಿ ಪುನರ್ಜನ್ಮವು ಇಷ್ಟುಶೀಘ್ರವಾಗಿ ನಿಮ್ಮಕೈಸೇರುವಂತಾಗಿದೆ. ಈ ಮಹಾತ್ಕಾರ್ಯದಲ್ಲಿ ಸೂಕ್ತ ನೆರವು ನೀಡಿದ ಶ್ರೀ ಕೋ. ವಾ. ಕೇಶವ ಕಾರಂತರಿಗೆ ನಮ್ಮ ಕೃತಜ್ಞತಾಪೂರ್ವಕ ನಮನಗಳು. ಇಂಥ ಧಾರ್ಮಿಕ ಸಾಹಿತ್ಯಕೃತಿಗಳು ಇಂದಿನ ದಿನಗಳಲ್ಲಿ ಇಷ್ಟು ಕಡಿಮೆ ಬೆಲೆಗೆ ದೊರೆಯುವಲ್ಲಿ ದಾನಿಗಳ ಉದಾರ ನೆರವು ಅತ್ಯಗತ್ಯ. ಹಾಗೆ ನೆರವುದೊರೆತರೆ ಇನ್ನೂ ಕಡಿಮೆ ಬೆಲೆಗೆ ಇಂಥ ಸಾರ್ಥಕ ಸಾಹಿತ್ಯವನ್ನು ಅಭಿಮಾನಿಗಳಿಗೆ ಒದಗಿಸಲು ಸಾಧ್ಯ. ಆರ್ಥಿಕ ಸಂಪತ್ತು ಹೊಂದಿರುವ ಮಹನೀಯರು ಇದರತ್ತ ಗಮನಹರಿಸಿ, ಸೂಕ್ತನೆರವು ನೀಡಿದಲ್ಲಿ ಮಾತ್ರ ಈ ಜ್ಞಾನಯಜ್ಞವು ಹೆಚ್ಚುಕಾಲ ಮುಂದುವರೆಯಲು ಅವಕಾಶವಾಗುತ್ತದೆ.

ಅನಂತಪ್ರಕಾಶನದ ಉದಯಕ್ಕೆ ಕಾರಣರಾದ ಅಭಿಮಾನಿಗಳು ನಮ್ಮ ಇದುವರೆಗಿನ ಸಾಧನೆ, ಇಂದಿನ ಮುದ್ರಣ ಸಾಮಗ್ರಿಗಳ ಧಾರಣೆ, ನಮ್ಮ ಪ್ರಕಟಣೆಗಳಿಗೆ ನಾವು ನಿರ್ಧರಿಸುತ್ತಿರುವ ಅತ್ಯಂತ ಕಡಿಮೆ ಪ್ರಮಾಣದ ಮುಖ ಬೆಲೆ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಆಜೀವ ಸದಸ್ಯತ್ವದ ಬಾಬ್ತು ಇನ್ನೂರೈವತ್ತು ರೂ.ಗಳ ಪೂರ್ಣಕೊಡುಗೆಯನ್ನು ಶೀಘ್ರವಾಗಿ ಸಂದಾಯ ಮಾಡಬೇಕಾಗಿ ವಿನಂತಿ. ಇದರೊಂದಿಗೆ ಅನಂತ ಪ್ರಕಾಶನದ ಆಜೀವ

ದಸ್ಯರ ಸಂಖ್ಯೆಯನ್ನು ಐನೂರರಿಂದ ಕನಿಷ್ಟಪಕ್ಷ ಒಂದು ಸಾವಿರಕ್ಕಾದರೂ ಚ್ಚಿಸುವಲ್ಲಿ ಅಭಿಮಾನಿಗಳು ಮುಕ್ತ ಮನಸ್ಸಿನಿಂದ ನೆರವಾಗಬೇಕಾದ ಅವಶ್ಯ ತೆ ಇದೆ. ಈ ರೀತಿಯ ನೆರವು ದೊರೆಯದಿದ್ದರೆ ನಮ್ಮ ಈ ಪ್ರಯತ್ನದ ಾರಂಭದಲ್ಲಿ ನಾವು ಘೋಷಿಸಿದ ನಿಯಮಗಳನ್ನು ಇದುವರೆವಿಗೂ ಅಕ್ಷರಶಃ ಾಲಿಸಿಕೊಂಡು ಬಂದಂತೆ ಮುಂದೆಯೂ ಪಾಲಿಸುವುದು ಅಸಾಧ್ಯವೆನಿಸುತ್ತದೆ. ಈ ಕಾರಣದಿಂದಾಗಿ ನಮ್ಮ ಅಭಿಮಾನಿಗಳು ತಮ್ಮ ಆಂತರಿಕ ಸಂಕೋಚವನ್ನು ದಿಗಿರಿಸಿ, ಇಂಥ ಸಾರ್ಥಕ ಪ್ರಯತ್ನದ ಮುನ್ನಡೆಗೆ ಎದುರಾಗುವ ಆತಂಕ ನ್ನು ಪರಿಹರಿಸುವತ್ತ ಗಮನಹರಿಸಬೇಕಾಗಿದೆ. ನಿಮ್ಮೆಲ್ಲರ ಉದಾರ ೆರವಿನಿಂದಲೇ ಈ ಸಾಹಿತ್ಯ ಸಮಾರಾಧನೆಯು ಇಷ್ಟೊಂದು ಯಶಸ್ವಿಯಾಗಿ ುಂದುವರೆದಿರುವುದು. ಮುಂದೆಯೂ ಇದೇ ನೆರವನ್ನು ಒದಗಿಸಲು ೀವು ಸಂಕಲ್ಪ ಮಾಡಿದಲ್ಲಿ ಮುಂದಿನ ಕನ್ನಡ ಸಾಹಿತ್ಯೇತಿಹಾಸದಲ್ಲಿ ನಿಮ್ಮ ನಂತ ಪ್ರಕಾಶನದ ಸಾಧನೆಯು ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದಾಗು ್ತದೆ. ಇದು ನಿಮ್ಮ ಜೀವನದಲ್ಲಿನ ಒಂದು ಅತ್ಯಂತ ಸ್ಮರಣಾರ್ಹಕಾರ್ಯ ನಿಸುವುದು ಖಚಿತ. ಈ ದಿಸೆಯಲ್ಲಿ ಓದುಗರೆಲ್ಲರೂ ಯೋಚಿಸುವಂತಾಗ ೆಂದು ಸರ್ವಶಕ್ತನಲ್ಲಿ ನಮ್ಮ ಪ್ರಾರ್ಥನೆ.

ಈ ಉಪಯುಕ್ತ ಸಾಹಿತ್ಯಕೃತಿಗೆ ಸೂಕ್ತವಾದ ಮುಖಚಿತ್ರವನ್ನು ರಚಿಸಿ ೊಟ್ಟ ಗೆಳೆಯ ಶ್ರೀ ಎಸ್. ಆರ್. ಪಾಟೀಲ್ ಅವರಿಗೂ, ಮುದ್ರಣಕಾರ್ಯ ನ್ನು ಸಾಕಷ್ಟು ಅಂದವಾಗಿ ನಿರ್ವಹಿಸಿರುವ ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್ ವರಿಗೂ ನಮ್ಮ ವಂದನೆಗಳು. ಅಭಿಮಾನಿಗಳೆಲ್ಲರಿಗೂ ಶುಕ್ಲಸಂವತ್ಸರದ ೀಪಾವಳಿಯ ಶುಭಾಶಯಗಳೊಂದಿಗೆ ನಮನಗಳು.

ನಿಮ್ಮ ವಿಶ್ವಾಸದ,

ುಧಾರ್ಥಿ, ಹಾಸನ — ೌರವ ಕಾರ್ಯದರ್ಶಿ

ಗಿರಿಜಾಶಂಕರ — ಸಂಚಾಲಕಿ

ಶುಕ್ಲ ಕಾರ್ತಿಕ ನವಮಿ ಸೋಮವಾರ
೨೩–೧೦–೧೯೮೯

ಅನಂತ ಪ್ರಕಾಶನದ ಮುಂದಿನ ಪ್ರಕಟಣೆ

'ನಮ್ಮ ಅನಿಸಿಕೆಗಳು'

ಜನಜೀವನದಲ್ಲಿ ವೈಯಕ್ತಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಕ ಹಾಗೂ ಸಮೂಹಮಾಧ್ಯಮ, ರಾಜಕಾರಣ—ಈ ಆರು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಳವಡಿಸಲಾಗಿರುವ ನೂರೆಂಟು ಪ್ರಶ್ನೆಗಳಿಗೆ ತಮ್ಮ ಆಸಕ್ತಿ, ಅಭಿರುಚಿಗಳಿಗೆ ಅನುಗುಣವಾಗಿ ಸುಮಾರು ಇಪ್ಪತ್ತು ಜನ ಸಾಹಿತ್ಯಾಭಿಮಾನಿಗಳು ವ್ಯಕ್ತಪಡಿಸಿರುವ ಮುಕ್ತಮನಸ್ಸಿನ ಸ್ವಾರಸ್ಯಪೂರ್ಣ; ಉಪಯುಕ್ತ ಅನಿಸಿಕೆಗಳ ಸಮೀಕ್ಷಾಗ್ರಂಥವಾದ **'ನಮ್ಮ ಅನಿಸಿಕೆಗಳು'** ಅನಂತ ಪ್ರಕಾಶನದ ಎಂಟನೇ ಕುಸುಮವಾಗಿ ಶೀಘ್ರದಲ್ಲೇ ನಿಮ್ಮ ಕೈಸೇರಲಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇದೊಂದು ವಿನೂತನ ಶೈಲಿಯ ವೈಶಿಷ್ಟ್ಯಪೂರ್ಣ ಕೃತಿಯಾಗಿ ರೂಪುಗೊಳ್ಳುತ್ತಿದೆ. ಇದರೊಂದಿಗೆ ಉಡುಪಿಯ ಎಂ. ಜಿ. ಎಂ. ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕ **ಶ್ರೀ ದೇ. ರಾ. ಪಾಂಡುರಂಗ** ಅವರು ರಚಿಸಿರುವ "ಜೈಮಿನಿ ಭಾರತದ ಕಥೆಗಳು" ಎಂಬ ಸಂಕಲನವೂ ನಮ್ಮ ಒಂಭತ್ತನೇ ಕುಸುಮವಾಗಿ ನಿಮ್ಮ ಕೈಸೇರಲಿರುವುದೆಂದು ತಿಳಿಸಲು ಹರ್ಷಿಸುತ್ತೇವೆ.

ಸುಧಾರ್ಥಿ, ಹಾಸನ
ಗೌರವ ಕಾರ್ಯದರ್ಶಿ

ಗಿರಿಜಾಶಂಕರ
ಸಂಚಾಲಕಿ

ನಮ್ಮಲ್ಲಿ ದೊರೆಯುವ ಕೃತಿಗಳು

ಲೇಖಕರು : ಕೋಟ ವಾಸುದೇವ ಕಾರಂತ

೧) ಅದ್ವಿತೀಯ ಆಚಾರ್ಯ ಶ್ರೀ ಶಂಕರಾಚಾರ್ಯರು	ರೂ.	೩-೦೦
೨) ದೇವಸ್ಥಾನಗಳ ಸದುಪಯೋಗ *	ರೂ.	೬-೦೦
೩) ದೇವರ ಸ್ತೋತ್ರಗಳು	ರೂ.	೧-೦೦
೪) ಮನೆಯಲ್ಲಿ ದೇವರು *	ರೂ.	೬-೦೦
೫) ಪುನರ್ಜನ್ಮ *	ರೂ.	೨೧-೦೦

ಲೇಖಕರು : ಸುಧಾರ್ಥಿ, ಹಾಸನ

೧) ಕೆಂಡಸಂಪಿಗೆ	ರೂ.	೨-೦೦
೨) ತ್ರಿವೇಣಿ ಕೃತಿಗಳ ಒಳನೋಟ	ರೂ.	೮-೦೦
೩) ಅನಂತ *	ರೂ.	೧೬-೦೦
೪) ಹಬ್ಬದ ದಿನವೂ ಹಳೇಗಂಡನೆ ?	ರೂ.	೯-೦೦
೫) ವಾಸುದೇವ	ರೂ.	೫-೦೦
೬) ವಿಷವೃತ್ತ	ರೂ.	೧೬-೦೦
೭) ಧನ್ವಂತರಿ *	ರೂ.	೩೬-೦೦
೮) ವೇದಗಳು ಅಪೌರುಷೇಯ	ರೂ.	೩-೦೦

ಲೇಖಕರು : ಕೇಷ

೧) ಛೆಲೋ ಆಯ್ತು ಶೌರಿ ! *	ರೂ.	೧೪-೦೦

ವಿವಿಧ ಲೇಖಕರು

೧) ಕಾವ್ಯ ಸಂಚಯ *	ರೂ.	೮-೦೦

'ಅನಂತ ಪ್ರಕಾಶನ'ದ ಆಜೀವ ಸದಸ್ಯರಾಗುವವರಿಗೆ * ಗುರುತಿರುವ ಕೃತಿಗಳನ್ನು ಉಚಿತವಾಗಿ ವಿತರಿಸಲಾಗುವುದು.

ಕಾರಂತ ಸಾಹಿತ್ಯ

ಇಂದಿನ ನಾಗರೀಕ ಸಮಾಜದಲ್ಲಿ ಅನುಸರಿಸಲು ಸಾಧ್ಯವಿಲ್ಲದ ಇಂಥ ಶಾಸ್ತ್ರ–ಸಂಪ್ರದಾಯಗಳ ಗೊಡ್ಡು ವಿವರಣೆಗಳನ್ನೊಳಗೊಂಡ ಈ ರೀತಿಯ ಪುಸ್ತಕಗಳ ಪ್ರಕಟಣೆಯಿಂದ ಯಾವ ಉಪಯೋಗವೂ ಇಲ್ಲವೆಂದು ಕೆಲವರು ಭಾವಿಸಬಹುದು. ತಾವು ನಡೆಸುವ ಅಶಾಸ್ತ್ರೀಯವಾದ 'ನಾಗರೀಕ' ಜೀವನ ಕ್ರಮದಿಂದ ಉಂಟಾಗುವ ನರಕದಶಿಕ್ಷೆ, ಮರುಹುಟ್ಟಿನಲ್ಲಿ ಎದುರಾಗುವ ಕಷ್ಟ ನಷ್ಟಗಳ ಪರಂಪರೆಯನ್ನು ತಿಳಿದು, ಆತಂಕಗೊಂಡು, ಅದನ್ನು ತಪ್ಪಿಸಲು ಸಾಧ್ಯವಿಲ್ಲವೆಂಬ ತಪ್ಪು ನಿರ್ಧಾರದಿಂದ ಕ್ರೋಧೋನ್ಮತ್ತರಾಗಿ, "ಇದೆಲ್ಲ ಬುದ್ಧಿ ಇಲ್ಲದ ಕೆಲಸ. ಮೂಢನಂಬಿಕೆಗಳ ಪ್ರಚಾರ" ಎಂದು ಮೂಗು ಮುರಿಯುತ್ತ ಕಿಡಿಕಾರುವವರು ನಮ್ಮಲ್ಲಿ ಬಹಳಷ್ಟು ಜನರಿದ್ದಾರೆ. ಅದೇ ರೀತಿ, ಶಾಸ್ತ್ರೋಕ್ತ ಜೀವನಕ್ರಮವನ್ನು ಸ್ಪಷ್ಟವಾಗಿ ತಿಳಿದು ತಮಗೆ ಸಾಧ್ಯ ವಿರುವಮಟ್ಟಿಗೂ ಜೀವನವನ್ನು ಸುಧಾರಿಸಿಕೊಂಡು ಉತ್ತಮಸ್ಥಿತಿಗೆ ಬರು ವವರೂ ಇರುವುದು ಸ್ವಾಭಾವಿಕ. ಈ ಎರಡನೇ ಗುಂಪಿನವರ ನೆರವಿಗಾಗಿ ಮಾತ್ರ ಈ ಕೃತಿಯ ಪ್ರಕಟಣೆಯ ಶ್ರಮವಹಿಸಲಾಗಿದೆ. ಈ ಕೃತಿಯನ್ನು ಉಪಯುಕ್ತವೆಂದು ಭಾವಿಸುವವರಪಾಲಿಗೆ ಉಪಯುಕ್ತತೆಯು ಇರುವುದು ಸೂರ್ಯಪ್ರಕಾಶದಷ್ಟು ಸತ್ಯ. ನಿರುಪಯೋಗಿಯೆಂದು ನಿರ್ಧರಿಸುವವರ ಬಗ್ಗೆ ನಾವು ಚಿಂತಿಸಬೇಕಾದುದೇನಿಲ್ಲ. ಅವರು ಪಡೆದು ಬಂದುದನ್ನು ಅವರು ತಾನೇ ಅನುಭವಿಸಬೇಕಾದವರು!

ಯಾವುದೇ ಅವಿವೇಕದ ಕಾರ್ಯವಿರಲೀ, ತಿಳಿಯದೇ ಮಾಡಿದರೂ ತಪ್ಪು ತಪ್ಪೇ. ತಿಳಿಯ ಹೇಳಿದರೂ ಮಾಡುವುದು ಅಪರಾಧ. ತಿಳಿದೂ ಮಾಡುವುದು ಮಹಾಪರಾಧ. ಇದನ್ನೆಲ್ಲ ತಿಳಿಯಹೇಳಿ ಕ್ಷಮಿಸುವ ಕರುಣಾಳು ತನವೇ ಭಗವಂತ, ದೇವರು. ಇಂಥ ದೈವೀಗುಣಸಂಪನ್ನರಾಗಿದ್ದ ದಿವಂಗತ ಕೋಟ ವಾಸುದೇವ ಕಾರಂತರಂಥವರು ಇಂದಿನ ಸಮಾಜದಲ್ಲಿ ಬಹಳ ಅಪರೂಪ. ಇಂಥ ಅಪರೂಪದ ಚೇತನವು ರೂಪಿಸಿದ ಸಾರ್ಥಕಸಾಹಿತ್ಯ ಕೃತಿಯ ವಾಚನದಿಂದ ಓದುಗರಿಗೆ ತಮ್ಮ ಆತ್ಮಸ್ವರೂಪದ ಸ್ಪಷ್ಟದರ್ಶನವಾಗು ವುದು ಖಚಿತ. ವಿವೇಕಿಗಳೆಲ್ಲರೂ ಇದನ್ನು ನಂಬುತ್ತಾರೆ. ಇಂಥ ನಂಬಿಕೆಯೇ ನಮ್ಮ ಬಾಳಿನ ಉಸಿರು. ಅದಕ್ಕಾಗಿಯೇ ದಾಸವರೇಣ್ಯರು ನುಡಿದಿದ್ದಾರೆ...

ನಂಬಿ ಕೆಟ್ಟವರಿಲ್ಲ; ನಂಬದೆ ಕೆಟ್ಟರೆ ಕೆಡಲಿ!

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
೧೪	೨೯	ಮುಟ್ಟಲಾರ	ಮುಟ್ಟಲಾಪ
೩೯	೩	ಏಳನೇ ವರ್ಷದ	ಏಳನೇವರ್ಷದ
೫೫	೨೧	ಹಡುಗುಗಳು	ಹಡಗುಗಳು
೫೬	೧೨	ದೇಹದ	ದೇಹಕ್ಕೆ
೭೯	೧೧	ಸಾರೋದ್ದಾರ	ಸಾರೋದ್ಧಾರ
೧೧೪	೧೭	ವೃತಂ	ವ್ರತಂ
೧೧೬	೬	ಪ್ರದೋಶದ	ಪ್ರದೋಷದ
೧೨೩	೮	ಬಾಸ್ಕರರಾಯ	ಭಾಸ್ಕರರಾಯ
೧೨೩	೨೫	ಶ್ಯುತಿಯಲ್ಲಿ	ಶ್ರುತಿಯಲ್ಲಿ
೧೪೭	೨೧	ನಿರ್ದೇಶಿದಂತೆ	ನಿರ್ದೇಶಿಸಿದಂತೆ
೧೫೧	೧೩	ಜೀವಾಣುಂಗಳಂತೆ	ಜೀವಾಣುಗಳಂತೆ
೧೫೬	೧೬	ಸಮರ್ಥರೆಂದೆಸರು	ಸಮರ್ಥರೆಂದುಹೆಸರು
೧೯೪	೨	ಬರುತ್ತೈದೆ	ಬರುತ್ತದೆ
೧೯೪	೩	ಬದಲಾಗುತ್ತೈದೆ	ಬದಲಾಗುತ್ತದೆ
೧೯೪	೩	ಉತ್ತೈಮ	ಉತ್ತಮ
೧೯೪	೧೨	ದುಂಗುಡದಲ್ಲಿರುತ್ತೈವೆ	ದುಗುಡದಲ್ಲಿರುತ್ತವೆ
೧೯೬	೧೩	ಪೇಡೆ	ಪೀಡೆ
೧೯೯	೧೧	ಧರ್ಮಪಾರಾಯಣರು	ಧರ್ಮಪರಾಯಣರು
೨೦೦	೩	ಪ್ರೀತತ್ವದಿಂದ	ಪ್ರೇತತ್ವದಿಂದ
೨೦೪	೨೦	ಅರ್ಚಕನೊಡನೆ	ಅರ್ಚಕರೊಡನೆ
೨೧೯	೨೬	ನಾಮಕರ್ಣ	ನಾಮಕರಣ
೨೪೪	೧	೩೮	೨೮
೨೪೮	೧೪	ತಪ್ಪಿಸಿಕೊಳ್ಳಲ್ಲಿಕ್ಕಿರುವ	ತಪ್ಪಿಸಿಕೊಳ್ಳಲಿಕ್ಕಿರುವ
೨೫೪	೯	ಅಸಿಪತ್ರಪನ	ಅಸಿಪತ್ರವನ
೨೭೯	೧೭	ಪಿತ್ರಗಳು	ಪಿತೃಗಳು

ನಮ್ಮ ಕೃತಿಗಳು ದೊರೆಯುವ ಸ್ಥಳ

ಗೀತಾ ಏಜನ್ಸೀಸ್
ಬಳೇಪೇಟೆ ಚೌಕ, ಬೆಂಗಳೂರು-೫೬೦ ೦೫೩

ಸಾಹಿತ್ಯ ಭಂಡಾರ
ಜಂಗಮಮೇಸ್ತ್ರಿ ಗಲ್ಲಿ, ಬಳೇಪೇಟೆ, ಬೆಂಗಳೂರು-೫೬೦ ೦೫೩

ವೇದಾಂತ ಭವನ
ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ಶ್ರೀ ಸಪ್ನಾ ಬುಕ್ ಸ್ಟಾಲ್
ಮಾರುತಿ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು-೫೬೦ ೦೦೯

ಹೇಮಂತ ಸಾಹಿತ್ಯ
೯೭೨ 'ಸಿ' ೪ನೇ 'ಇ' ವಿಭಾಗ, ರಾಜಾಜಿನಗರ, ಬೆಂಗಳೂರು-೫೬೦ ೦೧೦

ಟಿ. ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್
ಚಿಕ್ಕಪೇಟೆ, ಬೆಂಗಳೂರು-೫೬೦ ೦೫೩

ಗೀತಾ ಬುಕ್ ಹೌಸ್
ಕೃಷ್ಣರಾಜೇಂದ್ರ ವೃತ್ತ, ಮೈಸೂರು-೫೭೦ ೦೦೧

ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಲ್ಲೂ ವಿಚಾರಿಸಿರಿ.

ಅನಂತ ಪ್ರಕಾಶನ
೧೫, ರಂಗರಾವ್ ರಸ್ತೆ, ಬೆಂಗಳೂರು-೫೬೦ ೦೦೪

ಕೋಟ ವಾಸುದೇವ ಕಾರಂತರ ಕೃತಿಗಳು

೧. ನಮ್ಮ ಪುರೋಹಿತರು
೨. ಗಾಯತ್ರೀ ಮಹಾತ್ಮೆ
೩. ಬ್ರಾಹ್ಮಣರು ಏನು ಓದಬೇಕು ?
೪. ಗಾಯತ್ರೀ ಜಪ
೫. ಅದ್ವಿತೀಯ ಆಚಾರ್ಯ ಶ್ರೀ ಶಂಕರಾಚಾರ್ಯರು *
೬. ದೇವಸ್ಥಾನಗಳ ಸದುಪಯೋಗ
೭. ದೇವರ ಸ್ತೋತ್ರಗಳು *
೮. ಮನೆಯಲ್ಲಿ ದೇವರು *
೯. ಪುನರ್ಜನ್ಮ *
೧೦. ನಮ್ಮ ಬ್ರಾಹ್ಮಣ್ಯ
೧೧. ದಾನ ಮಾಡಬೇಕು
೧೨. ದೇವರನ್ನು ನಂಬುವ
೧೩. Conquest of Body through Jaathi Dharmas

---

* ಗುರುತಿರುವವು ಮಾತ್ರ ದೊರೆಯುತ್ತಿವೆ. ಉಳಿದವು ಪುನರ್ಮುದ್ರಣವಾಗಬೇಕು.



ಸಾರ್ಥಕ ಸಾಹಿತ್ಯಕೃತಿಯೊಂದು ಆಕಸ್ಮಿಕವಾಗಿಯೇ ಆಗಲೀ ನಿಮ್ಮ ಕೈಗೆ ಸಿಕ್ಕಿದಾಗ ಯಾವ ಕಾರಣದಿಂದಲೂ ನಿರಾಸಕ್ತರಾಗಿ ಅದನ್ನು ಓದದೇ ಬಿಡಬೇಡಿ. ಶ್ರದ್ಧೆಯಿಂದ ಓದಿದಾಗ ನಿಮ್ಮ ಜೀವನದೃಷ್ಟಿಯು ವಿಶಾಲವಾಗಿ, ಅಂತರಂಗದ ಹಲವಾರು ಅನಿಸಿಕೆಗಳು ಉತ್ತಮಗೊಂಡು, ನಿಮ್ಮ ಪರಿಸರದಲ್ಲಿ ನಿಮ್ಮ ಜೀವನವು ಬಹಳ ಮಹತ್ವದ್ದೆನಿಸಲು ಸಹಕಾರಿಯಾಗುವುದು ಖಚಿತ.

ಡಾ|| ಕೋಟ ವಾಸುದೇವ ಕಾರಂತರ ಸಾಹಿತ್ಯಕೃತಿಗಳೆಲ್ಲವೂ ಈ ಗುಂಪಿಗೆ ಸೇರಿದವುಗಳೇ ಆಗಿವೆ. ಇಂಥ ಸಾರ್ಥಕ ಸಾಹಿತ್ಯವನ್ನು ಓದಿದನಂತರ ನಿಮ್ಮ ಪರಿಚಯದ ಬಂಧುಮಿತ್ರರು ಇದನ್ನು ಓದಲು ಪ್ರೇರಿಸಿರಿ. ಅವರ ಜೀವನದಲ್ಲೂ ಮಹತ್ತರವಾದ ಆನಂದದ ಪ್ರವೇಶಕ್ಕೆ ಸೂಕ್ತಮಾರ್ಗವಾಗುತ್ತದೆ.

* * * *

ಕನ್ನಡ ಶೀಘ್ರಲಿಪಿಕರ್ತರೂ, ಕನ್ನಡ ಬೆರಳಚ್ಚುಯಂತ್ರ ಕರ್ತರೂ
ಸರ್ವಭಾಷಾಮಯಿ ಸಿರಿಭೂವಲಯದ ಪ್ರಚಾರಕರೂ
ಪತ್ರಿಕಾ ಕರ್ತರೂ, ಶಿಕ್ಷಣತಜ್ಞರೂ, ಉಪಾಧ್ಯಾಯರೂ
ಕನ್ನಡದ ಅವಿಶ್ರಾಂತ ಸೇವಕರೂ ಆಗಿದ್ದ

ಡಾ|| ಕೆ. ಅನಂತಸುಬ್ಬರಾಯರ

ಸ್ಮಾರಕ ಗ್ರಂಥಮಾಲೆ

ಅನಂತ ಪ್ರಕಾಶನ

'ಬೃಂದಾವನ', ೧೩, ರಂಗರಾವ್ ರಸ್ತೆ,
ಶಂಕರಪುರ, ಬೆಂಗಳೂರು-೪